ಬೀರಪ್ಪ ಸಂಪ್ರದಾಯ : ಸಾಂಸ್ಕೃತಿಕ ಅಧ್ಯಯನ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನೆ ಮಹಾಪ್ರಬಂಧ

ಸಂಶೋಧನ ವಿದ್ಯಾರ್ಥಿನಿ
ರಾಜಶ್ರೀ ಬಿ. ಪಾಟೀಲ

ಮಾರ್ಗದರ್ಶಕರು
ಡಾ. ಎಫ್. ಟಿ. ಹಳ್ಳಿಕೇರಿ
ಪ್ರಾಧ್ಯಾಪಕರು

ಭಾಷಾ ನಿಕಾಯ
ಹಸ್ತಪ್ರತಿ ಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೪

574

ಬೀರಪ್ಪ ಸಂಪ್ರದಾಯ : ಸಾಂಸ್ಕೃತಿಕ ಅಧ್ಯಯನ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನೆ ಮಹಾಪ್ರಬಂಧ

ಸಂಶೋಧನ ವಿದ್ಯಾರ್ಥಿನಿ
ರಾಜಶ್ರೀ ಬಿ. ಪಾಟೀಲ

ಮಾರ್ಗದರ್ಶಕರು
ಡಾ. ಎಫ್.ಟಿ ಹಳ್ಳಿಕೇರಿ
ಪ್ರಾಧ್ಯಾಪಕರು

ಭಾಷಾ ನಿಕಾಯ
ಹಸ್ತಪ್ರತಿ ಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೪

ಮಾರ್ಗದರ್ಶಕರ ದೃಢೀಕರಣ ಪತ್ರ

ಕುಮಾರಿ ರಾಜಶ್ರೀ ಬಿ. ಪಾಟೀಲ ಅವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಬೀರಪ್ಪ ಸಂಪ್ರದಾಯ : ಸಾಂಸ್ಕೃತಿಕ ಅಧ್ಯಯನ ಎಂಬ ವಿಷಯದ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 2/8/2014

(ಡಾ. ಎಫ್.ಟಿ. ಹಳ್ಳಿಕೇರಿ)

ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು

ಹಸ್ತಪ್ರತಿ ಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

ಪ್ರಮಾಣ ಪತ್ರ

ಬೀರಪ್ಪ ಸಂಪ್ರದಾಯ : ಸಾಂಸ್ಕೃತಿಕ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಎಫ್.ಟಿ. ಹಳ್ಳಿಕೇರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 2/8/2014

(ರಾಜಶ್ರೀ ಬಿ. ಪಾಟೀಲ)
ಸಂಶೋಧನ ವಿದ್ಯಾರ್ಥಿನಿ
ಹಸ್ತಪ್ರತಿ ಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಕೃತಜ್ಞತೆಗಳು

"ಬೀರಪ್ಪ ಸಂಪ್ರದಾಯ : ಸಾಂಸ್ಕೃತಿಕ ಅಧ್ಯಯನ" ಎಂಬ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಹರ್ಷವೆನಿಸುತ್ತದೆ. ನಾನು ಕಟ್ಟಿಕೊಂಡಿದ್ದ ಸಂಶೋಧನೆಯ ಕನಸು ನನಸಾದದ್ದು ಪ್ರಸ್ತುತ ಮಹಾಪ್ರಬಂಧದ ಮೂಲಕ. ಈ ಸಂದರ್ಭದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನನ್ನ ಅಧ್ಯಯನಕ್ಕೆ ನೆರವಾದವರಿಗೆ ಸ್ಮರಿಸುವುದು ನನ್ನ ಆದ್ಯ ಕರ್ತವ್ಯ ಹಾಗೂ ಸಂತೋಷದ ಸಂಗತಿ.

ಪ್ರಾರಂಭದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟಂತಹ ಹಿಂದಿನ ಕುಲಪತಿಗಳಾದ ಡಾ. ಎ. ಮುರಿಗೆಪ್ಪ ಅವರಿಗೆ, ಈಗಿನ ಕುಲಪತಿಗಳಾದಂತಹ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರಿಗೆ ಹಾಗೂ ಕುಲಸಚಿವರಾದ ಡಾ. ವಿಜಯ ಪೂಣಚ್ಚ ತಂಬಂಡ ಅವರಿಗೂ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ. ಅಶೋಕ ಕುಮಾರ ರಂಜೇರ ಅವರಿಗೆ ಮೊದಲಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಸಂಶೋಧನೆಗೆ ಸೂಕ್ತ ವಿಷಯವನ್ನು ನೀಡಿ ಶೀರ್ಷಿಕೆ, ಆಕರಗಳ ಸಂಗ್ರಹ, ಅಧ್ಯಾಯಗಳ ವರ್ಗೀಕರಣ, ಕ್ಷೇತ್ರಕಾರ್ಯ, ಬರವಣಿಗೆಯ ರೀತಿ ಹೀಗೆ ಅನೇಕ ವಿಷಯಗಳ ಬಗ್ಗೆ ತಾಳ್ಮೆಯಿಂದ ತಿದ್ದಿ ತೀಡಿ ಆತ್ಮೀಯತೆಯಿಂದ ಸಹಕರಿಸಿ ಮಾರ್ಗದರ್ಶನ ಮಾಡಿದ ಹಸ್ತಪ್ರತಿ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಎಫ್.ಟಿ. ಹಳ್ಳಿಕೇರಿ ಅವರಿಗೂ ಕೃತಜ್ಞತೆಗಳನ್ನು ಹೇಳುತ್ತೇನೆ.

ಶಿಸ್ತು ಹಾಗೂ ಶ್ರಮ ಸಂಸ್ಕೃತಿಯ ಪ್ರತೀಕವಾಗಿರುವ ಹಾಗೂ ಅದನ್ನು ವಿದ್ಯಾರ್ಥಿಗಳಿಗೂ ಕಲಿಸುವ ವಿಭಾಗದ ಪ್ರಾಧ್ಯಾಪಕರುಗಳಾದ ಡಾ. ವೀರೇಶ ಎಸ್. ಬಡಿಗೇರ, ಡಾ. ಕೆ. ರವೀಂದ್ರನಾಥ, ಡಾ. ಎಸ್.ಎಸ್. ಅಂಗಡಿ, ಡಾ. ಎಸ್.ಆರ್. ಚನ್ನವೀರಪ್ಪ ಅವರಿಗೂ ಹಾಗೂ ಅಧ್ಯಯನದ ಸಂದರ್ಭದಲ್ಲಿ ಸಹಾಯ ಸಹಕಾರ ನೀಡಿದ ಡಾ. ಸಿದ್ದಗಂಗಮ್ಮ ಅವರಿಗೂ ಕೃತಜ್ಞತೆಗಳನ್ನು ಹೇಳುತ್ತೇನೆ.

ನನ್ನ ಓದಿನ ಹೆಗ್ಗಳಿಕೆಯನ್ನು ಸಾರುತ್ತ ಅನೇಕ ಕನಸುಗಳನ್ನು ಕಟ್ಟಿಕೊಂಡು ಅವು ಕೈಗೂಡುವ ಮುನ್ನವೇ ದಿವಂಗತರಾದ ನನ್ನ ತಂದೆ, ನನ್ನ ಏಳ್ಗೆಯನ್ನು ಬಯಸುವ ತಾಯಿ ಅವರಿಗೂ ಹಾಗೂ ದೀರ್ಘಕಾಲದ ನನ್ನ ವ್ಯಾಸಂಗಕ್ಕೆ ಅನುಕೂಲ ಒದಗಿಸಿದ ಸಹೋದರರಾದ ರಾಮನಗೌಡ ಮತ್ತೆ ಕಲ್ಲನಗೌಡ ಪಾಟೀಲ ಅವರಿಗೂ ನಾನು ಚಿರಋಣಿಯಾಗಿರುವೆ.

ಕನ್ನಡ ವಿಶ್ವವಿದ್ಯಾಲಯದ ಗ್ರಂಥಪಾಲಕರಿಗೂ ಮತ್ತು ಹಸ್ತಪ್ರತಿ ಶಾಸ್ತ್ರ ಅಧ್ಯಯನ ವಿಭಾಗದ ಸಿಬ್ಬಂದಿ ವರ್ಗದವರೆಲ್ಲರಿಗೂ, ಮತ್ತೊಮ್ಮೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಅಧ್ಯಯನಕ್ಕೆ ನೆರವಾದ ವಿದ್ವಾಂಸರಿಗೂ ಮತ್ತು ನನ್ನ ಮಿತ್ರರಿಗೂ ಸದಾ ಅಭಿಮಾನದಿಂದ ಕಾಣುವ ನನ್ನೂರಿನ ಸಮಸ್ತ ಬಾಂಧವರಿಗೂ ಹಾಗೂ ಆತ್ಮೀಯತೆಯಿಂದ ಮಹಾಪ್ರಬಂಧವನ್ನು ಅಂದವಾಗಿ ಅಕ್ಷರ ಸಂಯೋಜಿಸಿದ ಶ್ರೀನಿವಾಸ ಕೆ. ಕಲಾಲ್, ಭಾವನಾ ಗ್ರಾಫಿಕ್ಸ್, ಕಮಲಾಪುರ ಇವರಿಗೂ ನಾನು ಅಭಾರಿಯಾಗಿರುವೆ.

ರಾಜಶ್ರೀ ಬಿ. ಪಾಟೀಲ

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ ೧

೧. ಅಧ್ಯಯನದ ಉದ್ದೇಶ

೨. ಅಧ್ಯಯನದ ವ್ಯಾಪ್ತಿ

೩. ಅಧ್ಯಯನದ ವಿಧಾನ

೪. ಅಧ್ಯಯನದ ವಿಶ್ಲೇಷಣೆಗಾಗಿ ಮಾಡಿಕೊಂಡ ಅಧ್ಯಾಯಗಳು

ಅಧ್ಯಾಯ ಎರಡು

ಅಧ್ಯಯನದ ಆಕರಗಳು ೧೦

೧. ಲಿಖಿತ ಆಕರಗಳು

೨. ಮೌಖಿಕ ಆಕರಗಳು

೩. ದಾಖಲು ಆಕರಗಳು

೪. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಮೂರು

ಬೀರಪ್ಪನ ಇತಿವೃತ್ತ ವಿಚಾರ ೪೩

೧. ಬೀರಪ್ಪನ ಪೂರ್ವಜರ ಹಿನ್ನೆಲೆ

೨. ತಂದೆ-ತಾಯಿ

೩. ಜನನ

೪. ಬಾಲಲೀಲೆ

೫. ಸಪ್ತಮಾತೃಕೆಯರ ಆರೈಕೆಯಲ್ಲಿ ಬೆಳೆದ ಬೀರಪ್ಪ

೬. ಮದುವೆ

೭. ಶಿಷ್ಯ ಪರಂಪರೆ

೮. ದೇಶಪರ್ಯಟನೆ

೯. ಭಗನಾಥ ಮತ್ತು ಕೋಣಾಸುರನನ್ನು ಸಂಹರಿಸಿದ ಸಂಗತಿ

೧೦. ಪವಾಡಗಳು

೧೧. ಬೀರಪ್ಪನ ರೂಪಾಂತರಗಳು ವೀರಭದ್ರ-ವಿರೂಪಾಕ್ಷ

ಅಧ್ಯಾಯ ನಾಲ್ಕು

ಬೀರಪ್ಪನ ಕ್ಷೇತ್ರಗಳು ೧೧೮

ಅಲಕನೂರು, ಎಕ್ಸಂಬಾ, ರಾಯಬಾಗ, ಹಾರೊಗೇರಿ, ಕಂಕಣವಾಡಿ, ಘೋಡಗೇರಿ, ಕೊಣ್ಣೂರು, ನಾಗರಾಣಾ, ಮಲಘಾಣ, ಬೆಳ್ಳೊಳ್ಳಿ, ಝುಳಕಿ, ಹಿರೇರೂಗಿ, ಶಿರಾಡೋಣ, ಹಿರೇ ಸಿಂಧೋಗಿ, ತಳಗಿಹಾಳ, ಶಿರಗುಪ್ಪಿ, ಮುರನಾಳ, ದಾವಣಗೆರೆ, ಆನೆಕೊಂಡ, ಬೆಣ್ಣೆಹಳ್ಳಿ, ಕೊಡವಗುಡ್ಡ, ಹಲಕನಾಳ, ಚಿಗಟೇರಿ, ಭಾನುವಳಿ, ಜಿಗಳಿ, ಮತ್ತಿಘಟ್ಟ, ಹೀರೇನಲ್ಲೂರು, ಅಂಬಳಿ, ಅನುವನಹಳ್ಳಿ, ಆಸಂದಿ, ಮುಗಳಿಕಟ್ಟೆ, ಚಿಕ್ಕಬಾಸೂರು, ಕಡೂರು, ಬೀರೂರು, ಮುಗುಳಿ, ಗಡಿಹಳ್ಳಿ, ಹೊಸೂರು, ಗೋಪಗೊಂಡನಹಳ್ಳಿ, ಸಂಪಿಗೆ ಹಳ್ಳಿ ಬೆಂಗಳೂರು, ಬಾಪೂಜಿ ನಗರ, ರಾಣಾಸಿಂಗಪೇಟೆ, ಕೋಡಿದೊಡ್ಡಿ, ಉಮ್ಮಡಹಳ್ಳಿ, ಆಲೂರು, ಸಾತನೂರು, ಹೊಸೂರುದೊಡ್ಡಿ, ಹೊಸಕೆರೆ, ಭರಗೂರು, ಆದಿಹಳ್ಳಿ, ಕುಪ್ಪೂರು, ಆಲೂರು, ಬಾಗೂರು, ದೊಡ್ಡಕೊಪ್ಪಲು, ಕಡಕೋಳ, ಹೆಮ್ಮರಗಾಲ, ಅರವಾಡಿ.

ಅಧ್ಯಾಯ ಐದು

ಬೀರಪ್ಪನ ಆಚರಣೆ, ನಂಬಿಕೆ ಮತ್ತು ಕಲೆಗಳು ೧೯೮

ಅ. ಆಚರಣೆಗಳು

೧. ಪೂಜೆ ಉತ್ಸವ ಮತ್ತು ಜಾತ್ರೆ, ೨. ಮೀಸಲು ಆಚರಣೆ, ೩. ಗೂಡೆ ಆಚರಣೆ, ೪. ಗಾವು ಸಿಗಿಯುವುದು, ೫. ಅಲಗು ಹಾಕಿಕೊಳ್ಳುವ ಆಚರಣೆ, ೬. ಕೀಲಕಟ್ಟೆಯ ಆಚರಣೆ, ೭. ಹೊನ್ನಾಟಿ, ೮. ಹಾಲುಬಾನ ಸೇವೆ, ೯. ಅಗ್ನಿಸೇವೆ, ೧೦. ಪಂಚಾಮೃತ ಅಭಿಷೇಕ, ೧೧. ಕದಳಿಕಟ್ಟೋ ಸೇವೆ, ೧೨. ಕಾಗೆ ಪರೇವು ಸೇವೆ, ೧೩. ಬಾಯಿಬೀಗ ಆಚರಣೆ, ೧೪. ಹಾಲರವಿ ಸೇವೆ, ೧೫. ದೀವಟಿಗೆ ಸಲಾಮು, ೧೬. ಗಂಗಾಸ್ನಾನ, ೧೭. ಊರಾಡುವ ಆಚರಣೆ, ೧೮. ಪತ್ರಿಕೌಲು ಕೇಳುವುದು, ೧೯. ತೆಂಗಿನಕಾಯಿ ಪವಾಡ, ೨೦. ದೀಪದ ಆಚರಣೆ, ೨೧. ಧ್ವಜಾರೋಹಣ ಆಚರಣೆ, ೨೨. ಖೇಲು ಹೊರುವುದು, ೨೩. ಅಂಬಲಿ ಕೊಡುವ ಸೇವೆ, ೨೪. ಬಿದಿಗೆ ಆಚರಣೆ, ೨೫. ಹುಗ್ಗಿ ಹುಟ್ಟಿನ ಆಚರಣೆ, ೨೬. ಗುಗ್ಗರಿ ಆಚರಣೆ, ೨೭. ವಾಲಗ ಸೇವೆ, ೨೮. ಜಲ ಪವಾಡ ಆಚರಣೆ, ೨೯. ಮುಳುಗದ್ದುಗೆ ಆಚರಣೆ, ೩೦. ಕಟ್ಟೆ ಹಿಡಿಯುವುದು, ೩೧. ಬಿಲ್ಲಾಸುರನ ತಲೆ ಆಚರಣೆ, ೩೨. ಕಾಳುಪೂಜೆ, ೩೩. ಕಟ್ಟಿದೋಣಿ ಸೇವೆ, ೩೪. ಕತ್ತಿ ಪವಾಡ, ೩೫. ಟಗರುಗಲ್ಲು ಪವಾಡ, ೩೬. ಕರಿಕಟ್ಟುವುದು, ೩೭. ಭಂಡಾರ ಮಹಿಮೆ ಆಚರಣೆ, ೩೮. ಈರೂಟ, ೩೯. ಉಯ್ಯಾಲೆ, ೪೦. ಓಕಳಿ, ೪೧. ತಿಂಗಳ ಪೂಜೆ ಕಾರ್ಯ

ಆ. ನಂಬಿಕೆಗಳು

೧. ಮೀಸಲು ತುಪ್ಪದ ಹರಕೆ, ೨. ಉಡುಗೊರೆಯ ಹರಕೆ, ೩. ಕುರಿಮರಿ ಹರಕೆ, ೪. ಗಿಣ್ಣದ ಹಾಲಿನ ಹರಕೆ, ೫. ಮುಡುಪಿನ ಹರಕೆ, ೬. ಉರುಳು ಹರಕೆ, ೭. ಇಡಗಾಯಿ ಹರಕೆ, ೮. ತಲೆಗೂದಲು ಹರಕೆ

ಇ. ಕಲೆಗಳು

೧. ಡೊಳ್ಳು ಕುಣಿತ, ೨. ಈರಗಾರರ ಕುಣಿತ, ೩. ದಟ್ಟಿ ಕುಣಿತ, ೪. ಬುಡ್ಡರ ಕುಣಿತ ೫. ಸದರ ಕಲೆ, ೬. ವೀರಗಾಸೆ ಕುಣಿತ, ೭. ಹುಲಿಮನೆ ಕುಣಿತ, ೮. ಮುಳ್ಳುಪಲ್ಲಕ್ಕಿ ಕುಣಿತ ೯. ಕದಳಿ ಕುಣಿತ, ೧೦. ದಳವಾಯಿ ಕುಣಿತ, ೧೧. ದೀಪದ ಕುಣಿತ, ೧೨. ಬೀಂಗಯ್ಯನ ಕುಣಿತ

ಈ. ಪಟ್ಟಗಳ ಆಯ್ಕೆ ಮತ್ತು ದೀಕ್ಷೆ

೧. ದಳವಾಯಿ ಪಟ್ಟ ದೀಕ್ಷೆ

೨. ಪೂಜಾರಿಗಳ ಪಟ್ಟ ದೀಕ್ಷೆ

೩. ಬಿಂಗಯ್ಯನ ಪಟ್ಟ ದೀಕ್ಷೆ

ಅಧ್ಯಾಯ ಆರು

ಸಮಾರೋಪ ೨೭೯

೧. ಅಧ್ಯಯನದ ಫಲಿತಗಳು

೨. ಅಧ್ಯಯನದ ಹೊಸ ಸಾಧ್ಯತೆಗಳು

ಅನುಬಂಧಗಳು

೧. ಪರಾಮರ್ಶನ ಗ್ರಂಥ ಸೂಚಿ ೨೯೦

೨. ವಕ್ತೃಗಳ ವಿವರ ೩೦೧

೩. ಕರ್ನಾಟಕದ ಕೆಲವು ಬೀರಲಿಂಗೇಶ್ವರ ದೇವಸ್ಥಾನಗಳ ಸೂಚಿ ೩೦೭

೪. ಬೀರಪ್ಪನ ಶಾಸನದ ಪಠ್ಯಗಳು ೩೧೩

೫. ಛಾಯಾಚಿತ್ರಗಳು ೩೨೪

ಅಧ್ಯಾಯ - ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

೧. ಅಧ್ಯಯನದ ಉದ್ದೇಶ

೨. ಅಧ್ಯಯನದ ವ್ಯಾಪ್ತಿ

೩. ಅಧ್ಯಯನದ ವಿಧಾನ

೪. ಅಧ್ಯಯನದ ವಿಶ್ಲೇಷಣೆಗಾಗಿ ಮಾಡಿಕೊಂಡ ಅಧ್ಯಾಯಗಳು

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಪ್ರವೇಶ

ಜನಸಮುದಾಯಗಳ ಸಾಂಸ್ಕೃತಿಕ ಚರಿತ್ರೆಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಅವರ ಸಂಸ್ಕೃತಿ ಪ್ರಮುಖವಾದ ಆಕರ ಎಂದುಕೊಳ್ಳಲಾಗುತ್ತಿದೆ. ಏಕೆಂದರೆ "ಯಾವುದೇ ಸಂಸ್ಕೃತಿ ಮತ್ತು ಇತಿಹಾಸವು ಎರಡು ಜನವರ್ಗಗಳನ್ನು ಹೊಂದಿರುತ್ತದೆ. ಒಂದು ಆಳುವ ವರ್ಗ, ಇನ್ನೊಂದು ಆಳಿಸಿಕೊಳ್ಳುವ ವರ್ಗ. ಆಳುವ ವರ್ಗದಲ್ಲಿ ಪ್ರಭುಗಳು, ಶ್ರೀಮಂತರು, ಪುರೋಹಿತಶಾಹಿ ವಕ್ತಾರರು ಕಾಣಿಸಿಕೊಳ್ಳುವರು. ಆಳಿಸಿಕೊಳ್ಳುವ ವರ್ಗದಲ್ಲಿ ಶ್ರಮ ಸಂಸ್ಕೃತಿ ಪ್ರಧಾನವಾದ ಬಹುಜನ ಸಮುದಾಯವು ಕಾಣಿಸಿಕೊಳ್ಳುತ್ತದೆ. ಆದ್ದರಿಂದ ಇವರ ಸಮಷ್ಟಿ ರೂಪದ ನಿಜದ ಕಥಾನಕವನ್ನು ನಾವು ಇತಿಹಾಸ ಎಂದು ಕರೆಯಬೇಕಾಗುತ್ತದೆ".[1] ಇಂತಹ ಇತಿಹಾಸಗಳಲ್ಲಿ ಸಾಂಸ್ಕೃತಿಕ ವೀರರ ಕಥನಗಳು ಗಮನಸೆಳೆಯುತ್ತವೆ. ಕರ್ನಾಟಕದ ಹಲವು ಸಮುದಾಯದ ಸಾಂಸ್ಕೃತಿಕ ವೀರರ ಕಥನಗಳನ್ನು ಕುರಿತು ಅಧ್ಯಯನಗಳಾಗಿರುವುದು ಕಡಿಮೆ. ಹಾಲುಮತ ಸಮುದಾಯವೂ ಇದಕ್ಕೆ ಹೊರತಾಗಿಲ್ಲ. ಹಾಲುಮತ ಸಮುದಾಯದ ಕಥನಗಳು ವಿಶೇಷವಾಗಿ ಮೌಖಿಕ ಪಠ್ಯಗಳಲ್ಲಿ ಹೆಚ್ಚು ಅಡಕವಾಗಿವೆ. ಯಾವುದೇ ಒಂದು ಸಮಾಜ ಮತ್ತು ಸಂಸ್ಕೃತಿಯನ್ನು ಅರಿಯಬೇಕಾದರೆ ಅಲ್ಲಿನ ಜನರ ಜೀವನಕ್ರಮ, ಆಚರಣೆ, ಸಂಪ್ರದಾಯ, ನಂಬಿಕೆ, ಹಾಡು, ಕಥೆ, ಮುಂತಾದ ಆಕರಗಳ ಮೂಲಕ ಅರಿತುಕೊಳ್ಳಬಹುದು. ಆಗ ಆ ಸಮಾಜದ ಮೂಲ ಸಂಸ್ಕೃತಿಯ ಪರಿಚಯ ಸಮಗಾಗುತ್ತದೆ. ಅದಕ್ಕಾಗಿ ಮೊದಲು ಅಲ್ಲಿನ ಜನಜೀವನದ ವ್ಯವಸ್ಥೆಯನ್ನು ಅಧ್ಯಯನ ಮಾಡಬೇಕಾಗುತ್ತದೆ. ಪ್ರಾಚೀನ ಕಾಲದಿಂದಲೂ ಉಳಿದು ಕೊಂಡು ಬೆಳೆದುಕೊಂಡು ಬಂದಿರುವ ಜನಪದರ ಜೀವನ ವಿಧಾನ ಮತ್ತು ಆಚರಣೆಗಳು, ಸಂಪ್ರದಾಯಗಳು ಅವರ ಜೊತೆಗಿರುವ ಜೀವಂತ ಸಂಪತ್ತಾಗಿವೆ.

ಭಾರತದ ಸಂಸ್ಕೃತಿಯು ಅನೇಕ ವೀರರಿಂದ ಮತ್ತು ಕವಿಗಳಿಂದ ತುಂಬಿರುವ ದೇಶ. ಇವರ ಚರಿತ್ರೆಯನ್ನು ಕಟ್ಟಿಕೊಂಡಿರುವ ಪರಿಕಲ್ಪನೆ ಮತ್ತು ವಿಧಾನಗಳು ಭಿನ್ನವಾಗಿವೆ. ಒಬ್ಬರು ಕಲಾತ್ಮಕವಾದ ಬರವಣಿಗೆಯಲ್ಲಿ ಕಟ್ಟಿಕೊಟ್ಟರೆ, ಮತ್ತೊಬ್ಬರು ಸಾಹಸ-ಸಾಧನೆಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಅಂದರೆ ಸಂಸ್ಕೃತಿಯ ಅಧ್ಯಯನದಲ್ಲಿ ಪುರಾಣಗಳಲ್ಲಿ ಬರುವ ವೀರರು ಸಾಹಿತ್ಯದ ರೀತಿಯಲ್ಲಿ ರಚನೆಯನ್ನು ಪಡೆದಿರುತ್ತಾರೆ. ಮುಂದೆ ಇವರೇ ಸಾಂಸ್ಕೃತಿಕ ವೀರರಾಗುತ್ತಾರೆ. ಸಾಂಸ್ಕೃತಿಕ ವೀರರ ಪರಿಚಯವು ಆಯಾ ಜನಾಂಗ, ಸಮುದಾಯವನ್ನು ಗುರುತಿಸಲು ಮಹತ್ವದ ಆಕರಗಳಾಗಿವೆ. ಹಾಲಮತದ ಸಾಂಸ್ಕೃತಿಕ ವೀರ ಚರಿತ್ರೆಯು ಇದಕ್ಕೆ ಹೊರತಾಗಿಲ್ಲ ಅಥವಾ ಹಾಲಮತದ ಸಾಂಸ್ಕೃತಿಕ ಚಾರಿತ್ರಿಕ ಆಕರಗಳು ಇದಕ್ಕೆ ಹೊರತಾಗಿಲ್ಲ. ಈ ಸಮುದಾಯದಲ್ಲಿ ಬೀರಪ್ಪ, ಮಾಳಿಂಗರಾಯ, ರೇವಣಸಿದ್ಧ, ಅಮೋಘಸಿದ್ಧ, ಸಿದ್ಧರಾಮ, ವೀರಗೊಲ್ಲಾಳೇಶ್ವರ, ಪದ್ಮಗೊಂಡ, ಸಿದ್ಧಮಂಕ, ಇಟ್ಟಪ್ಪ, ಶಾಂತಮುತ್ತಯ್ಯ, ಮಾಯವ್ವ ಮುಂತಾದ ಸಾಂಸ್ಕೃತಿಕ ನಾಯಕರು ಪ್ರಮುಖವಾಗಿ ಕಾಣಿಸಿಕೊಳ್ಳುತ್ತಾರೆ. ಈ ಸಾಂಸ್ಕೃತಿಕ ನಾಯಕರೆಲ್ಲರೂ ಒಂದು ಕಾಲಘಟ್ಟಕ್ಕೆ ಸೇರಿದವರಲ್ಲ. ಬೇಟೆ, ಪಶುಪಾಲನೆ, ಕೃಷಿ, ಸಂಸ್ಕೃತಿಯ ಕಾಲಘಟ್ಟದಲ್ಲಿ ಬದುಕಿದವರು. ಇವರೆಲ್ಲರೂ ಅನುಸರಿಸುತ್ತಿದ್ದ ಹಾಲುಮತ ಧರ್ಮ ಮತ್ತು ಹಾಲುಮತ ಧಾರ್ಮಿಕ ವಿಧಾನ ಒಂದೇ ಅಲ್ಲ, ಬೇರೆ ಬೇರೆ. ಆಯಾ ಸಾಂಸ್ಕೃತಿಕ ವೀರರು ಅನುಸರಿಸುತ್ತಿದ್ದ ಧಾರ್ಮಿಕ ವಿಧಾನಗಳನ್ನು ಚಾರಿತ್ರಿಕ ಕಥನಗಳಿಂದ ವಿಶ್ಲೇಷಣೆಗೆ ಒಳಪಡಿಸಬೇಕಾಗಿದೆ. ಈ ವಿಧಾನಕ್ಕೆ ಹಾಲುಮತ ಪುರಾಣಗಳು, ಡೊಳ್ಳಿನ ಹಾಡುಗಳು ಮತ್ತು ಕಂತೆಸೇವೆ, ತೋಪುಜಾತ್ರೆ, ದೊಡ್ಡದೇವರ ಜಾತ್ರೆ, ತೆಂಗಿನಕಾಯಿ ಪವಾಡ ಜಾತ್ರೆ, ಬೀರಪ್ಪ, ಅಮೋಘಸಿದ್ಧನ ಪಲ್ಲಕ್ಕಿ ಉತ್ಸವಗಳು ಮತ್ತು ಹೊಳೆಗೆ ಹೋಗುವ ಆಚರಣೆಗಳು ಮುಂತಾದ ಸಂದರ್ಭಗಳಲ್ಲಿ ಹಾಡುವ ಜನಪದ ಗೀತೆಗಳು ಹಾಗೂ ಆಚರಣೆ ಸಂಪ್ರದಾಯಗಳು ಹೆಚ್ಚು ಸಹಾಯಕವಾಗಬಲ್ಲವು. ಪ್ರಸ್ತುತ ಅಧ್ಯಯನಕ್ಕೆ ಕ್ಷೇತ್ರಕಾರ್ಯದ ಮುಖಾಂತರ ಈ ವೀರರಿಗೆ ಸಂಬಂಧಿಸಿದ ಐತಿಹ್ಯ, ಪುರಾಣ, ಸ್ಥಳನಾಮಗಳು, ಜನಪದ ಗೀತೆಗಳು, ಆರಾಧನ ವಿಧಾನಗಳು, ಪೂಜಾವಿಧಾನಗಳು, ಜಾತ್ರೆ, ಉತ್ಸವಗಳ ಇಂತಹ ಅನೇಕ ವಿವರಗಳನ್ನು ಸಂಗ್ರಹಿಸಿ ಈಗಾಗಲೆ ಆಗಿರುವ ಅಧ್ಯಯನಗಳನ್ನು ಪೂರಕ ಆಕರಗಳನ್ನಾಗಿ ಬಳಸಿಕೊಂಡು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಆದರೆ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಪ್ರಮುಖ ಆಕರವೆಂದು ಗ್ರಹಿಸಿ ಬೀರಪ್ಪನಿಗೆ ಸಂಬಂಧಿಸಿದ ಆಚರಣೆ ಮತ್ತು ಸಂಪ್ರದಾಯಗಳನ್ನು ವಿಶ್ಲೇಷಣೆ ಮಾಡಲಾಗಿದೆ ಹಾಗೂ ಬಳಸಿಕೊಳ್ಳಲಾಗಿದೆ.

ಬೀರಪ್ಪ ಹಾಲುಮತ ಸಮುದಾಯದ ಆರಾಧ್ಯದೈವ, ಕುಲದೈವ. ಈತನನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ. ಅಂಥವುಗಳಲ್ಲಿ ಬೀರಲಿಂಗ, ಬೀರಲಿಂಗೇಶ್ವರ, ಬೀರೋಬಾ, ಕರಿಸಿದ್ಧ, ದೊಡ್ಡದೇವರು ಮುಂತಾದವುಗಳು ಪ್ರಮುಖವಾಗಿ ಕೇಳಿ ಬರುತ್ತವೆ. ಅಲ್ಲದೆ ಹಲವು ನಾಮಗಳಿಂದ ಆರಾಧನೆ ಮಾಡುತ್ತಾರೆ. ಈತ ಭಾರತದಲ್ಲಿ ದ್ರಾವಿಡ ಪಶುಪಾಲನ ಸಮುದಾಯಗಳ ಆರಾಧ್ಯದೈವನೆಂದೂ ಜನಪ್ರಿಯನುಗೊಂಡಿದ್ದಾನೆ. ಕರ್ನಾಟಕದಲ್ಲಿ ಈತನ ಚರಿತ್ರೆ ಉಳಿದ ರಾಜ್ಯಗಳಿಗಿಂತ ಭಿನ್ನ. ಇಲ್ಲಿ ಸಿಗುವಷ್ಟು ಭಿನ್ನ ಪಠ್ಯಗಳು ಬೇರೆಲ್ಲಿಯೂ ಸಿಗುವುದಿಲ್ಲ. ಹಲವು ರೂಪಾಂತರ ಪಠ್ಯಗಳು ಆಯಾ ಸಮುದಾಯಗಳ

ಅಥವಾ ಆರಾಧಕ ವರ್ಗಗಳ ಅನನ್ಯತೆಗಾಗಿಯೇ ಸೃಷ್ಟಿಯಾಗಿವೆ. ಆ ಪಠ್ಯಗಳು ಜನ್ಮ ಪಡೆಯುವುದರ ಹಿಂದೆ ಅನೇಕ ಸಾಂಸ್ಕೃತಿಕ, ಧಾರ್ಮಿಕ ಒತ್ತಡಗಳು, ಈತನನ್ನು ಆರಾಧಿಸುವ ಜನರ ಆಸೆ, ಆಕಾಂಕ್ಷೆಗಳು ಕಾರ್ಯ ನಿರ್ವಹಿಸಿವೆ. ಇದರಿಂದ ಬೀರಪ್ಪನ ಚರಿತ್ರೆಯಲ್ಲಿ ಅನೇಕ ಸಾಂಸ್ಕೃತಿಕ ಪಲ್ಲಟಗಳಾಗಿವೆ. ಇವುಗಳನ್ನು ಗುರುತಿಸಿ ಅಧ್ಯಯನ ಮಾಡಲಾಗಿದೆ. ಜೊತೆಗೆ ಆ ಸಾಂಸ್ಕೃತಿಕ ವೀರರ ಬದುಕಿನ ಕಾಲಘಟ್ಟದೊಂದಿಗೆ ಮತ್ತು ಸಮುದಾಯದ ಬದುಕಿನ ಚಿತ್ರಣಗಳೊಂದಿಗೆ ಅಧ್ಯಯನ ಮಾಡಲಾಗಿದೆ. ಈ ಸಾಂಸ್ಕೃತಿಕ ವೀರರನ್ನು ಆಯಾ ವೃತ್ತಿ ಸಂಬಂಧಗಳ ಜೊತೆ ವಿಶ್ಲೇಷಣೆ ಮಾಡಬೇಕು. ಏಕೆಂದರೆ "ಒಂದು ಸಮುದಾಯದಲ್ಲಿ ಅದರ ಸಾಕ್ಷಿ ಪ್ರಜ್ಞೆಯಂತೆ ಕಾಣಿಸಿಕೊಳ್ಳುವ ಒಬ್ಬ ಸಾಂಸ್ಕೃತಿಕ ನಾಯಕನ ಹುಟ್ಟು ಆ ಸಮುದಾಯದ ಒಳಗೆ ಒಂದು ವೈಚಾರಿಕ ಆವರಣವನ್ನು ಸೃಷ್ಟಿಸುವ ನಾಯಕ ಆ ಸಮುದಾಯದ ಒಟ್ಟು ಅಶೋತ್ತರಗಳ ಪ್ರತಿರೂಪ. ಅವನು ಇಡಿಯಾಗಿ ಆಯಾ ಸಮುದಾಯಗಳ ಕನಸುಗಳ ಬಲಿಷ್ಠ ಸಂಕೇತವೂ ಹೌದು. ಲೌಕಿಕ ಜಗತ್ತಿನ ಆಚೆಗೆ ಈ ಸಮುದಾಯಗಳು ತವಕಿಸುವ ಸೃಷ್ಟಿ ಜಗತ್ತಿನ ಅಧಿಪತಿ. ಅವನು ಅಧೀನಗೊಂಡ ಎಲ್ಲ ಸಮುದಾಯಗಳ ಅಂತಃಸತ್ವಗಳ ಪ್ರತಿರೋಧದಂತೆ ಈ ನಾಯಕರು ಗೋಚರಿಸುತ್ತಾರೆ. ನಮ್ಮ ಪರಂಪರೆಯ ಎಲ್ಲ ಬಗೆಯ ಸ್ಥಾವರ ಸಂಸ್ಥೆಗಳಿಗೆ ಪ್ರತಿಧ್ವನಿಯಾಗಿ ನಿಲ್ಲಬಲ್ಲ ಅನುಭಾವಿ ನಾಯಕರು ಇವರು. ಇಂಥವರನ್ನು ಕುರಿತು ಅಧ್ಯಯನ ಮಾಡುವುದೆಂದರೆ ಆ ಸಮುದಾಯದ ಅಂದರೆ ಅವರನ್ನು ಆರಾಧಿಸುವ ಸಮುದಾಯದ ಸಾಂಸ್ಕೃತಿಕ ಲೋಕವನ್ನು ಶಕ್ತಿಯನ್ನು ಅಧ್ಯಯನ ಮಾಡಿದಂತೆ ಸರಿ".[2] ಹಾಗಾಗಿಯೇ ಪ್ರಸ್ತುತ ಅಧ್ಯಯನವನ್ನು ಈ ಪರಿಕಲ್ಪನೆಯಿಂದ ಕೈಗೊಳ್ಳಲಾಗಿದೆ.

ಪ್ರಸ್ತುತ ಸಂದರ್ಭದಲ್ಲಿ ದೇಸೀಯ ಸಮುದಾಯಗಳಿಗೆ ರಾಜಕೀಯ, ಆರ್ಥಿಕ ಕಾರಣಗಳಿಂದಾಗಿಯೇ ಸಾಂಸ್ಕೃತಿಕ ಅಧ್ಯಯನ ಮಾಡುವ ಮತ್ತು ಅವುಗಳನ್ನು ಅನ್ವಯಿಕ ನೆಲೆಯಲ್ಲಿ ಗುರುತಿಸಿಕೊಂಡು ಅಳವಡಿಸಿ ಕೊಳ್ಳುವ ಮಹತ್ವ ಇನ್ನೂ ಹೆಚ್ಚಿದೆ. ಹೀಗಾಗಿ ಈ ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯನ್ನು ಸೈದ್ಧಾಂತಿಕವಾಗಿ ವಿಶ್ಲೇಷಣೆ ಮಾಡಲಾಗಿದೆ. ಇದಕ್ಕೆ ಈ ಸಾಂಸ್ಕೃತಿಕ ವೀರರ ಚರಿತ್ರೆಯ ಸುತ್ತಲೂ ಇರುವ ಪವಾಡ, ಆಚರಣೆ, ಸಂಪ್ರದಾಯಗಳ ಹಿನ್ನೆಲೆಯಲ್ಲಿ ಕೆಲಸ ಮಾಡಿರುವ ಆ ಪರಿಸರದ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ನೆಲೆಗಳನ್ನು ಇಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಇದಕ್ಕೆ ಮೊದಲು ಸಾಂಸ್ಕೃತಿಕ ವೀರರ ಬಿಡಿ ಬಿಡಿ ಅಧ್ಯಯನಗಳು ಆಗಬೇಕು ಹಾಗೂ ಆ ವ್ಯಕ್ತಿಗೆ ಸಂಬಂಧಿಸಿದ ಆಕರಗಳ ಬಿಡಿ ಬಿಡಿ ಅಧ್ಯಯನಗಳು ಆದರೆ ಇನ್ನೂ ಸೂಕ್ತ. ಈ ಪರಿಕಲ್ಪನೆಯಲ್ಲಿ ಬೀರಪ್ಪನಿಗೆ ಸಂಬಂಧಿಸಿದ ಆಕರಗಳಲ್ಲಿ ಸಂಪ್ರದಾಯ ಎನ್ನುವ ಪ್ರಕಾರವನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಹಾಗೆಂದು ಇದು ಕೇವಲ ಸಂಪ್ರದಾಯಗಳ ಅಧ್ಯಯನವಲ್ಲ. ಸಂಪ್ರದಾಯಗಳನ್ನು ಮುಖ್ಯವಾಗಿಟ್ಟುಕೊಂಡು ಬೀರಪ್ಪನಿಗೆ ಸಂಬಂಧಿಸಿ ಸಾಂಸ್ಕೃತಿಕ ಆಕರಗಳನ್ನು ತೌಲನಿಕವಾಗಿ ನೋಡಲಾಗಿದೆ. ಈ ಹಿನ್ನೆಲೆಯಲ್ಲಿ ಬೀರಪ್ಪನ ಸಂಪ್ರದಾಯಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನವು ಹಲವು ಉದ್ದೇಶಗಳನ್ನು ಹೊಂದಿದೆ. ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ.

೧. ಇದುವರೆಗೂ ಬೀರಪ್ಪನನ್ನು ಕುರಿತು ಸಮಗ್ರವಾದ ಅಧ್ಯಯನವಾಗಿಲ್ಲ. ಪರಿಚಯಾತ್ಮಕ ನೆಲೆಯಲ್ಲಿ ಬಿಡಿ ಬಿಡಿ ಬರಹಗಳು ಬಂದಿರುವುದೇ ಹೆಚ್ಚು. ಈ ಸಾಂಸ್ಕೃತಿಕ ವೀರನ ಸಂಪ್ರದಾಯಗಳನ್ನು ಕುರಿತು ಸಾಂಸ್ಕೃತಿಕ ವಿಶ್ಲೇಷಣೆ ಆಗಿರುವುದು ಇನ್ನೂ ಕಡಿಮೆ. ಆತನ ವ್ಯಕ್ತಿ ವಿವರಕ್ಕೆ ಸಂಬಂಧಿಸಿದ ಚಾರಿತ್ರಿಕ ಆಕರಗಳ ಸಂಗ್ರಹವೂ ಆಗಿರುವುದೂ ಕಡಿಮೆ. ಕರ್ನಾಟಕದಲ್ಲಿ ಬೀರಪ್ಪ, ಬೀರೇಶ್ವರ, ಬಿರೋಬಾ, ಮುರಸಿದ್ಧ, ಸಿದ್ದೇಶ್ವರ, ಸಣ್ಣದೇವರು, ಶಿವಸಿದ್ದೇಶ್ವರ, ಭೈರವ, ಚುಂಚ ಮುಂತಾದ ಭಿನ್ನ ನಾಮಗಳಿಂದ ಆರಾಧನೆಗೆ ಒಳಗಾಗುತ್ತಿದ್ದಾನೆ. ಈ ಪ್ರತಿಯೊಂದು ಹೆಸರಿನ ಬಳಕೆಯ ಹಿಂದೆ ಭಿನ್ನ ಪಠ್ಯಗಳ ಸಾಂಸ್ಕೃತಿಕ ಕಥನಗಳು ಜೀವಂತವಾಗಿವೆ. ಅಂತಹ ಕಥನಗಳಲ್ಲಿ ಸಂಪ್ರದಾಯಗಳು ವಿಭಿನ್ನವಾದ ಚರಿತ್ರೆಯನ್ನು ಪ್ರತಿಪಾದನೆ ಮಾಡುತ್ತಿವೆ. ಈತನಿಗೆ ಸಂಬಂಧಿಸಿದ ಸಂಪ್ರದಾಯಗಳಲ್ಲದೆ ಆತನ ಶಿಷ್ಯಬಳಗದ ಸಾಂಸ್ಕೃತಿಕ ವೀರರಲ್ಲೂ ಅನೇಕ ಬಗೆಯ ಸಂಪ್ರದಾಯಗಳಿವೆ. ಅವುಗಳಲ್ಲೂ ಬೀರಪ್ಪನ ಸಾಂಸ್ಕೃತಿಕ ಚಹರೆಗಳಿವೆ. ಇವುಗಳಿಗೆ ಮತ್ತು ಬೀರಪ್ಪನಿಗೆ ಸಂಬಂಧಿಸಿದ ಲಿಖಿತ ಪಠ್ಯಗಳ ನಡುವೆ ಸಂಬಂಧಗಳಿವೆ. ಪ್ರಸ್ತುತ ಅಧ್ಯಯನದಲ್ಲಿ ಅವುಗಳನ್ನೆಲ್ಲ ಸಂಗ್ರಹಿಸ ಲಾಗಿದೆ ಹಾಗೂ ಇತರ ಆಕರಗಳೊಂದಿಗೆ ತೌಲನಿಕ ಅಧ್ಯಯನ ಮಾಡಲಾಗಿದೆ. ಏಕೆಂದರೆ ಬೀರಪ್ಪನನ್ನು ಕುರಿತು ಈ ಎಲ್ಲ ದೃಷ್ಟಿಕೋನಗಳಿಂದ ವಿಶ್ಲೇಷಣೆ ಮಾಡಿದಾಗ ಮಾತ್ರ ಬೀರದೇವರ ಸಮಗ್ರ ಜೀವನ ಚಿತ್ರಣವನ್ನು ಗುರುತಿಸುವುದಕ್ಕೆ ಸಾಧ್ಯ. ಹಾಗಾಗಿಯೇ ಈ ರೀತಿಯ ಅಧ್ಯಯನ ವಿಧಾನಕ್ಕೆ ಬೇಕಾದ ಸೈದ್ಧಾಂತಿಕ ನೆಲೆಯನ್ನು ಶೋಧಿಸುವುದು ಅಧ್ಯಯನದ ಉದ್ದೇಶಗಳಲ್ಲಿ ಒಂದು.

೨. ಕರ್ನಾಟಕದಲ್ಲಿ ಬೀರಪ್ಪನನ್ನು ಭಿನ್ನನಾಮಗಳಲ್ಲಿ ಆರಾಧಿಸುವ ಭಿನ್ನ ಸಮುದಾಯಗಳು ಸಿಗುತ್ತವೆ. ಅಂತಹ ಸಮುದಾಯಗಳಲ್ಲಿ ಹಾಲುಮತಸ್ಥರು ಗೌಳಿಗರು, ಯಾದವರು, ಕಾಡುಕುರುಬರು, ಜೇನುಕುರುಬರು, ಮ್ಯಾಸಬೇಡರು, ಒಕ್ಕಲಿಗರು, ಗೊಲ್ಲರು, ಗೊಂಡರು, ಲಿಂಗಾಯತರು ಮುಂತಾದ ದ್ರಾವಿಡ ಪಶುಪಾಲನ ಸಮುದಾಯಗಳು ಪ್ರಧಾನವಾಗಿ ಕಂಡುಬರುತ್ತವೆ. ಈ ಸಮುದಾಯಗಳು ಬೀರಪ್ಪನ ಮತ್ತು ಆತನ ರೂಪಾಂತರ ಹೆಸರುಗಳಲ್ಲಿ ಆಚರಣೆ, ಉತ್ಸವಗಳನ್ನು ಮಾಡುತ್ತಿವೆ. ಈತನಕ ಆದ ಬೀರಪ್ಪನ ಚಾರಿತ್ರಿಕ ಅಧ್ಯಯನಗಳಲ್ಲಿ ಇವುಗಳನ್ನೆಲ್ಲ ಸೇರಿಸಿ ಅಧ್ಯಯನ ಮಾಡಿರುವುದು ಕಡಿಮೆ. ಈ ಭಿನ್ನ ಪಠ್ಯಗಳನ್ನು, ರೂಪಾಂತರಗಳನ್ನು ಗುರುತಿಸಿಲ್ಲ. ಸಾಂಸ್ಕೃತಿಕ ಪಲ್ಲಟಗಳಿಗೆ ಇರಬಹುದಾದ, ಸಂಪ್ರದಾಯಗಳ ರೂಪಾಂತರಕ್ಕೆ ಇರಬಹುದಾದ ಅಥವಾ ಹೀಗೆ ರೂಪಾಂತರಗೊಂಡ ಸಂಪ್ರದಾಯಗಳು ಪ್ರತಿಪಾದನೆ ಮಾಡುವ ಸಂಸ್ಕೃತಿಗಳನ್ನು ಕುರಿತು ಅಧ್ಯಯನ ಮಾಡಿಲ್ಲ. ಈ ಎಲ್ಲ ಪಠ್ಯಗಳನ್ನು ಅಧ್ಯಯನಕ್ಕೆ ಒಳಪಡಿಸಬೇಕು. ಹಾಗಾಗಿಯೇ ಪ್ರಸ್ತುತ ಅಧ್ಯಯನದಲ್ಲಿ ರೂಪಾಂತರಗಳಿಗೆ ಇರಬಹುದಾದ ಕಾರಣಗಳು ಮತ್ತು ಪರಿಣಾಮಗಳನ್ನು ಸೈದ್ಧಾಂತಿಕವಾಗಿ ವಿಶ್ಲೇಷಿಸಲಾಗಿದೆ.

೩. ಕನ್ನಡದಲ್ಲಿ ಸಾಂಸ್ಕೃತಿಕ ವೀರರ ಬಗೆಗೆ ಸಾಹಿತ್ಯಿಕ ಪಠ್ಯಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನಗಳಾಗಿರುವುದು ಹೆಚ್ಚು. ಬೀರಪ್ಪನ ಅಧ್ಯಯನವೂ ಇದಕ್ಕೆ ಹೊರತಾಗಿಲ್ಲ. ಈತನ ಚರಿತ್ರೆಯನ್ನು ಆಚರಣೆ ಸಂಪ್ರದಾಯಗಳೊಂದಿಗೆ ಮುಖಾಮುಖಿ ಮಾಡಿರುವುದು ಕಡಿಮೆ. ಹಾಲುಮತ ಸಾಂಸ್ಕೃತಿಕವೀರರ ಅಧ್ಯಯನಗಳಲ್ಲಿ ಇದರ ಪ್ರಭಾವ ಇನ್ನೂ ಹೆಚ್ಚು. ಕೇವಲ ಸಾಹಿತ್ಯಿಕ ಪಠ್ಯಗಳಿಂದ ಸಾಂಸ್ಕೃತಿಕವೀರರ ಸಮಗ್ರ ಚರಿತ್ರೆಯನ್ನು ಗ್ರಹಿಸುವುದಕ್ಕೆ ಸಾಧ್ಯವಿಲ್ಲ. ಅಭಿವ್ಯಕ್ತಿಗೊಂಡಿರುವ ಮತ್ತು ಅಭಿವ್ಯಕ್ತಿಗೊಳ್ಳುತ್ತಿರುವ ಪಠ್ಯಗಳಲ್ಲಿ ಆಚರಣೆ ಮತ್ತು ಸಂಪ್ರದಾಯಗಳು ಒಂದು ಪಠ್ಯ ಅಥವಾ ಪ್ರಕಾರವಷ್ಟೇ. ಅವುಗಳನ್ನು ಅಶಾಬ್ದಿಕ ಪಠ್ಯಗಳೆಂದು ಕರೆಯಬಹುದು. ಏಕೆಂದರೆ ಮುಕ್ತವಾಗಿ ಹೇಳಿಕೊಳ್ಳಲಾಗದ ಎಷ್ಟೋ ಸಂಗತಿಗಳನ್ನು ಆಚರಣೆಗಳ ಮುಖಾಂತರ ಸಮುದಾಯಗಳು ಹೇಳಿಕೊಂಡಿರುವುದನ್ನು ಕಾಣಬಹುದು. ಆ ಸಾಂಕೇತಿಕ ಅಭಿವ್ಯಕ್ತಿಯನ್ನು ಸಾಹಿತ್ಯಿಕ ಪಠ್ಯಗಳೊಂದಿಗೆ ಹಾಗೂ ಆ ಸಾಂಸ್ಕೃತಿಕ ವೀರರನ್ನು ಆರಾಧಿಸುವ ಸಮುದಾಯಗಳ ಜೀವನ ವಿಧಾನದೊಂದಿಗೆ ತೌಲನಿಕ ಅಧ್ಯಯನ ಮಾಡಬೇಕು. ಪ್ರಸ್ತುತ ಅಧ್ಯಯನದಲ್ಲಿ ಬೀರಪ್ಪನ ಸಂಪ್ರದಾಯಗಳನ್ನು ಈ ಬಗೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೪. ಬೀರಪ್ಪನಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಪಲ್ಲಕ್ಕಿ ಆಚರಣೆ, ದೊಡ್ಡದೇವರ ಜಾತ್ರೆ, ತೋಪುಜಾತ್ರೆ, ತೆಂಗಿನಕಾಯಿ ಪವಾಡ ಜಾತ್ರೆ, ಕರಿಸಿದ್ಧೇಶ್ವರ ಜಾತ್ರೆ, ಮಾಳಿಂಗರಾಯನ ಪಲ್ಲಕ್ಕಿ ಬೇಟೆ ಮುಂತಾದ ಆಚರಣೆ ಉತ್ಸವಗಳು ನಡೆಯುತ್ತಿವೆ. ಈ ಎಲ್ಲ ಆಚರಣೆಗಳಲ್ಲಿ ಬೇರೆ ಬೇರೆ ಆರಾಧ್ಯ ದೈವಗಳೊಂದಿಗೆ, ಸಾಂಸ್ಕೃತಿಕ ವೀರರೊಂದಿಗೆ ಸಂಬಂಧಗಳನ್ನು ಇಟ್ಟುಕೊಂಡಿರುವುದು ಕಂಡುಬರುತ್ತದೆ. ಇವುಗಳಲ್ಲಿ ಸಿದ್ಧ, ನಾಥ, ಶೈವ, ವೀರಶೈವ, ವೈಷ್ಣವ, ಜೈನ, ಮುಸ್ಲಿಂ ಮುಂತಾದ ಧರ್ಮಗಳ ಮತ್ತು ಪಂಥಗಳ ವ್ಯಕ್ತಿಗಳ ವಿವರಗಳು ಹಾಗೂ ಅವರೊಂದಿಗೆ ಅಥವಾ ಆ ದೈವಗಳೊಂದಿಗೆ ನಡೆಯುವ ಹಲವು ಆಚರಣೆ - ಸಂಪ್ರದಾಯಗಳನ್ನು ಆಚರಿಸುವ ವಿವರಗಳು ಸಿಗುತ್ತವೆ. ಈವರೆಗಿನ ಅಧ್ಯಯನಗಳು ಆ ವ್ಯಕ್ತಿಗಳಿಗೂ ಅಥವಾ ಆ ಧರ್ಮಗಳ ಸಂಯುಕ್ತತೆಗೂ ಇರುವ ಸಂಬಂಧಗಳನ್ನು ಮತ್ತು ಕಾರಣಗಳನ್ನು ಗುರುತಿಸಿಲ್ಲ. ಪ್ರಸ್ತುತ ಅಧ್ಯಯನವು ಸಂಯುಕ್ತತೆಯ ವೈಶಿಷ್ಟ್ಯತೆಯನ್ನು ಸಂಪ್ರದಾಯಗಳನ್ನು ಮುಖ್ಯವಾಗಿಟ್ಟುಕೊಂಡು ಸಾಮ್ಯತೆ ಮತ್ತ ಭಿನ್ನತೆಗೆ ಇರುವ ಕಾರಣಗಳನ್ನು ಗುರುತಿಸಿಕೊಂಡು ತಾತ್ವಿಕವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೫. ಎರಡು ಮೂರು ದಶಕಗಳ ಈಚೆಗೆ ಬೀರಪ್ಪನ ಚರಿತ್ರೆಯನ್ನು ಲಿಖಿತ ಪಾರಂಪರಿಕ ಪುರಾಣಗಳಲ್ಲಿ ಚಿತ್ರಣಗೊಂಡಿರುವ ಅವತಾರಗಳಿಗೆ, ಸೃಷ್ಟಿಗಳಿಗೆ, ಪವಾಡಗಳಿಗೆ ಹೋಲಿಸಿ ಬರೆಯುವ ಕೆಲಸ ಹಾಲುಮತ ಸಂಸ್ಕೃತಿಯಲ್ಲಿ ತೀವ್ರವಾಗಿ ನಡೆಯುತ್ತಿದೆ. ಇದರಿಂದ ಬೀರಪ್ಪನ ಚರಿತ್ರೆಯ ವಾಸ್ತವ ಅಂಶಗಳು ಕಣ್ಮರೆಯಾಗಿ ರೂಪಾಂತರ ಅಂಶಗಳು ಪ್ರಧಾನಧಾರೆಗೆ ಬರುತ್ತಿವೆ. ಇದರ ಹಿಂದೆ ಯಾವುದೇ ಒಂದು ಆಸಕ್ತವರ್ಗ ಕಾರ್ಯ ನಿರ್ವಹಿಸುತ್ತಿದೆ. ಈ ರೀತಿಯಾಗಿ ಕೆಲಸ ಮಾಡುತ್ತಿರುವ ಮನಸ್ಥಿತಿಗಳ ಮತ್ತು ಸಮುದಾಯಗಳ ಆಸಕ್ತಿ ಹಾಗೂ ನಿರಾಕರಣೆಗಳನ್ನು ಗುರುತಿಸಬೇಕಾಗಿದೆ. ಇದಕ್ಕಾಗಿ ಓದುಗ ಬಳಗವನ್ನು, ಕಲಾವಿದರ ಬಳಗವನ್ನು, ಸಮುದಾಯವನ್ನು ಆಚರಣೆ ಮತ್ತು ಸಂಪ್ರದಾಯಗಳನ್ನು ಜೀವಂತಗೊಳಿಸುತ್ತಿರುವ ವಕ್ತಾರ ಬಳಗವನ್ನು,

ಸಂದರ್ಶಿಸಿ ಅದರ ಹಿಂದಿನ ಅಂಶಗಳನ್ನು ಗುರುತಿಸಬೇಕಾಗಿದೆ. ಇದರಿಂದ ಸಮುದಾಯದ ಆಸಕ್ತಿಯನ್ನು ಗುರುತಿಸಿದಂತಾಗುತ್ತದೆ. ಏಕೆಂದರೆ ಪಠ್ಯಗಳ ಬದಲಾವಣೆ ಸಂಪ್ರದಾಯಗಳ ಮೇಲೆ ಪ್ರಭಾವ ಬೀರುತ್ತದೆ. ಆ ಪರಿಕಲ್ಪನೆಗಳ ಸ್ವೀಕಾರ ನಡೆಯುತ್ತಿವೆ. ಅಲ್ಲದೇ ಸಂಪ್ರದಾಯಗಳು ಒಂದು ಪಠ್ಯವನ್ನು ಮಂಡನೆ ಮಾಡಿದರೆ ಹೀಗೆ ತಿರುಚಿದ ಪಠ್ಯಗಳು ಮತ್ತೊಂದು ಬಗೆಯ ಪಠ್ಯವನ್ನು ಪ್ರತಿಪಾದನೆ ಮಾಡುತ್ತವೆ. ಇದರಿಂದ ಭಿನ್ನ ಚಿತ್ರಣಗಳು ಕಂಡುಬರುತ್ತಿವೆ. ಹೀಗೆ ಆದ ಬದಲಾವಣೆಗಳಿಂದ ಆಗಿರುವ ಸಂಗತಿಗಳನ್ನು ಸಮುದಾಯದ ವಕ್ತಾರರಿಂದ ಮಾಹಿತಿ ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೬. ಬೀರಪ್ಪನಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಅಲಗು ಆಚರಣೆ, ಹಲ್ಲುಮರಿ ಸಿಗಿಯುವುದು, ಗೂಡೆ ಆಚರಣೆ, ಈರೂಟ, ಉಯ್ಯಾಲೆ, ಓಕಳಿ, ಹೊನ್ನಾಟಿ, ಅಗ್ನಿಸೇವೆ, ಬಾಯಿಗೆ ಬೀಗ, ಕದಳಿಕಟ್ಟೋ ಸೇವೆ, ಧ್ವಜಾರೋಹಣ, ಮೀಸಲು ಆಚರಣೆ ತೋಳದ ಕಲ್ಲುಗಳ ಆಚರಣೆ ಇನ್ನು ಮುಂತಾದ ಆಚರಣೆಗಳು, ಹರಕೆಗಳು ಮತ್ತು ನಂಬಿಕೆಗಳು, ಬೀರಪ್ಪನಿಗೆ ಸಂಬಂಧಿಸಿದ ಕಲೆಗಳನ್ನು ಜಾತ್ರೆಯ ಸಂದರ್ಭದಲ್ಲಿ ನೋಡಿದ ಆಚರಣೆಗಳನ್ನು ಸಂಪ್ರದಾಯಗಳನ್ನು ಅಧ್ಯಯನ ಮಾಡಲಾಗಿದೆ. ಒಟ್ಟಾರೆಯಾಗಿ ಬೀರಪ್ಪನ ಸಂಪ್ರದಾಯಗಳನ್ನು ವಿಭಿನ್ನ ದೃಷ್ಟಿಕೋನಗಳಿಂದ ಸಮಗ್ರವಾಗಿ ಅಧ್ಯಯನಕ್ಕೊಳಪಡಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ

ಅಧ್ಯಯನದ ವ್ಯಾಪ್ತಿ ಎಂದರೆ ಅಧ್ಯಯನದ ಚೌಕಟ್ಟು ಎಂದರ್ಥ. ಯಾವುದೇ ಒಂದು ಅಧ್ಯಯನಕ್ಕೆ ನಿರ್ದಿಷ್ಟವಾದ ಚೌಕಟ್ಟು ಬಹಳ ಮುಖ್ಯ. ಅಧ್ಯಯನವು ನಿರ್ದಿಷ್ಟವಾದ ಚೌಕಟ್ಟನ್ನು ಹೊಂದಿದಾಗ ಮಾತ್ರ ನಿಶ್ಚಿತವಾದ ಫಲಿತಗಳನ್ನು ಕಂಡುಕೊಳ್ಳುವುದಕ್ಕೆ ಸಾಧ್ಯ. ಪ್ರಸ್ತುತ ಅಧ್ಯಯನವು ತನ್ನದೇ ಆದ ವ್ಯಾಪ್ತಿಯನ್ನು ಹೊಂದಿದೆ. ಈ ಅಧ್ಯಯನವು ಹೆಚ್ಚು ಕ್ಷೇತ್ರಕಾರ್ಯವನ್ನು ಆಧರಿಸಿದೆ. ಸಂಪ್ರದಾಯಗಳ ಅಧ್ಯಯನದ ಸ್ವರೂಪವೇ ಹೀಗೆ. ಇದು ಕ್ಷೇತ್ರದಲ್ಲಿರುವ ಜೀವಂತ ಮಾಹಿತಿಯನ್ನು ಬಯಸುತ್ತದೆ. ಹಾಗಾಗಿ ಕ್ಷೇತ್ರ ಕಾರ್ಯವನ್ನು ಮಾಡಿ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹಾಗೆಂದು ಕೇವಲ ಆ ಮಾಹಿತಿಗೆ ಬದ್ಧವಾಗಿಲ್ಲ. ಈತನಕ ಬಂದಿರುವ ಅಧ್ಯಯನ, ಆಕರಗಳನ್ನು ಬಳಸಿಕೊಳ್ಳಲಾಗಿದೆ. ಇಂತಹ ಮಾಹಿತಿಗಳನ್ನು ತೌಲನಿಕ ವಿಶ್ಲೇಷಣೆಯಲ್ಲಿ ಹೆಚ್ಚಾಗಿ ಬಳಸಿಕೊಳ್ಳಲಾಗಿದೆ. ಕ್ಷೇತ್ರಕಾರ್ಯಕ್ಕಾಗಿ ಕರ್ನಾಟಕ ದಾದ್ಯಂತ ಬೀರಪ್ಪನ ನೆಲೆಗಳಿಗೆ ಭೇಟಿ ಕೊಡಲಾಗಿದೆ. ಅಂದರೆ ಕೊಣ್ಣೂರು, ಅಲಕನೂರು, ಮೆಡ್ಲೇರಿ, ಆಲೂರು, ಎಕ್ಸಂಬಾ, ಸಾತನೂರು, ದಾವಣಗೆರೆ, ಹರಿಹರ, ಶ್ರೀರಾಂಪುರ, ನಾಗಠಾಣ, ಝಳಕಿ, ಶಿರಾಡೋಣ, ಭಾನುವಳ್ಳಿ, ಅಂಬಳೆ, ಆಸಂದಿ, ಕೋಡಿದೊಡ್ಡಿ, ಬರಗೂರು ಹೀಗೆ ಮೊದಲಾದೆಡೆ ಬೀರಪ್ಪನ ದೇವಾಲಯಗಳಿವೆ. ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರ ಗಡಿನಾಡು ಪ್ರದೇಶಗಳಲ್ಲಿಯೂ ಈತನ ಹೆಸರಿನ ದೇವಾಲಯ, ಗದ್ದುಗೆಗಳು ಕಂಡುಬರುತ್ತವೆ. ಹಾಗೂ ಕರ್ನಾಟಕದ ಇತರ ಭಾಗದಲ್ಲಿರುವ ಬೀರದೇವರ ದೇವಾಲಯಗಳು ಮತ್ತು ಆತನ ಆರಾಧಕ ವರ್ಗಗಳು ಈ ಪ್ರದೇಶಗಳಿಂದಲೇ ವಿಸ್ತರಣೆ ಆದಂಥವುಗಳು ಎನ್ನುವುದು ವಿದ್ವಾಂಸರ ಅಭಿಪ್ರಾಯ. ಜೊತೆಗೆ ಈ ಸಾಂಸ್ಕೃತಿಕ ವೀರನ ಜೀವನ ಚರಿತ್ರೆಯನ್ನು ಬಿಂಬಿಸುವ ಅನೇಕ ಮೌಖಿಕ, ಲಿಖಿತ

ಪಠ್ಯಗಳು, ನಾಟಕಗಳು ಈ ಪ್ರದೇಶದಲ್ಲಿಯೇ ಹೆಚ್ಚಾಗಿ ಜೀವಂತವಾಗಿವೆ. ಹಾಗಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ಗಡಿನಾಡು ಜಿಲ್ಲೆಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಹಾಗೆಂದು ಪ್ರಸ್ತುತ ಅಧ್ಯಯನವು ಈ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಪ್ರದೇಶದ ಆಕರಗಳನ್ನು ಪ್ರಧಾನ ಆಕರಗಳೆಂದು ಗಮನಕ್ಕೆ ತೆಗೆದುಕೊಂಡು ಕರ್ನಾಟಕದಲ್ಲಿ ಜೀವಂತವಾಗಿರುವ ಬೀರದೇವರ ಮತ್ತು ಆತನ ಸಂಯುಕ್ತ ದೈವಗಳ ಸಂಪ್ರದಾಯಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಹೀಗೆ ಸಂಯುಕ್ತ ದೈವಗಳ ವಿಧಾನವನ್ನು ಆಚರಣೆಯ ಪರಿಭಾಷೆಯಲ್ಲಿ 'ಪರಿವಾರ ದೈವಗಳು' ಎನ್ನುತ್ತಾರೆ. ಈ ಪರಿವಾರ ದೈವಗಳ ಆಚರಣೆ ಸಂಪ್ರದಾಯಗಳನ್ನೂ ಪ್ರಮುಖ ಆಕರಗಳೆಂದು ಬಳಸಿಕೊಳ್ಳಲಾಗಿದೆ.

ಅಧ್ಯಯನದ ವಿಧಾನ

ಅಧ್ಯಯನದ ವಿಧಾನಗಳು ಸಿದ್ಧ ಸೂತ್ರಗಳಲ್ಲ. ಪ್ರತಿಯೊಂದು ಅಧ್ಯಯನವು ತನ್ನದೇ ಆದ ವಿಧಾನವನ್ನು ರೂಪಿಸಿಕೊಳ್ಳಲು ಆ ಅಧ್ಯಯನದ ವಸ್ತುವೇ ಪ್ರೇರೇಪಿಸುತ್ತದೆ. ಇದು ಅಧ್ಯಯನಕ್ಕೆ ಬೌದ್ಧಿಕ ಶಿಸ್ತು ಮತ್ತು ಚೌಕಟ್ಟನ್ನು ಒದಗಿಸುತ್ತದೆ ಹಾಗೂ ಅಧ್ಯಯನವು ಸಿದ್ಧಗೊಳಿಸುವ ವಿಶ್ಲೇಷಣಾತ್ಮಕ ಸಮರ್ಥನೆಯ ನಕ್ಷೆಯಂತೆ ಕೆಲಸ ಮಾಡುತ್ತದೆ. ಹಾಗಾಗಿಯೇ ಪ್ರಸ್ತುತ ಅಧ್ಯಯನಕ್ಕಾಗಿ ತನ್ನದೇ ಆದ ವಿಧಾನವನ್ನು ರೂಪಿಸಿಕೊಂಡಿದೆ.

ಬೀರಪ್ಪನ ಸಂಪ್ರದಾಯದ ಸಾಂಸ್ಕೃತಿಕ ಅಧ್ಯಯನವನ್ನು ವಿಶ್ಲೇಷಿಸುವುದು ಇಲ್ಲಿನ ಪ್ರಧಾನವಾದ ಆಶಯ. ಹಾಗೆಂದು ಕೇವಲ ಬೀರಪ್ಪ ಸಂಪ್ರದಾಯಗಳ ಆಶಯ ಮತ್ತು ವೈಧಾನಿಕತೆಯನ್ನು ಗುರುತಿಸುವುದಿಲ್ಲ. ಕೇವಲ ಬೀರಪ್ಪನ ಸಂಪ್ರದಾಯಗಳನ್ನು ಗುರುತಿಸಿದರೆ ಅದು ಏಕಮುಖ ಅಧ್ಯಯನವಾಗುತ್ತದೆ. ಹಾಗಾಗಿ ಬೀರಪ್ಪನನ್ನು ಕುರಿತ ಸಂಪ್ರದಾಯಗಳನ್ನು ಇತರೆ ಆಕರಗಳ ನೆರವಿನಿಂದ ನೋಡಲಾಗುವುದು. ಅಂದರೆ ಬೀರಪ್ಪನ ಜೀವನ ವಿಧಾನಗಳನ್ನು ನಂಬಿಕೆಗಳನ್ನು, ಆಚರಣೆಗಳನ್ನು, ಸಂಪ್ರದಾಯಗಳನ್ನು, ಜಾತ್ರೆ ಉತ್ಸವ ಗಳನ್ನು ಹಾಗೂ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಅಂದರೆ ಮೌಖಿಕ ಹಾಗೂ ಲಿಖಿತ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಲಿಖಿತ ಆಕರಗಳಲ್ಲಿ ಹಾಲುಮತ ಕಾವ್ಯ, ಪುರಾಣಗಳನ್ನು ಮತ್ತು ಹಾಲುಮತದ ಸಾಂಸ್ಕೃತಿಕವೀರ ಬೀರಪ್ಪನ ಹೆಸರಿನಲ್ಲಿ ಜೀವಂತಗೊಳ್ಳುತ್ತಿರುವ ಸಂಪ್ರದಾಯಗಳನ್ನು, ಪ್ರಧಾನ ಆಕರಗಳೆಂದು ಪರಿಗಣಿಸಲಾಗಿದೆ.

ಪ್ರಸ್ತುತ ಅಧ್ಯಯನಕ್ಕಾಗಿ ಬೀರಪ್ಪ ನೆಲೆಸಿದ್ದನೆಂದು ಹೇಳುವ ಸ್ಥಳಗಳಿಗೆ ಮತ್ತು ಆರಾಧನೆಗೆ ಒಳಗಾಗು ತ್ತಿರುವ ದೈವಗಳ ತಾಣಗಳಿಗೆ ಭೇಟಿ ಕೊಡಲಾಗಿದೆ. ಅಲ್ಲಿನ ಕಥೆಗಳನ್ನು, ಐತಿಹ್ಯಗಳನ್ನು, ಪೂಜಾ ವಿಧಾನ ಗಳನ್ನು, ಇತರ ಸಂಕೇತಗಳನ್ನು ಹಾಗೂ ಭೌಗೋಳಿಕ ಪರಿಸರವನ್ನು, ಸಂಪ್ರದಾಯಗಳ ಕಥನಗಳ ಕಥಾಸಾರವನ್ನು ಅಥವಾ ಸಂಪ್ರದಾಯಗಳ ಪಠ್ಯಗಳನ್ನು ಮುಖ್ಯವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಇದಕ್ಕೆ ಆಚರಣೆ ಉತ್ಸವಗಳನ್ನು ಪ್ರಧಾನವಾಗಿ ಬಳಸಿಕೊಳ್ಳಲಾಗಿದೆ. ಆ ದೈವಗಳ ತಾಣಗಳಲ್ಲಿ ಆಚರಣೆಗಳು ಇಂದಿಗೂ ಜೀವಂತವಾಗಿರುವುದರಿಂದ ವಿವಿಧ ಪಠ್ಯಗಳು ಅಸ್ತಿತ್ವದಲ್ಲಿವೆ. ಹಾಗಾಗಿ ಕ್ಷೇತ್ರಕಾರ್ಯದಲ್ಲಿ ಲಭ್ಯವಾದ ಮಾಹಿತಿಗಳನ್ನು ಆಧರಿಸಿ ಮತ್ತು ಸಂಪ್ರದಾಯಗಳನ್ನು ಜೀವಂತಗೊಳಿಸುತ್ತಿರುವ ವಕ್ತಾರರೊಂದಿಗೆ ಮುಕ್ತ

ಸಂವಾದ ರೂಪದ ಸಂದರ್ಶನವನ್ನು ನಡೆಸಿ, ಅವರಿಂದ ಬಂದ ಮಾಹಿತಿಯಿಂದ ಬೀರಪ್ಪನ ಸಂಪ್ರದಾಯಗಳನ್ನು ವಿಶ್ಲೇಷಿಸುವ ಮೂಲಕ ಬೀರಪ್ಪನ ಸಂಪ್ರದಾಯಗಳ ಲೋಕದಲ್ಲಿ ಅಡಕವಾಗಿರುವ, ಚಿತ್ರಣಗೊಂಡಿರುವ ಬೀರಪ್ಪನ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡಲಾಗಿದೆ.

ಪ್ರಸ್ತುತ ಮಹಾಪ್ರಬಂಧವನ್ನು ಈ ಕೆಳಗಿನಂತೆ ಅಧ್ಯಾಯಗಳನ್ನು ರೂಪಿಸಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಯನದ ವಿಶ್ಲೇಷಣೆಗಾಗಿ ಮಾಡಿಕೊಂಡ ಅಧ್ಯಾಯಗಳ ವಿವರ

ಬೀರಪ್ಪನ ಸಂಪ್ರದಾಯ ಸಾಂಸ್ಕೃತಿಕ ಅಧ್ಯಯನದ ವೈವಿಧ್ಯಮಯ ನೆಲೆಗಳನ್ನು ಆರು ಅಧ್ಯಾಯಗಳಲ್ಲಿ ನಿರೂಪಿಸಲಾಗಿದೆ. ಬೀರಪ್ಪನ ಸಂಪ್ರದಾಯ ಆಚರಣೆಗಳನ್ನು ಪರಿಚಯಿಸುವ ಪ್ರಯತ್ನವೇ ಈ ಅಧ್ಯಯನದ ಮುಖ್ಯವಾದ ಆಶಯ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ಮಹತ್ವ, ಅಧ್ಯಯನ ವಿಧಾನ ಮತ್ತು ವ್ಯಾಪ್ತಿಯನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಆಕರಗಳನ್ನು ಲಿಖಿತ ಆಕರಗಳು, ಮೌಖಿಕ ಆಕರಗಳು, ದಾಖಲು ಆಕರಗಳು ಎಂದು ವಿಂಗಡಿಸಿಕೊಂಡು ಅವುಗಳ ಸ್ವರೂಪವನ್ನು ಅವಲೋಕಿಸಲಾಗಿದೆ. ಆ ಮೂಲಕ ಬೀರಪ್ಪನಿಗೆ ಸಂಬಂಧಿಸಿದ ಕಥನಗಳ ವಿವಿಧ ಆಯಾಮಗಳನ್ನು ಪರಿಚಯಿಸಲಾಗಿದೆ. ಈತನಕ ನಡೆದ ಅಧ್ಯಯನಗಳ ಸಮೀಕ್ಷೆಯ ವಿವರಗಳು ಮತ್ತು ಆ ಅಧ್ಯಯನಗಳ ಧೋರಣೆಗಳ ವಿವರಗಳೂ ಇಲ್ಲಿದೆ.

ಅಧ್ಯಾಯ ಮೂರರಲ್ಲಿ ಬೀರಪ್ಪನ ಇತ್ತಿವೃತ್ತ ವಿಚಾರವನ್ನು ಚರ್ಚಿಸಲಾಗಿದೆ. ಅಂದರೆ ಆತನ ಪೂರ್ವಜರ ಹಿನ್ನೆಲೆ, ಜನನ, ತಂದೆ-ತಾಯಿ, ಬಾಲಲೀಲೆ, ಮದುವೆ, ಶಿಷ್ಯ ಪರಂಪರೆ, ಗುರು-ಶಿಷ್ಯರ ಸಂಬಂಧ, ದೇಶಪರ್ಯಟನೆ, ಪವಾಡಗಳು, ಬೀರಪ್ಪ-ವೀರಭದ್ರ-ವಿರೂಪಾಕ್ಷನಾಗಿ ಪರಿವರ್ತನೆಗೊಂಡಿರುವ ರೂಪಾಂತರ ಕಥನಗಳನ್ನು ಚಾರಿತ್ರಿಕವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇಲ್ಲಿ ಬೀರಪ್ಪನ ಸಾಂಸಾರಿಕ ಚರಿತ್ರೆಯನ್ನು ಅರಿಯುವುದಕ್ಕೆ ಒತ್ತುಕೊಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಬೀರಪ್ಪನ ಕ್ಷೇತ್ರಗಳನ್ನು ಮುಖ್ಯವಾಗಿಟ್ಟುಕೊಂಡು ಪ್ರತಿಯೊಂದು ಕ್ಷೇತ್ರವನ್ನು ವಿವರವಾಗಿ ವಿಶ್ಲೇಷಣೆ ಮಾಡಲಾಗಿದೆ. ಬಿಜಾಪುರ, ಬಾಗಲಕೋಟೆ, ಬೆಳಗಾವಿ, ಕೊಪ್ಪಳ, ಹಾವೇರಿ, ಗದಗ, ದಾವಣಗೆರೆ, ಚಿಕ್ಕಮಗಳೂರು, ಬೆಂಗಳೂರು, ಮೈಸೂರು, ಮಂಡ್ಯ, ಹಾಸನ, ಚಿತ್ರದುರ್ಗ, ತುಮಕೂರು, ಇನ್ನು ಮುಂತಾದ ಜಿಲ್ಲೆಗಳಲ್ಲಿ ಬೀರಪ್ಪನ ಸಾಂಸ್ಕೃತಿಕ ನೆಲೆಗಳನ್ನು ಅಲ್ಲಿನ ಭೌಗೋಳಿಕ ಪರಿಸರವನ್ನು ಹಾಗೂ ಮೂರ್ತಿಗಳ ಶೈಲಿಗಳನ್ನು ಪರಿಚಯಿಸಲಾಗಿದೆ. ದೇವಾಲಯಗಳ ಪ್ರಾದೇಶಿಕವಾದ ಶೈಲಿಗಳ ವಿಶ್ಲೇಷಣೆಯೂ ಇಲ್ಲಿದೆ.

ಐದನೆಯ ಅಧ್ಯಾಯದಲ್ಲಿ ಬೀರಪ್ಪನಿಗೆ ಸಂಬಂಧಿಸಿದ ಆಚರಣೆ, ಉತ್ಸವ, ಜಾತ್ರೆ, ಸಂಪ್ರದಾಯಗಳು, ಧಾರ್ಮಿಕ ಆಚರಣೆಗಳು, ಹರಕೆಗಳು ಮತ್ತು ನಂಬಿಕೆಗಳು, ಬೀರಪ್ಪನಿಗೆ ಸಂಬಂಧಿಸಿದ ಕಲೆಗಳು, ಬೀರಪ್ಪನ ವಕ್ಕಾರರ ಪಟ್ಟ ಕಟ್ಟುವಿಕೆ ಮತ್ತು ದೀಕ್ಷಾ ವಿಧಾನಗಳು, ಇನ್ನು ಮುಂತಾದ ಪಾರಂಪರಿಕ ಸಂಪ್ರದಾಯಗಳನ್ನು ಸಾಂಸ್ಕೃತಿಕವಾಗಿ ಚರ್ಚಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಬೀರಪ್ಪನ ಸಂಪ್ರದಾಯ ಸಾಂಸ್ಕೃತಿಕ ಅಧ್ಯಯನದಿಂದ ಮೂಡಿ ಬಂದಿರುವ ಅಧ್ಯಯನದ ಫಲಿತಗಳನ್ನು ಹಾಗೂ ಈ ಕ್ಷೇತ್ರದಲ್ಲಿ ಮಾಡಬಹುದಾದ ಅಧ್ಯಯನದ ವಿವರಗಳನ್ನು ಸಂಕ್ಷಿಪ್ತ ವಾಗಿ ಕೊಡಲಾಗಿದೆ. ಪ್ರಬಂಧಕ್ಕೆ ಪೂರಕವಾಗಿ ಮತ್ತು ಅಧ್ಯಯನದಲ್ಲಿ ಚರ್ಚಿಸಲಾದ ಮಹತ್ವದ ದಾಖಲೆಗಳನ್ನು ಅನುಬಂಧಗಳಲ್ಲಿ ಕೊಡಲಾಗಿದೆ.

ಒಟ್ಟಿನಲ್ಲಿ ಬೀರಪ್ಪನ ಇತ್ತಿವೃತ್ತ ವಿಚಾರದಿಂದ ಹಿಡಿದು ಇಂದಿಗೂ ಜನವರ್ಗದ ಧಾರ್ಮಿಕ ಶಕ್ತಿಗಳಾಗಿ ಆರಾಧನೆಗೊಳ್ಳುತ್ತಿರುವ ಹಾಲುಮತ ಸಾಂಸ್ಕೃತಿಕ ವೀರ, ಧಾರ್ಮಿಕ ಪುರುಷ ಹಾಗೂ ಹಾಲುಮತ ಪುರಾಣಗಳ ಪಾತ್ರಗಳನ್ನು ಆಚರಣೆ ಸಂಪ್ರದಾಯಗಳನ್ನು ವಸ್ತುನಿಷ್ಠವಾಗಿ ಅಧ್ಯಯನಕ್ಕೆ ಒಳಪಡಿಸುವ ಮಹತ್ವದ ಉದ್ದೇಶ ದಿಂದ ಸಿದ್ಧಗೊಂಡ ಮಹಾಪ್ರಬಂಧ ಇದಾಗಿದೆ. ಬೀರಪ್ಪನ ಸಾಂಸ್ಕೃತಿಕ ಚರಿತ್ರೆಯನ್ನು ಹಾಗೂ ಹಾಲುಮತ ಸಮುದಾಯದ ಸಾಂಸ್ಕೃತಿಕ ಪರಿಸರವನ್ನು, ಚಾರಿತ್ರಿಕ ಹಿನ್ನೆಲೆಯನ್ನು ಅರಿಯುವುದಕ್ಕೆ ಸಹಾಯಕ ವಾಗಬಹುದು ಎನ್ನುವ ಆಶಯದಿಂದ ಪ್ರಸ್ತುತ ಅಧ್ಯಯನ ರೂಪುಗೊಂಡಿದೆ.

ಕೊನೆ ಟಿಪ್ಪಣಿಗಳು

೧. ಶ್ರೀನಿವಾಸಮೂರ್ತಿ ಕಾ.ವೆಂ., ನೆಲದ ಕಣ್ಣು, ಪು.೧

೨. ಪ್ರಭಾಕರ ಎ.ಎಸ್., ಮ್ಯಾಸಬೇಡರ ಕಥನಗಳು, ಪು.೧೪

ಅಧ್ಯಾಯ - ೨

ಅಧ್ಯಯನದ ಆಕರಗಳು

೧. ಲಿಖಿತ ಆಕರಗಳು

೨. ಮೌಖಿಕ ಆಕರಗಳು

೩. ದಾಖಲು ಆಕರಗಳು

೪. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಎರಡು

ಅಧ್ಯಯನದ ಆಕರಗಳು

ವೀರ ಪರಂಪರೆಗೆ ಸೇರಿದ ಬೀರಪ್ಪ ಹಾಲುಮತ ಸಮುದಾಯದ ಸಾಂಸ್ಕೃತಿಕ ನಾಯಕನಾಗಿ ದೈವವಾಗಿ ನಾಡಿನಾದ್ಯಂತ ಪ್ರಸಿದ್ಧಿ ಹೊಂದಿದ್ದಾನೆ. ಹೀಗಿದ್ದೂ, ಈವರೆಗೆ ಈತನ ಸಮಗ್ರವಾದ ಚರಿತ್ರೆಯನ್ನು ಕುರಿತು ಅಧ್ಯಯನವಾಗಿಲ್ಲ. ಈತನಿಗೆ ಸಂಬಂಧಿಸಿದ ಸಂಪ್ರದಾಯ, ಆಚರಣೆ, ಸಂಸ್ಕೃತಿ ಇತ್ಯಾದಿ ಅಂಶಗಳನ್ನು ಕುರಿತು ಕೈಬೆರಳೆಣಿಕೆಯಷ್ಟು ಕೃತಿಗಳು ಮತ್ತು ಲೇಖನಗಳು ಮಾತ್ರ ಬಂದಿವೆ. ಇದು ಈತನ ಸಮಗ್ರ ಅಧ್ಯಯನದ ಕೊರತೆಯನ್ನು ತೋರಿಸುತ್ತದೆ. ಹಾಗಾಗಿ ಈ ಕೊರತೆಯನ್ನು ತುಂಬುವ ಕೆಲಸವಾಗಬೇಕು. ವಿಶ್ಲೇಷಣೆಯಾಗಬೇಕು. ಪ್ರಸ್ತುತ ಅಧ್ಯಯನಕ್ಕಾಗಿ ಬೀರಪ್ಪನಿಗೆ ಸಂಬಂಧಿಸಿದ ಆಕರಗಳನ್ನು ಈ ಕೆಳಕಂಡಂತೆ ವಿಂಗಡಿಸಲಾಗಿದೆ. ೧. ಲಿಖಿತ ಆಕರಗಳು ೨. ಮೌಖಿಕ ಆಕರಗಳು ೩. ದಾಖಲು ಆಕರಗಳು ೪. ಈವರೆಗೆ ನಡೆದ ಅಧ್ಯಯನಗಳು ೫. ಲೇಖನಗಳು.

೧. ಲಿಖಿತ ಆಕರಗಳು

ಜನಪದ ಸಾಂಸ್ಕೃತಿಕ ನಾಯಕರನ್ನು ಕುರಿತು ಲಿಖಿತ ಆಕರಗಳಲ್ಲಿ ಹುಡುಕಾಟ ಮಾಡುವುದೇ ವಿಶೇಷ. ಏಕೆಂದರೆ ಜನಪದರು ಅಕ್ಷರದ ಮೂಲಕ ತಮ್ಮ ದಾಖಲೆಗಳನ್ನು ಬಳಿಸಿದವರು ಅಲ್ಲ. ಇದು ಹಿಂದಿನ ಶತಮಾನಗಳಿಗೆ ಹೆಚ್ಚು ಅನ್ವಯ ಆಗುವ ಮಾತು. ಬೀರಪ್ಪನಿಗೆ ಸಂಬಂಧಿಸಿದಂತೆ ಲಿಖಿತ ಮತ್ತು ಮೌಖಿಕ ಆಕರಗಳು ಸಿಗುತ್ತವೆ. ಲಿಖಿತ ಆಕರಗಳಲ್ಲಿ ಪುರಾಣಗಳು ಮುಖ್ಯವಾಗಿವೆ. ಅಂಥವುಗಳಲ್ಲಿ ಮೌಖಿಕ ಮತ್ತು ಲಿಖಿತ ಪುರಾಣಗಳು ಸೇರಿವೆ. ಅವುಗಳಲ್ಲಿ ಮುಖ್ಯವಾದುವುಗಳೆಂದರೆ ರಸ್ತಾಪುರ ಭೀಮಕವಿ ರಚಿಸಿದ ಹಾಲ್ಮತೋತ್ತೇಜಕ ಪುರಾಣ, ಪಂಡಿತ ಚೆನ್ನಬಸವ ಕವಿ ವಿರಚಿತ ಹಾಲುಮತ ಪುರಾಣವು, ಅಣ್ಣಪ್ಪ ಬಾ. ಮುತ್ತೂರ ಅವರ ಹಾಲ್ಮತದ ಶ್ರೀ ಸಿದ್ಧಬೀರೇಶ್ವರ ಅರ್ಥಾತ್ ಶ್ರೀ ಕರಿಸಿದ್ಧೇಶ್ವರ ಪುರಾಣ, ಎನ್. ಶಂಕರಾನಂದಪ್ಪ ವಿರಚಿತ ಮುದ್ದುಲಿಂಗೇಶ್ವರರ ಚರಿತ್ರೆ, ಶ್ರೀ ಸದಾಶಿವ ಅಪ್ಪಣ್ಣಾ ಜುಮ್ಮಣ್ಣಾ ಅವರು

ರಚಿಸಿದ ಹಾಲುಮತ ಶ್ರೀ ಬೀರಲಿಂಗೇಶ್ವರ ಮಹಾಪುರಾಣ, ಈ ಎಲ್ಲ ಪುರಾಣಗಳು, ಕಾವ್ಯಗಳು ಹಾಲುಮತ ದೈವಗಳಾಗಿರುವ ಬೀರಪ್ಪ, ಅಮೋಘಸಿದ್ಧ, ಸಿದ್ಧರಾಮೇಶ್ವರ, ಪದ್ಮಣ ಹಾಗೂ ರೇವಣಸಿದ್ದರ ಸುತ್ತ ಹೆಣೆದುಕೊಂಡಿರುವ ಪುರಾಣಗಳಾಗಿವೆ. ಈ ಕೃತಿಗಳಲ್ಲಿ ಬೀರಪ್ಪನ ಚರಿತ್ರೆ ಭಿನ್ನವಾಗಿ ಚಿತ್ರಣಗೊಂಡಿದೆ. ಅವುಗಳ ಸ್ವರೂಪಗಳನ್ನು ಕುರಿತು ಅವಲೋಕಿಸಲಾಗುವುದು.

೧. ಹಾಲುಮತ್ತೋತ್ತೇಜಕ ಪುರಾಣ (೧೯೧೨)

ರಸ್ತಾಪುರ ಭೀಮಕವಿಯು ಹಾಲುಮತ್ತೋತ್ತೇಜಕ ಪುರಾಣವನ್ನು ರಚಿಸಿದ್ದಾನೆ. ಬೀರೇಶ್ವರ, ರೇವಣಸಿದ್ದೇಶ್ವರ, ಶಾಂತಮುತ್ತಯ್ಯ, ಶಿವಪದ್ಮ, ಮಾಳಿಂಗರಾಯ ಮೊದಲಾದವರ ಜೀವನ ಚರಿತ್ರೆಯನ್ನು ಇಲ್ಲಿ ಹೇಳಲಾಗಿದೆ. ಪುರಾಣದೊಂದಿಗೆ ಚಾರಿತ್ರಿಕ ಅಂಶಗಳು ಸೇರಿಕೊಂಡಿರುವುದು ವಿಶೇಷ. ಪ್ರತಿ ಸಂಧಿಯ ಆರಂಭದ ಸೂಚನೆಯಲ್ಲಿ ಆಯಾ ಸಂಧಿಯ ಸಂಕ್ಷಿಪ್ತ ಕಥಾಸಾರ ಹೊಂದಿದೆ. ಕೃತಿಯನ್ನು ಓದಿದವರಿಗೆ ಮತ್ತು ಕೇಳಿದವರಿಗೆ ಸಿಗುವ ಫಲಾಫಲಗಳನ್ನು ಕವಿ ಪ್ರತಿ ಸಂಧಿಯ ಕೊನೆಯಲ್ಲಿ ತಿಳಿಸಿದ್ದಾನೆ. ಇದು ಓದುಗರನ್ನು ಹಿಡಿತದಲ್ಲಿಟ್ಟುಕೊಳ್ಳುತ್ತದೆ.

ಪ್ರಸ್ತುತ ಕೃತಿಯ ಏಳನೆಯ ಸಂಧಿಯಿಂದ ಬೀರೇಶ್ವರನ ಜೀವನ ಚರಿತ್ರೆ ಪ್ರಾರಂಭವಾಗುತ್ತದೆ. ಆತನಕ ಆತನ ಪೂರ್ವಜರ ಕಥೆಗಳನ್ನು ಹೇಳಲಾಗಿದೆ. ೯೦ ಪದ್ಯಗಳನ್ನು ಹೊಂದಿದೆ. ರಾಕ್ಷಸಿಯನ್ನು ಕೊಂದು ಅವಳ ಅವಯವದಿಂದ ಐವತ್ತೆರೆಡು ಬಿರುದಾವಳಿಗಳನ್ನು ಮಾಡಿ ಬಂಕಾಪುರದಲ್ಲಿ ಇಡುತ್ತಾನೆ. ಚುಮಲೆಯೊಂದಿಗೆ ಕುರಿಕಾಯುತ್ತ ಜಾಗ್ರತಿಪುರಕ್ಕೆ ಬರುತ್ತಾನೆ. ಚುಮಲಾದೇವಿಗೆ ರೇಣುಕ ಮತ್ತು ರೇವಣಾಂಬೆ ಎಂಬ ಮಕ್ಕಳು ಜನಿಸುತ್ತಾರೆ. ಶಿವಾಜ್ಞೆಯಂತೆ ಶಿವಪದ್ಮ ಕೈಲಾಸಕ್ಕೆ ತೆರಳಿ ಎರಡನೇ ಜನ್ಮದಲ್ಲಿ ಭರ್ಮದೇವ ಮತ್ತು ಸುರಾವತಿಯ ಮಗನಾಗಿ ಶಿವಸಿದ್ಧ ಬೀರೇಶನಾಗಿ ಜನ್ಮ ತಾಳುತ್ತಾನೆ. ಆ ನಂತರ ಶಿಷ್ಯನಾಗಿ ಮಾಳಿಂಗರಾಯನನ್ನು ಶಿವನಿಂದ ಪಡೆಯುತ್ತಾನೆ. ಅದೇ ರೀತಿ ಅಕ್ಕಮ್ಮ ಕುರಿಯ ಕೊರಳ ಮೊಲೆ ಹಾಲನ್ನು ಕುಡಿಸಿ ಶಿವಸಿದ್ಧ ಬೀರೇಶ್ವರನನ್ನು ಬೆಳೆಸುತ್ತಾಳೆ. ನಾಲ್ಕು ಲೋಕಗಳನ್ನು ಪಾಲಿಸುವ ಶಿಷ್ಯನನ್ನು ದಯಪಾಲಿಸು ಎಂದು ಬೀರಪ್ಪನು ಶಿವನಲ್ಲಿ ಕೇಳಿಕೊಂಡಾಗ ಶಿವನು ವೀರಮಾಳಿಂಗರಾಯನನ್ನು ಶಿಷ್ಯನನ್ನಾಗಿ ನೇಮಿಸುತ್ತಾನೆ. ಈ ಕೃತಿ ಸಂಕ್ಷಿಪ್ತವಾಗಿ ಬೀರಪ್ಪನ ಇತಿವೃತ್ತ ವಿಚಾರವನ್ನು ವಿವರಿಸುತ್ತದೆ.

೨. ಹಾಲುಮತ ಪುರಾಣ (೧೯೫೪)

ಚನ್ನಬಸವಶಾಸ್ತ್ರಿ ಅವರು ರಚಿಸಿದ ಈ ಕೃತಿಯಲ್ಲಿ ೧೫ ಸಂಧಿ, ೧೪೬೨ ಪದ್ಯಗಳನ್ನೊಳ ಗೊಂಡಿದೆ. ಮೊದಲ ಸಂಧಿಯು ೮೪ ಪದ್ಯಗಳನ್ನು ಹೊಂದಿದೆ. ಪ್ರಾರಂಭದಲ್ಲಿ ಸಾಂಪ್ರದಾಯಕ ಕೃತಿ ರಚನೆಯ ವಿಧಾನಗಳಂತೆ ಕವಿ ಗುರು ದೇವತೆಗಳನ್ನು ಸ್ತುತಿಸಿದ್ದಾನೆ. ಬೀರಪ್ಪನಿಗೆ ಸಂಬಂಧಪಟ್ಟ ೯೯ ಪದ್ಯಗಳನ್ನು ಕಾಣಬಹುದು. ಈ ಸಂಧಿಯಲ್ಲಿ ಕಾಳಿನಾರಾಯಣ, ಭರಮಭೂಪಾಲನಿಗೆ ತನ್ನ ತಂಗಿ ಸುರಾವತಿಯನ್ನು ಕೊಟ್ಟು ವಿವಾಹ ಮಾಡುತ್ತಾನೆ. ಇವರಿಗೆ ಶಿವಾಜ್ಞೆಯಂತೆ ಶಿವಸಿದ್ಧ ಬೀರನೆಂಬ ಸುವರ್ಣ ಜಡೆಯ ಮಗ ಜನಿಸುತ್ತಾನೆ. ಶಾಪವಿಮೋಚನೆ, ಶಿವಪದ್ಮನಿಗೆ ಕೈಲಾಸ ಪ್ರಾಪ್ತಿ, ವೀರೇಶ್ವರನು ಬೀರೇಶ್ವರನಾಗಿ ಬಂದು ಹಾಲುಮತಸ್ಥರ ದೈವವಾಗುವ

ಬೀರೇಶ್ವರನು ತುಕ್ಕಪ್ಪನ ಮಗ ಮಾಳಿಂಗರಾಯನನ್ನು ಶಿಷ್ಯನಾಗಿ ಸ್ವೀಕರಿಸುವ ಪ್ರಸಂಗಗಳನ್ನು ಈ ಸಂಧಿಯಲ್ಲಿ ಕಾಣಬಹುದು. ಉಳಿದ ಸಂಧಿಗಳ ವಿವರಗಳು ಪ್ರಸ್ತುತ ಅಧ್ಯಯನಕ್ಕೆ ಅಷ್ಟು ಮುಖ್ಯವಾಗುವುದಿಲ್ಲ.

ಹನ್ನೊಂದನೆಯ ಸಂಧಿಯು ೭೮ ಪದ್ಯಗಳಿಂದ ಕೂಡಿದೆ. ಪಂಚದೇವಿಯರ ಅವತಾರದಲ್ಲಿ ಮಗು ಬೀರೇಶ್ವರನನ್ನು ರಕ್ಷಿಸುವ ಅಕ್ಕಮ್ಮ ಶಿವನಿಂದ ಮಗುವಿನ ಪೂರ್ವ ವಿಚಾರಗಳನ್ನು ತಿಳಿಸಲಾಗಿದೆ. ಅದೇ ರೀತಿ ಹನ್ನೆರಡನೆಯ ಸಂಧಿಯಲ್ಲಿ ೧೩೦ ಪದ್ಯಗಳಿವೆ. ಇಲ್ಲಿನ ಪದ್ಯಗಳು ಬೀರಪ್ಪನ ಜೀವನ ಚರಿತ್ರೆಯನ್ನು ಅಥವಾ ಬೀರಪ್ಪ ವ್ಯಕ್ತಿತ್ವದ ವಿವಿಧ ಆಯಾಮಗಳನ್ನು ಅರಿಯುವುದಕ್ಕೆ ಮುಖ್ಯವಾಗಿವೆ. ಬೀರಪ್ಪ ಮತ್ತು ಮಾಯವ್ವನ ಸಂಬಂಧ ತಿಳಿಯುತ್ತದೆ. ಅಂದರೆ ಶಿವನಿಂದ ವರ ಪಡೆದು ಅಕ್ಕಮ್ಮ ಬೀರೇಶನನ್ನು ಸಾಕುತ್ತಾಳೆ. ಅವನ ಇಷ್ಟದಂತೆ ಕುರಿ ಹಾಲನ್ನು ಕುಡಿಸುವ ಗುರು ರೇವಣಸಿದ್ಧರಿಂದ ಆಶೀರ್ವಚನ, ಚೆಂಡಿನಾಟದಲ್ಲಿ ಮೃತಪಟ್ಟ ಬಾಲಕನನ್ನು ಭಸಿತವಿಟ್ಟು ಬದುಕಿಸುವ, ಮಂದಲಗೆರೆಯಿಂದ ಬೆಳ್ಳಿಗುತ್ತಿಗೆ ಬರುವ, ನೀರು ತರುವ ತರುಣಿಯರ ಕೊಡಗಳಿಗೆ ಬಿಲ್ಲೆಸೆಯುವ, ತರುಣಿಯರ ಬೈಗುಳಗಳಿಂದ ನೊಂದ ಬೀರೇಶ ತನ್ನ ಪೂರ್ವಾಪರ ವೃತ್ತಾಂತವನ್ನು ಅಕ್ಕಮ್ಮಳಿಂದ ತಿಳಿಯುವ, ತನ್ನ ಸೋದರಮಾವನ ಮಗಳು ಕನ್ನಿಕಾಮಾಲೆಯನ್ನು ಶೌರ್ಯದಿಂದ ಗೆದ್ದು ತರುವ, ಬೀರೇಶ ತಕ್ಕ ಶಿಷ್ಯನಿಗಾಗಿ ಶಿವನಲ್ಲಿ ಪ್ರಾರ್ಥಿಸುವ ದೃಷ್ಟಾಂತ ಮುಂತಾದ ಸಂಗತಿಗಳನ್ನು ಇಲ್ಲಿ ಪರಿಚಯಿಸಲಾಗಿದೆ.

ಹದಿಮೂರನೆಯ ಸಂಧಿಯು ೮೬ ಪದ್ಯಗಳಿಂದ ಕೂಡಿದೆ. ಶಿವಸಿದ್ಧ ಬೀರೇಶನಿಗೆ ಶಿವ ಪ್ರತ್ಯಕ್ಷನಾಗಿ ಶಿಷ್ಯನಿಗಾಗಿ ಬ್ರಾಹ್ಮಿದೇವಿಯರಿಗೆ ಕಳುಹಿಸುವುದು, ಬ್ರಾಹ್ಮಿದೇವಿಯು ವೀರಮಾಳಿಂಗರಾಯನ ವೃತ್ತಾಂತವನ್ನು ತಿಳಿಸುವ, ಜಲಮಾಯಿ ಕೆರೆಯ ಬಳಿ ಶಿಷ್ಯನನ್ನು ಗೆಲ್ಲುವ ಮುಂತಾದ ವಿಷಯಗಳನ್ನು ಈ ಸಂಧಿಯು ತಿಳಿಸುತ್ತದೆ.

ಹದಿನಾಲ್ಕನೆಯ ಸಂಧಿಯಲ್ಲಿ ೧೮೩ ಪದ್ಯಗಳಿವೆ. ಬೀರೇಶ್ವರನು ಮದವೇರಿದ ಕೋಣವೊಂದನ್ನು ಕೊಂದು ಮುಂಡ ಬಿದ್ದಲ್ಲಿ ಮುಂಡಗನೂರಾಗಲಿ, ಕೋಣಬಿದ್ದಲ್ಲಿ ಕೋಣಗನೂರಾಗಲಿ, ಮಾಂಸ ಅಲಕಾದ ಜಾಗ ಅಲಕನೂರಾಗಲಿ ಎಂದು ಹೆಸರಿಸಿ ಗುರುವನ್ನು ನೆನೆಯುತ್ತಾನೆ. ಆಗ ಗುರು ರೇವಣಸಿದ್ದ ಪ್ರತ್ಯಕ್ಷವಾಗಿ ಆಶೀರ್ವದಿಸುತ್ತಾನೆ. ಇಂತಹ ವಿವರಗಳು ಬೀರಪ್ಪನ ಸಾಂಸ್ಕೃತಿಕ ಲೋಕವನ್ನು ವಿಶೇಷವಾಗಿ ಸ್ಥಳಮೂಲ ಚರಿತ್ರೆಯನ್ನು ಅಧ್ಯಯನ ಮಾಡುವುದಕ್ಕೆ ಪ್ರಮುಖ ಆಕರಗಳಾಗುತ್ತವೆ. ಈ ಕಥನವನ್ನು ಆಧರಿಸಿದ ಸಂಪ್ರದಾಯಗಳು ಜೀವಂತವಾಗಿವೆ. ಈ ವಿವರದ ನಂತರ ಬೀರೇಶ್ವರನ ಇಚ್ಛೆಯಂತೆ ಹಾಲುಮತದ ಪೂರ್ವವೃತ್ತಾಂತವನ್ನು, ವೀರಗೊಲ್ಲಾಳನ ಕಥೆಯನ್ನು ಹೇಳಲಾಗಿದೆ. ಅದೇ ರೀತಿ ಹದಿನೈದನೆಯ ಸಂಧಿಯು ೧೩೫ ಪದ್ಯಗಳನ್ನು ಹೊಂದಿದೆ. ಶಿವಸಿದ್ಧ ಬೀರೇಶ್ವರನು. ಅನೇಕ ಸುಕ್ಷೇತ್ರಗಳನ್ನು ಸಂದರ್ಶಿಸಿ ಬಂಕಾಪುರಕ್ಕೆ ಬಂದು ಪದ್ಮಾವತಾರದಲ್ಲಿ ರಚಿಸಲ್ಪಟ್ಟ ಬಿರುದಾವಳಿಗಳನ್ನು ಹೊಂದುತ್ತಾನೆ. ಅಲ್ಲಿದ್ದ ಬಂಕಣ್ಣನಿಗೆ ಕೈಲಾಸ ಪ್ರಾಪ್ತವಾಗುತ್ತದೆ. ಶಿಷ್ಯ ಮಾಳಿಂಗರಾಯ ಕಪ್ಪೆ ಕಲಕದ ಜಲ, ಹುಳ ಮುಟ್ಟದ ಪುಷ್ಪಗಳಿಂದ ಗುರುವನ್ನು ಪೂಜಿಸುವ, ಬೀರೇಶನ ಅಪ್ಪಣೆಯಂತೆ ಕಲ್ಯಾಣದ ಸತ್ತಗೂಳಿಯನ್ನು ಬದುಕಿಸುವ, ಕೋಣಗನೂರಿನಲ್ಲಿ

ಜಡೆಸಿದ್ಧರ ಅಗ್ನಿಕುಂಡದಲ್ಲಿ ಪವಾಡ ಮೆರೆಯುವ ಅಕ್ಕಮ್ಮ ಕನ್ನಿಕಾಮಾಲೆ ಮಾಳಿಂಗರಾಯರೊಂದಿಗೆ ಕೈಲಾಸಕ್ಕೆ ತೆರಳುವ ವಿಷಯವನ್ನು ಕೊಡಲಾಗಿದೆ.

ಹಾಗಾಗಿ ಈ ಕಾವ್ಯವು ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣದ ಕಥೆಯನ್ನು ಹೋಲುತ್ತದೆ. ಜನಪದ ಹಾಲುಮತ ಮಹಾಕಾವ್ಯದ ಕಥಾಸಾರಗಳಿಂದ ಈ ಕೃತಿಗಳು ವಸ್ತುವನ್ನು ಆಯ್ದುಕೊಂಡಿರುವುದಕ್ಕೆ ಸಾಧ್ಯವಿದೆ. ಆದರೆ ಭೀಮಕವಿ ವಾರ್ಧಕ ಷಟ್ಪದಿಯಲ್ಲಿ ರಚಿಸಿದರೆ, ಚನ್ನಬಸವ ಕವಿ ಸಾಂಗತ್ಯದಲ್ಲಿ ರಚಿಸಿದ್ದಾರೆ. ಬೀರೇಶ್ವರ, ಶಿವಪದ್ಮ, ಮಾಳಿಂಗರಾಯ, ಶಾಂತಮುತ್ತಯ್ಯ, ರೇವಣಸಿದ್ಧ ಮೊದಲಾದವರ ಉಪಕಥೆಗಳನ್ನು ಈ ಪುರಾಣ ಹೊಂದಿದೆ.

೩. ಹಾಲ್ಮತದ ಶ್ರೀ ಸಿದ್ಧಬೀರೇಶ್ವರ ಅರ್ಥಾತ್ ಶ್ರೀ ಕರಿಸಿದ್ದೇಶ್ವರ ಪುರಾಣ (೧೯೭೧)

ಈ ಮೇಲಿನ ಪುರಾಣದ ಕರ್ತೃ ತನ್ನ ಪರಿಚಯವಾಗಲೀ ಅಥವಾ ಇತರೆ ವಿಚಾರಗಳನ್ನಾಗಲಿ ತಿಳಿಸಿಲ್ಲ. ೧೧ನೇ ಅಧ್ಯಾಯದ ಕೊನೆಯಲ್ಲಿ ಗ್ರಂಥ ರಚನೆ ಕುರಿತು ಹೇಳಲಾಗಿದೆ. ಈ ಗ್ರಂಥವನ್ನು ಶ್ರೀ ಕರಿಸಿದ್ದೇಶ್ವರ ಪ್ರೇರಣೆಯಿಂದ ಬರೆಯಲು ಶುರುವಾಗಿ ಒಂದು ಸಪ್ತಕದಲ್ಲಿ ಸ್ವಾಮಿಯ ಪ್ರಸಾದದಿಂದ ಶ್ರೀ ಶಾಲಿವಾಹನಶಕೆ ೧೮೪೬ ರಕ್ತಾಕ್ಷಿನಾಮ ಸಂವತ್ಸರದ ಭಾದ್ರಪದ ಅಷ್ಟಮಿ ರವಿವಾರ ದಿನದಲ್ಲಿ ಮುಗಿಯಿತು ಎನ್ನುವುದನ್ನು ಕಾಣಬಹುದು. ಅಂದರೆ ೧೯೨೪ರಂದು ಕೃತಿಯು ಪೂರ್ಣಗೊಂಡಿದ್ದಾಗಿ ತಿಳಿಯಬಹುದು.

ಈ ಕೃತಿಯು ೧೯೭೧ರಲ್ಲಿ ಮೊದಲಬಾರಿಗೆ ಮುದ್ರಣಗೊಂಡಿದೆ. ೧೯೯೪ ಹಾಗೂ ೨೦೦೪ರಲ್ಲಿ ಮರುಮುದ್ರಣಗೊಂಡಿದೆ. ಹಲವು ಮುದ್ರಣಗಳನ್ನು ಕಂಡಿರುವುದು ಕೃತಿಯ ಜನಪ್ರಿಯತೆಯನ್ನು ಸೂಚಿಸುತ್ತದೆ. ಈ ಕೃತಿಯಲ್ಲಿ ೧೧ ಅಧ್ಯಾಯಗಳಿದ್ದು ಗದ್ಯರೂಪವನ್ನು ಹೊಂದಿದೆ. ಮೊದಲ ಅಧ್ಯಾಯವು ಕಂಬಳಿ ತಯಾರಿಕೆ, ಪರಮೇಶ್ವರನ ಪಟ್ಟಾಭಿಷೇಕ, ಬಾಲಕ ಸಿದ್ಧಬೀರೇಶನ ಉದ್ಭವ ಮೊದಲಾದ ಸಂಗತಿಗಳನ್ನು ತಿಳಿಸುತ್ತದೆ.

ಎರಡನೆಯ ಅಧ್ಯಾಯ ಸುರಾವತಿ ಮತ್ತು ಧರ್ಮದೇವರ ಪುತ್ರನಾಗಿ ಶಿವನಿಚ್ಛೆಯಂತೆ ಬಂಗಾರದ ಜಡೆ ಹೊನ್ನಹೊಕ್ಕಳವನ್ನೊಳಗೊಂಡ ಶಿವಸಿದ್ಧ ಬೀರೇಶ್ವರನ ಜನನ. ಸುರಾವತಿಯ ಐಷಾರಾಮದ ಜೀವನ ಮತ್ತು ಅವಳು ಕಳೆಯುವ ನವಮಾಸದ ದಿನಗಳ ವರ್ಣನೆ, ಸುರಾವತಿಗೆ ಅಣ್ಣನಿಂದ ವಿಷದ ಬುತ್ತಿಯು ಬಂದಾಗ ಹೊಟ್ಟೆಯಲ್ಲಿಯೇ ಸಿದ್ಧಬೀರೇಶ್ವರನು ಮಾವನ ಕುತಂತ್ರವನ್ನು ತಿಳಿಸುವ ಸಂಗತಿಗಳು ಗಮನಸೆಳೆಯುತ್ತದೆ. ನಾರಾಯಣ ಜ್ಯೋತಿಷಿಯ ವೇಷದಲ್ಲಿ ಬಂದು ಮಗುವಿನ ಕೆಟ್ಟ ಶಕುನ ತಿಳಿಸುವುದು ಕುತೂಹಲಕರ. ಇದು ಕಥನದ ತಿರುವಿಗೆ ಅಂದರೆ ಬೀರಪ್ಪನ ಜೀವನದ ರೂಪಾಂತರಕ್ಕೆ ಕಾರಣವಾಗುತ್ತದೆ.

ಮೂರನೆಯ ಅಧ್ಯಾಯವು ಸಿದ್ಧಬೀರನನ್ನು ದಟ್ಟವಾದ ಅರಣ್ಯದಲ್ಲಿ ಬಿಡಲು ಅಲ್ಲಿಯ ಪ್ರಾಣಿ ಪಕ್ಷಿಗಳು ಎಲ್ಲ ರೀತಿಯ ಸಹಕಾರ ನೀಡುವವು. ಪ್ರಾಕೃತಿಕ ಮತ್ತು ಸಹಜ ಜೀವನ ವಿಧಾನವನ್ನು ತಿಳಿಸುತ್ತದೆ. ಬಾಲಕನನ್ನು ಕಾಡಿನಲ್ಲಿ ಬಿಡಲು ಬಂದ ಆರುಜನ ರಾಕ್ಷಸರಲ್ಲಿ ಐದುಜನ ಶಿಲಾಮಯರಾಗುತ್ತಾರೆ. ಉಳಿದೊಬ್ಬ

ರಾಕ್ಷಸ ಮಹಿಷಾಸುರನಿಗೆ ಸಹಾಯ ನೀಡಲು ಭೂಲೋಕದತ್ತ ನಡೆಯುತ್ತಾನೆ. ಹುಟ್ಟಿದ ಮಗು ದಕ್ಕದೇ ಹೋಯಿತೆಂದು ಸುರಾವತಿಯು ದುಃಖಿತಳಾದಳು. ದೇವಲೋಕದ ಏಳುಜನ ದೇವಿಯರಲ್ಲಿ ಕೊನೆಯವಳಾದ ಮಾಯಾದೇವಿಯಾಗಿ ಜನಿಸುತ್ತಾಳೆ. ಸುರಾವತಿ ಮರುಜನ್ಮದಲ್ಲಿ ಮಾಯಾದೇವಿ ತನ್ನ ಅಕ್ಕಂದಿರೊಂದಿಗೆ ಕದಳೀ ವನದಲ್ಲಿ ಬೇಟೆಯಾಡುತ್ತಿರುತ್ತಾಳೆ. ಆಗ ಮಗುವಿನ ಅಳುವ ಸ್ವರ ಕೇಳಿ ತೊಟ್ಟಿಲು ಹಿಡಿಯಲು ಹೋದರೆ ಕೈಗೆ ನಿಲುಕದೆ ಅಂತರಿಕ್ಷದಲ್ಲಿ ತೇಲತೊಡಗುವುದು. ಆಗ ಮಗುವಿನ ಪೂರ್ವ ವೃತ್ತಾಂತವನ್ನು ಯೋಗಿ ಕೇಳಲು ಬ್ರಹ್ಮನಿಂದ ತಿಳಿಯಲು ಆಶ್ರಮಕ್ಕೆ ತೆರಳುವರು.

ನಾಲ್ಕನೆಯ ಅಧ್ಯಾಯದಲ್ಲಿ ತೊಟ್ಟಿಲು ಪಡೆಯಲು ಪಾತಾಳ ಕನ್ನೆಯರಿಂದ ತೊಟ್ಟಿಲ ಬೀಜ ಪಡೆಯುವುದು. ಕೊಳಲ ಬ್ರಹ್ಮನಿಂದ ಪಡೆದ ಬೀಜವನ್ನು ಏಳುಜನ ಸಹೋದರಿಯರು ಭೂಮಿಯಲ್ಲಿ ನೆಟ್ಟು ತೊಟ್ಟಿಲನ್ನು ಹಿಡಿಯಲು ಹೋಗುವುದು. ಹಾಗೂ ಈ ಕಾರ್ಯವನ್ನು ಫಣಿರಾಜ ಅಡ್ಡಗಟ್ಟುತ್ತಾನೆ. ಆಗ ಪ್ರತಿವರ್ಷ ಎರಡು ದಿವಸ ಪೂಜಿಸುವುದಾಗಿ ಪ್ರಾರ್ಥಿಸಲು ದಾರಿ ಬಿಡುತ್ತದೆ. ಪೂರ್ವಾವತಾರದಲ್ಲಿ ತಾಯಿಯಾದ ಮಾಯಾದೇವಿಯೇ ತಾಯಿಯೆಂದು ಸಹೋದರಿಯರೆಲ್ಲ ಒಪ್ಪುತ್ತಾರೆ. ನಾರಾಯಣ ಆಜ್ಞೆಯಂತೆ ಮಹಿಷಾಸುರನ ಜನ್ಮವಾಗುತ್ತದೆ. ಅವನ ಉಪಟಳವನ್ನು ತಡೆಯದೆ ಸುರರೆಲ್ಲ ರಕ್ಷಣೆಗಾಗಿ ಆದಿಶಕ್ತಿಯನ್ನು ಬೇಡಿಕೊಳ್ಳುತ್ತಾರೆ.

ಐದನೆಯ ಅಧ್ಯಾಯದಲ್ಲಿ ಮಹಿಷಾಸುರನು ಋಷಿಗಳನ್ನು, ಮುನಿಗಳನ್ನು, ಪಿಶಾಚಿಗಳನ್ನು, ನಂದಿಯನ್ನು ಹೀಗೆ ಒಬ್ಬೊಬ್ಬರಾಗಿ ಎಲ್ಲರನ್ನು ಸೋಲಿಸುತ್ತಾನೆ. ಆರನೆಯ ಅಧ್ಯಾಯದಲ್ಲಿ ಶಿವನಿಚ್ಚೆಯಂತೆ ಸಿದ್ಧಬೀರೇಶನ ಬಾಲ್ಯ, ಯೌವನದ ವಿವರದೊದಿಗೆ ಮಹಿಷಾಸುರನ ಮರ್ದನದ ಸಮಯದಲ್ಲಿ ಆತನ ಬೇಡಿಕೆಯಂತೆ ಮೂರು ಯುಗಗಳ ನಂತರ ಮಡಿದ ಸ್ಥಳದಲ್ಲಿ ಕೋಣಗನೂರು ಎಂಬ ಗ್ರಾಮದಲ್ಲಿ ಕರಿಸಿದ್ದೇಶ್ವರನೆಂದು ಪ್ರಸಿದ್ಧನಾಗುವನೆಂದು ವರವಿತ್ತು, ತರುವಾಯ ಮರಣ ಹೊಂದುವನು. ಮುಂದವರೆದ ಸಂಧಿಗಳಲ್ಲಿ. ಶಿವನಿಂದ ಸೃಷ್ಟಿ ನಿರ್ಮಾಣ ಕೃಷಿಗೆ ಬೇಕಾಗುವ ಸಕಲ ಸಾಧನ, ಕೋಣ, ಎತ್ತು, ನೇಗಿಲು, ಕುಂಟಿ, ಮಿಣಿ, ಬಾರಕೋಲು ಮೊದಲಾದ ಕೃಷಿ ಸಾಮಗ್ರಿಗಳ ನಿರ್ಮಾಣದೊಂದಿಗೆ ಯೋಗನಿದ್ರೆಯಲ್ಲಿರುವ ಶಿವನ ಜಡೆಯಿಂದ ನಾನಾ ವರ್ಣದ ಕುರಿಗಳು ಹುಟ್ಟುತ್ತವೆ.

ಶಿವನ ಆಶೀರ್ವಾದದಿಂದ ಶ್ರೀಮಂತನಾದ ಆದಿಗೊಂಡನಿಗೆ ಶಿವನ ಕೃಪೆಯಿಂದ ಉಂಡಾಡು ಪದ್ಮಣ್ಣನೆಂಬ ಮಗ ಜನಿಸುತ್ತಾನೆ. ಮಹೇಶ್ವರನ ವಚನದ ಪ್ರಕಾರವಾಗಿ ಕಲಿಯುಗ ಪ್ರಾರಂಭವಾದರೂ ಸಿದ್ಧಬೀರೇಶ್ವರನು ಬಾರಾಮತಿ ಹಾಗೂ ತೇರಾಮತಿ ಎಂಬ ಗ್ರಾಮಗಳತ್ತ ಪ್ರಯಾಣ ಬೆಳೆಸುವನು. ಅಲ್ಲಿ ಸ್ವಾಮಿರಾಯ ಹಾಗೂ ತುಕ್ಕಪ್ಪರಾಯರ ಸತ್ಕಾರಕ್ಕೆ ತೃಪ್ತಿಗೊಂಡು ಅವರಿಗೆ ಜಕ್ಕರಾಯ, ಮಾಳಿಂಗರಾಯರೆಂಬ ಮಕ್ಕಳು ಹುಟ್ಟುವರೆಂದು ಆಶೀರ್ವದಿಸುತ್ತಾನೆ. ಅಲ್ಲದೆ ಹುಟ್ಟಿದ ಆ ಮಕ್ಕಳನ್ನು ತನ್ನ ಸೇವೆಗಾಗಿ ನೀಡಬೇಕೆಂದು ತಿಳಿಸುವುದು ವಿಶೇಷ. ಈ ಸಂಗತಿ ಕುರುಬ ಕುಲದಲ್ಲಿ 'ಪೂಜಾರಿ ಕುಲ' ಅಥವಾ 'ಪೂಜಾರಿ' ಎಂಬ ಬೀರದೇವರ ಸೇವಕ ವರ್ಗ ಹುಟ್ಟುವುದಕ್ಕೆ ಕಾರಣವಾಗುತ್ತದೆ. ಕಲ್ಯಾಣ ಪಟ್ಟಣದಲ್ಲಿ ಉಂಡಾಡು ಪದ್ಮಣ್ಣನಿಗೆ ಪಂಚಾಕ್ಷರಿ ಮಂತ್ರ

ಉಪದೇಶಿಸಿ ಶಿವಲಿಂಗವ್ವಳ ಜೊತೆ ಮದುವೆಯನ್ನು ಸಿದ್ಧಬೀರೇಶ್ವರನ ಸಮ್ಮುಖದಲ್ಲಿ ನಡೆಸುವರು. ರೇವಣಸಿದ್ಧರು ತಮ್ಮ ಮಠಕ್ಕೆ ಸಕಲ ಶಸ್ತ್ರಾಸ್ತ್ರಗಳನ್ನು ವೇದಾಂತಗಳನ್ನು ಕಲಿಯಲು ಬೀರೇಶ್ವರನನ್ನು ತಮ್ಮ ಮಠಕ್ಕೆ ಕರೆದೊಯ್ಯುವರು. ಸಾಕ್ಷತ್ ಪರಮೇಶ್ವರನೇ ಉಂಡಾಡು ಪದ್ಮಣ್ಣನಾಗಿ, ಪಾರ್ವತಿಯು ಪದ್ಮಾವತಿಯಾಗಿ ಜನಿಸುತ್ತಾರೆ. ಪದ್ಮಾವತಿ ರಾಕ್ಷಸಿಯ ಹತ್ತಿರ ಬೆಳೆಯುತ್ತಾಳೆ. ಪದ್ಮಣ್ಣನು ರಾಕ್ಷಸಿಯನ್ನು ಏಳುಕೊಪ್ಪರಿಗೆ ಹಾಲು ಕುಡಿದು ಕೊಲ್ಲುತ್ತಾನೆ. ಕಥೆಯು ಸಿದ್ಧಬೀರನತ್ತ ತಿರುಗುತ್ತದೆ. ಮಾಯಾದೇವಿಯಿಂದ ತನ್ನ ಪೂರ್ವ ವೃತ್ತಾಂತ ತಿಳಿದು ಕನ್ನಿಕಾಮಾಲೆಗಾಗಿ ಶೆಟ್ಟಿವೇಷ, ಬಳೆಗಾರವೇಷ, ಸ್ತ್ರೀವೇಷ ಧರಿಸುತ್ತಾನೆ. ತನ್ನ ಶಿಷ್ಯರಾದ ಮಾಳಿಂಗರಾಯ, ಜಕ್ಕರಾಯನಿಗೆ ಮದುವೆ ಮಾಡಿಸುತ್ತಾನೆ. ನಾರಾಯಣನು ಮುತ್ತಿನ ಚೆಂಡನ್ನು ಪಾಂಡವರ ಕೋಟೆಯ ಹಾಲಬಾವಿಯ ಹತ್ತಿರ ನಿಲ್ಲಿಸುವನು. ಇಂತಹ ಅನೇಕ ಚಾರಿತ್ರಿಕ ವಿವರಗಳು ಬೀರಪ್ಪನ ಚರಿತ್ರೆಯನ್ನು ತಿಳಿದುಕೊಳ್ಳುವುದಕ್ಕೆ ಸಹಾಯಕವಾಗುತ್ತವೆ.

ಬೀರೇಶ್ವರನು ಮುತ್ತಿನ ಚಂಡನ್ನು ಗದ್ದುಗೆಯ ಮೇಲಿಟ್ಟು ತನ್ನ ಮಾಯದ ಆಳಾದ ಮಾಳಿಂಗರಾಯನನ್ನು ಕುರಿಕಾಯುವುದಕ್ಕೆ ನೇಮಿಸುತ್ತಾನೆ. ಉಂಡಾಡು ಪದ್ಮಣ್ಣನ ಮಗ ತಿರುಕೋಟಿ ಭೋಗಣ್ಣನಿಗೆ ತನ್ನ ಗದ್ದುಗೆಯ ನೇಮ ಮಾಡುವುದಕ್ಕಾಗಿ ನೇಮಿಸಿ ಕಲ್ಯಾಣ ಪಟ್ಟಣಕ್ಕೆ ತೆರಳುತ್ತಾನೆ. ಹಾಲಿನ ಗುಂಡಿಯಲ್ಲಿರುವ ಶಿಶುವನ್ನು ಅಮೋಘಸಿದ್ಧನೆಂದು ಹೆಸರಿಸಿ ಕಲ್ಯಾಣಕ್ಕೆ ಕಳುಹಿಸಿದರು. ಅಲ್ಲಿ ತಪಸ್ಸಿನ ಪ್ರಭಾವದಿಂದ ರೇವಣಸಿದ್ಧರನ್ನು ಗುರುವಾಗಿ ವರ ಪಡೆದು ಮಹೇಶ್ವರನಿಂದ ಹೋಮಗಂಬಳಿ ಹೊದ್ದುಕೊಂಡು ನೇಮದಂಡವನ್ನು ಕೈಯಲ್ಲಿ ಹಿಡಿದು, ಕೊರಳಲ್ಲಿ ರುದ್ರಾಕ್ಷಿ ಹಾಕಿಕೊಂಡು ಕೈಲಾಸದಿಂದ ಕಲ್ಯಾಣ ಪಟ್ಟಣದೊಳಗಿರುವ ತನ್ನ ಗುರು ರೇವಣಸಿದ್ಧನ ಮಠಕ್ಕೆ ಬಂದನೆಂದು ಹೇಳುವ ವಿವರ ಭಿನ್ನವಾದ ಚರಿತ್ರೆಯನ್ನು ತಿಳಿದುಕೊಳ್ಳುವುದಕ್ಕೆ ಅಥವಾ ಕಥನ ಸಂಸ್ಕೃತೀಕರಣಕ್ಕೆ ಸಹಾಯಕವಾಗಬಲ್ಲದು. ಹೀಗೆ ಮಹೇಶ್ವರ ಲಿಂಗದಿಂದ ಉದ್ಭವಿಸಿದ ಅಮೋಘಸಿದ್ಧನಿಗೆ ಲಿಂಗದೀಕ್ಷೆಯನ್ನು ಕೊಟ್ಟು ಶಿವಪಂಚಾಕ್ಷರಿ ಮಂತ್ರವನ್ನು ಉಪದೇಶಿಸಿದನು. ಆದಿಗೊಂಡ ಮತ್ತು ಆತನ ಆರು ಜನ ಮಕ್ಕಳಿಗೆ ಅಮೋಘಸಿದ್ಧ ಗುರುವಾದನು. ಮಳ್ಳಮಾಳಪ್ಪನ ಹೊರತಾಗಿ ಮತ್ಯಾರಿಗೂ ವಶವಾಗದ ಬೀರೇಶ್ವರನ ಆದೇಶದಂತೆ ಹರನಪುರಕ್ಕೆ ಹೋಗಿ ಅಲ್ಲಿ ಇಟ್ಟಿರುವ ಬಿರುದಾವಳಿಯನ್ನು ತರಲು ಬೀರೇಶ್ವರನ ಮೇಲೆ ಬೆಳೆದ ಹುತ್ತವು ಇಬ್ಭಾಗವಾಗುತ್ತದೆ. ಸಿದ್ಧಬೀರೇಶ್ವರ ಮಾಳಿಂಗರಾಯನಿಗೆ ಬೀಜಗುತ್ತಿಯಲ್ಲಿ ಕುರಿಕಾಯ್ದುಕೊಂಡು ಲಿಂಗಪೂಜೆಯೊಂದಿಗೆ ತನ್ನ ಸ್ಮರಣೆ ಮಾಡಲು ತಿಳಿಸಿದನು. ಉಂಡಾಡಿ ಪದ್ಮಣ್ಣನ ಮಗ ತಿರುಕೋಟಿ ಭೋಗಣ್ಣನಿಗೆ ಜಯಪ್ಪನ ಮಗ ಮಳ್ಳಮಾಳಪ್ಪನಾಗಲು ಆಶೀರ್ವದಿಸಿದನು. ಮಹಿಷಾಸುರ ಮಡಿದು ಬಾಗಿಬಂಕನಾಥನೆಂದು ಪ್ರಸಿದ್ಧಿ ಹೊಂದಿದೆ. ದೈತ್ಯ ಬಂಕನಾಥ ಮಾಯವ್ವನ ಮೈಮೇಲೇರಿ ಬರುತ್ತಾನೆ. ಬೀರೇಶ್ವರನು ಪಂಚಡಂಗಿಯಿಂದ ಸಂಹರಿಸುವನು. ತಾಯಿಯೊಂದಿಗೆ ಹಾಲಹಳದ ಸಿಂಗಾಡಿ ಸುಲ್ತಾನೆಂದು ಹೆಸರಾದ ಅಲಕನೂರಲ್ಲಿ ಬೀರಪ್ಪನಾಗಿ ನೆಲಸಿ ಸಿಡಿಯಾಣಕ್ಕೆ ಬರುತ್ತಾನೆ. ಸಿದ್ಧಬೀರೇಶ್ವರನು ತಾನಿರುವ ಕೋಣಗನೂರು ಹಾಲುಮತದವರಿಗೆ ಗುರುಸ್ಥಾನವಾಗಲಿ ಎಂದು ಕಲಿಯುಗದಲ್ಲಿ ಕರಿದೇವರೆಂದು ಪ್ರಸಿದ್ಧಿ ಹೊಂದುವ ವರವನ್ನಿತ್ತು ಮರಳಿ ಗದ್ದುಗೆಯ ಮೇಲೆ ಸ್ಥಿರವಾಗುತ್ತಾನೆ. ಈಗಲೂ ಈ ವಸ್ತುವನ್ನು ಆಧರಿಸಿದ ಅನೇಕ ಮೌಖಿಕ ಪಠ್ಯಗಳು ಕ್ಷೇತ್ರದಲ್ಲಿ ಜೀವಂತವಾಗಿವೆ.

ಹಲವು ಹಾಲುಮತ ಪುರಾಣಗಳ ಕಥಾಸಾರವನ್ನಿಲ್ಲಿ ಸಂಕ್ಷೇಪಗೊಳಿಸಿ ಅಪ್ಪಣ ವಾಸುದೇವರಾಯ ಮುತ್ತೂರ ಅವರು ಈ ಕೃತಿಯನ್ನು ರಚಿಸಿದ್ದಾರೆ. ಹೀಗಿದ್ದರೂ ಈ ಕೃತಿ ಅನೇಕ ಸಂಗತಿಗಳನ್ನು ಪರಿಚಯಿಸುತ್ತದೆ. ಸುರಾವತಿಯ ಪುರವೈಭವದ ವರ್ಣನೆ, ಕೂಸನ್ನು ಕಾಡಿಗೆ ಒಯ್ದು ಆರು ಜನರಲ್ಲಿ ಐದು ಜನ ಶಿಲಾಮಯರಾಗಿ ಭೂಮಿಗೆ ಉರುಳುವ, ದೇವಲೋಕದ ಸುರಾವತಿ ಜನ್ಮಾಂತರದಲ್ಲಿ ಸಾಮಾನ್ಯರಂತೆ ಬೇಟೆಯಾಡುವ, ಸಿದ್ಧಬೀರೇಶ್ವರ ಮತ್ತು ಕನ್ನಿಕಾಮಾಲೆಯರ ಮದುವೆಯ ಶಾಸ್ತ್ರೋಕ್ತ ವಿಧಿ ವಿಧಾನಗಳ ಪ್ರಸಂಗ ಸಿದ್ಧಬೀರೇಶ್ವರ ದ್ವಾರಾವತಿ ಪಟ್ಟಣ ಪ್ರವೇಶಿಸುವ ಮೊದಲಾದ ಘಟನೆಗಳು ಇತರ ಕೃತಿಗಳಿಂದ ಭಿನ್ನವಾಗಿದೆ. ಹಾಲುಮತದ ಆಚಾರ ವಿಚಾರಗಳ ಹಬ್ಬ ಹರಿದಿನಗಳಲ್ಲಿ ಆಚರಣೆಗಳ ಬಗ್ಗೆ ಈ ಕೃತಿಯು ಭಿನ್ನವಾದ ನೆಲೆಯಲ್ಲಿ ನೋಡಲಾಗಿದೆ. ಇಂತಹ ವೈಶಿಷ್ಟ್ಯತೆಯನ್ನು ಹೊಂದಿರುವ ಕಥನವನ್ನು ಪ್ರಸ್ತುತ ಅಧ್ಯಯನಕ್ಕೆ ಆಕರವನ್ನಾಗಿ ಬಳಸಿಕೊಳ್ಳಲಾಗಿದೆ.

೪. ಮುದ್ದುಲಿಂಗೇಶ್ವರರ ಚರಿತ್ರೆ (೨೦೦೨)

ಎನ್. ಶಂಕರಾನಂದಪ್ಪ ವಿರಚಿತ ಕಾವ್ಯ ೨೦೦೨ರಲ್ಲಿ ಪ್ರಕಟಗೊಂಡಿದೆ. ಭಾಮಿನಿ ಷಟ್ಪದಿಯ ಈ ಕಾವ್ಯವು ೧೪ ಅಧ್ಯಾಯಗಳನ್ನು ಹೊಂದಿದೆ. ಬೀರಪ್ಪನಿಗೆ ಸಂಬಂಧಪಟ್ಟಂತೆ ೬ ರಿಂದ ೧೧ನೇ ಅಧ್ಯಾಯಗಳು ಮಾತ್ರ ಉಲ್ಲೇಖಿಸುತ್ತವೆ. ಆರನೆಯ ಅಧ್ಯಾಯವು ವೀರಭದ್ರ, ಬೀರೇಶ್ವರನಾಗಿ ಜನಿಸುವ ಬಿಲ್ಲಾಸುರನ ಸಂಹಾರ ಮಾಡುವ ವಾಯು ಪಕ್ಷಿಯನ್ನು ಶಿವನು ವಾಹನವಾಗಿ ಬೀರನಿಗೆ ನೀಡುವ ವಿವರಗಳನ್ನು ಹೊಂದಿದೆ. ವೀರಭದ್ರನ ಅವತಾರವೇ ಬೀರ ಅನ್ನುವ ವಿವರ ಗಮನ ಸೆಳೆಯುತ್ತದೆ. ಸಂಶೋಧನೆಗಳಿಂದ ಬೀರನಿಗೆ ವೀರಭದ್ರನಾಗಿ ರೂಪಾಂತರಗೊಂಡಿರುವುದು ಖಚಿತವಾಗಿದೆ. ಹಾಗಾಗಿ ಇದು ಲಿಂಗಾಯತ ಕೇಂದ್ರ ಪಠ್ಯವನ್ನು ಆಧರಿಸಿದ ವಿವರವನ್ನೊಳಗೊಂಡಿದೆ. ಇದು ಬೀರಪ್ಪನ ಕಥನಗಳ ಮೇಲೆ ಆಗಿರುವ ಪ್ರಭಾವವನ್ನು ಅರಿಯುವುದಕ್ಕೆ ಸಹಾಯಕವಾಗುತ್ತದೆ.

ಏಳನೆಯ ಅಧ್ಯಾಯವು ಶಿವಸಿದ್ಧ ಬೀರನ ವೃತ್ತಾಂತ ಪ್ರಾರಂಭವಾಗುತ್ತದೆ. ಭರಮದೇವ ಮತ್ತು ಸುರಾವತಿಯರಿಗೆ ಶಿವಸಿದ್ಧಬೀರನು ಹುಟ್ಟುವ ಸುರಾವತಿ ಅಣ್ಣನ ಕುತಂತ್ರಕ್ಕೆ ಒಳಗಾಗಿ ಕಾಡುಪಾಲಾದ ಕೂಸನ್ನು ಅಕ್ಕಮ್ಮ ಸಲಹುವ ವಿವರಗಳು ಇಲ್ಲಿವೆ. ಕಾಡಿನಲ್ಲಿ ಬಾಲ್ಯ ಕಳೆದ ಶಿವಸಿದ್ಧ ಬೀರನಿಗೆ ಪ್ರಾಣಿಪಕ್ಷಿಗಳ ಸಹಕಾರ, ಕುರಿಯ ಕೊರಳ ಮೊಲೆ ಹಾಲನ್ನು ಕುಡಿದು ಬೆಳೆದ ಶಿವಪದ್ಮನ ಬೋಳಸುಡಿ ಕುರಿಯ ಪೂರ್ವ ಜನ್ಮದ ವೃತ್ತಾಂತಗಳನ್ನು ಹೊಂದಿದೆ. ನೀರು ತರುವ ತರುಣಿಯರ ಕೊಡಗಳಿಗೆ ಬಾಣಬಿಟ್ಟು ಅವರಿಂದ ತಂದೆ ತಾಯಿ ತಿಳಿಯದ ಪರದೇಶಿ ಎಂದು ಬೈಸಿಕೊಂಡು ಅಕ್ಕಮ್ಮಳಿಂದ ಪೂರ್ವ ವೃತ್ತಾಂತ ತಿಳಿಯುವ ವಿವಿಧ ವೇಷಗಳಲ್ಲಿ ಕನ್ನಿಕಾಮಾಲೆಯನ್ನು ಭೇಟಿಯಾಗಿ ಮದುವೆಯಾಗುವ ಪ್ರಸಂಗಗಳನ್ನು ಎಂಟು ಮತ್ತು ಒಂಬತ್ತನೆಯ ಅಧ್ಯಾಯಗಳಲ್ಲಿ ವರ್ಣಿಸಲಾಗಿದೆ.

ಹತ್ತನೆಯ ಅಧ್ಯಾಯವು ಗುರು-ಶಿಷ್ಯರ ವಿವರಗಳನ್ನೊಳಗೊಂಡಿದೆ. ಶಿವಸಿದ್ಧ ಬೀರಪ್ಪ ಮತ್ತು ಮಾಳಿಂಗರಾಯರ ಸಮಾಜ ಕಲ್ಯಾಣ ಚಮರೀ ಮೃಗದ ಕೂದಲಿನಿಂದ ಕಂಬಳಿ ತಯಾರಿಕೆ, ವಿವಿಧ ಗೋತ್ರಗಳ

ವಿವರ, ಶರಣಗೊಲ್ಲಾಳನ ಕಥೆ, ಕೊಲ್ಲಿಪಾಕಿಯ ಹೆಂಡದ ದೇವಮ್ಮನ ವೃತ್ತಾಂತ, ಹುವ್ವನೂರಿನ ಅರಸನ ಸತ್ತ ಮಗನನ್ನು ಬಂಡಾರ ಎರಚಿ ಬದುಕಿಸುವ ಮೊದಲಾದ ಪವಾಡಗಳ ಮೂಲಕ ಮಾಳಿಂಗರಾಯನ ಶಕ್ತಿಯನ್ನು ಸಮಾಜಕ್ಕೆ ತೋರಿಸುತ್ತಾನೆ. ಗುರು ಶಿವಸಿದ್ಧ ಬೀರಪ್ಪನ ಅಪ್ಪಣೆಯಂತೆ ತಗರ ಪವಾಡವನ್ನು ಕಲ್ಯಾಣದಲ್ಲಿ ಮಾಳಿಂಗರಾಯ ಮೆರೆಯುತ್ತಾನೆ. ಆಗ ಬದುಕಿನ ತಗರಿನ ಹಿಂಗಾಲು ಹಿಡಿದವರು ಕಟುಕರಾದ ಮತ್ತು ಶಿರವನ್ನು ಹಿಡಿದು ಟಗರ ಜೋಗಿಗಳಾದ ವಿಶೇಷ ವಿಷಯಗಳನ್ನು ಗಮನಿಸಬಹುದು. ಕಲ್ಯಾಣದಲ್ಲಿ ನಡೆದ ಟಗರಪವಾಡ ಘಟನೆಯ ನಂತರದ ಕಥನವನ್ನು ಇಲ್ಲಿ ಸೇರಿಸಿಕೊಳ್ಳಲಾಗಿದೆ. ಹಾಗಾಗಿ ಈ ಕೃತಿಯನ್ನು ಕುರುಬ ಕುಲದ ಅನೇಕ ಕಥನಗಳನ್ನು ವಿಶೇಷವಾಗಿ ಅನೇಕ ಮೌಖಿಕ ಕಥನಗಳನ್ನು ಇಲ್ಲಿ ಸೇರಿಸಿ ಒಂದು ಕೃತಿಯನ್ನಾಗಿ ಮಾಡಲಾಗಿದೆ. ಆದರೂ ಬೀರಪ್ಪನು ಮಾಳಿಂಗರಾಯನನ್ನು ಕೊಣ್ಣೂರಿನ ಜಡೆಸಿದ್ದರು ಕೊಲ್ಲುವ ಕುತಂತ್ರವನ್ನು ತಿಳಿದ ಶಿವ ಸಿದ್ದಬೀರಪ್ಪ ಪಾರು ಮಾಡುವ ಹಾಗೂ ಬರಗಾಲದಲ್ಲಿ ಬೀರೇಶ ಕಂಬಳಿ ಬೀಸಿ ಮಳೆ ತರಿಸುವ ವಿವರಗಳನ್ನು ಹನ್ನೊಂದು ಹನ್ನೆರಡನೆಯ ಅಧ್ಯಾಯಗಳು ವಿವರಿಸುತ್ತವೆ.

೫. ಹಾಲುಮತ ಶ್ರೀ ಬೀರಲಿಂಗೇಶ್ವರ ಮಹಾಪುರಾಣ (೨೦೦೯)

ಶ್ರೀ ಸದಾಶಿವ ಅಪ್ಪಣ್ಣ ಜುಮ್ಮಣ್ಣವರ ಈ ಕೃತಿಯಲ್ಲಿ ಬೀರಪ್ಪನಿಗೆ ಸಂಬಂಧಪಟ್ಟಂತೆ ಕೆಲವು ವಿಚಾರಗಳಿವೆ. ಈ ಕೃತಿ ೪೦೦ ಪುಟಗಳ ಗದ್ಯ ಕೃತಿ. ಬೀರದೇವರ ಹಾಗೂ ಅವನ ಪರಂಪರೆಯ ಕುರಿತು ಸಂಕೀರ್ಣವಾದ ಕತೆಗಳ ಗುಚ್ಛವಿದು. ೧೪ ಭಾಗಗಳಲ್ಲಿ ರಚನೆಗೊಂಡಿದೆ. ಈ ಕೃತಿಯ ಮೊದಲ ಐದು ಭಾಗಗಳಲ್ಲಿ ಸೃಷ್ಟಿ, ಪ್ರಳಯ ಹಾಗೂ ಕೈಲಾಸ ಗಿರಿಯ ವರ್ಣನೆಯಿದೆ. ಆರನೆಯ ಭಾಗದಲ್ಲಿ ಮುದ್ದಪ್ಪ ಮುದ್ದವ್ವರ ಮೂರನೆಯ ಮಗನಾದ ಆದಿಗೊಂಡನಿಗೆ ಕೊನೆಯ ಹಾಗೂ ಹನ್ನೆರಡನೆಯ ಮಗನಾಗಿ ಹುಟ್ಟಿದ ಶಿವಪದ್ಮನ ಜನನ ಹಾಗೂ ಅವನ ಲೀಲೆಗಳು, ವಿವಾಹ ಹಾಗೂ ಅವನಿಗೆ ಶಿವಮುಕ್ಕಣ್ಣನಿಂದ ಬಂದ ಕುರಿಗಳ ಕಾಣಿಕೆಯ ವೃತ್ತಾಂತವಿದೆ. ಭಾಗ ಏಳರಿಂದ ಬೀರಪ್ಪನ ಕಥೆ ಪ್ರಾರಂಭವಾಗುತ್ತದೆ. ಹಾಲುಮತದ ಚರಿತ್ರೆಯನ್ನು ಅಥವಾ ಬೀರಪ್ಪನ ವಂಶಸ್ಥರ ಚರಿತ್ರೆಯನ್ನು ಅರಿತುಕೊಳ್ಳುವುದಕ್ಕೆ ಸಹಾಯಕವಾಗುತ್ತದೆ. ಬೀರಪ್ಪನ ತಂದೆ ತಾಯಿ ಬ್ರಹ್ಮ ಸುರಾವತಿ ಹಾಗೂ ಸೋದರಮಾವ ನಾರಾಯಣನ ವೃತ್ತಾಂತವಿದ್ದರೆ ಭಾಗ ಎಂಟರಲ್ಲಿ ಬೀರಪ್ಪನ ಜನನ ಸೋದರಮಾವ ಬೀರಪ್ಪನ ಹತ್ಯೆಗೆ ಹೂಡುವ ಸಂಚು ಅಕ್ಕವ್ವ ಮಾಯಮ್ಮರು ಬೀರಪ್ಪನನ್ನು ಸಂರಕ್ಷಿಸುವ ಕಥೆಯಿದೆ. ಭಾಗ ಒಂಭತ್ತರಲ್ಲಿ ಬೀರಪ್ಪನ ಸೋದರಮಾವನ ಮಗಳಾದ ಕನ್ನಿಕಾಮಾಲೆಯನ್ನು ವರಿಸಿ ವಿವಾಹವಾಗುವ ರಸ ಪ್ರಸಂಗಗಳಿವೆ.[೧]

ಹತ್ತನೆಯ ಭಾಗದಲ್ಲಿ ಅಮೋಘಸಿದ್ಧನ ಜನನ, ಬೀರಪ್ಪನ ಆದೇಶದ ಮೇರೆಗೆ ಅಮೋಘಸಿದ್ಧ ರೇವಣಸಿದ್ಧನನ್ನು ಭೇಟಿಯಾಗುವ ಕತೆಯೊಂದಿಗೆ ಪ್ರಾರಂಭವಾಗಿ ಉಳಿದ ಭಾಗದಲ್ಲಿ ಬೀರಪ್ಪನ ಅಸುರರ ಮರ್ದನದ ಸಾಹಸಗಾಥೆಯನ್ನು ಹೇಳಲಾಗಿದೆ.

ಹನ್ನೊಂದನೆಯ ಭಾಗದಲ್ಲಿ ಬೀರೇಶ್ವರನ ಶಿಷ್ಯನಾದ ಮಾಳಿಂಗರಾಯನ ಪೂರ್ವಜರ ದೀರ್ಘ ವೃತ್ತಾಂತವನ್ನು ನೀಡಲಾಗಿದೆ. ಹನ್ನೆರಡನೆಯ ಭಾಗದಲ್ಲಿ ಸೋಮರಾಯನ ಅಂತ್ಯ ಹಾಗೂ ಅವನ ಅಣ್ಣ,

ತುಕ್ಕಪ್ಪನ ಮಕ್ಕಳಾದ ಜಕ್ಕಪ್ಪ ಹಾಗೂ ಮಾಳಿಂಗರಾಯನ ಆಗಮನವನ್ನು ಚಿತ್ರಿಸಲಾಗಿದೆ. ಭಾಗ ೧೩ರಲ್ಲಿ ಮಾಳಿಂಗರಾಯನ ಪವಾಡಗಳು, ತನ್ನ ಗುರುವಾದ ಬೀರೇಶ್ವರನಿಗೆ ಹುಲಿಹಾಲು ತಂದು ಕೊಡುತ್ತಾನೆ. ೧೪ನೇ ಭಾಗದಲ್ಲಿ ಮಾಳಿಂಗರಾಯನ ಪವಾಡ ಮುಂದುವರೆಯುತ್ತದೆ. ಬೀರಪ್ಪನ ತಾಯಿಯಾದ ಸುರಾವತಿ ಗರ್ಭವತಿಯಾದ ಸಂದರ್ಭದಲ್ಲಿ ಅವಳ ಗಂಡ ಬ್ರಹ್ಮದೇವನು ಅವಳು ತನ್ನನ್ನು ಹೇಗೆ ಆರೈಕೆ ಮಾಡಿಕೊಳ್ಳ ಬೇಕು ಎಂದು ಹೇಳುವ ವಿವರವಂತೂ ದೇವರ ಕತೆ ಹಾಗೂ ಮನುಷ್ಯರ ಕತೆಗಳ ಮಧ್ಯದ ಅಂತರವನ್ನು ಅಳಿಸಿ ಹಾಕಿಬಿಡುತ್ತದೆ. ಒಟ್ಟಾರೆ ಈ ಕೃತಿ ಬೀರಪ್ಪನ ಚರಿತ್ರೆಯ ಜೊತೆಗೆ ಕುರುಬ ಜನಾಂಗದ ಇತಿಹಾಸವನ್ನು ಭಿನ್ನ ಕಥನಗಳ ಮೂಲಕ ಸಂಯುಕ್ತಗೊಳಿಸಿಕೊಂಡು ಕಟ್ಟಿಕೊಡುತ್ತದೆ.

೨. ಮೌಖಿಕ ಆಕರಗಳು

ಹಾಲುಮತ ಸಮುದಾಯದ ಆಚಾರ, ವಿಚಾರ, ಸಂಸ್ಕೃತಿ ಹೆಚ್ಚಾಗಿ ಉಳಿದುಕೊಂಡು ಬಂದಿರುವುದು ಮೌಖಿಕ ರೂಪದಲ್ಲಿ ಎಂದು ಹೇಳಬಹುದು. ವಿಶೇಷವಾಗಿ ಡೊಳ್ಳಿನ ಹಾಡುಗಳು ಬೀರಪ್ಪನ ಸಮಗ್ರ ಸಂಸ್ಕೃತಿಯನ್ನು ಹೇಳುತ್ತವೆ. ಜನಪದ ಸಾಹಿತ್ಯದಲ್ಲಿ ಡೊಳ್ಳಿನ ಹಾಡುಗಳಿಗೆ ವಿಶಿಷ್ಟ ಸ್ಥಾನವಿದೆ. ಕುರುಬರು ತಮ್ಮ ಬಿಡುವಿನ ವೇಳೆಯಲ್ಲಿ ಡೊಳ್ಳುಬಾರಿಸುತ್ತ ತಮ್ಮ ಸಾಂಸ್ಕೃತಿಕ ಪರಂಪರೆಯನ್ನು ಹಾಡುಗಳ ಮುಖಾಂತರ ವ್ಯಕ್ತಪಡಿಸುತ್ತಾರೆ. ಈ ಹಾಡುಗಳಲ್ಲಿ ಕುರುಬರ ಆರಾಧ್ಯ ದೈವಗಳಾದ ಬೀರಪ್ಪ, ಮಾಳಪ್ಪ, ರೇವಣಸಿದ್ಧ, ಇಟ್ಟಪ್ಪ ಮೊದಲಾದವರ ಜೀವನ ವೃತ್ತಾಂತ ಮತ್ತು ಸಾಧನೆಗಳನ್ನು ಪ್ರಸಾರ ಮಾಡಲಾಗುತ್ತದೆ. ಅಲ್ಲದೇ ರಾಮಾಯಣ, ಮಹಾಭಾರತದಂಥ ಪುರಾಣ ಕಾವ್ಯಗಳಲ್ಲಿರುವ ವಿಷಯಗಳನ್ನು ಡೊಳ್ಳಿನ ಹಾಡುಗಳ ಮೂಲಕ ಜನರಿಗೆ ತಿಳಿ ಹೇಳಲಾಗುತ್ತದೆ. ಇಂಥ ಡೊಳ್ಳಿನ ಹಾಡುಗಳ ಸಂಗ್ರಹ ಮತ್ತು ಪ್ರಕಟಣೆ ಕಾರ್ಯ ನಡೆದಿರುವುದು ತುಂಬಾ ಕಡಿಮೆ. ಎಂ.ಎಸ್. ಸುಂಕಾಪುರ ಅವರು ಸಂಪಾದಿಸಿದ ಜೀವನ ಜೋಕಾಲಿ, ಶಿವಾನಂದ ಗುಬ್ಬಣ್ಣನವರ ಅವರ ದೇವರು ಬಂದಾವ್ ಬನ್ನಿರೆ, ಜಿ.ಬಿ. ಖಾಡೆ ಅವರ ಕಾಡು ಹೂವುಗಳು ಮೊದಲಾದ ಸಂಗ್ರಹಗಳು ಡೊಳ್ಳಿನ ಹಾಡುಗಳ ಅನನ್ಯತೆಯನ್ನು ತಿಳಿದುಕೊಳ್ಳಲು ಬಹುಮುಖ್ಯ ಆಕರಗಳಾಗಿವೆ. ಇಂಥ ಅನೇಕ ಡೊಳ್ಳಿನ ಹಾಡುಗಳು ಮೌಖಿಕ ರೂಪದಲ್ಲಿ ಹಾಗೇ ಉಳಿದುಕೊಂಡು ಬಂದಿವೆ. ಇವುಗಳ ಸಂಗ್ರಹ ಸಂಶೋಧನೆ ಮತ್ತು ವಿಶ್ಲೇಷಣೆಯ ಅಧ್ಯಯನ ಇನ್ನೂ ಆಗಬೇಕಾಗಿದೆ.

ಅದೇ ರೀತಿ ಕುರುಬ ಜನಾಂಗದವರಲ್ಲಿ ಪ್ರಚಲಿತದಲ್ಲಿರುವ ಸಮೃದ್ಧವಾದ ಜನಪದ ಸಾಹಿತ್ಯ ಅಧ್ಯಯನಕಾರರಿಗೆ ಒಂದು ನಿಧಿಯಾಗಿದೆ. ಕುರುಬ ಜನಾಂಗದವರು ತಮ್ಮ ಗುರು ಬೀರಪ್ಪ, ರೇವಣಸಿದ್ಧ, ಸಿದ್ಧರಾಮರನ್ನು ಕುರಿತು ಹಾಡುಗಳನ್ನು ರಚಿಸಿ ಹಾಡುತ್ತ ಬಂದಿದ್ದಾರೆ. ಈ ಹಾಡುಗಳು ಮಹಾಪುರುಷರ ಐತಿಹಾಸಿಕ ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತವೆ. ಅದೇ ರೀತಿಯಾಗಿ ಬೀರಪ್ಪನನ್ನು ಕುರಿತು ಐತಿಹ್ಯಗಳು, ಡೊಳ್ಳಿನ ಹಾಡುಗಳು, ಕಥೆಗಳು, ಹೇರಳವಾಗಿ ದೊರೆಯುತ್ತವೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಕ್ಕೆ ಬಂದ ಕೆಲವು ಹಾಡುಗಳನ್ನು ದಾಖಲಿಸಿಕೊಳ್ಳಲಾಗಿದೆ.

ಅದೇ ರೀತಿ ವ್ಯಷ್ಟಿ ನೆಲೆಯಲ್ಲಿ ಪ್ರಾರಂಭವಾದ ಡೊಳ್ಳಿನ ಪದಗಳು ಸಮಷ್ಟಿ ನೆಲೆಯಲ್ಲಿ ಜನಪ್ರಿಯವಾಗಿವೆ. ಅಜ್ಞಾತದಲ್ಲಿದ್ದ ಡೊಳ್ಳಿನ ಪದಗಳು ಸುಮಾರು ೬೦ ವರ್ಷಗಳಿಂದ ಸಂಗ್ರಹಕಾರ್ಯ ನಡೆದಿದೆ. ಡೊಳ್ಳಿನ ಹಾಡುಗಳನ್ನು ೧. ಪುರಾಣದ ಹಾಡುಗಳು ೨ ಪವಾಡದ ಹಾಡುಗಳು ೩. ವಿಡಂಬನೆ, ನೀತಿ ಹಾಡುಗಳು, ೪ ಧರ್ಮದ ಹಾಡುಗಳು ೫. ಚುಟುಕುಗಳು ಎಂದು ಅರ್ಜುನ ಗೊಳಸಂಗಿ ಅವರು ವಿಭಾಗಿಸಿದ್ದಾರೆ.[೨] ಮಹಾದೇವ ಕಣವಿ ಅವರು ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಘಟನಾತ್ಮಕ ಹಾಡುಗಳು ಎಂದು ವರ್ಗೀಕರಿಸಿದ್ದಾರೆ.[೩] ಅದೇ ರೀತಿಯಾಗಿ ಸ್ವತಂತ್ರವಾಗಿ ಡೊಳ್ಳಿನ ಪದಗಳನ್ನು ಹೊಂದಿದ ಕೃತಿಗಳ ಅವಲೋಕನ ಇಂತಿದೆ -

೧. ಜನಪದ ಹಾಲುಮತ ಮಹಾಕಾವ್ಯ (೨೦೦೦)

ವೀರಣ್ಣದಂಡೆ ಅವರ ಸಂಪಾದಿತ ಸಮಗ್ರ ಡೊಳ್ಳಿನ ಹಾಡುಗಳ ಕಾವ್ಯ ಸಂಪುಟವಿದು. ಏಕ ವ್ಯಕ್ತಿಯಿಂದ ಅಭಿವ್ಯಕ್ತಿಗೊಂಡಿರುವ ಕಾವ್ಯ. ಹಲವಾರು ಹಾಲುಮತದ ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯ ಮೇಲೆ ಮತ್ತು ಸಮುದಾಯದ ಚಾರಿತ್ರಿಕ ಗ್ರಹಿಕೆಯ ಮೇಲೆ ಬೆಳಕು ಚೆಲ್ಲಿದೆ. ಈ ಮಹಾಕಾವ್ಯವು ಕೆಲವು ಚಾರಿತ್ರಿಕ ವ್ಯಕ್ತಿಗಳನ್ನು ಪರಿಚಯಿಸುತ್ತದೆ. ಬೀರಪ್ಪನೇ ಕಥೆಯ ಕೇಂದ್ರ ವ್ಯಕ್ತಿಯಾದರೂ ಕೆಲವು ಪಾತ್ರಗಳು ಪೂರಕವಾಗಿವೆ. ಉದಾಹರಣೆಗೆ ಮಾಳಿಂಗರಾಯ, ಮಾಯವ್ವ, ಅಮೋಘಸಿದ್ಧ ಮುಂತಾದ ಸಾಂಸ್ಕೃತಿಕ ವೀರರ ಚರಿತ್ರೆಯು ಸೇರ್ಪಡೆಯಾಗಿದೆ.

ಮೊದಲ ಅಧ್ಯಾಯವು ಕೈಲಾಸದ ಹಾಡಿಕೆಯಲ್ಲಿ ಐದು ಉಪಶೀರ್ಷಿಕೆಗಳನ್ನು ಹೊಂದಿದೆ. ಈ ಅಧ್ಯಾಯವು ಕೃಷಿ-ಕುರಿ-ಕಂಬಳಿ ಉತ್ಪತ್ತಿ, ಹಾಲುಮತದ ಪ್ರಾರಂಭ. ಗಂಡು ಹೆಣ್ಣಿನ ಉತ್ಪತ್ತಿ ಮತ್ತು ಬೆಂಕಿಯ ಶೋಧ, ಮದುವೆ ಈ ಮುಂತಾದ ಪೌರಾಣಿಕ ಕಲ್ಪನೆಗಳನ್ನೊಳಗೊಂಡಿದೆ. ಎರಡನೆಯ ಅಧ್ಯಾಯವು ಬೀರಪ್ಪನ ಪೂರ್ವಜರ ವೃತ್ತಾಂತ ಎಂಬ ಶೀರ್ಷಿಕೆಯನ್ನು ಹೊಂದಿದೆ. ಇದನ್ನು ನಾಲ್ಕು ಉಪಶೀರ್ಷಿಕೆಗಳಲ್ಲಿ ವಿಭಾಗಿಸಲಾಗಿದೆ. ಮೂರನೆಯ ಅಧ್ಯಾಯ ಕಾಳಿನಾರಾಯಣ ವೃತ್ತಾಂತ ಎಂಬ ಶೀರ್ಷಿಕೆ ಹೊಂದಿದೆ. ಇದು ನಾಲ್ಕು ಉಪಶೀರ್ಷಿಕೆಯಲ್ಲಿ ವಿಭಾಗಗೊಂಡಿದೆ. ನಾಲ್ಕನೆಯ ಅಧ್ಯಾಯವು ಬೀರಪ್ಪನ ಜನನ ವೃತ್ತಾಂತ ಎಂಬ ಶೀರ್ಷಿಕೆಯನ್ನು ಹೊಂದಿದೆ. ಇದು ಒಂಬತ್ತು ಉಪಶೀರ್ಷಿಕೆಯಲ್ಲಿ ಹರಡಿದೆ. ಐದನೆಯ ಅಧ್ಯಾಯವು ಅಕ್ಕವ್ವ ಮಾಯವ್ವರ ವೃತ್ತಾಂತ ಎಂಬ ಶೀರ್ಷಿಕೆಯನ್ನು ಹೊಂದಿದ್ದು ಐದು ಉಪಶೀರ್ಷಿಕೆಗಳನ್ನೊಳಗೊಂಡಿದೆ. ಆರನೆಯ ಅಧ್ಯಾಯವು ಬಾಲ ಬೀರಣ್ಣ ಲೀಲಾ ವೃತ್ತಾಂತ ಎಂಬ ಶೀರ್ಷಿಕೆಯನ್ನು ಹೊಂದಿ ನಾಲ್ಕು ಉಪಶೀರ್ಷಿಕೆಗಳನ್ನು ಪಡೆದಿದೆ. ಏಳನೆಯ ಅಧ್ಯಾಯ ಬೀರಣ್ಣನ ಮದುವೆ ವೃತ್ತಾಂತ ಎಂಬ ಶೀರ್ಷಿಕೆ ಹೊಂದಿ ಎಂಟು ಉಪಶೀರ್ಷಿಕೆಗಳನ್ನು ಪಡೆದಿದೆ. ಎಂಟನೆಯ ಅಧ್ಯಾಯವು ಲಿಂಗ ಬೀರಣ್ಣದೇವರ ವೃತ್ತಾಂತ ಎಂಬ ಉಪಶೀರ್ಷಿಕೆಯನ್ನು ಹೊಂದಿ ಏಳು ಉಪಶೀರ್ಷಿಕೆಗಳನ್ನೊಳಗೊಂಡಿದೆ. ಒಂಭತ್ತನೆಯ ಅಧ್ಯಾಯವು ಮಾಳಿಂಗರಾಯರ ಪೂರ್ವಜರ ವೃತ್ತಾಂತವನ್ನು ಹೊಂದಿ ಹದಿನಾಲ್ಕು ಉಪಶೀರ್ಷಿಕೆಯಲ್ಲಿ ಹರಡಿಕೊಂಡಿದೆ. ಹತ್ತನೆಯ ಅಧ್ಯಾಯವು ಮಾಳಿಂಗರಾಯ ಬೀರಪ್ಪನ ಸೇವೆಯಲ್ಲಿ ಹದಿನೆಂಟು ಉಪಶೀರ್ಷಿಕೆಯಲ್ಲಿ ವಿಸ್ತಾರ

ಪಡೆದಿದೆ. ಹನ್ನೊಂದನೆಯ ಅಧ್ಯಾಯವು ಡಂಕನಾಡ ದೈವಗೊಂಡನ ವೃತ್ತಾಂತ ಎಂಬ ಶೀರ್ಷಿಕೆಯನ್ನು ಹೊಂದಿದ್ದು ಏಳು ಉಪಶೀರ್ಷಿಕೆಯಲ್ಲಿ ವಿಭಾಗಿಸಲ್ಪಟ್ಟಿದೆ. ಇನ್ನು ಮುಂದುವರೆದ ಅಧ್ಯಾಯಗಲ್ಲಿ ಅಮೋಘ ಸಿದ್ಧನ ವೃತ್ತಾಂತ, ಪಾಂಡವರ ವೃತ್ತಾಂತ ಇತರ ಶರಣರ ವೃತ್ತಾಂತಗಳು ಎಂಬ ಒಟ್ಟು ಹದಿನಾಲ್ಕು ಅಧ್ಯಾಯಗಳನ್ನು ಒಳಗೊಂಡಿದೆ.

ಒಟ್ಟಿನಲ್ಲಿ ಕುರುಬ ಸಮುದಾಯದ ಪ್ರಾಚೀನತೆ, ಪರಂಪರೆ, ಆರಾಧ್ಯ ದೈವಗಳು, ಉದ್ಯೋಗ, ಆಚರಣೆಗಳು, ಜಾತ್ರೆ ಉತ್ಸವಗಳ ವೈಶಿಷ್ಟ್ಯತೆಗಳನ್ನು ವಿವರವಾಗಿ ತಿಳಿಸುವಲ್ಲಿ ಈ ಕಾವ್ಯ ಯಶಸ್ವಿಯಾಗಿದೆ.

೨. ಏಳೂರು ದೇವರ ಕಾಳಗ (೧೯೯೪)

ಈ ಕೃತಿ ೧೯೯೪ರಲ್ಲಿ ರಾಜಪ್ಪ ದಳವಾಯಿ ಅವರಿಂದ ಸಂಪಾದಿತವಾಗಿದೆ. ಅರವತ್ತೊಂದು ಪುಟದ ಈ ಮೌಖಿಕ ಕಾವ್ಯ ಲಾವಣಿ ರೂಪದಲ್ಲಿ ಜನಪದರಲ್ಲಿ ಪ್ರಾಮುಖ್ಯತೆ ಪಡೆಯಲು ಕಾರಣವಾಗಿದೆ. ಇದು ಒಂದು ಕುಲಕ್ಕೆ, ಒಂದು ಜಾತಿಗೆ, ಒಂದು ಬಳ್ಳಿಗೆ ಸಂಬಂಧಿಸಿದ ಕಾವ್ಯವಾಗಿದೆ. ಈ ಘಟನೆ ಹದಿನಾರನೇ ಹದಿನೇಳನೆ ಶತಮಾನದಲ್ಲಿ ನಡೆದಿರಬಹುದು. ಕ್ರಿ.ಶ. ೧೬೩೮-೧೬೫೯ ಅವಧಿಯಲ್ಲಿ ನಡೆದಿರಬಹುದಾದ ಪಿರಿಯಾಪಟ್ಟಣದ ಕಾಳಗಕ್ಕೆ ಹೆಚ್ಚು ಸಮೀಪವಿರುವ ಕಾವ್ಯವಾಗಿದೆ. ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ ಪರಿಸರದಲ್ಲಿ ಈ ಘಟನೆ ಸಂಭವಿಸಿದೆ ಎನ್ನುವ ಚಿತ್ರಣಗಳನ್ನು ಕಾಣಬಹುದು. ಕಥಾ ಪ್ರದೇಶವನ್ನು ವಿವರಿಸುವ ಸವಿವರವಾದ ರೇಖಾನಕ್ಷೆಯನ್ನು ಕತೆಯಲ್ಲಿ ಕಾಣಬಹುದು. ಘಟನಾ ಸ್ಥಳಗಳಾದ ತಾಳಿಕಟ್ಟೆ ಆನವೇರಿ, ದುಮ್ಮಿ, ಬಸಹಟ್ಟಿ, ಪಡನಾಡು, ಬ್ಯಾಲನೂರು ಮೊದಲಾದ ಸ್ಥಳಗಳನ್ನು ಈ ಕಾವ್ಯದಲ್ಲಿ ಗುರುತಿಸಬಹುದು. ಕಾವ್ಯ ವಾಚನ ಮಾಡಿದ ತಾಳೀಕಟ್ಟೆ ಕಲ್ಲವ್ವ, ರಾಯಕ್ಕ, ಸತ್ಯವ್ವ, ಸಿದ್ದವ್ವ ಅವರು ಇಂದು ಯಾರು ಬದುಕುಳಿದಿಲ್ಲ.

ಈ ಘಟನೆ ನಡೆದಂದಿನಿಂದ ಇಲ್ಲಿಯವರೆಗೂ ಆ ಕುಲದ ಸಂಪ್ರದಾಯ ಆಚರಣೆಗಳು ರೂಢಿಯಲ್ಲಿವೆ. ತಾಳಿಕಟ್ಟೆ ಮತ್ತು ದುಮ್ಮಿಯಲ್ಲಿ ಹೆಣ್ಣು ತೆಗೆದುಕೊಳ್ಳುವುದಾಗಲಿ, ಕೊಡುವುದಾಗಲಿ ರೂಢಿಯಲ್ಲಿ ಉಳಿದಿಲ್ಲ ದುಮ್ಮಿಯ ಜನಾಂಗಕ್ಕೆ ನವಣೆ ಹೊಲದಲ್ಲಿ ಕದನವಾದ ಕಾರಣ ಅವರಿಗೆ ಒಂದು ನಿಷೇಧ ಧಾನ್ಯವಾಗಿದೆ. ಇಂದಿಗೂ ಬ್ಯಾಲನ ಕುರುಬರಲ್ಲಿ ಹಿರಿಯ ಮಗ ಅಥವಾ ಮಗಳಿಗೆ ಹನುಮ, ಹನುಮಿ ಎಂದು ಹೆಸರಿಡುವ ಪಾರಂಪರಿಕ ಪದ್ಧತಿ ರೂಢಿಯಲ್ಲಿದೆ.

ಏಳೂರು ದೇವರ ಕಾಳಗದ ವ್ಯಕ್ತಿಗಳನ್ನು ಜನಸಾಮಾನ್ಯರು ಪುರಾಣಕ್ಕೇರಿಸಿ ಪೂಜಿಸಿ ಗೌರವಿಸುತ್ತಿದ್ದಾರೆ. ಈ ಕಾವ್ಯಕ್ಕೆ ಸಂಬಂಧಿಸಿದ ಕೆಲವು ಐತಿಹ್ಯಗಳಿವೆ. ಇದನ್ನು ದೇವಸ್ಥಾನದಲ್ಲಿ ಮಾತ್ರ ಹಾಡಬೇಕು ಎನ್ನುವ ಪಾರಂಪರಿಕ ಸಂಪ್ರದಾಯ ನಿಷೇಧವಿದೆ. ಏಳೂರಿನ ಯಾವ ದೇವರಾದರೂ ಈ ಹಾಡನ್ನು ಕೇಳುತ್ತಿದ್ದರೆ ತನ್ನ ತೂಗೋಮಂಚದಲ್ಲೇ ತೂಗಾಡುತ್ತಿರುತ್ತದೆ ಎನ್ನುವ ನಂಬಿಕೆ ಭಕ್ತರದು. ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ಏಳೂರು ದೇವರ ಜಾತ್ರೆ ಈ ಪ್ರದೇಶದಲ್ಲಿ ಪ್ರಸಿದ್ಧಿ ಪಡೆದಿದೆ. ಹಲವು ಬುಡಕಟ್ಟುಗಳ ಸೌಹಾರ್ದತೆಯ ಸಂಕೇತವಾಗಿರುವ ಈ ಜಾತ್ರೆ ವಿಶಿಷ್ಟವಾಗಿದೆ. ಇದು ಪ್ರಾದೇಶಿಕ ಅಶೋತ್ತರಗಳನ್ನು ಒಳಗೊಂಡ ಜನಪದ

ವೀರಕಾವ್ಯ. ಕುರುಬರ ದೇವರುಗಳ ಒಳಪಂಗಡಗಳ ವ್ಯಕ್ತಿಗಳ ಸ್ಥಳಗಳ ಹಾಗೂ ಘಟನೆಗಳು ಜೀವಂತಿಕೆ ಪಡೆದು ಒಂದು ಜಾತಿಯ ಸಾಂಸ್ಕೃತಿಕ ಲೋಕವನ್ನು ತಿಳಿಸುತ್ತದೆ.

ಒಂದು ಕಾಲದ ನಿಜ ಸಂಗತಿಯನ್ನು ಗೀತ ಪ್ರಕಾರದಲ್ಲಿ ಕಥನ ರೂಪ ಪಡೆದು ಲಾವಣಿ ರೂಪದಲ್ಲಿ ನಿರ್ಮಿಸಿರುವ ವ್ಯಕ್ತಿಯ ಸಾಂಸ್ಕೃತಿಕ ಕ್ರಿಯಾಶೀಲತೆಯನ್ನು ಗುರುತಿಸಬಹುದು. ಸಾರ್ವತ್ರಿಕ ಸತ್ಯವಾಗಿ ಮಾರ್ಪಟ್ಟು ಒಂದು ಜನಾಂಗದಲ್ಲಿದ್ದ ಸಮಸ್ಯೆ ಹಾಗೂ ಸಾಂಸ್ಕೃತಿಕ ವಿಚಾರಗಳನ್ನು ಬಿಂಬಿಸುವ ಶಕ್ತಿ ಪಡೆದಿದೆ. ಕಾವ್ಯದಲ್ಲಿ ಬರುವ ದಳವಾಯಿ ತಿಮ್ಮಣ್ಣ, ಮಲಗಳ್ಳಿ, ತಿಮ್ಮಣ್ಣ ಶಿವನೆ ನಿಂಗಣ್ಣ ಸಾಕ್ಷಿಯಾಗಿದ್ದಾರೆ. ಇದು ಕೇವಲ ಒಬ್ಬ ಬೀರನ ಕತೆಯಾಗಿರದೆ, ಹಲವು ವೀರರ ಕಥೆಗಳು ಬರುತ್ತವೆ. ಜನಾಂಗೀಯ ಸಮಸ್ಯೆಯು ಒಂದು ಸಾರ್ವತ್ರಿಕ ಸತ್ಯವಾಗಿ ಮಾರ್ಪಟ್ಟ ರಚನಾತಂತ್ರದಿಂದ ಬದುಕಿನ ಕಾಳಜಿಗಳು ಸ್ಪಷ್ಟವಾಗುತ್ತವೆ. ಧಾರ್ಮಿಕ ಸಂಪ್ರದಾಯ ಆಚರಣೆಗಳಲ್ಲಿ ಇದಕ್ಕೆ ತನ್ನದೇ ಆದ ಸ್ಥಾನಮಾನ ಇದೆ. ಈ ಕಾವ್ಯದಲ್ಲಿ ಧಾರ್ಮಿಕ ಅಂಶಗಳೊಂದಿಗೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಅಂಶಗಳು ಸೇರಿವೆ.

ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಏಳೂರು ದೇವರ ಜಾತ್ರೆ ಬಹಳ ವಿಶೇಷವಾಗಿದೆ. ಈ ವೀರ ಕಥೆಯ ಲಾವಣಿಯನ್ನು ದೇವಸ್ಥಾನದಲ್ಲಿ ಮಾತ್ರ ಹಾಡುವ ಸಂಪ್ರದಾಯವಿದೆ. ಭೈರವ, ಮೈಲಾರ ದೇವರಗಳು ಕಾಪಾಲಿಕ ಪಂಥದೊಂದಿಗೆ ಹೊಂದಿರುವ ಸಂಬಂಧ, ಕುರುಬರ ಬೀರನೇ ಆದಿಚುಂಚನಗಿರಿಯ ಭೈರವನಾಗಿ ಬದಲಾದ ಮತ್ತು ಕುರುಬರ ಮಾಳವ್ವನನ್ನು ವಿವಾಹವಾಗುವ ಚರ್ಚೆಯನ್ನು ಹೊಂದಿದೆ. ೧೯೨೫ರಲ್ಲಿ ಆದಿಚುಂಚನಗಿರಿಯಲ್ಲಿ ನಾಥ ಪಂಥದ ಹಿಡಿತದಿಂದ ತಪ್ಪಿಸಿ ಒಕ್ಕಲಿಗರ ವಶವಾದುದನ್ನು ಗಮನಿಸಬಹುದು. ಲಿಂಗಾಯತರು, ದಲಿತರು, ಬೆಸ್ತರು, ಒಕ್ಕಲಿಗರು, ಕುರುಬರು ಮೊದಲಾದ ಜಾತಿಗಳು ನಾಥಸಿದ್ಧ ಸಂಪ್ರದಾಯಗಳೊಂದಿಗೆ ಹೊಂದಿದ ಸಂಬಂಧವನ್ನು ಸೂಕ್ಷ್ಮವಾಗಿ ವಿವರಿಸಲಾಗಿದೆ.

ವೀರ ಪ್ರಧಾನವಾದ ಈ ಕಥನಗೀತೆ ಏಳೂರಿಗೆ ಸಂಬಂಧಿಸಿದ ದೇವರುಗಳ, ಕುರುಬರ ೨೮ ಒಳಪಂಗಡಗಳ ವಿವರಗಳನ್ನು ಹೇಳುತ್ತದೆ. ಜನಪದ ವೀರಕಾವ್ಯದ ಊರು, ವ್ಯಕ್ತಿ, ಘಟನೆಗಳು ಹೊಸತಾಗಿವೆ. ಒಂದು ಜನಾಂಗದ ಸಾಂಸ್ಕೃತಿಕ ವಿಚಾರಗಳನ್ನು ಪ್ರತಿಬಿಂಬಿಸುವುದರೊಂದಿಗೆ ಎರಡು ಒಕ್ಕಲುಗಳ ನಡುವಿನ ಸಂಘರ್ಷವನ್ನು ಬಿಂಬಿಸುವುದು ಕೃತಿಯ ವಿಶೇಷ. ಆನವೇರಿ ಸಿದ್ದಯ್ಯ ಮತ್ತು ಬ್ಯಾಲನ ಕುರುಬರ ನಡುವಿನ ಕದನದ ವಿವರಗಳನ್ನು ಇಲ್ಲಿ ಕಾಣಬಹುದು. ಹೊನ್ನೆಬಾಗಿ ದಿಬ್ಬದ ಪಂಚಾಯತಿಯಲ್ಲಿ ಮೋಸದಿಂದ ಹಿರಿಯಯ್ಯನ ತಲೆ ತಗೆಯಲಾಗುತ್ತದೆ. ಇದು ರಾಜಕೀಯದ ಒಳನೋಟವನ್ನು ಬಿಂಬಿಸುವ ವಿಚಾರವಾಗಿದೆ. ಒಟ್ಟಾರೆ ಬ್ಯಾಲನ ಕುರುಬರನ್ನು ತಾಳಿಕಟ್ಟಿಗೆ ಮರಳಿ ತರುವ ವಿಚಾರವು ಇಲ್ಲಿ ಪ್ರತಿಪಾದಿತಗೊಂಡಿದೆ.ಇದು ಒಕ್ಕಲಿಗಾಗಿ ದೇವತೆಗಳು ಕಾದಾಡಿದ ವೀರ ಕಥೆಯಾಗಿದೆ ಎಂಬ ಅನೇಕ ಹೊಸ ವಿಚಾರಗಳನ್ನು ಚಂದ್ರಪ್ಪ ಅಜ್ಜಂಪುರ ಅವರು ಕುರುಬರ ಕುರುಹುಗಳು ಎಂಬ ಕೃತಿಯಲ್ಲಿ ಚರ್ಚೆಗೆ ಒಳಪಡಿಸಿದ್ದಾರೆ.[೨] ಕೆಲವು ಪ್ರಮುಖ ವಿಷಯಗಳನ್ನು ಒಳಗೊಂಡ ಈ ಕಾವ್ಯದಲ್ಲಿ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಅಂಶಗಳಿವೆ.

ಇಡೀ ಕಾವ್ಯ ಒಂದೇ ಕಥೆಯಾಗದೆ ಅನೇಕ ಕಥೆಗಳ ಗುಚ್ಛದಂತಿದೆ. ಧಾರ್ಮಿಕ ಆಚರಣೆಗಳಲ್ಲಿ ಸಂಪ್ರದಾಯಗಳಲ್ಲಿ ತನ್ನ ಪರಂಪರೆಯನ್ನು ಉಳಿಸಿಕೊಳ್ಳುವಲ್ಲಿ ಸೇತುವೆಯಾಗಿದೆ. ವೀರರ ತ್ಯಾಗ, ಬಲಿದಾನದ ಸಂಕೇತವಾಗಿ ಈ ಕಥನವನ್ನು ಕಾಣಬಹುದು.

ಹೀಗೆ ಹಾಲುಮತದ ಸಂಸ್ಕೃತಿ ಅಧ್ಯಯನ ಕೈಕೊಳ್ಳಲು ಮೌಖಿಕ ಆಕರಗಳು ಬಹುಮುಖ್ಯವಾಗುತ್ತವೆ. ಪುರಾಣ ಕಾವ್ಯಗಳಲ್ಲಿ ಹಾಲುಮತ ಸಮುದಾಯದ ಸಾಂಸ್ಕೃತಿಕ ವೀರರಾದ ಬೀರಪ್ಪ, ಮಾಳಿಂಗರಾಯ, ರೇವಣಸಿದ್ಧ ಹಾಗೂ ಇಟ್ಟಪ್ಪ ಮೊದಲಾದವರ ಕಥೆಗಳು ನಿರೂಪಗೊಂಡಿವೆ. ಇನ್ನು ಡೊಳ್ಳಿನ ಹಾಡುಗಳಂತೂ ಹಾಲುಮತಸ್ಥರ ಸಮಗ್ರ ಸಂಸ್ಕೃತಿಯನ್ನು ಅನಾವರಣಗೊಳಿಸುತ್ತವೆ. ಈ ಹಾಡುಗಳ ಸಂಗ್ರಹಕಾರ್ಯ ಈ ತನಕ ಸಮಗ್ರವಾಗಿ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ನಾಡಿನಾದ್ಯಂತ ಡೊಳ್ಳಿನ ಕಲಾವಿದರನ್ನು ಹಾಡುಗಾರರನ್ನು ಸಂಪರ್ಕಿಸಿ, ಮೌಖಿಕ ರೂಪದಲ್ಲಿರುವ ಹಾಡುಗಳು ಸಂಗ್ರಹಿಸಿ, ಕ್ರಮಬದ್ಧವಾಗಿ ಜೋಡಿಸಿ ಪ್ರಕಟಿಸಬೇಕಾದ ಅಗತ್ಯವಿದೆ. ಈಗಾಗಲೇ ಎಂ.ಎಸ್. ಸುಂಕಾಪುರ, ಶಿವಾನಂದ ಗುಬ್ಬಣ್ಣನವರ, ಜಿ.ಬಿ. ಖಾಡೆ, ಬಸನಗೌಡ ಪಾಟೀಲ, ಬಸವರಾಜ ನೆಲ್ಲಿಸರ, ಮೊದಲಾದವರು ಡೊಳ್ಳಿನ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಹೀಗಿದ್ದೂ ಈ ಸಂಗ್ರಹ ಕಾರ್ಯವನ್ನು ವ್ಯಾಪಕವಾಗಿ ಕೈಕೊಳ್ಳಬೇಕಾಗಿದೆ.

ಹಾಗೆಯೇ ವಿವಿಧ ಆಚರಣೆಗಳಲ್ಲಿ ನಡೆಯುವ ಕಾಲಜ್ಞಾನಕ್ಕೆ ಸಂಬಂಧಿಸಿದ ಕುರುಬರ ಹೇಳಿಕೆಗಳು ಸಹ ಮೌಖಿಕ ರೂಪದಲ್ಲಿವೆ. ಬೀರಪ್ಪ, ಮಾಳಿಂಗರಾಯ, ರೇವಣಸಿದ್ಧ, ಸಿದ್ಧರಾಮೇಶ್ವರ ಮತ್ತು ಅಮೋಘಸಿದ್ದೇಶ್ವರ ಮೊದಲಾದ ದೈವಗಳ ಪೂಜಾರಿಗಳು, ಭಕ್ತರು ಈ ದೈವಗಳ ಆಚರಣಾತ್ಮಕ ಸಂದರ್ಭಗಳಲ್ಲಿ ಸಂದರ್ಭದಲ್ಲಿ ಹೇಳಿಕೆಗಳನ್ನು ನುಡಿಯುತ್ತಾರೆ. ಈ ಹೇಳಿಕೆಗಳು ಸಮಾಜದ ಮೇಲೆ ದಟ್ಟವಾದ ಪ್ರಭಾವವನ್ನು ಬೀರುತ್ತವೆ. ಮೈಲಾರದಲ್ಲಿ ಹೇಳುವ ಹೇಳಿಕೆಯನ್ನು ಲಕ್ಷಾನುಗಟ್ಟಲೆ ನೆರೆಯುವ ಜನಸಮೂಹ ತದೇಕ ಚಿತ್ತದಿಂದ ಕೇಳುತ್ತದೆ. ಆ ಹೇಳಿಕೆಯ ಮೇಲೆ ಆ ವರ್ಷದ ಮಳೆ ಬೆಳೆಯ ಸ್ಥಿತಿಗತಿಯನ್ನು ನಿರ್ಧರಿಸಲಾಗುತ್ತದೆ. ಇನ್ನು ಸರೂರಿನಲ್ಲಿ ಮರುಳಸಿದ್ಧನ ತೂಗುಡ್ಡದಲ್ಲಿ ನಡೆಯುವ ಹಬ್ಬಗಳಲ್ಲಿ ಒಡೆಯರು ಹೇಳಿಕೆಗಳನ್ನು ಹೇಳುತ್ತಾರೆ. ಇಂಥ ಎಲ್ಲ ಹೇಳಿಕೆಗಳನ್ನು ಸಮಗ್ರವಾಗಿ ಸಂಗ್ರಹಿಸಿ ಅಧ್ಯಯನಕ್ಕೊಳಪಡಿಸಿದಾಗ ಹಾಲುಮತ ಸಂಸ್ಕೃತಿಯ ಮೇಲೆ ಹೊಸ ಬೆಳಕು ಚೆಲ್ಲುವ ಸಾಧ್ಯತೆಗಳಿವೆ. ಅಂಥ ಸಾಧ್ಯತೆಗಳತ್ತ ಸಂಶೋಧಕರು ಅವಶ್ಯವಾಗಿ ಗಮನಹರಿಸಬೇಕಾಗಿದೆ. ಏಕೆಂದರೆ ಇದರಿಂದ ಬೀರಪ್ಪ ಆಚರಣೆ ಮತ್ತು ಸಂಪ್ರದಾಯಗಳ ಸಾಮ್ಯತೆ ಮತ್ತು ಭಿನ್ನತೆಗಳನ್ನು ಗುರುತಿಸುವುದಕ್ಕೆ ಸಾಧ್ಯವಿದೆ.

೩. ಡೊಳ್ಳಿನ ಹಾಡುಗಳು

೧. ಹಳ್ಳಿಯ ಹಾಡುಗಳು (ಸಂ) ವಿನಿತ ರಾಮಚಂದ್ರರಾಯರು (೧೯೬೦)

ಹಳ್ಳಿಯ ಹಾಡುಗಳು ರಾಮಚಂದ್ರರಾಯ ಅವರ ಜನಪದ ಗೀತೆಗಳ ಸಂಕಲನ. ಅನೇಕ ಪ್ರಕಾರದ ಜನಪದ ಗೀತೆಗಳನ್ನು ಸಂಗ್ರಹಿ ವರ್ಗೀಕರಿಸಿ ಕೊಟ್ಟಿದ್ದಾರೆ. ಅದರಲ್ಲಿ ಕುರುಬರ ಹಾಡುಗಳು ಎನ್ನುವ ಭಾಗ

ಗಮನಸೆಳೆಯುತ್ತದೆ. ಇಲ್ಲಿ ಎರಡು ಹಾಡುಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಒಂದು ಬೀರದೇವರ ಹಾಡು. ಈ ಹಾಡನ್ನು ಗಣೆಯವರಿಂದ ಸಂಗ್ರಹಿಸಿರಬೇಕು. ಇದು ಡೊಳ್ಳಿನ ಪದವಲ್ಲ. ಇನ್ನೊಂದು ಡೊಳ್ಳಿನ ಹಾಡು ಚೌಪದಿಯಲ್ಲಿದೆ. ಈ ಹಾಡಿನ ವಸ್ತು ಕುರುಬರ ಸಾಂಸ್ಕೃತಿಕ ಚಹರೆಯನ್ನು ಪ್ರತಿಬಿಂಬಿಸುತ್ತದೆ. ಲಿಂಗಣ್ಣ (೧೯೭೩-೭೪) ಅವರ ಡೊಳ್ಳಿನ ಹಾಡು ಲೇಖನದಲ್ಲಿ ಆರಾಧ್ಯ ದೈವಗಳ ಸಾಂಸ್ಕೃತಿಕ ವಿಶ್ಲೇಷಣೆ ಇದೆ. ದೈವಗಳನ್ನು ಸ್ಪಷ್ಟವಾಗಿ ಗುರುತಿಸುವಲ್ಲಿ ವಿಫಲವಾಗಿದ್ದಾರೆ. ಆದರೆ ಹಾಡುಗಳ ಸ್ವರೂಪ ಮತ್ತು ವೈಶಿಷ್ಟ್ಯವನ್ನು ಚರ್ಚಿಸಿದ್ದಾರೆ.

೨. ಕಾಡು ಹೂವುಗಳು - (ಸಂ) ಜಿ.ವಿ. ಖಾಡೆ (೧೯೭೩)

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಗೊಂಡಿರುವ ಕೃತಿ ಜನಪದ ಗೀತೆಗಳ ಸಂಗ್ರಹ. ಹಳ್ಳಿಯ ಪರಿಸರದಲ್ಲಿ ಹುಟ್ಟಿ ಬೆಳೆದ ಖಾಡೆ ಅವರು ವಿಜಾಪುರ ಜಿಲ್ಲೆಯ ಜನಪದ ಗೀತೆಗಳನ್ನು ಸಂಗ್ರಹಿಸಿದ್ದಾರೆ. ಈ ಕೃತಿಯು ಬೀಸುವ ಕಲ್ಲಿನ ಪದ, ಹಂತಿಯ ಹಾಡು, ಕೋಲಿನಪದ, ಹಾಗೂ ಡೊಳ್ಳಿನ ಪದಗಳು ಎಂಬ ನಾಲ್ಕು ಭಾಗಗಳನ್ನು ಹೊಂದಿದೆ. ಡೊಳ್ಳಿನ ಪದಗಳು ಕೃತಿಯ ಅರ್ಧದಷ್ಟು ವ್ಯಾಪ್ತಿಯನ್ನು ಪಡೆದಿವೆ. ಇವರು ಪ್ರಾರಂಭದಲ್ಲಿ ಹಾಡುಗಾರರ ಕಾಲ, ವಯಸ್ಸು, ಹೆಸರುಗಳನ್ನು ದಾಖಲಿಸಿದ್ದಾರೆ. ಕತೆಯು ೬೯ ಸಂಧಿಗಳನ್ನು ಹೊಂದಿದೆ. ದೈವಗಳ ಕುರಿತು ಪೌರಾಣಿಕ ಹಿನ್ನೆಲೆಯ ಕಥೆಗಳು ಹಾಗೂ ನೈತಿಕ ತಾತ್ವಿಕ ಕಥೆಗಳನ್ನು ಸಂಗ್ರಹಿಸಿದ್ದಾರೆ. ಬೀರಪ್ಪ, ರೇವಣಸಿದ್ಧ, ಮಾಳಿಂಗರಾಯ ಮುಂತಾದ ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಮಹತ್ವದ ಹಾಡು ಇದಾಗಿದೆ. ವಿಜಾಪುರ ಜಿಲ್ಲೆಯ ಜಾತ್ರೆ, ಉತ್ಸವ, ಸಮಾರಾಧನೆಗಳಲ್ಲಿ ರೇವಣಸಿದ್ಧ ಬೀರಪ್ಪ ಮೊದಲಾದವರ ಕುರಿತು ಡೊಳ್ಳಿನ ಪದಗಳನ್ನು ಹಾಡುತ್ತಾರೆ. ಈಗಲೂ ಈ ಪರಂಪರೆಯನ್ನು ಕಾಣಬಹುದು.

೩. ಜೀವನ ಜೋಕಾಲಿ - (ಸಂ) ಡಾ. ಎಮ್.ಎಸ್. ಸುಂಕಾಪುರ (೧೯೭೬)

ಎಮ್.ಎಸ್. ಸುಂಕಾಪುರ ಅವರು ವೈಜ್ಞಾನಿಕವಾಗಿ ಸಂಪಾದಿಸಿದ ಈ ಸಂಕಲನವು ೧೯೭೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟಗೊಂಡಿದೆ. ಜೀವನ ಜೋಕಾಲಿ ಮಾಲೆಯ ೬ನೆಯ ಸಂಪುಟವಿದು. ಈ ಕೃತಿಯಲ್ಲಿ ಡೊಳ್ಳಿನ ಹಾಡುಗಳನ್ನು ಸಂಪಾದಿಸಲಾಗಿದೆ. ಗಣಸ್ತುತಿ, ಗುರುಸ್ತುತಿ, ಮತಸ್ತುತಿ, ಪುರಾಣಸ್ತುತಿ, ಶರಣಸ್ತುತಿ, ನೀತಿಸ್ತುತಿ ಎಂಬ ಆರು ಭಾಗಗಳಲ್ಲಿ ಒಟ್ಟು ೫೩ ಪದಗಳಿವೆ. ಕುರುಬರ ಪ್ರಾಚೀನತೆ, ಜೀವನ ನಿರ್ವಹಣೆ, ವೃತ್ತಿ ದೈವಗಳ ಆರಾಧನೆ, ಕುರಬ ಕುಲದ ಒಳಪಂಗಡಗಳು, ವೀರಶೈವ ಪ್ರಭಾವಕ್ಕೆ ಒಳಗಾದ ಶೈವರು, ಹತ್ತಿಕಂಕಣ ಮತ್ತು ಉಣ್ಣೆಕಂಕಣ ಬೀರಪ್ಪನ ಜೀವನ ವೃತ್ತಾಂತ, ಮೈಲಾರನ ಮಹಿಮೆ ಪವಾಡಗಳು, ಡೊಳ್ಳಿನ ವಿಶೇಷತೆ, ಡೊಳ್ಳಿನ ಹಾಡುಗಳ ಲಕ್ಷಣ, ಡೊಳ್ಳಿನ ಹಾಡುಗಳ ರಚನೆಯಲ್ಲಿ ವೀರಶೈವರ ಪಾತ್ರ ಮೊದಲಾದ ಮಹತ್ವದ ವಿಷಯಗಳನ್ನು ಚರ್ಚಿಸಿದ್ದಾರೆ. ಶೈವರ ವೀರಶೈವೀಕರಣ ಬೀರಪ್ಪನು ವೀರಭದ್ರನಾಗಿ ರೂಪಾಂತರಗೊಂಡ ಎನ್ನುವ ಕಥನಗಳನ್ನು ತೌಲನಿಕವಾಗಿ ನೋಡುವುದಕ್ಕೆ ಸಹಾಯಕವಾಗುತ್ತದೆ.

೪. ಡೊಳ್ಳಿನ ಹಾಡು - (ಸಂ) ಎನ್. ಬಸವರಾಜ (೧೯೭೮)

ಕೃತಿಯ ೧೯೭೮ರಲ್ಲಿ ಮೈಸೂರಿನ ಯಕ್ಷ ಪ್ರಕಾಶನದಿಂದ ಪ್ರಕಟಗೊಂಡಿದೆ. ಈ ಕೃತಿಯನ್ನು ಜನಪದ ಕೋಗಿಲೆ, ಜನಪದ ಸಾಹಿತ್ಯ ರತ್ನ ಶ್ರೀ ಕೆ.ಆರ್. ಲಿಂಗಪ್ಪನವರಿಗೆ ಅರ್ಪಿಸಿದ್ದಾರೆ. ಒಟ್ಟು ೨೮ ಡೊಳ್ಳಿನ ಪದಗಳಿವೆ. ಶರಣರ ಹಾಲುಮತ ದೈವಗಳು, ಪುರಾಣ, ಪುರುಷರು, ನೀತಿಪದ, ಒಗಟಿನ ಪದ, ಅನುಭವ ತತ್ವ ಸಮಾಜದ ಲೌಕಿಕ ವಿಷಯ ಮುಂತಾದವನ್ನು ಚರ್ಚಿಸಿದ್ದಾರೆ. ಹಾಡುಗಾರನ ಊರು, ಜನಾಂಗ, ವಯಸ್ಸು ಮತ್ತು ಹಾಡುಗಳನ್ನು ಸಂಗ್ರಹಿಸಿದ ದಿನಾಂಕವನ್ನು ದಾಖಲಿಸಿದ್ದಾರೆ. ಅನೇಕ ಬಿಡಿ ಹಾಡುಗಳಿವೆ. ಗಣಸ್ತುತಿ, ದೇವಿಸ್ತುತಿ, ಬೀರದೇವರ ಸ್ತುತಿ, ಕಂಬಳಿಯ ವೈಶಿಷ್ಟ್ಯ ಮಹತ್ವ, ಖರೆ ಹಾಡು, ಒಗಟಿನ ಹಾಡು, ನೀತಿ ಪ್ರಧಾನ, ತತ್ವ ಪ್ರಧಾನ ಹಾಡುಗಳು ಮುಖ್ಯವಾಗಿವೆ. ಈ ಕೃತಿಯನ್ನು ಪ್ರಸ್ತುತ ಅಧ್ಯಯನಕ್ಕೆ ಆಕರವನ್ನಾಗಿ ಬಳಸಿಕೊಂಡಿದ್ದೇನೆ. ರಾಯಚೂರು ಜಿಲ್ಲೆಯ ಜನಪದ ಗೀತೆಗಳು. (೧೯೭೬) ಈ ಕೃತಿಯಲ್ಲಿ ೧೩ ಹಾಡುಗಳಿವೆ. ಬೀರಪ್ಪ, ಭರಮದೇವರು ಮುಂತಾದ ಆರಾಧ್ಯ ದೈವಗಳ ಬಗ್ಗೆ ಬೆಳಕು ಚೆಲ್ಲಿದೆ. ಎ.ಜಿ. ನೀಲಗಾರ (೧೯೭೯) ಅವರ ಜಾನಪದ ಜೇನು ಕೃತಿಯಲ್ಲಿ ೧೯ ಹಾಡುಗಳಿವೆ. ಬೀರಪ್ಪ ರೇವಣಸಿದ್ಧ ಇನ್ನು ಮುಂತಾದ ಹಾಡುಗಳು ಗಮನ ಸೆಳೆಯುತ್ತವೆ. ಬೀರಪ್ಪನ ಹಾಡು ವೈಶಿಷ್ಟ್ಯತೆಯಿಂದ ಕೂಡಿದೆ.

೫. ತೂಕ ಮಾಡಿ ಹೇಳತೀನಿ ನ್ಯಾಯ - (ಸಂ) ಬಸನಗೌಡ ಪಾಟೀಲ (೧೯೮೧)

೧೯೮೧ರಲ್ಲಿ ಪ್ರಕಟವಾದ ಈ ಕೃತಿಯಲ್ಲಿ ೧೮ ಹಾಡುಗಳಿವೆ. ಧಾರವಾಡ ಜಿಲ್ಲೆ ಲಕ್ಷ್ಮೇಶ್ವರ ಮತ್ತು ಸುತ್ತಮುತ್ತಲಿನ ಕಲಾವಿದರಿಂದ ಸಂಗ್ರಹಿಸಿದ ಹಾಡುಗಳಿವು. ತ್ರಿಪದಿ, ಚೌಪದಿ ಪ್ರಕಾರಗಳಲ್ಲಿ ಭಿನ್ನ ಶೈಲಿಯ ಭಿನ್ನವಸ್ತುಗಳಿಂದ ಕೂಡಿವೆ. ಬೀರಪ್ಪ ಮಾಳಿಂಗರಾಯ, ವೀರಗೊಲ್ಲಾಳ, ರೇವಣಸಿದ್ಧ ಮುಂತಾದ ಸಾಂಸ್ಕೃತಿಕ ವೀರರ ಬಗ್ಗೆ ಬೆಳಕು ಚೆಲ್ಲುವ ಮಹತ್ವದ ಹಾಡುಗಳು ಇಲ್ಲಿವೆ.

೬. ದೇವರಿಗೆ ಶರಣೆನ್ನುವನೇ - (ಸಂ) ಕಮಲಾ ಹೆಮ್ಮಿಗೆ

ಕಮಲಾ ಹೆಮ್ಮಿಗೆ ಅವರು ಕುರುಬ ಜನಾಂಗದ ಆಚಾರ ವಿಚಾರ, ರೂಢಿ ಸಂಪ್ರದಾಯ, ಗುರುಪರಂಪರೆ ಮೊದಲಾದ ವಿಷಯಗಳನ್ನೊಳಗೊಂಡ ೩೬ ಡೊಳ್ಳಿನ ಪದಗಳನ್ನು ಈ ಸಂಪುಟದಲ್ಲಿ ಸಂಗ್ರಹಿಸಿದ್ದಾರೆ. ಜೊತೆಗೆ ಈ ಹಾಡುಗಳನ್ನು ಹಾಡಿದ ಕಲಾವಿದರನ್ನು ಪರಿಚಯಿಸಿದ್ದಾರೆ. ಹಾಲುಮತ ಸಂಸ್ಕೃತಿಗೆ ಸಂಬಂಧಿಸಿದ ಹಾಡುಗಳು ಅಧಿಕವಾಗಿವೆ. ಶಿವಸಿದ್ಧ, ಬೀರಪ್ಪ, ಸಂಗೊಳ್ಳಿ ರಾಯಣ್ಣ, ಅಮೋಘಸಿದ್ಧ, ಕೊಣ್ಣೂರು ಕರಿಯಪ್ಪ ಮೊದಲಾದ ಸಾಂಸ್ಕೃತಿಕ ವೀರರ ಜೀವನ ಸಾಧನೆಯ ಹಾಡುಗಳು ಇಲ್ಲಿ ಪ್ರಮುಖವಾಗಿವೆ.


೭. ಡೊಳ್ಳಿನ ಪದಗಳು - (ಸಂ) ಶಿವಲಿಂಗ ಕಂಬಾರ (೨೦೦೬)

೨೦೦೬ರಲ್ಲಿ ಪ್ರಕಟಗೊಂಡ ಈ ಕೃತಿಯಲ್ಲಿ ೪೬ ಹಾಡುಗಳಿವೆ. ಬೆಳಗಾವಿಯ ಚಿಕ್ಕೋಡಿ ತಾಲೂಕಿನ ಕಬ್ಬೂರು ಗ್ರಾಮದ ಶಿವಲಿಂಗ ಕಂಬಾರರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಹಾಡುಗಳ ಮೇಲೆ ಹಾಲುಮತದ ಪ್ರಭಾವ ದಟ್ಟವಾಗಿದೆ. ಈ ಕೃತಿಯು ಶಿವಪದ್ಮ, ಶಿವಸಿದ್ಧಬೀರ, ಮಾಳಿಂಗರಾಯ ಮೊದಲಾದವರ ಚರಿತ್ರೆಯನ್ನು

ತಿಳಿಸುತ್ತದೆ. ಅಲ್ಲದೇ ಶಿವಸಿದ್ದ ಬೀರನ ಜನನ, ತಾಯಿಯ ಗರ್ಭದಲ್ಲಿ ಮೂಡಿದಾಗಿನಿಂದ ಅಡವಿಗೆ ಬಿಟ್ಟು ಬರುವತನಕ ಹರಿಯು ಅವನನ್ನು ಕಾಡಿದ್ದಾನೆ. ಅವನ ಬಾಲ್ಯ ಲೀಲೆಗಳು ವೀರ ಮಾಳಿಂಗರಾಯನು ಶಿಷ್ಯನಾಗಿ ದೊರೆತದ್ದು ಅವರೀರ್ವರು ಮಾಡಿದ ಪವಾಡ ಇತ್ಯಾದಿಗಳನ್ನು ಅಳವಡಿಸಿಕೊಂಡಿದ್ದಾರೆ. ಪ್ರಸ್ತುತ ಅಧ್ಯಯನಕ್ಕಾಗಿ ಈ ಭಿನ್ನಬಗೆಯ ಮೌಖಿಕ ಆಕರಗಳನ್ನು ಬಳಸಿಕೊಂಡಿದ್ದೇನೆ.

೩. ದಾಖಲು ಆಕರಗಳು

ಇಂದಿನ ವರ್ತಮಾನದಲ್ಲಿ ಭವಿಷ್ಯವನ್ನು ಕಟ್ಟಲು ಮುಖ್ಯವಾಗಿ ಬೇಕಾದದ್ದು ಚರಿತ್ರೆ. ಚರಿತ್ರೆಯನ್ನು ಅರಿತುಕೊಳ್ಳುವುದಕ್ಕೆ ಮತ್ತು ಕಟ್ಟುವುದಕ್ಕೆ ದಾಖಲು ಸಾಹಿತ್ಯ ಮುಖ್ಯ ಆಕರಗಳಾಗುತ್ತವೆ. ದಾಖಲೆಗಳಲ್ಲಿ ಅಧಿಕವಾಗಿ ಶಾಸನ ಸಾಹಿತ್ಯವನ್ನು ವಿರಳವಾಗಿ ಸನ್ನದು ನಿರೂಪಗಳು, ಕೈಫಿಯತ್ತು, ಕಡತ, ಬಖೈರು ನಾಮಗಳನ್ನು ಮುಂತಾದುವುಗಳನ್ನು ಮುಖ್ಯವಾಗಿ ಗುರುತಿಬಹುದು. ದಾಖಲು ಸಾಹಿತ್ಯದ ಪ್ರಕಾರಗಳನ್ನು ಕುರಿತು ಡಾ. ಕೆ. ರವೀಂದ್ರನಾಥರು ತಮ್ಮ ಕನ್ನಡ ದಾಖಲು ಸಾಹಿತ್ಯ ಕೃತಿಯಲ್ಲಿ ಹೀಗೆ ವರ್ಗೀಕರಿಸಿದ್ದಾರೆ.[೫]



ಲಿಪಿ ಮಾಧ್ಯಮದಿಂದ ಹುಟ್ಟಿಬಂದ ಸಾಹಿತ್ಯದಲ್ಲಿ ಒಂದು ಕಾವ್ಯ ಸಾಹಿತ್ಯ ಇನ್ನೊಂದು ದಾಖಲು ಸಾಹಿತ್ಯ ಎಂದಿರುವ ಎಂ.ಎಂ. ಕಲಬುರ್ಗಿಯವರು ಕರ್ನಾಟಕದ ಶಾಸನಗಳು ಸಾಹಿತ್ಯಕ್ಕೆ ಸಾಹಿತ್ಯ ದಾಖಲೆಗೆ ದಾಖಲೆ ಎನಿಸಿವೆ ಎಂದು ಶಾಸನಗಳ ಮಹತ್ವವನ್ನು ತಿಳಿಸಿದ್ದಾರೆ. ಹೀಗೆ ರಾಜಕೀಯ, ಧಾರ್ಮಿಕ, ಐತಿಹಾಸಿಕ, ಸಾಮಾಜಿಕ ಬದುಕನ್ನು ಚಿತ್ರಿಸುವ ಮತ್ತು ಇತಿಹಾಸ ರಚನೆಗೆ ದಾಖಲು ಸಾಹಿತ್ಯ ಪ್ರಮುಖ ಆಕರಗಳಾಗಿವೆ.[೬]

ದಾಖಲು ಸಾಹಿತ್ಯ ಹುಟ್ಟಲು ಕಾರಣ ನಡೆದ ವಿಷಯಗಳನ್ನು ನಂತರದ ತಲೆಮಾರಿಗೆ ತಿಳಿಸುವುದು ಮತ್ತು ಮನುಷ್ಯನ ಮಾತಿನಲ್ಲಿನ ನಂಬಿಕೆ ಹೋದಾಗ ಅಂದರೆ ತಾನಾಡಿದ ಮಾತನ್ನು ಆಡಿಯೇ ಇಲ್ಲವೆಂದು ಭಾಷೆಗೆ ತಪ್ಪಿದಾಗ ಮೌಖಿಕ ಒಪ್ಪಂದವನ್ನು ದಾಖಲೆಯಾಗಿ ಹಿಡಿದಿಡುವ ಪ್ರಯತ್ನದ ಫಲವಾಗಿ ದಾಖಲೆಗಳು ಹುಟ್ಟಿಕೊಂಡಿವೆ. ಅದ ಕಾರಣ ನುಡಿದುದೆ ತಾಮ್ರಶಾಸನಂ, ಕಲ್ಲೊಳಿಟ್ಟ ಅಕ್ಕರ ಇವನ ಮಾತು ಎಂದರೆ ಬಂಡಿನ ಮೇಲೆ ಬರವಣಿಗೆಯುಳ್ಳ ಎಂಬ ಹೇಳಿಕೆಗಳನ್ನು ಶಾಸನಗಳಲ್ಲಿ ಕಾಣಬಹುದು. ಇದು ಮಾತಿಗೆ ಇದ್ದ

ಬೆಲೆಯನ್ನು ತಿಳಿಸುತ್ತದೆ. ಅಕ್ಷರ ಬರುವುದಕ್ಕಿಂತ ಮುಂಚೆ ಮಾತುಗಳೇ ಶಾಸನಗಳಾಗಿದ್ದವು. ಅಕ್ಷರ ಬಳಿಕೆ ಬಂದ ನಂತರ ಮಾತು ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. ಅಕ್ಷರಕ್ಕಿಂತ ಕನಿಷ್ಟವಾದದ್ದು ಎನ್ನುವ ಪರಿಕಲ್ಪನೆಯನ್ನು ಅಥವಾ ಹಣೆಪಟ್ಟಿಯನ್ನು ಕಟ್ಟಿಕೊಂಡು ವಿಸ್ಮೃತಿ ಆಗುತ್ತ ಬಂತು ದಾಖಲು ಸಾಹಿತ್ಯಗಳು. ವ್ಯಕ್ತಿಗಳ ಗುಣ ಕುರಿತಾಗಿವೆ. ದಾಖಲೆಗಳಿಗೆ ಪ್ರತಿ ದಾಖಲೆಗಳನ್ನು ಸೃಷ್ಟಿಸಿ ಮನುಷ್ಯ ತನ್ನ ಕುಟಿಲ ಬುದ್ಧಿಯನ್ನು ಪ್ರಕಟಿಸಲು ಇಂಥ ಕೃತ್ಯಗಳನ್ನು ತಪ್ಪಿಸುವುದಕ್ಕಾಗಿ ಬರೆದವನ, ಬರೆಸಿಕೊಳ್ಳುವವನ, ಬರೆಸಿ ಕೊಟ್ಟವನ, ಕಂಡವರ ಕೇಳಿದವರ ಸಾಕ್ಷಿ ಸಹಿ ಹಾಕಿದವರ ವಿವರಗಳನ್ನು ದಾಖಲಿಸಲಾಗಿದೆ. ಹೀಗೆ ಅಂಕಿತ ಮುದ್ರೆಗಳಿಂದ ಸಮಸ್ತ ದೈವದ ಸಮ್ಮುಖದಲ್ಲಿ ನಡೆದ ಒಪ್ಪಂದಗಳು ಲಿಪಿ ಮಾಧ್ಯಮದ ಮೂಲಕ ದಾಖಲೆಗಳು ಹುಟ್ಟು ಪಡೆದವು.

ದಾಖಲೆಗಳು ಜನಸಾಮಾನ್ಯರಿಗೆ ಸಂವಹನಗೊಳ್ಳಬೇಕೆಂಬ ಉದ್ದೇಶದಿಂದ ಶಿಲೆಯ ಮಾಧ್ಯಮದಲ್ಲಿ ಎರಡು ಪರಿಚಲನೆಗಳನ್ನು ಕಂಡುಕೊಂಡರು. ಒಂದು ಶಾಸನದಲ್ಲಿ ಬರೆದ ಲಿಪಿ ಮಾಧ್ಯಮ, ಇನ್ನೊಂದು ಕೊರೆಸಿದ ಶಿಲ್ಪ ಮಾಧ್ಯಮ, ಇವುಗಳಲ್ಲಿ ಲಿಪಿ ಮಾಧ್ಯಮ ಅಕ್ಷರಸ್ಥರಿಗೆ ಸಂಬಂಧಪಟ್ಟರೆ ಶಿಲ್ಪ ಮಾಧ್ಯಮ ನಿರಕ್ಷರಿಗಳಿಗೆ ಸಂಬಂಧಪಟ್ಟಿವೆ. ಈ ವಿಷಯವಾಗಿ ಡಾ. ಎಂ.ಎಂ. ಕಲಬುರ್ಗಿಯವರು ಶಿಲ್ಪಗಳು ನಿರಕ್ಷರರಿಗೆ ಶಾಸನಗಳು ಸಾಕ್ಷರರಿಗೆ ಆಯಾ ಜನಾಂಗಗಳ ಮೌಲ್ಯಗಳನ್ನು ಬೋಧಿಸುವ ಪ್ರಸಾರ ಫಲಕಗಳಾಗಿ ಅಲ್ಲಲ್ಲಿ ನಿಂತಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ.[೨] ಸುಮಾರು ಎರಡು ಸಾವಿರ ಇತಿಹಾಸವಿರುವ ಕನ್ನಡ ದಾಖಲು ಸಾಹಿತ್ಯ ಕಾಲದಿಂದ ಕಾಲಕ್ಕೆ ಅನುಗುಣವಾಗಿ ಪರಿವರ್ತನೆಗೊಳ್ಳುತ್ತ ಬಂದಿವೆ. ದಾಖಲಿಸಿಕೊಂಡ ಮಾಧ್ಯಮಗಳಲ್ಲಿ ಭಾಷೆ ಲಿಪಿಗಳಲ್ಲಿ ರೂಪ, ಸ್ವರೂಪಗಳಲ್ಲಿ ಬದಲಾಗುತ್ತಾ ಬಂದಿದ್ದರೂ ಅದರ ಒಟ್ಟು ಆಶಯ ಒಂದೇ ಆಗಿದೆ. ಚರಿತ್ರೆಯ ನಿರ್ಮಾಣಕ್ಕೆ ಕಾಗದ ಪತ್ರಗಳು ಸ್ವದೇಶಿ ವಿದೇಶಿಯರ ವರದಿ ದಾಖಲೆಗಳ ಆಕರಗಳಾಗಿ ಪರಿಣಮಿಸುತ್ತದೆ.

ಆಧುನಿಕವಾಗಿ ಮುಂದುವರಿದ ಅಲ್ಪಾಯುಷಿಗಳಾದ ಇಂದಿನ ದಾಖಲೆಗಳಿಂದ ಆಧುನಿಕ ಇತಿಹಾಸ ಕಟ್ಟುವುದು ಮುಂದಿನ ತಲೆಮಾರಿನವರಿಗೆ ಕಷ್ಟ ಸಾಧ್ಯವಾಗುತ್ತದೆ ಎಂಬುದನ್ನು ನೆನೆಸಿಕೊಂಡರೆ ದೀರ್ಘಾಯುಷಿ ಗಳಾದ ಪ್ರಾಚೀನ ದಾಖಲೆಗಳ ಬಗ್ಗೆ ಹೆಮ್ಮೆಯೆನಿಸುತ್ತದೆ. ಈ ಹಿನ್ನೆಲೆಯಲ್ಲಿ ದಾಖಲೆಗಳಲ್ಲಿ ಹಾಲುಮತದ ಬೀರಪ್ಪನ ಸಂಸ್ಕೃತಿ ಅಭಿವ್ಯಕ್ತಗೊಂಡ ವಿವರಗಳನ್ನು ಅವಲೋಕಿಸಲಾಗಿದೆ. ದಾಖಲು ಸಾಹಿತ್ಯದಲ್ಲಿ ಶಾಸನಗಳು ಪ್ರಧಾನ. ಅಲ್ಲದೇ ಬೀರಪ್ಪನಿಗೆ ಸಂಬಂಧಪಟ್ಟ ಸಾಮಾಜಿಕ ಆರ್ಥಿಕ ಮತ್ತು ಧಾರ್ಮಿಕ ವಿಚಾರಗಳ ಬಗ್ಗೆ ಶಾಸನಗಳು ಮಹತ್ವದ ಸಂಗತಿಗಳನ್ನು ಹೊರಹಾಕುತ್ತವೆ.

೧. ಶಾಸನಗಳು

ವಿಜಾಪುರ ಜಿಲ್ಲೆ ಕೊಣ್ಣೂರು ಗ್ರಾಮದಲ್ಲಿ, ಬೆಳಗಾವಿ ಜಿಲ್ಲೆ ಅಲಕನೂರು ಗ್ರಾಮದಲ್ಲಿ, ಸವದತ್ತಿ ತಾಲೂಕಿನ ಸೊಗಲದಲ್ಲಿ, ಕ್ರಿ.ಶ. ೯೮೧ರ ಶಾಸನವು ಬೆಳವಾಡಿಯ ಕುರುಬ ಸಮುದಾಯದ ಕರಿಯ ತಿಮ್ಮಯ್ಯನ

ಹೆಂಡತಿ ಕಂಚಿಕಬ್ಬೆಯ ವ್ಯಕ್ತಿತ್ವ, ಅವಳು ಸುವರ್ಣಾಕ್ಷಿ ದೇವರಿಗೆ ನೀಡಿದ ವಿಷಯಗಳನ್ನು ವಿವರಿಸುತ್ತದೆ. ಇದು ಕುರುಬರಿಗೆ ಸಂಬಂಧಿಸಿದ ಈತನಕ ದೊರೆತ ಶಾಸನಗಳಲ್ಲಿ ಮೊದಲ ಶಾಸನ ಎಂದು ತಿಳಿದುಬರುತ್ತದೆ.

೧೩ನೇ ಶತಮಾನದ ನಂತರ ಬೀರಪ್ಪನ ಶಾಸನಗಳು ಹೆಚ್ಚಾಗಿ ಕಂಡುಬರುತ್ತವೆ. ೧೩ನೇ ಶತಮಾನದಲ್ಲಿ ವ್ಯಕ್ತಿ ನಾಮಗಳು ಬೀರಪ್ಪ, ಬೀರಗಾಂವುಡ, ಬೀರೆಗೌಡ ಹಾಗೂ ಬೀರೆಹಳ್ಳಿ, ಬೀರೆಗೌಡನ ಹಳ್ಳಿ, ಬೀರನಹಳ್ಳಿ ಎನ್ನುವ ಗ್ರಾಮನಾಮಗಳ ಉಲ್ಲೇಖ ಕಂಡುಬರುತ್ತದೆ. ೧೨ನೇ ಶತಮಾನದ ನಂತರ ಕೊಣ್ಣೂರಿನ ಬೀರಪ್ಪನಿಗೆ ಸಂಬಂಧಿಸಿದ ಪ್ರಾಚೀನ ಶಾಸನ ಕ್ರಿ.ಶ. ೧೬೬೧ರ ಸಾಲಿನ ಶಾಸನದಲ್ಲಿ ಬೀರಲಿಂಗಕ್ಕೆ ಹೊಲಬಾವಿ ಕಳೆಕೊಟ್ಟರು ಎಂದಿದೆ" ಎರಡನೆಯದು ಬಾಗಲಕೋಟೆ ಜಿಲ್ಲೆ ಕೊಣ್ಣೂರು, ಬೀರದೇವರ ಗುಡಿಗೆ ಗೋಡೆಗೆ ಸೇರಿಸಿ ಕಟ್ಟಿರುವ ಶಾಸನ. ಇದರ ಕಾಲ ೧೬೨೫-೨೬ ಶಾಸನದಲ್ಲಿ ಉಲ್ಲೇಖವಾಗಿರುವ ಕಾಲವು ಅಪೂರ್ಣವಾಗಿದ್ದು ಶಕ ೧೫೪೭ ಕ್ರೋಧನಾಮ ಸಂವತ್ಸರದ ದಸಮಿ, ಸನಿವಾರವೆಂದಿದೆ. ಹೀಗಾಗಿ ಇದು ಕ್ರಿ.ಶ. ೧೬೨೫-೨೬ಕ್ಕೆ ಸಮಾನವಾಗುತ್ತದೆ. ಕೊಣಗನೂರಿನ ಭೂಸಣ್ಣಗೌಡನ ಮಗ ನಾಗಣ್ಣಗೌಡನು ಬೀರದೇವರ ದೇವಾಲಯದ ಚಂದ್ರಶಾಲೆಯನ್ನು ಕಟ್ಟಿಸಿದಂತೆ ತಿಳಿಸುತ್ತದೆ. ಕುಲಕರಣಿ ಚಿಕ್ಕಪ್ಪನನ್ನು ಇದು ಉಲ್ಲೇಖಿಸುತ್ತದೆ.

ಶಾಸನ ಪಠ್ಯ ಇಂತಿದೆ,

೧. ಬಿರಾದೇವರಾ

೨. ಶ್ರೀ ಸ್ವಸ್ತಿ ಶ್ರೀನೃಪ ಶ

೩. ಲಿವಾಹನ ಶಕೆ ೧೫೪೭

೪. ಕ್ರೋಧನಾಮ ಸಂವತ್ಸರದ

೫. ಸಮಿ ಸನಿವಾರದಲು ಕೊ

೬. ಣಗನೂರಾ ಭೋಸಂಣ ಗೌ

೭. ಡನ ಪುತ್ರ ನಾಗಂಣಗೌಡ

೮. ನು ಶ್ರೀ ಚಂದ್ರೆ

೯. ಶಾಲಿಯ ಕಟ್ಟಿದಾ ಸ

೧೦. ಮಾಪ್ತಿ ಸ್ವಾಹಸ್ತಕುಲಕ

೧೧. ರಣಿ ಚಿಕ್ಕಪ್ಪ ಸುಭಂಮಸ್ತು

ಆದರೆ ಇದಕ್ಕಿಂತಲೂ ಪೂರ್ವದಲ್ಲಿ ಶಾಸನವು ವಿಜಾಪೂರ ಜಿಲ್ಲೆಯ ಸಿಂದಗಿ ತಾಲೂಕಿನ ಗೋಲಗೇರಿಯ ಗೊಲ್ಲಾಳೇಶ್ವರ ಮಂದಿರದಲ್ಲಿರುವ ೧೬.೪.೧೦೨೭ರ ಶಾಸನದಲ್ಲಿ ಬಾಚಗೊಂಡನ ಮಂದಿರ ಎಂದು ಹೇಳಿದೆ. ಇದೇ ಮಂದಿರದಲ್ಲಿ ಕುಳಿತು ವಚನ ಬರೆದ ವಚನಕಾರನ ವೀರಗೊಲ್ಲಾಳನ ಅಂಕಿತನಾಮ ವೀರ ಬೀರೇಶ್ವರಲಿಂಗ ಮತ್ತು ವೀರ ಬೀರೇಶ್ವರ. ಇದರಿಂದ ಈ ಮಂದಿರ ಬೀರಪ್ಪನದೇ ಆಗಿದೆ. ಆ ನಂತರದು ಕ್ರಿ.ಶ. ೧೦೪೯-

೫೦ನೇ ಸಾಲಿನದು."[೯] ಅದೂ ಕೂಡ ಕೊಣ್ಣೂರಿನದೆ. ಶಾಸನದಲ್ಲಿರುವ ಬೀರಣ್ಣದೇವರಿಗೆ ದತ್ತಿ ನೀಡಿದ ಉಲ್ಲೇಖವಿದೆ. ಈ ಮಂದಿರದ ಆಚಾರ್ಯರು ಕುರುಬರು. ಇನ್ನುಳಿದ ಏಳು ಶಾಸನಗಳು ೧೨-೧೩ನೇ ೧೪೪-೫೦ನೇ ಶತಮಾನಕ್ಕೆ ಸೇರಿವೆ. ಇವುಗಳಲ್ಲಿ ಜಮಖಂಡಿಯ ಬೀರಣ್ಣದೇವನ ಅರವಟಿಗೆಗಾಗಿ ಕೋಣಗನೂರು ಮಹಾಜನರಿಂದ ಭೂಮಿ ಮತ್ತು ಗೃಹದಾನ ನೀಡಿದ ಉಲ್ಲೇಖವಿದೆ.

ಈ ಗ್ರಾಮ ಒಂದು ಕಾಲದಲ್ಲಿ ಕಲ್ಯಾಣ ಚಾಲುಕ್ಯರ ಉಪರಾಜಧಾನಿಯಾಗಿತ್ತು. ಇಲ್ಲಿರುವ ಶಾಸನದ ಪ್ರಕಾರ ಈ ಪಟ್ಟಣದ ಗ್ರಾಮದೇವತೆ ಬೀರಪ್ಪ (ಕರಿಸಿದ್ದ). ಈ ಮಂದಿರಕ್ಕೆ ಅನೇಕ ದತ್ತಿ-ದಾನಗಳು ದೊರೆತಿವೆ. ಆರನೆಯ ವಿಕ್ರಮಾದಿತ್ಯನಿಗೆ ಜಯಕರ್ಣ ಮತ್ತು ಸೋಮೇಶ್ವರ ಎಂಬಿಬ್ಬರು ಗಂಡುಮಕ್ಕಳು ಹಾಗೂ ಮೈಲಳದೇವಿ ಎಂಬ ಮಗಳು ಇದ್ದಳು. ಮಗಳನ್ನು ಇಮ್ಮಡಿ ಜಯಕೇಶಿಗೆ ಮದುವೆ ಮಾಡಿಕೊಡಲಾಗಿತ್ತು. ಇಮ್ಮಡಿ ಜಯಕೇಶಿಯು ಧಾರವಾಡ ಹತ್ತಿರದ ನರೇಂದ್ರ ಗ್ರಾಮದವನು. ಜಯಕೇಶಿಯು ಗುಲಬರ್ಗಾ ಜಿಲ್ಲೆಯ ಕಾಳಗಿ (ಕ್ರಿ.ಶ. ೧೧೦೫), ವಿಜಾಪುರ ಜಿಲ್ಲೆಯ ಸಿಂದಗಿ (ಕ್ರಿ.ಶ. ೧೧೨೦) ಮತ್ತು ಈಗಿನ ಜಮಖಂಡಿ ತಾಲೂಕಿನ ಕೊಣ್ಣೂರು (ಕ್ರಿ.ಶ. ೧೧೨೧) ಶಾಸನ ಪ್ರದೇಶಗಳ ಆಡಳಿತಾಧಿಕಾರಿ ಆಗಿದ್ದನು ಎಂಬುದನ್ನು ಇಲ್ಲಿಯ ಶಾಸನಗಳು ಉಲ್ಲೇಖಿಸುತ್ತವೆ. ಶಾಸನದ ಪಾಠ ಈ ಕೆಳಗಿನಂತಿದೆ.

ಶ್ರೀ ಸ್ವಸ್ತಿ ಸಮಸ್ತ ಭವನಾ

ತ್ರಯಂ ಶ್ರೀ ಪ್ರಿಧ್ವೀವಲ್ಲಭೇಂ

ಮಹಾರಾಜಾಧಿರಾಜ ಪರಮೇ

ಶ್ವರಂ ಪರಮಭಟ್ಟಾರಕಂ ಸತ್ಯಾ

ಶ್ರಯ ಕುಳಿತಿಳಕಂ ಚಾಲುಕ್ಯಾ

ಭರಣಂ ಶ್ರೀ ಮಜ್ಜಗದೇಕಮಲ್ಲ

ದೇವರ ವಿಜಯರಾಜ್ಯ ಮತ್ತು ರೊತ್ತರಾಭಿ...

ವಿದ್ಧಿ ಪ್ರವರ್ಧಮಾನ ಮಾಚಂದ್ರಕ್ಕ ತಾರಂ.....

ವಿರಂ ಸಲುತ್ತಮಿರೆ ಸಕವರ್ಷ ೫೦ ನೆಯ ಪೈ....

ಭವ ಎಮಗಬ ಸಂತ್ಸರದ ವೈಶಾಖ ಸುದ್ದೆ ೮ ಸೊಂ...

..............ಸ್ವಸ್ತಿ ಸಮಿಸ್ತ.............

..................ಮಹಾಸಾಮಸ್ತ ಪ್ರಚಂಣ್ಣ ರೆಬ್ಬ....

ರಸಕ ಗೊಲ್ಲಗೇರಿಯೊಳ್ತಮ್ಮ ಮಾ....

ನ್ಯೆ ದಿಳಗೆ ಬಾಚಗಾವುಣ್ಣನದೇ....

ಗುಲಕ್ಕೆ ಬಿಟ್ಟಿ ಕೇಯಿ ಮತ್ತರ

ಚನ್ನಾ ದಿತ್ಯರುಳ್ಳನ್ನೆ.....

ಬಿರಂ ಪ್ರತಿಪಾಳಿ ಸುವರ"[೧೦]

ಮಂದಿರವು ಬಾಚಗಾವುಂಡನ ದೇಗುಲ ಮಂದಿರಕ್ಕೆ ಬಿಟ್ಟಿ ಕೈಯ್ಯಮತ್ತರ ಎಂಬ ಒಕ್ಕಣೆಯಿದೆ. ಅದರ ಮುಂದಿನ ಒಂದೆರಡು ಪದಗಳು ನಾಶವಾಗಿವೆ. ಬಾಚಗಾವುಂಡ ಗೊಲ್ಲಗೇರಿ ಕುರುಬಗೇರಿಯ ಗ್ರಾಮ ಸ್ಥಳೀಯ ಆಡಳಿತಾಧಿಕಾರಿ ಆಗಿರುವುದರಿಂದ ಅವನು ಕುರುಬರ ಮುಖಂಡನೇ ಆಗಿದ್ದಾನೆಂದು ತಿಳಿದುಬರುತ್ತದೆ. ಹಲವಾರು ಶಾಸನಗಳಲ್ಲಿ ಬಾಚ, ರಾಚ, ಖಾಚ ಎಂಬ ಹೆಸರಿನ ವ್ಯಕ್ತಿಗಳು ಕುರುಬ ಕುಲಕ್ಕೆ ಸೇರಿದವರೇ ಆಗಿರುವುದು ಗಮನೀಯ. ಗೋವಳ ಪದವು ಗವುಡ, ಗಾವುಂಡ, ಗೌಳ, ಗೌಳಿಗ, ಗೋವಳ ಹೀಗೆ ರೂಪಾಂತರಗೊಂಡಿರುವುದು ಕಂಡುಬರುತ್ತದೆ. ಪ್ರಾಚೀನ ಶಬ್ದ ಕೋಶಗಳಲ್ಲಿ ಗೋ ಪದದ ಅರ್ಥ ಚತುಷ್ಪಾದಿ ಸಾಕುಪ್ರಾಣಿಯನ್ನು ಸೂಚಿಸುತ್ತದೆಯೇ ಹೊರತು ಇಂದಿನ ಆಕಳು, ಹಸು, ದನ ಎಂದಲ್ಲ. ಶಾಸನದಲ್ಲಿ ಯಾವ ಮಂದಿರವೆಂದು ಹೆಸರಿಸದಿದ್ದರೂ ಬಾಚಗಾವುಂಡ ಕುರುಬ ಕುಲದವನು ಎನ್ನುವದರಲ್ಲಿ ಯಾವ ಸಂಶಯವಿಲ್ಲ. ಪ್ರಾಚೀನ ಭಾರತವಾಸಿ ಕುರುಬರ ಕುಲದೈವರಲ್ಲಿ ಪ್ರಮುಖರೆಂದರೆ ಬ್ರಹ್ಮ, ವೀರ, ಬೀರ.

ಮಹಾರಾಷ್ಟ್ರದಲ್ಲಿ ಕಾಳಿ, ಅಮ್ಮಾ, ಮಾರಿ ಅಮ್ಮಾ, ಮಾಳಮ್ಮ ಮುಂತಾದ ಗ್ರಾಮದೇವತೆಗಳೂ ಇದ್ದರು. ನಾರಾಯಣ ಕಾಲೀಂ, ದುರ್ಗಿ, ವಿಷ್ಣು, ಆದ್ದರಿಂದ ಜೈನ ಸಾಹಿತ್ಯದ ಪ್ರಕಾರ ಬೀರಪ್ಪ ಜಿನನ ಕಂಬಳಿಧಾರಿ ರೂಪದಲ್ಲಿ ಕ್ರಿಸ್ತಪೂರ್ವ ೧೨೫೦ರಲ್ಲಿಯೇ ಪೂಜಿಸಲ್ಪಟ್ಟಿದ್ದಾನೆ. ಈ ಆಧಾರಗಳಿಂದ ಕ್ರಿ.ಪೂ. ೧೨೫೦ರ ಪೂರ್ವ ಅವನ ಅಸ್ತಿತ್ವ ಇರುವುದು ವೇದ್ಯವಾಗುತ್ತದೆ. ಕೃಷ್ಣನ ಕುರಿತು ಹೇಗೆ ಗ್ರೀಕ್ ಜನಪದ ಗಳಿವೆಯೋ ಹಾಗೆಯೇ ಬೀರಪ್ಪನ ಕುರಿತು ಇವೆ. ಗ್ರೀಕ್ ಪ್ರದೇಶದಲ್ಲಿ ಕೃಷ್ಣ ಬೀರಪ್ಪ ಅತ್ಯಂತ ಪ್ರಾಚೀನ ಲೋಕದೇವತೆಗಳು. ಇದರಿಂದ ಅಂದು ಬೀರಪ್ಪನ ಆರಾಧನೆ ಮಧ್ಯಪೂರ್ವ ಏಷಿಯಾ ಖಂಡದಲ್ಲಿಯೂ ವ್ಯಾಪಕವಾಗಿತ್ತೆಂದು ತೋರುತ್ತದೆ.

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ತಾಳಿಕಟ್ಟೆ ಗ್ರಾಮದ ಹಳ್ಳದ ಜಂಗಮ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ನೆಟ್ಟ ಶಾಸನವು ಕುರುಬರಿಗೆ ಸಂಬಂಧಿಸಿದಂತೆ ಅನೇಕ ಕುತೂಹಲಕಾರಿ ಸಂಗತಿಗಳನ್ನು ದಾಖಲಿಸಿದೆ.[೧೧] ಉದಾಹರಣೆಗಾಗಿ ಕೆಲವು ಸಾಲುಗಳನ್ನು ಗಮನಿಸಬಹುದು.

೧೦. .....

೧೧. ದಡದದೇವರಾಯ ಬೋಜರಯ ಮಲ್ಲಿರಾಯ

೧೨. ಡಾರಯ ಬುಕರಯ ಜೋಗರಾಯ ವಿತಾಕುರಬಾರಯ

೧೩. ರು ಅಳಿದರು ರಾಮಾರಾಜ ಯಕಾಟಿರಾಯರು ತಾ

೧೪. ಳೆವರತಿರುಮಲಾರಾಜಾ ದಳಿ ವಾಲಿಜಗಾಮ್ಯೆಯ ಯಿ

೧೫. ಜಯನಗರಾದ ಅಳಿದರು ಗಯಿದ ಕುರುಬಾ ಗೌ

೧೬. ದಾಗಳು ಕೋಟಲೆಯಚಿಕೋಡಾಗೌಡ ಗುಜಜಿಗು

೧೭. ಡಿಯ ಗೌಡ ಕೋಲುಕಾರಪ್ಪ ನಾಗಿಗೌಡಾ ಪೂ

೧೮. ಜಾರಿಟಿಕೋಡಾ ಲಾಕಿ ಬೋವಾನಮುದಿ ಬೋಗಪ್ಪಮು

೧೯. ದಿರೇವಣಾವಡೆಯರು ಬಾಗುರಾಜಾನಾಯಕರು ಹೋ

ವಿಜಯನಗರವನ್ನಾಳಿದವರು ಹಕ್ಕಬುಕ್ಕರೆಂದೂ, ದೊಡ್ಡಿಬೀರಗೌಡ, ಕುರುಬಗೌಡ, ಪೂಜಾರಿಗಳು, ಕೋಲಕಾರ ದಳವಾಯಿ ಮೊದಲಾದ ಹೆಸರುಗಳು ಇಲ್ಲಿ ಉಲ್ಲೇಖಗೊಂಡಿವೆ. ಆದರೆ ಶಾಸನವು ರಚನೆಗೊಂಡ ಕಾಲವನ್ನು ಮಾತ್ರ ದಾಖಲಿಸಿಲ್ಲ. ಈ ಶಾಸನವನ್ನು ದೇವಾಲಯದ ಅಂಗಳದಲ್ಲಿ ಹೂತಿದ್ದಾರೆ. ಇದಕ್ಕೆ ಕಾರಣವೇನೆಂಬುದು ವಿಚಾರಿಸಿದರೆ ಶಾಸನದ ಕಲ್ಲು, ಬಿಸಿಲು, ಮಳೆಗೆ ಹಾಳಾಗಬಾರದೆಂಬ ಉದ್ದೇಶದಿಂದ ಅಜ್ಜ ಮುತ್ತಾತರ ಕಾಲದಿಂದ ಅದನ್ನು ಭೂಮಿಯಲ್ಲಿ ಹೂಳಿಡಲಾಗಿದೆ. ಅಧ್ಯಯನಕಾರರು ಆಸಕ್ತರು ಆ ಶಾಸನ ನೋಡಬೇಕೆಂದು ಕೇಳಿದರೆ ಭೂಮಿಯನ್ನು ಅಗೆದು ಶಾಸನವನ್ನು ತೋರಿಸುತ್ತೇವೆ ಎಂದು ಅಲ್ಲಿಯ ಜನ ಹೇಳುತ್ತಾರೆ. ಹೀಗೆ ಬಚ್ಚಿಟ್ಟಿರುವ ವಿಧಾನ ಅಥವಾ ಪರಿಕಲ್ಪನೆ ಅನೇಕ ಕುತೂಹಲಗಳನ್ನು ಹುಟ್ಟಿಸುತ್ತದೆ. ಇದು ಸಂರಕ್ಷಣೆಯ ವಿಧಾನದಂತೆ ಕಂಡುಬರುತ್ತದೆ. ವಿಶೇಷವಾಗಿ ಅನ್ಯ ಧಾರ್ಮಿಯರ ಉಪಟಳಕ್ಕೆ ಒಳಗಾಗಬಾರದೆನ್ನುವ ಅಂಶವೂ ಕಂಡುಬರುತ್ತದೆ.

ವೀತಿಗೆರೆ ಗ್ರಾಮದ ವೀರಭದ್ರ ದೇಗುಲದ ಭಿತ್ತಿ ಶಾಸನ ಕ್ರಿ.ಶ. ೧೪೦೪ ರುದ್ರನ ಮಗ ವೀರಭದ್ರ ಎಂದು ಹೇಳಿವೆ.[೧೨] ಈ ಶಾಸನದಲ್ಲಿ ಲಿಂಗಪುರಾಣ ವಾಯುವಿನ ಸಂಹಿತೆಯ ರುದ್ರಸ್ಯತನಯೋ ರೌದ್ರಃ ಎಂಬ ಮಾತಿದೆ. ರುದ್ರುಪತ್ರ ವೀರಭದ್ರನೆಂಬ ಸಂಗತಿಯನ್ನು ಮುಂದಿನ ತಲೆಮಾರಿನ ಶಿವಪುರಾಣಗಳು ರುದ್ರ ಮತ್ತು ಶಿವರಲ್ಲಿ ಭೇದ ಕಾಣದೆ ರುದ್ರ, ಶಿವ ಇವರು ಪಶುಪತಿಗಳೆಂದೂ ಪಶುಪಾಲಕ ಸೈಂದವ ಸಂಸ್ಕೃತಿಯ ಪ್ರಚಾರ ಭರಾಟೆಯಲ್ಲಿ ಶಿವನನ್ನು ವೀರಭದ್ರನನ್ನಾಗಿ ಪರಿಗಣಿಸಿದವು.[೧೩] ರುದ್ರನನ್ನು ವೀರಭದ್ರನೆಂದು ರೂಪಿಸುವ ಪ್ರಯತ್ನ ನಡೆದರೂ ವೀರಭದ್ರ ರುದ್ರನ ಮಗನಲ್ಲ ಅವನು ಹೇಳಿಕೇಳಿ ಶಿವನ ಮಗ, ರುದ್ರನ ಮುಂದುವರೆದ ಗುಣಲಕ್ಷಣಗಳನ್ನು ಶಿವನಲ್ಲಿ ಕಾಣುತ್ತೇವೆ. ವೀರಭದ್ರನ ಕುರಿತು ರಚನೆಗೊಂಡ ವಾಯುವೀಯ ಶಿವ ಪುರಾಣ, ಲಿಂಗಪುರಾಣ, ಕಾಳಿಕಾಪುರಾಣ, ಸೌರಪುರಾಣ ಹಾಗೂ ವಾಮನಪುರಾಣಗಳಲ್ಲಿ ಉಲ್ಲೇಖಿಸಲ್ಪಟ್ಟ ಸಂಗತಿಗಳು ವೈವಿಧ್ಯತೆಗಳಿಂದ ಕೂಡಿವೆ.

ಅದೇ ರೀತಿ ಇನ್ನೊಂದು ಶಾಸನದಲ್ಲಿ ೧೬ನೆಯ ಶತಮಾನಕ್ಕೆ ಸೇರಿದ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟ ವೀರೇಶ್ವರ, ಪಿತ್ಥಲೇಶ್ವರ, ಬೀರೇಶ್ವರರ ಸಂಯುಕ್ತ ದೇವರ ಇನ್ನೊಂದು ಕ್ಷೇತ್ರ ಆಂಧ್ರಪ್ರದೇಶದ ಕರ್ನೂಲ ಜಿಲ್ಲೆಯ ಹಿಂದೂಪುರ ತಾಲೂಕಿನ ಲೇಪಾಕ್ಷಿಯಲ್ಲಿದೆ. ಲೇಪಾಕ್ಷಿಯು ವಿಜಯನಗರದ ಅರಸ ಅಚ್ಯುತ

ದೇವರಾಯನ (೧೫೩೦-೧೫೪೨) ಪೆನುಗೊಂಡಾ ವಿಭಾಗದ ಸಮರ್ಥ ಆಡಳಿತಗಾರ ವಿರೂಪಣ್ಣನ ಊರು. ವಿರೂಪಣ್ಣನೇ ಈ ಮಂದಿರವನ್ನು ಕಟ್ಟಿಸಿದ್ದಾನೆ. ಈತ ಜಾತಿಯಿಂದ ಕುರುಬರ ಗುರುಒಡೆಯರು. ಈ ಸಂಯುಕ್ತ ದೇವರ ಕ್ಷೇತ್ರವು ವೀರಭದ್ರನ ಕ್ಷೇತ್ರ ಇಲ್ಲಿಯ ವೀರಭದ್ರ ಬೀರಪ್ಪನಿಂದ ಶೈವೀಕರಣಕ್ಕೆ ಒಳಗಾಗದೆ ವಿಠಲ ನಿಂದಾದ್ದು ಎಂದು ಪ್ರಾಚಾರ್ಯ ಮಾಣಿಕರಾವ ಧನಫಲರ ಹೇಳುತ್ತಾರೆ.[೧೪] ವೀರಭದ್ರ ಮಂದಿರದಲ್ಲಿರುವ (ಶಕೆ ೧೪೫೯ ಕ್ರಿ.ಶ. ೧೫೩೭) ಶಿಲಾಶಾಸನದಲ್ಲಿ ವೀರಭದ್ರ ಬೀರಪ್ಪನನ್ನು ವಿಠ್ಠಲೇಶ್ವರ ಎಂದು ಸಂಬೋಧಿಸಲಾಗಿದೆ. ಅವನನ್ನು ಜನರು ವಿರೂಪಾಕ್ಷ ವಿಠ್ಠಲನೆಂದು ಕರೆಯುತ್ತಾರೆ. ಇಲ್ಲಿ ಐದಡಿ ಎತ್ತರದ ವೀರಭದ್ರನು ಆಯುಧಧಾರಿಯಾಗಿದ್ದಾನೆ. ಇದರ ಪಕ್ಕದಲ್ಲಿ ಒಂದು ಗುಂಡುಕಲ್ಲು ಇದೆ. ಇದು ವೀರಭದ್ರನಿಗಿಂತಲೂ ಅಧಿಕ ಧಾರ್ಮಿಕ ಮಹತ್ವ ಪಡೆದಿದೆ. ಆಚರಣೆಗಳ ಸಂದರ್ಭ ಭಕ್ತರು ಈ ಗುಂಡುಕಲ್ಲಿಗೆ ಮೊದಲು ಆದ್ಯತೆ ಕೊಡುತ್ತಾರೆ. ಇದು ಬೀರಪ್ಪನ ಕುರುಹು ಎಂದು ಬೇರೆ ಹೇಳಬೇಕಾಗಿಲ್ಲ. ಈ ಬದಲಾವಣೆ ಬ್ರಹ್ಮನ ಆರಾಧನೆ ಸ್ಥಗಿತಗೊಂಡ ನಂತರ ನಡೆದಿರಬಹುದು. ಮಂದಿರದ ಎರಡು ಕಂಬಗಳ ಮೇಲೆ ಉಬ್ಬುಚಿತ್ರಗಳಿದ್ದು ಅಲ್ಲಿ ಕಂಬಳಿ ಹೊತ್ತು, ನೆಲಕ್ಕೆ ಎರಡು ಕೈಗಳಿಂದ ಕೋಲನ್ನು ನೆಲಕ್ಕೆ ಊರಿ ಅದರ ಮೇಲೆ ತನ್ನ ಗದ್ದವನ್ನಿಟ್ಟು ನಿಂತ ಕುರಿಕಾಯುವ ಕುರುಬನ ಶಿಲ್ಪವಿದೆ.[೧೫]

ಅದೇ ರೀತಿ ಇನ್ನೊಂದು ಶಾಸನದಲ್ಲಿ ಬೀರಪ್ಪ ಕ್ರಿಶ್ತಪೂರ್ವದ ವ್ಯಕ್ತಿ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ. ಬೀರಪ್ಪನನ್ನು ವೀರಭದ್ರನನ್ನಾಗಿ ಮಾಡಿದ್ದು ೧೨ನೆಯ ಶತಮಾನದ ಕೊನೆಯಲ್ಲಿ. ಕರ್ನಾಟಕದಲ್ಲಿ ವೀರಭದ್ರನ ಕುರಿತು ಪ್ರಾಚೀನ ಶಾಸನ ಮಂಡ್ಯ ಜಿಲ್ಲೆಯ ರಾಯಶೆಟ್ಟಿ ಗ್ರಾಮದ ಇಮ್ಮಡಿ ಗೊಲ್ಲಾಳ ಅರಸನ ಕ್ರಿ.ಶ. ೧೧೮೫ರ ಶಾಸನ ಎಂದು ಶ್ರೀನಿವಾಸ ಪಾಡಿಗಾರ ಅವರ ಅಭಿಪ್ರಾಯ. ಆದರೆ ಅದಕ್ಕೂ ಪ್ರಾಚೀನವಾದ ಶಾಸನ ಗುಲಬರ್ಗಾ ಜಿಲ್ಲೆಯ ಶಹಪೂರ ತಾಲೂಕಿನ ಸಿರವಾಳ ಗ್ರಾಮದ ೧೧೭೮ರಲ್ಲಿ ಹುಟ್ಟಿಕೊಂಡ ಶಾಸನದಲ್ಲಿ ...... ಶಾಂತಿಮಯ್ಯ ತತುಕ್ಷಣದೊಳ ಉಲ್ಲೇಖವಿದೆ. ಇದಕ್ಕೂ ಪ್ರಾಚೀನವಾದ ಶಾಸನ ಮಂಡ್ಯ ಜಿಲ್ಲೆಯ ಮುದ್ದನಗೆರೆಯದು. ಮುದ್ದನಗೆರೆ ಮಂಡ್ಯ ಜಿಲ್ಲೆ ಮತ್ತು ರಾಯಶೆಟ್ಟಿ ಶಾಸನಗಳಲ್ಲಿ ವೀರಭದ್ರದೇವರು ಬೀರಲಿಂಗೇಶ್ವರ ಎಂಬ ಪ್ರಸ್ತಾಪವಿದೆ.[೧೬] ಮಂಡ್ಯ ಜಿಲ್ಲೆಯ ಮುದ್ದನಗೆರೆ ಮತ್ತು ರಾಯಶೆಟ್ಟಿಪುರ ಶಾಸನಗಳಲ್ಲಿ ಕೈಲಾಸದ ದೇವತೆಗಳ ಪೈಕಿ ಬೀರಪ್ಪ ವೀರಭದ್ರ ದೇವರು ಒಬ್ಬ ಎಂಬ ಪ್ರಸ್ತಾಪವಿದೆ.

"…….ಸ್ವಸ್ತಿ ಶ್ರೀ ಮನ್ನುಮಹಾಮಹಿಮನಪ್ಪ ಶ್ರೀ ಕೈಲಾಸ ಪುರವರಾಧೀಶ್ವರಂ……..

ಪಂಚವಕ್ರ ಪರಮೇಶ್ವರನ ವೋಲಗದ ಭೃಂಗೀಶ…. ಸಾಲೋಕ್ಯ ಸಾಮೀಪ್ಯ ಸಾರೂಪ್ಯ……

ದೇವಲೋಕದ ದೇವಗಣಂಗಳು ವೀರಭದ್ರ……

ಸ್ವಸ್ತಿ ಶ್ರೀ… ಮಾಡಿದ ಅಸಂಖ್ಯಾತ …… ವೀರಭದ್ರ ದೇವರು

ಮುಖ್ಯವಾದ ವೀರಸೋಮನಾಥಪುರದ ಭಿತ್ತಿ".[೧೭]

ಈ ಶಾಸನಗಳಲ್ಲಿ ವೀರಭದ್ರನ ಪೂರ್ವಾವತಾರ ಬೀರಪ್ಪ ರಾಮಾನುಜರ (೧೦೧೭-೧೧೩೭) ಜೀವಿತಾವಧಿಯಲ್ಲಿ ಬೀರಪ್ಪ ವೀರಭದ್ರನಾಗಿರಬಹುದೆಂದು ಊಹಿಸಬಹುದು.

ಇನ್ನೊಂದು ಶಾಸನ ಬಾಳೇಹಳ್ಳಿ ಬಾಳೆಹೊನ್ನೂರುದಲ್ಲಿರುವ ರೇವಣ್ಣಸಿದ್ದರ ಮಠದ ಎದುರು ಇರುವ ವೀರಭದ್ರ ಮಂದಿರ ಬೀರಪ್ಪನ ಮಂದಿರವೆಂದು ಹೇಳಲಾಗುತ್ತಿದೆ. ಈ ಮಂದಿರದ ಎದುರು ಇರುವ ಮೂರು ಶಾಸನಗಳು ಹಾಗೂ ಗ್ರಾಮದ ತಾಲೂಕು ಕೇಂದ್ರವಾದ ಕೊಪ್ಪದಲ್ಲಿರುವ ಶಾಸನ ಹೀಗೆ ಒಟ್ಟು ನಾಲ್ಕು ಶಾಸನಗಳು ಸ್ಪಷ್ಟಪಡಿಸಿವೆ. ಬೀರಪ್ಪ ಮತ್ತು ವೀರಭದ್ರನ ಮಧ್ಯ ವೀರಣ್ಣ, ಈರಣ್ಣ ಎಂಬ ದೈವಾವಸ್ಥೆಯಿದೆ. ವೀರೆಶ್ವರ, ಬೀರೇಶ್ವರ, ಬೀರಪ್ಪನನ್ನು ಕುರಿತು ಶಾಸನದಲ್ಲಿ ..... ಬಾಳೆಹಳ್ಳಿಯ ಬೀರೇವರ ದೇವರ ಹಿಮಿತಪಡಿಗೆ ಬಾಳೆಹಳ್ಳಿ ವರಹ..... ಎಂಬ ಉಲ್ಲೇಖವಿರುವುದರಿಂದ ಬಾಳೆಹಳ್ಳಿಯ ಇಂದಿನ ವೀರಭದ್ರ ಮೂಲತಃ ವೀರೇಶ್ವರ ಇಲ್ಲವೇ ಬೀರೇಶ್ವರನೇ ಆಗಿದ್ದಾನೆ. ೭.೧.೧೪೧೩ ಬಾಳೆಹಳ್ಳಿಯ ಶಾಸನದಲ್ಲಿ[೧೮] ಬಾಳೆಹಳ್ಳಿಯ ಕುಲದೊಳಗೆ ಹರಿಯಪ್ಪ ಒಡೆಯರು, ವೀರಪ್ಪ ಒಡೆಯರು, ಕುಮಾರ, ಬೀರಪ್ಪ ಒಡೆಯರ ಕುಮಾರನ ಅಂಗಧ ಹರಿಯಪ್ಪ ಒಡೆಯರು ಪ್ರಧಾನ ಮಲ್ಲಪವೊಡೆಯರ ಮನೆಯ ಅಧಿಕಾರಿ ಬೊಮ್ಮರಸರು ರಾಜ್ಯಭ್ಯದ ಕಾಲದಳು ನಂದನ ಸಂವತ್ಸರ ವೀರೇಶ್ವರ, ಬೀರೇಶ್ವರ ದೇವರಿಗೆ ಬಿಟ್ಟ ದಾನ ಎಂಬ ಉಲ್ಲೇಖವಿದೆ. ಅಂದರೆ ಬಾಳೆಹಳ್ಳಿಯಲ್ಲಿರುವ ಇಂದಿನ ವೀರಭದ್ರನ ಮಂದಿರವು ೧೪೧೩ರಲ್ಲಿ ವೀರೇಶ್ವರ ಬೀರೇಶ್ವರನ ಮಂದಿರವೇ ಆಗಿತ್ತು. ಆದ್ದರಿಂದಲೇ ಈ ಮಂದಿರದ ದಾನಿಗಳೆಲ್ಲರೂ ಕುರುಬ ಕುಲದ ಗುರುವರ್ಗದ ಒಡೆಯರಾಗಿದ್ದೇ ಇದಕ್ಕೆ ಸಾಕ್ಷಿ. ಇವರೆಲ್ಲರ ಮನೆದೇವರು ಬೀರಪ್ಪ ಎನ್ನುವುದರಲ್ಲಿ ಎರಡು ಮಾತಿಲ್ಲ. ಇದರಿಂದ ವೀರಭದ್ರನ ಹೆಸರು ಪ್ರಸ್ತುತ ಶಾಸನ ಕಾಲದಲ್ಲಿ ವೀರೇಶ್ವರ ಬೀರೇಶ್ವರ ಎಂದೇ ಇದ್ದು ತರುವಾಯ ವೀರಭದ್ರ ಎಂದು ರೂಪಾಂತರಗೊಂಡಿದೆ. ಆದ್ದರಿಂದ ಬೀರಪ್ಪ ವೀರಪ್ಪನಾಗಿ ನಂತರ ವೀರಭದ್ರನಾಗಿ ರೂಪಾಂತರಗೊಂಡನು.

೧೫೫೫ರ ಮಳವಳ್ಳಿ ತಾಲೂಕಿನ ಶಾಸನದಲ್ಲಿ ಬೀರಪ್ಪನನ್ನು ಲಿಂಗದ ಬೀರ, ಬೀರಲಿಂಗ ಎಂದು ಸಂಬೋಧಿಸಲಾಗಿದೆ. ಇಲ್ಲಿಯ ರೇವಣಸಿದ್ಧನ ಗೋತ್ರಕ ಸ್ವಾಮಿ ಬೀರಣ್ಣ ಬೀರಪ್ಪನೇ ಆಗಿದ್ದಾನೆ. ಬೀರಣ್ಣ, ಬೀರಲಿಂಗ, ಲಿಂಗದ ಬೀರಣ್ಣ ಎಂಬ ಪದಗಳನ್ನು ಶಾಸನ ಮತ್ತು ಸಾಹಿತ್ಯಗಳಲ್ಲಿ ಬಳಸಿದ್ದನ್ನು ಕಂಡರೂ ಅನೇಕ ವಿದ್ವಾಂಸರು ವೀರಭದ್ರ ಎಂದು ಚರ್ಚಿಸಿದ್ದಾರೆ. ಇದರಿಂದ ಬೀರಪ್ಪನೇ ಇಂದಿನ ವೀರಭದ್ರ. ಕೆಲವು ವಿದ್ವಾಂಸರು ವೀರಭದ್ರ ಮತ್ತು ಬೀರಪ್ಪ ಅಭಿನ್ನರು ಎಂದು ವಾದಿಸಿದ್ದಾರೆ. ಆದ್ದರಿಂದಲೇ ಎಂ.ಜಿ. ನಾಗರಾಜ ಅವರು ರುದ್ರ, ವೀರಭದ್ರ, ಶಿವನನ್ನು ಸಮಾನಾರ್ಥವಾಗಿ ಬಳಸಿಕೊಂಡರೆ ಯಾವ ಬಾಧಕವಿಲ್ಲ ಎಂದು ಹೇಳುತ್ತಾರೆ.[೧೯]

ಬನವಾಸಿಯ ಮಧುಕೇಶ್ವರ ದೇಗುಲದ ಆವರಣದಲ್ಲಿ ಸ್ಥಾಪಿಸಲ್ಪಟ್ಟ ವೀರಭದ್ರ ಮಂದಿರದಲ್ಲಿರುವ ಶಾಸನ(೧೩೬೯)ದಲ್ಲಿ ಬಾಳೆಹಳ್ಳಿಯ ರಂಭಾಪುರ ಪೀಠದ ಗೋತ್ರ ಪುರುಷ ವೀರಭದ್ರನಿಗೆ ವಿರೂಪಣ್ಣ ಒಡೆಯರ ಮಹಾಪ್ರದಾನ ಮಾದರಸ ಒಡೆಯರು ಭೂದಾನ ನೀಡಿದ ಉಲ್ಲೆಖವಿದೆ. ಈ ಹಿಂದೆ ಚರ್ಚಿಸಿದಂತೆ ವಿರೂಪಣ್ಣ ಒಡೆಯು ಕುರುಬರ ಗುರುವರ್ಗದ ಒಡೆಯರು. ಅದರಂತೆ ಅವನ ಪ್ರಧಾನಿಯೂ ಕುರುಬ ಕುಲದ ಒಡೆಯರ ಪಂಗಡಕ್ಕೆ ಸೇರಿದವನು. ಇವರು ಇಲ್ಲಿ ಮಾಡಿರುವ ಸೇವೆ ಕುರುಬ ಕುಲದ ಕುಲದೇವರ ಸೇವೆ.

ಇದರಿಂದ ಬೀರಣ್ಣ, ವೀರಣ್ಣ, ಈರಣ್ಣ, ಬೀರ, ವೀರ, ರುದ್ರ, ಭದ್ರ ಮುಂತಾದ ನಾಮಗಳು ಬೀರಪ್ಪನ ಪರ್ಯಾಯ ನಾಮಗಳು ಎನ್ನುವುದು ವಿವಿಧ ಪ್ರದೇಶಗಳಲ್ಲಿ ಕಂಡುಬರುವ ಶಾಸನಗಳಲ್ಲಿ ಕಂಡುಬರುತ್ತವೆ.

ಶಿಗ್ಗಾವಿ ತಾಲೂಕಿನ ಹೊಟ್ಟೂರು ಗ್ರಾಮದ ಇಂದಿನ ಬಸವಣ್ಣನ ಗುಡಿಯ ಬಾಗಿಲು ಎಡಭಾಗದಲ್ಲಿ ವಿಕ್ರಮಾದಿತ್ಯ-IV ನ ಕಾಲದ ಶಾಸನ(ಕ್ರಿ.ಶ. ೧೦೮೭)ದಲ್ಲಿ ತಿಕ್ಕಿಮಯ್ಯಾದಿಗಳಿಂದ ಅಲ್ಲಿಯ ಬೀರೇಶ್ವರ ದೇವರಿಗೆ ಸುಂಕದಾನದ ಉಲ್ಲೇಖವಿದೆ.[೨೦] ಈ ಸಮಯದಲ್ಲಿ ಬೀರೇಶ್ವರನು ವೀರಭದ್ರನಾಗಿ ಹೆಚ್ಚು ಪ್ರಚಾರಕ್ಕೆ ಬಂದಿರಲಿಲ್ಲವೆಂದು ಈ ಶಾಸನ ಸ್ಪಷ್ಟಪಡಿಸುತ್ತದೆ.

ಬೀರಪ್ಪನ ಅಥವಾ ವೀರಭದ್ರನ ಮೂಲ ನೆಲೆಗಳೆಲ್ಲವೂ ಕಲ್ಯಾಣ ಚಾಲುಕ್ಯರ ಆಡಳಿತಕ್ಕೆ ಒಳಪಟ್ಟ ಪ್ರದೇಶಗಳಲ್ಲಿಯೇ ಹೆಚ್ಚು ಕಂಡುಬರುತ್ತವೆ. ರೇವಣಸಿದ್ಧ ನೆಲೆನಿಂತ ಮತ್ತು ಸಂಚರಿಸಿದ ಪ್ರದೇಶಗಳಲ್ಲಿಯೆ ಬೀರಪ್ಪ ವೀರಭದ್ರನ ಕ್ಷೇತ್ರಗಳನ್ನು ಕಾಣಬಹುದು. ಕಲ್ಯಾಣ ಚಾಲುಕ್ಯರ ಉಪರಾಜಧಾನಿಗಳಾದ ಕೊಣ್ಣೂರು (ಜಮಖಂಡಿ ತಾ.) ಅಲಕನೂರು (ರಾಯಬಾಗ ತಾ.) ಹೊನ್ನೂರು (ಮಂಗಳವಡೆ ತಾ.) ಶೊಡೋಲಿ (ಹಾತಕಣಗಿಲೆ ತಾ. ಕೊಲ್ಲಾಪೂರ ಜಿಲ್ಲೆ), ಅರೇವಾಡಿ (ಇಚಲಕರಂಜಿ ತಾ.) ರಾಯಬಾಗ ತಾಲೂಕು ಮುಂತಾದ ಕಡೆಗೆ ಬೀರಪ್ಪನ ಪ್ರಸಿದ್ಧ ಮಂದಿರಗಳಿವೆ. ಬೆಂಗಳೂರು, ಮೈಸೂರು, ಮಂಡ್ಯ, ಚಾಮರಾಜನಗರ[೨೧] ಚಿತ್ರದುರ್ಗ, ತುಮಕೂರು, ಬಿಜಾಪುರ, ಬೆಳಗಾವಿ, ಗುಲಬರ್ಗಾ, ಕೊಲ್ಲಾಪುರ, ಸೋಲಾಪುರ, ಧಾರವಾಡ, ಬಾಗಲಕೋಟೆ ಜಿಲ್ಲೆಗಳಲ್ಲಿಯ ಪ್ರತಿಯೊಂದು ಗ್ರಾಮಗಳ ಕುರುಬರ ಕೇರಿಗಳಲ್ಲಿ ಬೀರದೇವರ ಮಂದಿರಗಳಲ್ಲಿ ಕೆಲವು ಬೀರಪ್ಪನಿಗೆ ಸಂಬಂಧಪಟ್ಟ ಶಾಸನಗಳು ದೊರೆಯುತ್ತವೆ.

ವಾರಂಗಲ್ಲು ಕಾಕತೀಯರು ಮೂಲತಃ ಕರ್ನಾಟಕದವರು. ಇವರ ಕುಲದೈವ ಬೀರಪ್ಪ. ಇವರ ಆಡಳಿತ ಕೇಂದ್ರವಾದ ಕೊಲ್ಲಿಪಾಕಿಯಲ್ಲಿ ವೀರಭದ್ರ (ಬೀರಪ್ಪ) ಮಂದಿರ ಕಟ್ಟಿಸುವುದರ ಮೂಲಕ ಕೊಲ್ಲಿಪಾಕಿಯ ವೀರಭದ್ರ ಬೀರಪ್ಪ ಅವರ ಕುಲದೇವತೆ. ಆ ಕಾರಣಕ್ಕಾಗಿಯೇ ವೀರಭದ್ರ ಅವರ ರಾಜದೇವತೆಯೂ ಆಗಿದ್ದ. ಕ್ರಿ.ಶ. ೧೩೧೪ರ ತಗರಪುರ ಶಾಸನದಲ್ಲಿ ..... ಓರಂಗಲ್ಲಾ ಬೀದೇಯ ಪ್ರವರ ಪುರವರೋ ವೀರರುದ್ರಾವನಿಶೋ ಎಂದು ಓರಂಗಲ್ ಕಾಕತೀಯರ ರಾಜದೇವತೆಯ ಸ್ಮರಣೆ ಇದೆ.[೨೨]

ವಿರೂಪಾಕ್ಷ ಶಬ್ದದ ಅರ್ಥ ಅಸಮನೇತ್ರನು ಅವನೇ ಶಿವ. ಬೀರಪ್ಪ, ವೀರಭದ್ರನೇ ವಿರೂಪಾಕ್ಷನಾದ ಬಗ್ಗೆ ಪ್ರಜ್ಞಾವಂತ ಜನರಿಗೆ ತಿಳಿದೇ ಇದೆ. ವಿರೂಪಾಕ್ಷನ ಭವ್ಯಮಂದಿರ ಇರುವುದು ಹಂಪೆ. ವಿಜಯನಗರ ರಾಜರು ತಮ್ಮ ಶಾಸನಗಳ ಹಾಗೂ ರಾಜಾಜ್ಞೆಗಳ ಕೊನೆಯಲ್ಲಿ 'ಶ್ರೀ ವಿರೂಪಾಕ್ಷ' ಎಂಬ ಒಪ್ಪ ಬಳಸುತ್ತಿದ್ದರು. ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕರಾದ ಹಕ್ಕಬುಕ್ಕರು ಕುರುಬ ಕುಲದ ಒಡೆಯರ ಪಂಗಡಕ್ಕೆ ಸೇರಿದವರು. ಆದ್ದರಿಂದ ಹಂಪೆಯಲ್ಲಿ ಸುಮಾರು ೫೦ಕ್ಕೂ ಮಿಗಿಲಾಗಿ ವಿವಿಧ ಭಂಗಿಯಲ್ಲಿ ವೀರಭದ್ರನ ವಿಗ್ರಹಗಳಿವೆ. ಭಾರತದಲ್ಲಿ ಒಂದೇ ದೇವತೆಯ ಇಷ್ಟೊಂದು ವಿಗ್ರಹಗಳಿರುವುದು ಇದೊಂದೆ ಸ್ಥಳ ಮಾತ್ರ. ಬೀರಪ್ಪ, ವೀರಭದ್ರ ಸಂಪ್ರದಾಯವೇ ಕಾಲಕ್ರಮೇಣ ವಿರೂಪಾಕ್ಷ ಸಂಪ್ರದಾಯವಾಗಿ ಪರಿವರ್ತನೆಗೊಂಡಿದೆ. ಬೀರಪ್ಪ

ಅಥವಾ ವೀರಭದ್ರನು ಮುಂದೆ ವಿರೂಪಾಕ್ಷ ಎಂಬ ರೂಪ ಪಡೆಯಿತು ಎಂದು ಡಾ. ಎಂ.ಎಂ. ಕಲಬುರ್ಗಿಯವರು ಅಭಿಪ್ರಾಯಪಟ್ಟಿದ್ದಾರೆ.

ಹಾವೇರಿ ಜಿಲ್ಲೆಯ ಬಂಕಾಪುರದಲ್ಲಿ ಶ್ರೀರಂಗನ ನಾಗರಾಯನ ಭಂಗಿಯ ವಿಗ್ರಹಗಳು ೧೪೧೪ರಲ್ಲಿ ದೊರೆಯುತ್ತಿವೆ. ಕನಕದಾಸರ ಮನೆ ದೇವರು ರಂಗನಾಥ. ಇದು ಅವರ ದೈವ ಬೀರಪ್ಪನೆ ಆಗಿರುವಂಥ ಸೂಚನೆ ನೀಡುತ್ತದೆ. ಇದಕ್ಕೆ ಕನಕದಾಸರ ಪೂರ್ವಜರಲ್ಲಿ ಬೀರಪ್ಪ ಎನ್ನುವ ನಾಮಾಂಕಿತರು ಇರುವುದೇ ಆಧಾರ, ಕಾಗಿನೆಲೆಯ ಶಾಸನದಲ್ಲಿ (೧೦೭೨) ದೇಸಿಗೆ ಛಾತ್ರರು ಶಿಷ್ಯರು, ಮಠದ ಜೀಯರಗಳಿಗೆ ದಾನ ಬಿಟ್ಟ ವಿಷಯವಿದೆ. ಬೀರಪ್ಪನಿಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಶಾಸನಗಳಲ್ಲಿ ಹೇಳಲಾಗಿದೆ.

ಕ್ರಿ.ಶ. ೯೦೦ರ ಬೇವಿನಕುಪ್ಪೆಯ ವೀರಗಲ್ಲಿನಲ್ಲಿ ಬೀರಕ್ಕ ಎಂಬ ಸ್ತ್ರೀಯ ಹೆಸರಿದೆ.

ಕ್ರಿ.ಶ. ೯೩೦ರ ಹಿರೇನಂದಿಯ ವೀರಗಲ್ಲಿನ ಶಾಸನ ಕವಿ ಬೀರಯ್ಯ

ಕ್ರಿ.ಶ. ೯೦೦ರಿಂದಲೇ ಪ್ರಚಲಿತವಿರುವ ಬೀರಕ್ಕ ಬೀರಯ್ಯ ಎಂಬ ಈ ವ್ಯಕ್ತಿನಾಮಗಳು ಬಹುಶಃ ಬೀರದೇವರ ಆರಾಧನೆಯಿಂದಲೇ ರೂಢಿಗೆ ಬಂದಿರಬಹುದು.

ಕ್ರಿ.ಶ. ೧೧೮೩ರ ಅರಸೀಕೆರೆ ತಾ. ಹಾಸನ ಜಿಲ್ಲೆಯ ಕುರುವಂಕ ಈಶ್ವರ ದೇವಸ್ಥಾನದೊಳಗೆ ರಂಗಮಂಟಪ ದಲ್ಲಿ ನೆಟ್ಟಿರುವ ಕಲ್ಲು ಶಾಸನ (ಕ್ರಿ.ಶ. ೧೧೮೬ರಲ್ಲಿ) ಹೊಯ್ಸಳ ವೀರಬಲ್ಲಾಳನ ಕಾಲದ್ದಾಗಿದೆ. ಈ ಶಾಸನದಲ್ಲಿ ಬೀರದೇವಾಲಯವನ್ನು ಕಟ್ಟಿಸಿದ್ದು, ಬೀರದೇವರನ್ನು ಪ್ರತಿಷ್ಠಾಪಿಸಿದ ವಿವರಗಳಿವೆ. ಇಲ್ಲಿ ೧೭ನೇ ಶತಮಾನದ ಬೀರಲಿಂಗೇಶ್ವರ ದೇವಾಲಯ ಕಂಡುಬರುತ್ತದೆ. ಇದು ಕುರುಬರ ಮುಖ್ಯ ನೆಲೆಯಾಗಿದೆ. ೧೨ನೇ ಶತಮಾನದಲ್ಲಿ ದಾನದತ್ತಿಗಳನ್ನು ನೀಡಿದ ಉಲ್ಲೇಖವಿದೆ. ಕಾಲಭೈರವ, ಸಪ್ತಮಾತೃಕೆಯರು, ಭೈರವನ ಪಾದದ ಶಿಲ್ಪಗಳು ಕಂಡುಬರುತ್ತವೆ. ೧೨ನೆಯ ಶತಮಾನದಲ್ಲಿ ಹೊಯ್ಸಳ ಕಾಲದ ಬಿಟ್ಟಿಯಂಬವನ್ನು ಕಟ್ಟಿಸಿದನು ದಾನದತ್ತಿಗಳನ್ನು ಮಹಾದೇವ ಅರಸರು ೪೦ ಜನ ಧಾನವನ್ನು ಕೊಡುವುದು ತಿಳಿಯುತ್ತದೆ. ಶಾಸನದ ಪಾಠ ಈ ಕೆಳಗಿನಂತಿದೆ.

ಬಿಟ್ಟಿಯ್ಯಂ ಪರಮಾರಾಧ್ಯಂ ಬೀರೇಶ್ವರಮಂ ಪ್ರಿಯದಿಂ ಪ್ರತಿಷ್ಠೆಯಂ
ಮಾಡಿಸಿದಂ ಜನವಿನುತೆ ದಾಸಿಯಕ್ಕನೆ ತನಗೆ
ಸಹೋದರಿಯ ಬೀರಿಸೆಟ್ಟಿಯ ಭಾವಂ ವಿನುತ
ನೆನೆ ಬಿಟ್ಟೆಯಂ ಸಜ್ಜನನೀ ಬೀರೇಶ್ವರಾಲಯ
ಮನೆತ್ತಿಸಿದಂ ಸ್ವಸ್ತಿ ಶ್ರೀ ಸಕವರ್ಷ ೧೧೦೭ನೆಯ ವಿಸ್ವಾವ
ಸುಸಂವತ್ಸರದ ಪೌಷ್ಯದಮವಾಸ್ಯೆ ಸೋಮವಾರ
ವಿತೀಪಾ ತಸಂಕ್ರಮಾಣದಂದು ಶ್ರೀ ಬೀರೇಶ್ವರ
ದೇವರ ನಿತ್ಯನಿವೇದ್ಯಕ್ಕಂ ನಂದಾದೀವಿಗೆಗಂ

ಜೀರ್ಣೋದ್ಧಾರಕ್ಕಂ ಪೂಜಾರಿಪರಿಚಾರಕರಾಹಾರ

ದಾನಕ್ಕುವೆಂದು ಸ

ಮಗ್ರ ಪ್ರಜೆಗಳ ಸಂವಿದಾನದಲು ಮಹದೇವರಸ

ನುಂ ಕಳುವ ಮಲ್ಲೆಯಣೊಳಗಾದ ನಾಲ್ವತ್ತು ಮನುಷ್ಯ[೨೨]

ಎರಡು ಗರ್ಭಗುಡಿ ಒಂದು ಭಾಗವನ್ನು ಪ್ರತಿಷ್ಠಾಪಿಸಿದ್ದಾರೆ. ನಂದಿಶಿಲ್ಪ, ಪಾರ್ವತಿ ಶಿಲ್ಪ ವಾಸ್ತುಶಿಲ್ಪದ ಎರಡು ಕಂಬಗಳ ಶೈಲಿಯ ಹಿನ್ನೆಲೆಯಲ್ಲಿ ಗುರುತಿಸಿ ಇವು ಹೊಯ್ಸಳ ಕಾಲಾದ್ದು ಎಂದು ಸ್ಪಷ್ಟಪಡಿಸಲಾಗಿದೆ. ಇನ್ನೊಂದು ಶಾಸನದಲ್ಲಿ ೧೧೦೮ರಲ್ಲಿ ಕರ್ಣಲದೇವನ ವೀರನಾಥದೇವ ಎಂದು ಕಂಡುಬರುತ್ತದೆ. ಶಾಸನದಲ್ಲಿ ಬಿಟ್ಟೇಯನು ತನ್ನ ಪರಮಾರಾಧ್ಯ ದೈವನಾದ ಬೀರೇಶ್ವರ ದೇವರಿಗೆ ಕುರುವಂಕದಲ್ಲಿ ಗುಡಿಕಟ್ಟಿಸಿ ದತ್ತಿ ನೀಡಿದ್ದನ್ನು ಹೇಳಿದೆ.

ಇಂದಿಗೂ ಕುರುವಂಕ ಗ್ರಾಮದಲ್ಲಿರುವ ಪಾಳು ಈಶ್ವರ ಗುಡಿ ಬೀರೇಶ್ವರ ಗುಡಿಯಲ್ಲಿ ಪ್ರಸ್ತುತ ಶಿಲಾಶಾಸನವಿದೆ. ಈ ಬೀರೇಶ್ವರ ಗುಡಿಯ ಹೊರಭಾಗ ಶಿಥಿಲವಾಗಿದ್ದರೂ, ಒಳಭಾಗ ಸುಸ್ಥಿತಿಯಲ್ಲಿದೆ. ಗರ್ಭಗುಡಿಯ ಪೀಠದಲ್ಲಿ ಸುಮಾರು ಎರಡು ಅಡಿ ಎತ್ತರದ ಪಾಣಿಪೀಠ ಸಹಿತವಾದ ಶಿವಲಿಂಗವಿದ್ದು ಶಿವಲಿಂಗಕ್ಕೆ ಅಭಿಮುಖವಾಗಿ ಹೊಯ್ಸಳ ನಂದಿ ವಿಗ್ರಹವಿದೆ.

ಬೀರಪ್ಪನಿಗೆ ಸಂಬಂಧಿತವಾದ ನಿರೂಪಗಳು, ದಾಖಲೆ ಪತ್ರಗಳು, ಸನ್ನದುಗಳು, ಅದೇಶ ಪತ್ರ, ದಾನ ನಿರೂಪ ಇದಲ್ಲದೆ, ವರದಿಗಳು, ಶಾಸನಗಳು ಬೀರಪ್ಪನ ಸಂಪ್ರದಾಯ ಸಾಂಸ್ಕೃತಿಕ ಅಧ್ಯಯನಕ್ಕೆ ಪ್ರಮುಖ ಆಕರಗಳಾಗಿ ಕಂಡುಬರುತ್ತವೆ. ಅದೇ ರೀತಿ ಮೌಖಿಕ ಪರಂಪರೆಯ ಆಕರಗಳು ಬೀರಪ್ಪನ ಸಂಪ್ರದಾಯ ಸಾಂಸ್ಕೃತಿಕ ಅಧ್ಯಯನಕ್ಕೆ ಮತ್ತಷ್ಟು ಪುಷ್ಟಿ ನೀಡುತ್ತವೆ. ಪ್ರತಿ ದೇವಸ್ಥಾನದ ಜನ ಸಮುದಾಯದ ಸಾಂಸ್ಕೃತಿಕ ಮೌಖಿಕ ಪರಂಪರೆ ಸಾಂಸ್ಕೃತಿಕ ಪರಂಪರೆಯನ್ನು ತಿಳಿಯಲು ಮೂಲ ಆಕರಗಳಾಗಿ ಪುರಾಣಗಳು, ಕಾವ್ಯಗಳು, ಡೊಳ್ಳಿನ ಹಾಡುಗಳು, ಜನಪದ ಕಾವ್ಯಗಳು, ಕ್ಷೇತ್ರಕಾರ್ಯದಲ್ಲಿ ವಕ್ತೃಗಳು ನೀಡಿದ ವಿವರಗಳು, ಹೇಳಿಕೆಗಳು, ಬೀರಪ್ಪನ ಕುರಿತಾಗಿರುವ ಕತೆಗಳು, ಪವಾಡಗಳು, ಕ್ಷೇತ್ರಗಳ ವಿಶ್ಲೇಷಣೆ, ಇತ್ತಿವೃತ್ತ ವಿಚಾರಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಇವೆಲ್ಲವುಗಳ ಅಧ್ಯಯನದಿಂದ ಬೀರಪ್ಪ ಸಂಪ್ರದಾಯದ ಸಾಂಸ್ಕೃತಿಕ ಅಧ್ಯಯನಕ್ಕೆ ಸಮಗ್ರತೆಯು ಪ್ರಾಪ್ತವಾಗುತ್ತದೆ. ಲಿಖಿತ ಸಾಹಿತ್ಯ ಕೃತಿಗಳು ಮೌಖಿಕ ಭಾಷಾ ಸಾಮಗ್ರಿಗಳು ಇವು ಒಂದು ಸಮುದಾಯದ, ಬೀರಪ್ಪನ ಅಧ್ಯಯನಕ್ಕೆ ಪೂರ್ಣ ಪ್ರಮಾಣದ ಆಕರಗಳಾಗುವುದಿಲ್ಲ. ಇಷ್ಟೇ ಅಲ್ಲದೇ ಶಾಸನ ದಾಖಲೆಗಳು ಒದಗಿಸುವ ಮಾಹಿತಿಗಳು ಕ್ಷೇತ್ರಕಾರ್ಯ ಪೂರಕವಾದ ಸಾಹಿತ್ಯ ಕೃತಿಗಳಲ್ಲಿ ಕಂಡುಬರುವ ಸಂಗತಿಗಳನ್ನು ಆಚಾರ-ವಿಚಾರ, ನಂಬಿಕೆ, ಜಾತ್ರೆ, ಉತ್ಸವ, ಸಂಪ್ರದಾಯಗಳನ್ನು ಅನುಲಕ್ಷಿಸಿ ಬೀರಪ್ಪನ ಸಂಪ್ರದಾಯ, ಸಾಂಸ್ಕೃತಿಕ ಚಾರಿತ್ರಿಕ ನೆಲೆಯನ್ನು ಕಟ್ಟಿಕೊಡಲು ಸಾಧ್ಯವಾಗುತ್ತದೆ. ಹೀಗಾಗಿ ಬೀರಪ್ಪನ ಸಾಂಸ್ಕೃತಿಕ ಚರಿತ್ರೆಯನ್ನು ಗ್ರಹಿಸುವಾಗ ಅವೆಲ್ಲವುಗಳ ಸಾಂಸ್ಕೃತಿಕ ಕಥನಗಳನ್ನು ಒಟ್ಟಿಗೆ ಸೇರಿಸಿ ಅರ್ಥೈಸಿ ಕೊಂಡಿದ್ದೇನೆ.

೪. ಇವರೆಗೆ ನಡೆದ ಅಧ್ಯಯನಗಳು

೧. ಬೀರೇಶ್ವರ ಚರಿತ್ರೆ : ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ (೧೯೫೮)

ಹಾಲುಮತ ಮತೋದ್ಧಾರವನ್ನೇ ಮುಖ್ಯ ಧ್ಯೇಯವಾಗಿಟ್ಟುಕೊಂಡು ೧೯೫೮ರಲ್ಲಿ ಬಂಕಾಪುರದ ಬಸವಣೆಪ್ಪ ನೀಲಪ್ಪ ಹಳವಳ್ಳಿ ಅವರು ತಮ್ಮ ೭೬ನೆಯ ಇಳಿವಯಸ್ಸಿನಲ್ಲಿ ಬೀರೇಶ್ವರ ಚರಿತ್ರೆಯನ್ನು ರಚಿಸಿದ್ದಾರೆ. ೪೦ ಪುಟಗಳ ಈ ಚಿಕ್ಕ ಕೃತಿಯು ಬೀರೇಶ್ವರ ಸಂಕ್ಷಿಪ್ತ ಚರಿತ್ರೆಯನ್ನು ಹೊಂದಿದೆ. ಕಥಾಹಂದರದಲ್ಲಿ ಅಲ್ಪಸ್ವಲ್ಪ ಬದಲಾವಣೆಗೊಂಡರೂ ಮೂಲ ಕಥೆಗೆ ಧಕ್ಕೆ ಬರುವುದಿಲ್ಲ. ಬಿಲ್ಲಾಸುರನ ಜನನ, ಬೀರೇಶ್ವರನ ಜನನ, ಬಿಲ್ಲಾಸುರನ ಮರಣ, ಹಾಲುಮತ ಕುರುಬರ ಉತ್ಪತ್ತಿ, ಐದು ಮಂದಿ ದೇವಗನ್ನೆಯರಿಂದ ಐದು ಹೆಣ್ಣುಮಕ್ಕಳ ಜನನ, ಅಕ್ಕ ಮಾಯವ್ವನಿಗೆ ಬೀರೇಶನು ದೊರೆತದು, ಸುರಾನಾರಿಯು ಕುರಿಯಾಗಿ ಬೀರೇಶನಿಂದ ಶಾಪವಿಮೋಚನೆ ಅನೇಕ ಪವಾಡಗಳನ್ನು ಮಾಡುತ್ತಾ ಬೆಳಗುತ್ತಿಗೆ ಹೋದುದು, ಬೀರೇಶ್ವರನ ವಿವಾಹ, ಬೀರೇಶನು ಹಾಲುಮತದ ಕುರುಬ ಉತ್ಪತ್ತಿಯ ಕಥೆ ಶಿವನಿಂದ ನೀರೂಪಿಸಲ್ಪಟ್ಟ ಕಥೆಯಲ್ಲಿ ಬೀರೇಶನ ಶಿಷ್ಯ ಮಾಳಿಂಗನಿಗೆ ಕಥೆ ಹೇಳುವುದು ವೀರಗೊಲ್ಲಾಳನ ಚರಿತ್ರೆ, ಶಿಷ್ಯ ಮಾಳಿಂಗರಾಯನ ಪವಾಡಗಳು ಅಂತ್ಯದಲ್ಲಿ 'ಕೌರುಬ ಋಷಿ'ಯಿಂದ ಕುರುಬರ ಗೋತ್ರ ಸಂಹಿತೆ, ಇತಿಹಾಸ ಮಂಜರಿ ಮೊದಲಾದವುಗಳ ಶ್ಲೋಕಗಳನ್ನು ಉಲ್ಲೇಖಿಸಿ ವಿಶ್ಲೇಷಣೆ ಒಳಪಡಿಸಲಾಗಿದೆ".[೨೪]

೨. ಕೊಣ್ಣೂರ ಶ್ರೀ ಕರಿಸಿದ್ದೇಶ್ವರ ದೇವಸ್ಥಾನ : ಡಾ. ಶ್ರೀರಾಮ ಇಟ್ಟಣ್ಣನವರು (೧೯೯೫)

ಕೊಣ್ಣೂರ ಕರಿಸಿದ್ಧೇಶ್ವರನ ಕುರಿತಾಗಿ, ಡಾ. ಶ್ರೀರಾಮ ಇಟ್ಟಣ್ಣವರ ಅವರು ಒಂದು ಪುಸ್ತಕ ರಚನೆ ಮಾಡಿದ್ದಾರೆ. ಅಣ್ಣಪ್ಪ ವಾಸುದೇವರಾಯ ಮುತ್ತೂರ ಅವರು ಹಾಲುಮತದ ಶ್ರೀ ಸಿದ್ಧಬೀರೇಶ್ವರ ಅರ್ಥಾತ್ ಶ್ರೀ ಕರಿಸಿದ್ದೇಶ್ವರ ಪುರಾಣ ಎಂಬ ಸ್ಥಳಪುರಾಣವನ್ನು ಬರೆದಿದ್ದಾರೆ. ಇದು ಕರಿಸಿದ್ದೇಶ್ವರನಿಗೆ ಸಂಬಂಧಪಟ್ಟ ಪೌರಾಣಿಕ ವಿಷಯ ಮತ್ತು ಸ್ಥಳ ಐತಿಹ್ಯ ಎರಡನ್ನು ಒಳಗೊಂಡಿದೆ. ಕರಿಸಿದ್ದೇಶ್ವರ ಪುರಾಣ ಸ್ಥಳ ಪುರಾಣ ವಾಗಿರುವುದರಿಂದ ಅವನ ಬದುಕಿನ ಮುಖ್ಯ ಘಟನೆಯಾದ ಕೋಣಾಸುರನ ವಧೆ ವಿಸ್ತೃತವಾಗಿ ಚಿತ್ರಿತವಾಗಿದೆ. ಕರಿಸಿದ್ದೇಶ್ವರ ಪುರಾಣವು ಸ್ಥಳ ಪುರಾಣವಾಗಿರುವುದರಿಂದ ಇದರಲ್ಲಿ ಕೆಲವು ಐತಿಹ್ಯಗಳು ಹೆಚ್ಚಿಗೆ ಸೇರಿಕೊಂಡಿವೆ. ಅದೇ ರೀತಿ ಜನಸಾಮಾನ್ಯರ ಮೌಖಿಕ ರೂಪದಲ್ಲಿರುವ ವಿವರಗಳನ್ನು ಗ್ರಂಥ ರೂಪದಲ್ಲಿ ಪ್ರಕಟಿಸಿದ್ದಾರೆ. ಯಾವುದೇ ವ್ಯಕ್ತಿ, ಸಮಾಜ, ಸಾಹಿತ್ಯಗಳ ಹಿಂದೆ ಸಂಸ್ಕಾರಗಳ ಪಾತ್ರ ದೊಡ್ಡದು. ಕೊಣ್ಣೂರಿನ ಸಂಸ್ಕೃತಿ ಸಂಸ್ಕಾರಗಳು ಈ ಕೃತಿಯಲ್ಲಿ ಮೇಳೈಸಿವೆ. ಕೃತಿಯು ಎಂಟು ವಿಭಾಗಗಳನ್ನು ಹೊಂದಿದ್ದು ೭೨ ಪುಟಗಳ ವಿಸ್ತಾರವನ್ನು ಪಡೆದಿದೆ. ಕೃತಿಯ ಅಂತ್ಯದಲ್ಲಿಯ ಛಾಯಾಚಿತ್ರಗಳು ಸಾಹಿತ್ಯಾಸಕ್ತರಿಗೆ ವಿಪುಲವಾದ ಮಾಹಿತಿ ಗಳನ್ನು ಒದಗಿಸಿಕೊಡುತ್ತವೆ. ದೇವಾಲಯಗಳನ್ನು ಜಾನಪದ ಅಭ್ಯಾಸದ ಹಿನ್ನೆಲೆಯಲ್ಲಿ ಗಮನಿಸಿ ಅವುಗಳ ಸ್ವರೂಪ, ಸ್ಥಳೀಯರ ನಂಬಿಕೆ, ಚರಿತ್ರೆ, ಕಲೆ, ಸಾಹಿತ್ಯಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಲೇಖಕರು ಕೃತಿಯ ವಿಷಯ ವ್ಯಾಪ್ತಿ ಮತ್ತು ಉದ್ದೇಶಗಳ ಕುರಿತಾಗಿ ಹೀಗೆ ಹೇಳಿದ್ದಾರೆ. ಕರಿಸಿದ್ದೇಶ್ವರನಿಗೆ ಸಂಬಂಧಿಸಿದ ಇಲ್ಲಿಯ ಪೌರಾಣಿಕ ವಿಷಯ ಅನ್ಯ ಪುರಾಣಗಳನ್ನು ತೌಲನಿಕವಾಗಿ ಅಭ್ಯಸಿಸಲು ಪ್ರೇರೇಪಿಸುತ್ತದೆಂದು

ಆಶಿಸಲಾಗಿದೆ. ಈ ಬಗೆಯ ಅಭ್ಯಾಸವನ್ನು ಮುಂದೆ ಕೈಕೊಳ್ಳುವರಿಗೆ ಇಲ್ಲಿ ನಿರೂಪಿಸಲಾಗಿದೆ. ಆದರೆ ಇವರ ಜೀವನ ವಿಧಾನ, ಸಂಸ್ಕಾರ ಮುಂತಾದ ಮತೀಯ ವಿಷಯಗಳನ್ನಿಲ್ಲಿ ಚರ್ಚಿಸಿಲ್ಲ. ಗ್ರಂಥದ ಉದ್ದೇಶವನ್ನು ಲಕ್ಷದಲ್ಲಿರಿಸಿಕೊಂಡು ಕರಿಸಿದ್ದೇಶ್ವರ ದೇವಸ್ಥಾನಕ್ಕೆ ಮಾತ್ರ ಸಂಬಂಧಪಟ್ಟಂತೆ ಇಲ್ಲಿಯ ಪೂಜಾರಿಗಳ ಭಕ್ತರ ವಿಷಯಗಳನ್ನು ಹೇಳಲಾಗಿದೆ.[೨೫]

ಕೋಣನೂರು ಎಂಬ ಗ್ರಾಮನಾಮವು ಕೊಣ್ಣೂರಾಗಿ ಬದಲಾಗಿದೆ. ಕರಿಸಿದ್ದೇಶ್ವರನು ಕೋಣಾಸುರನನ್ನು ಕೊಂದ ಕಾರಣ ಸ್ಥಳವನ್ನು ಕೊಣ್ಣೂರು ಎಂದು ಕರೆಯಲಾಗಿದೆ. ಈ ಗ್ರಾಮ ವಿಜಾಪುರದಿಂದ ೬೦ ಕಿ.ಮೀ. ದೂರದಲ್ಲಿದ್ದು ಕರಿಸಿದ್ದ ಹಾಲುಮತ ಆರಾಧ್ಯ ದೈವವಾಗಿ ಪೂಜಿಸಲ್ಪಡುತ್ತಿದೆ. ಇಲ್ಲಿ ಬೀರಪ್ಪನನ್ನೇ ಕರಿಸಿದ್ದೇಶ್ವರ ಎಂದು ಕರೆಯುವುದು ರೂಢಿಯಲ್ಲಿದೆ. ಪೌರಾಣಿಕ ಹಿನ್ನೆಲೆಯಲ್ಲಿ ಬೀರಪ್ಪನ ಹುಟ್ಟು, ಬಾಲ್ಯ, ಯೌವನ, ಪವಾಡಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಕರಿಸಿದ್ದೇಶ್ವರ ದೇವಾಲಯದ ರಚನಾಕ್ರಮ, ಕೋಣಾಸುರ ವಧಿಸಲ್ಪಟ್ಟ ಸ್ಥಳದ ಮಾಲಗಂಬ ಕರಿಸಿದ್ದೇಶ್ವರನ ನಿಜ ಶಿಷ್ಯರ ಪರೀಕ್ಷೆಯಲ್ಲಿ ಜಯಗಳಿಸಿದ ಮಾಳಿಂಗರಾಯ, ಪೂಜಾ ವಿಧಾನಗಳು, ಪೂಜಾರಿಗಳ ವಂಶಾವಳಿಯ ಪಟ್ಟಿ, ಅವರ ಜೀವನಕ್ರಮ ಭೀಕ್ಷೆಯಲ್ಲಿಯ ವಿಧಗಳು ಮತ್ತು ಅವರ ಅನುಸರಿಸುವ ಕ್ರಮ ಪಲ್ಲಕ್ಕಿ ಸೇವೆ, ಜಾತ್ರೆ, ಉತ್ಸವಗಳ ವಿವರಗಳು ಅಧ್ಯಯನಕಾರರಿಗೆ ಆಸಕ್ತಿಯನ್ನು ಮೂಡಿಸುತ್ತದೆ. ಕೊಣ್ಣೂರ ಕರಿಸಿದ್ದೇಶ್ವರನ ಡೊಳ್ಳಿನ ಹಾಡು, ಹರಕೆಯ ಹಾಡು, ಮಂಗಳಾರತಿ ಹಾಡುಗಳನ್ನು ಕೊನೆಯಲ್ಲಿ ಕೊಡಲಾಗಿದೆ. ಒಟ್ಟಿನಲ್ಲಿ ಬೀರಪ್ಪನ ಪ್ರಮುಖ ನೆಲೆಗಳಲ್ಲಿ ಒಂದಾದ ಕೊಣ್ಣೂರು ಕ್ಷೇತ್ರವನ್ನು ಸಮಗ್ರವಾಗಿ ಪರಿಚಯಿಸಿರುವುದು ಈ ಕೃತಿಯ ಉದ್ದೇಶವಾಗಿದೆ.

೩. ಬೀರದೇವರ ಸಂಪ್ರದಾಯ ಮತ್ತು ಆಚರಣೆಗಳು : ದೊಡ್ಡಣ ಗದ್ದನಕೇರಿ (೨೦೦೨)

ಅರವತ್ತೆರಡು ಪುಟಗಳ ಈ ಲಘು ಕೃತಿಯು ೨೦೦೨ರಲ್ಲಿ ಪ್ರಕಟಿಸಲ್ಪಟ್ಟು ಹತ್ತು ಭಾಗಗಳಲ್ಲಿ ವಿಷಯ ವಿಸ್ತಾರವನ್ನು ಪಡೆದಿದೆ. ಮುನ್ನುಡಿಯನ್ನು ಪ್ರೊ. ಚನ್ನಪ್ಪ ಕಟ್ಟಿ ಬರೆದರೆ ಬೆನ್ನುಡಿಯನ್ನು ಡಾ. ವೀರೇಶ ಬಡಿಗೇರ ಅವರು ಬರೆದು ಕೃತಿ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಎನ್ನ ಗುಡಿಯೊಳಗಿನ ಮಾತು ಭಾಗದಲ್ಲಿ ಲೇಖಕರು ಕ್ಷೇತ್ರಕಾರ್ಯದಲ್ಲಿ ಅನುಭವಿಸಿದ ಕಷ್ಟನಷ್ಟಗಳ ಬಗ್ಗೆ, ಸಾಂಸ್ಕತಿಕ ಕಳಕಳಿ ಹಾಗೂ ಶ್ರಮವನ್ನು ಗುರುತಿಸಬಹುದಾಗಿದೆ. ಮುನ್ನುಡಿಯಲ್ಲಿ ಪ್ರೊ. ಚೆನ್ನಪ್ಪ ಕಟ್ಟಿ ಇವರು ಮುಳುಗಡೆ ಪ್ರದೇಶದ ಜನಮಾನ್ಯರು ತಮ್ಮ ವ್ಯಾಪ್ತಿ ಪ್ರದೇಶದ ಗುಡಿ, ಊರು, ಶಾಲೆ, ಮನೆ, ಮಠ, ದೈವ ಹೀಗೆ ಹಲವಾರು ವಿಷಯಗಳಿಂದ ಭಾವನಾತ್ಮಕ ನೆಲೆಯಲ್ಲಿ ಒಡನಾಟ, ಸಾಂಸ್ಕೃತಿಕ ಸಂಬಂಧಗಳು ಸರ್ಕಾರದ ಅನುದಾನ ಪರಿಹಾರಗಳಿಂದ ಪ್ರತ್ಯೇಕವಾಗಿ ಉಳಿದುಬಿಡುತ್ತದೆ. ಆ ನಷ್ಟ ಭರಿಸುವಲ್ಲಿ ಸರ್ಕಾರದ ಸವಲತ್ತುಗಳು ವಿಫಲತೆಯನ್ನು ಹೊಂದುವ ಹೃದಯಸ್ಪರ್ಶಿ ವಿಚಾರಗಳನ್ನು ಚರ್ಚಿಸಿದ್ದಾರೆ.

ಅಳಿಯುವ ಮುನ್ನ ಉಳಿಯುವ ಕಾರ್ಯಕ್ಕೆ ಕೈಹಾಕಿದ ಶ್ರೇಯಸ್ಸು ದೊಡ್ಡಣ ಗದ್ದನಕೇರಿ ಅವರದಾಗಿದೆ. ಪುರಾತನ ಬೀರಪ್ಪನ ದೇವಾಲಯಗಳು ಹಾಲುಮತದ ಚರಿತ್ರೆಯನ್ನು ಕಟ್ಟಿಕೊಟ್ಟರೆ ಬೀರಪ್ಪ ಜನಸಾಮಾನ್ಯರ ಆರಾಧ್ಯದೈವವಾಗಿ ಪೂಜ್ಯನೀಯನಾಗುತ್ತಾನೆ. ಇಂತಹ ಅಪೂರ್ವವಾದ ದಾಖಲೆಗಳನ್ನು ಗುಲಬರ್ಗಾ, ವಿಜಾಪುರ,

ಬೆಳಗಾವಿ, ರಾಯಚೂರು, ಬಾಗಲಕೋಟೆ ಜಿಲ್ಲೆಗಳಲ್ಲಿ ಪ್ರಾದೇಶಿಕವಾಗಿ ಭಿನ್ನತೆ ಹೊಂದಿದ ಆಚರಣೆಗಳನ್ನು ತೌಲನಿಕವಾಗಿ ವಿವರಿಸಲಾಗಿದೆ.

ಲೇಖಕರು ತಮ್ಮ ಕ್ಷೇತ್ರ ವ್ಯಾಪ್ತಿಯನ್ನು ತಿಳಿಸುತ್ತಾ ಹೀಗೆ ಹೇಳಿದ್ದಾರೆ. ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲೂಕಿನ ಮುರನಾಳ, ಸಿರುಗುಪ್ಪ, ತಳಗಿಹಾಳ, ಆಲೂರು, ಗೋವಿಂದಕೊಪ್ಪ, ಬೀಳಗಿ ತಾಲೂಕಿನ ಬೀರಕಟ್ಟಿ, ಬೂದಿಹಾಳ, ಕಂದಗಲ್ಲ, ಹೆರೆಕಲ್ಲ, ಮಳ್ಳಿಗತಿ, ಕಮದಾಳ, ಹರದಾಳ, ವಿಜಾಪುರ ಜಿಲ್ಲೆಯ ವಿಜಾಪುರ ತಾಲೂಕಿನ ಕಣಬೂರು, ಸುಕಗುಂದಿ, ಜೈನಾಪೂರ, ಮುದ್ದೆಬಿಹಾಳ ತಾಲೂಕಿನ ಬಿಜ್ಜೂರ, ಇನ್ನು ಅನೇಕ ಅಂದಾಜು ೨೫ ಬೀರದೇವರ ದೇವಸ್ಥಾನಗಳು ಕೃಷ್ಣ ಹಾಗೂ ಘಟಪ್ರಭೆಯ ಎಡಬಲ ದಡೆಗಳಲ್ಲಿ ಮುಳುಗುವ ಹಾಗೂ ಮುಳುಗಲಿರುವ ದೇವಸ್ಥಾನಗಳ ಸಂಪ್ರದಾಯ ಆಚರಣೆಗಳನ್ನು ಈ ಕೃತಿಯ ಮೂಲಕ ದಾಖಲಿಸಲಾಗಿದೆ.[೨೬] ಲೇಖಕರು ತಾವು ಸಂಗ್ರಹಿಸಿರುವ ದಾಖಲೆಗಳಿಗೆ ಪೂರಕವಾಗಿ ಬೀರದೇವರ ಜನನ ಮತ್ತು ಲೀಲೆಗಳನ್ನು ವಿವಿಧ ಆಕರಗಳ ನೆರವಿನಿಂದ ಆರಂಭದಲ್ಲಿ ವಿವರಿಸಿದ್ದಾರೆ.

ಒಟ್ಟಿನಲ್ಲಿ ಕೃಷ್ಣಾನದಿ ಮುಳುಗಡೆಯಿಂದಾಗಿ ಇದು ಕಣ್ಣಿಗೆ ಕಾಣದ, ಕಾಲಗರ್ಭದಲ್ಲಿ ಹುದುಗಿ ಹೋದ ಬೀರದೇವರ ಸಂಪ್ರದಾಯ ಆಚರಣೆ ಹಾಗೂ ಗುಡಿ, ಗದ್ದುಗೆಗಳಂಥ ಅವಶೇಷಗಳನ್ನು ದಾಖಲಿಸಿ ಮುಂದಿನ ಪೀಳಿಗೆಗೆ ಪರಿಚಯಿಸುವ, ನೆನಪಿಸುವ ಕಾರ್ಯವನ್ನು ಮಾಡಿದ ಗದ್ದನಕೇರಿ ಅವರು ಅನಂದನಾರ್ಹರು. ಈ ಕೃತಿಯು ಬೀರಲಿಂಗೇಶ್ವರ ದೇವಸ್ಥಾನಗಳು ಮುಳುಗಡೆ ಆದ ಕ್ಷೇತ್ರಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ.

೪. ಭಗವಾನ ಬೀರೇಶ್ವರ : ಬೋನಾ ಬಸವರಾಜ (೨೦೦೪)

ಬಾಗಲಕೋಟೆಯ ಬೋನಾ ಬಸವರಾಜ ಅವರು ೨೦೦೪ರಲ್ಲಿ ಈ ಕೃತಿಯನ್ನು ರಚಿಸಿದ್ದಾರೆ. ಕೃತಿ ರಚನಾ ಸಂದರ್ಭದಲ್ಲಿ ಹಲವಾರು ಆಕರಗಳಿಂದ ವಿದ್ವಾಂಸರ ಹೇಳಿಕೆಗಳಿಂದ, ಕ್ಷೇತ್ರಕಾರ್ಯಗಳಿಂದ, ಜನಪದರಿಂದ, ಡೊಳ್ಳಿನ ಹಾಡುಗಳಿಂದ ಮಾಹಿತಿ ಸಂಗ್ರಹಿಸಿ ಪೌರಾಣಿಕ ನೆಲೆಯನ್ನು ವ್ಯಕ್ತಿನಾಮ ಮತ್ತು ಸ್ಥಳನಾಮಗಳಲ್ಲಿ ಭಿನ್ನತೆಯನ್ನು ಗುರುತಿಸಿದ್ದಾರೆ. ಕೃತಿಗೆ ಒಂದು ನಿರ್ದಿಷ್ಟ ಚೌಕಟ್ಟನ್ನು ಒದಗಿಸಿ ಸ್ವಂತಿಕೆ ಉಳಿಸಲು ಯತ್ನಿಸಿರುವುದು ಗುರುತಿಸಬಹುದು. ಬೀರಪ್ಪ ಮತ್ತು ರೇವಣಸಿದ್ಧರ ಕಾಲದ ವ್ಯತ್ಯಾಸವನ್ನು ವಿದ್ವಾಂಸರ ಹೇಳಿಕೆಗಳಿಂದ ಸ್ಪಷ್ಟಪಡಿಸಿರುವುದು. ಕೃತಿಯ ಸೈದ್ಧಾಂತಿಕತೆಯನ್ನು ಹಾಗೂ ಗ್ರಹಿಕೆಯ ಸ್ಪಷ್ಟತೆಯನ್ನು ತಿಳಿಸುತ್ತದೆ.

ಬೀರೇಶ್ವರನ ವೃತ್ತಾಂತದೊಂದಿಗೆ ಇತರ ವಿಷಯಗಳು ಸರಳ ಭಾಷೆಯಲ್ಲಿ ನಿರೂಪಣೆಗೊಂಡಿದ್ದು ಅನೇಕ ವಿಚಾರಗಳು ಭಿನ್ನ ನಿಲುವುಗಳಲ್ಲಿ ಚರ್ಚಿಲ್ಪಟ್ಟು ಓದುಗರ ಆಸಕ್ತಿಯನ್ನು ಹೆಚ್ಚಿಸುತ್ತವೆ. ಕೃತಿಯ ಕಥಾ ಪ್ರಸಂಗಗಳು ವಾಸ್ತವ ಜೀವನದೊಂದಿಗೆ ಸಮೀಕರಣಗೊಂಡ ಕಥಾ ವ್ಯಕ್ತಿಗಳು ನಮ್ಮಲ್ಲಿರುವಂತೆ ಸಾಮಾನ್ಯರಾಗಿದ್ದಾರೆ. ಕಥೆಯು ಸಂಶೋಧನಾತ್ಮಕ ಮತ್ತು ಭಾವನಾತ್ಮಕ ನೆಲೆಗಳಲ್ಲಿ ತಳಕು ಹಾಕಿಕೊಂಡಿದೆ.

ಬೀರಪ್ಪನ ವೃತ್ತಾಂತ ಸಂದರ್ಭದ ಹಳೆಯ ವಿಚಾರಗಳು ಹೊಸ ರೀತಿಯಲ್ಲಿ ನಿರೂಪಣೆಗೊಂಡಿದೆ. ಇಲ್ಲಿನ ಅನೇಕ ವಿಷಯಗಳು ಮತ್ತೆ ಮತ್ತೆ ಚಿಂತನೆಗೆ ತೊಡಗಿಸುತ್ತದೆ.

೫. ಶ್ರೀ ರೇವಣಸಿದ್ದೇಶ್ವರ ಮತ್ತು ಬೀರೇಶ್ವರರು : ಪ್ರೊ. ಒಡೆಯರ ಡಿ. ಹೆಗ್ಗಡೆ (೨೦೦೫)

ಒಡೆಯರ ಡಿ. ಹೆಗ್ಗಡೆ ಅವರು ದಕ್ಷಿಣ ಭಾರತದ ಆದಿ ದೈವಗಳಾದ ರೇವಣಸಿದ್ದ ಮತ್ತು ಬೀರೇಶ್ವರರನ್ನು ಪರಿಚಯಿಸುವ ಶ್ರೀ ರೇವಣಸಿದ್ದೇಶ್ವರ ಮತ್ತು ಶ್ರೀ ಬೀರೇಶ್ವರರು ಎಂಬ ಕೃತಿಯನ್ನು ೨೦೦೫ರಲ್ಲಿ ಪ್ರಕಟಿಸಿದ್ದಾರೆ. ಲೇಖಕರು ಹಲವಾರು ಮೂಲಗಳಿಂದ ಆಕರಗಳನ್ನು ಬಳಸಿ, ಕ್ಷೇತ್ರಕಾರ್ಯದಿಂದ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಮೊದಲ ಭಾಗವು ರೇವಣಸಿದ್ಧರನ್ನು ಪರಿಚಯಿಸಿದರೆ ಎರಡನೆಯ ಭಾಗವು ಬೀರೇಶನನ್ನು ಪರಿಚಯಿಸುತ್ತದೆ. ಪ್ರಸ್ತುತ ಅಧ್ಯಯನವು ಬೀರೇಶ್ವರ ಅಧ್ಯಯನವಾದ್ದರಿಂದ ಎರಡನೆಯ ಭಾಗವನ್ನು ಮಾತ್ರ ಇಲ್ಲಿ ಬಳಸಿಕೊಳ್ಳಲಾಗಿದೆ.

ಬೀರಪ್ಪನು ೧೨ನೇ ಶತಮಾನದ ನಂತರ ವೀರಭದ್ರನಾದ ಬುಡಕಟ್ಟು, ಜನಪದ ಅಥವಾ ವೀರ ಪರಂಪರೆಯ ದೇವತೆಯಾಗಿ ಪೂಜಿಸುವ ವಾರಗಳು, ಬೀರದೇವರ ಗುಡಿಗಳಿರುವ ಊರುಗಳು, ಪೌರಾಣಿಕ ನೆಲೆಯಲ್ಲಿ ಜನನ, ಜಾತ್ರೆಯ ಸಮಯದಲ್ಲಿ ಮಾಡುವಂತಹ ಪೂಜಾಕ್ರಿಯೆ, ಪೂಜಾ ವಿಧಾನಗಳು, ಬೀರದೇವರ ದೇವಸ್ಥಾನದ ನಿರ್ಮಾಣ, ಅಂತ್ಯದಲ್ಲಿ ಮಾಹಿತಿದಾರರ ಪಟ್ಟಿಯನ್ನು ನೀಡಲಾಗಿದೆ.

ಒಟ್ಟಿನಲ್ಲಿ ಸಂಕ್ಷಿಪ್ತತೆಯಲ್ಲಿ ಸಮಗ್ರತೆಯನ್ನು ಹೊಂದಿದ್ದು ಆಚಾರ-ವಿಚಾರ, ಪೌರಾಣಿಕ ಚಾರಿತ್ರಿಕ ಕಾಲ್ಪನಿಕ ಚಿತ್ರಗಳಿಗೆ ಮೂರ್ತರೂಪ ಒದಗಿಸಿ ಸರಿಯಾದ ಸಾಕ್ಷಾಧಾರಗಳಿಂದ ಸ್ಪಷ್ಟಪಡಿಸಿದ ಶ್ರೇಯಸ್ಸು ಈ ಕೃತಿಯದ್ದಾಗಿದೆ. ದಕ್ಷಿಣ ಕರ್ನಾಟಕ ಅದರಲ್ಲಿಯೂ ಮಂಡ್ಯ, ಮೈಸೂರು ಜಿಲ್ಲೆಯ ಬೀರಪ್ಪನ ದೇವಾಲಯಗಳಲ್ಲಿ ನಡೆಯುವ ಜಾತ್ರೆ ಉತ್ಸವ ಆಚರಣೆಗಳ ಅವಲೋಕನವು ಈ ಕೃತಿಯ ಮೂಲಕ ನಡೆದಿದೆ. ಅಲ್ಲದೇ ದಕ್ಷಿಣ ಕರ್ನಾಟಕದಲ್ಲಿರುವ ಬೀರದೇವರ ದೇವಸ್ಥಾನಗಳ ವಿವರಗಳು ಸಂಶೋಧಕರಿಗೆ ಸಹಾಯಕಾರಿಯಾಗುತ್ತವೆ.

೫. ಬೀರಪ್ಪದೇವನ ಉಪಸಕರ ಮಾದರಿಗಳು ಮತ್ತು ಕ್ಷೇತ್ರಗಳು :

ಜ್ಯೋತಿ ಹೊಸೂರ (೨೦೦೭)

ಜ್ಯೋತಿ ಹೊಸೂರ ಅವರು ೨೦೦೭ರಲ್ಲಿ ಬೀರಪ್ಪದೇವನ ಉಪಾಸಕರ ಮಾದರಿಗಳು ಮತ್ತು ಕ್ಷೇತ್ರಗಳು ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಗೋಲ್ಗೆರಿಯ ಗೊಲ್ಲಾಳ, ಹುಲಜಂತಿಯ ಮಾಳಪ್ಪ, ಪಟ್ಟಣ ಕಡೋಲಿಯ ಇಟ್ಟಪ್ಪ ಹೆಸರಿನ ಮೂವರು ಮಹಾಪುರುಷರ ಪರಿಚಯ ಮತ್ತು ಅವರ ಕ್ಷೇತ್ರಗಳ ಮಾಹಿತಿಗಳನ್ನು ಇಲ್ಲಿ ಚರ್ಚಿಸಲಾಗಿದೆ. ಹಾಲುಮತದ ಈ ಮಹಾಪುರುಷರು ಬೀರಪ್ಪನೊಂದಿಗೆ ಹೊಂದಿದ ಸಂಬಂಧಗಳನ್ನು ವಿಮರ್ಶಿಸಲಾಗಿದೆ. ಬೀರಪ್ಪ ಮತ್ತು ಇಟ್ಟಪ್ಪ ಅಭಿನ್ನರೆಂಬ ವಾದವನ್ನು ಪ್ರಸ್ತಾವನೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಪಟ್ಟಣ ಕಡೋಲಿಯ ಇಟ್ಟಪ್ಪ ದೇವನು ವಿಠಲ ಬಿರೋಬಾ ಎಂಬುದಾಗಿ ಸಂಬೋಧನೆಗೊಳ್ಳಲಾರಂಭಿಸಿದ್ದಾರೆ. ಇದಕ್ಕೆ ವೈಷ್ಣವ ಧರ್ಮ ಪ್ರತಿಪಾದಕರು ಮತ್ತು ಪ್ರಸಾರಕರು ಕಾರಣ ಎನ್ನುವುದನ್ನು ಸೂಕ್ಷ್ಮವಾಗಿ ವಿವರಿಸಿದ್ದಾರೆ. ಈ ಕ್ಷೇತ್ರವು ಈಗ ವಿಠಲ ಬಿರೋಬಾ ಕ್ಷೇತ್ರವೆಂದೇ ಹೆಸರಾಗಿದೆ. ಒಂದರ್ಥದಲ್ಲಿ ಈ ಇಟ್ಟಪ್ಪದೇವ

ಬೀರಪ್ಪದೇವನೇ ಆಗಿದ್ದಾನೆ. ಆದರೆ ಕೆಲವು ವಿದ್ವಾಂಸರು ಇಟ್ಟಪ್ಪ ಮತ್ತು ಬೀರಪ್ಪ ಸಮಕಾಲೀನರು ಎಂಬ ಹೇಳಿಕೆಯಿಂದ ಕೊಂಚ ಗೊಂದಲ ಉಂಟಾಗುತ್ತದೆ.[೨೭]

ಗೋಲ್ಗೇರಿಯ ಗೊಲ್ಲಾಳನು ೧೨ನೆ ಶತಮಾನದಲ್ಲಿ ಬಾಳಿದ ಶರಣನಾಗಿದ್ದು ವೀರಬೀರೇಶ್ವರ ಎಂಬ ಅಂಕಿತದಿಂದ ರಚಿಸಿದ ವಚನಗಳಿಂದ ದೃಢಪಡಿಸಲಾಗಿದೆ. ಲೇಖಕರು ನೀಡಿದ ಹುಲಜಂತಿಯ ಮಾಳಪ್ಪನ ಪವಾಡಗಳು, ಹಾಲುಮತದ ಪುರಾಣಗಳ ಪಟ್ಟಿಯು ಆಸಕ್ತ ಅಧ್ಯಯನಕಾರರಿಗೆ ಮಾರ್ಗ ಸೂಚಿಯಾಗಿವೆ. ಪಟ್ಟಣ ಕಡೋಲಿಯ ಇಟ್ಟಪ್ಪನ ಕುರಿತಾಗಿ ಸ್ಥಳ ಆಚಾರ ವಿಚಾರಗಳ ಹಲವಾರು ಸುಳುಹುಗಳನ್ನು ನೀಡಿದ್ದಾರೆ. ಅವನ ಕುರಿತಾಗಿ ಸಮಗ್ರ ಅಧ್ಯಯನದ ಅವಶ್ಯಕತೆ ಇದೆ.

೫. ಲೇಖನಗಳು

ಬೀರಪ್ಪನ ಕುರಿತು ಅನೇಕ ವಿದ್ವಾಂಸರು ಬಿಡಿ ಬಿಡಿ ರೂಪದ ಲೇಖನಗಳನ್ನು ಪ್ರಕಟಿಸಿದ್ದಾರೆ. ಬಿ.ಸಿ. ಜವಳಿ ಅವರ ಬೀರದೇವರು (ಜಾನಪದ ಸಾಹಿತ್ಯ ದರ್ಶನ ಭಾಗ-೯, ೧೯೮೮), ವೀರಣ್ಣ ದಂಡೆಯವರ ಹಾಲುಮತ ಪುರಾಣದ ಬೀರಪ್ಪ (ಕನ್ನಡ ಅಧ್ಯಯನ ೨೦೦೦), ವಿ.ಎಸ್. ಮಾಳಿ ಅವರ ಬಾಗೇನಾಡಿನ ಅಲಕನೂರಿನ ಕರಿಸಿದ್ದೇಶ್ವರ (ಹಾಲಕೆನೆ ೨೦೦೨), ಕೆ.ಎಂ. ಮೈತ್ರಿ ಅವರ ಬೀರಪ್ಪನ ಸುತ್ತಮುತ್ತ (ಕಾಯಕಯೋಗಿ ಸಂಸ್ಮರಣ ಗ್ರಂಥ ೨೦೦೨) ಎಫ್.ಟಿ. ಹಳ್ಳಿಕೇರಿ ಹಾಗೂ ಶ್ರೀ ಚಂದ್ರಪ್ಪ ಎಸ್. ಅವರ ಬೀರದೇವರ ತೋಪು ಜಾತ್ರೆಯ ಆಚರಣೆಗಳು (ಕನ್ನಡ ಸಾಹಿತ್ಯ ಪರಿಷತ್ತು ಪತ್ರಿಕೆ, ೨೦೦೮), ಡಾ. ಪಿ.ಕೆ. ಖಂಡೋಬಾ ಅವರ ಬೀರದೇವರು (ಗಿರಿಜನ ಸಿರಿ ಅಭಿನಂದನ ಸಂಪುಟ) ಮುಂತಾದ ಲೇಖನಗಳು ಪ್ರಕಟಗೊಂಡಿವೆ.

ಈ ಲೇಖನಗಳನ್ನು ಅವಲೋಕಿಸಿದಾಗ ಬೀರಪ್ಪನ ಇತಿವೃತ್ತ ವಿಚಾರ ಆತನ ನೆಲೆಯಾದ ಅಲಕನೂರು, ಹಾಲುಮತ ಪುರಾಣಗಳಲ್ಲಿ ಉಲ್ಲೇಖವಾದ ಬೀರಪ್ಪನ ಕಥೆ, ಜನಪದ ಗೀತೆಗಳಲ್ಲಿ ಬೀರಪ್ಪನನ್ನು ಕುರಿತು ಸ್ಮರಣೆ ಹಾಗೂ ಬೀರಪ್ಪದೇವರ ಆಚರಣೆಗಳಲ್ಲಿ ತೋಪು ಜಾತ್ರೆಯ ವಿವರಗಳನ್ನು ನಾವು ಗಮನಿಸಬಹುದಾಗಿದೆ. ವಿಶೇಷವಾಗಿ ದಕ್ಷಿಣ ಕರ್ನಾಟಕದ ಬೆಂಗಳೂರು, ಕೋಲಾರ, ಮಂಡ್ಯ, ಮೈಸೂರು ಜಿಲ್ಲೆಯಲ್ಲಿ ಬೀರಪ್ಪನ ತೋಪು ಜಾತ್ರೆ ಈಗಲೂ ನಡೆಯುತ್ತದೆ. ತೋಪು ಜಾತ್ರೆಯ ಕುರಿತು ಲೇಖಕರು ಹೇಳುವಂತೆ ಬೀರದೇವರ ಸಾಂಸ್ಕೃತಿಕ ಆಚರಣೆಗಳಲ್ಲಿ ತೋಪು ಜಾತ್ರೆ ಬಹಳ ಮುಖ್ಯವಾದದ್ದು. ಇದು ಹಾಲುಮತ ಧರ್ಮದ ಹಲವು ಪಾರಂಪರಿಕ ಚಿಹ್ನೆಗಳನ್ನು ತನ್ನ ಅಂತರಂಗದಲ್ಲಿ ಗುಪ್ತವಾಗಿ ಅಡಗಿಸಿಕೊಂಡು ಬಹಳ ಸೂಕ್ಷ್ಮ ನೆಲೆಯಲ್ಲಿ ಅನಾವರಣಗೊಳಿಸುತ್ತದೆ. ಈ ಜಾತ್ರೆ ದಕ್ಷಿಣ ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಏಳು ದಿನಗಳ ಕಾಲ ನಡೆಯುವ ಈ ಜಾತ್ರೆಯಲ್ಲಿಯ ಆಚರಣಾ ಪ್ರಕ್ರಿಯೆಗಳು ಕೆಳಗಿನಂತಿವೆ. ಆರಂಭದ ದಿನದ ಬೆಳಿಗ್ಗೆ ಧ್ವಜಾರೋಹಣ, ಮಧ್ಯಾಹ್ನ ಶ್ರೀ ಗುರು ರೇವಣಸಿದ್ದೇಶ್ವರ ಗುಡಿಗಟ್ಟು ದೇವರುಗಳು ಹಾಗೂ ಗ್ರಾಮದೇವರುಗಳನ್ನು ಆಗಮನ ಮಾಡಿಕೊಳ್ಳುವುದು, ಎರಡನೆಯ ದಿನ ಬೆಳಿಗ್ಗೆ ಗಂಗೆಪೂಜೆ ಮತ್ತು ನವಗ್ರಹ ಪೂಜೆ, ಮಧ್ಯಾಹ್ನ ದೈವಕ್ಕೆ ಮೀಸಲು ಮತ್ತು ಗುರು ಕಾಣಿಕೆ ಒಪ್ಪಿಸುವ ಕಾರ್ಯ ಆರಂಭವಾಗುತ್ತದೆ.

ಹಾಗೂ ಈ ಕಾರ್ಯ ಮುಕ್ತಾಯಗೊಳ್ಳುವುದು ಮೂರನೆಯ ದಿನದ ಸಾಯಂಕಾಲಕ್ಕೆ. ನಾಲ್ಕನೆಯ ದಿನ ಹೊಳೆ ಪೂಜೆ ಮತ್ತು ಪಟ್ಟ ಕಟ್ಟುವುದು. ಐದನೆಯ ದಿನ ಧಾರ್ಮಿಕ ಸಭೆ ಆರನೆಯ ದಿನ ಕೆಂಡದರ್ಚನೆ ಹಾಗೂ ಬೀರನ ಸೇವೆ, ಕೊನೆಯ ದಿನ ಮಂಗಳಾರತಿ ಮತ್ತು ಜಾತ್ರೆಗೆ ಬಂದ ದೇವರುಗಳನ್ನು ಸ್ವಸ್ಥಾನಗಳಿಗೆ ವಿಜಯಂಗೈಯ್ಯುವುದು.[೨೮]

ಆಕರಗಳ ತಾತ್ವಿಕ ವಿಶ್ಲೇಷಣೆ

ಬೀರಪ್ಪನನ್ನು ಕುರಿತ ಅಧ್ಯಯನಗಳು ಬೀರಪ್ಪನ ವಿವಿಧ ಬಗೆಯ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿ ಕೊಡುತ್ತವೆ. ಅದರಲ್ಲಿ ಆತನ ಜೀವನ ಚರಿತ್ರೆಯನ್ನು ಹೇಳುವ ಸಾಹಿತ್ಯ ಕಥನಗಳೇ ಹೆಚ್ಚು. ಐತಿಹ್ಯ, ಆಚರಣೆ ಸಂಪ್ರದಾಯಗಳೂ ಸಹ ಚರಿತ್ರೆಯನ್ನು ಅರಿಯುವುದುಕ್ಕೆ ಇರುವ ಬಹುಮುಖ್ಯ ಆಕರಗಳು ಹೌದು. ಇವು ಸಾಹಿತ್ಯ ಕಥನಗಳಿಗಿಂತ ಭಿನ್ನವಾದ ಸಾಂಸ್ಕೃತಿಕ ಲೋಕವನ್ನು ಅನಾವರಣ ಮಾಡುತ್ತವೆ. ಆದರೆ ಇವುಗಳನ್ನು ಪ್ರಮುಖ ಆಕರಗಳೆಂದು ಗ್ರಹಿಸುವುದೇ ಇಲ್ಲ. ಇಂತಹ ಗ್ರಹಿಕೆಯೇ ಇವುಗಳ ಆಶ್ಚರ್ಯದ ನಿರಾಕರಣೆ ಕಾರಣವಾಗಿದೆ. ಬೀರಪ್ಪನ ಅಧ್ಯಯನದಲ್ಲೂ ಈ ದೃಷ್ಟಿಕೋನವನ್ನು ಅಥವಾ ನಿರಾಕರಣೆ ಕಾಣಬಹುದು. ಇದರಿಂದ ಬೀರಪ್ಪನ ಚರಿತ್ರೆಯನ್ನು ಗ್ರಹಿಸುವಲ್ಲಿ ಅನೇಕ ತೊಡಕಾಗಿವೆ. ಕೇವಲ ಸಾಹಿತ್ಯ ಕೇಂದ್ರಿತ ಪಠ್ಯಗಳ ವಿಶ್ಲೇಷಣಾತ್ಮಕ ಚರಿತ್ರೆ ಪ್ರಧಾನ ಧಾರೆಯಲ್ಲಿದೆ. ಈ ಅಧ್ಯಯನಗಳ ಜೊತೆಗೆ ಆಚರಣೆ ಮತ್ತು ಸಂಪ್ರದಾಯಗಳ ಪಠ್ಯಗಳನ್ನು ತೌಲನಿಕವಾಗಿ ನೋಡುವ ಅಥವಾ ಸಂಯುಕ್ತಗೊಳಿಸಿ ಚರಿತ್ರೆಯನ್ನು ಕಟ್ಟಿಕೊಳ್ಳುವ ಅವಶ್ಯಕತೆ ಇದೆ. ಇದು ಬೀರದೇವರ ಚರಿತ್ರೆಯ ವಿಸ್ತರಣಾ ರೂಪವೂ, ಸಮಗ್ರ ದೃಷ್ಟಿಕೋನವೂ ಹೌದು. ಪ್ರಸ್ತುತ ಅಧ್ಯಯನವೂ ಈ ದೃಷ್ಟಿಕೋನವನ್ನು ಹೊಂದಿದೆ. ಇದಕ್ಕಾಗಿ ಕ್ಷೇತ್ರದಲ್ಲಿರುವ ಮಾಹಿತಿಯನ್ನು ಸಂಗ್ರಹಿಸಿ ತೌಲನಿಕ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಹಾಲುಮತ ಶ್ರೀ ಬೀರಲಿಂಗೇಶ್ವರ ಮಹಾಪುರಾಣ, ಶ್ರೀ ಸದಾಶಿವ ಅಪ್ಪಣ್ಣ ಜುಮ್ಮಣ್ಣವರ, ೨೦೦೯, ಪು.೧೨

೨. ಅರ್ಜುನ ಗೊಳಸಂಗಿ, ಡೊಳ್ಳಿನ ಪದಗಳು, ೧೯೯೮, ಪು.೧೪

೩. ನುಡಿನಮನ ಎಚ್.ಬಿ. ಕಟ್ಟಿಗೆಣ್ಣನವರ ಅಭಿನಂದನ ಗ್ರಂಥ, (ಸಂ) ಪು. ೧೩೬

೪. ಚಂದ್ರಪ್ಪ ಅಜ್ಜಂಪುರ, ಕುರುಬರ ಕುರುಹುಗಳು, ೨೦೧೧, ಪು.೯೧

೫. ರವೀಂದ್ರನಾಥ ಕೆ., ಕನ್ನಡ ದಾಖಲು ಸಾಹಿತ್ಯ, ೨೦೦೦, ಪು.೪

೬. ಕಲಬುರ್ಗಿ ಎಂ.ಎಂ., ಶಾಸನ ಸೂಕ್ತಿ ಸುಧಾರ್ಣವ, ೧೯೯೭, ಪು. ೭

೭. ಕಲಬುರ್ಗಿ ಎಂ.ಎಂ., ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು, ೧೯೮೦, ಪು.೧೨

೮. ಎಪಿಗ್ರಾಫಿಯ ಕರ್ನಾಟಕ (ಸಂ) ಎಸ್.ಕೆ., ಪು. ೬೯

೯. ವಿ.ಕೆ. ನಂ. ೨೬ರಿಂದ ೧೯೩೬ ೩೭ ಎಸ್.ಐ. ೨೨

೧೦. ಎಪಿಗ್ರಾಫಿಯ ಕರ್ನಾಟಕ ಸಂಪುಟ, (ಸಂ) ಬಿ.ಎಲ್. ರೈಸ್, ಮೈಸೂರು ಗವರ್ನಮೆಂಟ್ ಪ್ರೆಸ್, ಪು. ೨೫೯

೧೧. ಕಲಬುರ್ಗಿ ಎಂ.ಎಂ., (ಸಂ) ಬಿಜಾಪುರ ಜಿಲ್ಲೆಯ ಶಾಸನ ಸೂಚಿ, ೧೯೭೬, ಪು.೧೦

೧೨. i. ರಾಜಶೇಖರ ಕೆ.ಎಲ್., (ಸಂ) ಎ.ಕ.VIII, ಚನ್ನಗಿರಿ ೨೮೬ ಸಂ

ii. ಪ್ರೊ. ಎಂ.ಜಿ. ನಾಗರಾಜ, ಸಾಂಸ್ಕೃತಿಕ ವೀರಭದ್ರಸ್ವಾಮಿ, ೧೯೯೯, ಪು. ೨೪

೧೩. ನಾಗರಾಜ ಎಂ.ಜಿ., ಸಾಂಸ್ಕೃತಿಕ ವೀರಭದ್ರಸ್ವಾಮಿ, ೧೯೯೯, ಪು. ೨೪

೧೪. ವಿಠ್ಠಲ ಮಣಚೆ ಶಿವ ಮಾಣಿಕ ಧನಪಲವಾರ ಅನುಬಂಧ ತ್ರೈಮಾಸಿಕ ಗುಲಬರ್ಗಾ ೫ನೆಯ ವರ್ಷ, ಎರಡನೆಯ ಅಂಕಣ, ಜುಲೈ ಸೆಪ್ಟೆಂಬರ್, ೧೯೮೧ ಪು. ೨೬ ೩೪

೧೫. Lepakshi by Amanchoral Gopal Rolplate No. xxviii, A shephard an a Pillar in the Rangamantapa

೧೬. ನಾಗರಾಜ ಎಂ.ಜಿ., ಸಾಂಸ್ಕೃತಿಕ ವೀರಭದ್ರಸ್ವಾಮಿ, ೧೯೯೯, ಪು. ೨೧

೧೭. ಅದೇ ಪು. ೨೨

೧೮. ಎಪಿಗ್ರಾಫಿಯಾ ಕರ್ನಾಟಕ ಭಾಗ-೧೨, ಪು.೮೫

೧೯. ನಾಗರಾಜ ಎಂ.ಜಿ., ಸಾಂಸ್ಕೃತಿಕ ವೀರಭದ್ರಸ್ವಾಮಿ, ೧೯೯೯, ಪು. ೨೫

೨೦. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೧೯೭೫, ಪು. ೧೫

೨೧. ಒಡೆಯರ್ ಡಿ. ಹೆಗ್ಗಡೆ, (ಲೇ) ಶ್ರೀ ರೇವಣಸಿದ್ದೇಶ್ವರ ಮತ್ತು ಶ್ರೀ ಬೀರೇಶ್ವರರು, ೨೦೦೫, ಪು.೪೭ ೪೯

೨೨. ನಾಗರಾಜ ಎಂ.ಜಿ., ಸಾಂಸ್ಕೃತಿಕ ವೀರಭದ್ರಸ್ವಾಮಿ, ೧೯೯೯, ಪು. ೨೨

೨೩. ಎಇಗ್ರಾಫಿಯ ಕರ್ನಾಟಕ ಭಾಗ-೧೦

೨೪. ಬೀರೇಶ್ವರ ಚರಿತ್ರೆ, ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ, ೧೯೫೮, ಪು. ೨೮

೨೫. ಶ್ರೀರಾಮ ಇಟ್ಟಣ್ಣನವರ, ಕೊಣ್ಣೂರು ಶ್ರೀ ಕರಿಸಿದ್ದೇಶ್ವರ ದೇವಸ್ಥಾನ, ೧೯೯೫, ಪು.೬

೨೬. ದೊಡ್ಡಣ್ಣ ಗದ್ದನಕೇರಿ ಬೀರದೇವನ ಉಪಾಸಕರ ಮಾದರಿಗಳು ಮತ್ತು ಕ್ಷೇತ್ರಗಳು, ೨೦೦೭, ಪು.೧೪

೨೭. ಅದೇ, ಪು.೧೪

೨೮. ಹಳ್ಳಿಕೇರಿ ಎಫ್.ಟಿ., ಚಂದ್ರಪ್ಪ ಸೊಬಟಿ, (ಲೇಖನ) ಬೀರದೇವರ ತೋಪುಜಾತ್ರೆಯ ಆಚರಣೆಗಳು, ಜಾನಪದ ಕರ್ನಾಟಕ ಸಂಪುಟ-೬, ಸಂಚಿಕೆ-೨, ೨೦೦೭

ಅಧ್ಯಾಯ - ೩

ಬೀರಪ್ಪನ ಇತಿವೃತ್ತ ವಿಚಾರ

೧. ಬೀರಪ್ಪನ ಪೂರ್ವಜರ ಹಿನ್ನೆಲೆ

೨. ತಂದೆ-ತಾಯಿ

೩. ಜನನ

೪. ಬಾಲಲೀಲೆ

೫. ಸಪ್ತಮಾತೃಕೆಯರ ಆರೈಕೆಯಲ್ಲಿ ಬೆಳೆದ ಬೀರಪ್ಪ

೬. ಮದುವೆ

೭. ಶಿಷ್ಯ ಪರಂಪರೆ

೮. ದೇಶಪರ್ಯಟನೆ

೯. ಭಗನಾಥ ಮತ್ತು ಕೋಣಾಸುರನನ್ನು ಸಂಹರಿಸಿದ ಸಂಗತಿ

೧೦. ಪವಾಡಗಳು

೧೧. ಬೀರಪ್ಪನ ರೂಪಾಂತರಗಳು ವೀರಭದ್ರ-ವಿರೂಪಾಕ್ಷ

ಅಧ್ಯಾಯ ಮೂರು

ಬೀರಪ್ಪನ ಇತಿವೃತ್ತ ವಿಚಾರ

ಬೀರಪ್ಪ ಹಾಲುಮತ ಸಮುದಾಯದ ಆರಾಧ್ಯದೈವ, ಕುಲದೈವ, ಮನೆದೈವ, ಹಾಲುಮತದ ಸಾಂಸ್ಕೃತಿಕ ವೀರ. ಭಾರತದಲ್ಲಿ ಹಲವು ಸಮುದಾಯಗಳಲ್ಲಿ ಹಲವು ನಾಮಗಳಿಂದ ಆರಾಧನೆಗೆ ಒಳಗಾಗುತ್ತಿರುವ ದೈವ. ಆದರೆ ಕರ್ನಾಟಕದಲ್ಲಿ ಸಿಗುವಷ್ಟು ಬೀರಪ್ಪನ ಚಾರಿತ್ರಿಕ, ಸಾಂಸ್ಕೃತಿಕ ಕಥೆಗಳು ಬೇರೆ ಯಾವುದೇ ರಾಜ್ಯದಲ್ಲಿ ಸಿಗುವುದಿಲ್ಲ. ಕರ್ನಾಟಕದಲ್ಲಿ ಈತನನ್ನು ಬೀರಪ್ಪ, ಬೀರಲಿಂಗ, ಬೀರಲಿಂಗೇಶ್ವರ, ಬಿರೋಭಾ, ಕರಿಸಿದ್ಧ, ಕರೇಸಿದ್ಧ ಮುರಸಿದ್ಧ, ಭೈರವ ಸಿದ್ಧೇಶ್ವರ, ಸಣ್ಣದೇವರು, ಮಾಯಕಾರಮಿಂಡ, ಚುಂಚ, ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಈ ಪ್ರತಿಯೊಂದು ಹೆಸರಿನ ಬಳಕೆಯ ಹಿಂದೆ ಬೀರಪ್ಪನ ಸಾಂಸ್ಕೃತಿಕ ಸ್ಥಿತ್ಯಂತರದ ಚರಿತ್ರೆ ಅಡಕವಾಗಿದೆ. ಉದಾಹರಣೆಗೆ:

೧. ಈಗಿನ ಜಮಖಂಡಿ ತಾಲೂಕು ಕೋಣಗನೂರು ಗ್ರಾಮದಲ್ಲಿ ಕೋಣಾಸುರನನ್ನು ಸಂಹಾರ ಮಾಡುವುದಕ್ಕೆ ಕರಿಸಿದ್ಧನ ಅವತಾರ ತಾಳಿದ.

೨. ಹಾಲುಮತದ ಸಾಂಸ್ಕೃತಿಕ ವೀರನಾದ ಇಟ್ಟಪ್ಪ ಗುರುದರ್ಶನ ಕೊಡುವುದಕ್ಕೆ ಮುರಗುಂಡಿ ಗ್ರಾಮದಲ್ಲಿ ಮುರಸಿದ್ಧನ ಅವತಾರ ತಾಳಿದ.

೩. ಬೀರಪ್ಪ ಉದ್ದನೆಯ ಮೂಗನ್ನು ಹೊಂದಿದ ಕಾರಣಕ್ಕೆ ಚುಂಚ ಎನ್ನುವ ಹೆಸರನ್ನು ಪಡೆದುಕೊಂಡ.[೧]

೪. ಉಗ್ರ ತಪಸ್ಸು ಮಾಡಿ ಶಿವನನ್ನು ಒಲಿಸಿಕೊಂಡ ಕಾರಣಕ್ಕೆ ಶಿವಸಿದ್ಧನೆನಿಸಿಕೊಂಡ.

೫. ಬೀರಪ್ಪನ ಸಾಂಸ್ಕೃತಿಕ ರೂಪ ಭೈರವ ಎನ್ನುವುದು ಶಂಬಾ ಅವರ ವಾದ. ಇವುಗಳಲ್ಲದೆ ಬೀರ ವೀರ ಹೀರ ಎನ್ನುವ ರೂಪಾಂತರದ ಕಥನಗಳು ಇವೆ. ಕೆಲವು ವಿದ್ವಾಂಸರು ಬೇರೆ ಬೇರೆ ಎಂದು ಗ್ರಹಿಸಿ ಸಾಂಸ್ಕೃತಿಕ ಚರಿತ್ರೆಯನ್ನು ದಾಖಲಿಸುತ್ತಿದ್ದಾರೆ ಪ್ರಸ್ತುತ ಈ ಅಧ್ಯಯನದಲ್ಲಿ ಇವರೆಲ್ಲ ಒಂದೇ ಎಂದು

ಗ್ರಹಿಸಲಾಗಿದೆ. ಪುರಾಣಗಳು, ಕಾವ್ಯಗಳು, ಡೊಳ್ಳಿನ ಹಾಡುಗಳು, ಕಥನಗೀತೆಗಳು, ಲಾವಣಿಗಳು, ಶಾಸನಗಳು ಹಾಗೂ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಿದ ಮಾಹಿತಿಗಳ ಹಿನ್ನೆಲೆಯಲ್ಲಿ ಬೀರಪ್ಪನ ಜೀವನ ವೃತ್ತಾಂತವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧.೧ ಬೀರಪ್ಪನ ಪೂರ್ವಜರ ವೃತ್ತಾಂತ

ಬೀರಪ್ಪನ ಪೂರ್ವಜರ ವಿವರಗಳ ಬಗ್ಗೆ ಅನೇಕ ಕಥನಗಳು ಸಿಗುತ್ತವೆ. ಅಂತಹ ಕಥನಗಳಲ್ಲಿ ಒಂದು ಕಥನ ಇಂತಿದೆ. ತಿಪರಂಗಿ ನಾಡಿನ ಅರಸನಾದ ತಿಪರೇಸೂರನಿಗೆ ತಿಪ್ಪಾದೇವಿ ಎಂಬ ಹೆಂಡತಿ ಇದ್ದಳು. ಇವರಿಗೆ ಏಳುಮಂದಿ ಹೆಣ್ಣುಮಕ್ಕಳಿದ್ದರು. ವಯಸ್ಸಿಗೆ ಬಂದ ಏಳುಜನ ಅಣ್ಣತಮ್ಮಂದಿರನ್ನು ಹುಡುಕಿ ಮದುವೆ ಮಾಡಲು ಯೋಚಿಸಿದರು. ಊರಿನಲ್ಲಿ ತಮ್ಮ ವಾರಿಗೆಯ ಹೆಣ್ಣುಮಕ್ಕಳು ಮದುವೆಯಾಗಿ ಮಕ್ಕಳನ್ನು ಎತ್ತಿಕೊಂಡು ಬರುವುದನ್ನು ಕಂಡ ಸೋದರಿಯರು ತಮ್ಮ ತಂದೆ ತಮ್ಮನ್ನು ಮದುವೆ ಮಾಡಿಕೊಡಲಿಲ್ಲವೆಂದು ನೊಂದು ಅಪ್ಪನ ಬಗ್ಗೆ ಆಡಿಕೊಂಡರು. ಸೇವಕಿಯರಿಂದ ಈ ಮಾತುಗಳು ತಿಪರೇಸೂರನ ಕಿವಿಗೆ ಬಿದ್ದವು. ಆಗ ಅರಸ ವರಗಳನ್ನು ಹುಡುಕಿ ಬರುವೆನೆಂದು ಕುದುರೆಯೇರಿ ಹೊರಟನು. ಒಂದು ಹೊಳೆಯ ದಂಡೆಯ ಮೇಲೆ ಕುಳಿತು, ಊಟ ಮಾಡಿ ಅಲ್ಲಿಯೇ ಹೊತ್ತುಗಳೆದು ಹಿಂತಿರುಗಿದನೆ ಹೊರತು ವರ ಹುಡುಕುವ ಪ್ರಯತ್ನ ಮಾಡಲಿಲ್ಲ. ಇದು ಮದುವೆ ನಿರಾಕರಣೆಯ ತಂತ್ರಗಾರಿಕೆಯನ್ನು ತಿಳಿಸುತ್ತದೆ.

ಆದರೆ ತಾನು ಸಂಬಂಧ ನೋಡಿ ಬಂದಿರುವುದಾಗಿ ಸುಳ್ಳು ಹೇಳಿ ಆ ಏಳು ಮಂದಿ ಸಹೋದರರು ನೋಡಲು ನಿಮ್ಮನ್ನು ಕರೆತರಲು ಹೇಳಿದ್ದಾರೆಂದು ನಂಬಿಸಿ ಅವರೊಡನೆ ಹೊಳೆದಂಡೆಗೆ ಬಂದನು. ಜಳಕ ಮಾಡಲು ಅವರನ್ನು ಹೊಳೆಗೆ ಇಳಿಸಿ ಮುಖಕ್ಕೆ ನೀರು ಚಿಮ್ಮುತ್ತಾ ಮುಂದೆ ಸಾಗುವಂತೆ ಮಾಡಿ ಅವರು ಸುಳಿಗೆ ಸಿಲುಕುವಂತೆ ಮಾಡಿದನು. ಸುಳಿಯಲಿ ಸಿಕ್ಕು ಆರು ಜನ ಹೆಣ್ಣುಮಕ್ಕಳು ನೀರುಪಾಲಾದರು. ಕಡೆಯವಳಾದ ಕಮಳಾದೇವಿ ಬೆನ್ನಲಿ ಈಜಿ ಪಾರಾಗಿ ಬಂದಳು. ಮನೆಗೆ ಕೆಟ್ಟ ಹೆಸರು ತರದ ಹಾಗೆ ತಾನು ಇರುತ್ತೇನೆಂದು ಜೀವ ಹೋಗುವುದು ಬ್ಯಾಡಪ್ಪ, ಮರ್ಯಾದಿ ಹೋಗುದು ಬ್ಯಾಡಪ್ಪ ಎಂದು ತಂದೆಗೆ ವಿನಂತಿ ಮಾಡಿಕೊಂಡಳು.

ತಂದೆಯು ಆಕೆಯೊಡನೆ ಮನೆಗೆ ಬಂದ ಮೇಲೆ ಅವಳನ್ನು ಹೂವಿನಲ್ಲಿ ತೂಕ ಮಾಡಿ ಏಳು ಅಂತಸ್ತಿನ ಮಹಡಿಯಲ್ಲಿ ಕೂಡಿಟ್ಟು, ಬೀಗ ಹಾಕಿ ಕಾವಲಿಸಿರಿದನು. ಇಪ್ಪತ್ನಾಲ್ಕು ವರ್ಷಗಳ ನಂತರ ಮೂರು ಲೋಕದಲ್ಲಿ ನನ್ನಂತಹ ಪತಿವ್ರತೆ ಯಾರೂ ಇಲ್ಲವೆಂಬ ಭಾವನೆ ಕಮಳಾದೇವಿಯಲ್ಲಿ ಮೂಡಿತು. ಇದಕ್ಕಾಗಿ ಏರ್ಪಟ್ಟ ಮೆರವಣಿಗೆಯಲ್ಲಿ ಹೊರಟ ಕಮಳಾದೇವಿ ಸಕ್ಕರೆ ಬೀರುತ್ತಾ ಊರಲ್ಲಿ ಬರುವಾಗ ನಾರದನು ಕಂಡು ವಿಚಾರಿಸಿದನು. ತನ್ನಂತಹ ಪತಿವ್ರತೆ ಮೂರು ಲೋಕದಲ್ಲಿಯೂ ಇಲ್ಲವೆಂದು ಆಕೆ ಹೇಳಿದ ಮಾತನ್ನು ನಾರದನು ಕೇಳಿ ಪಾರ್ವತಿ, ಲಕ್ಷ್ಮಿ, ಸರಸ್ವತಿಯರಿಗೆ ಚಾಡಿ ಹೇಳಿದನು. ಇಂತಹ ಮಾತುಗಳನ್ನು ಹೇಳಿ ಅವರಿಗೆ ಕೋಪ ಬರಿಸಿದನು. ಈ ಮೂವರು ಒಟ್ಟಾಗಿ ಕಮಳಾದೇವಿಯ ಪತಿವ್ರತ್ಯವನ್ನು ಹಾಳು ಮಾಡಿ ಬರಲು ಶಿವನನ್ನು ಒತ್ತಾಯ ಮಾಡಿ ಒಪ್ಪಿಸಿದರು. ತಿಪರಂಗಿ ನಾಡಿಗೆ ಬಂದ ಶಿವನನ್ನು ತಿಪರೇಸೂರನು ಗೌರವದಿಂದ ಮನೆಗೆ

ಕರೆದೊಯ್ದು ಸತ್ಕರಿಸುತ್ತಾನೆ. ಶಿವನು ಕಮಳಾದೇವಿಯನ್ನು ಮದುವೆ ಮಾಡಿಕೊಡು ಎಂದು ಕೇಳಿದಾಗ 'ನಿನ್ನಂಥ ಸನ್ಯಾಸಿಗೆ ಯಾರು ಹೆಣ್ಣು ಕೊಡುತ್ತಾರೆಂದು' ಅರಸನು ಜರಿಯುತ್ತಾನೆ. ಶಿವನು ಅಲ್ಲಿಂದ ಹೊರಟು ಕಮಳಾದೇವಿಗೆ ಸೂಜಿ, ದಬ್ಬಣದಿಂದ ಚುಚ್ಚುವಂತಹ ಬೇನೆ ಉಂಟು ಮಾಡಿದನು.

ಶಿವನು ಬುಡುಬುಡಕಿ ವೇಷ ಧರಿಸಿ ಮನುಷ್ಯರಿಗೆ ಬಂದಿರುವ ಎಲ್ಲ ತರಹದ ಬೇನೆ ಗುಣಪಡಿಸುತ್ತೇನೆಂದು ಸಾರುತ್ತಾ ಊರಲ್ಲಿ ಸಾಗಿದನು. ಕಮಳಾದೇವಿಯ ಬೇನೆ ಗುಣಪಡಿಸಲು ಇವನನ್ನು ಕರೆದೊಯ್ದರು. ಕಮಳಾದೇವಿಯನ್ನು ಕಂಡ ಈತ ಮದುವೆಯಾದವರಿಗೆ ಮಾತ್ರ ತಾನು ಔಷಧ ಕೊಡುವುದಾಗಿ ಹೇಳುತ್ತಾನೆ. ನೆಟ್ಟ ಕೂಡಲೆ ಗಿಡವಾಗಿ ಬೆಳೆಯುವ ಸಸ್ಯದ ಬೀಜವನ್ನು ಕೊಟ್ಟು ಊರಲು ಹೇಳುತ್ತಾನೆ. ಆ ಗಿಡದೊಂದಿಗೆ ಕಮಳಾದೇವಿಯ ಮದುವೆ ಮಾಡಬೇಕೆಂದು ತಿಳಿಸಿ ಬೀಜ ಕೊಟ್ಟು ಅಲ್ಲಿಂದ ಮರೆಯಾಗುತ್ತಾನೆ. ಅನಂತರ ಅವಳ ಬೇನೆ ಕಡಿಮೆಯಾಗುತ್ತಾ ಹೋಗುತ್ತದೆ. ಊರಿದ ಬೀಜ ಸಸ್ಯವಾಗಿ ಸೂರ್ಯ ಮೇಲೇರಿದಂತೆ ಅದು ಬೆಳೆಯುತ್ತಾ ಕೆಲವೇ ವೇಳೆಯಲ್ಲಿ ಗಿಡವಾಗುತ್ತದೆ. ಇದರ ಜೊತೆ ಕಮಳಾದೇವಿಯ ಮದುವೆ ನಡೆದಾಗ ಕೋಲ್ಮಿಂಚು ಹೊಡೆದು ಆಕೆಯ ಗರ್ಭ ಬೆಳೆಯಲು ಪ್ರಾರಂಭವಾಗುತ್ತದೆ. ಇದನ್ನು ಕಂಡ ಸೇವಕಿಯರು ಗಾಬರಿಯಾಗಿ ಇದು ಅರಸನಿಗೆ ತಿಳಿದರೆ ತಮಗೆ ಉಂಟಾಗುವ ಆಪತ್ತನ್ನು ಲೆಕ್ಕ ಹಾಕಿ ಅದರಿಂದ ಪಾರಾಗಲು ಯೋಚಿಸುತ್ತಾರೆ.

ಕಮಳಾದೇವಿಗೆ ಹೆರಿಗೆ ಸಮಯ ಸಮೀಪಿಸಿದ್ದನ್ನು ಲೆಕ್ಕಾಚಾರದಿಂದ ತಿಳಿದ ಪಾರ್ವತಿ ಶಿವನು ಕದ್ದು ಮಾಡಿದ ಹಾದರವನ್ನು ಗೆದ್ದು ತರುವೆನೆಂದು ಕೊರವಂಜಿಯ ವೇಷ ಧರಿಸಿ ಕಮಳಾದೇವಿಯ ಬಳಿಗೆ ಬರುತ್ತಾಳೆ. ಸೇವಕಿಯರು ಹುಟ್ಟಿದ ಮಗುವನ್ನು ಹೊರಗೆ ಎಸೆಯಲು ಬಂದಾಗ ಮನೆಯ ಮುಂದೆ ಭಿಕ್ಷೆಗೆ ನಿಂತ ಕೊರವಂಜಿ ಬುಟ್ಟಿಗೆ ಹಾಕುತ್ತಾರೆ. ಪಾರ್ವತಿ ಬುಟ್ಟಿಯನ್ನು ಹೊತ್ತು ಕೈಲಾಸಕ್ಕೆ ಹೊರಟಾಗ ಶಿವನು ಹದ್ದಿನ ರೂಪದಲ್ಲಿ ಬಂದು ಪಾರ್ವತಿಗೆ ಗೊತ್ತಾಗದಂತೆ ಬುಟ್ಟಿಯಲ್ಲಿನ ಕೂಸನ್ನು ತೆಗೆದುಕೊಂಡು ಹೋಗುತ್ತಾನೆ. ಆ ಮಗುವನ್ನು ಜಂಬೂದ್ವೀಪದ ಗಡ್ಡಿಯ ಕೊಳದ ಕಮಲದ ಹೂವಿನಲ್ಲಿರಿಸುತ್ತಾನೆ. ಶಿವನು ಹಾದರ ಮಾಡಿರುವುದನ್ನು ವಿಷ್ಣು, ಬ್ರಹ್ಮರಿಗೆ ತೋರಿಸುತ್ತೇನೆಂದು ಅವರೆದರು ಬುಟ್ಟಿ ಇಳುಹಿಸಿ ನೋಡಿದಾಗ ಮಗು ಅದರಲಿಲ್ಲ. ಗಾಬರಿಗೊಂಡ ಪಾರ್ವತಿ ಬೆವರಿದಳು. ಬೆವರಿನಿಂದ ಒದ್ದೆಯಾದ ಮೈಯ ಮಣ್ಣು ತೆಗೆದು ಗೊಂಬೆ ಮಾಡಿದ ಪಾರ್ವತಿ ಅದಕ್ಕೆ ಶಿವನಿಂದ ಜೀವ ತುಂಬಿಸಿದಳು. ಶಿವ ಪಾರ್ವತಿಯರು ಒಡಗೂಡಿ ಆ ಮಗುವಿಗೆ ಅಮೋಘಸಿದ್ಧನೆಂದು ಹೆಸರಿಟ್ಟರು. ಹಾಗಾಗಿಯೇ ಅಮೋಘಸಿದ್ಧನನ್ನು ಶಿವನ ವರಪುತ್ರನೆಂದು ಕರೆಯಲಾಗುತ್ತದೆ.

ಶಿವಭಕ್ತನಾದ ಕಾಳಿನಾರಾಯಣ ದೇವರನ್ನು ದಿನ ನಿತ್ಯ ಖಾಸಾಭಾಗದ ಹೂ ಮತ್ತು ನಾಗರಬಾವಿ ನೀರಿನಿಂದ ಶಿವಪೂಜೆ ಮಾಡುತ್ತಿದ್ದನು. ಆದರೆ ಶಿವನು ತನ್ನ ಪೂಜೆಗೆ ಜಂಬೂದ್ವೀಪದ ನಡುಗಡ್ಡೆಯ ಬಗೀಚದ ಹೂ ಮತ್ತು ಸೀತಾಳ ಬಯಸುತ್ತಾನೆ. ರಾತ್ರಿ ಪೂಜೆ ಮುಗಿಸಿ ಕಾಳಿನಾರಾಯಣನು ಮುಂಜಾನೆ ಪೂಜೆಗೆ ಶಿವ ಬಯಸಿದ. ಹೂವು ತರಲು ಹೊರಟು, ಶಿವನಿತ್ತ ಮೂರು ಹರಳುಗಳ ಸಹಾಯದಿಂದ ಹಾಲುಸಮುದ್ರ, ಕೀಲು ಸಮುದ್ರ ದಾಟಿ ಜಂಬೂದ್ವೀಪಕ್ಕೆ ಬರುತ್ತಾನೆ. ಅಲ್ಲಿಯ ಹೂವುಗಳಲ್ಲಿ ಒಂದು

ಕಮಲದ ಹೂವನ್ನು ಹರಿದುಕೊಂಡನು. ನಂತರ ಬಿಂದಿಗೆಯಲ್ಲಿ ನೀರು ತುಂಬಿಕೊಂಡು ಹಿಂತಿರುಗಿ, ಸೂರ್ಯ ಮೂಡುವ ಮೊದಲೇ ಬಂದು ಶಿವಪೂಜೆ ಮುಗಿಸುತ್ತಾನೆ. ಆಗ ಸೂರ್ಯ ಉದಯಿಸಿ ಮೇಲೇರಿದಂತೆ ಶಿವನ ಬಲತೊಡೆಯ ಮೇಲಿದ್ದ ಕಮಲದ ಹೂ ಬಾಯಿ ತೆರೆದು ಒಳಗೆ ಕೂಸು ಆಡುತ್ತಿರುವುದು ಗೋಚರವಾಯಿತು. ಗಾಬರಿಗೊಂಡ ಪಾರ್ವತಿಯು ಶಿವನ ಮುಖವನ್ನೊಮ್ಮೆ, ಮಗುವಿನ ಮುಖವನ್ನೊಮ್ಮೆ ನೋಡತೊಡಗಿದಾಗ ಶಿವನು ಪಾರ್ವತಿಯ ಉಡಿಯಲ್ಲಿ ಕೂಸನ್ನು ಹಾಕಿ ಜೋಪಾನ ಮಾಡಲು ಹೇಳಿದನು. ಆ ಕೂಸಿಗೆ ಬಾಳ ಭರಮ ಎಂದು ಹೆಸರಿಟ್ಟರು".[2] ಪಾವರ್ತಿಯ ಜೋಪಾನದಲ್ಲಿ ಬೆಳೆದು ದೊಡ್ಡವನಾದ ಬಾಳಭರಮದೇವರಿಗೆ ಮದುವೆ ಮಾಡಲು ಶಿವ ಬಯಸುತ್ತಾನೆ. ಭೂಲೋಕದಲ್ಲಿ ಹೆಣ್ಣು ಹುಡುಕಲು ಕಾಳಿನಾರಾಯಣನ ಜೊತೆ ಮಾತನಾಡಿ ಹೊರಡುತ್ತಾನೆ.

ಭರಮದೇವ ಸೂರಮ್ಮದೇವಿಯ ವಿವಾಹ

ಬೀರಪ್ಪನ ಪೂರ್ವಜರ ವೃತ್ತಾಂತದಲ್ಲಿ ಅನೇಕ ಅಂಶಗಳನ್ನು ಕಾಣಬಹುದು. ಸಪ್ತಮಾತೃಕೆಯರಿಂದ ಅಂದರೆ ಮಾತೃಪ್ರಧಾನ ಸಂಸ್ಕೃತಿಯಿಂದ ಬೀರಪ್ಪನ ವಂಶ ಸೃಷ್ಟಿಯಾಯಿತು. ಶೈವ ಆರಾಧನೆಯ ಸಂದರ್ಭದಲ್ಲಿ ಬೀರಪ್ಪನ ಪೂರ್ವಜರು, ವಿಶೇಷವಾಗಿ ತಂದೆ ಬಾಳಭರಮ ಕಾಲದಲ್ಲಿ ಮಾತೃಪ್ರಧಾನದಿಂದ ಪಿತೃಪ್ರಧಾನವಾಗಿ ಪರಿವರ್ತನೆಯಾಗುವ ಅನೇಕ ಸೂಕ್ಷ್ಮತೆಗಳು ಸಿಗುತ್ತವೆ.

ಕೈಲಾಸದಲ್ಲಿ ವೀರಭದ್ರನು ತನ್ನ ಶಿಷ್ಯ ಶಿವನಿಗೆ ಸಿದ್ಧರು ಹಾಗೂ ಅನೇಕ ಶಿವಶರಣರೊಂದಿಗೆ ಶಿವಸ್ತುತಿ ಶಿವಧ್ಯಾನದಲ್ಲಿ ಸಂತೋಷದಿಂದ ಇದ್ದ ಸಮಯದಲ್ಲಿ ಶಿವ ಪಾರ್ವತಿಯರು ಕೈಲಾಸದಲ್ಲಿಯ ಭರಮದೇವ ಅತಿ ಪ್ರೇಮದ ಪುತ್ರನಾಗಿ ದಿನೇ ದಿನೇ ಬೆಳೆದು ಪ್ರಾಯಕ್ಕೆ ಬಂದಿದ್ದನಲ್ಲದೆ ಈ ವಿಷಯವನ್ನರಿತ ಮಹಾದೇವನು ಋಷಿ ನಾರದನಿಗೆ ಹೇಳಿದ್ದೇನೆಂದರೆ ನಾರದನೇ ಬ್ರಹ್ಮನ ಮಾನಸಕನ್ಯೆಯಾದ ಸೂರಮ್ಮಾದೇವಿಯೊಡನೆ ನಮ್ಮ ಮಾನಸಪುತ್ರ ಆಕಾಶಭರಮನೊಂದಿಗೆ ವಿವಾಹ ಜರುಗಬೇಕೆಂದು ಇಚ್ಛೆಯಾಗಿದೆ ಎನ್ನುತ್ತಾನೆ. ನಾರದರು ಪರಮೇಶ್ವರಾ, ಇದೇನು ಆಗದ ವಿಷಯ, ಏಕೆಂದರೆ ನನ್ನ ತಂಗಿಯಾದ ಸೂರಮ್ಮಳನ್ನು ನೀವು ಕನ್ಯಾದಾನ ಮಾಡಲು ಉದ್ಯುಕ್ತರಾದರೆ ನನ್ನ ತಂಗಿ ಸುರಲೋಕ ಸುಂದರಿ ಸೂರಮ್ಮಳಿಗೆ ಆಕಾಶಭರಮನು ತಕ್ಕ ವರನಲ್ಲ. ಸುಸಂಪನ್ನ ಸದ್ಗುಣವಂತ ಸದ್ಧರ್ಮಿಣಿ ನವಲಾವಣ್ಯವತಿ, ರಂಭೆ, ಊರ್ವಶಿಯನ್ನು ಮೀರಿಸುವಂಥ ಸುಕೋಮಲೆ ಅತಿ ಮಧುರ ಮಹಿಮಾನ್ವಿತೆ. ಆಚಾರ ಸಂಪನ್ನಳು, ಸತ್ಯಧುರಳು ಸತ್ಕುಲೋತ್ಪನ್ನಗಳೂ ಆದಂಥಾ ನನ್ನ ತಂಗಿಗೆ ತಕ್ಕ ವರ ಆಗಲೂ ಹೇಗೆ ಸಾಧ್ಯ. ಇದು ನನ್ನಿಂದ ಆಗದ ಮಾತು. ಇದನ್ನು ಸುಳ್ಳುಮಾಡಿ ಬೇಕಾದ ವಿಷಯ ಪರಿಪಾಲಿಸಿರಿ. ಶಿವನೇ, ಇದೆಂಥಾ ಸಮಯಕ್ಕೆ ನನ್ನನ್ನು ಶಿಕ್ಷೆಗೆ ಗುರಿಪಡಿಸಿದೆ. ಇದಕ್ಕೆ ನಾನು ಒಪ್ಪಲಾರೆ. ನೀವು ಎಂಥ ಶಾಪ ಕೊಟ್ಟರೂ ಸಹ ಈ ಆಜ್ಞೆ ನನ್ನಿಂದ ಪಾಲಿಸಲಾಗದು ದೇವಾ ಎಂದು ಅಂಗಲಾಚಿ ಬೇಡಿಕೊಂಡನು. ನಾರದನು ಶಿವನಿಗೆ ತಾವು ಆಜ್ಞಾಪಿಸಿದ ಪ್ರಕಾರ ಆಕಾಶಭರಮನು ತನ್ನ ತಂಗಿಗಿಂತಲೂ ಅತಿ ಶ್ರೇಷ್ಠ ವರಪುತ್ರ. ಅವನನ್ನು ನಾನೇನು ಬಣ್ಣಿಸಲಿ. ನನ್ನ ತಂಗಿಯಾದರೂ ತಕ್ಕ ವಧು ಎಂದು ಬಿಮಗೆಣಿಸಿದರೂ ದೇವಗಣಕ್ಕೆ ಸರಿ ಹೊಂದಲಿಕ್ಕಿಲ್ಲ. ಅಂತಹ ಜಗದೋದ್ಧಾರಕ ಆಕಾಶಭರಮನಿಗೆ

ನನ್ನ ತಂಗಿ ಹೇಗೆ ಸರಿ ಸಾಟಿ ಎಂಬ ಸಂಶಯ ನನ್ನನ್ನು ಕಾಡುತ್ತದೆ. ಅಲ್ಲದೇ ನಾನು ತ್ರಿಲೋಕ ಸಂಚಾರಿಯಾಗಿದ್ದುದರಿಂದ ನಿಮ್ಮ ಇಚ್ಛಾನುಸಾರ ಆತನಿಗೆ ತಕ್ಕ ವಧುವನ್ನು ಅವಲೋಕಿಸುತ್ತೇನೆ. ಸ್ವರ್ಗ ಮರ್ತ್ಯ ಪಾತಾಳಗಳಲ್ಲಿಯೂ ದಶದಿಕ್ಕುಗಳಿಗೂ ಅಲೆದು ರಾಜಮನೆತನದ ಒಳ್ಳೆಯ ರಾಜಪುತ್ರಿಯನ್ನು ಆರಿಸಿ ಎಲ್ಲ ತರದ ಸುಲಕ್ಷಣ ಬಲ್ಲ ಮಹಾಮಹಾಪಂಡಿತರಿಂದ ಶೋಧಿಸಿ ಕನ್ಯಾರತ್ನವನ್ನು ಆಕಾಶಭರಮನಿಗೆ ವಿವಾಹ ಮಾಡೋಣವೆಂದು ನಿಮ್ಮ ಇಚ್ಛಾಪೂರ್ತಿ ಮಾಡುತ್ತೇನೆ. ನನ್ನ ತಂಗಿ ಆಕಾಶಭರಮನಿಗೆ ಯಾವುದರಿಂದಲೂ ಶೋಭೆಗೊಳ್ಳಲಾರದ, ಅಸಂಬದ್ಧವಾಗಿ, ಹಾಸ್ಯಾಸ್ಪದಕ್ಕೀಡಾಗುವುದು. ಇದೊಂದು ಆಜ್ಞೆ ಬಿಟ್ಟು ಬೇರಾವುದನ್ನೂ ನಾನು ಪಾಲಿಸುವೆನು ಪರಮೇಶ್ವರಾ ಎಂದನು. ನಾರದರು ತಮ್ಮ ನಗರವಾದ ನಗರಿಪಟ್ಟಣಕ್ಕೆ ಬಂದರಲ್ಲದೇ ಕೈಲಾಸದಲ್ಲಿ ನಡೆದ ಯಾವ ವೃತ್ತಾಂತವನ್ನು ಎಲ್ಲಿಯೂ ತಿಳಿಸದೆ ಅಂದರೆ ತಮ್ಮ ಸಹೋದರರಿಗೂ ತಿಳಿಸದೆ ಈ ವಿವಾಹ ಏನಾದರೂ ಮಾಡಬಾರದೆಂಬ ಅಭಿಲಾಷೆಯಿಂದಲೇ ಮಗ್ನರಾದ ನಾರದರಿಗೆ ರಾತ್ರಿ ನಿದ್ರೆ ಬರಲಿಲ್ಲ. ಅದೇ ಗುಂಗಿನಲ್ಲಿ ಬೆಳಗೆದ್ದು ನಾರದರು ಸ್ನಾನಾದಿ ಕರ್ಮ ಮಂಗಲಗೊಳಿಸಿ ಪ್ರತಿದಿನದಂತೆ ಶಿವಪೂಜೆಗೆಂದು ಕೈಲಾಸಕ್ಕೆ ಆಗಮಿಸಿದರು. ಶಿವಪೂಜೆ ಮಾಡಿ ಶಿವನಿಂದ ಅಪ್ಪಣೆ ಪಡೆದು ಎಲ್ಲ ಕಡೆಗೂ ಸಂಚರಿಸಿ, ಸಂದರ್ಶಿಸಿ, ಎಲ್ಲ ಕನ್ಯಾಮಣಿಗಳನ್ನು ಶಿವನಿಗೆ ತೋರಿಸಿದರೂ ಶಿವನೊಪ್ಪಲಿಲ್ಲ. ಅಲ್ಲದೆ ನಾರದರೇ, ಸುಮ್ಮನೆ ವ್ಯರ್ಥ ಸಂಚರಿಸಿ ಸಂಕೋಚಕ್ಕೆ ಒಳಪಡದೆ ಸಂಕಟಕ್ಕೊಳಪಡಬೇಡ. ನಮ್ಮ ಇಚ್ಛೆಯಂತೆ ಸೂರಮ್ಮ ದೇವಿಯನ್ನು ಆಕಾಶ ಭರಮನಿಗೆ ದಯಪಾಲಿಸಿ ಲಗ್ನ ನೆರವೇರಿಸಿರಿ ಎಂದು ಆಗ್ರಹ ತೊಟ್ಟ. ಪರಶಿವನು ತನ್ನ ಹಠ ಬಿಡಲಿಲ್ಲ. ಕೊನೆಗೆ ನಾರದರು ಶಿವನಿಂದ ನಿರ್ಮಿತವಾದ ಜಗತ್ತು ಶಿವನಿಗೂ ತಿಳಿಯದಂತೆ ಇದೆಂತಹ ಮರ್ಮವೆಂದು ಹತಾಶನಾಗಿ ತನ್ನ ತಂಗಿಯನ್ನು ಕನ್ಯಾದಾನ ಮಾಡಲು ಸನ್ನದ್ಧನಾದನು. ಶಿವನಾಜ್ಞೆಯನುಸಾರ ವಿಧಿವತ್ತಾಗಿ ಕಾಳಿನಾರಾಯಣನ ಊರಾದ ನಗರಿಪಟ್ಟಣಕ್ಕೆ ಬಂದು ನಂದಿಯನ್ನು ಮುಂದೆ ಬಿಡುತ್ತಾರೆ. ನಂದಿಯು ಕಾಳಿನಾರಾಯಣನ ಮನೆಯಂಗಳ ಹೊಕ್ಕು ನಿಂತ ಕಾರಣ ಅವನ ತಂಗಿ ಸೂರಮ್ಮದೇವಿಯನ್ನು ಬಾಳಭರಮನಿಗೆ ಮದುವೆ, ಲಗ್ನದ ಮಿತಿ ನಿಶ್ಚಯಿಸಿ ಆಗಿಂದಾಗ್ಗೆ ಎಲ್ಲ ದೇವಗಣಂಗಳೂ, ಋಷಿ ಪುಂಗವರೂ, ದೇವದೇವತೆಯರು, ಸುಮಂಗಲೆಯರು, ಆಗಮಿಸಿ ವಧುವರರಾದ ಆಕಾಶಭರಮನೊಡನೆ ಸೂರಮ್ಮದೇವಿಯ ಲಗ್ನ ತ್ರಿಲೋಕಗಳಲ್ಲಿ ನಡೆಯಿತು. ಇದು ಯಾರಿಂದಲೂ ನೀಗದ ಕಾರ್ಯ. ಪರಮೇಶ್ವರನಿಂದ ನಿಲ್ಲುವುದಿಲ್ಲೆಂಬುದು ಅರಿತು ಸರ್ವ ಆದರಾತಿಥಿಗಳು ತಮ್ಮ ತಮ್ಮ ಸ್ಥಾನಗಳಿಗೆ ಪರಮಾನಂದಭರಿತರಾಗಿ ಶಿವನಿಂದ ಶುಭಾಶೀರ್ವಾದ ಹೊಂದಿ ತೆರಳಿದರು.

ಕಾಳಿನಾರಾಯಣನು ತನ್ನ ತಂಗಿ ಸುಖವಾಗಿರಲೆಂದು ಚಂದನಗಿರಿಯನ್ನೇ ಕಾಣಿಕೆಯಾಗಿ ಕೊಡುತ್ತಾನೆ. ಅಲ್ಲಿಯ ಅರಮನೆಯಲ್ಲಿ ಅವರೀರ್ವರೂ ವಾಸಿಸತೊಡಗುತ್ತಾರೆ. ಭರಮದೇವನು ಮತ್ತು ಸೂರಮ್ಮದೇವಿಯು ಚಂದನಗಿರಿಯಲ್ಲಿ ಸುಖದಿಂದ ಕಾಲಹರಣ ಮಾಡುತ್ತಾ, ಜನರ ಉದ್ಧಾರಕ್ಕಾಗಿ ಹಗಲಿರುಳು ದುಡಿಯುತ್ತಾ, ಸಾಧು ಸಂತರು ಬಂದರೆ ಅವರ ಪಾದಪೂಜೆ ಮಾಡಿ ಪಾಲನೆ ಪೋಷಣೆ ಮಾಡುತ್ತಾ, ಜನರ ಏಳ್ಗೆಗಾಗಿಯೇ ಹೆಚ್ಚಾಗಿ ಶ್ರಮಪಡುತ್ತಿದ್ದರು. ಶಿವನು ಕರೆದಾಗ ಕೈಲಾಸಕ್ಕೆ ತೆರಳುವ ಸರಳಮಾರ್ಗ ತೋರುತ್ತ ನಡೆದಿದ್ದಾನೆ.

ಶಿವಭಕ್ತ ಶ್ರದ್ಧೆ, ಸಾಧುನಿಷ್ಠೆ, ಪರೋಪಕಾರ, ಪರಮಹಿತವೇ ತನ್ನ ಹಿತವೆಂದು ಭಾವಿಸುತ್ತ ವಿಶಾಲ ಬುದ್ಧಿಯಿಂದ ಶಿವನಿಗಾದರೂ ಸಂತಸದ ಪುತ್ರನಾಗಿ ಕೈಲಾಸದಿಂದ ಭೂಲೋಕಕ್ಕೆ ಸೂರಮ್ಮದೇವಿ ಭರಮದೇವರಿದ್ದ ಶಿವಸ್ಥಾನಕ್ಕೆ ಶಿವನು ಆಗಮಿಸಿ ದರ್ಶನವಿತ್ತು ಆನಂದದಿಂದ ಶಿವನು ನುಡಿದ ಮಾತಿನಂತೆ ಕಾಯಕದಲ್ಲಿ ತೊಡಗಿ ಹಿತವಾದ ಕಾಯಕವನ್ನರಿತು ಇಂದಿನಿಂದ ಚಂದನಗಿರಿ ಎಂದು ಹೆಸರುವಾಸಿಯಾಗಲಿ, ಅಮರವಾಗಲಿ ಎಂದು ಹರಸಿ ಅವರಿಂದ ಪೂಜೆಗೊಂಡ ಶಿವನು ಪರಮಾನಂದದಿಂದ ಕೈಲಾಸಕ್ಕೆ ತೆರಳಿದನು. ಇದರ ಮುಂದಿನ ಭಾಗ ಮುಂದುವರೆದು ಬೀರಪ್ಪನ ಸೋದರಮಾವ ಕಾಳಿನಾರಾಯಣನ ವೃತ್ತಾಂತ್ತ ಆರಂಭವಾಗುತ್ತದೆ.

ಕಾಳಿನಾರಾಯಣ ವೃತ್ತಾಂತ

ಹೊಸದಾಗಿ ಮದುವೆಯಾದ ತಂಗಿ ಸೂರಮ್ಮದೇವಿಯನ್ನು ದೊಡ್ಡ ಹಬ್ಬವಾದ ಎಳ್ಳಮಾವಾಸ್ಯೆಗೆ ತವರಿಗೆ ಕರೆತರುತ್ತಾರೆ. ತವರಿನ ಪದ್ಧತಿಯಂತೆ ಹೊಲದಲ್ಲಿ ಚರಗ ಚೆಲ್ಲಲು ಸೂರಮ್ಮದೇವಿ ಹೊರಟಾಗ ಅಣ್ಣ ಕಾಳಿನಾರಾಯಣ ಜೊತೆಯಲ್ಲಿ ಹೋಗಲಿಲ್ಲ. ಇವಳ ಹಾಗೆ ಚರಗ ಚೆಲ್ಲಲು ಬಂದ ಊರಿನ ಹೆಣ್ಣು ಮಕ್ಕಳೆಲ್ಲ ಅಣ್ಣತಮ್ಮಂದಿರೊಡನೆ ಬಂದು ಉಲ್ಲಾಸದಿಂದ ಚರಗ ಚೆಲ್ಲಿ ಕಬ್ಬು ಕಾಯಿಯೊಡನೆ ಮನೆಗೆ ಮರಳಿದ್ದನ್ನು ಕಂಡು ಸೂರಮ್ಮದೇವಿ ಮರುಗಿ ಕಣ್ಣೀರಿಟ್ಟಳು.

ಮೂರನೆಯ ದಿನ ಕಾಳಿನಾರಾಯಣನು ಶಿವಪೂಜೆಗೆ ಹೋಗುವ ಮುನ್ನ ತೋಟಕ್ಕೆ ಬಂದಾಗ, ಗಿಡದಿಂದ ಹೂಗಳೆಲ್ಲಾ ಉದುರಿರುವುದನ್ನು ಕಂಡನು. ಗುಂಡಿಯಲ್ಲಿನ ನೀರೆಲ್ಲಾ ಬತ್ತಿಹೋಗಿ ತಳದಲ್ಲಿ ಸ್ವಲ್ಪವೇ ಇರುವುದನ್ನು ನೋಡಿದನು. ಬಿದ್ದ ಹೂಗಳನ್ನೇ ಆಯ್ದುಕೊಂಡು, ಇದ್ದ ತಳದ ನೀರನ್ನೇ ಬಿಂದಿಗೆಯಲ್ಲಿ ತುಂಬಿಕೊಂಡು ಬಂದು ಶಿವಪೂಜೆ ಮುಗಿಸಿ, ಹೀಗಾಗಲು ಕಾರಣವನ್ನು ಶಿವನಲ್ಲಿ ವಿಚಾರಿಸಿದನು. ನಿನ್ನ ತಂಗಿ ಕಣ್ಣೀರು ಹಾಕಿದ್ದರಿಂದ ಹೀಗೆ ಆಗಿದೆಯೆಂದು, ಇದು ನೀನು ಮಾಡಿದ ಪಾಪವೆಂದು ಹೇಳಿದ ಶಿವನು ಅದರ ಪರಿಹಾರಕ್ಕೆ ಕಾಶಿಗೆ ಹೋಗಿ ಬರಲು ತಿಳಿಸಿದನು. ಕಾಳಿನಾರಾಯಣ ಕಾಶಿಗೆ ಹೋಗಿ ಬರುವವರೆಗೆ ಬಾಳಭರಮನಿಗೆ ಶಿವಪೂಜೆ ಮಾಡುತ್ತಿರುವಂತೆ ಒಪ್ಪಿಸಲಾಯಿತು. ಜಂಬೂದ್ವೀಪದಲ್ಲಿ ಆಗ ಬಿತ್ತಿ ಆಗ ಬೆಳೆಯುವ ಹೂವಿನ ಬೀಜಗಳನ್ನು ತಂದು ಅವುಗಳ ಹೂವಿನಿಂದ ತನ್ನನ್ನು ಪೂಜಿಸಬೇಕೆಂದು ಬಾಳಭರಮದೇವರಿಗೆ ಶಿವನು ಹೇಳುತ್ತಾನೆ. ಜಂಬೂದ್ವೀಪಕ್ಕೆ ಹೋಗಲು ಸಹಾಯಕ್ಕಾಗಿ ಶಿವನು ಮೂರು ಹರಳುಗಳನ್ನು ಬಾಳಭರಮನಿಗೆ ಕೊಡುತ್ತಾನೆ. ಹರಳುಗಳ ಸಹಾಯದಿಂದ ಭರಮನು ಹಾಲುಸಮುದ್ರ, ಕೀಲು ಸಮುದ್ರ ದಾಟಿ ಜಂಬೂದ್ವೀಪಕ್ಕೆ ಹೋದನು. ಅಲ್ಲಿ ಈಜಾಡುತ್ತಿದ್ದ ಏಳು ಜನ ಜಲಕನ್ಯೆಯರಿಗೆ ತನ್ನ ಪರಿಚಯ ಹೇಳಿದನು. ಅವರು ಬಾಳಭರಮನ ತಾಯಿ ಕಮಳಾದೇವಿ ಮತ್ತು ಅವಳ ಆರು ಜನ ಸಹೋದರಿಯರೇ ಆಗಿದ್ದರು. ಬಾಳಭರಮನು ತನ್ನ ಮಗನೆಂದು ಕಮಳಾದೇವಿ ಹೇಳಿದಳು. ಏಳು ಜನ ಅಕ್ಕತಂಗಿಯರು ತಾವು ಮುಡಿಯುವ, ಆಗ ಬಿತ್ತಿ ಆಗ ಬೆಳೆಯುವ ಹೂವಿನ ಗಿಡಗಳ ಬೀಜಗಳನ್ನು ಭರಮನಿಗೆ ಕೊಟ್ಟರು. ಮಣ್ಣಿನೊಡನೆ ಮೊಲೆಹಾಲನ್ನು ಬೆರೆಸಿ, ಹಾಲುಗುಂಬಳಕಾಯಿ ಸೃಷ್ಟಿಸಿ, ಮಗನ ಬೆನ್ನಿಗೆ ಕಟ್ಟಿ ಅದರ ಸಹಾಯದಿಂದ ಸಮುದ್ರ ದಾಟಲು ಹೇಳಿ ಕಳುಹಿಸಿದರು. ಬಾಳಭರಮನು ಹಿಂದಿರುಗಿ ಬಂದು ಹೂವಿನ ಬೀಜಗಳನ್ನೂರಿ, ಬೆಳೆದ ಸಸಿಯಲ್ಲಿ ಅರಳಿದ

ಹೂವುಗಳಿಂದ ಶಿವನ ಪೂಜೆ ಮಾಡಿದ್ದರಿಂದ ಶಿವ ಪ್ರಸನ್ನನಾಗಿ ಇನ್ನು ಮುಂದೆ ಬೇರೆ ಯಾರಿಗೂ ಅವಕಾಶ ಕೊಡದೆ ನೀನು ಪೂಜೆ ಮಾಡು ಎಂದು ಹೇಳಿದನು.

ಒಂಬತ್ತು ತಿಂಗಳು ಕಾಶಿಯಾತ್ರೆ ಮುಗಿಸಿ ಹಿಂತಿರುಗಿ ಬಂದ ಕಾಳಿನಾರಾಯಣನು ಶಿವಪೂಜೆಗೆ ಬಂದಾಗ ಸೇವಕರು ಅವನನ್ನು ಒಳಗೆ ಬಿಡಲಿಲ್ಲ. ತಾನು ಮೂರು ಮಾತು ಹೇಳಿ ಹೋಗುವುದಾಗಿ ವಿನಂತಿಸಿಕೊಂಡಿದ್ದರಿಂದ ಅವನನ್ನು ಶಿವನು ಒಳಗೆ ಬರಮಾಡಿಕೊಳ್ಳುತ್ತಾನೆ. ಶಿವನ ಮುಂದೆ ನಿಂತು ಕಾಳಿನಾರಾಯಣನು ಮುಂಜಾನೆ ಎದ್ದು ಒಣಗಿಡ ನೋಡಬಾರದು, ಕುಳಬಾನ ನೋಡಬಾರದು, ಬಂಜೆಯ ಮುಖ ಕಾಣಬಾರದು ಎಂದು ಹೇಳುತ್ತಾನೆ. ಈ ಮಾತುಗಳನ್ನು ಗಮನಿಸಿದ ಶಿವನು ಭರಮದೇವರಿಗೆ ಬದಲಾಗಿ ಕಾಳಿನಾರಾಯಣನೇ ತನ್ನ ಪೂಜೆಗೆ ಬರಲು ತಿಳಿಸುತ್ತಾನೆ. ನಿರಾಶೆಗೊಂಡ ಬಾಳಭರಮನು ಶಿವಪೂಜೆಗೆ ತಂದಿದ್ದ ಹೂವು ಮತ್ತು ನೀರನ್ನು ತೆಗೆದುಕೊಂಡು ಹೋಗಿ ಎತ್ತುಗಳಿಗೆ ಪೂಜೆ ಮಾಡುತ್ತಾನೆ. ಆ ದಿನ ಕಾರಹುಣ್ಣಿಮೆ ಎಂದು ಕರೆಸಿಕೊಳ್ಳುತ್ತದೆ. ತರುವಾಯ ಭರಮನು ಮನೆಗೆ ಬಂದು ಕಂಬಳಿ ಮುಸುಕು ಹಾಕಿ ಮಲಗಿ ಬಿಡುತ್ತಾನೆ. ಮುಂದೆ ಅಕ್ಕವ್ವ ಮಾಯವ್ವರ ವೃತ್ತಾಂತ ಆರಂಭವಾಗುತ್ತದೆ.

ಅಕ್ಕವ್ವ ಮಾಯವ್ವರ ವೃತ್ತಾಂತ

ದೇವಗಿರಿಯ ಅರಸ ದೇವೇಂದ್ರರಾಯ ಮತ್ತು ಮಡದಿ ಸುಭದ್ರೆಗೆ ಆರು ಹೆಣ್ಣುಮಕ್ಕಳಿದ್ದು ಏಳನೆಯವಳಾಗಿ ಮಾಯವ್ವ ಜನಿಸುತ್ತಾಳೆ. ಕೂಸಿನ ಜನನದ ಬಗ್ಗೆ ಪಂಚಾಂಗ ತೆಗೆಸಿ ನೋಡಲಾಗಿ ತಂದೆ ತಾಯಿಗೆ ಕೇಡು, ಅರಸೊತ್ತಿಗೆಗೆ ಕೇಡು ಎಂದು ತಿಳಿಯುತ್ತದೆ. ಅದಕ್ಕಾಗಿ ಹನ್ನೊಂದನೇ ದಿನಕ್ಕೆ ಬಂಗಾರದ ಪೆಟ್ಟಿಗೆಯಲ್ಲಿ ಹಾಕಿ ಹೊಳೆಯಲ್ಲಿ ತೇಲಿ ಬಿಟ್ಟರು. ತೇಲುತ್ತಾ ಬಂದ ತೆಪ್ಪ ತೆರೆಗಳ ಹೊಡೆತಕ್ಕೆ ಸಿಕ್ಕಿ ಹೊಳೆಯ ದಂಡೆಗೆ ಬಂದು ತಲುಪಿತು. ಅಲ್ಲಿ ತಪಸ್ಸು ಮಾಡುತ್ತಿದ್ದ ಸಾಧುಗಳು ಆ ಪೆಟ್ಟಿಗೆಯನ್ನು ತೆಗೆದುಕೊಂಡು, ಅಲ್ಲಿ ಏಳುನೂರು ಕುರಿಗಳನ್ನು ಮೇಯಿಸುತ್ತಿದ್ದ ಏಳು ಹೆಣ್ಣುಮಕ್ಕಳನ್ನು ಕೈಗೆ ಕೊಟ್ಟರು. ಈ ಏಳು ಜನರು ದಿಟ್ಟಿಯ ದಿಬ್ಬಿರಾಯನ ಮಕ್ಕಳಾಗಿದ್ದರು. ಅದುವರೆಗೆ ಏಳನೂರು ಕುರಿಗಳು ಗರ್ಭ ಧರಿಸಿರಲಿಲ್ಲ. ಮಗು ಅವರ ಕೈ ಸೇರಿದ ಕೂಡಲೇ ಎಲ್ಲ ಕುರಿಗಳಲ್ಲಿ ಕಳೆ ತಟ್ಟಿತು. ಇದು ಮಗುವಿನ ಕಾಲ್ಗುಣವೆಂದು ತಿಳಿದು ದಿಬ್ಬರಾಯ ಹೆಂಡತಿ ಶಾಂತಾಬಾಯಿಯನ್ನು ಕರೆದು ಕೂಸನ್ನು ಅವಳ ಉಡಿಯಲ್ಲಿ ಹಾಕಿದ. ಅವರು ಸಂಭ್ರಮದಿಂದ ಮಗುವಿಗೆ ಮಾಯವ್ವನೆಂದು ಹೆಸರಿಟ್ಟರು.

ದೊಡ್ಡವಳಾದ ಮಾಯವ್ವ ತಂದೆ ಬೇಡವೆಂದರೂ ಕೇಳದೆ ಕುರಿ ಕಾಯಲು ಹಠ ಮಾಡಿದಳು. ಕಾಯಿಕೋಲನ್ನು ಹಿಡಿದು ಕುರಿಗಳನ್ನು ಹೊಡೆದುಕೊಂಡು ಕಾಡುರುದ್ರರ ಭೂಮಿಗೆ ಬರುತ್ತಾಳೆ. ಈಕೆ ಓಡಾಡುವಾಗ ಕುಂಕುಮ ಮತ್ತು ಭಂಡಾರದ ಹೆಜ್ಜೆ ಗುರುತುಗಳು ಮೂಡುತ್ತಿದ್ದವು. ತಂಗಿಯನ್ನು ಹುಡುಕುತ್ತಾ ಕೈಲಾಸದ ಕಡೆಯಿಂದ ಬಂದ ಈಕೆಯ ಆರು ಮಂದಿ ಅಕ್ಕಂದಿರು ಇವಳ ಕುಂಕುಮದ ಮತ್ತು ಭಂಡಾರದ ಹೆಜ್ಜೆ ಗುರುತುಗಳನ್ನು ಕಾಣುತ್ತಾರೆ. ಹಿರಿಯವಳಾದ ಅಕ್ಕವ್ವ ಇವಳನ್ನು ಅಪ್ಪಿಕೊಂಡು ನೀನು ನನ್ನ ತಂಗಿಯೆಂದು, ನಾವೆಲ್ಲ ದೇವೇಂದ್ರರಾಯನ ಮಕ್ಕಳೆಂದು ಹೇಳುತ್ತಾಳೆ. ಸಮಯವಾಯಿತೆಂದು ಉಳಿದವರು ಕೈಲಾಸಕ್ಕೆ

ಹಿಂದಿರುಗಿದ್ದರಿಂದ ಮಾಯವ್ವ ಅಕ್ಕನೊಡನೆ ದಿಟ್ಟಿಯ ದಿಬ್ಬರಾಯನಲ್ಲಿಗೆ ಬರುತ್ತಾಳೆ. ಮಾಯವ್ವಳನ್ನು ಮಗಳೆಂದು ಒಪ್ಪಿಕೊಂಡು ದಿಬ್ಬರಾಯನು, ಅಕ್ಕವ್ವ ಮತ್ತು ಮಾಯವ್ವರಿಗೆ ತಲಾ ಮೂವತ್ತೈದು ಕುರಿಗಳನ್ನು ಕೊಡುತ್ತಾನೆ. ಇಬ್ಬರೂ ಚಂದ್ರಗಿರಿಯಲ್ಲಿ ಮನೆ ಕಟ್ಟಿಕೊಂಡು ವಾಸಿಸತೊಡಗುತ್ತಾರೆ.

ಕಾಡರುದ್ಧರ ಭೂಮಿಗೆ ಕುರಿ ಮೇಯಿಸಲು ಹೋದ ತಂಗಿ ಮಾಯವ್ವನಿಗೆ ರೊಟ್ಟಿಬುತ್ತಿ ಕಟ್ಟಿಕೊಂಡು ಅಕ್ಕವ್ವ ಬರುತ್ತಾಳೆ. ಇಬ್ಬರೂ ಅಲ್ಲಿದ್ದ ಕಂಚಿನಾಲದ ಮರದ ಕೆಳಗೆ ಊಟ ಮಾಡುತ್ತಾರೆ. ಆಗ ಕೂಸಿನ ಅಳುವ ಧ್ವನಿ ಕೇಳಿ ಮರದ ಮೇಲೆ ಗಮನಿಸಿದಾಗ ಬಂಗಾರದ ತೊಟ್ಟಿಲೊಂದು ಕಾಣುತ್ತದೆ. ಅಕ್ಕವ್ವ ಮರ ಹತ್ತಲು ಪ್ರಯತ್ನಿಸಿದಾಗ ಇರುವೆಗಳು ಏರಲು ಬಿಡುವುದಿಲ್ಲ. ಇರುವೆಗಳಿಗೆ ಸೋಮವಾರ ಸಕ್ಕರೆ ಹಾಕುವುದಾಗಿ ಮಾಯವ್ವ ಹೇಳಿದ್ದರಿಂದ ಆಕೆಗೆ ಮರ ಹತ್ತಲು ದಾರಿ ಮಾಡಿಕೊಡುತ್ತವೆ. ಮಾಯವ್ವ ತೊಟ್ಟಿಲ ಸಮೀಪಕ್ಕೆ ಬಂದಾಗ ನಾಗರಾಜ ತಡೆಯೊಡ್ಡಲು, ಬಾಗಿಲ ಮೇಲೆ ನಿನ್ನ ಬರೆಸುವೆನೆಂದಾಗ ದಾರಿ ಬಿಟ್ಟಿತು. ಹಗ್ಗ ಕಟ್ಟಿ ತೊಟ್ಟಿಲನ್ನು ಕೆಳಗೆ ಇಳಿಸಿಕೊಂಡರು. ನಂತರ ಇಬ್ಬರೂ ಕೂಸು ತನಗೆ, ನನಗೆ ಎಂದು ಜಗಳ ತೆಗೆದರು. ಅಲ್ಲಿಗೆ ಬಂದ ಎಳ್ಳೆಗುಂಡಿರಾಯಣ್ಣ ಇವರ ವಿವಾದ ಬಗೆಹರಿಸುವುದಾಗಿ ಹೇಳಿದ. ಇಬ್ಬರೂ ತೊಟ್ಟಿಲನ್ನು ಸುತ್ತು ಹಾಕಬೇಕೆಂದು ಹೇಳಿದ. ಆಗ ಯಾರ ಎದೆಬದಿ ಚಿಗುತು ಮೊಲೆಯಲ್ಲಿ ಹಾಲು ಚಿಮ್ಮುವುವೋ ಅವರಿಗೆ ಕೂಸು ಒಪ್ಪಿಸುವುದಾಗಿ ತಿಳಿಸಿದ. ಇಬ್ಬರೂ ಜಳಕ ಮಾಡಿ ಬಂದು ಮೊದಲು ಹಿರಿಯವಳಾದ ಅಕ್ಕವ್ವ ತೊಟ್ಟಿಲಿಗೆ ಮೂರು ಸುತ್ತು ಹಾಕಿ ಬಂದಳು. ಆದರೆ ಎದೆಬದಿ ಬಿಗಿಯಲಿಲ್ಲ. ಮಾಯವ್ವ ತೊಟ್ಟಿಲನ್ನು ಸುತ್ತು ಹಾಕಲು ಎದೆಬದಿ ಚಿಗುತು ಬಾಣಂತಿ ಕಳೆಯು ಬಂದಿತು. ಎಳ್ಳೆಗುಂಡಿರಾಯಣ್ಣನು ಮಾಯವ್ವನ ಉಡಿಯಲ್ಲಿ ಕೂಸನ್ನು ಹಾಕಿ ಜನಕೆ ತಮ್ಮನ ಮಾಡಿ ಮನಕೆ ಮಗನ ಮಾಡಿ ಸಲಹುವೆನೆಂದು ಹೇಳಿದ. ಮಾಯವ್ವ ತಮ್ಮನನ್ನು ಮನೆಗೆ ತಂದು ತೊಟ್ಟಿಲು ಕಾರ್ಯಕ್ರಮ ಮಾಡಿ ಲಿಂಗ ಬೀರಣ್ಣನೆಂದು ಹೆಸರಿಟ್ಟಳು. ಇಷ್ಟು ಮಾಯವ್ವ ಅಕ್ಕವ್ವನ ವೃತ್ತಾಂತವಾಗಿದೆ.

ಬೀರಪ್ಪನ ತಂದೆ-ತಾಯಿ

ಕರ್ನಾಟಕದಲ್ಲಿ ಬೀರಪ್ಪನ ಕುರಿತು ಸ್ಥಳಪುರಾಣ, ಐತಿಹ್ಯ, ಜನಪದ ಕಥೆಗಳಿವೆ. ಬೀರದೇವರ ತಂದೆ ಭರಮ, ಭರಮಭೂಪಾಲ, ಆಕಾಶಭರಮ, ಬಾಳಭರಮ, ಬಾಳಬ್ರಹ್ಮ ಎಂತಲೂ ತಾಯಿ ಸರಸ್ವತಿ, ರಸವತಿ, ಸೂರ್ಯಮ್ಮ, ಸೂರಮ್ಮದೇವಿ, ಸುರಾವತಿ, ಸೋದರಮಾವ ನಾರಾಯಣ, ಕೃಷ್ಣ, ಕಾಳಿನಾರಾಯಣ, ನಾರಾಯಣಗೌಡ, ಹರಿನಾರದನೆಂತಲೂ ಹೀಗೆ ಭಿನ್ನ ಭಿನ್ನ ನಾಮಗಳು ರೂಢಿಯಲ್ಲಿವೆ. ಹಾಗೆಯೇ ಅವನ ಜನ್ಮಸ್ಥಾನದ ಬಗ್ಗೆಯೂ ಭೂಲೋಕದವನೆಂದು, ಅಂತರಿಕ್ಷದವನೆಂದು, ಹೇಳಲಾಗಿದೆ. ಬೀರದೇವರ ತಂದೆ ತಾಯಿಗಳು ತಿಪರಂಗಿ ತಿಪರೇಸೂರದವರೆಂದೂ, ಆಲಮಟ್ಟಿ ಹಿನ್ನೀರಿನಲ್ಲಿ ಮುಳುಗಡೆಯಾಗಿರುವ ಚಂದ್ರಗಿರಿಯವರೆಂದೂ, ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಸಿದಿಯಾಣ ಶಿರಾಡೋಣದವರೆಂದೂ ಹಾಗೂ ಬೀರದೇವರ ಸೋದರಮಾವ ನಗರಿಪಟ್ಟಣದವನು, ನಾರಾಯಣಪೂರ ತಾಲೂಕು ಸುರಪುರದವನು ಎಂದು ಲೇಖಕರು, ಪುರಾಣಕಾರರು, ಸ್ಥಳೀಯ ಪ್ರಸಿದ್ಧ ಕ್ಷೇತ್ರಗಳಲ್ಲಿ ಹೀಗೆ ಅನೇಕ ಕಡೆಗಳಲ್ಲಿ ಕ್ಷೇತ್ರಕಾರ್ಯದ

ಮಾಹಿತಿಯ ಪ್ರಕಾರ ಬೇರೆ ಬೇರೆ ಹೆಸರುಗಳಿಂದ ಗುರುತಿಸಬಹುದು. ಹೀಗಿದ್ದೂ ಬೀರಪ್ಪನ ತಂದೆ ತಾಯಿಗಳು ಭರಮದೇವ ಮತ್ತು ಸೂರಮ್ಮದೇವಿ ಎಂದು ಕರೆಯಬಹುದು.

ಬೀರಪ್ಪನ ಜನನ ವೃತ್ತಾಂತ

ಬೀರಪ್ಪ ಜನನದಿಂದ ಕೊನೆಯವರೆಗೂ ಎಲ್ಲೂ ಸೋಲರಿಯದ ದೇವಮಾನವನಾಗಿ ಕಾಣುತ್ತಾನೆ. ಈತನ ಹುಟ್ಟು ಒಂದು ಅದ್ಭುತ. ಬೀರಪ್ಪ ಶಿವನವತಾರಿಯೇ, ಶಿವನ ಬೆವರಿನಿಂದ ಜನಿಸಿದವನು, ಬಾಳಭರಮ ಬೀರಪ್ಪನ ತಂದೆ ಕಮಳಾದೇವಿಯಲ್ಲಿ ಶಿವನ ಲೀಲೆಯ ಕಾರಣವಾಗಿ ಜನಿಸಿದವನು, ಪಾರ್ವತಿಯಿಂದ ಸಂರಕ್ಷಿಸಲ್ಪಟ್ಟವನು, ಸೂರಮ್ಮದೇವಿ ಬೀರಪ್ಪನ ತಾಯಿ, ಬಾಳಭರಮನ ಹೆಂಡತಿ ಈಕೆ. ಶಿವನ ಪೂಜಕನಾದ ಕಾಳಿನಾರಾಯಣನ ತಂಗಿ[೩]. ಕಾಳಿನಾರಾಯಣನಿಗೆ ಶಿವನು ತನ್ನ ಪೂಜೆಗೆ ಜಂಬೂದ್ವೀಪದ ಕಮಲದ ಹೂವು ಮತ್ತು ಸಿತಾಳದ ನೀರನ್ನು ಬಯಸಿದನು. ಶಿವನ ಆಜ್ಞೆಯಂತೆ ಕಾಳಿನಾರಾಯಣ ಜಂಬೂದ್ವೀಪಕ್ಕೆ ಹೊರಡುವ ಮುನ್ನ ಶಿವನ ಪೂಜೆಯನ್ನು ತಂಗಿಯ ಗಂಡ ಭರಮದೇವನಿಗೆ ಒಪ್ಪಿಸಿದನು. ಅಂದಿನಿಂದ ಭರಮದೇವನು ಅತ್ಯಂತ ಭಯ ಭಕ್ತಿಯಿಂದ ಶಿವನನ್ನು ಪೂಜಿಸತೊಡಗಿದನು. ಹಿಂದಿರುಗಿ ಬಂದ ನಾರಾಯಣನಿಗೆ ಭರಮದೇವನ ಪೂಜಾ ವೈವಿಧ್ಯತೆ ಕಂಡು ಅಸೂಯೆಗೊಂಡನು. ಹೇಗಾದರೂ ಮಾಡಿ ಅವನನ್ನು ಪೂಜೆಯಿಂದ ಮುಕ್ತಿ ಕೊಡಿಸಲೆಂದು ಬಂಜೆಯ ಪತಿಯಿಂದ ನೀವು ಪೂಜೆ ಸ್ವೀಕರಿಸುವುದೇ ಎಂದು ಪರಶಿವನ ತಲೆ ತುಂಬಿದನು. ನಾರಾಯಣನ ಮಾತು ಕೇಳಿ ಶಿವನು ಭರಮದೇವನನ್ನು ಪೂಜೆಯಿಂದ ಬಿಡುಗಡೆಗೊಳಿಸಿದನು.[೪] ಭರಮದೇವನು ಕಂಬಳಿ ಮುಸುಕು ಹಾಕಿ ಮಲಗಿದ ಕಾರಣ ತಿಳಿದು ತನ್ನ ಪತಿಗೆ ಮಾಡಿದ ಅವಮಾನ ಕಂಡು ಸುರಾವತಿ ಮನಸ್ಸಿಗೆ ಅತೀವ ದುಃಖವಾಯಿತು. ಅವಳು ಶಿವನಲ್ಲಿಗೆ ಬಂದು ತನಗೆ ಪುತ್ರಪ್ರಾಪ್ತಿಯಾಗುವಂತೆ ಆಶೀರ್ವದಿಸಿ ತನ್ನನ್ನು ಬಂಜೆಯ ಪಟ್ಟದಿಂದ ಮುಕ್ತಿಗೊಳಿಸುವಂತೆ ಪರಿಪರಿಯಾಗಿ ಬೇಡಿಕೊಂಡಳು. ಹೊನ್ನ ಹೊಕ್ಕಳ ಸುವರ್ಣ ಜಡೆ ಇರುವ ಮಗನು ಹುಟ್ಟುವನೆಂದು ಶಿವನು ಆಶೀರ್ವಾದ ಮಾಡಿ ಹೀಗೆ ನುಡಿಯುತ್ತಾನೆ.

ಹಸ್ತಚರ್ಮಾಂಬರಂ ಬಳಿಕ ಸುತೆಯಂ ಕರೆದು
ಮಸ್ತಕದ ಮೇಲೆ ಕಡುಮೋಹದಿಂ ತನ್ನಮೃತ
ಹಸ್ತಮಂಯಿಟ್ಟು ಭಸಿತವ ಕೊಟ್ಟು ಪುತ್ರವತಿಯಾಗಿ ಬಾಳೆಂದರಸುತ
ವಿಸ್ತಾರದಿಂದವಳಿಗಾನೆಂದಮಪ್ಪಂತೆ
ವಿಸ್ತರಿಸಿ ಹೊನ್ನು ಹೊಕ್ಕುಳ ಸುವರ್ಣದ ಜಡೆಗೆ
ಭಸ್ತಿಯಲಿ ಉಡಪನಂ ಧಿಕ್ಕರಿಪ ಬಾಲನುದ್ಭವಿಸುವನು ನಿನ್ನುದರದಿ.
ಜಾತಂಗೆ ನರರ ಭಯವಿಲ್ಲ ಸಟೆಯಲ್ಲ ತಿಳಿ
ಭೂತೇಶ ಪೇಳಿಕಳಿಸಲು ಸುರಾವತಿಯಳತಿ
ಪ್ರೀತಿಯಿಂದೈತಂದು ಪುರುಷಂಗೆ ಶಿವನೊರೆದ
ಮಾತುಗಳ ತಿಳಿಸುತಾ ಬರ್ಮಭೂಪಂ ಘನಾನಂದದೊಳ್ಮಗ್ನನಾದಂ[೫]

"ಮೂರು ವರ್ಣದವನೇನ ಮೂರು ಹೆಸರಿನವನೇನ
ಪಣೆಯುಬೆವರನಲ್ಲೇಳ ಹಣೆಯ ಬೆವರನಾದವ
ಪರಮೇಸೂರ ಹಣ್ಣೆಯ ಬೇವರ ಲಿಂಗಬೀರಣದೇವರು
ಲಿಂಗ ಬೀರಣದೇವರ ಹೆಸರ ಇಡಬೇಕೆಂದಾನ"[೬]

ಈ ರೀತಿ ಸೂರಮ್ಮದೇವಿ ಮಗನನ್ನು ಶಿವನ ಹಣೆ ಬೆವರಿನಿಂದ ಪಡೆಯುತ್ತಾಳೆ. ಶಿವನು ಅವಳ ಭಕ್ತಿಗೆ ಮೆಚ್ಚಿ ತನ್ನ ಬೆವರನ್ನೇ ಬಟ್ಟಲಲ್ಲಿ ತುಂಬಿಕೊಟ್ಟು ಅದನ್ನು ಗಂಡ ಹೆಂಡರಿಬ್ಬರೂ ಸೇವಿಸಿದರೆ ಒಂದು ಗಂಡು ಮಗುವಾಗುವುದೆಂದು ತಾನೇ ಮಗನಾಗಿ ಅವತರಿಸುವೆನೆಂದು ಹೇಳಿದನು. ಮನೆಗೆ ಬಂದು ಸೂರಮ್ಮದೇವಿ ಮಡಿಯಾಗಿ ಗಂಡ ಹೆಂಡಿರಿಬ್ಬರೂ ಬಟ್ಟಲ ಬೆವರನ್ನು ಸೇವಿಸಿದ್ದರಿಂದ ಆಕೆ ಗರ್ಭ ಧರಿಸುತ್ತಾಳೆ.

ಸೂರಮ್ಮದೇವಿಗೆ ಐದು ತಿಂಗಳು ತುಂಬುವಾಗ ನಗರಿಪಟ್ಟಣದಿಂದ ಚಂದನಗಿರಿಗೆ ಬಳೆಗಾರ ಬಾಬಣ್ಣ ಬರುತ್ತಾನೆ. ತಾನು ತವರಿನ ಬಾನದ ಬುತ್ತಿ ಬಯಸಿರುವ ಸುದ್ದಿಯನ್ನು ಅಣ್ಣ ಕಾಳಿನಾರಾಯಣನಿಗೆ ಅವನೊಡನೆ ಹೇಳಿ ಕಳುಹಿಸುತ್ತಾಳೆ. ತಂಗಿ ಗರ್ಭವತಿಯಾದ ಸುದ್ದಿ ತಲುಪಿತು. ಈ ಸುದ್ದಿ ಕೇಳಿ ನಾರಾಯಣ ಭಯ ಗೊಳ್ಳುತ್ತಾನೆ. ತನ್ನ ತಂಗಿಗೆ ಹುಟ್ಟುವ ಮಗುವಿನಿಂದ ತನಗೆ ಕೇಡೆಂದು ಭವಿಷ್ಯಜ್ಞಾನದಿಂದ ತಿಳಿದ ಕಾರಣ ಗರ್ಭದಲ್ಲಿನ ಕೂಸನ್ನು ಕೊಲ್ಲಬೇಕೆಂದು ಯೋಚಿಸಿ ತಂಗಿಗೆ ವಿಷದ ಬುತ್ತಿ ತರುತ್ತಾನೆ.

ಸೂರಮ್ಮದೇವಿಯ ಕನಸಿನಲ್ಲಿ ಗರ್ಭದ ಕೂಸು ಮಾತನಾಡಿ ನಿಮ್ಮ ಅಣ್ಣ ತರುವ ಬಾನದ ಬುತ್ತಿ ಸೀರೆ ಕುಪ್ಪಸ ವಿಷಮಯವಾಗಿದೆ. ಊಟ ಮಾಡುವ ಮೊದಲು ಒಂದು ತುತ್ತು ನಾಯಿಗೆ ಹಾಕು ಎಂದು ಗರ್ಭದಲ್ಲಿರುವ ಕೂಸು ನುಡಿದಾಗ ಅಣ್ಣ ತಂದ ಬುತ್ತಿಯನ್ನು ಬಿಚ್ಚಿ ನಾಯಿ ಬೆಕ್ಕುಗಳಿಗೆ ಹಾಕಿದಾಗ ಅದನ್ನು ತಿಂದು ಅವು ಸಾವನ್ನಪುತ್ತವೆ. ಗರ್ಭ ಧರಿಸಿದ ಅವುಗಳ ಕಂದಮ್ಮಗಳು ಸಾಯುತ್ತವೆ. ಸೀರೆ ಕುಪ್ಪಸಗಳನ್ನು ಕಟ್ಟಿಗೆಗೆ ಹಾಕಿದಾಗ ಅವು ಕೂಡಲೇ ಬೆಂಕಿ ಹೊತ್ತಿ ಉರಿಯುತ್ತವೆ. ತನ್ನ ತಾಯಿ ತಂದೆಯರ ಹಿಂದೆಯೇ ತವರೂ ಹೋಯಿತೆಂದು ದುಃಖಿಸುತ್ತಾಳೆ. ಅಣ್ಣ ತಂದ ಬುತ್ತಿಯನ್ನು ಹಿತ್ತಲಲ್ಲಿ ಎಸೆಯುತ್ತಾಳೆ. ಗುರು ರೇವಣಸಿದ್ಧರು ನಗರಿಪಟ್ಟಣಕ್ಕೆ ಹೋಗಿ ಕಾಳಿನಾರಾಯಣನ ಎಮ್ಮೆಗಳನ್ನು ಚಂದನಗಿರಿಗೆ ಹೊಡೆದು ತಂದು ಸೂರಮ್ಮದೇವಿ ಹಿತ್ತಲಲ್ಲಿ ಎಸೆದಿದ್ದ ಬುತ್ತಿಯನ್ನು ತಂದು ಅವುಗಳಿಗೆ ಹಾಕುತ್ತಾನೆ. ಎಮ್ಮೆಗಳು ತಿಂದು ಸಾಯುತ್ತವೆ. ತಂಗಿಯ ಮನೆಯಲ್ಲಿ ಉಳಿದಿದ್ದ ಕಾಳಿನಾರಾಯಣ ಮುಂಜಾನೆ ಎದ್ದು ನೋಡುತ್ತಾನೆ. ತನ್ನ ಎಮ್ಮೆಗಳೆಲ್ಲಾ ಸತ್ತು ಬಿದ್ದಿರುವುದನ್ನು ಕಂಡು ಕೂಡಲೇ ಊರಿಗೆ ಹೊರಟನು. ಚಂದನಗಿರಿಯಲ್ಲಿ ಸೂಲಗಿತ್ತಿಯರಿಲ್ಲವೆಂದು ತಂಗಿ ಹೇಳಿದಾಗ ಕಾಳಿನಾರಾಯಣ ತಮ್ಮ ಊರಿನಿಂದ ಸೂಲಗಿತ್ತಿಯರನ್ನು ಕಳುಹಿಸಿ ಬಾಣಂತನ ಮಾಡಿಸುವುದಾಗಿ ಹೇಳಿ ಹೋದನು. ಅನಂತರ ಸೂರಮ್ಮದೇವಿ ಬೇರೆ ಅಡುಗೆ ಮಾಡಿ ತವರಿನ ಬುತ್ತಿ ಎಂದು ಊರಿಗೆಲ್ಲಾ ನೀಡಿದಳು.

ತಂಗಿ ಹೆರಿಗೆ ಸಮೀಪಿಸುತ್ತಿದಂತೆ ಮೂರು ಜನ ಸೂಲಗಿತ್ತಿಯರಿಗೆ ಉಕ್ಕಿನ ಉಗುರು ಹಾಕಿಸಿ ಮೂಳಿಕುಂಚಿಗಿ ಕೊಟ್ಟು ಚಂದನಗಿರಿಗೆ ಕಳುಹಿಸುತ್ತಾನೆ. ಸೂರಮ್ಮದೇವಿಗೆ ಹೆರಿಗೆ ಬೇನೆ ಕಾಣಿಸಿದ್ದರಿಂದ

ಭರಮದೇವರು ಮನೆ ಮನೆ ಸುತ್ತಿ ಮುದುಕಿಯರನ್ನು ಕರೆತರುವ ವೇಳೆಗೆ ಈ ಸೂಲಗಿತ್ತಿಯರು ಮನೆಯ ಮುಂದೆ ಬರುತ್ತಾರೆ. ಎಲ್ಲರನ್ನೂ ಹೊರಕ್ಕೆ ಕಳುಹಿಸಿದ ಈ ಸೂಲಗಿತ್ತಿಯರು ಚೊಚ್ಚಲ ಹೆರಿಗೆ ಆಗಿದ್ದರಿಂದ ಬಾಣಂತಿಗೆ ಕಣ್ಣುಕಟ್ಟಬೇಕೆಂದು ಸೂರಮ್ಮದೇವಿಯ ಕಣ್ಣಿಗೆ ಬಟ್ಟೆ ಕಟ್ಟುತ್ತಾರೆ. ಕೈ ಬೆರಳುಗಳಿಗೆ ಉಕ್ಕಿನ ಉಗುರುಗಳನ್ನು ಹಾಕಿಕೊಂಡು ಕೂಸು ಜನಿಸುವಾಗಲೇ ಚಿವುಟಿ ಹಾಕಲು ಸಂಚು ಮಾಡಿ ಕೂಡುತ್ತಾರೆ.

ಲಿಂಗ ಬೀರಣ್ಣದೇವರ ಹೊಟ್ಟಿ ಒಳಗೇನಂದಾನ
ಘಾತವಾಯಿತಂದಾನ ಮೋಸವಾಯಿತಂದಾನ
ಲಿಂಗ ಬೀರಣ್ಣದೇವರ ಹೊಟ್ಟಿ ಒಳಗೆ ನಿಂತಾನ
ಉದರ ಬೆಂಕಿನಾದನೆ ತೆಲಿವೆಂದು ಖಿಡನಾದವ
ಗಾಡಿಕಾರನ ಗಂಡನೆ ಮೋಡಿಕಾರರ ಮಿಂಡನೆ
ಕೋಲಮಿಂಚ ಹೊಡೆದಾವೆ ಗಡಗಡ ಗದ್ವಣಕಿ ಅದಾವ
ಮೂರು ಮಂದಿ ನಾರ್‍ಯಾರಿಗ ಕಣ್ಣಕಟ್ಟಿದಂಗಾಯಿತ
ಲಿಂಗ ಬೀರಣ್ಣದೇವರ ಬಯಲಿಗೆ ಜಿಗದು ನಿಂತಾನ
ಸೂಲಗಿತ್ತಿ ಸುಬ್ಬವಗ ಬಾಯಿ ಮ್ಯಾಲೆ ಒದ್ದಾನ
ನಡುವೆ ಹಿಡಿಯ ನಾಗವ್ವಗೆ ಟೊಂಕದ ಮ್ಯಾಲೆ ಒದ್ದಾನ
ಸುದ್ದಿ ಒಯ್ಯದ ಸುಬ್ಬವಗ ಬೆನ್ನಿನ ಮ್ಯಾಲೆ ಒದ್ದಾನ
ಮೂರು ಮಂದಿನಾರೇರ ಏಳುತ ಬೀಳುತ ಓಡ್ಯಾರ
ಲಿಂಗಬೀರಣದೇವರ ತಾಯಿ ಮುಂದೆ ಮನಗ್ಯಾನ[೬]

ಹೀಗೆ ಕ್ರೋಧಗೊಂಡು ಇವರ ತಯಾರಿಯನ್ನು ಗರ್ಭದ ಶಿಶು ಗಮನಿಸುತ್ತದೆ. ಒಮ್ಮೆಗೆ ಕೋಲ್ಮಿಂಚು ಹೊಡೆದಂತಾಗಿ ಗರ್ಭದಿಂದ ಹೊರಗೆ ಹಾರಿ ಬೀರಪ್ಪ ನಿಂತು ಸೂಲಗಿತ್ತಿಯರಿಗೆ ಬಾಯಿ, ಎದೆ, ಟೊಂಕಕ್ಕೆ ಒದೆ ಕೊಡುತ್ತಾನೆ. ಅವರು ಓಡಿ ಹೋದಮೇಲೆ ಲಿಂಗಬೀರಣ್ಣ ಕೂಸಾಗಿ ತಾಯಿಯ ಮಗ್ಗುಲಲ್ಲಿರುತ್ತಾನೆ. ಸೂರಮ್ಮದೇವಿ ಗಂಡನನ್ನು ಕೂಗಿ ಕರೆದಾಗ ಬಂದು ಭರಮದೇವರು ಹೊಳೆಯುತ್ತಿರುವ ಕೂಸನ್ನು ಕಂಡು ಹೆಂಡತಿಯ ಕಣ್ಣಿನ ಬಟ್ಟೆ ಬಿಚ್ಚುತ್ತಾನೆ. ನೆರೆಹೊರೆಯ ಹಿರಿಯ ಹೆಣ್ಣುಮಕ್ಕಳು ಬಂದು ಬಾಣಂತಿಗೆ ಕೂಸಿಗೆ ನೀರೆರೆದು ಉಪಚರಿಸುತ್ತಾರೆ. ಕೂಸಿನ ಅಲೌಕಿಕ ಲಕ್ಷಣಗಳನ್ನು ಒಂದು ಪದ್ಯದಲ್ಲಿ ಹೀಗೆ ವರ್ಣಿಸಲಾಗಿದೆ.

ಹೊನ್ನ ಚಕ್ಕರ ಸುಳಿಯವನೆ ಬೆಳ್ಳಿ ಮುಖವನಿದ್ದವನೇ
ಅಂಗಾಲ ಪದಮ ಇದ್ದವನೊ ಹೊನ್ನ ಹಸ್ತತರದವನೇನೋ
ಬೆಳ್ಳಿಮುಖದವನಿದ್ದಾನೆ ಬಂಗಾರ ಚಂಡಿಕಿದವನೇನ
ಮುಂದಿನ ಮುರಗಿ ಸುಳಿಯೇನ ಕಣ್ಣಾಗ ದೇವಿಯ ಮಣಿಯೇನ
ಅಸಲ ಮಾರಿನಿದ್ದಾವೊ ಮುಖದೋಳು ಚಿನ್ನ ಇದ್ದಾವೋ

ನಕ್ಕರ ಮುತ್ತ ಉದರ‍್ಯಾವೊ ಅತ್ತರ ಹವಳ ಉದರ‍್ಯಾವೊ
ಗಾಡಿಕಾರನ ಗಂಡನೋ ಮೋಡಿಕಾರನ ಮಿಂಡನೋ

ಹೀಗೆ ಬೀರಪ್ಪನ ಬಗ್ಗೆ ಪುರಾಣ, ಕಾವ್ಯಗಳಲ್ಲಿ ಜನನವನ್ನು ಅಷ್ಟೇ ಅದ್ಭುತವಾಗಿ ಗರ್ಭದಲ್ಲಿರುವಾಗಲೇ ತಾಯಿಗೆ ಎಚ್ಚರಿಸುವ, ಹೊರಬರುತ್ತಲೇ ಅದ್ಭುತವನ್ನು ಎಸಗುವ ಸಂಗತಿಗಳು ಎಲ್ಲಾ ಕಡೆ ಕಂಡುಬರುತ್ತವೆ. ಅದೇ ರೀತಿ ಸೂಲಗಿತ್ತಿಯರಿಗೆ ಒದಗಿದ ದುಃಸ್ಥಿತಿಗೆ ಕಾಳಿನಾರಾಯಣನು ಮರುಗುತ್ತಾನೆ. ಆದ್ದರಿಂದ ಎಲ್ಲಾ ಸಮಾಚಾರ ತಿಳಿದು, ಇದು ಹುಟ್ಟಿದ ಸೋದರಳಿಯನ ಲೀಲೆಯೆಂದು ತಿಳಿದು ಮಗುವನ್ನು ಕೊಲ್ಲುವಲ್ಲಿ ಎರಡು ಪ್ರಯತ್ನದಲ್ಲಿ ಕಾಳಿನಾರಾಯಣ ವಿಫಲನಾಗುತ್ತಾನೆ. ಮಗುವನ್ನು ಕೊಲ್ಲಲು ಏನಾದರೂ ಮಾಡಬೇಕೆಂದು ಮೂರನೆಯ ಪ್ರಯತ್ನಕ್ಕೆ ಕೈ ಹಾಕುತ್ತಾನೆ. ತಾನೆ ಕುದುರೆಯೇರಿ ಚಂದನಗಿರಿಗೆ ಬರುತ್ತಾನೆ. ಊರ ಹೊರಗೆ ವೇಷ ಮರೆಸಿಕೊಂಡು ಕಣಿ ಹೇಳುತ್ತಾ ಊರೊಳಗೆ ಬರುತ್ತಾನೆ.

ಐತಾರೆ ಅಮಾಸಿ ದಿವಸವ್ವ ಮೆಲಚತರಿ ದಿವಸವ್ವ
ಮೆಲು ಚತುರಿದಿವಸವ್ವ ಹುಟ್ಟಿದ ಕೂಸ ನೋಡವ್ವ
ಕಾಲಮುಂದಾಗಿ ಹುಟ್ಯಾನೆ ಕದನಕೆ ಮೊದಲಾದಾನ
ಕಂದನ ಕಾಲ ಕೀರ್ತಿಲೆ ಚಂದನಗಿರಿಯ ಆದಾವ
ಚಂದನಗಿರಿಗೋಳ ಆದಾವೆ ಮಂದನಗಿರಿಗೋಳ ಬಿದ್ದಾವ
ತಾಯಿ ತಂದಿಗ ಹೀನವ್ವ ಬಂಧು ಬಳಗಕ ಹೀನವ್ವ
ರೈತರಾಣಿರಿಗೆ ಹೀನವ್ವ ಗೌಡ ಕುಲಕರ್ಣಿಗೆ ಹೀನವ್ವ
ಗೌಡ ಕುಲಕರ್ಣಿಗೆ ಹೀನವ್ವ ಭೂಮಿ ಸೀಮಿಗೆ ಹೀನವ್ವ
ಗೌಡ ಕುಲಕರ್ಣಿಗೆ ಹೀನವ್ವ ಸ್ವಾದರಮಾವನಿಗೆ ಹೀನವ್ವ
ಕೆಟ್ಟಿ ಕೂಸನಂದಿದ್ದ ಹುಟ್ಟಿದ ಯಾಳ್ಯಾನೋಡವ್ವ
ಹುಟ್ಟಿದ ಯಾಳ್ಯಾ ನೋಡವ್ವ ಚೊಲವದಲ್ಲೇಳು ಅಂದಾನ
ಹನ್ನೊಂದು ದಿನದ ಒಳಗೇನ ತೊಟ್ಟಿಲದೊಳಗೆ ಹಾಕವ್ವ
ಹನ್ನೆರಡು ದಿನದ ಒಳಗವ್ವ ಮನಿಯಾಗ ಇರಬೇಕೆಂದಾನ
ಹದಿಮೂರು ದಿನದ ಒಳಗವ್ವ ಬೆಟ್ಟದ ಪಾಲ ಮಾಡವ್ವ
ಬೆಟ್ಟಿದ ಪಾಲ ಮಾಡವ್ವ ಕೊದಲಿಗೆ ನಂದನ ಬನದಾಗ್

ಕೂಸು ಹುಟ್ಟಿದ ಗಳಿಗೆ ಸರಿಯಾಗಿಲ್ಲವೆಂದು, ತಂದೆ ತಾಯಿ ಸೋದರಮಾವ ಹಾಗೂ ದೇಶದ ಜನಗಳಿಗೆ ತೊಂದರೆಗಳುಂಟಾಗುತ್ತವೆಂದು ಹೇಳುತ್ತಾನೆ. ಕೂಸು ವನ ಸೇರುವುದೆಂಬ ನುಡಿಯಿಂದ ಸಿಟ್ಟುಗೊಂಡ ಸೂರಮ್ಮದೇವಿ ತನ್ನ ಅಣ್ಣ ಒಳ್ಳೆಯ ಭವಿಷ್ಯಗಾರನೆಂದು ಅವನನ್ನು ಕರೆಸಿ ಮಗುವಿನ ಭವಿಷ್ಯ ಕೇಳುವೆನೆಂದು ಹೇಳುತ್ತಾಳೆ. ಅಲ್ಲಿಂದ ಹೊರಟು ಹೋದ ಕಾಳಿನಾರಾಯಣ ಊರ ಹೊರಗೆ ತನ್ನ ವೇಷ ಕಳಚಿ ತಂಗಿಯ

ಮನೆಗೆ ಬಂದು ಕೂಸನ್ನು ನೋಡಿ ಕಾಲು ಮುಂದಾಗಿ ಹುಟ್ಟಿರುವುದರಿಂದ ತಾಯಿ ತಂದೆಗೆ ಸೋದರಮಾವನಿಗೆ ಭೂಮಿ, ಸೀಮೆ, ರೈತ, ರಾಣಿಯರೆಲ್ಲರಿಗೂ ಕೇಡುಂಟೆಂದು ಹೇಳುತ್ತಾನೆ. ಇದರಿಂದ ಪಾರಾಗಲು ಕೂಸು ಹುಟ್ಟಿದ ಹದಿಮೂರನೇ ದಿನ ಅಡವಿಪಾಲು ಮಾಡಲು ತಿಳಿಸುತ್ತಾನೆ. ಕೂಸನ್ನು ಅಡವಿಗೆ ಸಾಗಿಸಲು ತನ್ನ ಬಳಿಯಿರುವ ನಾಲ್ಕು ಮಂದಿ ಬಲಶಾಲಿಗಳನ್ನು ಕಳಿಸುವುದಾಗಿ ಹೇಳುತ್ತಾನೆ. ನಗರಿಪಟ್ಟಣಕ್ಕೆ ಬಂದು ಬಲಶಾಲಿಗಳನ್ನು ಕರೆಸಿ ತನ್ನ ತಂಗಿಯ ಕೂಸಿನ ತೊಟ್ಟಿಲನ್ನು ಕೊದಲಿಗಿ ನಂದನವನಕ್ಕೆ ಸಾಗಿಸಿ ಕೊಂದು ಅದರ ರುಂಡವನ್ನು ಕಡಿದು ತರುವಂತೆ ಆಜ್ಞಾಪಿಸುತ್ತಾನೆ.

ಸೂರಮ್ಮದೇವಿ ತೊಟ್ಟಿಲನ್ನು ಪೂಜಿಸಿ ಕೂಸನ್ನಿಟ್ಟು ಬನಕ್ಕೆ ಸಾಗಿಸಲು ಬಂದ ಮಸ್ಯಾಳರಿಗೆ ಹೇಳುತ್ತಾಳೆ. ಆದರೆ ಎಷ್ಟು ಪ್ರಯತ್ನಿಸಿದರೂ ತೊಟ್ಟಿಲನ್ನು ಮೇಲೆತ್ತಲು ಸಾಧ್ಯವಾಗಲಿಲ್ಲ. ತಾಯಿ ಮಗುವನ್ನು ಮುದ್ದಾಡಿ, ಹಾಲು ಕುಡಿಸಿ ತೊಟ್ಟಿಲಿಗೆ ಹಾಕಿದಾಗ, ತೊಟ್ಟಿಲಿಗೆ ಕೈ ಹಾಕಿದ ಕೂಡಲೇ ಅದು ಮೇಲೆದ್ದು ಮಸ್ಯಾಳರು ಹೆಗಲ ಮೇಲೆ ಹೊತ್ತು ಕೊಂಡಿದ್ದರೂ ಸ್ವಲ್ಪ ಅಂತರದಲ್ಲಿಯೇ ಚಲಿಸಿದಂತಾಯಿತು. ಕಾಡಿಗೆ ಹೊತ್ತು ಬಂದವರಿಗೆ ಹಸಿವು ಅಧಿಕವಾದುದರಿಂದ ತೊಟ್ಟಿಲಲ್ಲಿದ್ದ ನೈವೇದ್ಯವನ್ನೇ ತಿಂದರೂ ಅದು ಕರಗದೆ ಇದ್ದಷ್ಟೇ ಇತ್ತು. ಮಗಿಯ ನೀರು ಎಲ್ಲರೂ ಕುಡಿದರೂ ಕಡಿಮೆಯಾಗಲಿಲ್ಲ. ಅವರು ಆಶ್ಚರ್ಯಚಕಿತರಾಗಿ ತಾವು ತಿಂದ ಅನ್ನದ ಋಣಕ್ಕೆ ಮಗುವನ್ನು ಕೊಲ್ಲದೆ ಒಣಗಿದ ಅಲದಮರದ ಟೊಂಗೆಗೆ ತೊಟ್ಟಿಲು ಕಟ್ಟಿ ಬಿಸಿಲ ತಾಪಕ್ಕೆ ಅದು ಸಾಯುತ್ತದೆಂದು ಭಾವಿಸಿದರು. ರಕ್ತ ಹೊನ್ನೆ ಗಿಡವನ್ನು ಕಡಿದು ಅದರ ಬೊಡ್ಡೆಯಿಂದ ಕೂಸಿನ ಆಕಾರ ನಿರ್ಮಿಸಿ ಕುತ್ತಿಗೆ ಕತ್ತರಿಸಿ ಕಾಳಿನಾರಾಯಣನಿಗೆ ಅದನ್ನು ತೋರಿಸಿದರು. ಹೊನ್ನೆ ಮರದಿಂದ ಒಸರಿದ ಹನಿಯನ್ನು ಕೂಸಿನ ರಕ್ತದ ತಿಲಕವೆಂದು ಅವನ ಹಣೆಗಿಟ್ಟರು. ಕೂಸಿನದೆಂದು ಭಾವಿಸಿ ಹೊನ್ನೆ ಗಿಡದ ಚೆಂಡನೊಯ್ದು ಬಚ್ಚಲ ಮೋರಿಗೆ ತುರುಕಿ ಜಳಕ ಮಾಡಿದನು. ಈ ಸಂತೋಷದಲ್ಲಿ ಮಾಂಸದ ಅಡುಗೆ ಮಾಡಿಸಿ ಊಟ ಮಾಡಿದನು.

ಆಕಾಶಮಾರ್ಗದಲ್ಲಿ ಬರುತ್ತಿದ್ದ ಶಿವಪಾರ್ವತಿಯರಿಗೆ ಕೂಸಿನ ಅಳುವ ಧ್ವನಿ ಕೇಳಿಸಿ ಅಲ್ಲಿಗೆ ಬರುತ್ತಾರೆ. ಕೂಸಿನ ಸೌಂದರ್ಯ ಕಂಡು ಪಾರ್ವತಿ ಬೆವರುತ್ತಾಳೆ. ತನ್ನ ಮೈಯ ಬೆವರಿನ ಮಣ್ಣಿನಿಂದ ಹರಳುಗಳನ್ನು ಮಾಡುತ್ತಾಳೆ. ಜೇನಿಗೂ ಅದಕ್ಕೆ ಜೀವ ತುಂಬಿದಾಗ ಜೇನುಹುಳುಗಳಾಗುತ್ತವೆ. ಜೇನಿಗೂ ಮಗುವಿಗೆ ಸಂಬಂಧ ಮಾಡುತ್ತಾರೆ. ಇರುವೆಯ ದಂಡು ಕೂಸಿನ ಕಾವಲಿಗೆ ನಿಲ್ಲುತ್ತದೆ. ನಾಗ ತನ್ನ ಹೆಡೆ ಎತ್ತಿ ಕೂಸಿಗೆ ಬಿಸಿಲು ಬೀಳದಂತೆ ಮಾಡುತ್ತದೆ. ಒಣಗಿದ್ದ ಕಂಚಿನ ಅಲದಮರ ಚಿಗುರೊಡೆದುದನ್ನು ಕಂಡು ಶಿವ ಪಾರ್ವತಿಯರು ಸಂತೋಷದಿಂದ ಹಿಂದಿರುಗುತ್ತಾರೆ.[೧೦]

ಮುಂದೆ ಅಕ್ಕವ್ವ ಮಾಯವ್ವ ಎಂಬ ಅಕ್ಕತಂಗಿಯರು ಕುರಿ ಕಾಯುತ್ತ ಬಂದಾಗ ಕೂಸು ಅಳುವ ಧ್ವನಿ ಕೇಳುತ್ತಾರೆ. ಕಂಚಿನಾಲದ ಮರದಲ್ಲಿ ಕಟ್ಟಿದ ತೊಟ್ಟಿಲು ಬಿಚ್ಚಲು ನಿರ್ಧರಿಸುತ್ತಾರೆ. ಮಡಿಯಾಗಿ ಮೊದಲು ಅಕ್ಕವ್ವ ಗಿಡ ಹತ್ತಲು ಹೋದರೆ ಇರುವೆಗಳು ಆಕೆಗೆ ಗಿಡವನ್ನೇ ಹತ್ತಗೊಡುವುದಿಲ್ಲ. ಮಾಯವ್ವನಿಗೆ ಇರುವೆಗಳು, ಕೋಗಿಲೆಗಳು, ನಾಗಪ್ಪ ದಾರಿ ಬಿಡುತ್ತವೆ. ತೊಟ್ಟಿಲನ್ನು ಬಿಚ್ಚಿ ಇಳಿಸುತ್ತಾಳೆ. ಈಗ ಇಬ್ಬರಲ್ಲಿ

ಕೂಸು ಯಾರಿಗೆ ಎಂಬ ಪ್ರಶ್ನೆ ಎದುರಾಗುತ್ತದೆ. ಮಡಿಯಿಂದ ತೊಟ್ಟಿಲನ್ನು ಸುತ್ತು ಹಾಕಿದವರೇ, ಯಾರ ಎದೆಯಲ್ಲಿ ಹಾಲು ಚಿಮ್ಮುವವೋ ಅವರಿಗೆ ಕೂಸು ಎಂಬ ಮಾತಿನಂತೆ, ಮೊದಲು ಅಕ್ಕವ್ವ ತೊಟ್ಟಿಲು ಸುತ್ತುತ್ತಾಳೆ. ಆಕೆಯ ದೇಹದಲ್ಲಿ ಯಾವುದೇ ಬದಲಾವಣೆ ಕಾಣುವುದಿಲ್ಲ. ಮಾಯವ್ವ ತೊಟ್ಟಿಲು ಸುತ್ತಲು ಆಕೆಯ ಎದಿಬದಿಗಳು ಚಿಗಿತು. ಬಾಣಂತಿ ರೂಪ ಬರುತ್ತದೆ. ಹೀಗೆ ಮನಕೆ ಮಗನಾಗಿ ಜನಕೆ ತಮ್ಮನಾಗಿ ಮಾಯವ್ವ ಕೂಸನ್ನು ಸಲುಹುವ ಜವಾಬ್ದಾರಿ ಹೊರುತ್ತಾಳೆ.

ತಾಯಿ ಯಾರು ಎಂಬ ಪರೀಕ್ಷೆಯ ಪುರಾತನ ಎಳೆಗಳೆಲ್ಲ ಇಲ್ಲಿ ಕಾಣಿಸಿಕೊಳ್ಳುತ್ತವೆ. ಸೂರಮ್ಮದೇವಿಯಿಂದ ಬೀರಪ್ಪನನ್ನು ದೂರ ಮಾಡಿದರೂ ಅವನಂತೆಯೇ ಕೂಸಿರುವಾಗಲೇ ನೀರಿಗೆ ಬಿಟ್ಟ ಮಗು ಮಾಯವ್ವ, ಇನ್ನೊಬ್ಬರಲ್ಲಿ ಬೆಳೆದ ಪರದೇಶಿ ಕೂಸು. ಹೀಗೆ ಇಬ್ಬರು ಪರದೇಶಿಗಳನ್ನು ಒಂದೆಡೆ ತಂದು ಅನ್ಯೋನ್ಯವಾದ ಸಂಬಂಧದಲ್ಲಿ ಬೆಸೆಯುವ ಕೆಲಸವನ್ನು ಇಲ್ಲಿ ಮಾಡಲಾಗಿದೆ. ಇದೇ ರೀತಿ ಮುಂದುವರೆದು ಬೀರಪ್ಪನ ಜನನವನ್ನು ವಿವಿಧ ಪಠ್ಯಗಳಲ್ಲಿ ಭಿನ್ನ ನೆಲೆಯಲ್ಲಿ ಕಾಣಬಹುದಾಗಿದೆ.

ಪುರಾಣಗಳು, ಮಹಾಕಾವ್ಯ, ಡೊಳ್ಳಿನ ಹಾಡುಗಳು, ಜನಪದ ಕಥೆಗಳು, ಐತಿಹ್ಯ, ಸ್ಥಳಪುರಾಣಗಳಲ್ಲಿ, ಪವಾಡವಾಗಿ ಚಿತ್ರಿಸಲಾಗಿದೆ. ಚರಿತ್ರೆ, ಜನಪದ ಹಾಡುಗಳಲ್ಲಿ ಬೀರಪ್ಪನ ಜನನವನ್ನು ಕುರಿತು ಸ್ವಲ್ಪ ಹೆಚ್ಚು ಕಡಿಮೆ ಒಂದೇ ಬಗೆಯಲ್ಲಿ ಇವುಗಳನ್ನು ಮೊದಲು ಪ್ರತ್ಯೇಕವಾಗಿ ನೋಡಿ, ಅಲ್ಲಿ ಹೊರಡುವ ಸಮಾನಾಂಶ ಗಳನ್ನು ಗೋವಿಂದಮೂರ್ತಿ ದೇಸಾಯಿಯವರು ಉಲ್ಲೇಖಿಸುವ ಬೇರೆ ಪುರಾಣಾಂಶಗಳಿಗೆ ಹೋಲಿಸಿ ನೋಡಿದರೆ ಕೆಲವು ಹೊಸ ವಿಚಾರಗಳು ಬೆಳಕಿಗೆ ಬರುತ್ತವೆ.

ಪುರಾಣ ಸಂದರ್ಭವೇ ಇರಲಿ, ಚರಿತ್ರೆಯ ಸಂದರ್ಭವೇ ಇರಲಿ, ಉದಾತ್ತ ಗುಣದ ವ್ಯಕ್ತಿಯೊಬ್ಬ ನಾಯಕನಾದಾಗ ಅವನ ಸುತ್ತ ಬೆಳೆಯುವ ಘಟನಾವಳಿಗಳಿಗೆ ಭಿನ್ನ ಪಾಠಗಳು ಆರಂಭಗೊಳ್ಳುತ್ತವೆ. ಸದ್ಯಕ್ಕೆ ಪ್ರಚಲಿತವಿರುವ ಹಲವಾರು ಪುರಾಣ ಮಹಾಕಾವ್ಯಗಳನ್ನು ಗಮನಿಸಿದರೆ ಈ ಮಾತಿಗೆ ಪುಷ್ಟಿ ದೊರೆಯುತ್ತದೆ. ವಿಶೇಷವಾಗಿ ಜನಪದ ಮಹಾಕಾವ್ಯಗಳಲ್ಲಿನ ಪ್ರಕ್ಷಿಪ್ತತೆಗಳಿಗೆ ಯಾವುದೇ ನಿರ್ಬಂಧವಿರುವುದಿಲ್ಲ. ಪ್ರೊ. ಎ.ಕೆ. ರಾಮಾನುಜನ್ ಅವರು ಭಾರತದಲ್ಲಿ ಮೂನ್ನೂರು ರಾಮಯಣಗಳಿವೆ ಎನ್ನುವ ಮೂಲಕ ಜನಪದ ಮಹಾಕಾವ್ಯಗಳ ಹೆಚ್ಚಳವನ್ನು ಹೇಳಿದ್ದಾರೆ. ಇಂಥವು ಮೌಖಿಕ ಪರಂಪರೆಯ ಮುಖಾಂತರ ಮುಂದುವರಿದು ಕೊಂಡು ಬಂದಿರುವುದರಿಂದ ಜನಪದ ಸ್ವಭಾವಕ್ಕನುಗುಣವಾಗಿ ಅತಿಭಾವುಕತನ ಇಲ್ಲಿ ಸೇರಿಕೊಳ್ಳುತ್ತವೆ. ಹೀಗಾಗಿ ನಾಯಕನನ್ನು ಬಿಂಬಿಸುವಲ್ಲಿ ಪುರಾಣ, ಐತಿಹ್ಯ, ಪವಾಡ, ಚರಿತ್ರೆ ಎಲ್ಲವೂ ಸೇರಿಕೊಳ್ಳುತ್ತವೆ. ತಮ್ಮ ಆರಾಧ್ಯದೈವವನ್ನು ಕೊಂಡಾಡುವಲ್ಲಿ ಘಟನೆಗಳನ್ನು ಜೋಡಿಸುತ್ತಾರೆ. ಆದರೂ ಸಾಮಾನ್ಯ ಘಟನೆ ಗಳನ್ನಾಧರಿಸಿ ಒಂದು ಕಥಾಸೂತ್ರವನ್ನು ಕಟ್ಟಿಕೊಡಬಹುದು.

ಬೀರಪ್ಪನಲ್ಲಿ ನಾಯಕ ವ್ಯಕ್ತಿತ್ವಕ್ಕೆ ಯೋಗ್ಯವೆನಿಸುವ ಧೀರೋದಾತ್ತ ಗುಣಗಳಿರುವುದರಿಂದ ಅವನನ್ನು ಕುರಿತಾಗಿ ಅನೇಕ ಪುರಾಣ, ಮಹಾಕಾವ್ಯಗಳು ಸೃಷ್ಟಿಗೊಂಡಿವೆ. ಹಾಲ್ಮತೋತ್ತೇಜಕ ಪುರಾಣ, ಹಾಲುಮತ

ಪುರಾಣ ಜನಪದ ಹಾಲುಮತ ಮಹಾಕಾವ್ಯ ಮುಂತಾದವು ಬೀರಪ್ಪನನ್ನು ಅಗಾಧವಾಗಿ ಚಿತ್ರಿಸುತ್ತವೆ. ಕರ್ನಾಟಕದ ತುಂಬ ಪ್ರಚಲಿತವಿರುವ ಡೊಳ್ಳಿನ ಹಾಡುಗಳಲ್ಲಿ ಬಹುಪಾಲು ಹಾಡುಗಳು ಬೀರಪ್ಪನನ್ನು ಕುರಿತದ್ದಾಗಿದೆ. ಹೀಗಾಗಿ ಪುರಾಣಗಳಲ್ಲಿರುವಂತೆ ಇಲ್ಲಿಯೂ ಘಟನಾವಳಿಗಳಿಗೆ ಸಂಬಂಧಿಸಿದಂತೆ ಅನೇಕ ಭಿನ್ನತೆಗಳಿವೆ. ಈಗ ಸದ್ಯಕ್ಕೆ ನಮಗೆ ದೊರೆತಿರುವ ಇಂಥ ಪುರಾಣಗಳಿಗೆ ಆಕರಗಳೇನು ಎಂದರೆ ಐತಿಹ್ಯ, ಸ್ಥಳಪುರಾಣ, ಚರಿತ್ರೆ, ಜನಪದ ಕಥೆಗಳು, ನೂರಾರು ವರ್ಷಗಳಿಂದ ಹರಿದು ಬಂದ ಮೌಖಿಕ ಪರಂಪರೆಯೇ ಪುರಾಣಗಳಿಗೆ ಆಹಾರವನ್ನು ಒದಗಿಸಿರುವಂತೆ ತೋರುತ್ತವೆ. ಮೌಖಿಕ ಪರಂಪರೆಯಿಂದ ಸಂಪಾದನೆಗೊಂಡ ಜನಪದ ಹಾಲುಮತ ಮಹಾಕಾವ್ಯ ಮತ್ತು ಬೀರಪ್ಪನನ್ನು ಕುರಿತಾಗಿ ಇದುವರೆಗೆ ಪ್ರಕಟಗೊಂಡ ಪುರಾಣಗಳನ್ನು ನೋಡಿದರೆ ಮೌಖಿಕ ಪರಂಪರೆಯ ಪ್ರಭಾವ ಮನದಟ್ಟಾಗುತ್ತದೆ.

ರಸ್ತಾಪುರ ಭೀಮಕವಿಯ ಹಾಲ್ಮತೋತ್ತೇಜಕ ಪುರಾಣ, ಚೆನ್ನಬಸವಶಾಸ್ತ್ರಿಗಳ ಹಾಲುಮತ ಪುರಾಣ, ಕಥೆಗಳು, ಕಾವ್ಯಗಳು, ಡೊಳ್ಳಿನ ಹಾಡುಗಳು ಮತ್ತು ವೀರಣ್ಣದಂಡೆಯವರಿಂದ ಸಂಪಾದಿಸಲ್ಪಟ್ಟ ಜನಪದ ಹಾಲುಮತ ಮಹಾಕಾವ್ಯ ಮುಂತಾದವುಗಳ ಮುಖಾಂತರ ಬೀರಪ್ಪನ ವಿಷಯಗಳನ್ನು ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ. ಅದೇ ರೀತಿಯಾಗಿ ಪುರಾಣಗಳಲ್ಲಿ ಬೀರಪ್ಪನ ಜನನ ಯಾವ ರೀತಿಯಾಗಿ ಕಂಡುಬಂದಿದೆ ಎಂಬುದನ್ನು ಈಗ ವಿವೇಚಿಸಬಹುದು.

ಪುರಾಣಗಳಲ್ಲಿ ಬೀರಪ್ಪನ ಜನನದ ಬಗ್ಗೆ ಬೇರೆ ಬೇರೆ ಬಿನ್ನಾಭಿಪ್ರಾಯಗಳಿವೆ. ಹಾಲುಮತ ಪುರಾಣದಲ್ಲಿ ಬೀರಪ್ಪ ಬ್ರಹ್ಮದೇವ, ಭರಮದೇವ ಮತ್ತು ಸುರಾವತಿಯರ ಮಗನೆಂಬುದು ಪುರಾಣಾಧಾರಗಳಿಂದ ಈಗಾಗಲೇ ಸ್ಪಷ್ಟವಾಗಿರುವ ವಿಚಾರ. ಆದರೆ ಇಲ್ಲಿ ಬಂಜೆಯೆನಿಸಿಕೊಂಡ ಸುರಾವತಿಯು ಗರ್ಭಿಣಿಯಾಗಿದ್ದು ಒಂದು ಪವಾಡವೆನಿಸಿದೆ.

ತಂಗಿ ಗರ್ಭಿಣಿಯಾದ ಸಂತಸದ ಸುದ್ದಿ ಅಣ್ಣ ಕಾಳಿನಾರಾಯಣಗೂ ತಿಳಿಯಿತು. ಒಂದು ಬಗೆಯಲ್ಲಿ ಸಂತಸ ಇನ್ನೊಂದು ಬಗೆಯಲ್ಲಿ ದ್ವೇಷ ತನ್ನ ಅಳಿಯನಾಗಿ ಜನ್ಮವೆತ್ತಲಿರುವ ಬೀರೇಶನಿಂದ ತನ್ನ ಪ್ರತಿಷ್ಠೆಗೆ ಕಳಂಕ ತರುವಂಥದು. ತನ್ನ ಕೀರ್ತಿಯು ಮಾಸಿ ಹೋದರೆ ಗತಿಯೇನು ಶಿವಬ್ರಹ್ಮರು ನನಗೆ ಅವಮಾನ ಮಾಡಿದರೇನೋ ಎಂಬ ಶಂಕೆ ಮೂಡಿತು.

ಬೀರೇಶನ ಜನನ ಕುರಿತು ವಿಷ್ಣುವಿಗೆ ದ್ವೇಷ ಹುಟ್ಟಿರಬೇಕು. ತನ್ನ ಮಗಳನ್ನು ಸಹ ಅಳಿಯನಾದವನು ಒಯ್ದರೆ ಹೇಗೆಂಬ ಚಿಂತೆಯೂ ಉಂಟಾಯಿತು. ತಂಗಿಗೆ ಬಯಕೆಯ ಆಹಾರಗಳ ಜೊತೆಗೆ ಹಾಲು ತುಂಬಿದ ಚೊಂಬೊಂದನ್ನು ಹರಿಯು ಸುರಾವತಿಗೆ ತಾನೇ ತೆಗೆದುಕೊಂಡು ಆಕೆಯ ಮನೆಗೆ ಬಂದನು. ಹರಿಯು ಗೃಹಪ್ರವೇಶಿಸುವ ಸಮಯದಲ್ಲಿ ಸುರಾವತಿಯು ನಿದ್ರೆಯಲ್ಲಿದ್ದಳು. ಗರ್ಭದಲ್ಲಿರುವ ಮಗುವಿಗೆ ಹರಿಯ ಕಪಟತನದ ಅರಿವಾಯಿತು. ಕನಸಿನ ಮೂಲಕ ಕೂಸು ತಾಯಿಗೆ ಹೇಳಿತು. ನಿನ್ನ ಅಣ್ಣನು ವಿಷ ಬೆರಸಿದ ಆಹಾರ ಪದಾರ್ಥಗಳನ್ನು ನಿನಗಾಗಿ ತಂದಿದ್ದಾನೆ. ಅವುಗಳನ್ನು ಮುಟ್ಟಬೇಡ, ನಿನ್ನ ಪ್ರಾಣಕ್ಕೆ ಅಪಾಯವೆಂದು

ಹೇಳಿತು. ನಿದ್ರೆಯಿಂದ ಎದ್ದು ಸುರಾವತಿ ಹೆಬ್ಬಾಗಿಲಿಗೆ ಬರುವಷ್ಟರಲ್ಲಿ ಹರಿಯು ಬರುತ್ತಿದ್ದುದನ್ನು ನೋಡಿದಳು. ಆತನನ್ನು ಕರೆಯದೆ ಮಾತನಾಡಿಸದೆ ಮುಖ ತಿರುವಿ ಒಳಗೆ ಹೋದಳು. ಇದರಿಂದ ಅವಮಾನಿತನಾದ ಹರಿಯು ಮರಳಿ ತನ್ನ ಸ್ಥಾನಕ್ಕೆ ತೆರಳಿದನು.

ದಿನದಿನಕ್ಕೆ ಸುರಾವತಿಯು ತನ್ನ ಕೂಸು ಚೆನ್ನಾಗಿ ಬೆಳೆಯುವ ರೀತಿಯಲ್ಲಿ ಆರೋಗ್ಯದ ಕಡೆಗೆ ಗಮನ ಹರಿಸಿದಳು. ದಿನಗಳು ತುಂಬಿದವು. ಭರಮದೇವನು ಸತಿಯ ತಾಯ್ತನದ ರೂಪ ನೋಡಿ ಸಂತೋಷಗೊಂಡನು. ನವಮಾಸ ತುಂಬಲು ಚಾತಕಪಕ್ಷಿಯಂತೆ ಮಗುವಿನ ಜನನದ ಬಗ್ಗೆ ಎಲ್ಲರಿಗೂ ಚಿಂತೆಗಳು ಉಂಟಾದವು. ಮುದ್ದಾದ ಗಂಡು ಕೂಸನ್ನು ಸುರಾವತಿಯು ನೀಡಿ ಇಡೀ ಭರಮದೇವನ ರಾಜ್ಯಕ್ಕೆ ಸಂತೋಷ ಸಂಭ್ರಮ ಗಳನ್ನುಂಟು ಮಾಡಿದಳು.

ತನ್ನ ತಂಗಿಗೆ ಪುತ್ರ ಸಂತಾನವಾದದ್ದು ಹರಿಗೆ ತಳಮಳವನ್ನುಂಟು ಮಾಡಿತು. ಹೇಗಾದರೂ ಮಾಡಿ ಅದನ್ನು ಇಲ್ಲವಾಗಿಸಬೇಕೆಂದು ಸಂಕಲ್ಪ ಮಾಡಿದನು. ಜ್ಯೋತಿಷಿಯ ವೇಷ ತೊಟ್ಟು ಸುರಾವತಿಯ ಮನೆಗೆ ಬಂದು ಮಗುವಿನ ಜಾತಕವನ್ನು ವಿವರಿಸುವೆ ಕೇಳಿ ಎಂದನು. ಜ್ಯೋತಿಷಿಗೆ ಸರಿಯಾದ ಆಸನ ಹಾಕಿ ಆಧರಿಸಿ ನಮ್ರವಾಗಿ ಮಗುವಿನ ಭವಿಷ್ಯ ಸರಿಯಿದೆ, ಇಲ್ಲವೋ ಹೇಳಿ ಎಂದು ಸುರಾವತಿ ಕೇಳಿದ್ದೆ ತಡ, ಕುಂಡಲಿ ತೆಗೆದು ಗ್ರಹಗಳನ್ನು ನೋಡಿ ಲೆಕ್ಕ ಹಾಕಿ ಮಗುವಿನ ಜನನದಿಂದ ನಿನ್ನ ಅಣ್ಣನಿಗೆ ಮರಣ ಬರುವುದು ಖಚಿತ. ಅದನ್ನು ಪರಿಹರಿಸಲು ಯಾವುದೇ ಮಾರ್ಗಗಳೇ ಇಲ್ಲ. ಕೂಡಲೇ ಮಗುವನ್ನು ದಟ್ಟಡವಿಯಲ್ಲಿ ಬಿಟ್ಟು ಬರಬೇಕು. ಕೂಸು ಸತ್ತರೆ ನಿಮ್ಮ ಅಣ್ಣನ ಜೀವ ಉಳಿಯಲು ಸಾಧ್ಯ. ಈಗ ಮಗುವನ್ನು ಉಳಿಸಿಕೊಳ್ಳುವು ದಾದರೆ ಅಣ್ಣನ್ನು ಕಳೆದುಕೊಳ್ಳಬೇಕು ಎಂದು ಹೇಳಿ ಹೋದನು. ಸುರಾವತಿಯು ಯೋಚನೆಗೆ ಒಳಗಾಗಿ ಚಿಂತಿಸುತ್ತ ಕೊನೆಗೊಂದು ನಿರ್ಧಾರಕ್ಕೆ ಬಂದಳು. ಅಣ್ಣನನ್ನು ಕಳೆದುಕೊಂಡರೆ ಮರಳಿ ಪಡೆಯಲು ಸಾಧ್ಯವೇ? ಮಗುವು ತೀರಿದರೆ ಮತ್ತೆ ಮಕ್ಕಳನ್ನು ಪಡೆಯಬಹುದು ಎಂದು ಭಾವಿಸಿ ಚಾರರನ್ನು ಕರೆಯಿಸಿ ಕೂಸನ್ನು ತೊಟ್ಟಿಲಲ್ಲಿ ಹಾಕಿ ಜೋಪಾನವಾಗಿ ತೆಗೆದುಕೊಂಡು ಹೋಗಿ ಘೋರವಾದ ಅರಣ್ಯದಲ್ಲಿಟ್ಟು ಬನ್ನಿರೆಂದು ಹೇಳಿ ಅವರಿಗೆ ಕಾಣಿಕೆ ಕೊಟ್ಟು ಕಳುಹಿಸಿದಳು.

ತೊಟ್ಟಿಲು ಹೊತ್ತ ಚಾರರು ದಟ್ಟಡವಿಗೆ ಹೋದರು. ರಸ್ತೆಯಿಲ್ಲದ ಅಡವಿಯಲ್ಲಿ ಹುಲಿ, ಕರಡಿ, ಚಿರತೆ, ಕಾಡಾನೆ, ಕಾಡುಹಂದಿ, ಹಾವು, ಚೇಳುಗಳ ಮಧ್ಯದಲ್ಲಿ ತೊಟ್ಟಿಲನ್ನು ತಂದು ಮರದಡಿಯಲ್ಲಿ ಇರಿಸಿದರು. ಬಹುದೂರದಿಂದ ಬಂದ ಚಾರರು ಏಳು ಮಂದಿ ರಾಕ್ಷಸರು ಬಿಸಿಲಿನ ತಾಪದಿಂದ ನೀರಡಿಸಿ ನಡೆಯಲಾರದೆ ಅಲ್ಲೇ ಸಮೀಪದ ಕೊಳದಲ್ಲಿ ನೀರು ಕುಡಿದು ಬಾಯಾರಿಕೆ ಕಳೆದುಕೊಳ್ಳಲು ತೊಟ್ಟಿಲನ್ನು ಅಲ್ಲಿಯೆ ಬಿಟ್ಟು ಕೆರೆಗೆ ಹೋದರು.[೧೧]

ತ್ರಿಕಾಲಜ್ಞಾನಿ ಸರ್ವಾಂತರ್ಯಾಮಿಯಾದ ಶಿವನು ಹರಿಯ ಈ ಘೋರಕೃತ್ಯವನ್ನು ಕಂಡು ಮಗುವಿನ ರಕ್ಷಣೆಗೆ ಸನ್ನದ್ಧನಾದನು. ವಾಯುದೇವತೆಯನ್ನು ಬರಮಾಡಿಕೊಂಡು ವಿಷಯವನ್ನೆಲ್ಲ ತಿಳಿಸಿ ಮಗುವನ್ನು

ಸುರಕ್ಷಿತವಾಗಿ ಅಲ್ಲಿಂದ ಮರೆಮಾಚಿಸುವಂತೆ ತಿಳಿಸಿದನು. ಅಷ್ಟೇ ಅಲ್ಲದೇ ಅಷ್ಟದಿಕ್ಪಾಲಕರಿಗೆ ಕಾವಲಿರುವಂತೆ ಸೂಚಿಸಿದನು.

ನಿಮಿಷಾರ್ಧದಲ್ಲಿ ವಾಯು ಬಿರುಗಾಳಿಯಾಗಿ ತೊಟ್ಟಿಲನ್ನು ಎತ್ತಿಕೊಂಡು ಹೋಗಿ ಮರದ ಕೊಂಬೆಗೆ ಸಿಲುಕಿಸಿದನು. ಸಂತಸಗೊಂಡ ಶಿವಪಾರ್ವತಿಯರು ಅಲ್ಲಿಗೆ ಆಗಮಿಸಿ ಮಗುವನ್ನು ಎತ್ತಿ ಮುದ್ದಾಡಿ ಮಹಿಮಾ ಪುರುಷನಾಗಿ ಪವಾಡಗಳನ್ನು ಮೆರೆದು ದೇವರಾಗಿ ಪ್ರಕಾಶಿಸು ಎಂದು ಆಜ್ಞಾಪಿಸಿ ಶಿವಲೋಕಕ್ಕೆ ತೆರಳಿದರು.

ಇತ್ತ ಚಾರರು ಬಂದು ತೊಟ್ಟಿಲನ್ನು ಮತ್ತು ಮಗುವನ್ನು ಕಾಣದೆ ಎಲ್ಲಿಯೋ ಪ್ರಾಣಿಗಳಿಗೆ ಬಲಿಯಾಗಿ ಹೋಗಿರಬೇಕೆಂದು ತಿಳಿದು ಏಳುತ್ತ ಬೀಳುತ್ತ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು.

ಚಾಮರಾಯ ಶಾಂಭವಿಯ ಮಕ್ಕಳಾದ ಅಕ್ಕಮ್ಮ, ಮಾಯಮ್ಮ ಇತ್ಯಾದಿ ಐವರು ಕುರಿಗಳನ್ನು ಮೇಯಿಸುತ್ತ ಹಾಲಹೇವಲಿ ತೊರೆಯ ದಡದಲ್ಲಿ ಬಂದು ನಿಂತಿದ್ದರು. ಮರದ ಟೊಂಗೆಯೊಂದರಲ್ಲಿ ತೂಗಾಡುತ್ತಿರುವ ತೊಟ್ಟಿಲನ್ನು ಹಾಗೂ ಅದರಲ್ಲಿರುವ ಮಗುವನ್ನು ಕಂಡರು. ಯಾರದೋ ಸಹಾಯದಿಂದ ತೊಟ್ಟಿಲನ್ನು ಕೆಳಗಿಸಿಕೊಂಡು ಅದರಲ್ಲಿರುವ ಮುದ್ದಾದ ಗಂಡು ಮಗುವನ್ನು ಕಂಡು ಕೂಸನ್ನು ಎತ್ತಿಕೊಂಡು ಸಂತೋಷದಿಂದ ಮನೆಗೆ ಬಂದು ತಂದೆ ತಾಯಿಗಳಿಗೆ ಮಗುವನ್ನು ತೋರಿಸಿ ಗಂಡುಮಗುವೊಂದನ್ನು ಪರಶಿವನು ಕಳುಹಿಸಿದ್ದಾನೆಂದು ಸಂತಸಪಟ್ಟರು. ಕೂಸಿಗೆ ಹಾಲುಣಿಸಲು ಮುಂದಾದರು. ಏನು ಮಾಡಿದರೂ ಮಗುವು ಹಾಲು ಕುಡಿಯಲಿಲ್ಲ. ಕಾರಣ ತಿಳಿಯದೇ ಚಿಂತಿಸುತ್ತಿರಲು, ಇವನು ಜಂಗಮವೇಷದಲ್ಲಿ ಬಂದು ನಿನ್ನ ಕುರಿ ಹಿಂಡಿನಲ್ಲಿ ಕಂಚು ಬೋಳಿಯ ಕುರಿಯೊಂದಿದೆ, ಅದರ ಕೊರಳಲ್ಲಿ ಮೊಲೆಗಳಿವೆ, ಅವುಗಳನ್ನು ಹಿಂಡು, ಅದರಲ್ಲಿ ಬರುವ ಹಾಲನ್ನು ನಿನ್ನ ತಮ್ಮನಿಗೆ ಕುಡಿಸು ಎಂದು ಹೇಳಿದನು. ಅದರಂತೆ ಆ ಕುರಿಯ ಹಾಲನ್ನು ಹಿಂಡಿ ಬೀರೇಶನಿಗೆ ಕುಡಿಸಲಾಯಿತು. ಹಾಲು ಕುಡಿದು ಸುಖದಿಂದ ನಿದ್ರಿಸತೊಡಗಿದ.

ಈ ಕಂಚು ಬೋಳಿಯ ಕುರಿಯು ಸುರಕನ್ನೆಯೊರ್ವಳು ಪಾರ್ವತಿಯ ಶಾಪದಿಂದ ಹುಟ್ಟಿದ್ದುದಾಗಿತ್ತು. ವಿಚಿತ್ರ ರೀತಿಯಲ್ಲಿ ಕೊರಳ ಮೊಲೆಯಿಂದ ಹಾಲು ಬರುತ್ತಿತ್ತು. ಬೀರೇಶನು ಇದರ ಹಾಲು ಕುಡಿಯಲು ಅದಕ್ಕೆ ಶಾಪ ವಿಮೋಚನೆಯಾಗಿ ಗಂಧರ್ವಲೋಕ ಸೇರಿತು.

ಮೇಲೆ ಹೇಳಲಾದ ಅನೇಕ ಸಂಗತಿಗಳು ಶಿವಪದ್ಮನ ಮರುಜನ್ಮ, ಅಕ್ಕಮ್ಮ ಇತ್ಯಾದಿಯವರ ಜನನ ಕೇವಲ ಕಲ್ಪಿತ ಕಥೆಗಳೇ ಆಗಿವೆ. ಪುರಾಣದಲ್ಲಿ ಹೀಗೆ ಏನಾದರೊಂದನ್ನು ಕಲ್ಪಿಸಿಕೊಂಡು ದೇವರು ದೇವತೆಗಳ ಶಾಪ ಜನನ ಮರಣಗಳನ್ನು ವಿಚಿತ್ರ ರೀತಿಯಲ್ಲಿ ವರ್ಣಿಸಲಾಗಿದೆ. ಇವೆಲ್ಲವೂ ಸುಳ್ಳು ಮೂಢನಂಬಿಕೆಗಳು ಎಂಬುದನ್ನು ತಿಳಿಸುತ್ತವೆ. ಆದರೂ ನಂಬಿಕೆಗಳು ಕೆಲವೊಂದು ಫಲಕಾರಿಗಳೂ ಆಗಿವೆ.

ಹಾಲ್ಮತೋತ್ತೇಜಕ ಪುರಾಣ (ಸಂ) ಸಂಭಾಗೂತನಯಸವಿಲು ಅವರು ಬೀರೇಶನ ಜನನದ ಬಗ್ಗೆ ಹೀಗೆ ಹೇಳುತ್ತಾರೆ. ಬೀರೇಶನು ಹುಟ್ಟುವುದಕ್ಕಿಂತ ಮೊದಲಿನಿಂದ ಹಿಡಿದುಕೊಂಡು ಅವನು ಮದುವೆ ಆಗುವವರೆಗೆ ಹಿಮ್ಮವು ಅವನನ್ನು ಏಕೆ ಕಾಡಿದನು. ಎನ್ನುವುದನ್ನು ನೋಡೋಣ. ಒಂದು ದಿವಸ ಶಂಕರ ಪಾರ್ವತಿಯರು

ಓಲಗದಲ್ಲಿ ಕುಳಿತಿರಲು ವೀರಭದ್ರನು ಬಂದು ಜನನೀ ಜನಕರಿಗೆ ನಮಸ್ಕರಿಸಿ, ಜಗತ್ಕರ್ತರೆ ಭೂಲೋಕದಲ್ಲಿ ಸಂಚಾರ ಮಾಡಬೇಕೆಂದು ನನ್ನ ಇಚ್ಛೆಯಾಗಿರುವುದು. ಆದ್ದರಿಂದ ತಮ್ಮ ಅಪ್ಪಣೆಯಾದರೆ ಹೋಗುವೆನು ಎಂದನು. ಆಗ ಅವರು ನಿನ್ನ ಇಚ್ಛೆಯಂತೆ ಆಗಲಿ ಎಂದು ಹೇಳಿ ಕಳುಹಿಸಿಕೊಟ್ಟರು. ಆಗ ವೀರಭದ್ರನು ಬ್ರಹ್ಮನ ಸತಿಯಾದ ಸರಸ್ವತಿ ಹೊಟ್ಟೆಯಲ್ಲಿ ಹುಟ್ಟಿದನು. ಇದೇ ಸಮಯವನ್ನು ನೋಡುತ್ತಿದ್ದ ವಿಷ್ಣುವು ಬ್ರಾಹ್ಮಣನ ವೇಷದಿಂದ ಸರಸ್ವತಿಯ ಬಳಿಗೆ ಬಂದು, ದೇವಿ ನಿನ್ನಿಂದ ಉದ್ಭವಿಸಿದ ಈ ಶಿಶುವು ಕೆಟ್ಟ ನಕ್ಷತ್ರದಲ್ಲಿ ಹುಟ್ಟಿರುವುದರಿಂದ ಈ ಶಿಶುವಿನ ಮೋರೆಯನ್ನು ತಂದೆ ತಾಯಿಗಳು ನೋಡಬಾರದು. ಇದನ್ನು ಅರಣ್ಯದಲ್ಲಿ ಬಿಟ್ಟು ಬರಬೇಕು. ಅಂದರೆ ನಿಮಗೆ ಕ್ಷೇಮವಾಗುವುದು ಎಂದು ಹೇಳಿ ಆ ವೇಷಧಾರಿಯಾದ ವಿಷ್ಣುವು ಅಲ್ಲಿಂದ ಹೊರಟು ಹೋದನು. ಬಳಿಕ ಸರಸ್ವತಿಯ ಆ ಬ್ರಾಹ್ಮಣನು ಹೇಳಿರುವುದು ನಿಜ ಎಂದು ನಂಬಿ ಸ್ಮಶಾನದಲ್ಲಿದ್ದ ಬನ್ನಿವೃಕ್ಷಕ್ಕೆ ತೊಟ್ಟಿಲನ್ನು ಕಟ್ಟಿ ಆ ಬಾಲಕನನ್ನು ಮಲಗಿಸಿ ಹೋದಳು.[೧೨]

ಆ ಸ್ಮಶಾನದಲ್ಲಿ ಎತ್ತ ನೋಡಿದತ್ತ ಶವಗಳ ದಳ್ಳುರಿಯು ಧಗಧಗನೆ ಉರಿಯುತ್ತಿರುವುದು, ನರಿಗಳ ಕೂಗು, ಶವಗಳನ್ನು ಹುಗಿದ ಕುಣಿಗಳು ಕಾಣುತ್ತಿರುವವು. ನೋಡುವವರಿಗೆ ಭಯಾನಕ ತೋರುತ್ತಿರುವುದು. ಅಲ್ಲಿ ಒಬ್ಬರೇ ಹೋದರೆ ಭಯವಾಗುತ್ತಿತ್ತು. ಇಂಥ ಸ್ಮಶಾನದಲ್ಲಿ ಎಳೆಗೂಸನ್ನು ತೊಟ್ಟಿಲಲ್ಲಿ ಸರಸ್ವತಿಯು ಮಲಗಿಸಿ ಹೋದ ಮೇಲೆ ಆ ಬಾಲಕನು ಹಸಿದು ನೀರಡಿಕೆಯಿಂದ ಅಳುತ್ತಿರುವುದನ್ನು ಕಂಡು ಅಲ್ಲಿರುವ ಪಶು, ಪಕ್ಷಿಗಳು ತಮ್ಮ ಆಹಾರವನ್ನು ಬಿಟ್ಟು ಆ ಬಾಲಕನ ಸಲುವಾಗಿ ಚಿಂತಿಸುತ್ತ ತಮ್ಮತಮ್ಮಲ್ಲಿಯ ವೈರತ್ವವನ್ನು ಬಿಟ್ಟು ಅಲ್ಲಿಯೇ ಕುಳಿತುಬಿಟ್ಟವು. ನವಿಲುಗಳು ತಮ್ಮ ರೆಕ್ಕೆಯನ್ನು ಬಿಚ್ಚಿ ಕೊಡೆಯನ್ನಾಗಿ ಮಾಡಿ ಆ ಬಾಲಕನ ಮೇಲೆ ಹಿಡಿದವು. ರಾಜಹಂಸಗಳು ಗಾಳಿಯನ್ನು ಬೀಸ ಹತ್ತಿದ್ದವು. ಗಿಳಿಗಳು ಕೊರಗಿ ಮರುಗುತ್ತ ಮೃದು ಮಾತುಗಳಿಂದ ಸಂತೈಸುತ್ತಿದ್ದವು. ಮಗು ರೋದಿಸುವುದನ್ನು ಕಂಡು ವನದೇವತೆಯು ಸಹಿಸಲಾರದೆ ಅಳುತ್ತಿದ್ದಳು. ಆ ಬಾಲಕನ ಅಕ್ಕನಾದ ಮಾಯವ್ವನು ಬಂದು ಅವನನ್ನು ಉಪಚರಿಸಿ ಮೊಲೆಯುಣಿಸಿ ಆ ಬಾಲಕನನ್ನು ರುದ್ರಭೂಮಿಯಲ್ಲಿಯೇ ಜೋಪಾನ ಮಾಡಿ ಅವನಿಗೆ ಬೀರಲಿಂಗನೆಂದು ಹೆಸರು ಇಟ್ಟಳು. ಬೀರಲಿಂಗನು ರುದ್ರಭೂಮಿಯಲ್ಲಿಯೇ ಬೆಳೆದು ದೊಡ್ಡವನಾದನು.

ಹಾಲುಮತದ ಪುರಾಣದ ಪ್ರಕಾರ ಬೀರೇಶ್ವರನು ಓರ್ವ ಶಿವ ಸಿದ್ಧನಾಗಿದ್ದು ಪಾರ್ವತಿ ಪರಮೇಶ್ವರರ ಕೃಪಾಶೀರ್ವಾದಿಂದ ಭೂಲೋಕದಲ್ಲಿ ಅವತರಿಸಿದನು. ಈ ಬೀರೇಶ್ವರನು ಬಾಲ್ಯದಿಂದಲೇ ಚೂಟಿಯಾಗಿದ್ದು ಆಟೋಟ, ಬಿಲ್ಲು ವಿದ್ಯೆ, ಕುದುರೆ ಸವಾರಿ ಮಾಡಿ ಕುರುಬರ ವೈರಿಗಳನ್ನು ಸದೆಬಡೆದು ಕುರಿಗಳನ್ನು ಕುರುಬರನ್ನು ರಕ್ಷಿಸಿದನು. ಶ್ರೀ ಬೀರೇಶ್ವರ ಶಿವನ ವರಪ್ರಸಾದದಿಂದ ಹುಟ್ಟಿದನು. ಹೀಗಾಗಿ ಅವನಲ್ಲಿ ಕೆಲವು ಅತೀಂದ್ರಿಯ ಶಕ್ತಿಗಳು ಮನೆ ಮಾಡಿದ್ದವು. ಈ ಪ್ರಕಾರ ಶ್ರೀ ಬೀರೇಶ್ವರನು ಸತ್ತವರನ್ನು ಬದುಕಿಸುವುದು, ಸತ್ತ ಕುರಿಗಳನ್ನು ಬದುಕಿಸುವುದು ಮಾಡುತ್ತಿದ್ದನು. ಆದ್ದರಿಂದ ಹಾಲುಮತ ಕುರುಬರು ಶ್ರೀ ಬೀರೇಶ್ವರನನ್ನು ಈಗಲೂ ಭಕ್ತಿ ಗೌರವದಿಂದ ಪೂಜಿಸುತ್ತಿದ್ದಾರೆ.

ಬೀರೇಶ್ವರನು ಜಗದಲ್ಲಿ ಹೇಗೆ ಹುಟ್ಟಿದನೆಂದರೆ, ಆದಿಯಲ್ಲಿ ಭೂಲೋಕದೊಳಗೆ ಹಾಲುಮತದ ಕುರುಬರಿಗೆ ಕುಲದೇವರಾಗಿ ಹುಟ್ಟಿದನು. ಚಂದ್ರಗಿರಿ ಅರಸನಾದ ಭರಮ ಭೂಪಾಲನ ಹೆಂಡತಿ ಸೂರಾವತಿಯ ಗರ್ಭದಲ್ಲಿ ಶ್ರೀ ಬೀರೇಶ್ವರನು ಬೆಳೆಯುತ್ತಿರುವಾಗ ಸೂರಾವತಿಯ ಅಣ್ಣನಾದ ಹರಿದೇವನು ನನ್ನ ತಂಗಿಯ ಗರ್ಭದಲ್ಲಿ ಗಂಡುಮಗು ಹುಟ್ಟುವುದನ್ನು ತಿಳಿದನು. ಮಗುವನ್ನು ಕೊಲ್ಲಬೇಕೆಂದು ತಂಗಿಯನ್ನು ಐದು ತಿಂಗಳಿಗೆ ಸರಿಯಾಗಿ ಬಯಕೆಯ ಔಷಧಿ ಕುಡಿಸಬೇಕೆಂದು ತನ್ನ ಪುರಕ್ಕೆ ಕರೆತಂದು ಆಕೆಗೆ ವಿಷವನ್ನು ಕುಡಿಸುತ್ತಾನೆ. ಆಕೆಯು ಮೋಸದ ವಿಷಯವನ್ನು ತಿಳಿಯದೇ ಶಿವನ ಮೇಲೆ ಕರುಣೆಯಿಟ್ಟು ವಿಷವನ್ನು ಔಷಧಿ ಎಂದು ಕುಡಿಯುತ್ತಾಳೆ. ಅದು ಶಿವಮಂದ್ರದಿಂದ ಅಮೃತವಾಗಿ ಚಂದ್ರಗಿರಿಗೆ ಬರುತ್ತಾಳೆ. ಐದು ತಿಂಗಳಿಗೆ ಕೆಂಜೆಡೆ, ಕಿರಿಗಣ್ಣು, ರುದ್ರಾಕ್ಷಿ, ವಿಭೂತಿ ಧರಿಸಿದ ಗಂಡು ಮಗುವಿನ ಜನನವಾಗಿರುತ್ತದೆ. ಈ ವಿಚಾರವನ್ನು ತಿಳಿದು ಹರಿದೇವನು ಜೋತಿಷಿಯ ವೇಷವನ್ನು ಧರಿಸಿ ತಂಗಿಯ ಮನೆಗೆ ಬಂದು ಶಿಶು ಹುಟ್ಟಿದ ಭವಿಷ್ಯವನ್ನು ಹೇಳುತ್ತಾನೆ. ಈ ಮಗು ಮೂಲಾನಕ್ಷತ್ರದಲ್ಲಿ ಹುಟ್ಟಿದ ಕಾರಣ ತಂದೆ ತಾಯಿಗಳಿಗೆ ಬಿಟ್ಟು ಬರಲು ಹೇಳುತ್ತಾನೆ. ಆ ಕೂಸನ್ನು ಅಡವಿಗೆ ಬಿಟ್ಟು ಬಂದ ಬಳಿಕ ಆ ಕೂಸು ಅಕ್ಕಮ್ಮನಿಗೆ ಸಿಗುತ್ತದೆ. ಅವಳು ಸಾಕು ತಂದೆಯಾದ ಚಾಮರಾಯನ ಮನೆಗೆ ತಂದು ತೋರಿಸಿದಾಗ ಆಕೆಯ ತಂದೆ ತಾಯಿಗಳಿಗೆ ಆನಂದ ಆಗುತ್ತದೆ. ಆಗ ಶಿವಪಾರ್ವತಿಯರು ಬಂದು ಮಗುವಿಗೆ ಬೀರೇಶ್ವರನೆಂದು ನಾಮಕರಣ ಮಾಡಿ ಕೈಲಾಸಕ್ಕೆ ತೆರಳುತ್ತಾರೆ. ಎಲ್ಲ ಪುರಾಣದಲ್ಲಿ ಬೀರೇಶ್ವರನು ನವಮಾಸ ತುಂಬಿ ಹುಟ್ಟಿದ್ದಾನೆ. ಆದರೆ ಈ ಪುರಾಣದಲ್ಲಿ ಐದನೇ ತಿಂಗಳಿಗೆ ಬೀರೇಶ್ವರನು ಹುಟ್ಟಿದ್ದಾನೆ ಎಂದು ಹೇಳುತ್ತದೆ.

ಪರಮೇಶ್ವರನನ್ನು ಪಟ್ಟಗಟ್ಟುವ ಕಾಲಕ್ಕೆ ಗುಗ್ಗುಳ ಹೋಮಗೈಯಲು ಆ ಪವಿತ್ರವಾದ ಹೋಮದಲ್ಲಿ ಬಾಲಕಂದನು ಉದ್ಭವಿಸಿದನು. ಆತನ ತ್ರಿಮೂರ್ತಿಗಳು ಸಮುದ್ರ ಮಂಥನಗೈದು ಅಮೃತಾದಿ ೧೪ ಒಡವೆಗಳನ್ನು ದೊರಕಿಸಿದ ಕಾಲಕ್ಕೆ ಹೋಮದಲ್ಲಿ ಹುಟ್ಟಿದ ಬಾಲಕಂದನು ಸಮುದ್ರದಿಂದ ಒಡವೆಗಳನ್ನು ತೆಗೆದು ಕೊಡುತ್ತಿದ್ದನು. ಆ ಬಾಲಕಂದನು ಸಮುದ್ರ ದಂಡೆಗೆ ಕುಳಿತು ಸಕಲ ಜಲವೃಷ್ಟಿಯಲ್ಲಿರುವ ಪ್ರಾಣಿಗಳಿಗೆ ಆಹಾರವನ್ನು ಬೀರುತ್ತಿದ್ದ ಕಾರಣ ಆ ಕಂದನಿಗೆ ಬೀರಪ್ಪ ಶಿವಸಿದ್ಧ ಬೀರೇಶ್ವರನೆಂಬ ಅಭಿದಾನವಾಯಿತು. ಪ್ರಾಕೃತರು ಬೀರಪ್ಪನು ಸೂರವ್ವನಿಂದ ಜನಿಸಿದನೆಂದು ಹೇಳುವರು. ಆದರೆ ಸಮುದ್ರ ದಂಡೆಯಲ್ಲಿ ಕುಳಿತು ಸಕ್ಕರೆಯನ್ನು ಬೀರುವಾಗ ಆ ಕಾಲದಲ್ಲಿ ಆತನಿಗೆ ಸೂರಮ್ಮನು ಹೇಗೆ ತಾಯಿಯಾಗುವಳು? ಆತನು ಪರಶಿವನ ಗುಗ್ಗುಳ ಹೋಮದಿಂದ ಉದ್ಭವಿಸಿದ ವರಪುತ್ರನೇ ಸರಿ, ಮಾಯದಿಂದ ಮನೋಹರನಾದ ಪರಮೇಶ್ವರನು ಕಳಕೊಂಡಿದ್ದ ಮೂರೊಡವೆಗಳನ್ನು ತಿರುಗಿ ತಂದುಕೊಟ್ಟು ಬೀರೇಶ್ವರನು ಮಹಾದೇವರ ವಿಶಾಲ ಪ್ರೀತಿಗೆ ಪಾತ್ರನಾದನು.

ಈ ಪ್ರಕಾರ ಬೀರೇಶ್ವರನು ಕೈಲಾಸದಲ್ಲಿ ಮಹೇಶ್ವರನ ಪ್ರೀತಿಗೆ ಪಾತ್ರನಾಗುತ್ತಿರುವಾಗ ಕಮಲದೇವಿಯ ಮಗನಾದ ಭರಮದೇವನು ಮಹೇಶ್ವರನ ದರ್ಶನಕ್ಕೆ ಬಂದನು. ಆ ಕಾಲದಲ್ಲಿ ಬೀರೇಶ್ವರನು ಸಮುದ್ರದೊಳು ಉತ್ಪತ್ತಿ ಹೊಂದಿದ ಮುತ್ತಿನ ಚೆಂಡನ್ನು ಕರದಲ್ಲಿ ಧರಿಸಿ ಪರಶಿವನ ಗದ್ದುಗೆಯ ಮೇಲೆ ಉರುಳಿಸಿ ಆಡುತ್ತ ಬಾಲಕ್ರೀಡೆಯಲ್ಲಿ ನಿರತನಾಗಿದ್ದನು. ಇತ್ತ ನಾರಾಯಣನು ಮಹೇಶ್ವರನ ಸೇವೆಗಾಗಿ ನಿತ್ಯದಂತೆ ಒಂದು ದಿನ

ಕೈಲಾಸಕ್ಕೆ ಹೋಗಿರುವಾಗ ಉಮಾದೇವಿಯು ತನ್ನ ನಿಜ ಶಾಲನ್ನು ಸೂತಕ ನಿಮಿತ್ಯವಾಗಿ ತೆಗೆದು ಸೂರ್ಯದಡಿಯ ಮೇಲೆ ಇಟ್ಟಿರಲು ನಾರಾಯಣನು ಮಹೇಶ್ವರನಿಗೆ ತಲೆಬಾಗಿ ನಮಸ್ಕರಿಸಿದನು. ಆತನಿಗೆ ಪಾರ್ವತಿಯ ಶಾಲು ತಾಕಿ ಬೆನ್ನ ಮೇಲೆ ಬೀಳಲು ನಾರಾಯಣನು ಚಕಿತನಾಗಿ ಶಾಲನ್ನು ತೆರೆದು ನೋಡಲು ಅದರೊಳು ಮಹೇಶ್ವರನ ಅಗಾಧಲೀಲೆಯಿಂದ ಒಂದು ಶಿಶುವು ಆಡುತ್ತಿರುವುದನ್ನು ಕಂಡು ಶಿಶುವಿಗೆ ಸುರಾದೇವಿಯಿಂದ ನಾಮಕರಣ ಮಾಡಿಸಿ ಭಕ್ತವತ್ಸಲನಾದ ಪರಶಿವನು ತನ್ನ ನಿಜಭಕ್ತನಾದ ಕಮಲದೇವಿಯ ಪುತ್ರನಾದ ಭರ್ಮದೇವನಿಗೆ ಆ ಶಿಶುವನ್ನು ಕೊಟ್ಟನು. ಪುರಾಣದಲ್ಲಿ ವೀರಭದ್ರನು ಬೀರೇಶ್ವರನಾಗಿ ಕಂಡುಬರುತ್ತಾನೆ. ವೀರೇಶನು ಬೀರೇಶ್ವನಾಗಿದ್ದಾನೆ. ಒಂದೊಂದು ಪುರಾಣದಲ್ಲಿ ಒಂದೊಂದು ರೀತಿಯಲ್ಲಿ ಇದೆ.

ಕೇಶರಾಶಿಯನ್ನು ಜೋತು ಬಿಟ್ಟು ಕೈಮುಗಿದುಕೊಂಡು ಬರುವವಳನ್ನು ಕಂಡು ಸೂರಾವತಿಯೇ ನೀನು ಬಂದ ಕಾರ್ಯ ಯಾವುದು ಎಂದು ಕೇಳುವನು. ಅವಳು ದೇವ ಉಮಾಕಾಂತನೇ ನಿನ್ನನ್ನು ಪೂಜಿಸುತ್ತಿರುವುದು, ನನ್ನ ಅಣ್ಣನಾದ ಹರಿಯು ಕಪಟತನದಿಂದ ತನಗೆ ಬಂಜೆಯೆಂದು ನಿಂದಿಸಿರುವನು. ಅದಕ್ಕೆ ಪುತ್ರನನ್ನು ಕೊಟ್ಟು ಕಾಪಾಡು ತಂದೆ ಎಂದು ವಿಧವಾಗಿ ಬೇಡಿಕೊಂಡಳು. ಆಗ ಆತನು ಅವಳನ್ನು ಕರೆದು ಅವಳ ಮಸ್ತಕದ ಮೇಲೆ ಮೋಹದಿಂದ ತನ್ನ ಅಮೃತಹಸ್ತವನ್ನು ಇಟ್ಟು ಪುತ್ರವತಿಯಾಗಿ ಬಾಳೆಂದು ಹರಸುತ್ತ ಅವಳಿಗೆ ಆನಂದವಾಗುವಂತೆ ಬಾಲಕನು ಉದಯಿಸುವನು ಎಂದು ಹೇಳಿದನು.

ಆ ಹುಟ್ಟಿದ ಮಗುವಿಗೆ ಮನುಷ್ಯರ ಭಯವಿಲ್ಲ, ಅವನು ಭೂಮಿಯಲ್ಲಿ ಮಹಿಮೆಗಳನ್ನು ತೋರಿ ಮೆರೆಯುವನು. ಮುಂದೆ ಆತನಿಗೆ ಶಿವಸಿದ್ಧ ಬೀರನೆಂದು ಹೆಸರಿಟ್ಟು ಪರಿಪಾಲಿಸೆಂದು ಹೇಳಿ ಕಳುಹಿಸಿದನು. ಸೂರಾವತಿಯು ಅತಿ ಪ್ರೀತಿಯಿಂದ ಪತಿಗೆ ತಿಳಿಸಲು ಭರ್ಮಭೂಪನು ಘನಾನಂದದೊಳಗೆ ಮಗ್ನನಾದನು. ಅತ್ತ ಶಂಕರನು ರೇವಣನನ್ನು ಕರೆದು ಭೂಲೋಕದಲ್ಲಿ ಶಿವಪದ್ಮನಿದ್ದಾನೆ. ಅವನನ್ನು ಲೌಕಿಕ ವಿಷಯ ಬಿಡಿಸುತ್ತ ಇತ್ತ ಕರೆತರಲು ಆಜ್ಞೆ ಇತ್ತನು. ಶಿವನು ಹೇಳಿದ ಮಾತಿಗೆ ರೇವಣನು ಒಪ್ಪಿ ಜಾಗ್ರತಪುರಕ್ಕೆ ಹೋಗಿ ಶಿವಪದ್ಮನ ಬಳಿಗೆ ಇಳಿದು ಅವನನ್ನು ಕುರಿತು, ಸಾಕು ಪ್ರಪಂಚದ ಸುಖ, ಕೈಲಾಸಕ್ಕೆ ಬಾಯೆಂದು ಕರೆಯಲು ಗುರುವಾಜ್ಞಾನುಸಾರ ಪದ್ಮನು ಮಾತ್ರ ಪುತ್ರಗೆ ನಮಿಸಿ ನಾನು ನಿಮ್ಮನ್ನು ಬಿಟ್ಟು ಹೋಗುವೆನು ಎಂದು ಹೇಳಿದ. ಆಗ ಆದಿಕೊಂಡ ಚಮಲಾದೇವಿಯರ ಮುಖ ಕಳೆಗುಂದುತ್ತದೆ. ಆಗ ಶಿವಪದ್ಮನು ಗಂಧರ್ವ ರೂಪ ತಳೆದು ತನ್ನ ತಂದೆ ತಾಯಿ ಅಣ್ಣತಮ್ಮರಿಗೆ ಮತ್ತು ಬಂಧುಬಾಂಧವರಿಗೆ ಎಲ್ಲರಿಗೂ ಹೇಳಿ ಶಿವಪುರಿಯತ್ತ ಹೋದನು. ಭೂಮಿ ವಲಯದಿಂದ ಬಂದ ಮಗನನ್ನು ಹಿಡಿದೆತ್ತಿ ಮುದ್ದಾಡಿ ಹೇಳಿದನು. ಹಿಂದೆ ಭಿಲ್ಲಾಸುರನ ನಾಶಕ್ಕೆ ನನ್ನ ಕಂದ ಬೀರೇಶನನ್ನು ಭುವನಕ್ಕೆ ಕಳುಹಿಸಲು ಅವನು ಬೀರಾವತಾರ ಧರಿಸಿ ಮಂದಮತಿಯಾದ ಆಕಳನ್ನು ಕೊಂದು ಕುರುಬರನ್ನು ಉದ್ಧರಿಸಿ ಬಂದನು. ಇಂದು ನೀನು ಈಗ ಭರಮನ ಮಡದಿ ಸೂರಾವತಿಯ ಗರ್ಭದೊಳು ಉದ್ಭವಿಸಿ ಶಿವಸಿದ್ಧ ಬೀರನೆಂಬ ಹೆಸರಿನಿಂದ ಸಕಲ ಭೂಮಂಡಲದಲ್ಲಿ ಮಹಿಮೆಗಳ ತೋರುತ್ತ ಬಾಳು ಎಂದು ಪದ್ಮನಿಗೆ ಶಿವನು ಅಪ್ಪಣೆ ನೀಡಿದ. ಅದಕ್ಕೆ ಪದ್ಮನು ಒಪ್ಪಿ ಸಾಷ್ಟಾಂಗ ನಮಸ್ಕರಿಸಿ ನಾನು ಹೋಗಿ ಭೂಮಿಯೊಳಗೆ ಹುಟ್ಟಿ ಶಿವಭಕ್ತಿಯನ್ನು ಬೆಳೆಸಿ ಘನಮಹಿಮೆಯನ್ನು ತೋರುವೆನು. ಎನಗೆ ಓರ್ವ

ಶಿಷ್ಯನನ್ನು ಕೊಟ್ಟು ಭೂಮಿಗೆ ಕಳುಹಿಸೆಂದು ಪರಿಪರಿಯಾಗಿ ಕೇಳಿಕೊಂಡನು. ಶಿವನು ಅದಕ್ಕೆ ಮೆಚ್ಚಿ ಮಗನೇ ನೀನು ಅಳುಕಬೇಡ, ಹೆಜ್ಜೆ ಮುಂದಿಡು ನಿನ್ನ ಸೇವೆಗೆ ನಾನು ಕಳುಹಿಸಿ ಕೊಡುತ್ತೇನೆ ಅಂದನು.

ಶಿವಪದ್ಮನು ಸುರಾವತಿಯ ಗರ್ಭದೊಳಗೆ ಇಳಿದನು. ಬಂಜೆತನದಿಂದ ಬಳಲುತ್ತಿರುವ ಸೂರಾವತಿಯು ಶಿವನ ಕರುಣೆಯಿಂದ ಗರ್ಭಧರಿಸಿ ಕೆಲಕಾಲ ಕಳೆಯಲು ಅವಳು ನವಮಾಸ ತುಂಬಿ ಶಿವನ ದಯದಿಂದ ಶುಭ ಮುಹೂರ್ತದೊಳಗೆ ಸುಪುತ್ರನು ಬಂಗಾರದ ಜಡೆಗಳಿಂದ ಕೂಡಿದ ಮಗು ಜನಿಸಿತು. ಆಗ ನಾರಾಯಣಗೌಡನು ತಂಗಿಗೆ ನಿನ್ನ ಮಗ ಹುಟ್ಟಿದ್ದು ನನಗೆ ಮರಣ ತರುವ ಸಲುವಾಗಿ ಎಂದು ಕಿವಿ ತುಂಬಿಸಿ ಆ ಮಗುವನ್ನು ಅಡವಿಗೆ ಬಿಡಲು ಹೇಳಿದನು. ಅದರಂತೆ ಸುರಾವತಿಯು ಮಗುವನ್ನು ತೊಟ್ಟಿಲಲ್ಲಿ ಹಾಕಿ ಹರಿಯು ಕಳುಹಿಸಿದ ಸೇವಕರ ಕೈಯಲ್ಲಿ ಆ ತೊಟ್ಟಿಲನ್ನು ಕೊಟ್ಟು ಕಳುಹಿಸಿದಾಗ ಹಾಲಹವೇಲಿ ಹಳದ ದಂಡೆಯ ಮೇಲೆ ಇರುವ ಆಲದ ಮರದ ನೆರಳಿನಲ್ಲಿ ಇಳಿಸಿ ಬಾವಿಗೆ ನೀರು ಕುಡಿಯಲು ಸರ್ವರೂ ಹೋದರು.

ಆಗ ಶಿವನು ವಾಯುದೇವನನ್ನು ಕರೆದು ಹವೇಲಿ ಹಳ್ಳದ ದಂಡೆಯಲ್ಲಿರುವ ಆಲದ ಮರದ ನೆರಳಿನಲ್ಲಿ ಮಗುವನ್ನು ಇಳಿಸಿ ಆ ಸೇವಕರು ನೀರು ಕುಡಿಯಲು ಬಾವಿಗೆ ಇಳಿದಿದ್ದಾರೆ. ಅವರು ಬರುವುದರೊಳಗೆ ನೀನು ಹೋಗಿ ಕೂಸನ್ನು ಅವರ ಕೈಯಿಂದ ಪಾರು ಮಾಡು ಎಂದು ತಿಳಿಸಿದನು. ಆಗ ವಾಯುವು ಶಿವನಾಜ್ಞೆಯಂತೆ ಅತಿಯಾಗಿ ಗಾಳಿ ಬೀಸಲು ಆ ಗಿಡದ ಟೊಂಗೆಗಳು ನೆಲಕ್ಕೆ ಬಾಗುವವು. ಒಂದು ಟೊಂಗೆಯು ತೊಟ್ಟಿಲನ್ನು ಸಿಗಿಸಿಕೊಂಡು ಮೇಲೆ ಹೋಗಿ ಅದು ನಿಲ್ಲುವುದು. ಆ ಸೇವಕರು ಬಂದು ಮಗುವನ್ನು ನೋಡಿದರು. ಮಗು ಅಲ್ಲಿ ಇದ್ದಿದ್ದಿಲ್ಲ, ಇದೇನು ತಿಳಿಯದೆಂದು ಅವರು ಎದೆಗುಂದಿ ನಡುಗಿ ರಕ್ತ ಕಾರಿ ಪ್ರಾಣಬಿಟ್ಟರು.

ಆ ಶಿಶುವನ್ನು ನೋಡಲು ನಾರದ ಬ್ರಹ್ಮ ಪ್ರಮುಖ ಮುನಿಗಳು ಕೂಡಿಕೊಂಡು ಶಿವನು ಅಲ್ಲಿಗೆ ಬಂದು ವಟವೃಕ್ಷದೊಳಗೆ ನೇತಾಡುವ ತೊಟ್ಟಿಲು ತೂಗುವ ಕ್ಷಣದಲ್ಲಿ ಸುರನಾರಿಯರು ಬಂದು ಆ ಮಗುವಿಗೆ ಪಟು ಪರಾಕ್ರಮ ಬೀರನೆಂಬ ಹೆಸರು ಇಟ್ಟರು. ಪಾರ್ವತಿಯು ಮುದ್ದಿಟ್ಟು ಭಸ್ಮವನ್ನು ಧರಿಸಿ ಭುವನದೊಳಗೆ ಬಾಳೆಂದು ಹರಸಿದಳು. ಚಾಮರಾಯನಿಗೆ ಸಿಕ್ಕ ಐದು ಹೆಣ್ಣು ಶಿಶುಗಳು ಬೆಳೆದು ದೊಡ್ಡವರಾಗಿ ಕುರಿಗಳನ್ನು ಕಾಯುತ್ತ ಹವೇಲಿ ಹಳ್ಳದ ವಟವೃಕ್ಷದ ಹತ್ತಿರ ಬಂದು ಕೂಸು ಅಳುವ ಧ್ವನಿಯನ್ನು ಕೇಳಿ ಅಲ್ಲಿಗೆ ಬಂದು, ಮಗು ನನಗೆ ಬೇಕು ನನಗೆ ಬೇಕು ಎನ್ನುವಾಗ ಅಕ್ಕಮ್ಮ ಹೇಳುವಳು. ಶಿವನು ನಮಗೆ ಅಂತಃಕರಣವಿಟ್ಟು ತರಣನನ್ನು ಯುವಕ, ಮಗುವನ್ನು ಯಾರಿಗೆ ನೀಡುವನೋ ಅವರು ಪಡೆಯಬೇಕೆಂದು ಹೇಳಿದಳು. ಎಲ್ಲರೂ ಶಿವನನ್ನು ಪ್ರಾರ್ಥಿಸಿ ಉಡಿಯನ್ನೊಡ್ಡಿ ನಿಂತರು. ಬೀರನು ಅಕ್ಕಮ್ಮನ ಮಾತಿನೊಳಗೆ ಸತ್ಯವಿರುವಂತೆ ಕಾಲಿಲ್ಲದವನ ಕಡೆಗೆ ನದಿಯು ತಾನಾಗಿ ಹರಿದುಬಂದಂತೆ ಆ ಶಿಶು ಅಕ್ಕಮ್ಮನಿಗೆ ದೊರೆಯಿತು. ಶಿವನು ಅಕ್ಕಮ್ಮನಿಗೆ ನಿಜರೂಪ ತೋರಿಸಿದ. ಬೀರನ ಇತಿಹಾಸವನ್ನು ಹೇಳಿ ಸಿದ್ಧಬೀರನ ತಲೆಯ ಮೇಲೆ ವರದ ಹಸ್ತವನ್ನು ಇಟ್ಟು ಪ್ರಪಂಚವು ನಿನ್ನಿಂದ ಉದ್ಧಾರವಾಗಲಿ ವೈರಿಗಳನ್ನು ಹತ್ತಿಕ್ಕಲು ಸನ್ನದ್ಧರಾಗಲು ಮುಂದೆ ರೇವಣಸಿದ್ದನೆಂಬ ಗುರು ನಿನಗಾಗುವನ್ನು ಎಂದು ಆಶೀರ್ವದಿಸಿ ಕೈಲಾಸಕ್ಕೆ ಹೋದನು.

ರಸ್ತಾಪುರ ಭೀಮಕವಿಯು ಹಾಲ್ಮತ್ತೋತ್ತೇಜಕ ಪುರಾಣದಲ್ಲಿ ಬೀರಪ್ಪನ ಜನನದ ಬಗ್ಗೆ ಹೀಗೆ ಹೇಳಿದ್ದಾನೆ. ಪುಷ್ಪದತ್ತನೆಂಬುವವನು ದಿನಾಲು ಶಿವಪೂಜೆ ಮಾಡುತ್ತಿದ್ದನು. ಅದರಂತೆ ಹರಿಯು ಶಿವಪೂಜೆ ಮಾಡುತ್ತಿದ್ದನು. ಒಂದು ದಿನ ಹರಿಯು ಪುಷ್ಪದತ್ತನು ಪೂಜಾಸಮಯದಲ್ಲಿ ಏರಿಸಿದ ಕಮಲಪುಷ್ಪ ಕೆಡವಿ ಶಿವನ ಪೂಜೆಗೆ ತೊಡಗಿದನು. ಪಾದದಲ್ಲಿ ಬಿದ್ದ ಹೂವುಗಳನ್ನು ಶಿವನು ಜಂಗುಗಳನ್ನಾಗಿ ಮಾಡಿ ಪ್ರೀತಿಯಿಂದ ಧರಿಸಿದನು. ಪುಷ್ಪದತ್ತನ ಪೂಜೆಯನ್ನು ಅಲಕ್ಷಿಸಿದ ಅಪರಾಧ ಪರಿಹಾರಕ್ಕಾಗಿ ಕಾಶಿಯಿಂದ ಗಂಗಾಜಲ ತಂದು ತನಗೆ ಅಭಿಷೇಕ ಮಾಡಬೇಕೆಂದು ಶಿವನು ಹರಿಗೆ ಆಜ್ಞಾಪಿಸಿದನು. ಶಿವನಾಜ್ಞೆಯನ್ನು ಪಾಲಿಸಿ ಕಾಶಿಗೆ ಹೊರಟ ಹರಿಯು ಚಂದ್ರಗಿರಿಯ ಅರಸು ನಿಲಂಕಾರ ಮಹಾರಾಜನ ಮಗ ಭರಮದೇವನನ್ನು ತಾನು ಬರುವವರೆಗೆ ಶಿವಪೂಜೆ ಮಾಡಿಕೊಂಡಿರುವಂತೆ ಕೇಳಿಕೊಂಡನು. ಭರಮದೇವನ ಇಚ್ಚೆಯಂತೆ ತನ್ನ ತಂಗಿ ಸೂರಾವತಿಯನ್ನು ಕೊಟ್ಟು ಮದುವೆಯನ್ನು ಮಾಡಿ ಕಾಶಿಗೆ ಹೋದನು.

ಭರಮದೇವನ ಪೂಜೆಗೊಲಿದ ಶಿವನು ಇನ್ನು ಮೇಲೆ ನೀನೇ ನನ್ನ ಪೂಜೆ ಮಾಡುತ್ತಿರು ಎಂದನು. ಪೂಜೆಗೆ ಬೇರೆಯವರನ್ನು ಒಳಗೆ ಬಿಡದಿರುವಂತೆ ಆಜ್ಞೆಯೂ ಆಯಿತು. ಕಾಶಿಯಿಂದ ಹಿಂದಿರುಗಿದ ಕೃಷ್ಣ(ಹರಿ) ನನ್ನು ದ್ವಾರಪಾಲಕರು ಒಳಗೆ ಬಿಡಲಿಲ್ಲ. ಆದರೂ ಒತ್ತಾಯದಿಂದ ಒಳಗೆ ಪ್ರವೇಶಿಸಿದ ಕೃಷ್ಣನು ಮಕ್ಕಳಿಲ್ಲ ದವರಿಂದ ಪೂಜೆಯನ್ನು ಸ್ವೀಕರಿಸುವುದು ಸರಿಯೇ ಎಂದು ಶಿವನನ್ನು ಪ್ರಶ್ನಿಸಿದನು. ಕೃಷ್ಣನ ವಾದಕ್ಕೆ ಮಣಿದ ಶಿವನು ಭರಮದೇವನನ್ನು ಪೂಜೆಯಿಂದ ಬಿಡುಗಡೆಗೊಳಿಸಿದನು.

ಗಂಡನಿಂದ ವಿಷಯ ತಿಳಿದು ನೊಂದುಕೊಂಡ ಸೂರಾವತಿ ಶಿವನಲ್ಲಿಗೆ ಹೋಗಿ ತನಗೆ ಮಕ್ಕಳನ್ನು ಕರುಣಿಸುವಂತೆ ಬೇಡಿಕೊಂಡಳು. ಹೊನ್ನ ಹೊಕ್ಕಳ, ಸುವರ್ಣ ಜಡೆ ಇರುವ ಮಗನು ಹುಟ್ಟುವನೆಂಬ ಶಿವನ ಆಶೀರ್ವಾದದಿಂದ ಸೂರಾವತಿ ಗರ್ಭವತಿಯಾದಳು. ಕೃಷ್ಣನಿಗೆ ವಿಷಯ ತಿಳಿಯಿತು. ತನ್ನ ತಂಗಿಗೆ ಹುಟ್ಟುವ ಮಗ ಮುಂದೆ ತನ್ನ ಮಗಳನ್ನು ಮದುವೆಯಾಗಿ ತನಗೆ ಅಪಹಾಸ್ಯ ಒದಗುವುದೆಂದು ತಿಳಿದಿದ್ದ ಕೃಷ್ಣನು ಗರ್ಭದಲ್ಲಿರುವಾಗಲೇ ಮಗುವನ್ನು ಕೊಲ್ಲುವ ಹಂಚಿಕೆ ಮಾಡಿದನು. ಗರ್ಭಸ್ಥ ಶಿಶು ಎಚ್ಚರಿಕೆ ನೀಡಿದ್ದರಿಂದ ಸೂರಾವತಿಯು ಮಧುರಾನ್ನವನ್ನು ಸೇವಿಸಲಿಲ್ಲ ಕೃಷ್ಣನ ಉಪಾಯ ಫಲಿಸಲಿಲ್ಲ.

ಶಿವನು ಹೇಳಿದಂತಹ ಕೂಸನ್ನು ಸುರಾವತಿ ಹೆತ್ತಳು. ಕೃಷ್ಣನು ಜ್ಯೋತಿಷಿಯ ವೇಷ ಹಾಕಿಕೊಂಡು ಈ ಮಗು ಹುಟ್ಟಿದ ಗಳಿಗೆ ಚೆನ್ನಾಗಿಲ್ಲ. ಇದರಿಂದ ನಿನ್ನ ಅಣ್ಣನಿಗೆ ಮೃತ್ಯು ಒದಗುವುದೆಂದು, ಇದನ್ನು ಅರಣ್ಯ ದಲ್ಲಿ ಬಿಟ್ಟು ಬರಬೇಕೆಂದು ತಿಳಿಸಿದನು. ಸೂರಾವತಿಯು ದುಃಖಿಸುತ್ತ ಮಗುವನ್ನು ಬಿಟ್ಟು ಬರಲು ಚಾರರನ್ನು ಅಟ್ಟಿದಳು. ಚಾರರು ಕೊದಲಿಬನದ ಹಾಲಹವೇಲಿ ಹಳ್ಳದ ದಂಡೆಯ ಮೇಲೆ ತೊಟ್ಟಿಲನ್ನು ಇಳಿಸಿ ನೀರು ಕುಡಿಯಲು ಹೋದರು. ಶಿವನ ಮಹಿಮೆಯಿಂದ ತೊಟ್ಟಿಲು ವಟವೃಕ್ಷದ ಮೇಲೆ ಹೋಗಿ ಸುರಕ್ಷಿತವಾಗಿ ಕುಳಿತಿತ್ತು. ನೀರು ಕುಡಿದು ಹಿಂದಿರುಗಿದ ಚಾರರು ರಕ್ತ ಕಾರಿಕೊಂಡು ತೀರಿಕೊಂಡರು. ಶಿವನ ಕರುಣೆಯಿಂದ ಕೂಸು ಉಳಿಯಿತು. ಪಾರ್ವತಿಯು ಕೂಸಿಗೆ ಶಿವಸಿದ್ದ ಬೀರನೆಂದು ಹೆಸರಿಟ್ಟಳು.

ಶಿವನು ಲೋಕಸಂಚಾರ ಮಾಡುತ್ತ ಮಾರ್ಗಮಧ್ಯದಲ್ಲಿ ತೋರಿದ ವಟವೃಕ್ಷದ ಕೆಳಗೆ ಕುಳಿತುಕೊಳ್ಳುವ ಸ್ತ್ರೀಯರು ಗರ್ಭವತಿಯರಾಗಲೆಂದನು. ದೇವಕನ್ಯೆಯರು ಅರಿಯದೆ ಇದರ ಕೆಳಗೊಮ್ಮೆ ವಿಶ್ರಮಿಸಿಕೊಂಡಾಗ ಶಿವನೆಂದಂತೆ ಅವರೆಲ್ಲ ಗರ್ಭವತಿಯರಾದರು. ಗಾಬರಿಗೊಂಡು ಅವರು ಅಪವಾದಕ್ಕೆ ಹೆದರಿ ಗರ್ಭ ಭೇದಿಸಿಕೊಂಡು ತಮ್ಮ ಆ ಐದೂ ಕೂಸುಗಳನ್ನು ತೆಪ್ಪದ ಮೇಲೆ ಇಟ್ಟು ನದಿಯಲ್ಲಿ ತೇಲಿಬಿಟ್ಟರು. ಕೆಳಗೆ ಕುರಿ ಕಾಯುತ್ತ ನಿಂತಿದ್ದ ಚಾಮರಾಯ ಈ ಐದು ಕೂಸುಗಳನ್ನು ತಂದು ಮಕ್ಕಳಿಲ್ಲದೆ ಕಳವಳಿಸುತ್ತಿದ್ದ ಮಡದಿ ಶಾಂಭವಿಯ ಕೈಗಿಟ್ಟನು. ಅವರಿಗೆ ಲಕ್ಷ್ಮಮ್ಮ, ಮಾಯಮ್ಮ, ಮಂಕಮ್ಮ, ಮಾಕಾಳಿಮ್ಮ ಮತ್ತು ಅಕ್ಕಮ್ಮ ಎಂದು ಹೆಸರಿಟ್ಟು ಸಲುಹಿದರು. ಇವರು ಬೆಳೆದು ಒಂದು ದಿನ ಕುರಿ ಕಾಯುತ್ತ ಹಾಲಹವೇಲಿ ಹಳ್ಳಕ್ಕೆ ಬಂದರೆ ವಟವೃಕ್ಷದ ಮೇಲೊಂದು ಕೂಸಿನ ಅಳು ಕೇಳಿಸಿತು. ಅಕ್ಕ ತಂಗಿಯರೆಲ್ಲ ತನಗೆ ಬೇಕು. ತನಗೆ ಬೇಕು ಎಂದು ಮಗುವಿಗೆ ಹಂಬಲಿಸಿದರೆ ಅಕ್ಕಮ್ಮ ಮರದಡಿಯಲ್ಲಿ ಉಡಿಯೊಡ್ಡಿ ನಿಲ್ಲೋಣ, ಯಾರ ಉಡಿಯಲ್ಲಿ ಅದು ಬೀಳುತ್ತದೋ ಅವರು ಸ್ವೀಕರಿಸಬೇಕು ಎದು ಉಪಾಯ ಸೂಚಿಸಿದಳು. ಎಲ್ಲರೂ ಉಡಿಯೊಡ್ಡಿ ನಿಂತರೆ ಕೂಸು ಅಕ್ಕಮ್ಮನ ಉಡಿಯಲ್ಲಿಯೇ ಬಿದ್ದಿತು. ಅಕ್ಕಮ್ಮ ಶಿವಸಿದ್ಧಬೀರನ ಸಂರಕ್ಷಣೆಯ ಹೊಣೆ ಹೊತ್ತಳು. ಅದೇ ರೀತಿ ಹಾಲುಮತ ಶ್ರೀ ಬೀರಲಿಂಗೇಶ್ವರ ಮಹಾಪುರಾಣದ ಪ್ರಕಾರ ಬೀರಪ್ಪನ ಜನನ ಈ ಹಿಂದಿನ ಕಥೆಗಳ ಜಾಡಿನಲ್ಲಿಯೇ ಇದು ಮುಂದುವರೆದಿದೆ. ಈ ಕೃತಿಯು ಸಂವಾದ ರೂಪದಲ್ಲಿದ್ದು ಬ್ರಹ್ಮನನ್ನು ಕಮಲಪುತ್ರ ಎಂದು ಹೇಳುತ್ತದೆ. ಶಿಶು ಬೀರಪ್ಪನ ಜನನದ ಸಮಯದಲ್ಲಿ ಸೂಲಗಿತ್ತಿಯರಿಂದ ಉಕ್ಕಿನ ಉಗುರುಗಳಿಂದ ಕೊಲ್ಲಿಸುವ ಪ್ರಯತ್ನ ನಾರಾಯಣ ನಡೆಸಿರುವ ಹೊಸ ಸಂಗತಿ ಇದರಲ್ಲಿ ಉಲ್ಲೇಖಿಸಲ್ಪಟ್ಟಿದೆ. ಕೂಸು ಕೆಂಪಗಾಗಿ, ತಲೆಯ ಮೇಲೆ ಗುಂಗುರು ಕೂದಲು ಇರುವುದನ್ನು ಉಲ್ಲೇಖಿಸಿದ್ದಾರೆ. ಬೀರೇಶ ಚಿಕ್ಕವನಿರುವಾಗ ಚಂಡಿನಾಟ ಆಡುವ ಸಮಯದಲ್ಲಿ ಅವನ ಚೆಂಡು ಪಾಂಡವರ ತಾಯಿ ಕುಂತಿಯ ಹತ್ತಿರಕ್ಕೆ ಹೋಗುತ್ತದೆ. ಚೆಂಡನ್ನು ಮರಳಿಸಿದ್ದಕ್ಕಾಗಿ ಬೀರೇಶ್ವರ ಕುಂತಿಗೆ ಆಶೀರ್ವಾದಿಸುತ್ತಾನೆ. ಇಂದ್ರ ನೊಂದಿಗಿನ ಸಂವಾದವೂ ಇದರಲ್ಲಿದೆ. ಬೀರಪ್ಪನು ಕೀಲುಕುದುರೆ ಹೊಂದಿರುತ್ತಾನೆ. ಅದನ್ನು ಉಪಯೋಗಿಸಿ ಕೊಂಡು ಕನ್ನಿಕಾಮಾಲೆಯನ್ನು ಅಪಹರಿಸಿಕೊಂಡು ಬರುವ ಕೃಷ್ಣನ ಬಾಲಲೀಲೆಯಂತಹ ಲೀಲೆಗಳನ್ನು ಬೀರೇಶ್ವರ ತೋರುತ್ತಾನೆ.

ಪುರಾಣದಲ್ಲಿ ದ್ವಾರಾವತಿಯನ್ನು ನಗರಿಪಟ್ಟಣ ಎಂದು ಹೇಳಿದ್ದಾರೆ. ದ್ವಾರಾವತಿ ಕೃಷ್ಣನ ದ್ವಾರಕೆ ಎಂದು ಭಾವಿಸಲಾಗಿದೆ. ಕೂಸು ಬೀರಪ್ಪನ ತೊಟ್ಟಿಲು ಕೊಲ್ಲಿಪಾಕಿಯ ಅಡವಿಯಲ್ಲಿದೆ ಎಂದು ಕೃತಿಕಾರರು ಕಲ್ಪಿಸಿಕೊಂಡಿದ್ದಾರೆ. ಬೀರಪ್ಪನೊಂದಿಗೆ ಅಮೋಘಸಿದ್ಧನ ಭೇಟಿಯನ್ನು ಕಲ್ಪಿಸಿದ್ದಾರೆ. ಹುಲಜಂತಿ ಮಹಾಲಿಂಗ ರಾಯನೊಂದಿಗಿನ ಗುರು ಶಿಷ್ಯ ಸಂಬಂಧವಿದೆ. ಒಟ್ಟಾರೆ ಈ ಪುರಾಣ ಲಂಗುಲಗಾಮಿಲ್ಲದೆ ಮನಬಂದ ಕಡೆಗೆ ಸುಳಿದಾಡಿದೆ. ಅರಕೇರಿ ಅಮೋಘಸಿದ್ಧ ಮತ್ತು ಮಾಳಿಂಗರಾಯ ಇದರ ಚರಿತ್ರೆಯಿಂದ ಅವರ ಕಾಲಮಾನ ೧೨ರಿಂದ ೧೬ನೇ ಶತಮಾನ ಎಂಬ ಒಂದು ಗ್ರಹಿಕೆಯಿದೆ. ರೇವಣಸಿದ್ಧರ ಕಾಲ ೧೨ನೇ ಶತಮಾನ, ಪಾಂಡವರ ಕಾಲದ ಸಂಬಂಧಗಳನ್ನೆಲ್ಲ ಗಮನಿಸಿದರೆ ಒಂದಕ್ಕೊಂದು ತಾಳ ಮೇಳವಿಲ್ಲದ ಪುರಾಣವಿದು. ೧೪

ಪುರಾಣದ ಕೃತಿಕಾರ ಬೀರಪ್ಪನ ಮತ್ತು ಕೋಣಾಸುರ ಮತ್ತು ಇನ್ನಿತರರು ತಲೆಕೂದಲು ಗುಂಗುರಾಗಿರುವುದಾಗಿ ಹೇಳುತ್ತಾರೆ. ಈ ರೀತಿಯ ಕೇಶಗಳನ್ನು ಮಹಾವೀರ ಮತ್ತು ಬುದ್ಧನ ವಿಗ್ರಹಗಳಲ್ಲಿ ಕಾಣಬಹುದು. ಅವರ ಸಮಕಾಲೀನ ಅನೇಕ ವಿಗ್ರಹಗಳಲ್ಲಿ ಗುಂಗುರು ಕೇಶಗಳ ಕೆತ್ತನೆ ಕಂಡುಬರುತ್ತದೆ. ಇದರಿಂದ ಬೀರಪ್ಪ ಜೈನ ಬೌದ್ಧರ ಸಮಕಾಲೀನ, ಇಲ್ಲವೇ ಅದಕ್ಕೂ ಪೂರ್ವ ಎಂದು ಊಹಿಸಬಹುದಾಗಿದೆ. ಇದೇ ರೀತಿ ಜನಪದ ಹಾಲುಮತ ಮಹಾಕಾವ್ಯದಲ್ಲಿ ಬೀರಪ್ಪನ ಜನನವಿದೆ. ಈ ಮಹಾಕಾವ್ಯದ ನಿಜವಾದ ನಾಯಕನೆಂದರೆ ಬೀರಪ್ಪ ಈ ಕಾವ್ಯದಲ್ಲಿಯ ಬಹುದೊಡ್ಡ ಜೀವ. ಅಸಾಮಾನ್ಯ ವ್ಯಕ್ತಿತ್ವದ ಎಳೆ ಈತನಲ್ಲಿ ನಿರಂತರವಾಗಿ ಕಾಣುತ್ತದೆ. ಜನನದಿಂದ ಕೊನೆಯವರೆಗೂ ಎಲ್ಲೂ ಸೋಲರಿಯದ ದೇವಮಾನವನಾಗಿ ಈತ ಕಾಣುತ್ತಾನೆ. ಈತನ ಹುಟ್ಟು ಒಂದು ಅದ್ಭುತವಾಗಿ ಕಾಣುತ್ತದೆ.

ಬೀರಪ್ಪ ಶಿವನವತಾರಿಯೇ. ಶಿವನ ಬೇವರಿನಿಂದ ಜನಸಿದವನು. ಬಾಳಭರಮ ಬೀರಪ್ಪನ ತಂದೆ, ಕಮಳಾದೇವಿಯಲ್ಲಿ ಶಿವನ ಲೀಲೆಯ ಕಾರಣವಾಗಿ ಜನಿಸಿದವನು. ಪಾರ್ವತಿಯಿಂದ ಸಂರಕ್ಷಿಸಲ್ಪಟ್ಟವನು. ಸೂರಮ್ಮದೇವಿ ಬೀರಪ್ಪನ ತಾಯಿ. ಬಾಳಭರಮನ ಹೆಂಡತಿ ಈಕೆ. ಶಿವನ ಪೂಜಕನಾದ ಕಾಳಿನಾರಾಯಣನ ತಂಗಿ ಶಿವನ ಸೊಸೆ ಬಾಳಭರಮನು ಮಕ್ಕಳಿಲ್ಲದ್ದಕ್ಕಾಗಿ ಕಾಳಿನಾರಾಯಣನಿಂದ ಬಂಜೆ ಎಂದು ಹಂಗಿಸಿ ಕೊಳ್ಳುತ್ತಾನೆ. ಇದರಿಂದ ಸಿಟ್ಟಿಗೇರಿದ ಸೂರಮ್ಮದೇವಿ ಶಿವನ ಎದುರಿಗೆ ಹೋಗಿ ತಪಸ್ಸು ಮಾಡುತ್ತಾಳೆ. ಶಿವನು ಹೊತ್ತಿಗೆ ತೆಗೆದು ನೋಡಿದರೆ ಸೂರಮ್ಮದೇವಿಗೆ ಮಕ್ಕಳ ಭಾಗ್ಯ ಇಲ್ಲ. ಕೊನೆಗೆ ಆಕೆಯ ನಿಷ್ಠುರತೆಗೆ ಮಣಿದು ಬೆವರಹನಿಗಳನ್ನು ಕೊಡುತ್ತಾನೆ. ಈ ಶಿವನ ಬೆವರನ್ನು ಗಂಡ ಹೆಂಡತಿ ಸೇವಿಸಿದ್ದರಿಂದ ಸೂರಮ್ಮದೇವಿ ಗರ್ಭ ಧರಿಸುತ್ತಾಳೆ.

ತಂಗಿ ಗರ್ಭವತಿಯಾದ ಸುದ್ದಿ ಕಾಳಿನಾರಾಯಣನಿಗೆ ತಲುಪಿತು. ತಂಗಿಗೆ ಹುಟ್ಟುವ ಮಗುವಿನಿಂದ ತನಗೆ ಅಪಾಯವೆಂದು ಭವಿಷ್ಯಜ್ಞಾನದಿಂದ ತಿಳಿದಿದ್ದ ಕಾಳಿನಾರಾಯಣ ಕೂಸನ್ನು ಕೊಲ್ಲಬೇಕೆಂದು ತಂಗಿಗೆ ವಿಷದ ಬುತ್ತಿ ಕಳುಹಿಸುತ್ತಾನೆ. ಗರ್ಭಸ್ಥ ಶಿಶು ತಾಯಿಗೆ ಕನಸಿನಲ್ಲಿ ತಿನ್ನಬೇಡ ಎಂದು ಹೇಳುತ್ತದೆ. ಕಾಳಿನಾರಾಯಣನ ಸಂಚಿಕೆ ನಿಷ್ಫಲವಾಯಿತು. ಹುಟ್ಟುವ ಕೂಸನ್ನು ಕೂಡಲೇ ಕೊಲ್ಲಬೇಕೆಂದು ತನ್ನೂರಿನಿಂದ ಸೂಲಗಿತ್ತಿಯರನ್ನು ಕಾಳಿನಾರಾಯಣ ಕಳುಹಿಸಿದರೆ ಅದೂ ನಿಷ್ಫಲವಾಯಿತು. ಗಂಡುಮಗುವಿನ ಜನನದಿಂದ ದೇವಭರಮ ಸೂರಮ್ಮದೇವಿಯರಿಗೆ ಸಂತೋಷವಾಯಿತು. ಆದರೆ ಕಾಳಿನಾರಾಯಣನಿಗೆ ಈ ಸಂತೋಷವಿಲ್ಲ. ಅವನು ಜೋಸಿಗನ ವೇಷದಲ್ಲಿ ಬಂದು ಹುಡುಗನ ಭವಿಷ್ಯ ಸರಿಯಿಲ್ಲವೆಂದು ಸಾರುತ್ತಾನೆ. ಮತ್ತೆ ನಿಜ ವೇಷದಲ್ಲಿ ಬಂದು ಅದನ್ನೇ ಪುನರುಚ್ಚರಿಸುತ್ತಾನೆ. ಕಾಳಿನಾರಾಯಣನ ಸೂಚನೆಯಂತೆ ಕೂಸನ್ನು ಅರಣ್ಯದಲ್ಲಿ ಬಿಟ್ಟು ಬರುವುದೆಂದು ತೀರ್ಮಾನವಾಯಿತು. ನಾಲ್ಕು ಜನ ಮಸಾಳ್ಯರು ಕೂಸನ್ನು ತೊಟ್ಟಿಲಲ್ಲಿ ಹಾಕಿಕೊಂಡು ಕೂಡಲಿಸಂಡದ ಬಸಕ್ಕೆ ಒಯ್ದು ಅಲ್ಲಿ ಕಂಚಿನ ಆಲದ ಮರಕ್ಕೆ ತೊಟ್ಟಿಲನ್ನು ಕಟ್ಟಿದರು. ಅವರು ಸೂರಮ್ಮದೇವಿ ಕಟ್ಟಿಕೊಟ್ಟ ಬುತ್ತಿಯ ಋಣಕ್ಕಾಗಿ ಕೂಸನ್ನು ಕೊಲ್ಲದೆ ಗಿಡದಿಂದ ರುಂಡದ ಆಕಾರ ತಯಾರಿಸಿ ಕಾಳಿನಾರಾಯಣನಿಗೆ ತೋರಿಸಿದರು. ಇದರಿಂದ ಅವನು ಸಂತೋಷಪಟ್ಟನು.

ಮುಂದೆ ಕಥೆ ಬೇರೆ ಕಡೆಗೆ ಮುಖ ಮಾಡುತ್ತದೆ. ಮುಂದೆ ಅಕ್ಕವ್ವ ಮಾಯವ್ವ ಎಂಬ ಅಕ್ಕತಂಗಿಯರು ಕುರಿ ಕಾಯುತ್ತ ಬಂದಾಗ ಕೂಸು ಅಳುವ ಧ್ವನಿ ಕೇಳುತ್ತದೆ. ಮರದ ಮೇಲೆ ತೊಟ್ಟಿಲಲ್ಲಿದ ಆ ಕೂಸನ್ನು ಬಯಸಿ ತೊಟ್ಟಿಲನ್ನು ಇಳುಹಿಸಿಕೊಳ್ಳಲು ಅಕ್ಕಮ್ಮ ಮೊದಲು ಪ್ರಯತ್ನ ಪಡುತ್ತಾಳೆ. ಅದು ಸಾಧ್ಯವಾಗದಿದ್ದಾಗ ಮಾಯವ್ವ ಗಿಡವನ್ನೇರುವಲ್ಲಿ ಯಶಸ್ಸು ಸಾಧಿಸಿ ಕೂಸನ್ನು ಪಡೆಯುತ್ತಾಳೆ. ಕೂಸು ತನಗೆ ಬೇಕು. ತನಗೆ ಬೇಕು ಎಂದು ಇಬ್ಬರೂ ಜಗಳವಾಡತೊಡಗಿದರು. ಅದೇ ವೇಳೆಗೆ ಅಲ್ಲಿಗೆ ಬಂದ ಎಳ್ಳಗುತ್ತಿ ರಾಮಣ್ಣನೆಂಬವನು ಇಬ್ಬರೂ ತೊಟ್ಟಿಲನ್ನು ಸುತ್ತು ಹಾಕಿರಿ. ಆಗ ಯಾರ ಎದಿಬದಿಗಳು ಚಿಗಿಯುವವೋ ಅವರಿಗೆ ಆ ಕೂಸು ಎನ್ನುತ್ತಾನೆ. ಈಗಲೂ ಮಾಯವ್ವನೇ ಜಯ ಗಳಿಸಿ ಕೂಸನ್ನು ಪಡೆದಳು. ಮಾಯವ್ವ ಅವನಿಗೆ ಲಿಂಗಬೀರಣ ಎಂದು ಹೆಸರಿಟ್ಟಳು. ಮಾಯವ್ವನ ಆರೈಕೆಯಲ್ಲಿ ಬೀರಪ್ಪ ಬೆಳೆಯತೊಡಗುತ್ತಾನೆ. ಜನಕೆ ತಮ್ಮನ ಮಾಡಿ ಮನಕೆ ಮಗನ ಮಾಡಿ ಅವಳು ಸಲುಹಿದಳು.

ಇದುವರೆಗೆ ಪ್ರತ್ಯೇಕವಾಗಿ ನೋಡಿದ ಪುರಾಣಗಳ ಕಾವ್ಯಗಳಲ್ಲಿನ ಪ್ರಮುಖ ವಿಷಯಗಳನ್ನು ಮೊದಲು ಕ್ರೋಡೀಕರಿಸಿ ನಂತರ ಕೆಲವು ನಿರ್ಣಯಗಳಿಗೆ ಬರಬಹುದೆಂದು ತೋರುತ್ತದೆ.

- ಜನಪದ ಹಾಲುಮತ ಮಹಾಕಾವ್ಯದಲ್ಲಿ ಉಲ್ಲೇಖಿಸಲ್ಪಟ್ಟಿರುವಂತೆ ಭರಮದೇವನು ಶಿವನ ಬಲತೊಡೆಯ ಕಮಲದಲ್ಲಿ ತೋರುತ್ತಾನೆ.
- ಬೀರದೇವನು ಶಿವನ ಅನುಗ್ರಹದಿಂದ ಹುಟ್ಟಿದವನು ಎಂಬ ಮಾತು ಸ್ಪಷ್ಟವಿದೆ. ಹಾಲ್ಮತೋತ್ತೇಜಕ ಪುರಾಣದಲ್ಲಿ ಮಕ್ಕಳಿಲ್ಲದ ಸೂರಾವತಿಯ ಮೇಲೆ ಕರುಣೆಗೊಂಡು ಅವಳಿಗೆ ಮಗುವಾಗುವಂತೆ ಆಶೀರ್ವಾದಿಸುತ್ತಾನೆ. ಜನಪದ ಹಾಲುಮತ ಮಹಾಕಾವ್ಯದಲ್ಲಿ ಭರಮದೇವ ಮತ್ತು ಸೂರಮ್ಮದೇವಿ ಶಿವನ ಬೆವರನ್ನು ಸೇವಿಸಿ ಮಗುವನ್ನು ಪಡೆದರು ಎಂದಿದೆ.
- ಹಾಲ್ಮತೋತ್ತೇಜಕ ಪುರಾಣದಲ್ಲಿ ಬೀರಪ್ಪನ ತಂದೆ ತಾಯಿ ಭರಮದೇವ ಮತ್ತು ಸುರಾವತಿ ಎಂದಿದ್ದರೆ ಜನಪದ ಹಾಲುಮತ ಮಹಾಕಾವ್ಯದಲ್ಲಿ ಭರಮದೇವ ಮತ್ತು ಸೂರಮ್ಮದೇವಿ ಎಂದಿದೆ.
- ಹಾಲ್ಮತೋತ್ತೇಜಕ ಪುರಾಣದಲ್ಲಿ ಸೂರಾವತಿಯ ಅಣ್ಣನು ಹರಿ ಅಥವಾ ಕೃಷ್ಣನಾಗಿದ್ದರೆ ಜನಪದ ಹಾಲುಮತ ಮಹಾಕಾವ್ಯದಲ್ಲಿ ಅವನು ಕಾಳಿನಾರಾಯಣನೆನಿಸಿದ್ದಾನೆ.
- ಹಾಲ್ಮತೋತ್ತೇಜಕ ಪುರಾಣದಲ್ಲಿ ಬೀರದೇವನನ್ನು ಸಂರಕ್ಷಿಸಿದವಳು ಅಕ್ಕಮ್ಮಳಾಗಿದ್ದಾಳೆ. ಹಾಲಮತ ಮಹಾಕಾವ್ಯದಲ್ಲಿ ಮಾಯವ್ವಳಾಗಿದ್ದಾಳೆ.
- ಶಿವನ ಕರುಣೆಯಿಂದ ಬೀರಪ್ಪ ಹುಟ್ಟುತ್ತಾನೆ. ಬೀರಪ್ಪನ ಸೋದರಮಾವ ಕೃಷ್ಣ ಅಥವಾ ಕಾಳಿನಾರಾಯಣ ಎಂದು ಉಲ್ಲೇಖಗೊಂಡಿದೆ.
- ಬ್ರಹ್ಮನು ವಿಷ್ಣುವಿನ ನಾಭಿಕಮಲದಲ್ಲಿ ಹುಟ್ಟಿದವನು ಎಂಬುದು ಪ್ರಸಿದ್ಧ ಹೇಳಿಕೆ. ಜನಪದ ಹಾಲುಮತ ಮಹಾಕಾವ್ಯದಲ್ಲಿ ಭರಮದೇವನು ಶಿವನ ಬಲತೊಡೆಯಲ್ಲಿದ್ದ ಕಮಲದಲ್ಲಿ ಕಾಣಿಸಿಕೊಂಡನು ಎಂದಿದೆ.

- ಬ್ರಹ್ಮ ಮತ್ತು ಭರಮದೇವರಿಬ್ಬರೂ ಕಮಲದಲ್ಲಿ ಹುಟ್ಟಿರುವುದು, ಈ ಎರಡು ಹೆಸರಿನ ಉಚ್ಚಾರಣೆಯಲ್ಲಿರುವ ಸ್ವರಸಾಮ್ಯತೆ ಅವರಿಬ್ಬರನ್ನೂ ಅಭಿನ್ನರನ್ನಾಗಿಸುತ್ತದೆ. ಬ್ರಹ್ಮದೇವ ಭರಮದೇವ ಬ್ರಹ್ಮ ಭರಮ ಅದೇ ಉಚ್ಚಾರಣೆಯಿಂದ ಬ್ರಹ್ಮನ ಹೆಂಡತಿ ಸರಸ್ವತಿ ಭರಮನ ಹೆಂಡತಿ ಸುರಾವತಿ ಅಥವಾ ಸೂರಮ್ಮದೇವಿಯಾಗಿದ್ದಾಳೆ. ಸರಸ್ವತಿ, ಸುರಾವತಿ, ಸರಸ್ವತಮ್ಮದೇವಿ, ಸೂರಮ್ಮದೇವಿ ಈ ಎಲ್ಲಾ ವಿಷಯಗಳಿಂದ ಬ್ರಹ್ಮ ಸರಸ್ವತಿಯರೇ ಬೀರಪ್ಪನ ತಂದೆ ತಾಯಿಗಳೆಂಬುದು ಸ್ಪಷ್ಟಗೊಳ್ಳುತ್ತದೆ.

ಆದರೆ ಅನೇಕ ಪುರಾಣಗಳು, ಕಾವ್ಯಗಳು, ಜನಪದರ ಹೇಳಿಕೆಗಳ ಪ್ರಕಾರ ಭರಮಪ್ಪನ ತಂದೆ ಭರಮದೇವ ತಾಯಿ ಸೂರಮ್ಮದೇವಿ ಎಂದಿರುವುದರಿಂದ ಅದನ್ನೇ ನಾವು ಸ್ವೀಕರಿಸಬೇಕಾಗುತ್ತದೆ. ಇಷ್ಟೇ ಅಲ್ಲದೆ ಈ ತೀರ್ಮಾನಕ್ಕೆ ಪೂರಕ ಅಂಶಗಳು ಗೋವಿಂದಮೂರ್ತಿ ದೇಸಾಯಿ ಅವರು ಚರ್ಚಿಸಿದ ಇನ್ನೊಂದು ಪುರಾಣ ಕಥೆಯಂತೆ ನರಸಿಂಹನ ಉಗ್ರರೂಪವನ್ನು ತಾಳಲಾರದೆ ಕೆಲವು ಶಿವಭಕ್ತರು ಶಿವನಿಗೆ ಹೇಳಿದಾಗ ಶಿವನು ವೀರಭದ್ರನಿಂದ ಅವನ ತಲೆಯನ್ನು ಕತ್ತರಿಸಿ ತಂದು ತನ್ನ ಕೊರಳಲ್ಲಿ ಧರಿಸಿದನು. ನಂತರ ವೀರಭದ್ರನು ಶಿವನಿಂದ ವರ ಪಡೆದು ಭೂಲೋಕದಲ್ಲಿ ಹುಟ್ಟಲು ಬ್ರಹ್ಮನ ಹೆಂಡತಿ ಸರಸ್ವತಿಯ ಹೊಟ್ಟೆಯನ್ನು ಸೇರಿದನು. ವಿಷ್ಣುವು ಸರಸ್ವತಿ ಗರ್ಭಿಣಿಯಿರುವಾಗ ವೃದ್ಧ ಬ್ರಾಹ್ಮಣನ ರೂಪದಲ್ಲಿ ಅವಳನ್ನು ಭೇಟಿಯಾಗಿ ಅವಳಿಗೆ ಹುಟ್ಟಲಿರುವ ಕೂಸಿನ ಮುಖ ನೋಡದೆ ಅಡವಿಯಲ್ಲಿ ಬಿಟ್ಟುಬಿಡು ಎಂದು ಉಪದೇಶಿಸಿದನಂತೆ. ಹೀಗೆ ಸ್ಮಶಾನದಲ್ಲಿ ಒಗೆಯಲ್ಪಟ್ಟ ಕೂಸನ್ನು ಮಾಯವ್ವ ವನದೇವತೆ ಎತ್ತಿಕೊಂಡು ಬೀರಲಿಂಗನೆಂಬ ಹೆಸರನ್ನಿಟ್ಟು ಬೆಳೆಸಿದಳು.[೧೪]

ಮೇಲಿನ ಉಲ್ಲೇಖದಲ್ಲಿ ಬೀರಪ್ಪನ ತಂದೆ ತಾಯಿಗಳಾದ ಭರಮದೇವ, ಸೂರಾವತಿಯರು ಬ್ರಹ್ಮ ಮತ್ತು ಸರಸ್ವತಿಯರೇ ಎಂಬುದು ಸ್ಪಷ್ಟಗೊಳ್ಳುತ್ತದೆ. ಭರಮದೇವ ಮತ್ತು ಸೂರಾವತಿಯರಿಗೆ ಬೀರದೇವ ಮಗನಾಗಿ ಹುಟ್ಟುವುದು ಜನಪದ ಹೇಳಿಕೆಯಾದರೆ ವೀರಭದ್ರನು ಬ್ರಹ್ಮನ ಹೆಂಡತಿ ಸರಸ್ವತಿಯ ಗರ್ಭವನ್ನು ಸೇರುವುದು ಶಿಷ್ಟಪರ ಹೇಳಿಕೆ. ನಾಮ ಸಾದೃಶ್ಯದಿಂದ ಒಂದೇ ಆಗಿರುವ ಈ ಸತ್ಯ ಬೀರದೇವ ಮತ್ತು ವೀರಭದ್ರರ ಸಮೀಕರಣವನ್ನು ಖಚಿತಪಡಿಸುತ್ತದೆ. ಬೀರದೇವ ಹಾಗೂ ವೀರಭದ್ರರ ವಿಷಯದಲ್ಲಿ ಇದುವರೆಗೆ ವಿದ್ವಾಂಸರಾದ ಡಾ. ಎಂ.ಎಂ. ಕಲಬುರ್ಗಿ ಹಾಗೂ ಗೋವಿಂದಮೂರ್ತಿ ದೇಸಾಯಿಯಂಥವರು ಮಾಡಿದ ತರ್ಕ ಚರ್ಚೆಗಳಿಗೂ ಇಲ್ಲಿ ಸಮರ್ಥನೆಯಿದೆ. ಹಾಲ್ಮತೋತ್ತೇಜಕ ಪುರಾಣದಲ್ಲಿ ಬೀರದೇವನನ್ನು ಸಾಕಿದವಳು ಅಕ್ಕಮ್ಮ ಎಂದಿದೆ. ಆದರೆ ಜನಪದ ಹಾಲುಮತ ಮಹಾಕಾವ್ಯದಲ್ಲಿ ಮಾಯವ್ವ ಇವೆಲ್ಲಕ್ಕಿಂತ ಹೆಚ್ಚಾಗಿ ಜನಪದರು ಹೇಳಿಕೊಂಡು ಬಂದಿರುವ ಮಾತು ನಂಬಿಕೆಗಳಲ್ಲಿ ಮಾಯವ್ವನೇ ಬೀರದೇವನನ್ನು ಅಕ್ಕನಾಗಿ ಸಾಕಿದಳು ಎಂದಿರುವುದರಿಂದ ಅದನ್ನೇ ನಾವು ಸ್ವೀಕರಿಸಬೇಕಾಗುತ್ತದೆ.[೧೫]

ಇಷ್ಟೇ ಅಲ್ಲದೇ, ಇನ್ನು ಅನೇಕ ಕಾವ್ಯಗಳಲ್ಲಿ, ಹಾಡುಗಳಲ್ಲಿ ಬೀರಪ್ಪನ ಕಥೆ ಮೂಲ ಸ್ವರೂಪದಲ್ಲಿ ಹೇಗಿತ್ತೆಂಬುದನ್ನು ತಿಳಿಯಲು ಸಾಕಷ್ಟು ಪುರಾವೆಗಳಿವೆ. ಬೀರಪ್ಪನ ಹೆಸರು ಎರಡು ಕಡೆಗೆ ಕಂಡುಬರುತ್ತದೆ.

ಒಂದು ೧೨ನೇ ಶತಮಾನದ ಮಧುರ ಕವಿಯ ಧರ್ಮನಾಥ ಪುರಾಣ ಕಾವ್ಯದಲ್ಲಿ. ಎರಡು, ಬಸವಣ್ಣನವರ ವಚನದಲ್ಲಿ. ಇಷ್ಟೇ ಅಲ್ಲದೆ ಹಲವು ಕಾವ್ಯಗಳಲ್ಲಿ ಈ ಹೆಸರು ಕಂಡುಬರುತ್ತದೆ.

ಪಂಡಿತರುಂ ವಿವಿಧಕಳಾ
ಮಂಡಿತರುಂ ಕೇಳತನ ಕೃತಿಯಂ ಕ್ಷಿತಿಯೊಳ್
ಕಂಡರೆ ಕೇಳ್ವೊಡೆ ಗೊರವರ
ಡುಂಡುಚಿವಿ ಬೀದಿವರೆಯೇ ಬೀರನ ಕಥೆಯೇ[೧೬]

ಎಂಬ ಮಧುರ ಕವಿಯ ಬೀರನ ಕಥೆ ಎಷ್ಟರಮಟ್ಟಿಗೆ ಖ್ಯಾತಿ ಪಡೆದಿತ್ತೆಂಬುದನ್ನು ಎತ್ತಿ ತೋರಿಸುತ್ತದೆ. ಈ ಪದ್ಯದಲ್ಲಿ ಬೀರನ ಕಥೆಯ ಜೊತೆಗೆ ಗೊರವರ ಡುಂಡುಚಿಯ ಪ್ರಸ್ತಾಪವೂ ಇದೆ. ಗೊರವರು ಮೈಲಾರನ ಭಕ್ತರು. ಮೈಲಾರ ಕುರುಬರಿಗೂ ಬೇಕಾದ ದೇವರು. ಈ ಬೀರನ ಕಥೆಯನ್ನು ಈರಗಾರರು ಜಾತ್ರೆ ಮೊದಲಾದ ಕಾರ್ಯಕ್ರಮಗಳಲ್ಲಿ ರಥೋತ್ಸವಗಳಲ್ಲಿ, ಬೀದಿಗಳಲ್ಲಿ, ಮಜಲುಗಳಲ್ಲಿ ಅನೇಕ ಕಥೆಗಳ ಜೊತೆಗೆ ಹಾಡಿನ ಮೂಲಕ ಜನತೆಗೆ ತಿಳಿಸುತ್ತಾರೆ. ಈ ಬೀರಪ್ಪನು ಸುಮಾರು ೧೨೦೦ರಲ್ಲಿದ್ದ ಮಧುರ ಕವಿಯ ಕಣ್ಣಿಗೆ ಬಿದ್ದಂತೆ ಬಸವಣ್ಣವರ ದೃಷ್ಟಿಗೂ ಬಿದ್ದಿದ್ದಾನೆ. ಬಸವಣ್ಣನವರ ಒಂದು ವಚನದಲ್ಲಿ ಈ ಬೀರಪ್ಪನ ಉಲ್ಲೇಖ ಈ ರೀತಿ ಬಂದಿದೆ.

ಹಾಳು ಮೊರಡಿಗಳಲ್ಲಿ ಊರ ದಾರಿಗಳಲ್ಲಿ
ಕೆರೆ ಬಾವಿ ಹೂ ಗಿಡ ಮರಂಗಳಲ್ಲಿ
ಗ್ರಾಮ ಮಧ್ಯಗಳಲ್ಲಿ, ಚೌಪದ ಪಟ್ಟಣ ಪ್ರದೇಶದಲ್ಲಿ
ಹಿರಿಯಾಲದ ಮರದಲ್ಲಿ
ಮನೆಯ ಮಾಡಿ ಕೆರೆವೆಮ್ಮೆಯ ಹಸುಗೂಸು ಬಸುರು ಬಾಣತಿ
ಕುಮಾರಿ ಕೊಡುಗೂಸೆಂಬುವರ ಹಿಡಿದು ತಿಂಬ್ರ ತಿರಿದುಂಬ
ಮಾರಯ್ಯಾ ಬೀರಯ್ಯಾ ಕೇಚರಗಾವಿಲ್ಲ ಅಂತರಬೆಂತರ
ಕಾಳಯ್ಯಾ ಧೂಳಯ್ಯಾ ಕೇತಯ್ಯಾಗಳೆಂಬ ನೂರು
ಮಡಕೆಗೆ ನಮ್ಮ ಕೂಡಲಸಂಗಮದೇವ
ಕರುಣೆಂಬುದೊಂದು ದಡಿ ಸಾಲದೆ[೧೭]

ಬಸವಣ್ಣನವರು ಈ ವಚನದಲ್ಲಿ ಜಾನಪದರು ನಂಬಿ ಆರಾಧಿಸುತ್ತಿದ್ದ ಹಲವು ಕಿರುಕುಳ ದೈವಗಳನ್ನು ಖಂಡಿಸಿ ಕೂಡಲಸಂಗಮದೇವರು ಒಬ್ಬರೇ ನಿಜವಾದ ದೇವರೆಂದು ಹೇಳುತ್ತಾರೆ. ಈ ಖಂಡನೆಯಲ್ಲಿ ಬೀರಯ್ಯ, ಮಾರಯ್ಯ, ಕಾಳಯ್ಯ, ದೂಳಯ್ಯ ಮೊದಲಾದ ಹೆಸರುಗಳು ಬಂದಿರುವುದು ಗಮನಾರ್ಹ. ಬೀರಯ್ಯನು ಸುಮಾರು ಕ್ರಿ.ಶ. ೧೨ನೆಯ ಶತಮಾನಕ್ಕಿಂತಲೂ ಹಿಂದಿನ ದೇವರು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಕಿರುಕುಳ ದೈವಗಳಲ್ಲಿ ಈತನೂ ಒಬ್ಬನಾಗಿದ್ದಾನೆ. ಇಲ್ಲಿ ಮಾಳಪ್ಪ ಬೀರಪ್ಪನ ಶಿಷ್ಯರಲ್ಲಿ ಒಬ್ಬನೆಂದು ಕೆಲವು ಹಾಡುಗಳಲ್ಲಿ ಕಂಡುಬರುತ್ತದೆ. ಬೀರ ಸಮಸ್ತರಿಗೂ ಹಿತ ಬಯಸುವ ದೇವರೆಂದು ಕುರುಬರ ಹಾಡುಗಳಲ್ಲಿ ವ್ಯಕ್ತವಾಗಿದೆ. ಭಾಸುರಾಂಗ, ಬೀರಪ್ಪ, ಗುರುಬೀರಪ್ಪ, ಬೀರಲಿಂಗ ಎಂದು ವರ್ಣಿಸಿದುದನ್ನು ನೋಡಿದರೆ ಅವನು ಪ್ರಕಾಶಮಾನನಾದ ವ್ಯಕ್ತಿಯಾಗಿದ್ದಾನೆ. ಆಡು ಕಾಯಲು ಹೋದ ಬೀರಣ್ಣ ನಾಡು ನೋಡಲು ಹೋದ ಬೀರಣ್ಣ ಇದರಿಂದ ಅವನೂ ಕುರಿಕಾಯುತ್ತಿದ್ದನೆಂದು ತಿಳಿದುಬರುತ್ತದೆ. ಬೀರಪ್ಪ ಶಿವ ಪಾರ್ವತಿಯರ ಬೇವರಿನ ಪುತ್ರ, ಸರಸ್ವತಿಯ ಕುಮಾರ, ನಾರಾಯಣನ ಅಳಿಯ ಎಂದು ಹಾಡುಗಳಲ್ಲಿ ವ್ಯಕ್ತವಾಗಿದೆ. ಈ ಮಾತುಗಳನ್ನು ಗಮನಿಸಿದರೆ, ಅವನು ಶಿವಶಕ್ತಿ ಬ್ರಹ್ಮ ಸರಸ್ವತಿ ನಾರಾಯಣ ಮೊದಲಾದವರ ಶಕ್ತಿ ಹಾಗೂ ಅನುಗ್ರಹದಿಂದ ಜನಿಸಿದ ಕುಮಾರ ಎಂಬುದನ್ನು ಜನಪದರು ಹೇಳುವುದು ನಿಜವಾಗಿದೆ. ಈ ಮಗನ ಜನನ ತವರುಮನೆಗೆ ಕೇಡನ್ನುಂಟು ಮಾಡುತ್ತಿದೆಯೆಂಬ ಗ್ರಹಿಕೆಯಿಂದ ಬೀರಪ್ಪನನ್ನು ಹೆತ್ತ ತಾಯಿ, ಕುಂತಿ ಕರ್ಣನನ್ನು ಗಂಗಾಪಾಲು ಮಾಡಿದಂತೆ ಈತನನ್ನೊಯ್ದು ಅಡವಿಯ ಪಾಲು ಮಾಡಿದಳು. ಅಲ್ಲಿ ಅವನನ್ನು ಕೊಲ್ಲಲು ಪ್ರಯತ್ನ ಮಾಡಿದರು. ಅವರ ಸೋದರಮಾವ, ಕೊಲೆಗಾರರಿಗೆ ಕೊಲ್ಲಲು ಹೇಳಿ ಕಳುಹಿಸುತ್ತಾನೆ. ಕೊಲೆಗಾರರಿಗೆ ಕೂಸಿನ ಮುಖ ನೋಡಿ ಕೊಲ್ಲಲು ಮನಸ್ಸು ಬರಲೇ ಇಲ್ಲ. ಏಳು ದಿನದ ಕೂಸು ಒಡನುಡಿತು ಎಂದು ಒಂದು ಪದ್ಯದಲ್ಲಿ ಬಂದಿದೆ. ಅದನ್ನು ನೋಡಿದರೆ ಬೀರಪ್ಪ ಕೂಸಿದ್ದಾಗಲೇ ದೈವಾನುಗ್ರಹ ಸಂಪಾದಿಸಿದ್ದ ಎನ್ನುವುದು ತಿಳಿದುಬರುತ್ತದೆ. ಕೂಸು ಅಡವಿಯಲ್ಲಿ ಜೇನುತುಪ್ಪದಿಂದ ಬೆಳೆಯಿತು. ಕೂಸನು ಕಾಯುವುದಕ್ಕೆ ನಾಗಪ್ಪ ಕಾಳಿಂಗರಾಯ ಇದ್ದ ಹೀಗಾಗಿ ಕೂಸಿಗೆ ಯಾವ ಅಪಾಯಗಳೂ ಸಂಭವಿಸಲಿಲ್ಲ. ಈ ಹಂತದಲ್ಲಿ ಬೀರಪ್ಪನ ಜನನ, ಬಾಲ್ಯದ ಬಗೆಗೆ ಹಲವು ರೀತಿಯ ಕಥೆಗಳಿವೆ. ಯಾವ ಊರಲ್ಲಿ ಹುಟ್ಟಿದ ಬೀರಪ್ಪ ಎಂಬುದೂ ತಿಳಿದುಬರುವುದಿಲ್ಲ. ಜಾನಪದ ಕವಿಗಳು ಇಂತಹ ಮಹಾನುಭಾವರು ತಮ್ಮ ತಮ್ಮ ಊರಲ್ಲೇ ಹುಟ್ಟಿದ್ದ ಎಂದು ಹೇಳುವುದರಲ್ಲೇ ಆಸಕ್ತಿ. ಹೀಗಾಗಿ ಬೇರೆ ಬೇರೆ ಹಾಡುಗಳಲ್ಲಿ ಬೇರೆ ಬೇರೆ ಊರ ಹೆಸರೂ ಬರುತ್ತವೆ. ಅಲಕನೂರ ಕೋಣಗನೂರವ ಗೂಳಿಕೋಣಗನೂರವನಾಗಿ ಬೆಳೆದ ಎಂದು ಹಾಡುಗಳಲ್ಲಿ ಬರುವ ಮಾತೇ ಇದಕ್ಕೆ ನಿದರ್ಶನ. ಅಡವಿಯೊಳಗೆ ತೊಟ್ಟಿಲಲ್ಲಿ ತೂಗಾಡುತ್ತಿದ್ದ ಈ ಅದ್ಭುತ ಬಾಲಕನನ್ನು ನೋಡಿದವರು ದೇವೇಂದ್ರನ ಮಕ್ಕಳು. ಮಲೀಮೂಗು ಇಲ್ಲದ ಏಳು ಜನ ಮಕ್ಕಳು "ಹಗಲ ಹಂಗನ ಬ್ಯಾಟಿ ಇರುಳು ಗಿಡಗನ ಬ್ಯಾಟಿ ಆಡುವರು". ಇವರ ಕಣ್ಣಿಗೆ ಕೂಸು ಬಿತ್ತು. ಮಲೀಮೂಗು ಚಿಗರಿದವರಿಗೇ ಕೂಸು ಎಂದು ನಿರ್ಣಯಿಸಿದರು. ಇವರೊಳಗೆ ಹಿರಿಯಾಕೀಗೆ ಮಲೀಮೂಗು ಚಿಗರಿದವು. ಕೂಸಿಗೆ ಕೈ ಹಾಕಿದಳು, ಕಾಳಿಂಗ(ನಾಗಪ್ಪ) ನಾ ಸಾಕೀನಿ ಕೂಸಿನ್ನ ಅಂದ, ಆಗ ಮಾಯವ್ವ ನೋಡು ಕಾಳಿಂಗ, ನಾಡಿನಾಗ ನಿನ್ನ ಹಬ್ಬ ಮಾಡ್ತಿ, ತವರಿಗೆ ಸೊಸೆಯಂದಿರನ ಕರಿಸಿ, ನಿನಗ ಹಾಲು ಎರೆಯೋ ಹಂಗ ಮಾಡ್ತೀನಿ, ಕೂಸು ಕೊಡು ಎಂದ್ಳು. ಅಂದಿನಿಂದ ಪಂಚಮಿ ಹಬ್ಬ ಹುಟ್ಟಿತು. ಈ ಮಾತು ನೋಡಿದರೆ ಬೀರಪ್ಪನ ಕಥೆಗೂ ಪಂಚಮಿ ಹಬ್ಬಕ್ಕೂ ಸಂಬಂಧ ಇದೆ ಎನ್ನುವುದು ತಿಳಿಯುತ್ತದೆ. ಬೀರಪ್ಪನ ಕತೆಗಂಟ ಅನೇಕ ಅದ್ಭುತ ರೋಮಾಂಚಕಾರಕ ಘಟನೆಗಳು ಸುತ್ತುವರಿದಿವೆ. ಮಾಯವ್ವ ಬೀರಪ್ಪನನು ಕರೆದುಕೊಂಡು ಮೂಡಲದಿಂದ ಪಡವಲ ದಿಕ್ಕಿಗೆ

ದೇವರದೇವನೆ ಬೀರಪ್ಪ
ಕಾಳಿಯ ರಮಣನೆ ಬೀರಪ್ಪ
ಮಳೆಯನ್ನು ಕಾಲಕ್ಕೆ ಬೀರಪ್ಪ
ದನಕರು ಕುರಿ ಆಡು ಬೀರಪ್ಪ
ನೀ ಮನಬಿಟ್ಟು ಹೆಚ್ಚಿಸೋ ಬೀರಪ್ಪ
ನಮ್ಮ ಚೆಲುವ ಬೀರಪ್ಪ ಎಂದು[೨೧]

ಬೀರಪ್ಪದೇವರ ಚೆಲವನ್ನು ಈ ಪದ್ಯದಲ್ಲಿ ಹೇಳಲಾಗಿದೆ. ಇನ್ನೊಂದು ಪದ್ಯದಲ್ಲಿ ಬೀರಪ್ಪ ಪಾರ್ವತಿಯ ವರದಿಂದ ಜನಿಸಿದ. ಬಿಲ್ಲಾಸುರನನ್ನು ಯಾರೂ ಕೊಲ್ಲಲಾಗಲಿಲ್ಲ. ಶಿವನು ವೀರಭದ್ರನಾಗಿ ಅವನನ್ನು ಸಂಹರಿಸಿದಂತೆ, ಆ ವೀರಭದ್ರನಿಗೆ ಶಿವನು ನಿನ್ನ ಕೀರ್ತಿ ಭೂಲೋಕದಲ್ಲಿ ಅಜರಾಮರವಾಗಲಿ, ನೀನು ಬೀರದೇವರಾಗಿ ಅಲ್ಲಿ ಜನಿಸು ಎಂದಿದೆ. ಹಾಲುಮತದ ದೇವರಾಗಿ ಈ ಕಥೆಯಲ್ಲಿ, ವೀರಭದ್ರನಿಗೂ ಬೀರಪ್ಪನಿಗೂ ಭೇದವಿಲ್ಲ. ಶಿವನೇ ಅವನಿಗೆ ೧೨ನೆಯ ದಿವಸಕ್ಕೆ ಬೀರಪ್ಪ ಎಂಬ ನಾಮಕರಣ ಮಾಡಿದನಂತೆ. ಅವನು ಜನಿಸಿದ ಕಾಲದಲ್ಲಿ ದೇವತೆಗಳು ಪುಷ್ಪವೃಷ್ಟಿ ಕರೆದರು. ಎಲ್ಲ ದೇವತೆಗಳು ಅವನು ಜನಿಸಿದ ಮುಹೂರ್ತವೇ ಶುಭಮುಹೂರ್ತ ದೇವಕುಮಾರ ಎಂದು ಹಲವು ಹಾಡುಗಳಲ್ಲಿ ಬಣ್ಣಿಸಲಾಗಿದೆ.

ಅಂದನ ಗಿರಿಯಾಗ ಹುಟ್ಟೇದ ಬೀರಯ್ಯ
ಮಂದನ ಗಿರಿಯಾಗ ಬೆಳೆದಾನ ಬೀರಯ್ಯ

ಅಂದನ ಗಿರಿಯೆಂದರೆ ಗರ್ಭ, ಮಂದನ ಗಿರಿಯೆಂದರೆ ಮೊಲೆಹಾಲು ಅವನು ಎಲ್ಲರಂತೆಯೇ ತಾಯಗರ್ಭದಲ್ಲಿ ಜನಿಸಿ ತಾಯ ಮೊಲೆಹಾಲಿನಿಂದ ಬೆಳೆದಿದ್ದಾನೆಂಬುದನ್ನು ಹೇಳಲಾಗಿದೆ. ಸರ್ವಪಕ್ಷಿಗಳೂ ಹಾಡಿ ಉಲಿದು, ಹಾಲುಣಿಸಿ ಕೂಸನ್ನು ರಂಜಿಸಿ ಬೆಳೆಸಿವೆ. ಐದು ಮಂದಿ ಅಕ್ಕತಂಗಿಯರು ತಂದೆಯ ಜೊತೆ ಕುರಿಕಾಯಲು ಹೋದಾಗ ತೊಟ್ಟಿಲಲ್ಲಿ ಬೀರಪ್ಪನನ್ನು ಕಂಡರು. ಶಿವನು ಈ ಐವರಲ್ಲಿ ಬೀರಪ್ಪನನ್ನು ಅಕ್ಕ ಮಾಯವ್ವನ ಉಡಿಯಾಗ ಹಾಕಿದ ಎಂದು ಬಣ್ಣಿಸಲಾಗಿದೆ.

ಬೀರಪ್ಪನನ್ನು ಹೆತ್ತ ತಾಯಿ ಅವನಿಂದ ಅಗಲುವಾಗ ಆಕೆ ಈ ರೀತಿ ಹರಿಸಿದಂತಿದೆ.

ಎಂದೂ ಬಾರದ ಮಳೆಯು ಬಂದೀತಣ್ಣಾ
ಎಂದೂ ಬಾರದ ಮಳೆಯ ಕಂಡು
ಬೀರಪ್ಪ ಕುರಿಯ ಬಿಟ್ಟನಣ್ಣಾ

ಬೀರಪ್ಪ ಕುರಿಯ ಬಿಟ್ಟಿದ್ದು ಕಂಡು
ಮಾದವ್ವ ಮುದ್ದೆಯ ತಂದದ್ದು ಕಂಡು
ಬೀರಪ್ಪ ಉಣ್ಣೋಕೆ ಕುಂತಾನಣ್ಣಾ

ಬೀರಪ್ಪ ಉಣ್ಣೋಕೆ ಕುಂತ ಕಂಡು
ನರಿಯಣ್ಣ ಕುರಿಯ ಕದ್ದನಣ್ಣ
ನರಿಯಣ್ಣ ಕುರಿಯ ಕದ್ದದ್ದ ಕಂಡು
ಬೀರಪ್ಪ ದೊಣ್ಣೆ ಎತ್ತಿದ್ದನಣ್ಣ
ಬೀರಪ್ಪ ದೊಣ್ಣೆ ಎತ್ತಿದ್ದ ಕಂಡು
ನಾಯಣ್ಣ ಮುದ್ದ ಕದ್ದನಣ್ಣ
ನಾಯಣ್ಣ ಮುದ್ದೆ ಕದ್ದದ್ದ ಕಂಡು
ಬೀರಪ್ಪ ಬಿಕ್ಕಿ ಬಿಕ್ಕಿ ಅತ್ತನಣ್ಣ
ಬೀರಪ್ಪ ಬಿಕ್ಕಿ ಬಿಕ್ಕಿ ಅತ್ತದ್ದ ಕಂಡು
ಮಾದವ್ವ ಬಿದ್ದು ಬಿದ್ದು ನಕ್ಕಳಣ್ಣ
ಕಲ್ಲಿನಕಿನ ಕುಣಿಯಾಗು, ಮುಳ್ಳಿನಕಿನ ಮೊನೆಯಾಗು
ಮತ್ತೊಂದು ಯುಗದಲ್ಲಿ ನನ್ನಲ್ಲಿ ಹುಟ್ಟು, ವೈರಿಯ ಹಸ್ತಕ್ಕಿಂತ
ನಿನ್ನ ಹಸ್ತಮೇಲಾಗಲಿ, ಕೋಟಿ ಹಸ್ತನಾಗು[೨೨]

ಈ ಹರಕೆ ಬೀರಪ್ಪನ ಜೀವನದಲ್ಲಿ ಫಲಿಸಿದಂತೆ ಕಂಡುಬರುತ್ತದೆ. ಬೀರಪ್ಪನನ್ನು ಕೊಲ್ಲಲು ಹೋದವರು ಮರಳಿ ಬರುವಾಗ ಅವನ ಶಾಪದಿಂದ ಒಬ್ಬನು ಒಂದು ಕಲ್ಲು ಆದ. ಇನ್ನೊಬ್ಬ ಹೊಲದ ನೀರಪ್ಪ ಆದ ಮೂರನೆಯವ ಸೀಮಿಕಲ್ಲು ಆದ. ನಾಲ್ಕನೆಯವನು ಮಲ್ಲಗಂಬ ಆದ. ಐದನೆಯವನು ಹೊರವ ಕಲ್ಲು ಆದ. ಆರನೆಯವನು ಬಡ್ಡಗಲ್ಲು ಆದ. ಏಳನೆಯವನು ಒಳಕಲ್ಲು ಆದ ಎಂಬ ಮಾತುಗಳು ಅನೇಕ ಕಥೆ, ಹಾಡುಗಳಲ್ಲಿ ಜನಪದರು ಹೇಳುತ್ತಾರೆ. ಬೀರಪ್ಪನ ಬಗೆಗೆ ಹಲವು ಕಥೆಗಳೂ ಉಪಲಬ್ಧವಿವೆ ಎಂದು ಹೇಳಲಾಗಿದೆ.

ಇಷ್ಟೇ ಅಲ್ಲದೇ ಬೀರಪ್ಪನ ಸಾಂಸ್ಕೃತಿಕ ಚರಿತ್ರೆಯನ್ನು ಅನಾವರಣ ಮಾಡುವ ಡೊಳ್ಳಿನ ಹಾಡುಗಳು ಯಥೇಚ್ಛವಾಗಿ ಸಿಗುತ್ತವೆ. ಈಗಾಗಲೇ ಜನಪದ ಹಾಲುಮತ ಮಹಾಕಾವ್ಯ, ಮಾಳಿಂಗರಾಯನ ಕಾವ್ಯ ಮತ್ತು ಬಿಡಿ ಹಾಡುಗಳು ಸಂಗ್ರಹವಾಗಿವೆ. ಬುಳ್ಳಪ್ಪನ ಕಾವ್ಯ, ಇಟ್ಟಪ್ಪ ವಿಠಲನ ಕಾವ್ಯ, ಅಮೋಘಸಿದ್ಧನ ಕಾವ್ಯ ಮುಂತಾದ ಮಹಾಕಾವ್ಯಗಳನ್ನು ಗಾಯಕರು ಹಾಡುತ್ತಾರೆ. ಈ ಕಾವ್ಯಗಳು ಇನ್ನೂ ಸಂಗ್ರಹವಾಗಿಲ್ಲ. ಇವುಗಳಲ್ಲಿ ಬೀರಪ್ಪನ ಭಿನ್ನ ವ್ಯಕ್ತಿತ್ವದ ವಿವರಗಳು ಕಂಡುಬರುತ್ತವೆ.

ಶೈವ ಆರಾಧನೆಯ ಅರ್ಹತೆಗಾಗಿ ಹರದಿಂದ ಪಡೆದ ಮಗ ಜನಪದ ಸಾಂಸ್ಕೃತಿಕ ವೀರರ ಜನ್ಮಗಳ ಹಿಂದೆ ಬೇರೆ ಬೇರೆ ಕಾರಣಗಳು ಅಡಕವಾಗಿವೆ. ಬೀರಪ್ಪ ಜನ್ಮ ತಾಳಲು ಇಂತಹ ಹಲವು ಕಾರಣಗಳು ಕಾರಣವಾಗಿವೆಯೆಂದು ಡೊಳ್ಳಿನ ಹಾಡುಗಳು ಹೇಳುತ್ತವೆ. ಆರಂಭದಲ್ಲಿ ಶೈವ ಆರಾಧನೆಯ ಅವಕಾಶದ

ಸಂಘರ್ಷ ಪ್ರಮುಖವಾಗಿ ಕಂಡುಬರುತ್ತದೆ. ಬೀರಪ್ಪನ ತಂದೆ ಬಾಳಭರಮ ಕಾಳಿನಾರಾಯಣನ ಮನೆಯಲ್ಲಿ ಶಿವನನ್ನು ಪೂಜಿಸುವ ಕೆಲಸ ಮಾಡುತ್ತಿರುತ್ತಾನೆ. ಈತನ ನಿಷ್ಠೆ, ಭಕ್ತಿಗೆ ಮೆಚ್ಚಿದ ಶಿವ ಕಾಳಿನಾರಾಯಣನನ್ನು ತಿರಸ್ಕಾರ ಮಾಡುವುದಕ್ಕೆ ಮುಂದಾಗುತ್ತಾನೆ. ಈ ಕಾಯಕವನ್ನು ಕಳೆದುಕೊಳ್ಳದ ಮತ್ತು ಅವಮಾನವನ್ನು ಸಹಿಸಿಕೊಳ್ಳದ ಕಾಳಿನಾರಾಯಣ ಶಿವನಿಗೆ ನೀನೆಂತ ದೈವ ಸಂತಾನರಹಿತವಾದ ವ್ಯಕ್ತಿಯಿಂದ ಪೂಜೆ ಸೇವೆ ಮಾಡಿಸಿಕೊಳ್ಳುತ್ತಿರುವೆಯಲ್ಲ ಎಂದು ಹೀಯಾಳಿಸುತ್ತಾನೆ. ಈ ಮಾತುಗಳಿಂದ ನೊಂದ ಶಿವ ಬಾಳಭರಮನನ್ನು ತಿರಸ್ಕಾರ ಮಾಡಿ, ಕಾಳಿನಾರಾಯಣನನ್ನು ನೇಮಕ ಮಾಡಿಕೊಳ್ಳುತ್ತಾನೆ. ಈ ಅವಮಾನದಿಂದ ಮುಕ್ತರಾಗಬೇಕು ಮತ್ತು ಶೈವ ಆರಾಧನೆಯ ಅವಕಾಶ ಪಡೆದುಕೊಳ್ಳಬೇಕು ಎನ್ನುವ ಬಾಳಭರಮನ ಛಲ ಮಗುವನ್ನು ಪಡೆಯುವುದಕ್ಕೆ ಉತ್ತೇಜಿಸುತ್ತದೆ. ಆಗ ಭರಮ ಮಗುವನ್ನು ಪಡೆಯುವ ವಿಧಾನಕ್ಕೆ ಮುಂದಾಗುತ್ತಾನೆ. ಬಾಳಭರಮರು ಬೀರಪ್ಪನನ್ನು ಪಡೆದ ರೀತಿ ಗಮನ ಸೆಳೆಯುತ್ತವೆ. ಪತಿ ಶಿವನ ಆರಾಧನೆಯ ಅವಕಾಶ ಕಳೆದುಕೊಂಡ ಸುದ್ದಿ ತಿಳಿದ ಪತ್ನಿ ಸೂರಮ್ಮ ವಿಚಲಿತಳಾಗುತ್ತಾಳೆ. ಕುಪಿತಳಾಗುತ್ತಾಳೆ. ಸೂರಮ್ಮಳ ಕೋಪವನ್ನು ಡೊಳ್ಳಿನ ಹಾಡುಗಳು ಸೊಗಸಾಗಿ ಕಟ್ಟಿಕೊಡುತ್ತವೆ.

ಉರದ ಬೆಂಕಿನಾದಳೆ ತೆಲಿವಂದು ಕೆಂಡನಾದಳೆ
ಒಡಹುಟ್ಟಿದಣ್ಣನಲ್ಲೇಳೆ ಹಂತ ಮಾತನಾಡ್ಯಾನ[೨೩]

ಇದರಿಂದ ಮಗುವನ್ನು ಪಡೆಯಬೇಕು ಎನ್ನುವ ಹಠಕ್ಕೆ ಬೀಳುತ್ತಾಳೆ. ಶಿವನ ಹತ್ತಿರ ಹೋಗಿ ಮಕ್ಕಳ ಭಾಗ್ಯ ಕೊಡುವಂತೆ ಬೇಡುತ್ತಾಳೆ. ಅಂಗಲಾಚುತ್ತಾಳೆ. ಹಠ ಮಾಡುತ್ತಾಳೆ. ಶಿವ ನಿನಗೆ ಸಂತಾನ ಭಾಗ್ಯವಿಲ್ಲವೆಂದರೂ ಕೇಳುವುದಿಲ್ಲ ಕೋಪಗೊಳ್ಳುತ್ತಾಳೆ. ಉಗ್ರರೂಪ ತಾಳಿ ಶಿವನನ್ನು ಒಲಿಸಿಕೊಳ್ಳುವುದಕ್ಕೆ ಅಲಗ ಆಟ ಆಡುತ್ತಾಳೆ. ಹಾಲುಮತ ಸಂಸ್ಕೃತಿಯಲ್ಲಿ ಅಲಗ ಹಾಕಿಕೊಳ್ಳುವ ಅಥವಾ ಅಲಗ ಆಟ ಆಡುವ ವಿಧಾನ ಶಿವನನ್ನು ಒಲಿಸಿಕೊಳ್ಳುವ ಆಚರಣೆಯಾಗಿ ಈಗಲೂ ಪ್ರಚಲಿತದಲ್ಲಿದೆ. ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ ಜಿಲ್ಲೆಗಳಲ್ಲಿ ನಡೆಯುವ ತೋಪುಜಾತ್ರೆಗಳಲ್ಲಿ ಮತ್ತು ಕೋಲಾರದಲ್ಲಿ ನಡೆಯುವ ದೊಡ್ಡ ದೇವರ ಜಾತ್ರೆಗಳಲ್ಲಿ ಈ ಆಚರಣೆ ಪ್ರಮುಖವಾಗಿ ಕಂಡುಬರುತ್ತದೆ.

ಸಂಜಿಗೆ ಹುಟ್ಟಿದರಲ್ಲಪ್ಪ ಮುಂಜಾಲಿ ಸಾಯಲಿ ಅಂದಾಳ
ಮುಂಜಾಲಿ ಹುಟ್ಟಿದರಲ್ಲಪ್ಪ ಸಂಜಿಗ ಸಾಯಲಿ ಅಂದಾಳ[೨೪]

ಆದರೆ ನನಗೆ ಮಗು ಬೇಕೇ ಬೇಕು ಎಂದು ಹಠ ಹಿಡಿಯುತ್ತಾಳೆ. ಇದೇ ತರಹದ ಹಠ ಹಲವು ದ್ರಾವಿಡ ಪಶುಪಾಲನ ಸಾಂಸ್ಕೃತಿಕ ವೀರಣೆಯರಲ್ಲಿ ಕಂಡುಬರುತ್ತದೆ. ಯಲ್ಲಮ ಶಿವನಿಂದ ಪರಶುರಾಮನನ್ನು ಪಡೆಯುವಾಗ ಇದೇ ತರದ ಮಾತುಗಳನ್ನು ಆಡುತ್ತಾಳೆ. ಮಹಿಳೆಯರಿಗೆ ಮಗು ಮುಖ್ಯ ಅಲ್ಲ. ತಮ್ಮ ಜೀವವೂ ಮುಖ್ಯ ಅಲ್ಲ, ಅವಮಾನದಿಂದ ಮುಕ್ತವಾಗಬೇಕು ಎನ್ನುವುದು ಪ್ರಮುಖವಾಗಿ ಕಂಡುಬರುತ್ತದೆ. ಅವಮಾನ ಎನ್ನುವುದು ಇವರಲ್ಲಿ ತಮ್ಮ ಜೀವ ಮತ್ತು ತಮ್ಮ ಮಗುವಿನ ಜೀವಕ್ಕಿಂತಲೂ ಭಯಾನಕವಾಗಿ ಕಾಡಿಸಿದೆ. ಅದರಿಂದ ಮುಕ್ತರಾಗುವುದಕ್ಕೆ ಹಂಬಲಿಸಿದ್ದಾರೆ. ದ್ರಾವಿಡ ಪಶುಪಾಲನ ಮಹಿಳೆಯರು ಹಠಮಾರಿಗಳು

ಬಯಸಿದ್ದನ್ನು ಪಡೆಯುವ ಫಲಗಾರ್ತಿಯರು. ಸೂರಮ್ಮ ಇದಕ್ಕೆ ಹೊರತಾಗಿಲ್ಲ. ಒಂಟಿಗಾಲ ಮೇಲೆ ನಿಂತು ಉಗ್ರ ತಪಸ್ಸು ಮಾಡುತ್ತಾಳೆ. ಜೀವ ಭಯವಿಲ್ಲದೆ ಅಲಗ ಆಟ ಆಡುತ್ತಾಳೆ. ಸೂರಮ್ಮನ ಹಠಕ್ಕೆ ಹೆದರಿದ ಶಿವ ನಾನೇ ನಿನ್ನ ಗರ್ಭದೊಳಗೆ ಜನ್ಮ ತಾಳುವೆ ಎನ್ನುವ ಭರವಸೆ ಕೊಡುತ್ತಾನೆ.

ನಿನ್ನ ಗರ್ಭದೊಳಗೇನೆ ನಾನೇ ಬರುತೀನಿ ಅಂದಾನ
ಸೂರ್ಯಚಂದ್ರರ ಇರುವರಿಗೆ ನೆಲವೆಂದು ಗಂಗಿ ಹರಿವರಿಗೆ
ನೆಲದಂದು ಗಂಗಿ ಹರಿಯುವ ತನಕ ಸಾವಿಲ್ಲ ಕೆಡಿಲ್ಲೇನ
ಮೂರು ವರ್ಣದವನೇನ ಮೂರ ಹೆಸರಿನವನೇನ
ಹಣೆಯ ಬೆವರನಲ್ಲೇಳ ಹಣೆಯ ಬೆವರಾನಾದವ
ಪರಮೇಸೂರ ಹಣೆಯ ಬೆವರ ಲಿಂಗ ಬೀರಪ್ಪ ದೇವರ[೨೫]

ಶಿವ ಹಣೆಯ ಬೆವರ ಹನಿಯಾಗಿ ಸೂರಮ್ಮನ ಹೊಟ್ಟೆಯಲ್ಲಿ ಬೀರಪ್ಪನಾಗಿ ಹುಟ್ಟುತ್ತಾನೆ. ಬೀರಪ್ಪನ ಜನ್ಮವನ್ನು ಹೇಳುವ ಅನೇಕ ಭಿನ್ನ ಪಠ್ಯಗಳು ಸಿಗುತ್ತವೆ. ಲಿಖಿತ ಪಠ್ಯಗಳಲ್ಲಿ ಈತನ ಜನ್ಮವನ್ನು ಪುರಾಣೀಕರಿಸಲಾಗಿದೆ. ಪರಮೇಶ್ವರನಿಗೆ ಪಟ್ಟ ಕಟ್ಟುವ ಕಾಲದಲ್ಲಿ ಗುಗ್ಗುಳ ಹೋಮ ಮಾಡುತ್ತಿರುವಾಗ ಬೀರಪ್ಪ ಆ ಹೋಮದಲ್ಲಿ ಹುಟ್ಟಿದನು. ಸಮುದ್ರದಲ್ಲಿ ಹುಟ್ಟಿ ಸಮುದ್ರದಿಂದ ಒಡವೆಗಳನ್ನು ತೆಗೆದು ಕೊಡುವ ಕಾಯಕ ಮಾಡುತ್ತಿದ್ದವನು. ಸಮುದ್ರದ ದಡದಲ್ಲಿ ಕುಳಿತು ಸಕಲ ಪ್ರಾಣಿಗಳಿಗೆ ಆಹಾರವನ್ನು ಬೀರುತ್ತಿದ್ದವನು. ಆ ಕಾರಣಕ್ಕೆ ಈತನನ್ನು ಬೀರಪ್ಪನೆಂದು ಕರೆದರು ಹಾಗೂ ಬೀರಪ್ಪನನ್ನು ಚಾಮರಾಯನ ಮಗನೆಂದು ಆತ ತನ್ನ ಕೂಸಿನಿಂದ ಮಾಯಾಬೆಟ್ಟವನ್ನು ನಾಶ ಮಾಡುವ ಕನಸ್ಸನ್ನು ಕಂಡ ಈ ಕನಸು ಈಡೇರಿದರೆ ಈ ಮಗು ಬೀರತನದ ವೀರತನದ ಮಗು ಆಗುತ್ತದೆ. ಹಾಗಾಗಿ ಈತನನ್ನು ಬೀರ ಎಂದು ಕರೆದ ಎಂದು ಹೇಳುವುದರ ಮುಖಾಂತರ ಬೀರಪ್ಪನೆನ್ನುವ ಹೆಸರಿನೊಂದಿಗೆ ಬೀರಪ್ಪನನ್ನು ಅರ್ಥೈಸುವ ಕಾರ್ಯ ನಡೆದಿದೆ.

ಹಿಂದೆ ಹೇಳಿದಂತೆ ಭರಮ ಸೂರಮ್ಮ ದಂಪತಿಗಳು ಶೈವ ಆರಾಧನೆಯ ಅರ್ಹತೆಗಾಗಿ ಶಿವನಿಂದ ಬೀರಪ್ಪನನ್ನು ಪಡೆಯುತ್ತಾರೆ. ಇಲ್ಲಿ ಬೀರಪ್ಪನ ಹುಟ್ಟು ಭರ್ಮಪ್ಪನ ಮನೆತನಕ್ಕೆ ಸಂದ ಧಾರ್ಮಿಕ ಸಂಘರ್ಷ ಕುತೂಹಲದ ಹಾದಿಯನ್ನು ಹಿಡಿಯುತ್ತದೆ. ಧಾರ್ಮಿಕ ಸಂಘರ್ಷ ಆರ್ಥಿಕ ಸಂಘರ್ಷದತ್ತ ಮುಖ ಮಾಡುತ್ತದೆ. ಸೂರಮ್ಮನಿಗೆ ಮಕ್ಕಳಾಗುವುದರಿಂದ ತನ್ನ ಆಸ್ತಿಯನ್ನು ಕಳೆದುಕೊಳ್ಳಬೇಕು ಎನ್ನುವ ಆತಂಕ ಕಾಳಿನಾರಾಯಣನಲ್ಲಿ ಆರಂಭವಾಗುತ್ತದೆ. ಮಾತೃಪ್ರಧಾನ ವ್ಯವಸ್ಥೆಯಲ್ಲಿ ಯಾವಾಗಲೂ ಹಿಂದಿನ ರಾಜನ ತಂಗಿಯ ಮಗನೇ ಹೊಸ ರಾಜನಾಗಿ ಪಟ್ಟಕ್ಕೆ ಬರಬೇಕಾಗಿತು.[೨೬] ಆ ಕಾರಣಕ್ಕೆ ಬೀರಪ್ಪನನ್ನು ಕಾಳಿನಾರಾಯಣ ತಾಯಿಯ ಗರ್ಭದಲ್ಲಿರುವಾಗಲೇ ಸಾಯಿಸುವುದಕ್ಕೆ ಪ್ರಯತ್ನ ಪಡುತ್ತಾನೆ. ಹಲವಾರು ಯೋಜನೆಗಳನ್ನು ಹಾಕಿಕೊಳ್ಳುತ್ತಾನೆ.

ನಮ್ಮ ತಂಗಿ ಅಲ್ಲೇಳ ಬಂಜಿನಾಗಲಿಬೇಕಯ್ಯ
ಬಂಜಿನಾಗಲಿಬೇಕಪ್ಪ ಗೊಡ್ಡಿನಾಗಲಿಬೇಕಯ್ಯ
ನಮ್ಮ ತಂಗಿ ಹೊಟ್ಟೇಲಿ ಹೆಣ್ಣು ಹುಟ್ಟಲಿ ಬಾರದ

ಗಂಡು ಹುಟ್ಟಿದರೆಲ್ಲೇಳ ನನ್ನ ಹೆಣ್ಣಿಗೆ ಮೂಲನಾದವ
ನಮ್ಮ ತಂಗಿ ಹೊಟ್ಟೇಲಿ ಹೆಣ್ಣು ಹುಟ್ಟಲಿ ಬಾರದ
ಹೆಣ್ಣು ಹುಟ್ಟಿದರಲ್ಲೇಳೆ ಗಂಡಿಗೆ ಮೂಲನಾದವ
ನಮ್ಮ ತಂಗಿ ನೋಡವ್ವ ಬಂಜಿ ಆಗಲಿಬೇಕವ್ವ[೨೭]

ಸೂರಮ್ಮನ ಹೊಟ್ಟೆಯಲ್ಲಿ ಯಾವುದೇ ಮಗು ಜನ್ಮ ತಾಳಬಾರದು ಎನ್ನುವುದು ಕಾಳಿನಾರಾಯಣನ ಉದ್ದೇಶ. ಆಸ್ತಿಗಾಗಿ ತನ್ನ ತಂಗಿಯನ್ನು ಸಂಪೂರ್ಣವಾಗಿ ಬಂಜೆಯನ್ನಾಗಿಸುವ ನಿರ್ಧಾರಕ್ಕೆ ಬರುತ್ತಾನೆ. ಪುರುಷಪ್ರಧಾನ ವ್ಯವಸ್ಥೆ ಆಸ್ತಿಗಾಗಿ ಮಹಿಳಾಪ್ರಧಾನ ವ್ಯವಸ್ಥೆಯನ್ನು ಅಥವಾ ಮಹಿಳೆಯನ್ನು ಹೇಗೆ ತುಳಿಯುವುದಕ್ಕೆ ಪ್ರಯತ್ನಪಡುತ್ತಿತ್ತು ಎನ್ನುವುದಕ್ಕೆ ಬಹುದೊಡ್ಡ ಉದಾಹರಣೆ ಇದು. ಆದರೆ, ಬೀರಪ್ಪ ಕಾಳಿನಾರಾಯಣನ ಉದ್ದೇಶಗಳು ಈಡೇರಿಕೆಯಾಗುವುದಕ್ಕೆ ಬಿಡುವುದಿಲ್ಲ. ಆತ ತಾಯಿಯ ಹೊಟ್ಟೆಯಲ್ಲಿದ್ದು ಕೊಂಡೇ ಕಾಳಿನಾರಾಯಣನ ಯೋಜನೆಗಳನ್ನು ವಿಫಲಗೊಳಿಸುತ್ತಾನೆ. ಸೂರಮ್ಮನನ್ನು ಬಂಜೆಯನ್ನಾಗಿಸುವುದಕ್ಕೆ ಬಯಕೆ ಬುತ್ತಿಯ ನೆಪದಲ್ಲಿ ವಿಷದ ಬುತ್ತಿಯನ್ನು ಕಳುಹಿಸಿದಾಗ ಮಾವನ ಕುಂತತ್ರವನ್ನು ಬೀರಪ್ಪ ತಾಯಿಗೆ ತಿಳಿಸಿ ಸಾವಿನಿಂದ ಪಾರುಮಾಡುತ್ತಾನೆ. ಹೆರಿಗೆ ಸಂದರ್ಭದಲ್ಲಿ ಸೂಲಗಿತ್ತಿಯರಿಗೆ ಹುಟ್ಟುವ ಕೂಸನ್ನು ಕತ್ತು ಹಿಸುಕಿ ಹಾಕುವಂತೆ ಹೇಳಿ ಆ ಉಕ್ಕಿನ ಉಗುರು, ಮೂಲಿಕುಂಚಿಗೆ ಕೊಟ್ಟು ಕಳಿಸುತ್ತಾನೆ. ಈ ತಂತ್ರವನ್ನು ಅರಿತ ಬೀರಪ್ಪ ತಾಯಿಯ ಗರ್ಭದಿಂದ ಹೊರಗಡೆ ಬರುತ್ತಿರುವಂತೆ ಸೂಲಗಿತ್ತಿಯರನ್ನು ಹೊಡೆದು ಓಡಿಸುತ್ತಾನೆ. ತಾಯಿಗೆ ಎಚ್ಚರವಾಗುವ ಸಮಯಕ್ಕಾಗಲೇ ಪಕ್ಕದಲ್ಲಿ ನಗುವ ಕೂಸಾಗಿ ಮಲಗುತ್ತಾನೆ. ಕೂಸಿನ ಅಲೌಕಿಕ ಕ್ಷಣಗಳನ್ನು ಜನಪದ ಹಾಲುಮತ ಮಹಾಕಾವ್ಯ ಹೀಗೆ ವರ್ಣಿಸುತ್ತದೆ.

ಹೊನ್ನ ಚಕ್ಕರ ಸುಳಿಯವನೆ ಬೆಳ್ಳಿ ಮುಖವನಿದ್ದವನೇ
ಅಂಗಾಲ ಪದಮ ಇದ್ದವನೆ ಹೊನ್ನವಸ್ತುರವನೇನೆ
ಬೆಳ್ಳಿ ಮುಖದವನಿದ್ದಾನೆ ಬಂಗಾರ ಚಂಡರಿದವನೇನ
ಮುಂದಿನ ಮುರಗಿ ಸುಳಿಯೇನ ಕಣ್ಣಾಗ ದೇವಿಯ ಮಣಿಯನ
ಅಸಲ ಮಾರಿನಿದ್ದಾವೊ ಮುಖದೋಳು ಚಿನ್ನ ಇದ್ದಾವೊ
ನಕ್ಕರ ಮುತ್ತು ಉದರ್ಯಾವೊ ಅತ್ತರ ಹವಳ ಉದರ್ಯಾವೊ
ಗಾಡಿಕಾರನ ಗಂಡನೋ ಮೋಡಿಕಾರನ ಮಿಂಡನೋ[೨೮]

ಬೀರಪ್ಪ ಜನ್ಮ ತಾಳಿದರೂ ಕಾಳಿನಾರಾಯಣ ಕೂಸನ್ನು ಸಾಯಿಸುವ ತಂತ್ರವನ್ನು ಕೈಬಿಡುವುದಿಲ್ಲ. ತಂಗಿಯ ಮನೆಗೆ ಬಂದು ತಾಳಿಪಟ್ಟ ಹೊತ್ತಿಗೆ ತೆಗೆದು ಈ ಕೂಸಿನಿಂದ ತಾಯಿ ತಂದೆಗೆ ಸೋದರಮಾವನಿಗೆ ಭೂಮಿ ಸೀಮೆಗೆ ಕೇಡೆಂದು ಭವಿಷ್ಯ ಹೇಳುತ್ತಾನೆ. ಈ ಮಾತು ಆಸ್ತಿಯ ಸಂಘರ್ಷವನ್ನು ಹೇಳುತ್ತದೆ. ಕಾಳಿನಾರಾಯಣನ ಆತಂಕದ ಮಾತಿದು. ಇದನ್ನು ನಂಬಿದ ಸೂರಮ್ಮ ಪರಿಹಾರವೇನು ಎಂದು ಕೇಳುತ್ತಾಳೆ. ಈ ಕೂಸನ್ನು ಅಡವಿಯಲ್ಲಿ ಬಿಟ್ಟು ಬರಬೇಕೆಂದು ಆಜ್ಞಾಪಿಸುತ್ತಾನೆ. ಸೂರಮ್ಮ ಇದಕ್ಕೆ ಯಾವ ಪ್ರತಿರೋಧವನ್ನು

ಮಾಡದೇ ಒಪ್ಪುತ್ತಾಳೆ. ಆಗ ಕಾಳಿನಾರಾಯಣ ನಾಲ್ಕು ಜನ ಮಸ್ಯಾಳರನ್ನು ಕರೆಯಿಸಿ ಕೂಸನು ಅರಣ್ಯದಲ್ಲಿ ಕೊಲ್ಲಬೇಕು. ಆ ರುಂಡವನ್ನು ನನಗೆ ತಂದು ತೋರಿಸಬೇಕೆಂದು ಹೇಳುತ್ತಾನೆ. ಈ ಮಾತುಗಳನ್ನು ಒಪ್ಪಿಕೊಂಡ ಮಸ್ಯಾಳರು ತೊಟ್ಟಿಲನ್ನು ಹೊತ್ತುಕೊಂಡು ಕಾಡಿಗೆ ಹೋಗುತ್ತಾರೆ. ನಾಲ್ಕು ಜನ ಪೈಲ್ವಾನರು ಒಂದು ಸ್ಥಳದಲ್ಲಿ ಊಟಕ್ಕೆ ಕುಳಿತುಕೊಳ್ಳುತ್ತಾರೆ. ಅವರು ಹೊಟ್ಟೆತುಂಬಾ ಊಟ ಮಾಡಿದರೂ ತೆಗೆದುಕೊಂಡು ಹೋದ ಬುತ್ತಿ ನೀರು ಕಡಿಮೆ ಆಗಲಿಲ್ಲ. ಈ ಅನ್ನದ ಋಣಕ್ಕೆ ಬಿದ್ದ ಮತ್ತು ಇದೆಲ್ಲ ಕೂಸಿನ ಮಹಿಮೆ ಎಂದು ತಿಳಿದ ಪೈಲ್ವಾನರು ಈ ಕೂಸನ್ನು ಕೊಲೆ ಮಾಡಿ ಪಾಪ ಕಟ್ಟಿಕೊಳ್ಳುವ ಬದಲು ತೊಟ್ಟಿಲನ್ನು ಕಂಚಿನಾಲದ ಮರಕ್ಕೆ ಕಟ್ಟುತ್ತಾರೆ. ರಕ್ತಹೊನ್ನಿನ ಗಿಡ ಕಡಿದು ರುಂಡದ ಆಕಾರ ತಯಾರಿಸಿ ಕಾಳಿನಾರಾಯಣನಿಗೆ ತಂದು ತೋರಿಸುತ್ತಾರೆ. ಪೀಡೆ ತೊಲಗಿತೆಂದು ಕಾಳಿನಾರಾಯಣ ಖುಷಿ ಪಡುತ್ತಾನೆ. ಬೀರಪ್ಪನನ್ನು ಕಾಡಿನಲ್ಲಿ ಬಿಟ್ಟು ಬರುವ ಭಿನ್ನ ಪಠ್ಯಗಳು ನಮಗೆ ಸಿಗುತ್ತವೆ. ಕೆಲವು ಪಠ್ಯಗಳಲ್ಲಿ ಪೈಲ್ವಾನರು ತಮ್ಮಷ್ಟಕ್ಕೆ ತಾವೇ ರಕ್ತ ಕಾರಿಕೊಂಡು ಸಾಯುತ್ತಾರೆ. ಇನ್ನು ಕೆಲವು ಪಠ್ಯಗಳಲ್ಲಿ ಕೂಸಿಗೆ ಶರಣಾಗಿ ನಮಸ್ಕಾರ ಅರ್ಪಿಸಿ ಬರುತ್ತಾರೆ. ಕಾಡು ಸೇರಿದ ಕೂಸನ್ನು ಶಿವ ಪಾರ್ವತಿಯರು ಬಂದು ಬೀರಪ್ಪನ ಜೋಪಾನದ ಮತ್ತು ಕಾವಲಿನ ವ್ಯವಸ್ಥೆ ಮಾಡುತ್ತಾರೆ. ಕಥೆಗಳಲ್ಲೂ ಕೂಡ ಬೀರಪ್ಪನ ಜನನವನ್ನು ಜನಪದರು ಭಿನ್ನ ನೆಲೆಯಲ್ಲಿ ಗುರುತಿಸಿದ್ದಾರೆ.

ಅದೇ ರೀತಿ ನಾವು ಅನಾದಿಕಾಲದಿಂದಲೂ ಕಥೆ ಪುರಾಣಗಳನ್ನು ನಂಬಿಕೊಂಡು ಬೆಳೆದವರು. ಇತಿಹಾಸವನ್ನು ಮರೆತು ಬಾಳಿದವರು. ಧರ್ಮ, ನೀತಿ, ಭಕ್ತಿ, ಆಚಾರ ವಿಚಾರಗಳು ತಲೆಮಾರಿನಿಂದ ತಲೆಮಾರಿಗೆ ಬದಲಾಗುತ್ತ ಬಂದಿವೆ. ಪುರಾಣಗಳು ತಮ್ಮ ತನುಗಳನ್ನು ಉಳಿಸಿಕೊಳ್ಳಲು ಅಸಮರ್ಥ ವಾಗುತ್ತಿದ್ದಂತೆ ಚರಿತ್ರೆಗಳು ಮಹತ್ವ ಪಡೆದವು. ಚರಿತ್ರೆ ಮತ್ತು ಇತಿಹಾಸ ಸಮಾಂತರವಾಗಿ ಸಾಗಿದರೆ ಮಾತ್ರ ಚರಿತ್ರೆಗೆ ಮೌಲ್ಯ ಪ್ರಾಪ್ತ ವಾಗುತ್ತದೆ. ಪುರಾಣಗಳ ಸತ್ಯಾಸತ್ಯತೆಗಳು ಒರೆಗಲ್ಲಿಗೆ ಸಿಗದೇ ಇರುವಂತಹವು. ಪುರಾಣಗಳು ಆರಂಭಿಕ ಹಂತದಲ್ಲಿ ಪ್ರಮಾಣ ಗ್ರಂಥಗಳಾಗಿರುವುದು ಸತ್ಯ. ಆದರೆ ಕಾಲ ಗತಿಸಿದಂತೆ ಅವು ಸುಳ್ಳಿನ ಕಂತೆಗಳಂತೆ ಗೋಚರಿಸತೊಡಗಿದವು. ಕೆಲವು ಲೇಖಕರು "ಪುರಾಣಗಳು ಪುಂಡರ ಗೋಷ್ಠಿಗಳು" ಎಂದು ಕರೆದರು. ಅವುಗಳಲ್ಲಿರುವ ಕೆಲವೊಂದು ಸಂಗತಿ ಘಟನೆಗಳು ಉತ್ಪ್ರೇಕ್ಷೆಯಿಂದ ಕೂಡಿದ್ದರೂ ಹಂಸಪಕ್ಷಿ ನೀರಿನಲ್ಲಿ ಬೆರೆತ ಕ್ಷೀರವನ್ನಷ್ಟೇ ಸೇವಿಸುವ ಹಾಗೆ ನಿಜವಾದ ಸಂಶೋಧಕರು ಅದರಲ್ಲಿ ಅಡಗಿದ ಸತ್ಯವನ್ನು ಹೆಕ್ಕಿ ತೆಗೆಯಬಲ್ಲರು. ಅದರಿಂದ ಪುರಾತನ ವ್ಯಕ್ತಿಗಳ ಚರಿತ್ರಾರ್ಹ ಘಟನೆಗಳನ್ನು ಹೆಕ್ಕಿ ಸೋಸಿ ಜನರೆದುರು ಇಡಬಲ್ಲ. ಆದ್ದರಿಂದ ಒಂದು ಚರಿತ್ರೆ ಕಟ್ಟಿಕೊಡಲು ಪುರಾಣ ಮತ್ತು ಜನಪದ ಕಥೆಗಳ ಸಹಾಯ ಪಡೆಯುವುದು ಅನಿವಾರ್ಯ. ಬೀರಪ್ಪನ ಸ್ಥಳಪುರಾಣಗಳು, ಐತಿಹ್ಯಗಳು, ಜನಪದ ಕಥೆಗಳು ಪ್ರಚಲಿತವಿವೆ. ಇಲ್ಲಿ ಇನ್ನಿತರ ಪೌರಾಣಿಕ ಕಥೆಗಳಲ್ಲಿ ಬೀರಪ್ಪನನ್ನು ಯಾವ ರೀತಿ ಕಾಣಲಾಗಿದೆ ಎಂದು ನೋಡಲಾಗಿದೆ.

ಇಲ್ಲಿಯ ಕಥೆಗಳೂ ಕೂಡ ಬೇರೆ ಬೇರೆ ವಿಷಯಗಳಲ್ಲಿ ಇರುವಂತಿವೆ. ಅಲ್ಲಿ ತೊಟ್ಟಿಲು ಮಾಯವಾಗಿ ರುವುದನ್ನು ಕಂಡು ಎದೆ ಒಡೆದುಕೊಂಡು ಸತ್ತು ಹೋಗುತ್ತಾರೆ. ಪರಶಿವನು ಮಗು ನೋಡಲು ಹವೇಲಿ ಹಳ್ಳಕ್ಕೆ ಆಗಮಿಸಿ 'ಕರಿಸಿದ್ದ' ಎಂದು ಹೆಸರಿಡುತ್ತಾನೆ. ಗಿರಿಜೆಯು ಕೂಸನ್ನು ಎತ್ತಿ ಮುದ್ದಾಡಿ ಭೂಲೋಕಕ್ಕೆ

ಹೋಗಿ ನಿನ್ನ ಮಹಿಮೆಗಳನ್ನು ತೋರಿಸೆಂದು ಹರಿಸಿದಳು. ಶಿವನು ಕಾಮಧೇನುವಿಗೆ ಪ್ರತಿನಿತ್ಯ ಹಾಲು ನೀಡಿ ರಕ್ಷಿಸು ಎಂದು ಹೇಳಿ ಈ ತೊಟ್ಟಿಲು ಸಿಕ್ಕಿಕೊಂಡು ಮರದಡಿ ಕುಳಿತ ಸ್ತ್ರೀಯರು ಗರ್ಭ ಧರಿಸಲಿ ಎಂದು ಹರಸಿ ಕೈಲಾಸಕ್ಕೆ ನಡೆದರು.

ಇತ್ತ ಐದು ಕನ್ನಿಕೆಯರು ದಣಿವಾರಿಸಿಕೊಳ್ಳಲು ಇದೇ ಮರದಡಿಯಲ್ಲಿ ಬಂದು ಕುಳಿತುಕೊಳ್ಳುತ್ತಾರೆ. ಶಿವನ ವರದಂತೆ ಐವರೂ ಗರ್ಭ ಧರಿಸುತ್ತಾರೆ. ನವಮಾಸ ತುಂಬುತ್ತಿದ್ದಂತೆ ಉಗುರಿನಿಂದ ಚಿವುಟಿ ಹೊರತೆಗೆದು ಎಲ್ಲವನ್ನೂ ತೆಪ್ಪದಲ್ಲಿಟ್ಟು ತೇಲಿ ಬಿಡುತ್ತಾರೆ. ನದಿಯ ದಡದಲ್ಲಿ ಕುರಿ ಕಾಯುತ್ತಿದ್ದ ಭೀಮರಾಯ ಎಂಬುವವನು ಆ ಐದು ಕೂಸುಗಳನ್ನು ತೆಗೆದುಕೊಂಡು ತನ್ನ ಪತ್ನಿ ಶಾಂಭವಿಗೆ ನೀಡುತ್ತಾನೆ. ಅವಳು ಆ ಮಕ್ಕಳಿಗೆ ಮಾಯಮ್ಮ, ಮಹಾಕಾಳಮ್ಮ, ಎಕ್ಕಮ್ಮ, ಲಕ್ಕವ್ವ, ಲಕ್ಷ್ಮೀ ಎಂದು ನಾಮಕರಣ ಮಾಡುತ್ತಾಳೆ. ಅವರು ದೊಡ್ಡವರಾಗಿ ಕುರಿ ಕಾಯುತ್ತಿರುವಾಗ ಕೂಸು ಅಳುವ ಧ್ವನಿ ಕೇಳಿ ಅಲ್ಲಿಗೆ ಬರುತ್ತಾರೆ. ತಮಗಾಗಿ ಕೂಸು ಬೇಕೆಂದು ಶಿವನಲ್ಲಿ ಬೇಡಿಕೊಳ್ಳುತ್ತಾರೆ. ಶಿವನು ಬೀರಪ್ಪನನ್ನು ಮಾಯಮ್ಮಳ ಉಡಿಯಲ್ಲಿ ಹಾಕಿ, ಅದಕ್ಕೆ ಸಿದ್ಧಬೀರನೆಂದು ಹೆಸರಿಸಿ ಕೈಲಾಸಕ್ಕೆ ಮರಳುತ್ತಾನೆ.

ಸಿದ್ಧಬೀರನಿಗೆ ಎಂಟು ವರ್ಷ ತುಂಬುತ್ತಿದ್ದಂತೆ ತಾನು ಎಂಜಲ ಹಾಲು ಕುಡಿಯುವುದಿಲ್ಲ ಎಂದು ಹಠ ಹಿಡಿಯುತ್ತಾನೆ. ಈ ಮಧ್ಯ ಪಾರ್ವತಿಗೆ ಸುರನಾರಿಯೊಬ್ಬಳು ನಿಂದಿಸುತ್ತಾಳೆ. ಆಗ ಪಾರ್ವತಿ ಅವಳಿಗೆ ಕುರಿಯಾಗಿ ಹುಟ್ಟುವಂತೆ ಶಾಪ ನೀಡುತ್ತಾಳೆ. ಶಾಪಕ್ಕೆ ಪರಿಹಾರ ಕೇಳಿದಾಗ ಭೂಲೋಕದಲ್ಲಿರುವ ಬೀರೇಶನಿಗೆ ನಿನ್ನ ಕೊರಳ ಮೊಲೆಯ ಹಾಲು ಕುಡಿಸಿದರೆ ಶಾಪ ಪರಿಹಾರವಾಗುತ್ತದೆ ಎಂದು ಹೇಳುತ್ತಾಳೆ. ಅದರ ಪ್ರಕಾರ ಅವಳು ಬೀರೇಶನಿಗೆ ಹಾಲುಕುಡಿಸಿ ದೊಡ್ಡವನನ್ನಾಗಿ ಮಾಡುತ್ತಾಳೆ. ಒಂದು ದಿನ ರೇವಣಸಿದ್ಧೇಶ್ವರರು ಬೀರಪ್ಪನಿಗೆ ಲಿಂಗದೀಕ್ಷೆ ನೀಡಿ ಪಂಚಾಕ್ಷರಿ ಮಂತ್ರ ಬೋಧಿಸುತ್ತಾರೆ.

ವಿಭಾಗ ಗೋತ್ರದ ಮಂದಾರ ಮುನೀಶ್ವರನಿಗೆ ಶಿವನು ವರವಿತ್ತ ಕಾರಣ ಬಿಲ್ಲಾಸುರನೆಂಬ ಪುತ್ರ ಜನಿಸುತ್ತಾನೆ. ಈತನು ತಪಸ್ಸು ಮಾಡಿ ಪಾರ್ವತಿಯನ್ನು ಒಲಿಸಿಕೊಂಡು ತನಗೆ ನರರಿಂದ ಸುರರಿಂದ ರಾಕ್ಷಸರಿಂದ ಮರಣ ಬರಬಾರದು. ಶಿವನ ಅಂಶ ಭೂಮಿಗೆ ಬಂದ ನಂತರ ಅವನಿಂದ ಮರಣ ಬರಲಿ ಎಂದು ಆಶೀರ್ವಾದ ಪಡೆಯುತ್ತಾನೆ. ಹಾಗೆಯೇ ಎಲ್ಲ ದೇವರನ್ನು ಅವನು ಗೆಲ್ಲುತ್ತಾನೆ. ಇದರಿಂದ ಎಲ್ಲ ಪೂಜೆಗಳು ಆತನಿಗೆ ಸಲ್ಲುವಂತಾಗುತ್ತದೆ. ಇದರಿಂದ ಅವಮಾನಿತರಾದ ದೇವತೆಗಳು ಶಿವನಲ್ಲಿಗೆ ಬಂದು ದೂರು ಸಲ್ಲಿಸುತ್ತಾರೆ. ಶಿವನಿಗೆ ಕೋಪಗೊಂಡು ತನ್ನ ಮೂರನೆಯ ಉಗ್ರ ಕಣ್ಣನ್ನು ತೆರೆಯುತ್ತಾನೆ. ಇದರಿಂದ ವೀರಭದ್ರನು ಹುಟ್ಟಿ ಬರುತ್ತಾನೆ. ಸತಿ ಭದ್ರಕಾಳಿ ಕವಳೇಶ್ವರಿಯಾಗಿ ಜನಿಸುತ್ತಾಳೆ. ವೀರಭದ್ರನ್ನು ಕೊಂದು ಶಂಕರನಿಗೆ ನಮಿಸುತ್ತಾರೆ. ಶಂಕರನು ನೀನು ಭೂಲೋಕಕ್ಕೆ ಹೋಗಿ ಹಾಲುಮತದ ಬೀರಪ್ಪನಾಗಿ ಜನಿಸು. ನಿನ್ನ ಸತಿ ವಿಷ್ಣುವಿನ ಮಗಳಾಗಿ ಜನಿಸಲಿ ಎಂದು ಆಶೀರ್ವದಿಸುತ್ತಾನೆ. ವೀರಭದ್ರನು ಹಾಲುಮತದವರು ಹೇಗೆ ಹುಟ್ಟಿದರು ಎಂದು ಕೇಳುತ್ತಾನೆ. ಶಿವ ಪಾರ್ವತಿ ಭೂಲೋಕದಲ್ಲಿ ಸಂಚರಿಸುತ್ತ ಬಂದು ಜಗಲಿಯ ಮೇಲೆ ವಿಶ್ರಮಿಸುತ್ತಾರೆ.

ಅಲ್ಲಿಗೆ ಬಂದ ಜಾಂಬವ ಋಷಿಯ ಪಾದಕ್ಕೆರಗಿದಾಗ ಪಾರ್ವತಿಯ ಮೊಲೆಗಳು ಕಾಣಿಸುತ್ತವೆ. ತಕ್ಷಣ ಮೊಲೆಯಿಂದ ಹಾಲು ತೊಟ್ಟಿಕ್ಕತೊಡಗುತ್ತದೆ. ಆ ಹಾಲನ್ನು ವ್ಯರ್ಥ ಮಾಡಬಾರದೆಂದು ಬಲ ಮೊಲೆಯ ಹಾಲನ್ನು ಮಣ್ಣಿನಲ್ಲಿ ಬೆರೆಸಿ ಮುದ್ದೆ ಮಾಡಿ ಗಂಡುಗೊಂಬೆಯನ್ನು ಎಡಮೊಲೆಯ ಹಾಲಿನಿಂದ ಹೆಣ್ಣು ಗೊಂಬೆಯನ್ನು ಮಾಡಿ ಅವುಗಳನ್ನು ಶಿವನ ಮುಂದೆ ತಂದು ಜೀವ ತುಂಬಲು ಹೇಳುತ್ತಾಳೆ. ಆ ಗೊಂಬೆಗಳಿಗೆ ಮುದ್ದಗೊಂಡ ಮುದ್ದವ್ವ ಎಂದು ನಾಮಕರಣ ಮಾಡುತ್ತಾರೆ. ಪಾರ್ವತಿಯ ಮೊಲೆ ಹಾಲಿನಿಂದ ಹುಟ್ಟಿಬಂದ ಇವರನ್ನು ಹಾಲುಮತದವರು ಎಂದು ಕರೆಯುತ್ತಾರೆಂದು ಹೇಳಿದನು. ಬ್ರಹ್ಮನ ಸತಿ ಸರಸ್ವತಿ ಮಕ್ಕಳಿಗಾಗಿ ತಪಸ್ಸು ಮಾಡಿ ಬೀರಪ್ಪನನ್ನು ಪಡೆದಳು."" ಇನ್ನೊಂದು ಕಥೆಯಲ್ಲಿ, ಮೇಷ ಮಂಡಲನೆಂಬ ತ್ರಿಪುರಾಂಗವೆಂಬ ವಿಶಾಲವಾದ ರಾಜ್ಯವಿತ್ತು. ಆದರ ರಾಜಧಾನಿ ಚಂದ್ರಗಿರಿ, ಏಳುಸುತ್ತಿನ ಕೋಟೆಯ ಮಧ್ಯೆ ಅರಮನೆಯಿತ್ತು. ಆ ರಾಜ್ಯಕ್ಕೆ ಶಿವೇಶ್ವರನೆಂಬ ರಾಜನಿದ್ದನು. ಆ ರಾಜ್ಯದಲ್ಲಿ ತಿರಪಂಗಿ ಎಂಬ ನಾಡು ಇತ್ತು. ಆ ನಾಡಿಗೆ ತ್ರಿಪುರೇಶ್ವರನೆಂಬ ಅರಸನಿದ್ದನು. ಅವನಿಗೆ ತ್ರಿಪುರಾದೇವಿ ಎಂಬ ಸತಿಯಿದ್ದಳು. ತ್ರಿಪುರೇಶ್ವರನಿಗೆ ಏಳು ಜನ ಹೆಣ್ಣುಮಕ್ಕಳು ಮಾತ್ರ ಇದ್ದರು. ಅವರಲ್ಲಿ ಆರು ಜನ ತೀರಿ ಹೋಗಿದ್ದರು. ಕೊನೆಯವಳಾದ ಕಮಲಾದೇವಿ ಮಾತ್ರ ಬದುಕುಳಿದಿದ್ದಳು. ಅವಳನ್ನು ಮೇಷಮಂಡಲದ ಶಿವೇಶ್ವರನಿಗೆ ಕೊಟ್ಟು ಮದುವೆ ಮಾಡಿಕೊಡಲಾಗಿತ್ತು. ಈ ಶಿವೇಶ್ವರ ಮತ್ತು ಕಮಲಾದೇವಿ ದಂಪತಿಗಳಿಗೆ ಹುಟ್ಟಿದವನೇ ಭರಮಭೂಪಾಲ.

ನಗರಿಪಟ್ಟಣಕ್ಕೆ ನಾರಾಯಣಗೌಡನೆಂಬ ಗೌಡನಿದ್ದನು. ಈತನಿಗೆ ಲಕ್ಷ್ಮಿಯೆಂಬ ಮಡದಿಯಿದ್ದಳು. ಇವಳು ಅಹಂಕಾರಿಯಾಗಿದ್ದಳು. ನಾರಾಯಣಗೌಡನಿಗೆ ಸುರವತಿಯೆಂಬ ತಂಗಿಯಿದ್ದಳು. ಅವಳು ದಾನ ಧರ್ಮಗಳಿಗೆ ಹೆಸರಾಗಿದ್ದಳು. ಅವಳು ಕರುಣಾಮಯಿಯೂ ಆಗಿದ್ದಳು. ವಯಸ್ಸಿಗೆ ಬರುತ್ತಿದ್ದಂತೆ ಯಾವನಾದ ರೊಬ್ಬ ಸಾಮಾನ್ಯನೊಂದಿಗೆ ಮದುವೆ ಮಾಡಿ ಸಾಗಹಾಕಬೇಕೆಂದು ಅತ್ತಿಗೆ ಲಕ್ಷ್ಮಿಯ ಯೋಚಿಸುತ್ತಿರುವಾಗ ಸುರಾವತಿಯು ಭರಮಭೂಪಾಲನನ್ನು ಇಷ್ಟಪಟ್ಟು ವಿವಾಹವಾದಳು. ಇವಳ ವಿವಾಹದಿಂದ ಲಕ್ಷ್ಮಿಗೆ ಆನಂದವೇನೂ ಆಗಲಿಲ್ಲ. ಅದೇ ಸಮಯದಲ್ಲಿ ಸುರಾವತಿಯು ಲಕ್ಷ್ಮಿಗೆ ನಿನಗೆ ಹುಟ್ಟುವ ಹೆಣ್ಣನ್ನು ಓಡಿಸಿ ಕೊಂಡು ಹೋಗುವ ಪುತ್ರನನ್ನು ಹಡೆಯುತ್ತೇನೆಂದು ಅಣಕದ ಮಾತುಗಳನ್ನು ಆಡಿದಳು. ನಾದಿನಿಯಿಂದ ಅವಮಾನಿತಳಾಗಬಾರದೆಂದು ಸರಸ್ವತಿಗೆ ಮಕ್ಕಳೇ ಆಗದಂತೆ ಲಕ್ಷ್ಮಿಯು ಭರಮಭೂಪಾಲನಿಗೆ ತಿಳಿಯದಂತೆ ಆತನ ಊಟದಲ್ಲಿ ಪುರುಷತ್ವ ಹರಣವಾಗುವ ಗಿಡಮೂಲಿಕೆಗಳ ರಸವನ್ನು ಹಾಕಿದಳು. ಅದರ ಪರಿಣಾಮದಿಂದ ಸುರಾವತಿಗೆ ಮಕ್ಕಳಾಗಲಿಲ್ಲ. ಆದರಂತೆ ಲಕ್ಷ್ಮಿಗೂ ಮಕ್ಕಳಾಗಲಿಲ್ಲ.

ಭರಮಭೂಪಾಲ ಮಕ್ಕಳ ಸಲುವಾಗಿ ಕಾಶಿಗೆ ಬಂದು ಶಿವನ ಪೂಜೆ ಮಾಡಿಕೊಂಡಿದ್ದನು. ನಾರಾಯಣ ಗೌಡನೂ ಮಕ್ಕಳನ್ನು ಪಡೆಯಲು ಶಿವನ ಪೂಜೆ ಮಾಡಲು ಕಾಶಿಗೆ ಬಂದನು. ಅವನು ಬರುತ್ತಿದಂತೆ ಭರಮ ಭೂಪಾಲನು ಶಿವನ ಪೂಜೆ ಮಾಡುತ್ತಿರುವುದನ್ನು ಕಂಡು ನಾರಾಯಣಗೌಡ ಏನಿದು ಮಕ್ಕಳಿಲ್ಲದವರು ಶಿವನ ಪೂಜೆ ಮಾಡುವುದು ಪಾಪ. "ನಿನ್ನಿಂದ ಶಿವಲಿಂಗ ಭ್ರಷ್ಟವಾಯಿತು" ಎಂಬ ಮಾತನ್ನು ಕೇಳುತ್ತಿದ್ದಂತೆ ಭರಮಭೂಪಾಲನ ಮನನೊಂದು ಪೂಜೆ ಬಿಟ್ಟನು. ಅಷ್ಟರಲ್ಲಿ ಸುರಾವತಿಯ ಹತ್ತಿರಕ್ಕೆ ಬಂದ ಲಕ್ಷ್ಮಿಯು

ಬಂಜೆಯೆಂದು ಹಿಯ್ಯಾಳಿಸಿ ಹೋದ ಸುದ್ದಿ ಕೇಳಿ ಭರಮಭೂಪಾಲನಿಗೆ ಇನ್ನೂ ದುಃಖವಾಯಿತು. ಅಷ್ಟರಲ್ಲಿ ಅವರ ಮನೆಗೆ ಅಜಪೇಂದ್ರಗುರು ಬಂದರು. ಅವರು ಮಕ್ಕಳಾಗುವುದಕ್ಕೆ ವ್ರತಾಚರಣೆ ಮಾಡುವಂತೆ ಸಲಹೆಯಿತ್ತರು. ಗುರುಗಳು ಹೇಳಿದಂತೆ ದಂಪತಿಗಳು ವ್ರತ ಆಚರಿಸಲು ಆರಂಭಿಸಿದರು.

ಮೇಷಮಂಡಲದ ಕುರುಬೇರಿ ಎಂಬಲ್ಲಿ ಚಾಮರಾಯ ದಿಬ್ಬರಾಯ ಎಂಬ ಕುರುಬ ಮುಂದಾಳು ಸಾವಿರಾರು ಕುರಿಗಳನ್ನು ಸಾಕಿಕೊಂಡಿದ್ದನು. ಈತನಿಗೆ ಶಾಂಭವಿ ಎಂಬ ಮಡದಿಯಿದ್ದಳು. ಚಾಮರಾಯನು ಕುರಿಗಳಿಗಾಗಿ ಐದು ಪ್ರತ್ಯೇಕ ಹಟ್ಟಿಗಳನ್ನು ಕಟ್ಟಿಸಿದ್ದನು. ಚಂದ್ರಗಿರಿಯ ಅರಮನೆಗೆ ಈತನೇ ಹಾಲು ಪೂರೈಸುತ್ತಿದ್ದನು. ಈ ದಂಪತಿಗಳಿಗೆ ಮಾಯಮ್ಮ, ಮಂಕಮ್ಮ, ಮಾಂಕಾಳಿ, ಅಕ್ಕಮ್ಮ, ಲಕ್ಷ್ಮಮ್ಮ ಎಂಬ ಹೆಣ್ಣುಮಕ್ಕಳಿದ್ದರು. ಮಾಯಮ್ಮ ಮತ್ತು ಮಂಕಮ್ಮರ ಗಂಡಂದಿರು ಚಂದ್ರಗಿರಿಯ ಅರಮನೆಯಲ್ಲಿ ಸೇವಕರಾಗಿದ್ದರು. ಕೆಲವು ಪುರಾಣಗಳ ಪ್ರಕಾರ ಬ್ರಹ್ಮ ಆದಿಶಕ್ತಿಯನ್ನು ಮದುವೆಯಾಗಿ ಶಾಂತಕಲಾ, ಶಾಂತತೀತಕಲಾ, ವಿದ್ಯಾಕಲಾ, ವಿವೃತ್ತಿಕಲಾ, ಪ್ರತಿಷ್ಠಾಕಲಾ ಎಂಬ ಪಂಚಕನ್ಯೆಯರನ್ನು ಹೆತ್ತಳೆಂದು ಹೇಳುತ್ತವೆ. ಆ ಪಂಚಕನ್ಯೆಯರೇ ಇವರು ಎಂದು ಭಾವಿಸಲಾಗಿದೆ. ಈ ಪಂಚಕನ್ಯೆಯರು ಕಾಲಾಂತರದಲ್ಲಿ ಈಶ್ವರನಿಗೆ ಉಮಾ ಆಗಿ, ರುದ್ರನಿಗೆ ರುದ್ರಾಣಿಯಾಗಿ, ಬ್ರಹ್ಮನಿಗೆ ಸರಸ್ವತಿಯಾಗಿ, ಮಹೇಶ್ವರನಿಗೆ ಇಚ್ಛಾಶಕ್ತಿಯಾಗಿ, ವಿಷ್ಣುವಿಗೆ ಲಕ್ಷ್ಮಿಯಾಗಿ ಹುಟ್ಟಿದರೆಂದು ಹೇಳಲಾಗಿದೆ.

ಮಾಯಖೇಟದಲ್ಲಿ ಕೋಣಾಸುರ ಹಾಗೂ ಮುಂಡಾಸುರರೆಂಬ ರಾಕ್ಷಸರಿದ್ದರು. ಅವರು ಮೇಷಮಂಡಲದ ಕುರುಬ ಸಮುದಾಯಕ್ಕೆ ಕಂಟಕರಾಗಿದ್ದರು. ಅವರ ಉಪದ್ರವಕ್ಕೆ ಅಲ್ಲಿಯ ಪ್ರಜೆಗಳು ಶಿವನನ್ನು ಕುರಿತು ತಪಸ್ಸು ಮಾಡಲು ನಿರ್ಧರಿಸಿದರು. ಅದರಂತೆ ಕುರುಬ ಕೋಪಣ ಎಂಬಲ್ಲಿ ತಪಸ್ಸು ಆರಂಭಿಸಿದರು. ಆಗ ಶಿವನು ಬಂದು ದರ್ಶನ ನೀಡಿದನು. ಸೂಕ್ತ ಸಮಯದಲ್ಲಿ ನನ್ನ ಅಂಶದ ವ್ಯಕ್ತಿ ಹುಟ್ಟಿಬಂದು ಈ ರಾಕ್ಷಸರನ್ನು ಸಂಹರಿಸುತ್ತಾನೆ, ನೀವು ನಿಶ್ಚಿತೆಯಿಂದಿರಿ ಎಂದು ಹೇಳಿ ಕೈಲಾಸಕ್ಕೆ ಮರಳಿದನು. ಪಾರ್ವತಿಯೊಂದಿಗೆ ಸರಸದಲ್ಲಿ ತೊಡಗಿ ಶಿವಾಂಶವನ್ನು ಪಡೆದನು. ಆ ಶಿವಾಂಶನಿಗೆ ಭರಮಭೂಪಾಲನ ಪತ್ನಿ ಸೂರಾವತಿಯ ಗರ್ಭದಲ್ಲಿ ಶಿಶುವಾಗಿ ಹುಟ್ಟಿ ಚಾಮರಾಯನ ಸಾಕು ಮಗನಾಗು ಎಂದು ಆಶೀರ್ವದಿಸಿದನು.

ಇತ್ತ ಸೂರಾವತಿಯು ಗರ್ಭವತಿಯಾದಳು. ಈ ಸುದ್ದಿ ತಿಳಿದ ಲಕ್ಷ್ಮಿಯು ಅವಳ ಗರ್ಭ ಬೀಳಿಸುವ ಪ್ರಯತ್ನ ಮಾಡಿದಳು. ಸೂರಾವತಿಗೆ ಬಯಕೆ ಬುತ್ತಿಯಲ್ಲಿ ವಿಷ ಹಾಕಿ ತಿನ್ನಿಸಿದಳು. ಕೊನೆಗೆ ಗರ್ಭಪಾತ ಔಷಧವನ್ನೂ ನೀಡಿದಳು. ಅವಳ ಅನೇಕ ಪ್ರಯತ್ನಗಳು ವಿಫಲವಾದವು. ಆದರೂ ಸೂರಾವತಿಯು ಚಂದ್ರಗಿರಿಯಲ್ಲಿ ಗಂಡುಮಗುವಿಗೆ ಜನ್ಮ ನೀಡಿದಳು. ಲಕ್ಷ್ಮಿಯು ಮೂರು ಜನ ಬುಡಬುಡಕೆಯವರನ್ನು ಕಳುಹಿಸಿದಳು. ಅವರು ನಗರದಲ್ಲಿ ಅಡ್ಡಾಡಿ ಚಂದನಗಿರಿಯ ರಾಜನಿಗೆ ಹುಟ್ಟಿದ ಮಗು ಕೆಟ್ಟ ನಕ್ಷತ್ರದಲ್ಲಿ ಜನಿಸಿರುವುದರಿಂದ ನಾಡಿಗೆ ಕೇಡಾಗುವುದು ಎಂದು ಸುದ್ದಿ ಹಬ್ಬಿಸಿದರು. ರಾಜರಿಗೂ ಈ ಸುದ್ದಿ ತಿಳಿಯಿತು. ಅವರು ಮಗುವನ್ನು ಒಂದು ತೊಟ್ಟಿಲಲ್ಲಿಟ್ಟು ಅರಣ್ಯದಲ್ಲಿ ಕತ್ತು ಹಿಸುಕಿ ಸಾಯಿಸಿ ಬರಲು ಚಾಂಡಾಲರನ್ನು ಕಳುಹಿಸಿಕೊಟ್ಟನು.

ಅವರು ಒಂದು ಕೆರೆಯ ಹತ್ತಿರ ಇರುವ ಮರದ ಕೆಳಗೆ ತೊಟ್ಟಿಲನ್ನು ಇಳಿಸಿ ನೀರು ಕುಡಿಯಲು ಕೆರೆಗೆ ಹೋದರು. ತೇಜಸ್ವಿಯಾದ ಕೂಸನ್ನು ಕೊಲ್ಲಲು ಇವರಿಗೆ ಮನಸ್ಸು ಬರಲಿಲ್ಲ. ಅದೇ ಚಿಂತೆಯಲ್ಲಿ ಮನಬಂದಂತೆ ಮದ್ಯ ಸೇವಿಸಿದರು. ಅಮಲಿನಲ್ಲಿ ಮಗುವನ್ನು ಕೊಲ್ಲುವ ವಿಚಾರವನ್ನೇ ಮರೆತುಬಿಟ್ಟರು. ತಂದಿದ್ದ ತೊಟ್ಟಿಲನ್ನು ಒಂದು ಮರದ ಕೆಳಗೆ ಬಿಟ್ಟು ಮಲಗಿದರು. ಅದೇ ಸಮಯಕ್ಕೆ ಚಾಮರಾಯನ ಐದು ಜನ ಹೆಣ್ಣುಮಕ್ಕಳು ಕುರಿಕಾಯುತ್ತ ಅಲ್ಲಿಗೆ ಬಂದರು. ತೊಟ್ಟಿಲಲ್ಲಿದ್ದ ಕೂಸನ್ನು ಕಂಡು ಹರ್ಷಿತರಾದರು. ಕೂಸನ್ನು ತಂದ ಯಾರಾದರೂ ಕೆರೆಯಲ್ಲಿರಬಹುದೆಂದು ಹುಡುಕಿದರು. ಹಿರಿಯವಳಾದ ಮಾಯಮ್ಮ ಕೂಸನ್ನು ಎತ್ತಿಕೊಂಡಳು. ತಮಗೆ ಒಬ್ಬ ತಮ್ಮನು ಇಲ್ಲವಲ್ಲ, ಈತನನ್ನೇ ತಮ್ಮನಂತೆ ಸಾಕಲು ನಿರ್ಧರಿಸಿ ಕೂಸನ್ನು ಮನೆಗೆ ತಂದು ತಾಯಿಯ ಕೈಗಿತ್ತರು. ಇತ್ತ ಚಾಂಡಾಲರು ಎಚ್ಚೆತ್ತಾಗ ಅಲ್ಲಿ ತೊಟ್ಟಿಲು ಇರಲಿಲ್ಲ. ಗಾಬರಿಗೊಂಡು ಒಂದು ಮೊಲವನ್ನು ಕೊಂದು ಅದರ ರಕ್ತ ಕೈಗೆ ಲೇಪಿಸಿಕೊಂಡು ಅರಮನೆಗೆ ಬಂದು ಕೂಸನ್ನು ಕೊಂದುದಾಗಿ ಸುಳ್ಳು ಹೇಳಿದರು.

ಶಾಂಭವಿ ಮತ್ತು ಚಾಮರಾಯ ಕರೆತಂದ ಮಗುವಿಗೆ ಬೀರಪ್ಪನೆಂದು ಹೆಸರಿಟ್ಟರು. ಮಾಯಮ್ಮ ಹಾಗೂ ಅಕ್ಕಮ್ಮರೆಂದರೆ ಬೀರಪ್ಪನಿಗೆ ಬಲು ಪ್ರೀತಿಯಿತ್ತು. ಬೀರಪ್ಪ ದೊಡ್ಡವನಾಗಿ ಹುಲಿಹೊಡೆಯಲು ಪ್ರಸಿದ್ಧನಾಗುತ್ತಾನೆ. ಅದನ್ನು ಕೇಳಿದ ಭರಮಭೂಪಾಲನು ಚಾಮರಾಯನ ಕುರಿಬೇಲಿಗೆ ಬಂದು ಹುಲಿ ಹೊಡೆದ ಮಗುವನ್ನು ನೋಡುತ್ತಾನೆ. ಆದರೆ ಚಾಮರಾಯನಿಗೆ ಗಂಡುಮಕ್ಕಳಿಲ್ಲದ ಸಂಗತಿ ತಿಳಿದಿತ್ತು. ಅದಕ್ಕೆ ಬೀರಪ್ಪನ ಬಗ್ಗೆ ಕೇಳಿದಾಗ ಚಾಮರಾಯ ನಡೆದ ವೃತ್ತಾಂತವನ್ನು ವಿವರಿಸುತ್ತಾನೆ. ಆಗ ಭರಮ ಭೂಪಾಲನು ಸುರಾವತಿಯನ್ನು ಕರೆಯಿಸಿ ಬೀರಪ್ಪನನ್ನು ನೋಡಲಾಗಿ ಅದು ತಮ್ಮದೇ ಮಗುವೆಂದು ತಿಳಿಯುತ್ತದೆ. ಅವನನ್ನು ಅರಮನೆಗೆ ಕರೆತಂದು ಹಿಂದೆ ಮಗುವನ್ನು ಕತ್ತು ಹಿಚುಕಿ ಕೊಲ್ಲಲು ಹೇಳಿದ ಮಗುವನ್ನು ಏನು ಮಾಡಿದಿರಿ ಎಂದು ಕೇಳಲಾಗಿ ಅವರು ಸತ್ಯವನ್ನು ಹೇಳಿದರು. ಈ ಬೀರಪ್ಪ ತಮ್ಮ ಮಗನೇ ಎಂಬುದನ್ನು ಖಚಿತಪಡಿಸಿಕೊಂಡು ಹರುಷಗೊಂಡರು. ಬೀರಪ್ಪನನ್ನು ಸಾಕಿದ್ದಕ್ಕಾಗಿ ಚಾಮರಾಯ ಮತ್ತು ಶಾಂಭವಿಯರಿಗೆ ಅರಮನೆಯಲ್ಲಿಯೇ ಉಳಿಯುವ ವ್ಯವಸ್ಥೆ ಮಾಡಿದರು.

ಬೀರಪ್ಪನೊಂದಿಗೆ ನಾರಾಯಣನ ಮಗಳು ಕನ್ಯಾಮಣಿಯೊಂದಿಗೆ ವಿವಾಹ ಮಾಡಿದರು. ಕೋಣಾಸುರ ಹಾಗೂ ಮುಂಡಾಸುರರ ವಿರುದ್ಧ ಅಲ್ಲಿಯ ಜನರು ಮತ್ತೆ ದೂರು ತಂದರು. ಭರಮಭೂಪಾಲನು ಆ ಕೆಲಸವನ್ನು ಬೀರಪ್ಪನಿಗೆ ಒಪ್ಪಿಸಿದನು. ಬೀರಪ್ಪ ಆ ಇಬ್ಬರು ರಾಕ್ಷಸರನ್ನು ಕೊಂದನು. ಕೋಣಾಸುರನನ್ನು ಕೊಂದಸ್ಥಳ ಕೋಣ್ಣೂರ ಮುಂಡಾಸುರನನ್ನು ಕೊಂದಸ್ಥಳ ಮುಂಡಗನೂರು ಎಂದು ಪ್ರಸಿದ್ಧವಾಯಿತು.

ಬೀರಪ್ಪ ಕನ್ನಿಕಾಳ ದಾಂಪತ್ಯ ಸುಖವಾಗಿ ನಡೆಯಿತು. ಮುಂದೊಂದು ದಿನ ಕನ್ನಿಕೆಯು ಪುತ್ರರತ್ನಕ್ಕೆ ಜನ್ಮ ನೀಡಿದಳು. ಆ ಮಗುವಿಗೆ ಬಲ್ಲಾಳನೆಂಬ ನಾಮಕರಣ ಮಾಡಿದರು. ಅವನು ವಯಸ್ಸಿಗೆ ಬರುತ್ತಿದ್ದಂತೆ ಬೀರಪ್ಪನಿಗೆ ಜೀವನದಲ್ಲಿ ವೈರಾಗ್ಯ ಮೂಡತೊಡಗಿತು. ಒಂದು ದಿನ ದಡಗ ಮತ್ತು ಹಬ್ಬುಗೆ ಎಂಬ ವಿಶ್ವಾಸಿಕ ರಾಜಸೇವಕರೊಂದಿಗೆ ರಾಜ್ಯವನ್ನು ಮಗನಿಗೆ ವಹಿಸಿಕೊಟ್ಟು ಹೊರಟು ಗೌಡಗಿರಿಯ ಹುತ್ತಿನಗದ್ದಗೆ

ಬಂದನು. ಅಲ್ಲಿ ಒಂದು ಗುಹೆಯಲ್ಲಿ ತಪಸ್ಸಿಗೆ ಕುಳಿತನು. ಕೆಲವು ದಿನಗಳಲ್ಲಿ ಅವರ ಪತ್ನಿ ಸಂಸಾರ ಪರಿತ್ಯಾಗಿಯಾಗಿ ಬೀರೇಶ್ವರ ಇದ್ದಲ್ಲಿಗೆ ಬಂದು ತನಗೂ ದೀಕ್ಷೆ ಕೊಡಬೇಕೆಂದು ಕೇಳಿಕೊಳ್ಳುತ್ತಾಳೆ. ಬೀರೇಶ್ವರ ಅವಳಿಗೆ ದೀಕ್ಷೆ ಕೊಡುತ್ತಾನೆ. ಅವಳನ್ನು ಗೌಡಗಿರಿಯಲ್ಲಿಯೇ ಬಿಟ್ಟು ತಾವು ಸಿಡಿಯಾಣಕ್ಕೆ ಬರುತ್ತಾನೆ. ಅಲ್ಲಿ ಕದಳಿಯ ವನವಿತ್ತು. ಬೀರೇಶ್ವರರು ಅಲ್ಲಿ ಶಾಶ್ವತವಾಗಿ ಉಳಿದುಕೊಳ್ಳಲು ನಿರ್ಧರಿಸಿದರು. ಅಲ್ಲೊಂದು ಮಠ ಕಟ್ಟಿದರು. ಹುಲಿಜಂತಿ ಮಾಳಿಂಗರಾಯನು ಇವರ ಶಿಷ್ಯನಾದನು. ಆ ನಂತರ ದಡಿಗ ಮತ್ತು ಹಬ್ಬಗ ಚಂದ್ರಗಿರಿಗೆ ಮರಳಿ ರಾಜ್ಯಬಾರ ನೋಡಿಕೊಂಡರು.

ಈ ಮೇಲಿನ ಎಲ್ಲ ಚರಿತ್ರೆಗಳನ್ನು ಗಮನಿಸಿದರೆ ಬೀರಪ್ಪನ ಚರಿತ್ರೆಯು ಭಿನ್ನ ಪ್ರದೇಶಗಳಲ್ಲಿ ಭಿನ್ನ ರೂಪಗಳನ್ನು ಪಡೆದಿದೆ. ಒಬ್ಬೊಬ್ಬರದು ಒಂದೊಂದು ರೀತಿಯಲ್ಲಿ ಕಥೆ. ಈ ಕಥೆಯು ಅನೇಕ ಕವಲುಗಳಾಗಿ ಲಂಗುಲಗಾಮಿಲ್ಲದೆ ಮುಂದೆ ಸಾಗುತ್ತದೆ. ಇಲ್ಲಿಯ ಯಾವುದೇ ಕಥೆಗೆ ಯಾವುದೇ ಸೀಮೆಯಿಲ್ಲ. ಅವುಗಳಲ್ಲಿ ಪ್ರಮುಖವಾಗಿ ಬೀರಪ್ಪನ ತಂದೆ ತಾಯಿ, ಪತ್ನಿ, ಸೋದರಮಾವ ಇವರನ್ನು ಹೊರತುಪಡಿಸಿ ಉಳಿದ ಪಾತ್ರಗಳು ಮತ್ತು ಅದರ ನಾಮಗಳು ಸ್ಥಳೀಯರ ಪ್ರಭಾವಕ್ಕೆ ಒಳಗಾಗಿವೆ. ಎಲ್ಲರೂ ತಂತಮ್ಮ ವಿಚಾರಕ್ಕೆ ಬಂದಂತೆ ಬೀರಪ್ಪನ ಚರಿತ್ರೆಯನ್ನು ಎಳೆದಿದ್ದಾರೆ. ಕೆಲವರಂತೂ ಅವನ ಚರಿತ್ರೆಗೆ ಆಧುನಿಕ ಕಲ್ಪನೆ ನೀಡಿದ್ದಾರೆ. ಕೆಲವರು ಬೀರದೇವರಿಗೆ ೧೨ನೇ ಶತಮಾನದ ರೇವಣಸಿದ್ಧರಿಂದ ದೀಕ್ಷೆಯನ್ನು ಕೊಡಿಸಿದ್ದಾರೆ. ಇನ್ನು ಕೆಲವರು ಮಠ ಸ್ಥಾಪಿಸಿ ಬೀರಪ್ಪನಿಂದ ಬೋಧನೆಯನ್ನು ಕೊಡಿಸಿದ್ದಾರೆ. ಇನ್ನು ಕೆಲವರು ಅವನಿಗೆ ಪುತ್ರ, ಸೊಸೆ ಇರುವುದನ್ನು ಹೇಳಿದ್ದಾರೆ.

ಅನೇಕ ಕಥೆಗಳಲ್ಲಿ ಕೆಲವೊಂದು ಸಾಮ್ಯತೆಗಳಿವೆ. ತಂದೆ ಭರಮ, ತಾಯಿ ಸುರಾವತಿ, ಸೊದರಮಾವ ಕಾಳಿನಾರಾಯಣ ಅವನ ಪತ್ನಿ ಲಕ್ಷ್ಮಿ, ಅವರಿಬ್ಬರ ಪುತ್ರಿ ಕನ್ನಿಕಾ, ಬ್ರಹ್ಮ, ಬೀರಪ್ಪನ ಮೂಲಸ್ಥಾನ ಚಂದ್ರಗಿರಿ ಪಟ್ಟಣ, ಜಂಬೂದ್ವೀಪ, ಕಮಲ, ಏಳು ಸಹೋದರಿಯರು, ಸೋದರಮಾವನ ಮಗಳನ್ನು ವಿವಾಹವಾಗುವ ಮುಂತಾದ ಪರಂಪರೆಗಳು ಎಲ್ಲ ಚರಿತ್ರೆಗಳಲ್ಲಿ ಕಂಡುಬರುವ ಪ್ರಮುಖ ಸಂಗತಿ.

ಬೀರಪ್ಪನ ಪ್ರಾಚೀನತೆ ಅರಿಯದ ಕೆಲವರು ಅವನ ವ್ಯಾಪ್ತಿಯನ್ನು ಸಂಕುಚಿತಗೊಳಿಸಿದ್ದಾರೆ. ಅವನ ಇರುವಿಕೆಯನ್ನು ಸ್ಥಳೀಯ ನೆಲೆಯಲ್ಲಿ ಕಲ್ಪಿಸಿಕೊಂಡಿದ್ದಾರೆ. ೧೨ನೆಯ ಶತಮಾನದಲ್ಲಿ ಬಾಳಿ ಬದುಕಿದ ರೇವಣಸಿದ್ಧರಿಂದ ಬೀರಪ್ಪನಿಗೆ ದೀಕ್ಷೆ ಕೊಡಿಸುವ, ಪದ್ಮಗೊಂಡನಿಗೆ ವೀರಶೈವ ಲಿಂಗಾಯತ ಕಲ್ಪಿತ ಇಷ್ಟಲಿಂಗ ತೊಡಿಸುವ ಹುಚ್ಚು ಪ್ರಯತ್ನಗಳು ಇಲ್ಲಿ ನಡೆದಿವೆ. ರೇವಣಸಿದ್ಧರ ಕುಲದೇವತೆ ಬೀರಪ್ಪನಾಗಿರುವಾಗ ಬೀರಪ್ಪನಿಗೆ ದೀಕ್ಷೆಯ ಕಲ್ಪನಾಜಾಲದಲ್ಲಿ ಬಂಧಿಸುವುದು ಮೂರ್ಖತನದ ಪರಮಾವಧಿ. ಬೀರಪ್ಪನ ಹಿನ್ನೆಲೆಯನ್ನು ಬ್ರಹ್ಮ ಚರಿತ್ರೆಯೊಂದಿಗೆ ಮಿಳೈಸಿ ನೋಡುವುದೇ ಸರಿಯಾದ ಮಾರ್ಗ ಅನಿಸುತ್ತದೆ.

ಕರ್ನಾಟಕದಲ್ಲಿ ಕೋಣನೂರು ಬೀರಪ್ಪನ ಮಂದಿರಕ್ಕೆ ಪ್ರಾಚೀನತೆಯಿರುವುದು ಶಿಲಾಶಾಸನಗಳಿಂದ ಕಂಡುಬಂದಿದೆ. ಇದು ಕಲ್ಯಾಣ ಚಾಲುಕ್ಯರ ಉಪರಾಜಧಾನಿಯಾಗಿತ್ತು. ಈ ಕಾರಣದಿಂದ ಇಲ್ಲಿಯ ಬೀರಪ್ಪನ

ಮಂದಿರದ ಪ್ರಸಿದ್ಧಿ ಬಹುಬೇಗನೆ ಕರ್ನಾಟಕದ ಇತರೇ ಭಾಗಕ್ಕೆ ಪಸರಿಸಿತೆಂದು ಹೇಳಬಹುದು. ಈ ಕಾರಣದಿಂದ ಉತ್ತರ ಕರ್ನಾಟಕದ ಡೊಳ್ಳಿನ ಪದಗಳ ಮುಕ್ತಾಯದ ಸಾಲುಗಳಲ್ಲಿ "ಗಿರಿಗೊಂದ ಗೂಳಿಕ್ವಾಣಗನೂರು ದೇವ, ಗುಳ್ಳೆ ಮಾಯವ್ವನ ತಮ್ಮನೊ ಹಾಲುಮತವೂ ಹರುವ ಸಾಗರೊ" ಎಂಬ ಪಂಕ್ತಿಗಳಿವೆ. ಎಲ್ಲ ತರಹದ ಡೊಳ್ಳಿನ ಹಾಡುಗಳಲ್ಲಿ ಹಾಡುವ ಚರಿತ್ರೆ ಮಾರ್ಗ ಸಂಧಿ ಹಾಡುಗಳಲ್ಲಿ ಬೀರದೇವರ ಮಾರ್ಗ ಎಂದೇ ಹೇಳಲಾಗುತ್ತದೆ. ಇದರಿಂದ ಡೊಳ್ಳಿನ ಹಾಡುಗಳು ವಿಶೇಷವಾಗಿ ಬೀರಪ್ಪನ ಸ್ತುತಿಗಾಗಿಯೇ ಹುಟ್ಟಿ ಕೊಂಡಂತಿವೆ.

ಈ ಮೇಲಿನ ಚರಿತ್ರೆಗಳಲ್ಲಿ ಗುರು ರೇವಣಸಿದ್ಧರ ಶಿಷ್ಯ ಬೀರಪ್ಪ ಎಂಬ ಕಥೆಯನ್ನು ಗಮನಿಸಿದರೆ ಪುರಾಣ ರಚನೆಕಾರರಿಗೆ ಇತಿಹಾಸದ ತಿಳುವಳಿಕೆ ಇಲ್ಲದಿರುವುದು ಸ್ಪಷ್ಟವಾಗುತ್ತದೆ. ಇಲ್ಲವೇ ರೇವಣಸಿದ್ಧರ ಶಿಷ್ಯ ಎಂದು ಭಾವಿಸಲಾಗಿರುವ ಬೀರಪ್ಪ ಅಭಿನವ ಬೀರಪ್ಪನಾಗಿರಬೇಕು. ಮಾಳಿಂಗರಾಯ, ಕರಿಸಿದ್ದೇಶ್ವರ, ಪದ್ಮಗೊಂಡ ಮುಂತಾದವರ ಪುರಾಣಗಳಲ್ಲಿ ಈತನನ್ನು ಹುನ್ನೂರು ಬೀರಪ್ಪನೆಂತಲೂ, ಕೊಣ್ಣೂರ ಬೀರಪ್ಪ ಕರಿಸಿದ್ಧನೆಂತಲೂ ಹಾಗೂ ಸಿದ್ಧಬೀರನೆಂತಲೂ ಕರೆಯಲಾಗಿದೆ. ರೇವಣಸಿದ್ಧರ ಕಾಲಮಾನ ೧೨ನೇ ಶತಮಾನವೆಂದು (ಜನನ ೧೧೬೦ರಿಂದ ೧೧೬೫ ಸಮಾಧಿ ೧೧೬೫ರಿಂದ ೧೨೦೦) ಶಿಲಾಶಾಸನಗಳಿಂದ ಸಿದ್ಧವಾಗಿದೆ.

ಇವನು ಬಿಜ್ಜಳ ರಾಜೇಂದ್ರಚೋಳ ಬಸವಣ್ಣ, ಸಿದ್ಧರಾಮ, ಅಮೋಘಸಿದ್ಧ ಮುಂತಾದವರ ಸಮಕಾಲೀನ ನಾಗಿದ್ದಾನೆ. ಆದ್ದರಿಂದ ರೇವಣಸಿದ್ಧ ೧೨ನೆಯ ಶತಮಾನದವನು ಎಂಬುದಕ್ಕೆ ಯಾವುದೇ ವಿವಾದವಿಲ್ಲ. ಮಹಾರಾಷ್ಟ್ರದ ಖಂಡೋಬಾ ಹಾಗೂ ಬೀರಪ್ಪ ೫ನೆಯ ಶತಮಾನದಿಂದಲೂ ಆ ಪ್ರದೇಶದಲ್ಲಿ ಪೂಜೆಗೊಳ್ಳುತ್ತಿರು ವುದರಿಂದ ೪ನೆಯ ಶತಮಾನಕ್ಕಿಂತಲೂ ಹಿಂದೆ ಬೀರಪ್ಪನ ಅಸ್ತಿತ್ವ ಇದೆ ಎಂದು ಸಿದ್ಧವಾಗುತ್ತದೆ.

ಈ ಮೇಲಿನ ಕಥೆಗಳಲ್ಲಿ ಉಲ್ಲೇಖಿತ ಕಮಲವು ಸೂರ್ಯಾರಾಧನೆಯ ಸಂಕೇತ. ಮೂರು ಕೋಡುಗಳು ಸುಮೇರಿನ ಬೀರ ಡುಮುಝಿಯ ಸಂಕೇತ. ಬೈಬಿಲೋನ ಸುಮೇರಿನ ಸಂಸ್ಕೃತಿಯಲ್ಲಿ ಏಳು ಸಂಖ್ಯೆಗೆ ಮಹತ್ವವಿದೆ. ಏಳು ಸೋದರಿಯರು ಸಪ್ತಮಾತೃಕೆಗಳಾಗಿದ್ದಾರೆ. ಇವರು ಕುಮಾರಿ ಮಾತೆಯರು, ಪ್ರಜಾ ಪತ್ನಿಯರು. ಇವರಾರೆಂದರೆ ಎಲ್ಲವ್ವ, ಬನದವ್ವ, ಕರಿಯವ್ವ, ತುಳಜವ್ವ, ಜಕ್ಕವ್ವ, ಎಕ್ಕವ್ವ ಮತ್ತು ಮಾಯವ್ವ ಇವರ ಕುರಿತು ಕುರುಬರು ತಮ್ಮ ಡೊಳ್ಳಿನ ಹಾಡುಗಳಲ್ಲಿ ಪ್ರಮುಖ ಸ್ಥಾನ ಗೌರವ ಕಲ್ಪಿಸಿ ಹಾಡಿ ಹೊಗಳುತ್ತಾರೆ. ಅಗ್ನಿಶೋಧ ಆದ್ದರಿಂದ ಹಾಲು ಕಾಯಿಸಿ ಗಿಣ್ಣು ಮಾಡುವ ಕಾಲಸೂಚಕವಾಗಿದೆ. ಕಾಳಿನಾರಾಯಣ ನಾರಾಯಣ ಪಂಥವನ್ನು ಸೂಚಿಸುತ್ತದೆ. ನಾರ(=ನೀರು) + ಆಯನ (ನೆಲೆಸಿದವನು)= ಜಲವಾಸಿ ಕಮಲವೂ ಜಲವಾಸಿ ಕಮಲದಲ್ಲಿ ಹುಟ್ಟಿದವರು ಜಲವಾಸಿ ಎಂಬರ್ಥಗಳು ಇಲ್ಲಿ ಹೊರಡುತ್ತವೆ. ನಾರಾಯಣ ಜಲವಾಸಿಯಾಗಿ ನಾಗಶಯನನಾಗಿರುವುದು, ಕೃಷ್ಣನ ನಂತರ ಆ ಮೊದಲು ಜಲವಾಸಿಯಾದ ನಾರಾಯಣನು ಕ್ಷೀರ(ಹಾಲು)ವಾಸಿಯಾಗುವುದು. ಕೃಷ್ಣ ವೃಷ್ಣ(ಟಗರು) ಕುಲದವನಾಗಿದ್ದ ಕಾರಣದಿಂದ ವಿಷ್ಣು ಆಗುವುದು, ಇವೆಲ್ಲವೂ ಪಶುಪಾಲಕ ಹಾಲುಮತ ಕುರುಬರನ್ನೇ ನಿರ್ದೇಶಿಸುತ್ತವೆ. ಕಥೆಯ ಎಲ್ಲ ಸಂದರ್ಭಗಳನ್ನು ಗಮನಿಸಿದರೆ ಇವೆಲ್ಲವೂ ಕ್ರಿ.ಪೂ. ೧೦೦೦-೨೦೦೦ರ ಮಧ್ಯದ ಕಾಲವನ್ನು ಸೂಚಿಸುತ್ತವೆ.

ಕುರುಬರ ಸಾಂಸ್ಕೃತಿಕ ನಾಯಕ ಪದ್ಮಗೊಂಡನ ಕಥೆಯಲ್ಲಿ ಅಗ್ನಿ ಪಡೆಯುವ ಸಂಗತಿಯಿದೆ. ರೇವಣಸಿದ್ಧನ ತಂದೆಯ ತಂದೆ (ಅಜ್ಜ) ಎಂದು ಪ್ರಸಿದ್ಧನಾದ ಪದ್ಮಗೊಂಡನನ್ನು ಅಗ್ನಿಶೋಧನೆಯ ಕಾಲದ ವ್ಯಕ್ತಿ ಎಂಬಂತೆ ಪುರಾಣಗಳು ಬಣ್ಣಿಸಿವೆಯೇ ಹೊರತು ಪದ್ಮಗೊಂಡ ನಿಜವಾಗಿಯೂ ಅಷ್ಟು ಪ್ರಾಚೀನನಲ್ಲ. ಅಗ್ನಿಯ ಆವಿಷ್ಕಾರ ಆಫ್ರಿಕಾದ ತಾಂಜೇನೀಯಾದಲ್ಲಿ ಆಗಿರುವುದಾಗಿ ಈಗಾಗಲೇ ವಿಶ್ವಪ್ರಸಿದ್ಧ ಸಂಶೋಧಕರು ಒಪ್ಪಿಕೊಂಡಿದ್ದಾರೆ. ಜಂಬೂದ್ವೀಪ ಆಫ್ರಿಕಾ ಖಂಡದ ಒಂದು ಭೂಭಾಗ. ಭೂಸ್ಖಲನದಿಂದ ಅಲ್ಲಿಂದ ಇಂದಿನ ಸ್ಥಳಕ್ಕೆ ಬಂದು ನಿಂತಿದೆ. ಆ ಚಲನೆಯಿಂದ ಹಿಮಾಲಯ ಪರ್ವತಗಳು ಉದ್ಭವಿಸಿದವು. ಈ ಪರ್ವತಗಳು ಉತ್ತರಧ್ರುವದಿಂದ ಬೀಸುವ ಹಿಮಗಾಳಿಯನ್ನು ತಡೆದು ಅಲ್ಲಿ ಹಿಮಸಂಗ್ರಹ ಆಗಿದೆ. ಕುರುಬರ ಪುರಾಣಕಥೆಗಳಲ್ಲಿ ಮಾನವನ ವಿಕಾಸ ಕ್ರಮ ಅಡಗಿದೆ. ಆದ್ದರಿಂದ ಪೌರಾಣಿಕ ಪುರುಷನೆಂಬ ಹಣೆಪಟ್ಟಿ ಹೊತ್ತ ಬೀರಪ್ಪನ ಚರಿತ್ರೆಗೆ ಇತಿಹಾಸದ ಆಧಾರಕ್ಕೆ ನಿಲುಕದ ಕಾರಣ ಬೀರಪ್ಪ-ಬ್ರಹ್ಮರನ್ನು ಪೌರಾಣಿಕ ಪುರುಷರೆಂದು ಬಗೆಯಲಾಗಿದೆ.[೨೦]

೪. ಬೀರಪ್ಪನ ಬಾಲಲೀಲೆ

ಮಾಯವ್ವನಿಗೆ ಬೀರಪ್ಪ ದೊರೆತ ನಂತರ ಅವನ ಬಾಲಲೀಲೆಗಳು ಪ್ರಾರಂಭವಾಗುತ್ತವೆ. ಪ್ರಾರಂಭದಲ್ಲಿ ಚಂದನಗಿರಿಯಲ್ಲಿ ವಾಸವಾಗಿರುತ್ತಾರೆ. ಅಕ್ಕ ಮಾಯವ್ವಳ ಮಗ್ಗುಲಲ್ಲಿ ಮಲಗಿದ್ದ ಬೀರಪ್ಪ ಆಕೆಗೆ ನಿದ್ರೆ ಹತ್ತುವುದೇ ತಡ ಸಾವಕಾಶವಾಗಿ ಎದ್ದು ಚಿಣಿಯಾಡಲು ಹೋಗುತ್ತಾನೆ. ಊರ ಜನರೆಲ್ಲ ಒಂದೇ ಕಡೆಯಾದರೂ ಸೋಲಿಸುತ್ತಾನೆ. ಮತ್ತೆ ಅಕ್ಕನ ಮಗ್ಗುಲಿಗೆ ಬಂದು ಮಲಗುತ್ತಾನೆ. ಮಾಯವ್ವ ಎಚ್ಚರಾಗಿ ಬೀರಪ್ಪನ ಕೈಕಾಲ ತುಂಬೆಲ್ಲ ದೂಳಾಗಿರುವುದನ್ನು ಗುರುತಿಸುತ್ತಾಳೆ. ಆಗ ಅವನು ನನಗೆ ಒಳ್ಳೆಯ ಚಿಣಿದಾಂಡ ಬೇಕೆಂದು ಹಠ ಮಾಡುತ್ತಾನೆ.

ಬೀರಪ್ಪನ ಕೋರಿಕೆಯ ಮೇರೆಗೆ ಮಾಯವ್ವ ಬೆಳ್ಳಿಯ ದಾಂಡು ಮುತ್ತಿನ ಚಿಣಿ ಮಾಡಿಸಿಕೊಡುತ್ತಾಳೆ. ಊರವರೆಲ್ಲಾ ಒಂದು ಕಡೆ, ಬೀರಣ್ಣ ಒಬ್ಬನೇ ಒಂದು ಕಡೆ ನಿಂತು ಚಿಣಿದಾಂಡು ಆಡಿ ಗೆಲ್ಲುತ್ತಾನೆ. ಮತ್ತೊಂದು ಸಲ ಚೆಂಡು ದಾಂಡು ಬೇಕೆಂದು ಅಕ್ಕ ಮಾಯವ್ವನಿಗೆ ಹಠ ಮಾಡುತ್ತಾನೆ. ಮಾಯವ್ವ ಉಡಿಯ ತುಂಬ ಮುತ್ತು ರತ್ನ ಒಯ್ದು ಕಂಬಾರ ಕಾಳಣ್ಣನಿಗೆ ಕೊಟ್ಟು ತಮ್ಮನಿಗಾಗಿ ಚೆಂಡು ದಾಂಡು ಬೇಡುತ್ತಾಳೆ. ಮೂರನೇ ದಿನಕ್ಕೆ ಬರಲು ಹೇಳಿದ್ದ ಕಾಳಣ್ಣ ಹಿಂದೆ ಆರು ತಾಸು, ಮುಂದು ಆರು ತಾಸು ಸಮಯದ ಮಧ್ಯರಾತ್ರಿಯಲ್ಲಿ ತಿದಿ ಬೆಂಕಿಯ ಕುಲುಮೆ ಹೊತ್ತುಕೊಂಡು ಚೆಂಡು ತಯಾರಿಸುವ ಸಾಮಗ್ರಿ, ಮುತ್ತು ರತ್ನಗಳನ್ನು ತೆಗೆದುಕೊಂಡು ಹೆಂಡತಿಯೊಡನೆ ಮೂರು ಊರಿನ ಹಾದಿ ಕೂಡುವ ಸ್ಥಳದಲ್ಲಿ ತಿದಿ ಕುಲುಮೆಗೆ ಗಾಳಿ ಹಾಕುವ ಸಾಧನೆ ಹೂಡುತ್ತಾನೆ. ಮುತ್ತು ರತ್ನಗಳನ್ನು ಮುಸಿಗೆ ತುಂಬಿ ಸುತ್ತಿಗೆಯಿಂದ ಹೊಡೆದಾಗ ಚೆಂಡು ಹೊಡೆದು ಹೋಯಿತು. ಮತ್ತೆ ಎರಡನೇ ಸಾರಿ ಪ್ರಯತ್ನಪಟ್ಟು ವಿಫಲನಾಗಿ ಮೂರನೇ ಬಾರಿಗೆ ಪ್ರಾಣವನ್ನೇ ಪಣವಾಗಿಟ್ಟು ಚೆಂಡು ತಯಾರಿಸುತ್ತಾನೆ.

ಮೂರನೇ ದಿನ ಕಾಳಣ್ಣನಿಂದ ಪಡೆದ ಚೆಂಡು ದಾಂಡನ್ನು ಮಾಯವ್ವ ಬೀರಣ್ಣನಿಗೆ ನೀಡುತ್ತಾಳೆ. ಮತ್ತೆ ಊರೆಲ್ಲಾ ಒಂದು ಕಡೆ ಬೀರಣ್ಣ ಮತ್ತೊಂದು ಕಡೆ ಒಬ್ಬನೇ ನಿಂತು ಗೆಲ್ಲುತ್ತಾನೆ. ಬೀರಪ್ಪ ಹೊಡೆದ ಒಂಬತ್ತು ಲಗ್ಗೆಗಳು ಬೇರೆ ಬೇರೆ ಕಡೆ ಬಿದ್ದು ಮಠಗಳಾಗುತ್ತವೆ. ಸಿಡಿಯಾಣ, ಕ್ಯಾಣಗನೂರು, ಕರಸೂಣಗಿ, ಗೋಡಗೇರಿ, ಉಂಬರಜ, ಜೂನೂರ, ಅಲಕನೂರು ಬಾರಾಮತಿ ಹಾಗೂ ತೆರಾಮತಿ ಎಂಬ ಊರುಗಳಲ್ಲಿಯ ಮಠಗಳು ಬೀರಣ್ಣನ ವಾಸಸ್ಥಾನಗಳೆಂದೇ ಪ್ರಸಿದ್ಧಿ ಪಡೆದಿವೆ. ಈತ ಗೆದ್ದು ಬರುವಾಗ ಊರ ಸಾಹುಕಾರನ ಮಗ ತನ್ನೊಡನೆ ಆಡಿ ಗೆಲ್ಲುವಂತೆ ಸವಾಲೆಸೆಯುತ್ತಾನೆ. ಆಟದಲ್ಲಿ ಬೀರಣ್ಣನ ಹೊಡೆತಕ್ಕೆ ಸಾಹುಕಾರನ ಮಗ ಸತ್ತು ಹೋಗುತ್ತಾನೆ. ಇದರಿಂದಾಗಿ ಅಕ್ಕ ತಮ್ಮರಿಬ್ಬರೂ ಚಂದನಗಿರಿ ಬಿಟ್ಟು ಬೆಳ್ಳಿಗಿರಿಗೆ ಹೋಗುತ್ತಾರೆ.[೨೧]

ಬೆಳ್ಳಿಗಿರಿಯಲ್ಲಿ ಊರವರೆಲ್ಲ ಬಿಲ್ಲಿನಾಟ ಹೂಡಿರುವಾಗ ಬೀರಣ್ಣನು ಬಾಣ ಬಿಡಲು ಹೋಗಿ ಬಿಲ್ಲು ಮುರಿಯುತ್ತಾನೆ. ಮಾಯವ್ವ ಮಾಡಿಕೊಟ್ಟ ಐದಾರೂ ಬಿಲ್ಲುಗಳೂ ಮುರಿದು ಹೋಗುತ್ತವೆ. ತಮ್ಮ ಹಠ ಮಾಡುವಾಗ ಮಾಯವ್ವ ಚಿಂತಿತಳಾಗುತ್ತಾಳೆ. ಐದು ಜನ ಜಕಣಿಯರು ಮಾಯವ್ವಳಿಗೆ ಸಹಾಯ ಮಾಡುವುದಾಗಿ ಹೇಳಿ ಶಿವನಿಂದ ಬಿಲ್ಲುಬಾಣಗಳನ್ನು ಬೇಡಿ ಪಡೆದು ಮಾಯವ್ವನಿಗೆ ನೀಡುತ್ತಾರೆ. ಶಿವನ ಬಿಲ್ಲು ಬಾಣ ಪಡೆದು ಬೀರಣ್ಣ ಅಡವಿಯಲ್ಲಿ ರಾಮರಮಿಕ ಕಂಡು ಬಾಣ ಬಿಡುತ್ತಾನೆ. ಅದು ಬೀರಣ್ಣನ ಪಾದದ ಮೇಲೆ ಬಿದ್ದು ನಿನ್ನ ಪಾದವನ್ನು ತನ್ನ ತಲೆಯ ಮೇಲಿಟ್ಟಾಗ ಪ್ರಾಣ ಬಿಡುತ್ತೇನೆಂದು ಹೇಳುತ್ತದೆ. ಬೀರಣ್ಣ ಹಾಗೆಯೇ ಮಾಡಿದಾಗ ಅದು ರಾಮರಾಮನೆಂದು ಪ್ರಾಣ ಬಿಡುತ್ತದೆ. ತಮ್ಮನಿಂದ ಈ ವಿಚಾರ ಕೇಳಿದ ಮಾಯವ್ವ ತಮ್ಮನಿಗೆ ಪಾಪ ಒದಗಿತೆಂದು ಚಡಪಡಿಸಿ, ಸಿದ್ಧರನ್ನು ಊಟಕ್ಕೆ ಕರೆಯಲು ಬಯಸುತ್ತಾಳೆ. ನೀರಿಗಾಗಿ ಬಾವಿಗೆ ಬಂದ ಬಾಲೆಯರ ನೀರಿನ ಕೊಡಗಳಿಗೆ ಬಾಣ ಬಿಟ್ಟು ಕೊಡುಗಳನ್ನು ತೂತು ಮಾಡಿದ್ದರಿಂದ ಅವರು ತಂದೆ-ತಾಯಿ ಕಾಣದ ಪರಮ ನೀಚನೆ ಎಂದು ತಾಯಿ ಇಲ್ಲದವನೆಂದು ಬೈದು ಬೀರಣ್ಣನ ಮನ ನೋಯಿಸಿದರು. ನೊಂದ ಬೀರಣ್ಣ ತನ್ನ ಪೂರ್ವವೃತ್ತಾಂತವನ್ನು ಅಕ್ಕಮ್ಮಳಿಂದ ತಿಳಿಯುತ್ತಾನೆ. ಅವನ ಬಾಲ್ಯದ ತುಂಟಾಟವನ್ನು ಹೀಗೆ ವರ್ಣಿಸಲಾಗಿದೆ.

ಇದರವ್ವ ಭರದಿ ಬೈಲಿಗೆ ಬಂದು ನೀರ್ತರು ಏಳ್ಳೂರು
ತರುಣಿಯರ ತುಂಬಿದ ಕೊಡಕ್ಕೆ ಬಾಣವನೆಸೆಯ
ಉರೆ ಛಿದ್ರ ಬೀಳಲವರತಿ ಕೋಪದಿಂ ನಿಂದು ಜನನಿ ಜನಕ ಕಾರಣ[೨೨]

ಅವರು ಮಾಯವ್ವನ ಬಳಿ ಬಂದು ಬೀರಪ್ಪನಿಗೆ ನಾರಿ ತರುವಂತೆ ಹೇಳಿದರು.

ಬೀರಪ್ಪ ಇದರಿಂದ ಘಾಸಿಗೊಂಡು ತನ್ನ ತಂದೆ ತಾಯಿ ಗುರುತು ಹೇಳುವಂತೆ ಅಕ್ಕನೊಂದಿಗೆ ಹಠ ಮಾಡುತ್ತಾನೆ. ಅದೆಲ್ಲ ನನಗೆ ತಿಳಿಯದು, ನೀನಿಗ ಮದುವೆ ಮಾಡಿಕೊಳ್ಳಬೇಕೆಂದರೆ ಪ್ರಪಂಚದ ನಾರಿಯರೆಲ್ಲ ನಿನ್ನಂತೆ ಕಾಣುತ್ತಾರೆ. ನನಗೆ ಸೋದರ ಮಾವನ ಮಗಳೇ ಆಗಬೇಕು. ನನ್ನ ತಂದೆ ತಾಯಿ, ಸೋದರಮಾವ ಯಾರು ಎಂದು ಹೇಳು ಎಂದು ಹಠ ಮಾಡುತ್ತಾನೆ.

೫. ಸಪ್ತಮಾತೃಕೆಯರ ಆರೈಕೆಯಲ್ಲಿ ಬೆಳೆದ ಬೀರಪ್ಪ

ಹವೇಲಿ ಹಳ್ಳದ ದಡದಲ್ಲಿರುವ ಕಂಚಿನಾಲದ ಮರದಲ್ಲಿ ಶಿವ ಪಾರ್ವತಿಯರ ಆರೈಕೆಯಲ್ಲಿ ಬೆಳೆಯುತ್ತಿದ್ದ ಬೀರಪ್ಪ ಕುರಿಗಳನ್ನು ಕಾಯುತ್ತ ಬಂದ ಅಕ್ಕವ್ವ, ಮಾಯವ್ವರೆಂಬ ಸಹೋದರಿಯರ ಕಣ್ಣಿಗೆ ಕಾಣಿಸಿಕೊಳ್ಳುತ್ತಾನೆ. ಈ ಇಬ್ಬರು ಸಹೋದರಿಯರು ಕೂಸನ್ನು ಪಡೆಯುವುದಕ್ಕೆ ಮುಂದಾಗುತ್ತಾರೆ. ಮೊದಲು ಅಕ್ಕವ್ವ ಗಿಡ ಏರಲು ಮುಂದಾಗುತ್ತಾಳೆ. ಇರುವೆಗಳು ಗಿಡ ಹತ್ತುವುದಕ್ಕೆ ಬಿಡುವುದಿಲ್ಲ. ನಂತರ ಮಾಯವ್ವ ಹತ್ತುವುದಕ್ಕೆ ಮುಂದಾದಾಗ ಇರುವೆಗಳು, ಕೋಗಿಲೆಗಳು, ನಾಗರಹಾವುಗಳು, ದಾರಿ ಬಿಡುತ್ತವೆ. ಮಾಯವ್ವ ತೊಟ್ಟಿಲನ್ನು ಬಿಚ್ಚಿ ಇಳಿಸುತ್ತಾಳೆ. ಇಬ್ಬರಲ್ಲಿ ಕೂಸು ಯಾರಿಗೆ ಅನ್ನುವ ಪ್ರಶ್ನೆ ಎದುರಾಗುತ್ತದೆ. ಮಡಿಯಿಂದ ತೊಟ್ಟಿಲನ್ನು ಸುತ್ತು ಹಾಕುವಾಗ ಯಾರ ಎದೆಯಲ್ಲಿ ಹಾಲು ಚಿಮ್ಮುವವೋ ಅವರಿಗೆ ಕೂಸು ಎನ್ನುವ ಮಾತಿನಂತೆ ಮೊದಲು ಅಕ್ಕವ್ವ ತೊಟ್ಟಿಲನ್ನು ಸುತ್ತುತ್ತಾಳೆ. ಈಕೆಯ ದೇಹದಲ್ಲಿ ಯಾವುದೇ ಬದಲಾವಣೆಗಳು ಕಾಣುವುದಿಲ್ಲ. ಮಾಯವ್ವ ಸುತುತ್ತಾಳೆ. ಆಕೆಯ ಎದಿ ಬದಿಗಳು ಚಿಗಿತು ಬಾಣಂತಿ ರೂಪ ಪಡೆಯುತ್ತವೆ. ಆಗ ಮನಕೆ ಮಗನಾಗಿ ಜನಕೆ ತಮ್ಮನಾಗಿ ಕೂಸನ್ನು ಸಲುಹುವ ಜವಾಬ್ದಾರಿಯನ್ನು ಮಾಯವ್ವ ಹೊರುತ್ತಾಳೆ. ಇಲ್ಲಿ ತಾಯಿಯನ್ನು ಪರೀಕ್ಷಿಸುವ ವಿಧಾನ ಗಮನ ಸೆಳೆಯುತ್ತದೆ. ಬೀರಪ್ಪ ಮಾಯವ್ವನ ಕೈಗೆ ದೊರಕುವ ಭಿನ್ನ ಪಠ್ಯಗಳು ಸಿಗುತ್ತವೆ.

ಕೆಲವು ಪುರಾಣಗಳಲ್ಲಿ ಹಾಡುಗಳಲ್ಲಿ ಐದು ಜನ ಅಕ್ಕ ತಂಗಿಯರು ಮರದ ಕೆಳಗೆ ಉಡಿಯೊಡ್ಡಿ ಶಿವನ ಸ್ಮರಣೆ ಮಾಡುತ್ತ ನಿಲ್ಲುವುದು. ಆಗ ಕೂಸು ಯಾರ ಉಡಿಯಲ್ಲಿ ಬೀಳುತ್ತದೆ ಅವರು ಸಾಕಬೇಕು ಎನ್ನುವ ತೀರ್ಮಾನಕ್ಕೆ ಬರುತ್ತಾರೆ. ಅಲ್ಲಿಯೂ ಸಹ ಕೂಸು ಮಾಯವ್ವನ ಉಡಿಯಲ್ಲಿ ಬೀಳುತ್ತದೆ.

ಶಿವನನು ಸ್ತುತಿಸುತ ಐದು ಮಂದಿಯು
ಉಡಿಯೊಡ್ಡಿ ನಿಂತಾರಿನ್ನು
ಬೇಗ ಶಿವನು ಬಂದು ಆ ಕೂಸು ತೊಗೊಂಡು
ಮಾಯವ್ವನ ಉಡಿಯೊಳಗೆ ಹಾಕಿದನು

ಹೀಗೆ ಮರದಲ್ಲಿದ್ದ ಕೂಸು ಮಾಯವ್ವನ ಕೈಸೇರುತ್ತದೆ. ಸೂರಮ್ಮ ದೇವಿಯಿಂದ ಬೀರಪ್ಪನನ್ನು ದೂರ ಮಾಡಿದರೂ ಅವನಂತೆಯೇ ಕೂಸಿರುವಾಗಲೇ ನೀರಿಗೆ ಬಿಟ್ಟ ಮಗು ಮಾಯವ್ವ ಇನ್ನೊಬ್ಬರಲ್ಲಿ ಬೆಳೆದ ಪರದೇಶಿ ಕೂಸು. ಹೀಗೆ ಇಬ್ಬರು ಪರದೇಶಿಗಳನ್ನು ಒಂದೆಡೆ ಎಂದು ಅನ್ಯೋನ್ಯವಾದ ಸಂಬಂಧದಲ್ಲಿ ಬೆಸೆಯುವ ಕೆಲಸವನ್ನು ಈ ಕಾವ್ಯ ಬೆಸೆಯುತ್ತದೆ.

ಬೀರಪ್ಪ ಮಾಯವ್ವನಿಗೆ ದೊರೆತ ನಂತರ ಸಪ್ತಮಾತೃಕೆಯರ ಆರೈಕೆಯಲ್ಲಿ ಪ್ರೀತಿಯಿಂದ ಬೆಳೆಯುತ್ತಾನೆ. ಮಾಯವ್ವ ತನ್ನ ವೃತ್ತಿಯಾದ ಕುರಿಗಳನ್ನು ಕಾಯುವ ಕಾಯಕವನ್ನು ಕಲಿಸಿಕೊಡುತ್ತಾರೆ. ಇದರಿಂದ ಬೀರಪ್ಪ ಮನೆತನದ ವೃತ್ತಿ ಬದಲಾಗುತ್ತದೆ. ಈತನ ಪೂರ್ವಜರು ದನಗಳನ್ನು ಕಾಯುವ ಮನೆತನಕ್ಕೆ ಸೇರಿದವರು.

ಬೀರಪ್ಪ ಮಾಯವ್ವನಿಂದ ಕುರಿ ಕಾಯುವ ವೃತ್ತಿಯನ್ನು ಕಲಿತುಕೊಳ್ಳುತ್ತಾನೆ. ಈತನ ಶಿಷ್ಯ ಪರಂಪರೆಯವರು ಸಹ ಕುರಿಗಳನ್ನು ಕಾಯುವ ಕಾಯಕವನ್ನು ಮಾಡುತ್ತಾರೆ. ಕುರಿಗಾರರು, ದನಗಾರರ ಜೊತೆ ಕುರಿಗಳನ್ನು ಮೇಯಿಸುವುದಕ್ಕೆ ಭೂಮಿಗಾಗಿ ಸಂಘರ್ಷ ಮಾಡುತ್ತಾರೆ. ಬೀರಪ್ಪನು ದನಗಾರರನ್ನು ಕೊಂದು ತಾನು ಮತ್ತು ತನ್ನ ಅಕ್ಕ ಮಾಯವ್ವನ ಅಸ್ತಿತ್ವವನ್ನು ಕಟ್ಟಿಕೊಳ್ಳುತ್ತಾನೆ. ಅವುಗಳನ್ನು ಬೀರಪ್ಪನ ಸಂಘರ್ಷಗಳಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಬೀರಪ್ಪ ಅಕ್ಕ ಮಾಯವ್ವನ ಸಹಾಯ ಪಡೆದು ಮಾವ ಕಾಳಿನಾರಾಯಣನ ಮಗಳನ್ನು ಮದುವೆ ಮಾಡಿಕೊಳ್ಳುವುದರ ಮುಖಾಂತರ ಆಸ್ತಿಯನ್ನು ಕಬಳಿಸಿಕೊಳ್ಳುತ್ತಾನೆ. ಮತ್ತೆ ತಂದೆ ತಾಯಿಯನ್ನು ಸೇರುತ್ತಾನೆ. ಆಸ್ತಿಯನ್ನು ಉಳಿಸಿಕೊಳ್ಳುವುದಕ್ಕೆ ಕಾಳಿನಾರಾಯಣನ ಯೋಜನೆಗಳನ್ನು ವಿಮುಖಗೊಳಿಸುತ್ತಾನೆ. ಶಿಷ್ಯರನ್ನು ಪಡೆದು ಅಲೆಮಾರಿಯಾಗಿ ಕುರಿಗಳನ್ನು ಕಾಯುತ್ತಾ ಹಲವು ಪಶುಪಾಲಕರನ್ನು ಸೋಲಿಸಿ ತನ್ನ ಸಾಮ್ರಾಜ್ಯವನ್ನು ವಿಸ್ತಾರ ಮಾಡಿಕೊಳ್ಳುತ್ತಾನೆ.

೬. ಬೀರಪ್ಪನ ಮದುವೆ

ಬೀರಪ್ಪನು ವಯಸ್ಸಿಗೆ ಬಂದ ಕೂಡಲೇ ಮಾಯವ್ವ ಮದುವೆ ಮಾಡಲು ಆಲೋಚನೆ ಮಾಡುತ್ತಾಳೆ. ಆದರೆ ಎಲ್ಲಾ ಹೆಣ್ಣುಗಳು ನನಗೆ ಅಕ್ಕನ ರೂಪದಲ್ಲೇ ಕಾಣುವುದರಿಂದ ತಾನು ಸೋದರ ಸೊಸೆಯನ್ನೇ ಮದುವೆಯಾಗಬೇಕೆಂದು ಬೀರಪ್ಪ ಹೇಳುತ್ತಾನೆ. ಆದ್ದರಿಂದ ತನ್ನ ತಂದೆ ತಾಯಿಯರ ಗುರುತು ಹೇಳುವಂತೆ ಮಾಯವ್ವಳನ್ನು ಒತ್ತಾಯಿಸುತ್ತಾನೆ. ನಾವು ಬಂದು ಕೂಡಿದ್ದು ಕೊದಲಿಗಿ ಬನದಲ್ಲಿ. ಆದ್ದರಿಂದ ನಿನ್ನ ತಂದೆ, ತಾಯಿ ಗುರುತು ಹೇಳಲು ಹೇಗೆ ಸಾಧ್ಯವೆಂದು ಪೇಚಾಡುತ್ತಾಳೆ. ಮಾಯವ್ವ ಮಲಗಿದಾಗ ಗುರು ರೇವಣಸಿದ್ಧರು ಕನಸಿನಲ್ಲಿ ಬಂದು ಅಕ್ಕ ತಮ್ಮಂದಿರ ಸಂಬಂಧಗಳನ್ನು ಅರುಹುತ್ತಾರೆ. ನಗರಿಪಟ್ಟಣದ ಕಾಳಿನಾರಾಯಣನ ಮಗಳು ಕನ್ನಿಕಾದೇವಿ ಬೀರಣ್ಣನ ಸೋದರಸೊಸೆಯೆಂದು ತಿಳಿಸುತ್ತಾನೆ. ತಕ್ಷಣ ಎಚ್ಚೆತ್ತು ತನ್ನ ಮತ್ತು ಬೀರಪ್ಪನ ಪೂರ್ವಜರ ವೃತ್ತಾಂತವನ್ನು ಹೇಳಿದಾಗ ಬೀರಪ್ಪ ತನ್ನ ಸೋದರಸೊಸೆಯನ್ನು ಕಾಣಲು ಆತುರವಾಗಿ ಸಿದ್ಧನಾಗುತ್ತಾನೆ. ಬೀರಪ್ಪ ಕೂಡಲೆ ಅಲ್ಲಿಗೆ ಹೊರಡುತ್ತಾನೆ. ನಗರಿಪಟ್ಟಣದ ಸಮೀಪ ಬಂದು ಮುದುಕನ ವೇಷ ಧರಿಸಿ ದನ ಕಾಯುವ ಮಕ್ಕಳ ಬಳಿಗೆ ಬಂದಾಗ ಅವರು ಬೀರಪ್ಪನನ್ನು ದನ ಕಾಯಲು ಹಚ್ಚಿ ಆಟದಲ್ಲಿ ತೊಡಗುತ್ತಾರೆ. ಅವನಿಗೆ ಊಟ ಕೂಡ ನೀಡುತ್ತಾರೆ. ಸಂಜೆಯಾಗುತ್ತಿದ್ದುದರಿಂದ ಊರ ಬಾಗಿಲು ಹಾಕುತ್ತಾರೆಂಬ ಕಾರಣದಿಂದ ಎಲ್ಲರೂ ಹೊರಟಾಗ, ಬೀರಪ್ಪ ಹುಡುಗರಿಂದ ಊರಿನ ವೃತ್ತಾಂತವನ್ನೆಲ್ಲಾ ತಿಳಿದುಕೊಳ್ಳುತ್ತಾನೆ.

ಕಾಳಿನಾರಾಯಣ ಊರಿನ ಗೌಡನಾಗಿದ್ದು ಮಗಳು ಕನ್ನಿಕಾಮವ್ವಳನ್ನು ಏಳಂತಸ್ತಿನ ಮಹಡಿಯಲ್ಲಿಟ್ಟು ಭದ್ರವಾದ ಕಾವಲಿಟ್ಟಿರುವನೆಂದು ತಿಳಿಯುತ್ತಾನೆ. ಅವಳಲ್ಲಿಗೆ ಹೂಗಾರ ಬೀರಸಂಗವ್ವ ಮಾತ್ರ ಹೋಗುವಳೆಂಬ ಸಂಗತಿ ತಿಳಿಯುತ್ತದೆ. ಹುಡುಗರ ಸಹಾಯದಿಂದ ಬೀರಪ್ಪ ಊರ ಅಗಸಿ ಒಳಗೆ ಹೋಗಿ, ಹೂಗಾರ ಮುದುಕಿ ಸಂಗವ್ವನ ಆಶ್ರಯ ಪಡೆಯುತ್ತಾನೆ. ಮುದುಕಿಯೇ ಕನ್ನಿಕಾಮವ್ವಳಿಗೆ ಮುಂಜಾನೆ ಮತ್ತು ಸಾಯಂಕಾಲ ಹೂವಿನ ದಂಡೆ ಒಯ್ದು ಕೊಡುತ್ತಿದ್ದಳು. ಬೀರಪ್ಪ ಕಟ್ಟಿದ ಭೂಮಿತೂಕದ ಹೂವಿನ ದಂಡೆಯನ್ನು ನೋಡಿ ಸಂಗವ್ವ ಬೆರಗಾಗುತ್ತಾಳೆ. ಇದನ್ನು ಕಟ್ಟಿ ಮುದುಕಿಯಿಂದ ಕಳಿಸುತ್ತಾನೆ. ಹೂವಿನ ದಂಡೆ ತರಲು ತಡವಾದು

ದೇಕೆಂದು ಕನ್ನಿಕಾಮವ್ವ ಕೇಳಿದರೆ ಮನೆಗೆ ತಂಗಿಯ ಮಗಳು ಬಂದಿದ್ದಾಳೆಂದು ಹೇಳುವಂತೆ ತಿಳಿಸುತ್ತಾನೆ. ಹೂವಿನ ದಂಡೆಯನ್ನು ಕಂಡು ಬೆರಗಾದ ಕನ್ನಿಕಾಮವ್ವ ಯಾರು ಕಟ್ಟಿದ್ದೆಂದು ಕೇಳಿದಾಗ ನನ್ನ ತಂಗಿಯ ಮಗಳು ಬಂದಿದ್ದಾಳೆಂದೂ, ಅವಳು ಕಟ್ಟಿದ ದಂಡೆಯೆಂದು ಸಂಗವ್ವ ಹೇಳುತ್ತಾಳೆ. ನಾಳೆಗೆ ಕರೆತರುವಂತೆ ಹೇಳಿದ ಕನ್ನಿಕಾಮವ್ವ ತನ್ನ ಸೀರೆ ಕುಪ್ಪಸ ಒಡವೆಗಳನ್ನು ಕೊಟ್ಟು ಕಳುಹಿಸುತ್ತಾಳೆ. ಸಂಗವ್ವಳೊಡನೆ ಹೆಣ್ಣಿನ ವೇಷದಲ್ಲಿ ಬಂದ ಬೀರಪ್ಪನ ಸೌಂದರ್ಯವನ್ನು ಕಂಡು ಮೆಚ್ಚಿದ ಕನ್ನಿಕಾಮವ್ವ ಮುದ್ದಿಸುತ್ತಾಳೆ. ಹಾಗೆ ಗಮನಿಸುವಾಗ ಬೀರಪ್ಪನ ಕಾಲಿನಲ್ಲಿಯ ಪದ್ಮ ಬೆಳ್ಳಿ ಭುಜ, ನಕ್ಕರೆ ಹವಳ, ಮಾತಿಗೆ ಮುತ್ತು ಉದುರುವುದನ್ನು ಕಂಡು ಹೆಂಗಸಿನ ವೇಷದಲ್ಲಿ ಬಂದಿರುವುದು ತನ್ನ ಸೋದರಮಾವನೆಂದು ಆಕೆ ಗುರುತಿಸುತ್ತಾಳೆ.

ಈಗ ಇಬ್ಬರೂ ಸುರಕ್ಷಿತವಾಗಿ ಇಲ್ಲಿಂದ ಪಾರಾಗುವಂತೆ ಒಂದು ಸೂತ್ರದ ತೇಜಿ ತರುವುದಾಗಿ ಹೇಳಿ ಬೀರಪ್ಪನು ಹೂಗಾರ ಮುದುಕಿಯೊಂದಿಗೆ ಅಲ್ಲಿಂದ ಹೊರಡುತ್ತಾನೆ. ಬಂದವನೇ ಮಾಯವ್ವನಲ್ಲಿಗೆ ಪ್ರಯಾಣ ಹೊರಡುತ್ತಾನೆ. ತಾನು ಸೋದರಸೊಸೆಯನ್ನು ಕಂಡುಬಂದೆನೆಂದು ತನಗೆ ಎತ್ತು, ಬಳೆಗಳು ಬೇಕೆಂದು ಹಠ ಮಾಡುತ್ತಾನೆ. ಅಕ್ಕ ಅದನ್ನು ಪೂರೈಸುತ್ತಾಳೆ. ವೇಷ ಬದಲಿಸಿಕೊಂಡು ನಗರಿಪಟ್ಟಣದ ನಡು ಊರಲ್ಲಿ ಬಳೆಯ ಅಂಗಡಿ ಹಚ್ಚುತ್ತಾನೆ. ಗೆಳತಿಯರಿಂದ ಬಳೆಗಾರ ಬಂದ ಸುದ್ದಿ ತಿಳಿದ ಕನ್ನಿಕಾಮವ್ವ ತನಗೆ ಗಾಜಿನ ಬಳೆಗಳು ಬೇಕೆಂದು ತಂದೆಗೆ ಹೇಳುತ್ತಾಳೆ. ಆತ ಏಳು ಪರದೆ ಕಟ್ಟಿಸಿ ಆ ಕಡೆ ಮಗಳು, ಈ ಕಡೆ ಬಳೆಗಾರನಿದ್ದು ಮಗಳ ಕೈಗೆ ಬಳೆ ತೊಡಿಸುವ ವ್ಯವಸ್ಥೆ ಮಾಡುತ್ತಾನೆ. ಏಳು ಪರದೆಯ ಈ ಕಡೆ ಕುಳಿತ ಬೀರಪ್ಪ ಕಾಲು ಚಾಚಿ ಪರದೆಯ ಆ ಕಡೆ ಕುಳಿತ ಕನ್ನಿಕಾಮವ್ವನ ತೊಡೆಯ ಮೇಲೆ ಚಾಚುತ್ತಾನೆ. ಆಕೆ ಕಾಲಲ್ಲಿ ಪದ್ಮ ಕಂಡು ಆತ ಸೋದರಮಾವನೆಂದು ಗುರುತಿಸುತ್ತಾಳೆ. ಆಕೆ ಬಳೆ ಹಾಕಿಕೊಳ್ಳಲು ಕೈ ಚಾಚಿದಾಗ, ಈಕೆ ಮದುವೆಯಾಗದಾಕೆ, ಆದುದರಿಂದ ನಾನು ಬಳೆ ತೊಡಿಸುವುದಿಲ್ಲ ಎಂದು ನಿರಾಕರಿಸುತ್ತಾನೆ. ಆಗ ಹುಟ್ಟಿ ಆಗ ಬೆಳೆವ ಗಿಡದ ಬೀಜ ಕೊಟ್ಟು ಅದನ್ನು ಊರಿದರೆ ಕೆಲವೇ ಗಂಟೆಗಳಲ್ಲಿ ಗಿಡವಾಗಿ ಬೆಳೆಯುತ್ತದೆ. ಅದರೊಡನೆ ನಾಳೆ ಅವಳಿಗೆ ಲಗ್ನ ಮಾಡಿ ಎಂದು ಬೀರಪ್ಪ ಹೇಳಿದಕ್ಕೆ ಅವಳ ತಂದೆ ಒಪ್ಪುತ್ತಾನೆ. ಮರುದಿನ ಗಿಡದೊಂದಿಗೆ ಆಕೆಯ ಮದುವೆಯಾಗುತ್ತದೆ. ಬೀರಪ್ಪ ಅಲ್ಲಿಂದ ಬಂದು ವೇಷ ಬದಲಿಸಿಕೊಂಡು ಎತ್ತಿನ ಮೇಲೆ ಬಳೆ ಹೇರಿಕೊಂಡು ಹಿಂದಕ್ಕೆ ಬಂದು ತನಗೂ ಕನ್ನಿಕಾಮವ್ವಳಿಗೂ ಮದುವೆಯಾಯಿತೆಂದು ಅಕ್ಕನಿಗೆ ಹೇಳುತ್ತಾನೆ. ಅಕ್ಕನಿಂದ ಸೂತ್ರದ ತೇಜಿ ಕೇಳಿ ಪಡೆದು ಹೋಗಿ ಕನ್ನಿಕಾಮವ್ವಳನ್ನು ಕೂರಿಸಿಕೊಂಡು ಕರೆತರುತ್ತಾನೆ. ಮಾಯವ್ವ ಅವರಿಬ್ಬರಿಗೂ ಆರತಿ ಬೆಳಗಿ ಮನೆಗೆ ಬರಮಾಡಿಕೊಳ್ಳುತ್ತಾಳೆ.[೨೨]

೨. ಶಿಷ್ಯ ಪರಂಪರೆ

ಬೀರಪ್ಪನು ಕುರಿ ಕಾಯುವ ಜನಾಂಗದವನಾದರೆ, ಮಾಳಿಂಗರಾಯನು ಆಕಳುಗಳನ್ನು ಕಾಯುವ ಜನಾಂಗದವನೆಂದು ತಿಳಿಯುತ್ತದೆ. ಇವನ ಪೂರ್ವಜರು ದೇವರ ನಾಡಿಗೆ ಸಂಬಂಧಿಸಿದವರು. ಇವರು ಶೂರರು ಅಡವಿಯಲ್ಲಿಯೇ ಇರುವುದರಿಂದ ಬಿಲ್ಲು ಬಾಣಗಳ ಪ್ರಯೋಗದಲ್ಲಿ ಪರಿಣತರು. ಈ ಶೂರತನ ಸಹಜವಾಗಿಯೇ ಮಾಳಿಂಗರಾಯನಿಗೂ ಬಂದಿದೆ. ಹೀಗಾಗಿ ಸ್ವತಃ ಹೋರಾಡುವ ಪ್ರವೃತ್ತಿ ಅತ್ಯಂತ ಸ್ವಾಭಿಮಾನದ

ಗುರುಭಕ್ತಿಯ ವ್ಯಕ್ತಿತ್ವ ಅವನಲ್ಲಿ ಕಾಣುತ್ತೇವೆ. ಗುರುಬೀರಪ್ಪ ಸ್ವತಃ ಶಿವನಿಂದ ಬೇಡಿ ಪಡೆದ ಶಿಷ್ಯ ಮಾಳಿಂಗರಾಯ.

ಸೋಮರಾಯ, ತುಕ್ಕಪ್ಪರಾಯ ಇಬ್ಬರೂ ಶೂರ ಅಣ್ಣ ತಮ್ಮಂದಿರು. ಇವರ ಮನೆತನದ ಗುರು ಗೋರಖನಾಥ. ಇವನಲ್ಲಿ ೭೦೦ ಆಕಳುಗಳಿದ್ದವು. ಬರಗಾಲ ಬಿದ್ದು ನೀರು ಮೇವಿಗೆ ತೊಂದರೆಯಾದುದರಿಂದ ಆತ ನಾಲ್ಕೂ ದಿಕ್ಕಿಗೆ ಪತ್ರ ಬರೆದು ತನ್ನ ತೊಂದರೆಯನ್ನು ರವಾನಿಸಿದನು. ಯಾರೂ ಪತ್ರ ಹಿಡಿಯಲಿಲ್ಲ. ಸೋಮರಾಯ, ತುಕ್ಕಪ್ಪರಾಯ ಪತ್ರ ಹಿಡಿದರು. ಗುರುವಿನಲ್ಲಿ ಬಂದು, ಅವನ ಆಜ್ಞೆಯಂತೆ ಏಳುನೂರು ಕಿಲ್ಲಾರಿಗಳನ್ನು ಹೊಡೆದುಕೊಂಡು ಬಾಬಾನ ಗುತ್ತಿಗೆ ಬಂದು ಇರಹತ್ತಿದ್ದರು. ಹೀಗೆ ಮಾಳಿಂಗರಾಯನ ಪೂರ್ವಜರು ದನಗಾರರು ಆಗಿದ್ದರು.

ಜನನ : ಸೋಮರಾಯನ ಹೆಂಡತಿ ಕಾನಾಬಾಯಿ, ತುಕ್ಕಪ್ಪರಾಯನ ಹೆಂಡತಿ ಅಮೃತಬಾಯಿ, ಸಮೋರಾಯ ತಮ್ಮ. ತುಕ್ಕಪ್ಪರಾಯನ ಅಣ್ಣ ತಮ್ಮರು ಆಕಳುಗಳನ್ನು ಮೇಯಿಸಲು ಹೊಡೆದುಕೊಂಡು ಹೋದಾಗ ಶಿವಪಾರ್ವತಿ ಮುದುಕರ ವೇಷದಲ್ಲಿ ಇವರ ಮನೆಗೆ ಬಂದರು. ಆದರಾತಿಥ್ಯ ಪಡೆದ ಅವರಿಗೆ ಮಕ್ಕಳಿಲ್ಲದ್ದನ್ನು ಗಮನಿಸಿ ಶಿವನು ತನ್ನ ಕೊರಳಲ್ಲಿಯ ಮಾಣಿಕ್ಯದ ಹರಳನ್ನೂ ಪಾರ್ವತಿ ಜಂಬುನೀಲದ ಹರಳನ್ನೂ ಕೊಟ್ಟು ಜಗಲಿಯ ಮೇಲಿಡಲು ಹೇಳಿಹೋದರು. ಸೋಮರಾಯ, ತುಕ್ಕಪ್ಪರಾಯ ಬಂದ ನಂತರ ಎಲ್ಲರೂ ಕೂಡಿ ಜಗುಲಿ ನೋಡಿದರೆ ಅಲ್ಲಿ ಎರಡು ಗಂಡುಮಕ್ಕಳು ಆಡುತ್ತಿದ್ದವು. ಇವರೇ ಜಕ್ಕಪ್ಪ ಮತ್ತು ಮಾಳಪ್ಪ. ಜಂಬುನೀಲದ ಹರಳಿನಿಂದ ಜಕ್ಕಪ್ಪ, ಮಾಣಿಕ್ಯದ ಹರಳಿನಿಂದ ಮಾಳಿಂಗರಾಯರ ಜನನವಾಯಿತು. ಆದರೆ ಅವರ ತಂದೆ ಸೋಮರಾಯ ತಾಯಿ ಕಾನಾಬಾಯಿ ಎಂದು ಹಲವಾರು ಕಡೆ ಉಲ್ಲೇಖಗಳು ಬರುತ್ತವೆ.

ಕಳ್ಳಬೇಡರ ಕೈಯಲ್ಲಿ ತುಕ್ಕಪ್ಪರಾಯ ಮರಣವನ್ನಪ್ಪಿದಾಗ ಸೋಮರಾಯ ಗುರುವನ್ನು ಧ್ಯಾನಿಸಲು, ಗೋರಖನಾಥ ಬಂದು ಇವನಲ್ಲಿ ಉಳಿಯುತ್ತಾನೆ. ಜಕ್ಕಪ್ಪ ಮಾಳಪ್ಪರಿಗೆ ಗುರು ಗೋರಖನಾಥನೇ ಸರ್ವವಿದ್ಯೆಯಲ್ಲಿ ಪಳಗಿಸುತ್ತಾನೆ. ಸೋಮರಾಯ ಪಗಡೆ ಆಡಿ, ದೆಹಲಿ ಸುಲ್ತಾನಗಿರಿ ಪಡೆದು, ಮಕ್ಕಳನ್ನು ಮರೆತು ಕುಳಿತಾಗ, ಜಕ್ಕಪ್ಪ ಮಾಳಪ್ಪರು ಕುದುರೆ ಏರಿ ಹೋಗುತ್ತಾರೆ. ದಿಲ್ಲಿ ಸುಲ್ತಾನನ ತೋಟವೆಲ್ಲ ನಾಶ ಮಾಡುತ್ತಾರೆ. ಅಲ್ಲಿಯ ಒಂದು ಕಲ್ಲಿನಲ್ಲಿ ತಮ್ಮ ಪರಿಚಯ ಬರೆದು ಹಿಂತಿರುಗುತ್ತಾನೆ. ಇದನ್ನು ಓದಿದ ಸೋಮರಾಯ ಮಕ್ಕಳ, ಗುರುವಿನ ನೆನಪಾಗಿ ತಿರುಗಿ ಬರುತ್ತಾನೆ. ಈಗ ಮಕ್ಕಳ ಮದುವೆ ಮಾಡಲು ವ್ಯವಸ್ಥೆ ಮಾಡಿ ಮಾಳಿಂಗರಾಯನಿಗೆ ಈರಮ್ಮ ಹಾಗೂ ಶರಣಮ್ಮ ಎಂದು ಇಬ್ಬರು ಹೆಂಡಂದಿರನ್ನು ಪಡೆದಿದ್ದರು.[೩೪]

ಪವಾಡಗಳು : ಮಾಳಿಂಗರಾಯ ಪವಾಡ ಎನ್ನಬಹುದಾದ ಸಾಹಸ ಕಾರ್ಯಗಳನ್ನು ಮಾಡಿದ್ದಾನೆ. ತನ್ನ ಗುರುವಿನಂತೆಯೇ ಅನ್ಯಾಯವನ್ನು ಪ್ರತಿಭಟಿಸಿದ್ದಾನೆ. ದುಷ್ಟರ ಸಂಹಾರ, ಶಿಷ್ಟರ ರಕ್ಷಣೆಯನ್ನು ಗುರು ಶಿಷ್ಯರು ತಮ್ಮ ಪುರುಷ ಪರಾಕ್ರಮದಿಂದ ಆತ್ಮಬಲದಿಂದ ನೆರವೇರಿಸಿದ್ದಾರೆ. ಈ ಕಾರಣಕ್ಕಾಗಿ ಏನೋ ಅವರ ಭಕ್ತರು ಬೀರದೇವರ ಚರಿತ್ರೆಯನ್ನು ಕೃಷ್ಣನ ಪಾತ್ರಕ್ಕೆ ಸಮಾಂತರವಾಗಿ ಪ್ರತಿ ಕೃಷ್ಣನ ಪಾತ್ರ ಸೃಷ್ಟಿಯನ್ನು ಮಾಡಲು ಪ್ರಯತ್ನಿಸಿದಂತೆ ತೋರುತ್ತದೆ.

೧. ಏಳೂನೂರು ಬೇಡರನ್ನು ಸಂಹರಿಸಿದ್ದು

ಸೋಮರಾಯನಿಗೆ ವಚನ ಕೊಟ್ಟಂತೆ ಬೇಡರ ಉಪಟಳವನ್ನು ಕೊನೆಗಾಣಿಸುತ್ತಾರೆ. ಔದ್ಯೋಗೀಕರಣದ ಅಂಕುರವಾಗದ ಆ ಕಾಲದಲ್ಲಿ ಕೃಷಿಯೇ ಉಪಜೀವನದ ಏಕಮೇವ ದಾರಿಯಾಗಿತ್ತು. ಜಾನುವಾರುಗಳು ಪ್ರಮುಖ ಆಸ್ತಿ. ಅವುಗಳ ಅಪಹರಣ ಸರ್ವೇಸಾಮಾನ್ಯ. ಗುಡ್ಡಗಾಡುಗಳಲ್ಲಿ ಲೂಟಿ, ದರೋಡೆ ಹೆಚ್ಚಾಗಿ ಮುಗ್ಧ ಜನತೆಯ ಉಪಜೀವನ ಕಷ್ಟಕರವಾಗಿರಬಹುದು. ಅಂಥ ಸಾಮಾಜಿಕ ಪರಿಸರದಲ್ಲಿ ಈ ಧೀರರು ಶೋಚನೀಯ ಪರಿಸ್ಥಿತಿಯನ್ನು ಹತೋಟಿಗೆ ತಂದು ಜನ ಸಾಮಾನ್ಯರ ಆರಾಧ್ಯ ದೇವತೆಗಳಾದರೆಂದು ತೋರುತ್ತದೆ.

ಸೋದರ ಜಕ್ಕರಾಯನ ಜೊತೆಗೆ ಬೇಡರ ಗುಂಪನ್ನು ಚೆಂಡಾಡಿ ಉಮೆದಿ ಗ್ರಾಮದಲ್ಲಿ ರುಂಡಗಳನ್ನು ರಾಶಿ ಹಾಕಿ ಚಕ್ರಕಟ್ಟೆಯನ್ನು ಕಟ್ಟಿದನು. ಉಮೆದಿಯಲ್ಲಿರುವ ಚಕ್ರಕಟ್ಟೆಯನ್ನು ಈಗಲೂ ತೋರಿಸುತ್ತಾರೆ.

ಬೀರೇಶ್ವರನು ಇಬ್ಬರಿಗೂ ಮದುವೆ ಮಾಡಿದನು. ಜಂತೀನಾರಾಯಣಪುರದಲ್ಲಿ ನೆಲೆಸಿರಿ ಎಂದು ಆಜ್ಞಾಪಿಸಿದನು.

೨. ಹುಲಿಗಿಣ್ಣು ಕಾಸಿ ಕೊಟ್ಟದ್ದು

ಗುರುಬೀರದೇವರು ಶಿಷ್ಯನನ್ನು ಅಸಾಧ್ಯವೆನ್ನುವಂತಹ ಕಾರ್ಯಗಳನ್ನು ಮಾಡುವಂತೆ ಪರೀಕ್ಷೆಗೆ ಒಡ್ಡುತ್ತಾನೆ. ಹುಲಿಯ ಹಾಲಿನ ಗಿಣ್ಣು ಮಾಡಿಕೊಡು ಎಂದು ಕೇಳುತ್ತಾನಂತೆ. ಆದರಲ್ಲೂ ಕರಿಹುಲಿಯ ಗಿಣ್ಣು ಎಂದು ಹಾಡುಗಳಲ್ಲಿ ಬರುತ್ತದೆ. ಮತ್ತೊಮ್ಮೆ ಮಾಳಪ್ಪ ಕರಿಮಲ್ಲಿಗೆ ತಂದು ಗುರುವನ್ನು ಪೂಜಿಸುತ್ತಾನೆ. ಕರಿಮಲ್ಲಿಗೆ ಪ್ರಸಂಗ ಒಂದು ಖಂಡಕಾವ್ಯದಂತಿದೆ. ಶ್ರೀ ಸಿದ್ದಣ್ಣ ಜಕಬಾಳ ಅವರು ಅದನ್ನು ಗೀತರೂಪಕವಾಗಿ ರಂಗಭೂಮಿಯ ಮೇಲೆ ತಂದಿದ್ದಾರೆ. ಕರಿಹುಲಿ, ಕರಿಮಲ್ಲಿಗೆ ಈ ಮಾತುಗಳನ್ನು ನೋಡಿದಾಗ ಕರಿ ಎಂಬ ಶಬ್ದವನ್ನು ಅವರು ವಿಶಿಷ್ಟ ಅರ್ಥದಲ್ಲಿ ಪ್ರಯೋಗಿಸಿದಂತೆ ತೋರುತ್ತದೆ. ಖರೆ ಸತ್ಯ ಎಂಬುದಾಗಲಿ, ಕರಿಬಣ್ಣ ಆ ಜನಾಂಗಕ್ಕೆ ಪ್ರಿಯವೆನ್ನುವುದಾಗಲೀ ಸಮರ್ಪಕವೆನಿಸುವುದಿಲ್ಲ.

ಮಾಳಿಂಗರಾಯ ಹುಲಿಯ ಗಿಣ್ಣು ತಂದುಕೊಟ್ಟ ಬಗೆ ಒಂದು ಡೊಳ್ಳಿನ ಪದದ ಸಾಲುಗಳು ಹೀಗಿವೆ.

ಸಿಡಿಯಾಣ ಮಠದಾಗ ಸಿದ್ದಮಾಳಪ್ಪ ಸೇವಾ ಮಾಡ್ಯಾನಾಗ
ಕರಿಹುಲಿಗಿಣ್ಣ ಹುಲಿಮರಿ ಕೂನ ಗುರುವ ಬೇಡ್ಯಾನಾಗ
ಹೋಮದ ಕಂಬಳಿ ನೇಮದ ಬೆತ್ತ ಹಿಡಿದ ಮಾಳಪ್ಪ ಹೊಂಟಾನಾಗ
....
ಮಾಳಪ್ಪ ಹೊರ್ತಿ ನಿಂಬಾಳ ಗುಡ್ಡದ ಮ್ಯಾಲ ಹೋಗ್ಯಾನಾಗ
ಹುಲಿಮರಿ ಆಗಿ ಕೂಗ್ಯಾನಾಗ
ಗುಡಗ ಹೊಡೆದ ಹುಲಿ ಓಡಿ ಬಂದರ ಭಂಡಾರ ಹೊಡದಾನಾಗ
ಗೆಜ್ಜಿ ಗುಂಡಿಗಿ ಹಿಡದ ಮಾಳಪ್ಪ ಹಾಲ ಹಿಂಡ್ಯಾನಾಗ
ಹುಲಿಮರಿ ಕೊನೆ ತಂದಾನಾಗ

ಹುಲಿಹಾಲ ಹೊತಗೊಂಡ ಗುರುವಿನ ಸೇವಕ ಬಂದಾನಾಗ
ಹೊರಗೆ ಹೋಮಹೂಡಿ ಸಿದ್ದಮಾಳಪ್ಪ ಗಿಣ್ಣ ಕಾಸ್ಯಾನಾಗ
ಮಾಳಪ್ಪ ಗುರುವಿಗೆ ಉಣಸ್ಯಾನ ಆಗ
ಗುರುವಿನ ಉಣಿಸಿ ಸಿದ್ಧಮಾಳಪ್ಪ ಅಲಗ ಹಾದಾನಾಗ[೩೫]

ಹುಲಿಮರಿ ಕೊನೆ ಗುರುತು ತಂದು ಆ ಮರಿಗಳನ್ನು ಅವನು ಸಾಕಿದಂತೆ ತೋರುತ್ತದೆ. ಮಾಳಪ್ಪನನ್ನು ಎಡಕ್ಕೊಂದು, ಬಲಕ್ಕೊಂದು ಹುಲಿಮರಿಗಳ ಜೊತೆ ಚಿತ್ರಿಸಿರುತ್ತಾರೆ. ಹುಲಿಜಂತಿಯಲ್ಲಿ ಮತ್ತೆ ಬೇರೆ ಬೇರೆ ಬೀರದೇವರ ಗುಡಿಗಳಲ್ಲಿ ಭಿತ್ತಿಗಳ ಮೇಲೆ ಇಂಥ ಚಿತ್ರಗಳನ್ನು ಕಾಣಬಹುದು. ಅಲ್ಲದೆ, ಹುಲಜಂತಿ ಗ್ರಾಮಕ್ಕೆ ಆ ಹೆಸರು ಬರಲು ಮಾಳಪ್ಪ ಹುಲಿಗಳ ಜೊತೆ ಇರುತ್ತಿದ್ದುದೇ ಕಾರಣವಿರಬೇಕು ಎನ್ನುತ್ತಾರೆ. ಭಾಷಿಕ ಪುಷ್ಟಿಯೂ ಅದಕ್ಕೆ ದೊರಕುತ್ತದೆ. ಅದು ಹೀಗೆ ಹುಲಿಜೊತೆ > ಹುಲಿಜಂತಿ > ಹುಲಿಜತ್ತಿ > ಹುಲಜಂತಿ.

೩. ಶೀಲವಂತಿಯನ್ನು ಸೋಲಿಸಿದ್ದು

ಮಾಳಿಂಗರಾಯನ ತಪೋಭಂಗ ಮಾಡಲು ಹೋಗಿ ಶೀಲವಂತಿ ತಾನೇ ಸೋಲುತ್ತಾಳೆ. ಅದು ಪ್ರಭುದೇವ ಮಾಯಾವತಿಯರ ಕಥಾ ಸಂದರ್ಭವನ್ನು ನೆನಪಿಗೆ ತರುತ್ತದೆ. ... ಹುಲಿಜಂತಿ ಗ್ರಾಮವು ಮಾಳಪ್ಪದೇವನಿಗೆ ನೆಲೆಯಾದಂತೆ, ಸಿಡಿಯಾಣ ಶಿರಾಡೋಣ ಗ್ರಾಮವು ಶೀಲವಂತಿಗೆ ನೆಲೆಯಾಗಿ ಬಿಡುವುದು.

ಅಂತು ಮಾಳಪ್ಪನ ಸ್ವಂತ್ಹೋಗಿ
ತರಲೀನ ದೀಡ ತಾಸಿನಲ್ಲಿ -(ದ್ಯಾಮವ್ವ)
ದ್ಯಾದರ ಅಷ್ನ ಬರುವುದಿಲ್ಲ ಇಲ್ಲೆ -(ಪರಮೇಶ್ವರ)
ಬಂಡಿ ಹೊಡದಾರಾಗೋ
ಮಾಳಪ್ಪ ಭಗತಿವಾನ ಭವದಾಗೋ
ಬಂಡಿಯಗಾಲಿ ತುಂಡಾಗಿ ಬಿದ್ದಾವೋ
ಮುತ್ತಲಮೋರಿ ಹಳದಾಗೋ[೩೬]

ಅವಳ ಮೂಗುತಿ ಕಳೆದುಹೋಗುತ್ತದೆ. ಹಳ್ಳದಲ್ಲಿ ಹುಡುಕಾಡುತ್ತಾಳೆ. ನಿನ್ನುಡಿಯಲ್ಲಿಯೇ ಇದೆ ನೋಡು ಎನ್ನುತ್ತಾನೆ. ಮಾಳಪ್ಪ, ಶೀಲವಂತಿ ಸೋತು ಸಿಡಿಯಾಣದಲ್ಲಿಯೇ ಉಳಿಯುತ್ತಾಳೆ.

ಕೊಣ್ಣೂರ ಮಠದಾಗ ಮಾಳಿಂಗರಾಯ ಕೊಂಡ ಹಾರ್‍ಯಾನೇನರೀ
ಮುಂಡಗನೂರ ಮಡ್ಡಿಮ್ಯಾಗ ಉದಯ ಆದನೇನರೀ

ಕೊಣ್ಣೂರಲ್ಲಿ ಅಗ್ನಿ ಕುಂಡದಲ್ಲಿ ಹಾರಿ ಮುಂಡಗನೂರಿನಲ್ಲಿ ಪ್ರತ್ಯಕ್ಷವಾದುದು. ಜಡೆಸಿದ್ಧರನ್ನು ಸೋಲಿಸಿದ್ದು, ಅಲಗ ಹಾಯ್ದುದ್ದು, ಬಂಗಾಲಿ ವಿದ್ಯೆಯವರನ್ನು ಸೋಲಿಸಿದ್ದು ಮುಂತಾದ ವಿಷಯಗಳನ್ನು ಹೇಳುವ ಡೊಳ್ಳಿನ ಹಾಡುಗಳಿವೆ.

೪. ಮುಂಡಾಸ ಮಹಿಮೆ

ಸತ್ಯುಳ್ಳ ಶರಣ, ಸಿದ್ಧಮಾಳಪ್ಪ ಇಂಥ ಮಾತುಗಳನ್ನು ಹಾಡುಗಳಲ್ಲಿ ಪದೇ ಪದೇ ಕೇಳುವುದರಿಂದ ಅವನು ಮಾಡಿದ ಅನೇಕ ಪವಾಡಗಳನ್ನು ಕುರಿತಾದ ಹಾಡುಗಳನ್ನು ನೋಡಿದರೆ ಅವನೊಬ್ಬ ಯೋಗಿ ಪುರುಷನಿರಬೇಕೆನಿಸುತ್ತದೆ. ಆತನದು ಬಂಗಾಲಿ ಜಾದೂ ಅಲ್ಲ. ಅಲ್ಲಮಪ್ರಭುದೇವರ ಹಾಗೆ ಸಿದ್ಧಿ ಪುರುಷನೆಂದು ತೋರುತ್ತದೆ. ಹುಲಜಂತಿಯಲ್ಲಿ ಪ್ರತಿ ವರುಷ ದೀಪಾವಳಿ ಅಮವಾಸ್ಯೆಗೆ ಮಾಳಪ್ಪನ ಜಾತ್ರೆ ಕೂಡುತ್ತದೆ. ಅಮವಾಸ್ಯೆಯ ರಾತ್ರಿಯೇ ಈ ಪವಾಡ ನಡೆಯುತ್ತದೆ. ಸಾವಿರಾರು ಭಕ್ತರು ಬಹುದೂರದಿಂದ ಬರುತ್ತಾರೆ.

ಕೈಯ್ಯಾಗೆ ಅಲಗ ಹಿಡದಿದ್ದ ತನ್ನ ಹೊಟ್ಟೆಗೆ ಹೊಡದಿದ್ದ
ಭಂಡಾರ ಹೊಡದ ಅಲಗ ಕಿತ್ತಿದ್ದ

ಶಿವನು ಅವನ ಭಕ್ತಿಗೆ ಮೆಚ್ಚಿ ವರ್ಷಕ್ಕೊಮ್ಮೆ ಅವನಿಗೆ ಮುಂಡಾಸ ಸುತ್ತುತ್ತಾನೆ. ಆತನ ಭಕ್ತಿಯನ್ನು ಪ್ರಕಟಗೊಳಿಸುತ್ತಾನೆ. ಜತ್ತ ಸಂಸ್ಥಾನಿಕರು ಇದರ ರಹಸ್ಯವನ್ನು ಅರಿಯಲು ಹೋಗಿ ಕಷ್ಟಕ್ಕೆ ಗುರಿಯಾಗುತ್ತಾರೆ. ಅಂದಿನಿಂದ ಜತ್ತ ಸರ್ಕಾರದ ನೈವೇದ್ಯ ಮೊದಲು ಬಂದ ನಂತರವೇ ಉಳಿದವರ ನೈವೇದ್ಯ ಸ್ವೀಕರಿಸುವ ರೂಢಿ ಬಂದಿದೆಯಂತೆ.

ಹುಲ್ಲುಮಾನವರೆಲ್ಲ ಗುಲ್ಲ ಮಾಡೂದು ಕಂಡ ಕಳಸಕ ಸುತ್ತಿತೋ
ಜತ್ತ ಸರಕಾರನ ಸೊಕ್ಕ ಮುರಿಸಿತೋ ಅವನ ನೈವೇದ್ಯೆ
ಮೊದಲಿಗೆ ಬಂತೋ..............
ಹುಲಜಂತಿ ಊರಾಗ ಕವಿ ಭಾಳ ಶಿಸ್ತೋ
ಅಡಿವೆಪ್ಪ ಪೂಜಾರಿ ಹೇಳ್ಯಾನ ಮಸ್ತೋ
ಮಾಳಿಂಗರಾಯನ ಕಥಿ ಕೇಳಿರಿ ಕುಂತೋ
ವರ್ಷಕ್ಕೊಮ್ಮೆ ಜಾತ್ರೆ ನಡಸತಾನ ಮಸ್ತೋ

ಹುಲಜಂತಿ ಈಗ ಸೊಲ್ಲಾಪುರ ಜಿಲ್ಲೆಯ ಮಂಗಳವೇಢೆ ತಾಲೂಕಿನ ಒಂದು ಗ್ರಾಮ. ಬಿಜಾಪುರದಿಂದ ಉತ್ತರಕ್ಕೆ ನೇರವಾಗಿ ಕೊಂತೆವ್ವನ ಬಬಲಾದಿ, ಅಲ್ಲಿಂದ ಹಳ್ಳಿ ಎಂಬ ನಗರ, ಉಮದಿ ತರುವಾಯ ಹುಲಜಂತಿ ಗ್ರಾಮ ಸಿಕ್ಕುತ್ತದೆ. ಹಾಲಹಳ್ಳ ಹರಿದು ಭೀಮಾನದಿಗೆ ಕೂಡುತ್ತದೆ. ಇಲ್ಲಿ ಮಾಳಿಂಗರಾಯನ ಸಮಾಧಿ ಇದೆ. ಮೂರ್ತಿ ಇಲ್ಲ. ಗುಡಿಯ ಪೂಜಾರಿಗಳಿಗೆ ಮಾರಾಯಗೊಳ ಎನ್ನುತ್ತಾರೆ. ಕೋಟಿ ಕೋಟಿ ಭಕ್ತರು ಅಲ್ಲಿ ಸೇರುತ್ತಿದ್ದರಂತೆ. ಯಾರೋ ಒಬ್ಬರು ಎಣಿಸಿದರಂತೆ ಅವರಿಗೆ ಕೋಟ್ಯಾಗೋಳ ಎಂಬ ಅಡ್ಡ ಹೆಸರು ಬಂತಂತೆ. ಈಗಲೂ ಆ ಅಡ್ಡ ಹೆಸರಿನವರಿದ್ದಾರೆ. ಸ್ವಾಮಿಗೋಳ, ಅಯ್ಯಗೋಳ ಎಂದು ನಮ್ಮಲ್ಲಿ ರೂಢಿಯಲ್ಲಿರುವ ಹಾಗೆ ಇದು.

ಮಾಳಪ್ಪನಿಗೆ ಬಂಜೆಯರು ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಅಂಥ ಬಂಜೆಯರು ತಮಗೆ ಹುಟ್ಟಿದ ಮಕ್ಕಳಲ್ಲಿ ಒಬ್ಬನನ್ನು ಮಠಕ್ಕೆ ಸೇವೆಗೆಂದು ಅರ್ಪಿಸಬೇಕು. ಅವರಿಗೆ ಶಿಷ್ಯ ಮಕ್ಕಳು ಆಳುಮಕ್ಕಳು ಎನ್ನುತ್ತಾರೆ.

ಅವರ ಸಮಾಧಿಗಳ ಪಕ್ಕದಲ್ಲಿವೆ. ಜಾತ್ರೆಯಲ್ಲಿ ಭಂಡಾರ ಉಣ್ಣೆ ಹಾರಿಸುತ್ತಾರೆ. ಮುಂಡಾಸ ಸುತ್ತುವ ರಾತ್ರಿ ಗುಡಿಯ ಸಮೀಪ ಯಾರೂ ಉಳಿಯುವುದಿಲ್ಲ. ರಾತ್ರಿ ದೂರದ ಹೊಲಗಳಲ್ಲಿ ತಂಗಿದ್ದು ಬೆಳಗಿನ ಜಾವ ಧಾವಿಸಿ ಬರುತ್ತಾರೆ. ಕಡೋಲಿ ಜಾತ್ರೆಯಲ್ಲಿ ಅಲಗು ಹಾಯುವುದನ್ನು ನೋಡಲು ಜನ ಸೇರುತ್ತಾರೆ.

ಅನೇಕ ಊರುಗಳಲ್ಲಿ ಮಾಳಿಂಗರಾಯನ ಗುಡಿಗಳಿವೆ. ಗರ್ಭಗುಡಿಯಲ್ಲಿ ಕರಿಯ ಕಂಬಳಿಯ ಗದ್ದುಗೆಯು ಇದ್ದೇ ಇರುತ್ತದೆ. ಪ್ರತಿ ರವಿವಾರ ಡೊಳ್ಳಿನ ಹಾಡುಗಳನ್ನು ಹಾಡುತ್ತಾರೆ. ಅಮಾವಾಸ್ಯೆಯ ರಾತ್ರಿ ವಿಶೇಷ ಕಾರ್ಯಕಲಾಪಗಳಿರುತ್ತವೆ.

ಬೇರೆ ಬೇರೆ ಉತ್ಸವದ ಸಂದರ್ಭಗಳಲ್ಲಿ ಇಂಥ ಹಾಡಿನವರನ್ನು ಕರೆಸಿ ಹಾಡಿಸುತ್ತಾರೆ. ೮-೧೦ ಜನರು ಒಂದು ಮೇಳದಲ್ಲಿರುತ್ತಾರೆ. ಎರಡೆರಡು ಮೇಳಗಳು ಎದುರಾಗಿ ಪೈಪೋಟಿಯಿಂದ ಸೂರ್ಯ ಉದಯದವರೆಗೂ ಹಾಡುಗಳನ್ನು ಹೇಳುತ್ತಾರೆ. ಭಂಡಾರದ ಲೇಪನ ಮೇಳದ ಮಧ್ಯಭಾಗದಲ್ಲಿ ಬೆಲ್ಲದ ಪುಡಿ ಸಾಮಾನ್ಯವಾಗಿ ಎದ್ದು ಕಾಣುವ ಅಂಶಗಳು. ಹಾಲುಮತದವರಲ್ಲದೆ ಬ್ರಾಹ್ಮಣರನ್ನು ಮೊದಲು ಮಾಡಿಕೊಂಡು ಶೂದ್ರರವರೆಗೆ ಎಲ್ಲ ಜಾತಿಯ ಜನರು ಈ ಮೇಳಗಳನ್ನು ಕಟ್ಟಿಕೊಂಡು ಹೆಸರು ಗಳಿಸಿದ್ದಾರೆ.

ಮಾಳಪ್ಪ, ಮಾಳಿಗ, ಮಾಳಯ್ಯ, ಮಾಳವ್ವ ಈ ಹೆಸರುಗಳು ಈಗಲೂ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ರಾಜ್ಯಗಳಲ್ಲಿ ಬಳಕೆಯಲ್ಲಿವೆ. ಶಿವಮೊಗ್ಗೆಯವರೆಗೂ ಬೀರಪ್ಪ ಮಾಳಿಂಗರಾಯನ ಗುಡಿಗಳು ಕಾಣಸಿಗುತ್ತವೆ. ಇದು ಬೀರಪ್ಪ ಮಾಳಿಂಗರಾಯರ ಕೀರ್ತಿಯ ವ್ಯಾಪ್ತಿಯನ್ನು ಸೂಚಿಸುತ್ತದೆ.

ಮಾಳಪ್ಪ ಎನ್ನುವುದೇ ಮೂಲ ಶಬ್ದ. ಅದು ಮಾಳಪ್ಪ > ಮಾಲಿಂಗ > ಮಾಳಿಂಗ > ಮಾಳಿಂಗರಾಯ ಹೀಗೆ ಮಾರ್ಪಾಡಾಗಿರಬೇಕು. 'ರಾಯ' ಎನ್ನುವ ಪದ ವಿಜಯನಗರದ ಅರಸರ ಕಾಲದಿಂದೀಚೆಗೆ ಪ್ರಚಾರದಲ್ಲಿ ಬಂದಿರಬೇಕು. ಕೃಷ್ಣಾ, ಭೀಮಾ, ಮಲಪ್ರಭಾ, ಘಟಪ್ರಭಾ ಈ ನದಿ ತೀರಗಳಲ್ಲಿ ವಿಶೇಷವಾಗಿ ಮಾಳಿಂಗರಾಯ, ಬೀರದೇವರ ಗುಡಿಗಳನ್ನು ಕಾಣುತ್ತೇವೆ. ಬೀರಪ್ಪ ಮಾಳಿಂಗರಾಯ ಇವರಿಬ್ಬರೂ ಚಾರಿತ್ರಿಕ ವ್ಯಕ್ತಿಗಳು. ಇವರನ್ನೂ ಪೌರಾಣಿಕ ವ್ಯಕ್ತಿಯಂತೆ ಚಿತ್ರಿಸಿದ್ದು ಕಂಡುಬರುತ್ತದೆ.

ಬೀರೇಶ್ವರನು ಶಿಷ್ಯನನ್ನು ಪಡೆದದ್ದು

ಇಲ್ಲಿ ಬರುವ ಸಂದೇಶಗಳಲ್ಲಿ ಬೀರಪ್ಪನಂಥ ಗುರು ಮಾಳಿಂಗರಾಯನಂಥ ಶಿಷ್ಯ ಅಪರೂಪವೆಂದು ಹೇಳಲಾಗಿದೆ. ಒಬ್ಬ ಗುರುವಿಗೆ ಉತ್ತಮ ಶಿಷ್ಯನಾಗಿ ಮಾಳಿಂಗರಾಯನೂ ಶಿಷ್ಯತ್ವದ ವ್ಯಕ್ತಿತ್ವವನ್ನು ಪಡೆದವನಾಗಿದ್ದಾನೆ. ಗುರು ದೇವರಾಗಿ, ಶಿಷ್ಯ ಪೂಜಾರಿಯಾಗಿ ಕಾಣುತ್ತಾರೆ. ಭಕ್ತನ ಸ್ಥಾನ ಮಾತ್ರ ಸಾಮಾನ್ಯ.

ಗುರು ಶಿಷ್ಯ ಭಕ್ತ

ದೇವರು ಪೂಜಾರಿ ಭಕ್ತ

ನಿಷ್ಠೆ, ವಿಶ್ವಾಸ, ತ್ಯಾಗ, ಸ್ಥೈರ್ಯ ಗುಣಗಳಿಗೆ ಮಾಳಿಂಗರಾಯನದು ಹೇಳಿ ಮಾಡಿಸಿದ ವ್ಯಕ್ತಿತ್ವ.

ಶಿವನ ಅನುಗ್ರಹ

ಬೀರಣ್ಣನು ಚಿಂಚಲಿಸೂರಿನಲ್ಲಿ ಅಕ್ಕಮಾಯವ್ವನನ್ನು ಬಿಟ್ಟು ಬರುವಾಗ ಆಕೆ ತನ್ನಲ್ಲಿರುವ ಕುರಿಗಳನ್ನು ಬೀರಣ್ಣನಿಗೆ ಒಪ್ಪಿಸುತ್ತಾಳೆ. ಆತ ತನ್ನ ಗೆಳೆಯ ಬಸವಣ್ಣನಿಗೆ ಕರೆದು ಕುರಿ ಕಾಯಲು ಹಚ್ಚುತ್ತಾನೆ. ೧೨ ವರ್ಷಗಳಾದರೂ ಕುರಿಗಳು ಬೆಳೆಯಲಿಲ್ಲ. ಕೊನೆಗೆ ಅಕ್ಕನನ್ನು ಕರೆತಂದು ಹಬ್ಬ ಮಾಡುತ್ತಾನೆ. ಮಾಯವ್ವನನ್ನು ಬಪ್ಪಣ್ಣನಿಂದ ಕಳುವಿ ಆತ ತಿರುಗಿ ಬಂದ ನಂತರ ಹೆಂಡತಿ ಹಾಗೂ ಗೆಳೆಯನಿಗೆ ಹೇಳಿ ಕುರಿಗಳನ್ನು ಹೊಡೆದುಕೊಂಡು ಮನೆಬಿಟ್ಟು ಹೊರ ಹೋಗುತ್ತಾನೆ. ಕಾಡುಗಿರಿಗೆ ಬಂದು ಅಲ್ಲಿಯ ಗೌಡನಲ್ಲಿ ಉಳಿಯುತ್ತಾನೆ. ೧೨ ವರ್ಷಗಳ ನಂತರ ಗೌಡಗಿರಿಗೆ ಬಂದು ಅಲ್ಲಿಯ ಹುತ್ತದ ಮುಂದೆ ಕುರಿಗಳನ್ನು ಬಿಟ್ಟು ಆತನು ತಪಸ್ಸಿಗೆ ಕುಳಿತುಕೊಳ್ಳುತ್ತಾನೆ. ಅವನ ಮೈಯಲ್ಲಿ ಹುತ್ತವೇರುತ್ತದೆ. ಶಿವನಿಗೆ ಅರಿವಾಗಿ ಬಂದು ಹುತ್ತಿನ ಮೇಲೆ ಕೈಯಿಡುತ್ತಾನೆ. ಹುತ್ತು ಬಿಚ್ಚಿ ಬೀರಣ್ಣ ಕಾಣಿಸುವನ್ನು. ಶಿವನು ಅವನ ತಪಸ್ಸು ಮೆಚ್ಚಿ ಕಾರಣ ಕೇಳುತ್ತಾನೆ. ತನಗೆ ತನ್ನಷ್ಟೇ ಸಾಮರ್ಥ್ಯವುಳ್ಳ ಒಬ್ಬ ಶಿಷ್ಯ ಬೇಕೆಂದು ಕೇಳಿದನು. ಅದಕ್ಕೆ ಶಿವ ಮಾಳಿಂಗರಾಯನ ಪರಿಚಯ ಹೇಳಿ ಜಲ್ಮಾಯಿ ಕೆರೆಯ ಕೆಳಗೆ ಡೋಣಜ ಕೆರೆಯ ಮೇಲೆ ಮಾಳಿಂಗರಾಯ ಬಿಳಿಯ ಕುದುರೆ ಏರಿ, ಹಸಿರು ನಿಶಾನೆಯೊಂದಿಗೆ ಬರುವ ಸಮಾಚಾರ ತಿಳಿಸಿದ್ದನು. ಬೀರಪ್ಪನಿಗೆ ಎಕ್ಕೆಯ ಬನದಲ್ಲಿ ಗುಂಡೆರಳಿಯಾಗಿ ನಿಲ್ಲಲು ಸಲಹೆ ಕೊಡುತ್ತಾನೆ. ಹೀಗೆ ನಿಂತ ಬೀರಪ್ಪನಿಗೆ ಮಾಳಿಂಗರಾಯ ಬಿಲ್ಲು ಹಿಡಿದು ಬೆನ್ನುಹತ್ತಿದನು. ಕೆರೆಯಲ್ಲಿ ಜಿಗಿದು ಪಾತಾಳಕ್ಕೆ ಓಡಿದರೂ ಮಾಳಿಂಗರಾಯ ಬಿಡದೇ ಬೆನ್ನು ಹತ್ತುತ್ತಾನೆ. ಆಗ ಬೀರಪ್ಪ ತನ್ನ ನಿಜ ರೂಪ ಹೊತ್ತು ನಿಲ್ಲುತ್ತಾನೆ. ಮಾಳಪ್ಪ ಬೀರಪ್ಪನಿಗೆ ಶರಣಾಗುತ್ತಾನೆ.

ಬೀರಪ್ಪನನ್ನು ಕೂಡಿದ ಮೇಲೆ ಮಾಲಿಂಗರಾಯನು ತನ್ನ ತಾಯಿಗೆ ತಿಳಿಸಿ ಜಲ್ಮಾಯಿ ಕೆರೆಯ ಮೇಲೆ ೧೨೦೦ ದಂಡಿನ ಜೊತೆಗೆ ಭೋಜನದ ವ್ಯವಸ್ಥೆ ಮಾಡಿಸಿದನು. ಬೀರಪ್ಪನು ತಾನು ಕಾಯ್ದು ಕುರಿಗಳು ಗೌಡಗಿರಿಯ ಅಡವಿಯಲ್ಲಿದ್ದು ಅವನ್ನು ಹೊಡೆದುಕೊಂಡು ಬರುವಂತೆ ಹೇಳುವನು. ಅವನ್ನು ತರಿಸಿ ಬಿಜ್ಜಳಗುಂತಿಯಲ್ಲಿ ಸಾಲದೊಡ್ಡಿ ಹಾಕಿ, ಕುರಿಗಳ ವ್ಯವಸ್ಥೆ ಮಾಡಿ ತನ್ನ ಮಕ್ಕಳನ್ನು ಕುರಿಕಾಯಲು ಹಚ್ಚಿದನು. ಅಲ್ಲಿಂದ ಸಿಡಿಯಾಣಕ್ಕೆ ಗುರುವನ್ನು ಕರೆದುಕೊಂಡು ಬಂದು ಗುಡಿ ಕಟ್ಟಿಸಿ ಇಡುವನು. ಕಾಳಿನಾರಾಯಣ, ಭರಮದೇವರು ಶಿವನ ಪೂಜೆ ಮಾಡುವುದು ಹಾಗೂ ಭೂಲೋಕದಲ್ಲಿ ಮಾಳಿಂಗರಾಯ ಬೀರಪ್ಪನ ಪೂಜೆ ಮಾಡುವುದು ಒಂದೇ ಎಂಬಂತೆ ವಿವರಣೆಗಳು ಬರುತ್ತವೆ.

ವಿವಿಧ ಪರೀಕ್ಷೆಗಳು

ಬೀರದೇವರು ಮತ್ತು ಮಾಳಿಂಗರಾಯರದು ಒಂದು ಆದರ್ಶ ಗುರು ಶಿಷ್ಯರ ಜೋಡಿ. ಗುರು ಶಿಷ್ಯನನ್ನು ನಾನಾ ಪರೀಕ್ಷೆಗೆ ಗುರಿಪಡಿಸುತ್ತಾನೆ. ಶಿಷ್ಯನಿಗೆ ಗುರುವಿನ ಪಟ್ಟು ಚೆನ್ನಾಗಿ ಗೊತ್ತು. ಅವನು ಅದರಲ್ಲಿ ಯಶಸ್ವಿಯಾಗುತ್ತಾನೆ.

ಇರುವೆ ಹೆಜ್ಜೆ ಇರುವೆಗೆ ಗೊತ್ತು |
ಗುರುವಿನ ಹೆಜ್ಜೆ ಮಾಳಪ್ಪಗ ಗೊತ್ತು |

ಗುರು ಬೀರದೇವರು ಶಿಷ್ಯನನ್ನು ಅಸಾಧ್ಯವೆನ್ನುವಂತಹ ಕಾರ್ಯವನ್ನು ಮಾಡುವಂತೆ ಪರೀಕ್ಷೆಗೆ ಒಡ್ಡುತ್ತಾನೆ. ಹುಲಿಯ ಹಾಲಿನ ಗಿಣ್ಣು ಮಾಡಿಕೊಡು ಎಂದು ಕೇಳುತ್ತಾನಂತೆ. ಆಗ ಮಾಳಿಂಗರಾಯನು ಗದ್ದಿಗಿ ಏರಿದ ಗುರುವಿಗೆ ಊಟಕ್ಕೆ ಹುಲಿಗಿಣ್ಣು ಹಾಗೂ ಆಟಕ್ಕೆ ಹುಲಿಮರಿ ತರಲು ಪ್ರಯಾಣ ಹೊರಡುವನು. ನಿಂಬರ್ಗಿ ಭೀಮರಾಯ, ಮಾಳಮ್ಮರು ಅವನಿಗೆ ಹುಲಿ ಇರುವುದು ಎಲ್ಲಿ ಎಂಬುದನ್ನು ಹೇಳಿಕೊಟ್ಟರು. ಒಂದು ಹುಲಿ ಈದು ಇನ್ನೂ ಮರಿಗಳು ಕಣ್ಣು ತೆರೆಯುವ ಮುನ್ನವೇ ಮೇಯಲು ಹೋಗಿತ್ತು. ಮಾಳಪ್ಪ ಆ ಮರಿಗಳ ಸಮೀಪ ಹೋಗುತ್ತಲೇ ಒಂದು ಹಾವು ಆ ಮರಿಗಳನ್ನು ತಿನ್ನಲು ಬರುತ್ತಿರುವುದನ್ನು ಕಂಡು ಅದಕ್ಕೆ ಭಂಡಾರ ಒಗೆದನು. ಅವುಗಳಿಗೆ ಕಣ್ಣು ಬಂದವು. ತಾಯಿ ಹೊರಗಿನಿಂದ ಬಂದಾಗ ಮರಿಗಳು ಮಾಳನಿಂದ ತಾವು ಉಳಿದಿರುವ ವಿಷಯ ಹೇಳಿದ್ದರಿಂದ, ಹುಲಿ ಮಾಳಿಂಗರಾಯನ ಇಷ್ಟದಂತೆ ತನ್ನ ಹಾಲು ಒದಗಿಸಿದ್ದಲ್ಲದೆ ಮರಿಗಳನ್ನು ಆತನಿಗೆ ಕೊಟ್ಟಿತು. ಅವನ್ನು ತಂದು ಗುರುವಿನ ಗದ್ದುಗೆ ಮೇಲೆ ಕೂಡಿಸಿ, ಹುಲಿಯ ಹಾಲು ಮತ್ತು ಹುಲಿಯ ಮರಿಗಳನ್ನು ಸಲ್ಲಿಸಿ, ಪೂಜೆ ಮಾಡಿ ಆರತಿ ಬೆಳಗುವಾಗ ಈ ಬೆಳಕು ಕೈಲಾಸದಲ್ಲಿ ಬಿದ್ದಿತು. ಪಾರ್ವತಿ ಇದೆಂತಹ ಬೆಳಕು ಎನ್ನಲು ಶಿವನು ಮಾಳಿಂಗರಾಯನ ಸಮಾಚಾರ ತಿಳಿಸುವನು. ಆಗ ಪಾರ್ವತಿ ಶಿವನ ಮಗಳು ಶೀಲವಂತಿಯನ್ನು ಮಾಳನನ್ನು ಪರೀಕ್ಷಿಸಲೆಂದು ಕಳುಹಿಸಿಕೊಡುವಳು. ಈ ಪ್ರಸಂಗ ಅಲ್ಲಮಪ್ರಭುವನ್ನು ಪರೀಕ್ಷಿಸಲು ಮಾಯೆ ಭೂಮಿಗೆ ಬಂದ ಪ್ರಸಂಗ ನೆನಪಿಗೆ ತರುತ್ತದೆ.

ಮಾಳನನ್ನು ಭೇಟಿಯಾಗಲು ಶೀಲವಂತಿ ಸಿಡಿಯಾಣಕ್ಕೆ ಬಂದರೆ ಆತನು ಮಾರುವೇಷದಲ್ಲಿ ಬಂದು ಮಾಳನು ಇದೀಗ ಪೂಜೆ ಮುಗಿಸಿಕೊಂಡು ಮುಂದಿನ ಮಠಕ್ಕೆ ಹೋದನೆಂದು ಹೇಳುತ್ತಾನೆ. ಆಕೆ ಅಲ್ಲಿಗೆ ಬರಲು ಮತ್ತೆ ಮುಂದಿನ ಮಠಕ್ಕೆ ಹೋದನೆನ್ನುತ್ತಾನೆ. ಹೀಗೆಯೇ ಒಂಬತ್ತು ಮಠಗಳಿಗೂ ಅಡ್ಡಾಡಿಸುತ್ತಾನೆ. ಆಕೆ ನಿರಂತರವಾಗಿ ತನ್ನ ಹುಡುಕಾಟದಲ್ಲಿರುವುದನ್ನು ಗಮನಿಸಿ ಮಾಳಪ್ಪನು ತನಗೆ ಕಾಪಾಡಬೇಕೆಂದು ಬೀರಪ್ಪನ ಮೊರೆ ಹೋಗುತ್ತಾನೆ. ಆದರೆ ಬೀರಪ್ಪನು ಅದು ತನ್ನಿಂದ ಆಗದ ಮಾತೆಂದೂ ಆದರೆ ನೀನು ಉಳಿದು ಬಂದರೆ, ನನ್ನ ಪೂಜೆ ಮಾಡಬೇಕೆಂದೂ ಹೇಳುತ್ತಿರುತ್ತಾನೆ. ಕೊನೆಗೆ ಮಾಳಪ್ಪನು ಹನುಮಂತನ ಮೊರೆ ಹೊಕ್ಕನು. ಹನುಮಂತನು ಮಾಳನನ್ನು ಕೊಡುವುದಿಲ್ಲ ಎಂದು ಶೀಲವಂತಿಗೆ ಹೇಳುವನು. ಆದರೂ ಆಕೆ ಅಲ್ಲಿಯೇ ಗುಡಿಯ ಮುಂದಿನ ಗಿಡದ ಬುಡದಲ್ಲಿ ಮಲಗಿ ನಿದ್ರಿಸುವಾಗ ಆಕೆಯ ನತ್ತನ್ನು ತೆಗೆದು ಅವಳ ಉಡಿಯಲ್ಲಿಯೇ ಹಾಕುವನು.

ಆಕೆ ಎದ್ದು ಮುಖ ತೊಳೆಯುವಾಗ ನತ್ತು(ಮೂಗುತಿ) ಕಾಣದೆ ಗಾಬರಿಯಾದಾಗ ಮಾಳನು ಅದು ನಿನ್ನ ಉಡಿಯಲ್ಲಿಯೇ ಇದೆ ಎಂದು ಎಚ್ಚರಿಸುವನು. ಆಕೆ ನತ್ತು ಇಟ್ಟುಕೊಂಡು ತಿರುಗಿ ನೋಡಿದರೆ ಅಲ್ಲಿ ಸ್ವುರದ್ರೂಪಿಯಾದ ಮಾಳನೇ ಕಾಣುವನು. "ನೆರಿಯಗಡ್ಡದ ಹಿರಿಯ ಬಾ ನನ್ನ ಕರಿಯ ಗಡ್ಡದ ಎಳಿಯಾನೆ" ಎಂದು ಹಾಡಿ ನೀನೆ ನನ್ನ ಅಣ್ಣನೆಂದು ಶರಣಾಗುವಳು.

ಕೊನೆಗೆ ಪಾರ್ವತಿಯೇ ಮಾಳನನ್ನು ಪರೀಕ್ಷಿಸಿ ಬಯಸಿದಾಗ ಶಿವನು ಜೊತೆಗೆ ಬಂದನು. ಇಬ್ಬರೂ ಕೂಡಿ ಮೈಯೆಲ್ಲ ಹುಣ್ಣಾದ ಮುದುಕ ಮುದುಕಿಯರಾಗಿ ಬೀರಪ್ಪನ ಗುಡಿಯ ಹತ್ತಿರ ಕುಳಿತರು. ಇದರಿಂದ

ಬೀರಪ್ಪನಿಗೆ ಹೊಲಸು ವಾಸನೆ ಬಡಿದು ಆತ ಕ್ರೋಧಗೊಂಡನು. ಆದರೆ ಮಾಳಪ್ಪ ಬಂದು ಅವರಿಬ್ಬರನ್ನು ಎತ್ತಿಕೊಂಡೊಯ್ದು ಬೀರಪ್ಪನ ಮಗ್ಗುಲಲ್ಲಿಯೇ ಇಳಿಸಿದನು. ತನ್ನ ದೇಹದ ಆಸೆ ಬಿಟ್ಟು ಹತಿಯಾರ ಚೆಲ್ಲಾಡಿ ಬೆನ್ನಲ್ಲಿ ಬೆಳಕು ತೋರಿದನು. ಶಿವನೇ ಎದ್ದು ಮಾಳನ ಕೈಹಿಡಿದನು. ಪ್ರತಿವರ್ಷ ದೀಪಾವಳಿಗೆ ನೀನು ಬರಬೇಕೆಂದು ಭಾಷೆ ಪಡೆದನು.

ಬೀರಪ್ಪನು ಮಾಳಿಂಗರಾಯನಿಂದ ಗೀಜಗನಹಳ್ಳಿಯ ಖಾಸಾಬಾಗದ ಹೂ ಮತ್ತು ನಾಗರಬಾವಿಯ ನೀರಿನಿಂದ ಪೂಜೆ ಬಯಸುತ್ತಾನೆ. ಮಾಳಿಂಗರಾಯ ಅದಕ್ಕೆ ಒಪ್ಪಿ ಪೂಜೆ ಮಾಡಿ, ಗಂಜಾಬುಡ್ಡಿ ಸೇದಲು ಕೊಡುತ್ತಾನೆ. "ಇಟ್ಟಲ್ಲಿ ಇರಬೇಕು ಕರೆದಲ್ಲಿ ಬರಬೇಕು" ಎಂದು ವರವ ಪಡೆದು ಗೀಜಗನಹಳ್ಳಿಗೆ ಹೊರಡುತ್ತಾನೆ. ಈ ಸಂದರ್ಭ ಮತ್ತು ಈ ಸಂದರ್ಭದಿಂದ ಮುಂದೆ ಮಾಳಿಂಗರಾಯ ಬೀರಪ್ಪ ಮತ್ತು ಆತ ಬೀರಪ್ಪನ ಮೇಲಿಟ್ಟ ಗಾಢವಾದ ಭಕ್ತಿಗಳು ವ್ಯಕ್ತವಾಗುತ್ತವೆ. ಬೀರಪ್ಪನು ಮಾಳಿಂಗರಾಯನ ಬೆನ್ನ ಹಿಂದೆ ಇರುವ ರೀತಿ ಅವನಿಗೆ ಸಂಕಷ್ಟಗಳು ಬಂದಾಗ ಕಾಪಾಡುವ ರೀತಿಯನ್ನು ಕಾಣುತ್ತೇವೆ. ಮಾಳಿಂಗರಾಯನಿಗೆ ಅನೇಕ ತೊಂದರೆಗಳನ್ನು ಒಡ್ಡುವ ಬೀರಣ್ಣ ಅದರಲ್ಲೆಲ್ಲ ಗೆದ್ದು ಬರುವ ಮಾಳಿಂಗರಾಯನ ಸೃಷ್ಟಿಯಲ್ಲಿ ಈ ಮಾತು ಮಗ್ನವಾಗಿದೆ ಎನಿಸುತ್ತದೆ. ಹೀಗಾಗಿ ಬೀರಪ್ಪನೇ ಮಾಳಿಂಗರಾಯನ ಸಾಮರ್ಥ್ಯವನ್ನು ಪ್ರಪಂಚಕ್ಕೆ ತೋರಿಸುವ ತಂತ್ರ ಹೂಡಿದಂತೆ ಕಾಣುತ್ತದೆ.

ಖಾಸಾಬಾಗದ ಹೂ, ನಾಗರಬಾವಿ ಶೀತಾಳ ತರಲು ಮಾಳಿಂಗರಾಯ ಹೊರಟಾಗ ಬೀರಣ್ಣ ತಾನು ಸುಮ್ಮನೆ ಹೇಳಿದೆ ಬೇಡ ಎಂದು ಹೇಳಿದರೂ ಮಾಳಿಂಗರಾಯ ಕೇಳದೆ ಹಾಗೇ ಮುಂದೆ ಹೊರಟನು. ಮಾಳ ಹೋಗುವ ದಾರಿಗೆ ರಿಕ್ಕು ಚೇಳುಗಳನ್ನು ಹಾಕಿದನು. ಹಾವು ಹರಿಸಿದನು. ಮೋಡವನ್ನು ಕರೆದು ಮಳೆ ಬರಿಸಿದನು. ಇದೆಲ್ಲದಕ್ಕೂ ಮಾಳ ಮಣಿಯದಿದ್ದಾಗ ತಾನು ತಿರುಗಿ ತೇಜಿ ಕುದುರೆ ಏರಿ ಸಿಡಿಯಾಣಕ್ಕೆ ಬಂದನು. ಮಾಳನು ಹಿಂದೆ ಸರಿಯದ ಖಾಸಾಬಾಗದ ಹೂ, ನಾಗರಬಾವಿ ಸೀತಾಳ ಪಡೆದು ಮರಳಿ ಬರುವುದನ್ನು ಕಂಡು ಬೀರಪ್ಪನು ಮತ್ತೆ ಮಳೆಗರೆಸಿದನು. ಆದರೆ ಮಾಳ ಮತ್ತೆ ಗುರುವನ್ನೇ ಬೀರಪ್ಪ ಸ್ಮರಿಸಿ ಇದೆಲ್ಲವನ್ನೂ ದಾಟಿ ಬಂದನು. ಆದರೆ ಬೀರಪ್ಪ ಗುಡಿ ಬಿಟ್ಟು ಹೋಗಿ ಹುತ್ತಿನಲ್ಲಿ ಹಾವಾಗಿ ಕುಳಿತನು. ಮಾಳಪ್ಪನು ಗುಡಿಗೆ ಬಂದು ನಾನು ಗುರುವಿಗಾಗಿ ಹೆಂಡಿರು ಮಕ್ಕಳನ್ನು ಬಿಟ್ಟು ಬಂದರೆ ತಾನೇ ಇಲ್ಲವೆಂದು ಬೇಸರಗೊಳ್ಳುತ್ತಾನೆ. ಕೂಡಲೇ ಬೀರಣ್ಣ ಗುಡಿಗೆ ಬಂದು ಗದ್ದುಗೆ ಪೂಜೆ ಸ್ವೀಕರಿಸುತ್ತಾನೆ.

ಮಾಳಿಂಗರಾಯನ ಮೇಲೆ ಮುನಿಸುಗೊಂಡ ಅವನನ್ನು ಕಾಡುವ ಬೀರಣ್ಣ ಆತನು ತನ್ನನ್ನು ನೆನಸಿಕೊಂಡಾಗಲೆಲ್ಲ ಶಿಷ್ಯನ ಆತಂಕಗಳನ್ನು ದೂರ ಮಾಡುತ್ತಾ ಹೊರಟ್ಟಿದ್ದಾನೆ. ಇದನ್ನು ಗಮನಿಸಿದಾಗ ತನ್ನ ಶಿಷ್ಯ ಮಾಳಿಂಗರಾಯನ ಮಹಿಮೆ ತೋರಲು ಬೀರಪ್ಪ ಹೀಗೆ ಮಾಡುತ್ತಿದ್ದಾನೇನೋ ಎನಿಸುತ್ತದೆ. ಇಷ್ಟು ಬೀರಪ್ಪ ಮತ್ತು ಮಾಳಿಂಗರಾಯರಿಗೆ ಸಂಬಂಧಿಸಿದ ನೇರವಾದ ಸಂಗತಿ. ಗುರುಶಿಷ್ಯರಿಬ್ಬರೂ ಲೋಕಕಲ್ಯಾಣ ಬಯಸುವವರು. ಅಸಾಮಾನ್ಯ ಸಾಮರ್ಥ್ಯವುಳ್ಳವರು ಎಂಬ ಸಂಗತಿ ಇದರಿಂದ ತಿಳಿದುಬರುತ್ತದೆ. ಮಾಳಿಂಗರಾಯ ನೇರವಾಗಿ ಅವನ ಗುರು ಬೀರಪ್ಪನು ಶಿಷ್ಯನ ರಕ್ಷಕನಾಗಿ ಕಾಣಿಸಿಕೊಳ್ಳುತ್ತಾನೆ. ಒಮ್ಮೊಮ್ಮೆ ಸಮರ್ಥನಾದ.

ತನ್ನಷ್ಟೇ ಶಕ್ತಿಶಾಲಿಯಾದ ಶಿಷ್ಯನ ಇಚ್ಛೆಯೇ ತನ್ನಿಚ್ಛೆಯಾಗಿ ಬೀರಣ್ಣ ಸ್ವೀಕರಿಸುತ್ತಾನೆ. ಡಂಕನಾಡು ದೈಗೊಂಡನು ಶ್ರೀಮಂತಿಕೆ ಬೇಡಿ ಬಂದಾಗ ತನ್ನ ಮನಸ್ಸಿಲ್ಲದಿದ್ದರೂ, ಮಾಳಿಂಗರಾಯನ ಮನಸ್ಸನ್ನು ತೆಗೆದುಹಾಕಲು ಆಗದೆ ಸಂಪತ್ತನ್ನು ದಯಪಾಲಿಸುತ್ತಾನೆ. ದೈಗೊಂಡ ಇಬ್ಬರಿಗೂ ಮರೆತಾಗ ಹಬ್ಬದಾಸೆಗಾಗಿ ದೈಗೊಂಡನಿಗೆ ಹರಿಸಲು ಹೇಳಿದ ಬಗ್ಗೆ ಬೀರಣ್ಣ ಒಂದು ಮಾತನಾಡಿದರೆ, ಮಾಳಿಂಗರಾಯ ನೇರವಾಗಿ ನೀನು ನನ್ನ ಹಿಂದೆ ಬರಬೇಕೆಂದು ಹೇಳಿ ಡಂಕನಾಡಿಗೆ ಹೋಗುತ್ತಾನೆ. ಅಲ್ಲಿ ದೈಗೊಂಡನ ಆಳುಗಳು ದೈಗೊಂಡನಿಂದ ಅಪಾಯವೊದಗಿದಾಗ ಮತ್ತೆ ತಾನೇ ಅವನ ಬೆನ್ನು ಹಿಂದೆಯಿದ್ದು ಕಾಪಾಡುತ್ತಾನೆ. ಮಾಳಪ್ಪ ಕ್ಯಾಣಗನೂರಿನಿಂದ ಸುರಂಗ ಮಾರ್ಗದಿಂದ ಮುಂಡಗನೂರ ಮಠದಲ್ಲಿ ತೇಲಿದನು. ಅಲ್ಲಿಯ ಒಂದು ಕಲ್ಲಿನ ಮೇಲೆ ಕುಳಿತಿದ್ದನು. ಒಬ್ಬ ಭಕ್ತನು ಬೀರಪ್ಪನಿಗಾಗಿ 'ಬಾನದ ಬುತ್ತಿ' ತರುತ್ತಿದ್ದಾನೆ. ದಾರಿಯಲ್ಲಿ ಮಾಳಿಂಗರಾಯ ತನಗೆ ಹಸಿವಾಗಿರುವುದರಿಂದ ಆ ಬುತ್ತಿ ಬೇಡುತ್ತಾನೆ. ಆದರೆ ಅದನ್ನು ದೇವರಿಗೆ ಒಯ್ಯುತ್ತಿರುವುದರಿಂದ ಬುತ್ತಿ ಕೂಡಲಾಗುವುದಿಲ್ಲ ಎಂದು ಹೇಳಿದ ಭಕ್ತ ಬೀರಪ್ಪನಲ್ಲಿಗೆ ಬಂದು ನೈವೇದ್ಯ ಅರ್ಪಿಸುತ್ತಾನೆ. ಬುತ್ತಿ ಬಿಚ್ಚಿ ನೋಡಿದರೆ, ಬುತ್ತಿಯ ತುಂಬ ಹುಳುಗಳಾಡುತ್ತವೆ. ದಾರಿಯಲ್ಲಿ ಯಾರಾದರೂ ಬುತ್ತಿ ಬೇಡಿದ್ದರೆ ಎಂದು ಬೀರಪ್ಪ ಕೇಳಲಾಗಿ, ಹೌದೆನ್ನುತ್ತಾನೆ. ಆತ ಮಾಳಿಂಗರಾಯ ಎಂಬುದನ್ನು ಅರಿತುಕೊಂಡ ಬೀರಪ್ಪ, ಮಾಳಿಂಗರಾಯನಿಗೆ ಸಲ್ಲದ ಬುತ್ತಿ ನನಗೆ ಬೇಡ ಎಂದು ಹೇಳುತ್ತಾನೆ. ಪೂಜಾರಿ ಮತ್ತು ದೇವರ ಅನ್ಯೋನ್ಯತೆಯನ್ನು ಈ ಘಟನೆ ಬಿತ್ತರಿಸುತ್ತದೆ. ಅದಕ್ಕಾಗಿ ಇಲ್ಲಿ ಒಂದು ಮಾತನ್ನು ಹೇಳಲಾಗಿದೆ.

"ಹಾಲಿನಂತವ ದೇವರು ಸೀತಾಳದಂತವ ಪೂಜಾರಿ
ಸೀತಾಳದಂತವ ಪೂಜಾರಿ ಸಮುದುರುದಂತವ ಭಕ್ತನ"[೩೭]

ಈ ದೇವರು-ಪೂಜಾರಿ-ಭಕ್ತ ಈ ಮೆಟ್ಟಿಲಿನ ತತ್ವದ ಪರಿಷ್ಕರಣೆಯಿಂದ ವೀರಶೈವದಲ್ಲಿ ದೇವರು ಭಕ್ತ ಎಂಬ ಎರಡೇ ತತ್ವಗಳನ್ನು ಉಳಿಸಿಕೊಂಡಂತೆ ತೋರುತ್ತದೆ.

ಜನಪದ ಸಾಂಸ್ಕೃತಿಕ ನಾಯಕನ ಜೀವನವನ್ನು ಅವಲೋಕಿಸಿದರೆ ಅವರ ಬದುಕು ಮತ್ತು ವ್ಯಕ್ತಿತ್ವದೊಂದಿಗೆ ಒಂದಿಷ್ಟು ಪೌರಾಣಿಕ ಅಂಶಗಳನ್ನು ಬೆರೆಸಿ ಹೇಳುವ ಪದ್ಧತಿ ಜನಪದದಲ್ಲಿದ್ದುದು ಸಾಮಾನ್ಯವಾಗಿ ತೋರುತ್ತದೆ. ಇದಕ್ಕೆ ಹಲವಾರು ಕಾರಣಗಳನ್ನು ಗುರುತಿಸಿಕೊಳ್ಳಬಹುದಾಗಿದೆ. ಈ ನಾಯಕರು ತಮ್ಮ ಜನಗಳಿಗಾಗಿ ಯಾವುದೇ ಉಪದೇಶದಂತಹ ತಾತ್ವಿಕ ಮಾತುಗಳನ್ನು ಆಡಲಾರರು. ಅವರ ಬದುಕೇ ಒಂದು ಆದರ್ಶವಾಗಿದ್ದು ಅದಕ್ಕಾಗಿ ಜನ ಅವರನ್ನು ದೇವರೆಂದೂ, ಬೇಡಿದ್ದನ್ನು ಕೊಡುವ ಶಕ್ತಿ ಇಂಥವರಿಗೆ ಇರುವುದೆಂದೂ ನಂಬುತ್ತಾರೆ ಮತ್ತು ಪೂಜಿಸುತ್ತಾರೆ. ಈ ನಂಬುಗೆಗಳೇ ಕಾರಣವಾಗಿ ಅನೇಕ ಪೌರಾಣಿಕ ಸಂಗತಿಗಳನ್ನು ಸೃಷ್ಟಿಸುತ್ತಾರೆ. ಈ ಪೌರಾಣಿಕ ಸಂಗತಿಗಳ ಮಹತ್ವವೆಂದರೆ ತಮ್ಮ ದೈವವನ್ನು ಅವರ ವ್ಯಕ್ತಿತ್ವವನ್ನು ಇನ್ನಷ್ಟು ಬೆಳಗಿಸುವುದು ಮತ್ತು ಪ್ರಸ್ತುತ ಬದುಕಿನ ಜೊತೆಗೆ ಆ ನಾಯಕರ ಸಂಬಂಧವನ್ನು ಬೆಸೆದುಕೊಳ್ಳುವುದು, ವರ್ತಮಾನದ ಮಹತ್ವವನ್ನು ಬಿತ್ತರಿಸುವುದು. ಬೀರಪ್ಪ ಮತ್ತು ಮಾಳಿಂಗರಾಯರ ವ್ಯಕ್ತಿತ್ವದಲ್ಲಿಯ ಅನ್ಯೋನ್ಯತೆಯನ್ನು ಈ ಪ್ರಸಂಗ ತೋರಿಸುತ್ತದೆ.

ಮಾಳನು ಮುಂಡಗನೂರು ಮಠದ ಮುಂದಿರುವುದನ್ನು ತಿಳಿದು ಕಂಟಕರ ಭೀಮಣ್ಣ ಬಂದು ಅವನನ್ನು ಪಲ್ಲಕ್ಕಿಯಲ್ಲಿ ಕರೆತಂದನು. ದೈಗೊಂಡನು ತಾನು ಸೋತೆನೆಂದು ಹೇಳಿದನು.

ಅಮೋಘಸಿದ್ಧನು ಬೀರಪ್ಪನ ತಂದೆಯಾದ ಬಾಳಭರಮನ ಜೊತೆಗೆ ಜನಿಸಿದವನು. ಶಿವನಂಥ ಗುರು, ತನ್ನಂಥ ಶಿಷ್ಯ ಪ್ರಪಂಚದಲ್ಲಿ ಯಾರೂ ಇಲ್ಲ ಎಂಬುದು ಅವನ ವಾದ. ಆದರೆ ಇವನು ಬೀರಪ್ಪನ ಶಿಷ್ಯನಾಗಿ ಮಾಳಿಂಗರಾಯ ಭೂಲೋಕದಲ್ಲಿ ಹೆಸರು ಮಾಡಿದ್ದಾನೆ ಎಂದು ಹೇಳಿದನು. ಅಮೋಘಸಿದ್ಧ ಕೂಡಲೇ ಅವನನ್ನು ಪರೀಕ್ಷಿಸಿ ಬರುವುದಾಗಿ ಹೇಳಿ ಭೂಲೋಕಕ್ಕೆ ಬಂದನು. ಇಬ್ಬರ ಶಕ್ತಿ ಪ್ರದರ್ಶನ ನಡೆಯಿತು. ಎದುರಿಗೆ ಬರುತ್ತಿರುವ ಎತ್ತುಗಳಿಗೆ ಅಮೋಘಸಿದ್ಧ ಮುಂದಕ್ಕೆ ಕೈ ಮಾಡಿದನು. ಆದರೆ ಮಾಳ ಹಿಂದಕ್ಕೆ ಸನ್ನೆ ಮಾಡಿದನು. ಎತ್ತುಗಳೆಲ್ಲ ಹಿಂದಕ್ಕೆ ಹೋದವು. ಈಗ ಅಮೋಘಸಿದ್ಧ ಮಳೆಯನ್ನು ಕರೆದನು. ಮತ್ತೆ ಮಾಳ ಹಿಂದಕ್ಕೆ ಕೈ ಮಾಡಿದನು. ಮಳೆ ಮತ್ತೆ ಕೈಲಾಸಕ್ಕೆ ಸೇರಿತು. ಮಾಳ ಕರೆದಾಗ ಅಮೋಘಸಿದ್ಧನಿಗೆ ನಿಲ್ಲಿಸಲು ಆಗಲಿಲ್ಲ. ಧಾರಾಕಾರ ಮಳೆ ಸುರಿಯಿತು. ಆಗ ಅಮೋಘಸಿದ್ಧನು ತಾನು ಸೋತೆನೆಂದು, ತನಗೆ ಬರುವ ವಿದ್ಯೆಯನ್ನೆಲ್ಲ ಅವನಿಗೆ ಹೇಳಿಕೊಟ್ಟನು. ಬಿಳಿಯ ನಂದಿ, ಕರಿಕಂಬಳಿ, ಪರಿಸರದ ಬಟ್ಟಲು ಎಲ್ಲವನ್ನು ಕೊಟ್ಟನು. ಮಾಳ ಅವನನ್ನು ಹುಲಜಂತಿಗೆ ಕರೆದೊಯ್ದನು. ತಾಯಿ ಊಟ ಮಾಡಿಸಿದಳು. ಅಮೋಘಸಿದ್ಧನು ಮಾಳಪ್ಪನಿಂದ ಐದು ಕುರಿಗಳನ್ನು ಪಡೆದನು. ಅಣ್ಣ ಜಕ್ಕರಾಯನಿಂದ ಐದು ಕುರಿಗಳನ್ನು ಪಡೆಯುವಂತೆ ಹೇಳಿ ಜಕ್ಕರಾಯ ಐದು ಕುರಿಗಳನ್ನು ಕೊಟ್ಟನು. ರಾತ್ರಿ ಆ ಹತ್ತು ಕುರಿಗಳೂ ಪ್ರಾಣ ಬಿಟ್ಟವು. ಅವನ್ನು ಎಬ್ಬಿಸಿಕೊಂಡು ಹೋಗಲು ಅಮೋಘಸಿದ್ಧನಿಗೆ ಆಗಲಿಲ್ಲ.

ಪಾಂಡುರಂಗ ಮಾಳಿಂಗರಾಯನಿಂದ ಲಿಂಗ ಪಡೆಯಬೇಕೆಂದು ಬಂದನು. ಮಾಳಪ್ಪನ ಇಚ್ಛೆಯಂತೆ ಬೀರಪ್ಪ ಹಾಲಹಳ್ಳದಲ್ಲಿ ಲಿಂಗವಾಗಿ ಕಾಣುತ್ತಾನೆ. ಪಾಂಡುರಂಗ ಲಿಂಗ ತರಲು ಬಂದಾಗ ಲಿಂಗದ ರೂಪದಲ್ಲಿದ್ದ ಬೀರಪ್ಪ ಮುಂದು ಮುಂದಕ್ಕೆ ಹೋಗುತ್ತಾನೆ. ಆತ ತೆಕ್ಕೆ ಹಾಯ್ದು ಹಿಡಿಯಲು ಹೋದಾಗ ಭೂಮಿಯಲ್ಲಿ ಹನ್ನೆರಡು ಮೊಳದ ಲಿಂಗವಾಗಿ ನಿಂತನು. ಆದರೆ ಪಾಂಡರಂಗನಿಗೆ ಆ ಲಿಂಗ ಕೀಳಲು ಆಗಲಿಲ್ಲ. ಕೊನೆಗೆ ಪಾಂಡುರಂಗ ಅದನ್ನು ಪೂಜಿಸುತ್ತ ಅಲ್ಲಿಯೇ ಉಳಿದ ಬೀರಪ್ಪ ಮತ್ತು ಮಾಳಿಂಗರಾಯ ಕೂಡಿ ಹಾಲಹಳ್ಳಕ್ಕೆ ಬಂದರು. ಇಲ್ಲಿ ಎಲ್ಲಾ ಗುರು ಶಿಷ್ಯರು ಕೂಡಿದರು. ಗುರುಶಿಷ್ಯರ ದರ್ಶನದಿಂದ ಜನ ಹರ್ಷಗೊಂಡರು. ಬೀರದೇವರಿಗೆ ಮೀಸಲು ಎಡೆ ಮಾಡಿದರು.

೮. ದೇಶ ಪರ್ಯಟನೆ

ಬೀರಪ್ಪನು ಹುಟ್ಟುತ್ತಲೇ ಮನೆ ಹೊರಗೆ ಆಗುವ ಸನ್ನಿವೇಶದಲ್ಲಿ ಆತ ಕೇವಲ ಒಂದು ಮನೆಗಾಗಿ ಅಲ್ಲ ಸಮಾಜಕ್ಕಾಗಿ ಎಂಬ ಸಾಂಕೇತಿಕತೆ ಅಡಗಿದಂತಿವೆ. ಪರದೇಶಿಯಾದ ಬೀರಪ್ಪ ಇನ್ನೊಬ್ಬ ಪರದೇಶಿಯಾದ ಮಾಯಪ್ಪನ ಉಡಿಯಲ್ಲಿ ಬಿದ್ದು ಬೆಳೆಯುತ್ತಾನೆ. ಹೀಗೆ ಹುಟ್ಟುತ್ತಲ್ಲೇ ಬೀರಪ್ಪನ ತಿರುಗಾಟ ಪ್ರಾರಂಭವಾಗುತ್ತದೆ.

ತಮ್ಮ ಲೀಲೆಗಳನ್ನು ತೋರಿಸಲಿಕ್ಕೆ ಶಿಷ್ಯನಾದ ಮಾಳಿಂಗರಾಯನೊಡನೆ ಸಂಚರಿಸುವೆನೆಂದು ಜನರಿಗೆ ಹೇಳಿ ಸರ್ವರ ಅಪ್ಪಣೆ ಪಡೆದು ಮಾಳಿಂಗರಾಯನನ್ನು ಸಂಗಡ ಕರೆದುಕೊಂಡು ಬೀರೇಶನು ಪ್ರಯಾಣ

ಬೆಳೆಸಿದನು. ಶಿಷ್ಯನನ್ನು ಕರೆದುಕೊಂಡು ಕೊಲ್ಲಿಪಾಕಿಗೆ ತೆರಳಿ ಅಲ್ಲಿ ಸೋಮೇಶ್ವರ ದರ್ಶನ ಮಾಡಿಕೊಂಡು ಆ ದೇವರ ಅನುಗ್ರಹ ಪಡೆದು ಕಂಚಿ ಕಾಳಹಸ್ತಿ, ಪೊನ್ನಾಂಬಲ ಮುಂತಾದ ಪವಿತ್ರ ಸ್ಥಳಗಳ ದರ್ಶನ ಪಡೆದು ಶ್ರೀಗುರು ರೇವಣಸಿದ್ಧರ ಆಶೀರ್ವಾದದೊಂದಿಗೆ ದೇಶ ಸಂಚಾರ ಹೊರಟರು. ಅಲ್ಲಿಂದ ಹಾಲಭಾವಿ ಎಂಬ ಗ್ರಾಮಕ್ಕೆ ಬಂದರು. ಅಲ್ಲಿ ಜನರನ್ನು ಕೂಡಿಸಿ ಧರ್ಮಬೋಧನೆ ಮಾಡಿ ಜನರನ್ನು ಜಾಗೃತಗೊಳಿಸಿದರು. ಮುಂದೆ ಎಷ್ಟೋ ಗ್ರಾಮಗಳಿಗೆ ಹೋಗಿ ಅಲ್ಲಿ ಭಕ್ತರಿಂದ ಗುಡಿಗಳನ್ನು ಕಟ್ಟಿಸಿ ಬೀರದೇವರನ್ನು ಸ್ಥಾಪಿಸಿ ಪೂಜೆ ಮಾಡಲು ಅಪ್ಪಣೆ ಮಾಡಿದರು. ಅದರಂತೆ ಮಾಡಲು ಜನರು ಒಪ್ಪಿಕೊಂಡರು. ಮುಂದೆ ಹಾಗೆಯೇ ಸಂಚಾರ ಮಾಡುತ್ತ ಕಳಿಂಗ, ಚೇರ, ಕೇರಳ, ಉಜ್ಜಯಿನಿ, ಶ್ರೀಶೈಲ, ಕಾಶ್ಮೀರ, ಕಂದಹಾರ, ಕುಂತಳ, ಕಾಂಬೋಜ, ಮಲಯಾಳ, ನೇಪಾಳ, ಕೇದಾರ ಸೋಮನಾಥ, ಕಾಶಿ ಮುಂತಾದ ಕಡೆಗಳಲ್ಲಿ ತಿರುಗಿ ಹಾಲುಮತದವರ ಸಭೆ ಸಮ್ಮೇಳನಗಳನ್ನೇರ್ಪಡಿಸಿ ಧರ್ಮದ ಪ್ರಚಾರ ಗೈಯುತ್ತಾ ಅಲ್ಲಲ್ಲಿ ತಮ್ಮ ಕುರುಹುಗಳನ್ನು ಸ್ಥಾಪಿಸುತ್ತ ಗುಡಿಗಳನ್ನು ನಿರ್ಮಿಸುತ್ತ ಕುರುಬರನ್ನು ಪಾವನಗೊಳಿಸುತ್ತ ನಡೆದರು. ನಡುನಡುವೆ ರೋಗಿಗಳ ಅಕಾಲಮರಣಕ್ಕೆ ತುತ್ತಾದವರ ಜೀವ ರಕ್ಷಿಸುತ್ತಾ ಬಡವರು ದೀನದಲಿತರನ್ನು ಅಹಾರಾದಿ ಧಾನ್ಯಧನಗಳನ್ನಿತ್ತು ರಕ್ಷಿಸುತ್ತಾ, ದೇಶಗಳ ಪರ್ಯಾಟನೆ ಮಾಡುತ್ತಾ, ಆನಂದಭರಿತರಾಗಿ ಭಕ್ತರಿಗೆ ಬೋಧನೆ ಮಾಡುತ್ತಾ ಬೆಳ್ಳಿಗುತ್ತಿಗೆ ಬಂದು ತಲುಪಿದರು. ಆಗ ಬೀರೇಶನು ಅಕ್ಕ ಮಾಯವ್ವನಿಗೆ ನಮಸ್ಕಾರ ಮಾಡಿ ನಾನು ತ್ರಿಕಾಲಜ್ಞಾನಿಯಾದ ಒಬ್ಬ ಶಿಷ್ಯನನ್ನು ಕರೆತಂದಿರುವೆನೆಂದು ಹೇಳಿದನು. ಇವನ ಹೆಸರು ಮಾಳಿಂಗರಾಯ, ಅವನನ್ನು ಕೂಡಿಕೊಂಡು ಮಾಡಿದ ಚರಿತ್ರೆಯನ್ನು ಹೇಳಿದನು. ಕೆಲವು ದಿವಸಗಳ ಮೇಲೆ ಅಕ್ಕಮಾಯವ್ವನು ಬೀರೇಶನು ಮತ್ತು ಮಹಾಲಿಂಗನು ಮೂವರು ಕೂಡಿಕೊಂಡು ಬಂಕಾಪುರ ಪಟ್ಟಣಕ್ಕೆ ಬಂದರು. ಬಂಕಾಪುರವು ಬಹುಪುರಾತನ ಪಟ್ಟಣವಿದ್ದು ಅಲ್ಲಿ ಜೋಡು ಶಿವಲಿಂಗಗಳಿಂದ ಉದ್ಭವಿಸಿದ ಬಂಕನಾಥನೆಂಬ ದೇವರು ಇರುವನು. ಅಲ್ಲಿ ಬಾಗೀ ಬಂಕಯ್ಯನೆಂಬ ಒಬ್ಬ ತಪಸ್ವಿಯು ಆ ದೇವಾಲಯದಲ್ಲಿ ಆ ಶಿವಲಿಂಗದ ಅನುಷ್ಠಾನ ಪ್ರಭಾವದಿಂದ ಬೆಳಗುತ್ತಿದ್ದನು. ಆ ದೇವಾಲಯಕ್ಕೆ ಸಮೀಪದಲ್ಲಿ ಸಿದ್ಧನಗುಡ್ಡವೆಂಬುದೊಂದು ಗುಡ್ಡ ಬರುವುದು. ಆ ಗುಡ್ಡದಲ್ಲಿ ಒಬ್ಬ ರಾಕ್ಷಸನು ವಾಸಿಸುತ್ತಿದ್ದು ಜನರಿಗೆ ಪೀಡೆ ಕೊಡುತ್ತಿದ್ದನು. ಬಂಕಯ್ಯನೆಂಬವನ ತಪಸ್ಸಿಗೆ ಕಿರುಕುಳ ನೀಡುತ್ತಿರುವ ವಿಷಯ ತಿಳಿಯಿತು. ಜನರಿಗೆ ಹಿಂಸೆ ಮಾಡುತ್ತಿದ್ದ ರಕ್ಕಸನನ್ನು ಮಾಳಿಂಗ, ಬೀರೇಶ್ವರರು ಕೊಂದು ಆತನ ಎಲುವುಗಳಿಂದ ಐವತ್ತೆರಡು ಬಿರುದಾವಳಿಗಳನ್ನು ಮಾಡಿದನು ಮತ್ತು ತನ್ನ ಭಕ್ತರನ್ನು ಕರೆದು ಒಬ್ಬೊಬ್ಬರಿಗೆ ಒಂದೊಂದು ಬಿರುದಾವಳಿಯನ್ನು ಕೊಡಲಾರಂಭಿಸಿದನು. ಅವುಗಳಲ್ಲಿ ಮುಖ್ಯವಾದ ಕೆಲವು ಬಿರುದಾವಳಿಗಳನ್ನು ಶಿಷ್ಯರಿಗೆ ಕೊಟ್ಟರು. ಅವು ಇಂತಿವೆ.

ದೇವಣ್ಣನಿಗೆ ಡೊಳ್ಳು, ಜಗದೇವನಿಗೆ ಚಂದ್ರವಾದ್ಯ ಬುಳ್ಳನಿಗೆ ತಾಳ, ರಾಯನಿಗೆ ಕರ್ನಿ, ಮೆರೆವಕಾಳಿಂಗನಿಗೆ ಕೊಳಲು, ಕಲ್ಲಯ್ಯನಿಗೆ ಕಾಳಿ, ಲಿಂಗಗೆ ಜಾಗಟೆ, ಸಂಗನಿಗೆ ಜಗಜಂಪು, ಮಲ್ಲನಿಗೆ ಚತ್ತರಗಿ, ಸೋಮಲಿಂಗನಿಗೆ ಡಂಕಾ, ಮಡಿವಾಳನಿಗೆ ನಿಶಾನಿ, ಲಿಂಗಬಸಪ್ಪನಿಗೆ ಚಿನಕಾಳಿ, ಉಳಿದ ಬಿರುದಾವಳಿಗಳು ಹಂಚಲ್ಪಟ್ಟ ನಂತರ ವಿವಿಧ ಬಗೆಯ ವಾದ್ಯ ಸಲಕರಣೆಗಳನ್ನು ಒದಗಿಸಿ ಮದುವೆ ಜಾತ್ರೆ ಮಂಗಳಕಾರ್ಯಗಳಲ್ಲಿ ಇವುಗಳನ್ನು ಉಪಯೋಗಿಸುವಂತೆ ಹೇಳಿ ಭಂಡಾರವನ್ನು ತಯಾರಿಸಿ ಅದನ್ನು ಧರಿಸಲು ಅಪ್ಪಣೆ ಕೊಡಿಸಿದರು.

ನಂತರ ಶ್ರೀ ಬೀರೇಶ್ವರ ಶಿಷ್ಯ ಮಹಾಲಿಂಗ ಮತ್ತು ಅಕ್ಕ ಮಾಯವ್ವ ಕೂಡಿಕೊಂಡು ವಾದ್ಯವನ್ನು ಬಾರಿಸುತ್ತ ಸಂಭ್ರಮದಿಂದ ಭೂತಾಳಸಿದ್ಧನ ಆಲಯಕ್ಕೆ ಬಂದರು. ಭೂತಾಳಸಿದ್ಧನು ಬಿರುದಾವಳಿಗೆ ಅಷ್ಟವಿಧಾನ ಪೂಜೆ ಮಾಡಿ ಶ್ರೀ ಬೀರೇಶ್ವನಿಗೆ ಬೀರದಂಕ ಬೀರಸಿದ್ಧ ಎಂಬ ಬಿರುದು ನೀಡಿದನು. ಈಗಲೂ ಬಂಕಾಪುರದ ಒಂದು ಭಾಗಕ್ಕೆ ಅಂಕದ ಖಣವೆಂಬ ಹೆಸರು ಇದೆ. ಆ ಅಂಕದ ಖಣದಲ್ಲಿ ಬೀರದಂಕ ಸಿದ್ಧನೆಂಬ ಕುರುಹುಗಳು ಪ್ರಸಿದ್ಧವಿರುತ್ತದೆ. ಶ್ರೀ ಬೀರೇಶ್ವರ ಮಾಹಾಳಿಂಗ ಮತ್ತು ಮಾಯವ್ವ ಇವರು ತಮ್ಮ ಕುರುಹುಗಳನ್ನು ಇಟ್ಟು ಶಿಷ್ಯ ಸಮೂಹಕ್ಕೆ ಸದ್ಬೋಧ ಮಾಡಿ ಬಂಕಾಪುರ ಬಿಟ್ಟು ಮುಂದಕ್ಕೆ ಸಾಗಿದರು. ಮುಂದೆ ನಾಲ್ಕು ಮೈಲುಗಳಷ್ಟು ದೂರ ಹೋಗಲು ಅಲ್ಲಿ ಒಂದು ಗುಡ್ಡ ಸಿಕ್ಕಿತು. ಆ ಗುಡ್ಡದಲ್ಲಿ ಇದ್ದು ತಮ್ಮ ಮಂತ್ರ ತಂತ್ರಗಳಿಂದ ಅಲ್ಲಿ ಒಂದು ಊರನ್ನು ನಿರ್ಮಿಸಿದರು. ಅದಕ್ಕೆ ಈಗ ಮಂತ್ರೋಡಿ ಎಂಬ ಹೆಸರು ಇದೆ. ಅಲ್ಲಿ ಮಂತ್ರೋಡಿ ಶಿದ್ಧನೆಂಬ ದೇವರ ಗುಡಿಯನ್ನು ಕಟ್ಟಿಸಿ ಮೆರೆದು ಅಲ್ಲಿಂದ ಹೂವಿನೂರೆಂಬ ಪಟ್ಟಣಕ್ಕೆ ಮೂವರೂ ಸಾಗಿದರು. ಅಲ್ಲಿ ಭೋಜೇಂದ್ರನೆಂಬ ಅರಸನು ಆಳುತ್ತಿದ್ದನು. ಅವನು ಈ ಮಹಾತ್ಮರನ್ನು ಕಂಡು ಆದರದಿಂದ ಸತ್ಕರಿಸಿ ತನ್ನ ಅರಮನೆಗೆ ಕರೆದೊಯ್ದು ಪೂಜೆ ಮಾಡುತ್ತಿದ್ದನು. ಕೆಲವು ದಿನಗಳ ನಂತರ ಅವನ ಮಗ ತೀರಿಕೊಂಡನು. ಬೀರೇಶನು ಭಸ್ಮ ಭಂಡಾರದಿಂದ ಆ ಹುಡುಗನನ್ನು ಬದುಕಿಸಿದನು. ಅರಸನ ಮಗನನ್ನು ಬದುಕಿಸಿದ್ದನ್ನು ಕಂಡು ಇವರೇ ನಮ್ಮ ಕುಲದೇವರೆಂದು ತಿಳಿದು ಗುಡಿ ಕಟ್ಟಿಸಿ ನಡೆದುಕೊಳ್ಳಲಾರಂಭಿಸಿದನು. ಮುಂದೆ ಮೂವರು ಅಲ್ಲಿಂದ ಸಾಗಿ ಪ್ರಯಾಣ ಮಾಡುತ್ತ ಕಲ್ಯಾಣಕ್ಕೆ ಬಂದರು. ವೀರಶೈವ ಜನಾಂಗದ ಮಹಾಮಹಿಮ ನಾದ ಬಸವೇಶ್ವರನು ಕಲ್ಯಾಣದಲ್ಲೇ ಇರುತ್ತಿದ್ದನು. ಶಿವಶರಣರ ಗಣಾಧೀಶರ ಜಂಗಮರೊಡಗೂಡಿ ಶ್ರೀ ಬಸವೇಶ್ವರರ ಪ್ರಭುದೇವರ ದರ್ಶನದಿಂದ ಪುನೀತರಾಗಿ ಅಲ್ಲಿ ಅನೇಕ ಪವಾಡಗಳನ್ನು ಮಾಡಿ ಮಹಾನುಭಾವಿ ಗಳಾದ ಕಕ್ಕಯ್ಯ, ಮಚಿದೇವ ಚೆನ್ನಯ್ಯ, ಅಜಗಣ್ಣ, ಮಂಚಣ್ಣ, ಬಿಜ್ಜಳ, ಬ್ರಹ್ಮಯ್ಯ, ಮಾಳಗಿ ಮಾರಯ್ಯ, ಹೊಡೆಹುಲ್ಲ ಬಂಕಯ್ಯ, ಮೇದಾರ ಕ್ಯಾತಯ್ಯ, ಕಲಿಕೇತರಂಥ ಅತಿರಥ ಮಹಾರಥಿಗಳು ಇನ್ನೂ ಅನೇಕ ಶಿವಶರಣರು ಕೂಡಿಕೊಂಡು ಆ ಊರಲ್ಲಿ ಸತ್ತ ಗೂಳಿಯನ್ನು ಮೆರೆಸುತ್ತ ವೈಭವದಿಂದ ಊರಲ್ಲಿ ತರುತ್ತಿದ್ದರು. ಇದನು ಮಹಾಲಿಂಗನು ನೋಡಿ ಒಂದು ಕುರಿಯನ್ನು ಕೊಂದು ಅದನ್ನು ಹೊತ್ತುಕೊಂಡು ಅವರ ಮೆರವಣಿಗೆ ಮುಂದೆ ತಂದು ಬಗೆದನು. ಇದನ್ನು ಕಂಡು ಜನರು ನೀನು ಯಾರು? ನಿನ್ನ ಕುಲ ಯಾವುದು? ಎಂದು ಪ್ರಶ್ನೆ ಮಾಡಿದರು. ಅಗ ಮಹಾಲಿಂಗ ನಾನು ರೇವಣಸಿದ್ಧೇಶ್ವರನ ಪುತ್ರ, ನನ್ನ ಕುಲದೇವರು ಬೀರೇಶ್ವರ, ನಾನು ಹಾಲುಮತದ ಕುರುಬನು ಎಂದು ಹೇಳಿದನು. ನೀವು ಒಂದು ಲಕ್ಷ ತೊಂಬತ್ತಾರು ಸಾವಿರ ಜಂಗಮರಿದ್ದು ಜಗತ್ತನ್ನೇ ಪಾವನ ಮಾಡತಕ್ಕವರು. ಹೀಗಿದ್ದು ಈ ಸತ್ತ ಬಸವನ ಪ್ರಾಣಪ್ರತಿಷ್ಠೆ ಮಾಡದೆ ಮೆರವಣಿಗೆಯಿಂದ ಒಯ್ಯುತ್ತಿದ್ದೀರಲ್ಲ, ನೀವು ಸತ್ವಶಾಲಿಗಳಾದರೆ ಅಹಂಕಾರ ಬಿಟ್ಟು ಈ ಬಸವಣ ಪ್ರಾಣ ಪಡೆಯಿರಿ. ಇಲ್ಲವಾದರೆ ನಾನು ನನ್ನ ಬಾಂಧವರನ್ನು ಕೂಡಿಕೊಂಡು ಶ್ರೀ ರೇವಣಸಿದ್ಧೇಶ್ವರನ ಅನುಗ್ರಹ ಪಡೆದು ಸತ್ತ ಕುರಿಯ ಹಾಗೂ ಬಸವನ ಪ್ರಾಣ ಪಡೆದು ಬೀರೇಶ್ವರನ ಶಿಷ್ಯ ಮಾಳಿಂಗನೆಂದು ಬಿರುದನ್ನು ಸಾರಿಸುವೆನು. ಅವರಿಗೆ ಸತ್ತ ಬಸವನನ್ನು ಬದುಕಿಸಲು ಆಗಲಿಲ್ಲ. ಇದನ್ನು ನೋಡಿ ಮಹಾಲಿಂಗನು ತನ್ನ ಜನರನ್ನು ಕೂಡಿಸಿ

ರೇವಣಸಿದ್ಧೇಶ್ವರನನ್ನು ನೆನೆದು ತನ್ನ ಗುರು ಶ್ರೀ ಬೀರೇಶ್ವರನು ಕೊಟ್ಟ ಭಂಡಾರದಿಂದ ಕುರಿ ಹಾಗೂ ಬಸವನ ಮೇಲೆ ಹಚ್ಚಿ ಮಂತ್ರ ಪಠಿಸಿದನು. ಕುರಿ ಹಾಗೂ ಬಸವನು ಎದ್ದು ನಿಂತವು. ಆಗ ಎರಡು ಪಂಗಡದವರು ಬೀರಪ್ಪನ ಶಿಷ್ಯ ಮಹಾಲಿಂಗರಾಯನನ್ನು ಮೆರೆಸಿದರು. ಅಕ್ಕ ಮಾಯವ್ವ ಮಾಳಿಂಗರು ಬೀರೆಶ್ವರನ ಮಹಿಮೆಯನ್ನು ಹೊಗಳುತ್ತ, ಜನಜಾಗೃತಿಗೊಳಿಸುತ್ತ ಸಾಗಿದರಲ್ಲದೆ, ಮಾಯವ್ವನ ಗುಡಿ ಮಾಳಪ್ಪನ ಗುಡಿ ಬೀರಪ್ಪನ ಗುಡಿಗಳನ್ನು ಜನತೆ ನಿರ್ಮಿಸುತ್ತಿರುವುದನ್ನು ನೋಡಿ ಸಂತೋಷಪಡುತ್ತಾ ಬರುತ್ತಿದ್ದರು.

ಮುಂದೆ ಬಂಕಾಪುರ, ಬಿಳ್ಳಿಗುತ್ತಿ, ಕುರುಗೋಡ, ಕುರಿಬೆಟ್ಟ, ಕೊಣ್ಣೂರು, ಹೂವಿನೂರು, ಹುನೂರ ಮಂತ್ರೋಡಿ, ಚಿಂಚಲಿ, ಅಲಕನೂರು, ಎಕ್ಸಂಬಾ, ನಾಗತಾಣ, ಕೊಲ್ಲಾಪುರ, ಸಿದ್ಧಗಿರಿಬೆಟ್ಟ ಹೀಗೆ ಸಾವಿರಾರು ಗ್ರಾಮಗಳಿಗೆ ತೆರಳಿ ಅಲ್ಲಿ ದೇವಾಲಯಗಳ ಪ್ರತಿಷ್ಠಾಪನೆಗೆ ಕಾರಣರಾಗುತ್ತ ತಮ್ಮ ಮಹಿಮೆಯನ್ನು ಮೆರೆದರು. ಮುಂದೆ ತಾವು ಕೈಕೊಳ್ಳಬೇಕಾದ ಕಾರ್ಯ ವಿಧಾನಗಳನ್ನು ಜನತೆಗೆ ತಿಳಿಸಿದರು.

ಇವರ ಕಾಲಕ್ಕೆ ಭರತಖಂಡದಲ್ಲೆಲ್ಲ ಹಾಲುಮತದ ಪ್ರಚಾರವಾಯಿತಲ್ಲದೆ ನಿಯಮಬದ್ಧವಾದ ಧರ್ಮಾಚರಣೆಗಳು, ಕುಲಭಾಂದವರ ನಡೆನುಡಿಗಳು, ವ್ರತಾಚರಣೆಗಳು, ಪೂಜೆ ಪುನಸ್ಕಾರಗಳು ಮದುವೆ ಮುಂಜಿಗಳ ಕಾರ್ಯ ವಿಧಾನಗಳು ರೂಪಿಸಲ್ಪಟ್ಟವು. ಅಂತೆಯೇ ಬೀರೇಶ್ವರ ಮಾಳಪ್ಪ ಮಾಯವ್ವನವರ ದೇವಾಲಯಗಳು ತಮ್ಮ ಮಹಿಮೆ ತೋರುತ್ತಾ ಇಂದಿಗೂ ಜಾಗೃತಾವಸ್ಥೆಯಲ್ಲಿ ಉಳಿದಿರುವುದೇ ಸಾಕ್ಷಿ.

೯. ಭಗನಾಥ ಮತ್ತು ಕೋಣಾಸುರನನ್ನು ಸಂಹರಿಸಿದ್ದು

ಬೀರಪ್ಪನ ಸಂಘರ್ಷಗಳಲ್ಲಿ ಗಮನ ಸೆಳೆಯುವ ಮತ್ತು ಹೆಚ್ಚು ಜನಪ್ರಿಯ ಆಗಿರುವ ಸಂಘರ್ಷಗಳೆಂದರೆ ಈಗಿನ ಅಥಣಿ, ಚಿಂಚಲಿ, ಕೋಣಗನೂರು ಪ್ರದೇಶಗಳ ಸುತ್ತಮುತ್ತ ಕುರಿಗಾರಿಕೆಗಾಗಿ ಮಾಡಿದ ಸಂಘರ್ಷಗಳು. ಮಾಯುವ್ವ ಬೀರಪ್ಪ ಜೊತೆಗೂಡಿ ಕುರಿಗಾರಿಕೆಗಾಗಿ ಹೇವಲಿ ಹಳ್ಳದಿಂದ ದಕ್ಷಿಣ ದೇಶಗಳತ್ತ ವಲಸೆ ಬರುತ್ತಾಳೆ. ಕೋಣಗನೂರು, ಚಿಂಚಲಿ ಪ್ರದೇಶಗಳಲ್ಲಿ ಪಶುಪಾಲನೆ ಮಾಡುತ್ತ ನೆಲೆಸಿದ್ದ ಭಗನಾಥ ಕೋಣಾಸುರ ಮತ್ತು ವನದೇವತೆ ಎನ್ನುವ ಸದಸ್ಯರನ್ನೊಳಗೊಂಡ ಕುಟುಂಬ ಎದುರುಗೊಳ್ಳುತ್ತದೆ. ಇದು ಪಶುಪಾಲನೆಗೆ ಯೋಗ್ಯವಾದ ಭೂಮಿ ಆಗಿತ್ತು. ಈಗಲೂ ಕುರಿಗಾರಿಕೆಗೆ ಹೆಚ್ಚು ಸೂಕ್ತವಾದ ಭೂಮಿ ಇದಾಗಿದೆ ಎಂದು ಭೌಗೋಳಿಕ ತಜ್ಞರು ಹೇಳುತ್ತಾರೆ. ಇದನ್ನು ಅರಿತ ಮಾಯವ್ವ ಬೀರಪ್ಪ ಈ ಪ್ರದೇಶದಲ್ಲಿ ನೆಲೆ ನಿಲ್ಲಲು ನಿರ್ಧರಿಸಿದಂತೆ ಕಾಣಿಸುತ್ತದೆ. ಇದಕ್ಕೆ ಆ ವೇಳೆಗಾಗಲೆ ನೆಲೆ ನಿಂತ ಕೋಣಾಸುರರ ಕುಟುಂಬ(ದನಗಾರರು) ಪ್ರತಿರೋಧ ಒಡ್ಡಿದ್ದಾರೆ. ಬೀರಪ್ಪ ಮಾಯವ್ವ ಇವರನ್ನು ಸಂಹಾರ ಮಾಡಿ ತಮ್ಮ ಅಸ್ತಿತ್ವವನ್ನು ಕಟ್ಟಿಕೊಂಡರು. ಡಾ. ಕೆ.ಎಂ.ಮೇತ್ರಿ ಅವರು ಈ ಸಂಘರ್ಷದ ಉದ್ದೇಶವನ್ನು ಸರಿಯಾಗಿ ಗುರುತಿಸಿ ದನಗಾರರು ಮತ್ತು ಕುರಿಗಾರರ ಸಂಘರ್ಷವೆಂದು ಕರೆಯುತ್ತಾರೆ. ಈ ಎರಡು ಕುಟುಂಬಗಳ ನಡುವೆ ಸಂಘರ್ಷ ಆರಂಭವಾಗುವ ವಿಧಾನ ಗಮನ ಸೆಳೆಯುತ್ತದೆ. ಭಗನಾಥ ಮಾಯವ್ವನನ್ನು ಅತ್ಯಾಚಾರ ಮಾಡುವುದಕ್ಕೆ ಪ್ರಯತ್ನ ಪಡುತ್ತಾನೆ. ಇದನ್ನು ನೋಡಿದ ಬೀರಪ್ಪ ಭಗನಾಥನನ್ನು ಸಂಹಾರ ಮಾಡುತ್ತಾನೆ.

ಅಕ್ಕನ ಮಗ್ಗಲದೊಳಗೇನೆ ಸಿಡಿದಾ ನಿಂದ್ರುತಾನೇನ

ಸಿಡಿದಾ ನಿಂದ್ರುತಾನೇನ ತಮ್ಮ ಮಾಯದಾಟಿ ನಡಸ್ಯಾನ

ಪಾತಾಳದೊಳಗ ಇವನ ಪಾದೇನೆ ಕೈಲಾಸದೊಳಗೆ ಇವನ ಕಳಿಸೇನ

ಬಾಯಿಗಂಗಾಳ ಹಚ್ಚಿದನಯ್ಯ ಪಂಚಡಂಕಿ ಹೊಡೆದನಯ್ಯ

ಪಂಚಡಂಕಿ ಹೊಡಿದನಯ್ಯ ಶಿರವ ಹಾರಿ ಬಿದದಾವ

ಬಾಗಿಯ ಭಗನಾಥನಯ್ಯ ಶಿರವ ಹಾರಿ ಬಿದ್ದಾವ್ಽ

ಭಗನಾಥನನ್ನು ಸಂಹಾರ ಮಾಡಿದ ನಂತರ ಕೋಣಾಸುರನನ್ನು ಸಂಹಾರ ಮಾಡುವುದಕ್ಕೆ ಮುಂದಾಗುತ್ತಾನೆ.

ಕೋಣಾಸುರನ ಸಂಹರಿಸಿದ್ದು

ಶಿವನ ಸದನದಲ್ಲಿ ಶಿವ-ಪಾರ್ವತಿಯು ಸಂತೋಷವಾಗಿ ಇರುವಾಗ ಪಾರ್ವತಿಯ ಮನಸ್ಸಿನಲ್ಲಿ ಸಂಕಟವಾಯಿತು. ಮತ್ತು ಅಪಶಕುನಗಳಾದವು. ಹೀಗೇಕೆ ಆಗುತ್ತಿವೆ ಎಂದು ಶಿವನನ್ನು ಕೇಳುತ್ತಾಳೆ. ಆಗ ತ್ರಿಕಾಲಜ್ಞಾನಿಯಾದ ಶಿವನು ವಿಚಾರ ಮಾಡಿ ನೋಡಿ ಪಾರ್ವತಿಗೆ ಹೇಳುತ್ತಾನೆ. ದೇವಿ ನಿನಗೆ ಹಾಗೆ ಆಗಲು ಒಂದು ಕಾರಣವಿದೆ ಅದೇನೆಂದರೆ,

ಒಂದಾನೊಂದು ದಿವಸ ವೀರಭದ್ರನು ಅವನ ಶಿಷ್ಯನಾದ ಶಿವಗಿಸಿದ್ದನು ಭೂಲೋಕದಿಂದ ಕೈಲಾಸಕ್ಕೆ ಬಂದಿದ್ದರು. ಆಗ ೧. ಜೋಗಸಿದ್ಧ, ೨ ಕೋಪಸಿದ್ಧ, ೩. ಸಂಗಸಿದ್ಧ, ೪. ಬಂಕಸಿದ್ಧ, ೫. ಕೊನೆಸಿದ್ಧ, ೬. ವನಸಿದ್ಧ, ೭. ಕೊಳಲುಸಿದ್ಧ ಇವರು ವೀರಭದ್ರ ಸಿದ್ಧರನ್ನು ನೋಡಿ ಹಾಸ್ಯ ಮಾಡಿದರಂತೆ. ಅದರ ಪರಿಣಾಮವಾಗಿ ಆ ಏಳು ಜನರಿಗೆ ಒಂದು ಸಣ್ಣ ಪ್ರಮಾಣದ ಶಾಪ ಕೊಟ್ಟರು. ಏನೆಂದರೆ ನೀವು ಮಾಯ ಗರ್ಭದಿಂದ ಜನಿಸಿ ಭೂಲೋಕದಲ್ಲಿ ರಾಕ್ಷಸರಾಗಿ ಜನಿಸಿ ಎಂದು. ಆಗ ೧. ಜೋಗಸುರ, ೨. ಸಂಕೇಸೂರ, ೩. ಬಂಕಾಸೂರ, ೪. ಕೋಪಾಸುರ, ೫. ಕೋಣೆಸೂರ, ೬. ಕಣಪೆಸೂರ ಇನ್ನೊಬ್ಬರು ವೀರಭದ್ರನ ಪಾದಕ್ಕೆ ನಮಿಸಿ ನಮ್ಮನ್ನು ಶಾಪಮುಕ್ತರಾಗಿ ಮಾಡು ಎಂದು ಕೇಳಿಕೊಳ್ಳುತ್ತಾರೆ.

ಆಗ ವೀರಭದ್ರನು ಮಾಯೆಯಿಂದ ನೀವು ಭೂಲೋಕದಲ್ಲಿ ರಾಕ್ಷಸರಾಗಿ ಜನಿಸಿದ್ದೀರಿ. ಬಹಳ ಶಕ್ತಿವಂತರಾಗಿ ದುಷ್ಟವಂತರಾಗಿ ಮೂರು ಲೋಕದಲ್ಲಿ ಮೆರೆಯಿರಿ. ಆಗ ನೀವೆಲ್ಲರೂ ನಮ್ಮಿಂದಲೇ ಹತರಾಗಿ ಶಿವಸದನಕ್ಕೆ ಒಬ್ಬೊಬ್ಬರಾಗಿ ಬರುವಿರಿ ಎಂದು ವಿಶ್ವಾಸ ನೀಡಿದನು. ಅವರ ಶಾಪದಂತೆ ಭೂಲೋಕದಲ್ಲಿ ಇಬ್ಬನಿಯಾಗಿ ಬಿದ್ದರು. ಮಾಯೆಯು ಅದನ್ನು ತಿನ್ನುತ್ತ ಬಂದಾಗ ಮೇಲೆ ಹೇಳಿದ ಹೆಸರಿನ ದೈತ್ಯರು ಹುಟ್ಟಿದರು. ಆಗ ಮಾಯೆ ಯಮ್ಮಗುಡ್ಡದ ಮಾಯ ಎಂಬ ಹೆಸರಿನಿಂದ ಇರತೊಡಗಿದಳು. ಅದೇ ವೇಳೆಗೆ ಆ ಏಳು ಜನ ದೈತ್ಯರಲ್ಲಿ ಕೋಣಾಸುರನು ಎಲ್ಲರಿಗಿಂತ ಪ್ರಬಲನಾಗಿ ಮೆರೆಯುತ್ತ ಎಲ್ಲ ಲೋಕಗಳಲ್ಲಿಯೂ ಇವನ ಕಾಯಕ್ಕೆ ಅಂಜಿದ್ದಾರೆ. ಅದರ ಸಲುವಾಗಿಯೇ ನಿನಗೆ ಅಶುಭಗಳು ಹಾಗೂ ಸಂಕಟವಾಗುತ್ತಿದೆ ದೇವಿ ಎಂದನು. ಹೀಗೆ ಲೋಕಕಂಟಕನಾಗಿ ಆ ದೈತ್ಯನು ಮೆರೆಯುತ್ತಿದ್ದರೆ ನೀವೇಕೆ ಸುಮ್ಮನೆ ಕುಳಿತಿದ್ದೀರಿ. ಈ ವಿಷಯದ ಬಗ್ಗೆ ಯಾರಿಗೆ ಹೇಳಿ ಮರ್ದನ ಮಾಡಲಿಕ್ಕೆ ಹಚ್ಚಿರಿ ಎಂದು ಕೇಳಿಕೊಂಡಳು.

ಆಗ ಮೇದಿಹಳ್ಳದ ದಡದಲ್ಲಿ ಹುಟ್ಟಿದ ಕೋಣಾಸುರ ಬೆಳೆಯುತ್ತಿರುವಂತೆ ಸುರರ ಮೇಲೆ ಅವನ ಹಾವಳಿಗಳು ಹೆಚ್ಚಾದವು. ಅದನ್ನು ಪರಿಹರಿಸುವಂತೆ ಆದಿಸ್ವರೂಪಳಾದ ಶಕ್ತಿಯನ್ನು ಬೇಡಿಕೊಂಡರು. ಅವಳು ಪರಮೇಶ್ವರನಿಗೆ ಈ ಸಂಗತಿ ತಿಳಿಸಿದಳು. ಪರಮೇಶ್ವರನು ಋಷಿಗಳನ್ನು, ದೇವತೆಗಳನ್ನು ಕರೆದು ಮಹಿಷಾಸುರನನ್ನು ಕೊಲ್ಲಲು ಹೇಳುತ್ತಾನೆ. ಅವರೆಲ್ಲರೂ ಅವನ ಉಸುರಿಗೆ ಶ್ವಾಸಕ್ಕೆ ಹೆದರಿ ಪಡಬಾರದ ಕಷ್ಟಪಟ್ಟು ಹಿಂದಿರುಗಿದರು. ಈ ರಾಕ್ಷಸನನ್ನು ರಾಕ್ಷಸಿಯ ಕಡೆಯಿಂದಲೇ ಕೊಲ್ಲಿಸಬೇಕೆಂದು ಕೆಲವು ರಾಕ್ಷಸಿಯರನ್ನು ಕಳುಹಿಸಿದನು. ಅವರು ಉರುಳಿಸಿದ ಕಲ್ಲುಗಳು ಮರಳಿ ಅವರ ಮೇಲೆಯೇ ಬಿದ್ದು ಅನೇಕರು ಸತ್ತು ಕೆಲವರು ಗಾಯಗೊಂಡರು. ನಂತರ ತನ್ನ ನಂದಿಯನ್ನು ಕಳುಹಿಸಿಕೊಟ್ಟನು. ನಂದಿಯ ಮೂರು ಕೋಡುಗಳಲ್ಲಿ ಮಧ್ಯದ ಕೊಡು ಮುರಿದುಕೊಂಡು ಮರಳಿತು. ಆಗ ನಾರಾಯಣನ ಸಲಹೆಯಂತೆ ಪರಮೇಶ್ವರನು ಬೀರೇಶ್ವರನಿಂದ ಕೋಣಾಸುರನ ವಧೆ ಮಾಡಿಸಲು ನಿರ್ಧರಿಸಿದನು. ಪರಮೇಶ್ವರನು ಈಗಿಂದೀಗಲೇ ಒಂದು ಕಂಚಿನ ಸದನದ ಮೇಲೆ ದೈತ್ಯನ ವಿಸ್ತಾರವನ್ನು ಬರೆದು ಕಳುಹಿಸುತ್ತೇವೆ. ಈಗಾಗಲೇ ವೀರಭದ್ರನು ಬೀರೇಶ್ವರನೆಂಬ ನಾಮದಿಂದ ಭೂಲೋಕದಲ್ಲಿ ಜನಿಸಿದ್ದಾನೆ. ಅವನ ಕಡೆಗೆ ಕಳಿಸುತ್ತೇನೆ ಎಂದು ಹೇಳಿ ಪತ್ರವನ್ನು ಬರೆದು ಕಳಿಸಿದನು. ಅದರಲ್ಲಿ ಹೀಗೆ ಬರೆದಿತ್ತು. ಎಲೇ ಬೀರೇಶನೇ ನೀನು ನನ್ನ ಅಂಶದಿಂದಲೇ ಜನಿಸಿದವನು. ಕೋಣಾಸುರನು ಲೋಕಕಂಟಕನಾಗಿ ಮೆರೆಯುತ್ತಿದ್ದಾನೆ. ಅವನನ್ನು ಮೊದಲು ಮರ್ದನ ಮಾಡಬೇಕಾಗಿದೆ. ಅವನು ಸಾಯಬೇಕಾದರೆ ಭೂಮಿಯ ಮೇಲೆ ಮಂಟೂರ ಕಮನಿ ಮರಿಗುಂದಿಯ ನಡುವೆ ಮೇದಿ ಹಳ್ಳದಲ್ಲಿ ಆ ರಾಕ್ಷಸನು ಮೆರೆಯುತ್ತಿದ್ದಾನೆ. ಅವನಿಗೆ ಸಾವು ಬರಬೇಕಾದರೆ ರವಿವಾರ ಅಮಾವಾಸ್ಯೆ ಇರಬೇಕು. ರಾತ್ರಿ ಹನ್ನೆರಡು ಗಂಟೆಗೆ ಹಾಗೂ ಮೂರು ನದಿ ಸಂಗಮ ಇದ್ದಲ್ಲಿ ಪಂಚಗಂಗಿ ವಾಯುಗಂಗಾಳದ ಮೇಲೆ ಕಾಶಿಲಿಂಗವನ್ನು ತಯಾರಿಸಿದಾಗ ಆ ರಾಕ್ಷಸನು ಸಾಯುತ್ತಾನೆ ಎಂದು ಬರೆದು ಕಳುಹಿಸುತ್ತಾನೆ. ಅದು ಬೀರೇಶನ ಕೈಗೆ ತಲುಪಿತು.

ಬೀರೇಶನು ಅಕ್ಕಮ್ಮ ಮಾಯಮ್ಮರನ್ನು ಕರೆದುಕೊಂಡು ಮರುದಿವಸ ಕೋಣಾಸುರನ ಮರ್ದನಕ್ಕೆಂದು ನಡೆದರು. ಇತ್ತ ಎಮ್ಮಿಗುಡ್ಡದಲ್ಲಿಯ ಮಾಯಿಗೆ ಒಂದು ಸ್ವಪ್ನ ಬಿದ್ದಿತು. ಕೋಣೇಶ್ವರ ದೈತ್ಯನ ಲಗ್ನ ಜರುಗಿದಂತಾಗಿ ಮೊಗಲಾಯಿ ನಾಡಿನ ಪಠಾಣನೊಬ್ಬನು ಬಂದು ಕೋಣೇಶ್ವರ ದೈತ್ಯನಿಗೆ ಕಂಕಣ ಕಟ್ಟಿದಂತಾಗಿತು. ಆ ಮಾಯಿಯು ಎಚ್ಚರಾಗಿ ಮಂಟೂರ ಕಮನಿಗೆ ಬಂದು ಮಗನಿಗೆ ಅಂದರೆ ಕೋಣಾಸುರನಿಗೆ ಸ್ವಪ್ನದ ವಾರ್ತೆ ತಿಳಿಸಿದಳಲ್ಲದೆ ಇಲ್ಲಿಂದ ಎಲ್ಲಿಗಾದರೂ ಹೊರಟು ಹೋಗು. ಇನ್ನು ಕೆಲವೇ ವೇಳೆಯಲ್ಲಿ ಬೀರೇಶನು ಬಂದು ನಿನ್ನನು ಕೊಲ್ಲುತ್ತಾನೆ ಎಂದು ಹೇಳಿದಾಗ. ಯಾವನೇ ಬರಲಿ ನನ್ನ ಒಂದು ಕೂದಲು ಸಹ ಅಳುಕುವುದಿಲ್ಲವೆಂದು ಧೈರ್ಯವಾಗಿ ತಾಯಿಗೆ ಅಂದನು. ಅವಳು ಎಮ್ಮಿಗುಡ್ಡದ ಕಡೆಗೆ ಹೊರಟು ಹೋದಳು. ಅವಳು ಹೋದ ಎರಡು ಮೂರು ತಾಸುಗಳಲ್ಲಿಯೇ ಬೀರೇಶನು ಜಂಬೂಗಡ್ಡೆಗೆ ತಲುಪಿದನಲ್ಲದೆ, ಕೋಣಾಸುರ ದೈತ್ಯನನ್ನು ನೋಡುತ್ತಾನೆ. ಆತನು ಒಂದು ಕಿವಿಯನ್ನು ಹಾಸಿ ಒಂದು ಕಿವಿಯನ್ನು ಹೊದ್ದುಕೊಂಡು ಮರಿಗುಂಡಿಗೆ ತಲೆಯಿಟ್ಟು, ಮಂಟೂರ ಕಮನೆಯ ಮೇಲೆ ಕಾಲು ಒಗೆದು ಮಲಗಿದ್ದನು. ಇದನ್ನು ಕಂಡ

ನಿನ್ನಿಂದಲ್ಲದೆ ನನ್ನ ಪ್ರಾಣ ಯಾರಿಂದಲೂ ಗತಿಸುತ್ತಿರಲಿಲ್ಲ ಕ್ಷಮಿಸು, ನನ್ನ ಪಾಪಗಳನ್ನೆಲ್ಲಾ ಪಶ್ಚಾತ್ತಾಪ ಗೊಂಡಿದ್ದೇನೆ. ಬೀರಲಿಂಗೇಶನ ಚರಣದಲ್ಲಿ ಬಿದ್ದು ಒದ್ದಾಡಿ ಪ್ರಾಣ ಬಿಡುವುದರೊಳಗಾಗಿ ಒಂದು ವರ ಕೊಡಬೇಕೆಂದು ಕೇಳಿಕೊಂಡನು. ನೀನು ಬೇಕಾದ ವರಗಳನ್ನು ಕೇಳು, ಕೋಣಾಸುರನು ನೀನು ಭೇದಿಸಿದ ಪ್ರತಿಯೊಂದು ನನ್ನ ಅವಯಗಳಿಗೆಲ್ಲಾ ಒಂದೊಂದು ಹೆಸರು ಬರಬೇಕು.

> ಕರಿಯಾ ದೇವರಲ್ಲಪ್ಪ ದೈತ್ಯ ಕ್ಯಾಣೇಸುರಗ
> ಕ್ಯಾಣೇಸೂರನ ವಧನ ಮಾಡ್ಯಾನ ಕರಿದೇವರು ಅನಸೇನ
> ತುಂಡ ಬಿದ್ದಲ್ಲಲ್ಲೇಳ ಮುಂಡಗನೂರು ಅನಸೇನ
> ಮುಂಡಿಯ ಬಿದ್ದಲ್ಲಲ್ಲೇಳ ಮುಂಡಗನೂರು ಅನಸೇನ
> ಕ್ಯಾಣೇಸೂರ ದೈತನ ತಲಿಯಾ ಗದ್ದುಗಿ ಆಗುತಾವೇನ
> ಗದ್ದುಗಿ ಮ್ಯಾಲೋ ತಮ್ಮ ಲಿಂಗ ಬೀರಣ್ಣ ದೇವರ
> ಲಿಂಗ ಬೀರಣ್ಣ ದೇವರ ಕರಿಯಾ ದೇವರು ಅನಸೇನ್

ಕೋಣಾಸುರನನ್ನು ಸಂಹಾರ ಮಾಡಿದರೆಂದು ಹೇಳುವ ಸ್ಥಳಗಳು ಕೋಣಗನೂರಿನಲ್ಲಿ ಸಿಗುತ್ತವೆ. ಅವಯಗಳಿಗೆಲ್ಲಾ ಒಂದೊಂದು ಹೆಸರು ಬರುವಂತೆ ಕೃಪೆ ಮಾಡು ಎಂದಾಗ, ಬೀರಲಿಂಗೇಶ್ವರನು ಮುಂದೆ ಕಲಿಯುಗದಲ್ಲಿ ನಿನ್ನ ಮೂಗು ಮತ್ತು ರುಂಡ ಜಿಗಿದು ಬಿದ್ದಲ್ಲಿ ಮುಗೀನೂರು ಅಥವಾ ಮುಂಡಗನೂರುವೆಂದೂ ನಿನ್ನ ಖೋಡ ಬಿದ್ದಲ್ಲಿ ಕೋಡ್ಯಾಳವೆಂದು, ಮಾಂಸ ಮತ್ತು ದೇಹ ಇತರ ಅಂಗಾಂಗಳು ಬಿದ್ದ ಸ್ಥಳವನ್ನು ಅಲಖನೂರು ಎಂದು ಕರೆಯುವ ಸ್ಥಳನಾಮಗಳ ಕಥನಗಳು ಸಿಗುತ್ತವೆ. ಈ ಸ್ಥಳಗಳಲ್ಲಿ ಕುರಿ ಬಲಿ ಕೊಡುವ ಆಚರಣೆ ನಡೆಯುತ್ತದೆ. ನಿನ್ನ ಮಸ್ತಕದ ಮೇಲೆ ನನ್ನ ವಸ್ತಿ ಇದ್ದು ಕುಂಬಿರಾಯರ ಪಟ್ಟಣ ಮುರಿಸಿ ಕೊಣ್ಣೂರು ಅನಿಸಿ ಇಂಥ ಸ್ಥಾನದಲ್ಲಿ ಕರಿಸಿದ್ದನೆಂಬ ನಾಮದಿಂದ ನಿನ್ನ ಹೆಸರು ಸೂರ್ಯ ಚಂದ್ರರಿರುವವರೆಗೂ ಉಳಿಸುತ್ತೇನೆ ಎಂದಾಗ ಕೋಣಾಸುರ ದೈತ್ಯನು ಬೀರೇಶನಿಗೆ ಮನದಲ್ಲಿಯೇ ವಂದಿಸಿ ಪ್ರಾಣ ಬಿಟ್ಟನು. ಮುಂಡಗನೂರು, ಅಲಖನೂರು ಮತ್ತು ಕೋಣಗನೂರು ಗ್ರಾಮಗಳಲ್ಲಿ ಕರಿಸಿದ್ದನ ಪ್ರಾಚೀನ ದೇವಾಲಯಗಳು ಇವೆ.

೧೦. ಪವಾಡಗಳು

ಬೀರಪ್ಪ ಪೌರಾಣಿಕ ವ್ಯಕ್ತಿಯಾಗಿರುವುದರಿಂದ ಅವನ ಸುತ್ತ ಅನೇಕ ಪವಾಡಗಳು, ಅತಿಮಾನುಷ ಘಟನೆಗಳು ಹೆಣೆದುಕೊಂಡಿವೆ. ಬಹುಶಃ ಮನಸ್ಸಿಗೆ ನಿಲುಕದ, ಶಕ್ತಿಗೆ ಮೀರಿದ ಘಟನೆಗಳು ಜನರಲ್ಲಿ ಭಯಭಕ್ತಿಗಳನ್ನು ಬೆಳೆಸುತ್ತವೆ. ಜನಸಾಮಾನ್ಯರಿಗೆ ಚರಿತ್ರೆಗಿಂತ ಪುರಾಣದ ಸಂಗತಿಗಳನ್ನು, ಪವಾಡಗಳ ಸದೃಶ್ಯ ಘಟನೆಗಳನ್ನು ಇಲ್ಲಿ ತಿಳಿಸಲಾಗಿದೆ. ಅದೇ ರೀತಿ ಬೀರಪ್ಪ ಹುಟ್ಟುವಾಗಲೇ ಸಾಹಸವನ್ನು ಪ್ರದರ್ಶಿಸುತ್ತಾನೆ.

ಸುರಾವತಿ ಗರ್ಭವತಿಯಾದಾಗ ಹರಿಯು ಅವಳಿಗೆ ವಿಷದ ಬುತ್ತಿ ಕಳುಹಿಸಿದರೆ ಗರ್ಭಸ್ಥ ಶಿಶು ಬೀರಪ್ಪ ತಾಯಿಯ ಕನಸಿನಲ್ಲಿ ಬಂದು ಅದನ್ನು ತಿನ್ನಬೇಡವೆಂದು ಹೇಳುತ್ತದೆ.

ಹರಿದೇವನ ಆಜ್ಞೆಯಂತೆ ಕೂಸು ಬೀರಪ್ಪನನ್ನು ಚಾರರು ಕೊಲ್ಲಲು ಹಾಲಹವೇಲಿ ಹಳ್ಳಕ್ಕೆ ಬಂದಾಗ ಬಿರುಗಾಳಿ ಬೀಸಿ ತೊಟ್ಟಿಲು ವಟವೃಕ್ಷದ ತುದಿಯಲ್ಲಿ ಸಿಕ್ಕಿ ಹಾಕಿಕೊಳ್ಳುತ್ತದೆ. ಆಗ ಅಲ್ಲಿಗೆ ಬಂದ ಶಿವನು ಕಾಮಧೇನುವಿಗೆ ನಿತ್ಯ ಹಾಲು ಕರೆದು ಕೂಸಿಗೆ ಉಣಿಸಲು ಅಜ್ಞಾಪಿಸುತ್ತಾನೆ.

ಬೀರಪ್ಪನು ಮಾಯವ್ವನ ಆರೈಕೆಯಲ್ಲಿ ಬೆಳೆಯುತ್ತಿರುವಾಗ ಕಂಚು ಬೋಳಿನ ಕುರಿಯ ಕೊರಳ ಮೊಲೆ ಹಾಲು ಕುಡಿಯುತ್ತಾನೆ.

ಬೀರಪ್ಪನು ಬಾಲ್ಯದಲ್ಲಿ ಚೆಂಡಿನಾಟವಾಡುವಾಗ ಸಂಗನಬಸಪ್ಪನ ಮಗ ಲಿಂಗಬಸಪ್ಪನು ಶಿವಪದ್ಮನ ಚೆಂಡಿನ ಹೊಡೆತಕ್ಕೆ ಸಿಕ್ಕು ಸತ್ತು ಬಿದ್ದಾಗ ಬೀರಪ್ಪನು ಭಸ್ಮ ಲೇಪಿಸಿ ಲಿಂಗಬಸಪ್ಪನನ್ನು ಬದುಕಿಸುತ್ತಾನೆ.

ಚೆಂಡಿನಾಟದ ಪ್ರಸಂಗದಿಂದ ಮಂದಲಗಿರಿಯಿಂದ ಬೀರಪ್ಪನನ್ನು ಕರೆದುಕೊಂಡು ಅಕ್ಕ ಬರುತ್ತಿದ್ದರೆ ಜನ ಊರು ಬಿಟ್ಟು ಹೋಗಬೇಡಿರೆಂದು ಬೆನ್ನುಹತ್ತಿದರೆ ಇವರಿಬ್ಬರೂ ಬೆಳ್ಳಿಗುತ್ತಿಯ ದಾರಿಯಲ್ಲಿ ಸರ್ಪಾಕೃತಿಯಾಗಿ ಹುತ್ತ ಸೇರಿದರು.

ಬೆಳ್ಳಿಗುತ್ತಿಯ ಬಯಲಲ್ಲಿ ನೀರು ತರುತ್ತಿದ್ದ ೭೦೦ ತರುಣಿಯರ ನೀರು ತುಂಬಿದ ಕೊಡಗಳಿಗೆ ಬೀರಪ್ಪನು ಬಾಣದಿಂದ ಹೊಡೆದು ತೂತು ಕೆಡವಿದನು. ಅವರೆಲ್ಲ ಕೋಪಗೊಂಡಾಗ ಮರಳಿ ಮೇಣದ ಬಾಣವನ್ನು ಬಿಟ್ಟು ಎಲ್ಲ ಕೊಡಗಳ ತೂತುಗಳನ್ನು ಬಂದು ಮಾಡಿದನು.

ಬೆಳ್ಳಿಗುತ್ತಿಯಲ್ಲಿ ಹೀರೇಕುರಬರ ಹೇಮಣ್ಣನ ಮಗ ಮಲ್ಲಣ್ಣ ತೀರಿಕೊಂಡಾಗ ಮುದ್ದಣ್ಣನ ಮಗ ಬುಳ್ಳ ತೀರಿಕೊಂಡಾಗ ಬೀರೇಶನು ಭಸ್ಮ ಎರಚಿ ಅವರಿಬ್ಬರನ್ನು ಬದುಕಿಸಿದನು. ಕೊಲ್ಲಿಪಾಕಿಯಲ್ಲಿ ಭೂತಾಳ ಸಿದ್ಧೇಂದ್ರನ ಮಗನನ್ನು ಬದುಕಿಸಿದನು.

ಮಾಳಿಂಗರಾಯ ಪಾಂಡವರಕೋಟೆಯಿಂದ ಕಪ್ಪೆ ಕಲಕದ ಜಲ, ಹುಳ ಮುಟ್ಟದ ಹೂವನ್ನು ತಂದಾಗ ಬೀರೇಶನು ಸರ್ಪಾಕೃತಿಯಾಗಿ ಹುತ್ತ ಸೇರಿ ಮಾಳಿಂಗರಾಯನನ್ನು ಪರೀಕ್ಷಿಸಿದನು.

ಹೂವಿನೂರಿನಲ್ಲಿ ಭೋಜೇಂದ್ರ ಭೂಪಾಲನ ಸತ್ತ ಮಗನನ್ನು ಬದುಕಿಸಿದನು.

ಬಿಲ್ವಾಡಪುರದ ಜಲಮಾಯ ಕೆರೆಯ ದಡದಲ್ಲಿ ಬೀರೇಶನು ಬಾಲಕನ ರೂಪದಲ್ಲಿರುತ್ತ ನೀರು ಕುಡಿಯಲು ಬಂದ ಕುರಿಗಳನ್ನು ಹಿಡಿದುಕೊಂಡು ಕೆರೆಯಲ್ಲಿ ಮುಳುಗುತ್ತಿದ್ದನು. ಇದನ್ನು ತಡೆಗಟ್ಟಲು ಮಾಳಿಂಗನು ಕೆರೆಯ ದಡಕ್ಕೆ ಬಂದಾಗ ಅವನನ್ನು ಹಿಡಿದು ಕೈಲಾಸಕ್ಕೆ ಕರೆದೊಯ್ದು ಶಿವನೆದುರಿಗೆ ನಿಲ್ಲಿಸಿದನು.

ಕೂಸನ್ನು ಕೊಲ್ಲುವ ಹಂಚಿಕೆಯಿಂದ ಕಾಳಿನಾರಾಯಣ ಕ್ರೂರಿಗಳಾದ ಸೂಲಗಿತ್ತಿಯರನ್ನು ಕಳುಹಿಸುತ್ತಾನೆ. ಅವರು ಉಕ್ಕಿನ ಉಗುರುಗಳನ್ನು ಹಾಕಿಕೊಂಡು ಕೂಸು ಹುಟ್ಟುತ್ತಲೇ ಕೊಲ್ಲಲ್ಲು ಸಿದ್ಧರಾಗಿರುತ್ತಾರೆ. ಆದರೆ ಕೂಸು ಅವರ ಎದೆ, ಬಾಯಿ, ಸೊಂಟಗಳಿಗೆ ಒದ್ದು ಅವರನು ಘಾಸಿಗೊಳಿಸಿ ಓಡಿಸುತ್ತದೆ.

ಕಾಯಿಕೊಂಕಣ ನಾಡಿನ ಸಿರಿವಾಳ ಎಂಬ ಊರಿಗೆ ಮಾಯಕ್ಕ ಬೀರೇಶನೊಂದಿಗೆ ಬಂದಾಗ ಅಲ್ಲಿ ನಡೆದ ಘಟನೆ ಬೀರೇಶನ ವೀರಗುಣವನ್ನು ಪ್ರದರ್ಶಿಸುತ್ತದೆ. ಸಿರಿವಾಳದ ದೇವಾಲಯದ ಮುಂದೆ ಕೂಸಿನ ರೂಪದ ಬೀರೇಶನನ್ನು ಮಗ್ಗುಲಲ್ಲಿಟ್ಟುಕೊಂಡು ಮಾಯವ್ವ ಮಲಗಿದ್ದಳು. ಆ ವೇಳೆಯಲ್ಲಿ ಬೀರಪ್ಪನು ಮಾಯದಾಟಿವೆ ಯೆಂಬಂತೆ ಮಗ್ಗಲು ಬಾವಿಗೆ ಈಜಾಡಲು ಹೋದನು. ಇದೇ ವೇಳೆಗೆ ದೇವಾಲಯಕ್ಕೆ ಬಂದ ಪೂಜಾರಿ ಮಾಯವ್ವನ ಸುಂದರ ರೂಪವನ್ನು ನೋಡಿ ಒಡೆಯನಾದ ಭಗನಾಥನಿಗೆ ತಿಳಿಸಿದನು. ಭಗನಾಥನು ಸೇವಕರನ್ನು ಕಳುಹಿಸಿ ಅವಳ ಬಗಲಲ್ಲಿರುವ ಕೂಸುಸಹಿತ ಮಾಯವ್ವನನ್ನು ಹಿಡಿದು ತರುವರು. ಭಗನಾಥನು ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳಬೇಕೆಂದು ಸೆರಗು ಹಿಡಿದು ಮಠಕ್ಕೆ ಕರೆದನು. ಈ ಪ್ರಸಂಗದಲ್ಲಿ ಬೀರಪ್ಪ ಕೂಸಿನ ರೂಪ ಕಳೆದುಕೊಂಡು ವಿರಾಟರೂಪ ತಾಳಿದೆ. ಬೀರೇಶನ ರೂಪವನ್ನು, ಅವನು ಭಗನಾಥನನ್ನು ಸಂಹರಿಸಿದ ಬಗೆಯನ್ನು ಕಾವ್ಯ ಅಗಾಧವಾಗಿ ಚಿತ್ರಿಸುತ್ತದೆ.

ಅಕ್ಕನ ಮಗ್ಗುಲದೊಳಗೇನೆ ಸಿಡದಾ ನಿಂದ್ರು ತಾನೇನ ಸಿಡದಾ ನಿಂದ್ರುತಾನೇನ ತಮ್ಮ ಮಾಯದಾಟಿ ನಡೆಸ್ಯಾನ ಪಾತಾಳದೊಳಗೆ ಇವನೆ ಪಾದೇನೆ ಕೈಲಾಸದೊಳಗ ಇವನೆ ಕಳಿಸೇನ.

ಮಾಯಿಗಂಗಾಳ ಹಚ್ಚಿದೆನೆಯ್ಯ ಪಂಚಡಂಕಿ ಹೊಡಿದನಯ್ಯ
ಪಂಚಡಂಕಿ ಹೊಡಿದನಯ್ಯ ಶಿರವ ದಾರಿ ಬಿದ್ದಾವ.[೪೦]

ಬೀರೇಶನಿಗೆ ಅಕ್ಕನ ಬಗಲಲ್ಲಿ ಕೂಸಾಗುವ ಪರಿಯೂ ಗೊತ್ತು. ಪ್ರಸಂಗ ಬಂದರೆ ಬೃಹದಾಕಾರ ತಾಳಿ ದೈತ್ಯನನ್ನು ಭೀಕರವಾಗಿ ಕೊಲ್ಲುವುದು ಗೊತ್ತು.

ಭೀಮಾ ನದಿಯ ದಂಡೆಯ ಮೇಲಿರುವ ಊರು ಕಲ್ಲತ್ತಿ. ಕೂಸು ಬೀರಪ್ಪನನ್ನು ಎತ್ತಿಕೊಂಡು ಮಾಯವ್ವ ಅಲ್ಲಿಗೆ ಬಂದಳು. ಊರ ಮುಂದೆ ಕಟ್ಟೆಯೊಂದರ ಮೇಲೆ ನಿಂತಿರುವಾಗ ಹುತ್ತವೊಂದು ಕಣ್ಣಿಗೆ ತೋರಿ ಅಲ್ಲಿಂದ ನಾಗರಹಾವೊಂದು ಭೋರ್ಗರೆಯುತ್ತ ಬಂತು. ಬೀರಪ್ಪ ಅದಕ್ಕೆ ಹೆದರದೇ ಮುಂದುವರಿದು ಅದರ ಹೆಡೆಯನ್ನು ಎತ್ತಿ ಹಿಡಿದುದೇ ಅಲ್ಲದೇ ಹೆಡೆಯ ಮೇಲೇರಿ ನಗರವನ್ನು ನೋಡುವ ಸಾಹಸ ಮಾಡಿದನು.

ಮುಂಗಿ ಪಟ್ಟಣದ ರಾಜಕುಮಾರಿಗೆ ಬೆನ್ನಬ್ಯಾತಳ ಬ್ಯಾನಿಯಾಗಿ ವಿಪರೀತ ತೊಂದರೆಗೊಳಗಾಗಿದ್ದಳು. ರಾಜನು ಮಗಳ ಬೇನೆ ಕಳೆದವರಿಗೆ ಮಗಳನ್ನು ಕೊಡುವುದಾಗಿ ಸಾರಿದ್ದ. ಅಲ್ಲಿಗೆ ಬಂದ ಬೀರಪ್ಪ ಅವಳ ಬೇನೆಯನ್ನು ಗುಣಪಡಿಸುತ್ತಾನೆ. ಆದರೆ ರಾಜಕುಮಾರಿಯನ್ನು ಲಗ್ನವಾಗಲಿಲ್ಲ. ಅವಳು ತನ್ನ ಕಣ್ಣಿಗೆ ತಾಯಿ ಅಕ್ಕ ತಂಗಿಯಾಗಿ ಕಾಣುತ್ತಾಳೆಂದು ಅವಳನ್ನು ನಿರಾಕರಿಸಿ ರಾಜನಿಂದ ಪಂಚಡಂಗಿ, ರುಮ್ಮಿ, ಚೂರಿ, ಒನಕೆ, ಹಾರಿ, ಕಲಿಕೆ, ಸೀರೆ ಪೇಟಗಳನ್ನು ಮಾತ್ರ ಕಾಣಿಕೆಯಾಗಿ ಸ್ವೀಕರಿಸುತ್ತಾನೆ.

೧೦. ಬೀರಪ್ಪನ ರೂಪಾಂತರಗಳು ವೀರಭದ್ರ-ವಿರೂಪಾಕ್ಷ

ಕುರುಬರ ಬೀರದೇವ ಮತ್ತು ಲಿಂಗಾಯತ ವೀರಶೈವರ ವೀರಭದ್ರ ದೈವಗಳಲ್ಲಿ ಅನೇಕ ಸಾಮ್ಯತೆಗಳನ್ನು ನಾವು ಕಾಣುತ್ತೇವೆ. ಬೀರಪ್ಪನ ಉಪಾಸಕರಾದ ವೀರಗಾರರಂತೆ ವೀರಭದ್ರನಿಗೆ ಪುರವಂತೆಂಬ ಉಪಾಸಕರಿದ್ದಾರೆ.

ಇವರಿಬ್ಬರು ತೊಡುವ ಉಡುಗೆಗಳು, ಬಳಸುವ ಗೌರವ ಬಿರುದುಗಳು, ನಡೆಸುವ ಆಚರಣೆಗಳಲ್ಲಿ ಅಷ್ಟೇನೂ ವ್ಯತ್ಯಾಸಗಳಿಲ್ಲ. ವೀರಭದ್ರನ ಮಗ್ಗುಲಲ್ಲಿರುವ ದಕ್ಷಬ್ರಹ್ಮನ ವಿಗ್ರಹಕ್ಕೆ ಹೊಂದಿಕೊಂಡು ಕುರುಬರ ಸಾಕು ಪ್ರಾಣಿಯಾದ ಟಗರಿನ ತಲೆಯಿರುವುದು. ಕುರಿಗಳಿಗೆ ತೊಪ್ಪಲು ಕೀಳಲು ಹಾಗೂ ಕಾಯಲು ಬಳಸುವ ಕೋಲಿಗೆ ದೋಟಿ ಎಂದು ಕರೆಯುತ್ತಾರೆ. ಈ ದೋಟಿಯು ವೀರಭದ್ರನ ವಿಗ್ರಹದ ಮಗ್ಗಲು ಕಡ್ಡಾಯವಾಗಿ ಇರುತ್ತದೆ. ಕೆಲವು ದೇವಾಲಯಗಳಲ್ಲಿ ಬೀರಪ್ಪ ವೀರಭದ್ರ ಜೊತೆ ಜೊತೆಯಾಗಿ ಪೂಜೆಗೊಳ್ಳುತ್ತಿರುವುದು. ಇಂಥ ಅಂಶಗಳನ್ನು ಗಮನಿಸಿದರೆ ವೀರಭದ್ರನು ಬೀರಪ್ಪನ ಪರಿಷ್ಕೃತರೂಪ ವಿರೂಪಾಕ್ಷವೆಂಬುದು ಸ್ಪಷ್ಟವಾಗುತ್ತದೆ.

ಕುರುಬರ ಆರಾಧ್ಯದೈವನಾದ ಬೀರಪ್ಪನು ಯಾವುದೊಂದು ಹಂತದಲ್ಲಿ ವೀರಭದ್ರನಾಗಿ, ವಿರೂಪಾಕ್ಷನಾಗಿ, ಪರಿಷ್ಕೃತಗೊಂಡ ಬಗೆಗೆ ಕೆಲವು ಕುರುಹುಗಳನ್ನು ಕಾಣಬಹುದು, ಈ ಹಿನ್ನೆಲೆಯಲ್ಲಿ ಗುಂಥರ್ ಸೊಂತೈಮರ್ ರಾ.ಚಿಂ. ಢೇರೆ, ಎಂ.ಎಂ. ಕಲಬುರ್ಗಿ ಮತ್ತು ಗೋವಿಂದಮೂರ್ತಿ ದೇಸಾಯಿ, ಡಾ. ವೀರೇಶ ಬಡಿಗೇರ ಅವರು ಚರ್ಚಿಸಿದ್ದಾರೆ. ಆ ಹೇಳಿಕೆಗಳನ್ನು ಇಲ್ಲಿ ಗಮನಿಸಬಹುದಾಗಿದೆ.

ಬೀರಪ್ಪ, ಈರಪ್ಪ, ವೀರಪ್ಪ, ವೀರಭದ್ರ ಮತ್ತು ವೀರನಾದನೆನ್ನುವ ಜನಪ್ರಿಯ ಕಥನಗಳು ಸಿಗುತ್ತವೆ. ಎಂ.ಎಂ. ಕಲಬುರ್ಗಿ ಅವರು "ಬೀರಪ್ಪನನ್ನೇ ವೀರಪ್ಪನನ್ನಾಗಿ ಮಾಡಲಾಗಿದೆ. ಹಂಪೆಯ ವಿರೂಪಾಕ್ಷ ದೇವಾಲಯ ಮೂಲತಃ ಬೀರಪ್ಪ ದೇವಾಲಯ. ಕಾಲಾಂತರದಲ್ಲಿ ಇರುವ ಬೀರಪ್ಪನನ್ನೇ ವಿರೂಪಾಕ್ಷನನ್ನಾಗಿ ರೂಪಾಂತರಿಸಲಾಯಿತು" ಎನ್ನುತ್ತಾರೆ.

ಗುಂಥರ್ ಸೊಂತೈಮರ್ ಗೋದನಪಾಲಕನಾದ ವಿಠಲನು ಗೊಲ್ಲರ ಆರಾಧ್ಯ ದೈವನಿದ್ದಂತೆ, ಕುರಿ ಟಗರುಗಳ ಪಾಲಕನಾದ ಬೀರದೇವರು ಕುರುಬರ ಆರಾಧ್ಯದೈವ. ಈ ಬೀರದೇವರೇ ವೀರಶೈವರ ಪ್ರಭಾವದಿಂದ ವೀರಭದ್ರನಾಗಿರಬೇಕು ಅಥವಾ ವೀರಭದ್ರೀಕರಣಗೊಂಡರಿಬೇಕು".[೫೧] ರಾ.ಚಿಂ.ಢೇರೆ, "ಬೀರೋಬಾ, ಬೀರಪ್ಪ ಈ ಹೆಸರಿನಲ್ಲಿಯ ಬೀರ ಎಂಬ ಪದವು ಧ್ವನಿಸಾಮ್ಯದಿಂದಾಗಿ ಪ್ರತಷ್ಠಿತ ಶೈವಧರ್ಮದ ವೀರಭದ್ರನ ನೆನಪಾಗುವುದು ಸಹಜ. ಅಲ್ಲದೇ ಉಗ್ರಸ್ವಭಾವದ ದೃಷ್ಟಿಯಿಂದಲೂ ನೋಡಿದರೆ ಬೀರಪ್ಪ ಮತ್ತು ವೀರಭದ್ರರಲ್ಲಿ ಸಾಮ್ಯವಿದೆ. ಹೆಸರಿನಲ್ಲಿಯ ಉಚ್ಚಾರ ಸಾಮ್ಯ ಹಾಗೂ ಉಗ್ರಸ್ವಭಾವದಲ್ಲಿಯ ಸಾಮ್ಯವು ಬೀರಪ್ಪನನ್ನು ವೀರಭದ್ರೀಕರಣಗೊಳಿಸಲು ತುಂಬಾ ಸುಲಭವಾಯಿತು. ವೀರಶೈವರು ಈ ಹೊಸ ಗೋವಳಿಗರ ಪೂರ್ವಶ್ರದ್ಧೆಯನ್ನು ಎತ್ತರಿಸಿಕೊಳ್ಳಲು ಮತ್ತು ಅವರ ಪೂರ್ವಶ್ರದ್ಧೆಯ ಸಂತರ್ಪಣಗೊಳಿಸಿಕೊಳ್ಳಲು ಬೀರಪ್ಪನ ಹಲವು ಸ್ಥಳಗಳನ್ನೆಲ್ಲ ವೀರಭದ್ರೀಕರಣಗೊಳಿಸಿದರು. ಆಂಧ್ರ, ಕರ್ನಾಟಕ, ಮಹಾರಾಷ್ಟ್ರದಲ್ಲಿಯ ವೀರಶೈವರ ಪ್ರಭಾವ ಕ್ಷೇತ್ರದಲ್ಲಿ ವೀರಭದ್ರೋಪಾಸನೆಗೆ ವಿಶೇಷ ಮಹತ್ವ ಪ್ರಾಪ್ತವಾಗಲು ಈ ಸಾಮಾಜಿಕ ಹಿನ್ನೆಲೆಯೇ ಕಾರಣವಾಗಿದೆ. ವಿರೂಪಾಕ್ಷನು ವೀರಭದ್ರನ ಅಂದರೆ ಮೂಲದ ವಿರೂಪನ ಬೀರಪ್ಪನ ಒಂದು ಪರ್ಯಾಯ ನಾಮವಾಗಿರುತ್ತದೆ".[೫೨]

ಎಂ.ಎಂ. ಕಲಬುರ್ಗಿ ಅವರು ಕುರುಬರ ಬೀರಪ್ಪನ ಪರಿಷ್ಕೃತರೂಪ ಲಿಂಗಾಯತರ ವೀರಭದ್ರ[೪೩]

ಗೋವಿಂದಮೂರ್ತಿ ದೇಸಾಯಿ ಅವರು ವೀರಲಿಂಗ ಬೀರದೇವರು ವಿಠ್ಠಲ ವೀರಭದ್ರ ಒಂದರಲ್ಲಿ ಒಂದು ಸಮನ್ವಯಗೊಂಡಂತೆ ಕಾಣುತ್ತವೆ ಎನ್ನುತ್ತಾರೆ.[೪೪]

ಡಾ. ವೀರೇಶ ಬಡಿಗೇರ ಅವರು ಪ್ರಬಲವಾದ ಧಾರ್ಮಿಕ ಶಕ್ತಿಗಳು ಮುಗ್ಧ ಕುರುಬರ ಮನಸ್ಸನ್ನು ಬಳಸಿಕೊಂಡು ಬೀರಪ್ಪನನ್ನು ವೀರಭದ್ರನ ಅವತಾರವೆಂದು ರೂಪಿಸಿದರು ಎನ್ನುತ್ತಾರೆ. ಇಷ್ಟೇ ಅಲ್ಲದೇ ಬೀರಪ್ಪ ವೀರಭದ್ರರಂತೆ ಆರಾಧನೆಗೊಳ್ಳುತ್ತಿರುವ ಪ್ರಸಿದ್ಧ ದೈವಗಳಲ್ಲಿ ವಿರೂಪಾಕ್ಷನೂ ಒಬ್ಬ. ವಿಶ್ವಪರಂಪರೆಯ ತಾಣಗಳಲ್ಲಿ ಒಂದಾದ ಹಂಪೆ ಈತನ ಪ್ರಮುಖ ನೆಲೆ. ವಿಜಯನಗರ ಸಾಮ್ರಾಜ್ಯದ ಅಧಿದೈವನಾದ ವಿರೂಪಾಕ್ಷನನ್ನು ಹರಿಹರ ರಾಘವಾಂಕರಾದಿಯಾಗಿ ಅನೇಕ ಕವಿಗಳು ತಮ್ಮ ಕೃತಿಗಳ ಮೂಲಕ ಮನದುಂಬಿ ಸ್ತುತಿಗೈದಿರುವರು. ಅಷ್ಟೇ ಏಕೆ, ವಿಜಯನಗರದ ಶಾಸನಗಳಲ್ಲಿ ರಾಜನ ಹೆಸರಿದೆ. ಶ್ರೀ ವಿರೂಪಾಕ್ಷ ಎಂಬ ಅಂಕಿತದೊಂದಿಗೆ ಮುಕ್ತಾಯಗೊಳ್ಳುತ್ತದೆ. ರಾ.ಚಿಂ. ಢೇರೆಯವರು ವಿರೂಪಾಕ್ಷನ ಮೂಲವನ್ನು ಬೀರಪ್ಪನ ಮೂಲಕ ಕಂಡುಕೊಳ್ಳುವ ಪ್ರಯತ್ನವನ್ನು ಮಾಡಿದ್ದಾರೆ. ಅವರೇ ಹೇಳಿದಂತೆ ವಿರೂಪಾಕ್ಷನು ವೀರಭದ್ರನ ಅಂದರೆ ಮೂಲದ ವಿರೂಪನ, ಬೀರಪ್ಪನ ಒಂದು ಪರ್ಯಾಯ ನಾಮವಾಗಿರುತ್ತದೆ. ಇನ್ನೂ ಮುಂದುವರೆದು ಎಂ.ಎಂ. ಕಲಬುರ್ಗಿ ಅವರು ಲೇಖನವೊಂದರಲ್ಲಿ ಚರ್ಚಿಸುತ್ತಾ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ ಹಕ್ಕಬುಕ್ಕರು ಕುರುಬರೆಂಬುದನ್ನು ಹಂಪೆಯ ಸುತ್ತಮುತ್ತ ಕುರುಬರು ಅಧಿಕ ಸಂಖ್ಯೆಯಲ್ಲಿರುವುದನ್ನು ನೋಡಿದರೆ ಇಲ್ಲಿಯ ವಿರೂಪಾಕ್ಷಲಿಂಗ ಮೂಲತಃ ಕುರುಬರ ಆರಾಧ್ಯದೈವ ಬೀರಪ್ಪನಾಗಿರಬಹುದೆಂಬ ನಂಬುಗೆ ಇನ್ನೂ ಗಟ್ಟಿಯಾಗುತ್ತದೆ.

ಬೀರಪ್ಪನ ವೀರಗಾರರು ಹಾಗೂ ವೀರಭದ್ರನ ಪುರವಂತರ ಆಚರಣೆಗಳಲ್ಲಿ ಸಮಾನ ಅಂಶಗಳಿರುವುದು, ವೀರಭದ್ರನ ವಿಗ್ರಹದ ಮಗ್ಗುಲಲ್ಲಿ ಕುರುಬರ ಟಗರಿನ ಚಿತ್ರವಿರುವುದು, ಕುರುಬರ ದೋಟಿಗಳಿರುವುದನ್ನು ಗಮನಿಸಿ ಕಲಬುರ್ಗಿಯವರು ವೀರಭದ್ರನು ಬೀರಪ್ಪನ ಪರಿಷ್ಕೃತ ರೂಪ ಎಂದು ಹೇಳಿರುವುದು ಸರಿಯಾಗಿದೆ. ಇನ್ನೂ ಮುಂದುವರೆದು ಹೇಳುವುದಾದರೆ, ರಾಯಚೂರು ಜಿಲ್ಲೆಯ ಮಸ್ಕಿ ಶಾಸನಗಳಲ್ಲಿ ಶ್ರೀ ವಿರೂಪಾಕ್ಷ ಲಿಂಗಾಯ ನಮಃ ಎಂಬ ಪಾಠವಿರುವುದು.[೪೫] ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಹಂಪೆಯ ವಿರೂಪಾಕ್ಷನು ಮೂಲದಲ್ಲಿ ಬೀರಪ್ಪನಾಗಿದ್ದನೆಂದು ಹೇಳಬಹುದಾಗಿದೆ. ವಿರೂಪಾಕ್ಷ ದೇವಾಲಯದ ಬಲಭಾಗದ ಎತ್ತರವಾದ ಗುಡ್ಡ ಪ್ರದೇಶದಲ್ಲಿ ವಿರೂಪಾಕ್ಷನ ಮೂಲವೆಂದು ಹೇಳುವ ದೇವಾಲಯವಿದೆ. ಇದು ಆರಂಭದಲ್ಲಿ ಬೀರಪ್ಪನ ಗದ್ದುಗೆಯಾಗಿತ್ತು. ನಂತರದಲ್ಲಿ ವಿರೂಪಾಕ್ಷನ ದೇವಾಲಯ ಎಂದು ಅಭಿಪ್ರಾಯವಾಗಿದೆ.

ಈ ಹೇಳಿಕೆಗಳನ್ನು ಅವಲೋಕಿಸಿದಾಗ ಬೀರಪ್ಪನ ಮುಂದುವರಿದ ರೂಪವೇ ವೀರಭದ್ರ, ವಿರೂಪಾಕ್ಷ ಎಂಬುದು ಸ್ಪಷ್ಟವಾಗುತ್ತದೆ. ವೀರನೆ ಬೀರನಾದನೆನ್ನುವ ಕಥನವನ್ನು ಹೇಳುತ್ತದೆ. ಬೀರ ಮತ್ತು ಪೀರ ಎಂಬ ಪದಗಳನ್ನಿಟ್ಟುಕೊಂಡು ಬೀರ, ವೀರ, ಪೀರ ಎಂಬ ಸಮನ್ವಯತೆಯನ್ನು ಕಾಣುವುದುಂಟು. ವೀರನು ತಾನಾದ, ಬೀರನು ತಾನಾದ, ಪೀರನು ತಾನಾದ ಮುಸಲ್ಮಾನರಿಗೆ ಎಂಬ ಹಾಡೊಂದು ಲಭ್ಯವಿದೆ.

"ವೀರಶೈವರಿಗೆ ವೀರನಾಗಿ ತೋರ್‍ಯಾನು ತಾನು ಪರಶಿವನು ಧರೆಯೊಳಗೆ ವೀರಸುತನಾದ ಬೀರನು ತಾನಾದ ಪೀರನಾದ ಮುಸಲ್ಮಾನರಿಗೆ

ಕುರುಬರ ಕುಲವನ್ನು ನಿರ್ಮಿಸಿ ಡೊಳ್ಳನು ಕರದಿಯನ್ನು ಕೊಟ್ಟಾನ ಅವರೊಳಗೆ
ಬಿಲ್ಲಾಸೂರ ದೈತ್ಯಗೆ ಕೊಂದ ಕಾರಣ ನೀನು ಭೂಲೋಕಕ್ಕೆ ಹೋಗಿ ಜನಿಸಬೇಕು ಅಂದಾನೋ
ಭೂಲೋಕದೊಳಗೆ ನೀರು ಬೀರದೇವರಾಗಿ
ಹಾಲುಮತದ ದೇವನಾಗಿ ಮರಿ ಅಂದಾನೋ..."

ಈ ಹಾಡುಗಳು ಬೀರಪ್ಪನ ಬಗ್ಗೆ ಬಂದ ಲಿಖಿತ ಕೃತಿಗಳನ್ನು ಆಧರಿಸಿ ರಚನೆ ಆಗಿರುವುದಕ್ಕೆ ಸಾಧ್ಯತೆ ಇದೆ.

ಬೀರಪ್ಪನನ್ನು ವೀರಪ್ಪನನ್ನಾಗಿಸಿದ ಕಥನಗಳ ಹಿನ್ನೆಲೆಯಲ್ಲಿ ಹಿಂದೆ ಹಾಲುಮತ ಮತ್ತು ವೀರಶೈವ ಲಿಂಗಾಯತ ಧರ್ಮಗಳ ಸಂಘರ್ಷವಿದೆ. ಬೀರಪ್ಪನನ್ನು ಭಂಡಾರ ಪಂಥದಿಂದ ವಿಸ್ಮೃತಿಗೊಳಿಸುವ ಮತ್ತು ವೀರಶೈವ ಧರ್ಮಕ್ಕೆ ಪರಿವರ್ತಿಸುವ ಬೌದ್ಧಿಕತೆಯೂ ಇದೆ. ಏಕೆಂದರೆ ವೀರಶೈವ ಧರ್ಮ ಪ್ರಚಲಿತಕ್ಕೆ ಬರುವ ವೇಳೆಗಾಗಲೇ ಭಂಡಾರ ಆರಾಧನೆ ಜನಪ್ರಿಯವಾಗಿತ್ತು. ಬೀರಪ್ಪ ಭಂಡಾರ ಪಂಥದ ಆರಾಧನೆಯ ಪ್ರಧಾನ ನಾಯಕನಾಗಿದ್ದ. ಈತನ ಶಿಷ್ಯ ಪರಂಪರೆ ಭಂಡಾರ ಪಂಥವನ್ನು ತೀವ್ರವಾಗಿ ಪ್ರತಿಪಾದನೆ ಮಾಡುತ್ತಿತ್ತು. ಲಿಂಗರಹಿತ ಶೈವ ಆರಾಧನೆಯನ್ನು ಜಾರಿಗೆ ತಂದಿತ್ತು. ಈ ತತ್ವವನ್ನು ಅನುಸರಿಸುವ ಜನಸಮುದಾಯ ಹೆಚ್ಚಾಗಿತ್ತು. ಆಗ ತಾನೆ ಆರಂಭಿಸಿದ ವೀರಶೈವ ಧರ್ಮವನ್ನು ವಿಭೂತಿಪಂಥವನ್ನು ಲಿಂಗ ಆರಾಧನೆಯ ಶೈವ ಧರ್ಮವನ್ನು ಪ್ರಧಾನಧಾರೆಗೆ ತರಬೇಕಾದ ಒತ್ತಡ ಆ ಧರ್ಮದ ನಾಯಕರಲ್ಲಿತ್ತು. ಆ ಕಾರಣಕ್ಕೆ ಹತ್ತಿರ ಸೆಳೆದುಕೊಳ್ಳಬೇಕಾದ ಅನಿವಾರ್ಯತೆ ಇತ್ತು. ಹೊಸ ದೈವಗಳನ್ನು ಸೃಷ್ಟಿಸಿಕೊಳ್ಳುವುದು ಕಷ್ಟವಾಗಿತ್ತು. ಆದ್ದರಿಂದ ಮೈಲಾರಲಿಂಗನನ್ನು ಮಲ್ಲಯ್ಯನನ್ನಾಗಿ, ಮಲ್ಲಿಕಾರ್ಜುನನ್ನಾಗಿ, ಬೀರಪ್ಪನನ್ನು ವೀರಪ್ಪನನ್ನಾಗಿ ಪರಿವರ್ತನೆ ಮಾಡಿಕೊಂಡು ಆರಾಧನೆ ಮಾಡುವುದಕ್ಕೆ ಆರಂಭಿಸಿದರು. ಆ ಸಂದರ್ಭದಲ್ಲಿ ವೀರಪ್ಪನಿಂದ ಬೀರಪ್ಪನ ಸೃಷ್ಟಿಯಾಯಿತು ಎನ್ನುವ ಸಾಂಸ್ಕೃತಿಕ ಕಥನಗಳನ್ನು, ಚಾರಿತ್ರಿಕ ಕಥನಗಳನ್ನು ಸೃಷ್ಟಿಸಿದರು.

ಬೀರಪ್ಪ ಈರಪ್ಪನನ್ನು ಕುಲದೈವಗಳನ್ನಾಗಿ ಮಾಡಿಕೊಂಡು ಕೆಲವು ಕುಲಗಳು ಕುರುಬ ಸಮುದಾಯದಲ್ಲಿವೆ. ಹೊರತಿ, ಅಥಣಿ ತಾಲೂಕು ಗ್ರಾಮದ ಬೀರಪ್ಪ ಸುತ್ತಮುತ್ತಲಿನ ಗ್ರಾಮಗಳ ಕುರುಬರ ಕುಲದೈವ. ಈ ದೇವಾಲಯವು ಕುರುಬರ ಆಡಳಿತ ವ್ಯವಸ್ಥೆಯಲ್ಲಿದೆ. ಈ ದೇವಾಲಯದ ಸ್ಥಳವನ್ನು ಕುರುಬ ಕುಲ ಹುಟ್ಟಿದ ಸ್ಥಳವೆಂದು ಹೇಳುತ್ತಾರೆ. ಸಾಂಸ್ಕೃತಿಕ ಕಥನಗಳೂ ಸಿಗುತ್ತದೆ. ಆ ಗ್ರಾಮದ ರೇವಣಸಿದ್ದ, ಸಿದ್ದೇಶ್ವರ, ಬೊಮ್ಮದೇವರು. ಬ್ರಹ್ಮ ಬೀರಪ್ಪನ ತಂದೆ, ಸಪ್ತಮಾಳಮ್ಮ ಮೈಲಾರಲಿಂಗನ ಹೆಂಡತಿ ಮುಂತಾದ ಹಾಲುಮತ ಸಮುದಾಯದ ಆರಾಧ್ಯ ದೈವಗಳ ಆಚರಣೆಗಳಲ್ಲಿ ಬೀರಪ್ಪ ದೈವ ಪ್ರಧಾನ ಪಾತ್ರ ವಹಿಸುತ್ತದೆ. ಬೀರಪ್ಪ ದೈವ ಬರದಿದ್ದರೆ ಈ ದೈವಗಳ ಜಾತ್ರೆಗಳು ನಡೆಯುವುದಿಲ್ಲವೆಂದು ಗ್ರಾಮಸ್ಥರು ಹೇಳುತ್ತಾರೆ. ಇದು ಕುಲದ

ಹಿರೇದೈವವಾಗಿದ್ದು, ಹಾಗಾಗಿ ಎಲ್ಲ ದೈವಗಳ ಆಚರಣೆಗಳಲ್ಲಿ ಈ ದೈವ ಇರಲೇಬೇಕು ಅನ್ನುವುದು ಹಿರಿಯರ ನಂಬಿಕೆ. ಇನ್ನೊಂದು ರೀತಿಯಲ್ಲಿ ಹೀಗೆ ಹೇಳಲಾಗಿದೆ. ನಾಗರಿಕತೆಯ ಪ್ರಗತಿಯಲ್ಲಿ ಮಾನವ ತನ್ನ ಜೀವಂತಿಕೆಗಾಗಿ ಹೋರಾಟ ನಡೆಸುವುದು ಪ್ರಮುಖ ಸ್ಥಾನ ಪಡೆಯಿತು. ನಾಗರಿಕತೆ ಅಭಿವೃದ್ಧಿಗೊಂಡಂತೆ ಆತನ ಶಕ್ತಿ ಪ್ರಯೋಗವು ಅನಾಗರಿಕತೆಯ ಅಮಾನುಷ ವರ್ತನೆ ಎಂಬುದನ್ನು ಅರಿತು ಅದನ್ನು ನಿಯಂತ್ರಿಸಲು ಕೆಲವು ಕಟ್ಟುಪಾಡುಗಳನ್ನು ಹಾಕಿಕೊಂಡನು. ಇದರಿಂದ ಅವನ ನೈತಿಕ ಹೋರಾಟಕ್ಕೆ ಮತ್ತು ನೈತಿಕ ವೀರತ್ವಕ್ಕೆ ಬೆಂಬಲ ದೊರೆಯಿತು. ನೈತಿಕ ಆಧಾರಿತ ವೀರತನಕ್ಕೆ ಸಾಮಾಜಿಕ ಮೌಲ್ಯ ಹೆಚ್ಚಿಸಿತು. ಅಬಲ ಅಬಲೆಯರ ಜೀವರಕ್ಷಣೆ, ಮಾನರಕ್ಷಣೆ ಹಾಗೂ ದೇಶರಕ್ಷಣೆಗಾಗಿ ಹೋರಾಡುವ ವ್ಯಕ್ತಿಗಳಿಗೆ ಇಹಪರಗಳೆರಡರಲ್ಲೂ ಗೌರವಸ್ಥಾನ ಪ್ರಾಪ್ತವಾಗುತ್ತದೆ ಎಂದು ನಂಬಿದನು. ಮಾನವನ ಸಾಮೂಹಿಕ ಹೋರಾಟವೇ ಯುದ್ಧ. ಇಂತಹ ಯುದ್ಧಗಳಲ್ಲಿ ಜೀವದ ಹಂಗು ತೊರೆದು ಕಾದಾಡಿ ಯಾರು ಮಡಿಯುತ್ತಾರೋ ಅವರಿಗೆ ವೀರಸ್ವರ್ಗ, ಸಕಲ ಸ್ವರ್ಗಗಳು ಪ್ರಾಪ್ತವಾಗುತ್ತವೆ. ಇನ್ನು ಕೆಲವು ಸಂದರ್ಭಗಳಲ್ಲಿ ಯುದ್ಧದ ಹೊರಗೂ ವೀರತ್ವದ ಪ್ರದರ್ಶನಗಳು ನಡೆದವು. ನರಬಲಿಯ ಪ್ರಸಿದ್ಧಿಯ ಸಮಯದಲ್ಲಿ ನೂತನ ಕಟ್ಟಡ, ಕೆರೆಗಳಿಗೆ ಸ್ವಯಂ ಪ್ರೇರಣೆಯಿಂದ ತಮ್ಮನ್ನು ತಾವೇ ಬಲಿ ಕೊಟ್ಟು ಹುತಾತ್ಮರಾಗುವರ ಸಂಖ್ಯೆಯೂ ಅಧಿಕಗೊಂಡಿತು. ಹುತಾತ್ಮರ ಸ್ಮರಣೆಗಾಗಿ ಸ್ಮಾರಕ, ವೀರಗಲ್ಲು ನೆಡುವ ನೂತನ ಪರಂಪರೆಗೆ ನಾಂದಿಯಾಯಿತು. ವೀರಗಲ್ಲು ಇಲ್ಲವೇ ಕಂಬಗಳ ರೂಪದಲ್ಲಿ ಅವರ ಆರಾಧನೆ ಆರಂಭಗೊಂಡಿತು. ಇದರಿಂದ ವೀರ, ಧೀರರು ತಮ್ಮ ವೀರತ್ವದ ಹಿನ್ನೆಲೆಯಿಂದ ದೈವತ್ವಕ್ಕೇರತೊಡಗಿದರು. ದುಷ್ಟರ ಮೇಲೆ ಜಯ ಸಾಧಿಸಿದ ವೀರರೇ ಕಾಲಾಂತರ ವೀರ, ಬೀರರಾದರು. ನಮ್ಮ ಪ್ರಾಚೀನ ಪುರಾಣಗಳು ದುಷ್ಟರನ್ನು ರಾಕ್ಷಸರೆಂದು ಕರೆದಿದೆ. ದುಷ್ಟರನ್ನು ಸಂಹಾರ ಮಾಡಿದವರನ್ನು ಬೀರದೇವತೆಗಳೆಂದು ಕರೆದರು. ಅಂತಹ ವೀರರ ದೊಡ್ಡ ಪಟ್ಟಿ ಹನುಮಂತನ ಬಾಲದಂತೆ ಬೆಳೆದು ಮೈಲಾರ, ಮಾಳಪ್ಪ, ಖಂಡೋಬಾ, ವೀರಪ್ಪ ಮುಂತಾದ ಸಾಂಸ್ಕೃತಿಕ ವೀರದೇವತೆಗಳು ಜನ್ಮ ಪಡೆದವು.

ಕಾಲ ಗತಿಸಿದಂತೆ ಪ್ರತಿ ಗ್ರಾಮದಲ್ಲಿ ವೀರರ ಸಂಖ್ಯೆ ಬೆಳೆಯತೊಡಗಿತು. ಪ್ರತಿಯೊಬ್ಬ ವೀರನ ಪ್ರತ್ಯೇಕ ಆರಾಧನೆ ನಡೆಸುವುದು ದುಸ್ತರವಾಯಿತು. ನಿರಾಕಾರವು ಅರಿಕೆಗೆ ಬರಲಾರದು. ಅರ್ಥಕ್ಕೆ ಕೆಲವೊಂದು ಇತಿ-ಮಿತಿ ಇರಲೇಬೇಕು. ವೀರತ್ವದ ಶಕ್ತಿಗೆ ಒಂದಿಲ್ಲೊಂದು ಆಕೃತಿ ಇರಬೇಕಾಗಿ ಬಂದುದರಿಂದ ಎಲ್ಲ ವೀರರನ್ನು ಒಟ್ಟಿಗೆ ಸೇರಿಸಿ ಒಂದು ನಿಗದಿಪಡಿಸಿದ ದಿನದಂದು. ಪೂಜಿಸುವ ಸಂಪ್ರದಾಯ ಆರಂಭವಾಯಿತು. ಅಂದಿನಿಂದ ವೀರಮಂದಿರಗಳು ಪ್ರತ್ಯೇಕವಾಗಿ ತಲೆಯೆತ್ತಿದ್ದವು. "ವೀರ" ಎಂಬ ಪದ ಕಾಲಾಂತರದಲ್ಲಿ ಬೀರ ಎಂಬ ರೂಪ ಪಡೆಯಿತು. 'ವ' ಕಾರಕ್ಕೆ 'ಬ'ಕಾರ ಆದೇಶ ಪಡೆಯುವುದು. ಇದು ಭಾರತೀಯ ಭಾಷೆಗಳಲ್ಲಿ ಕಂಡುಬರುವ ಸಹಜ ಭಾಷಾ ಪ್ರಕ್ರಿಯೆ. ಬೀರಪ್ಪ ಪ್ರಜಾಪತಿ ಬ್ರಹ್ಮನ ಪುತ್ರನಾಗಿರುವ ಕಾರಣ ಅವನು ಏಕವೀರಾಪುತ್ರ ಸುಮೇರಿನ ಏಕವೀರಾಪುತ್ರನು. ಹುಮುರಿಲು, ಮಾರುತಿ ಹೇಗೆ ಊರ ಹೊರಗಿರುವನೋ ಹಾಗೆ ಬೀರಪ್ಪನೂ ಊರ ಹೊರಗೆ ಅನುಕೂಲವಿದ್ದ ದಿನ್ನೆ ಮತ್ತು ಹುಣಿಸೆ ವನಗಳಲ್ಲಿ ವಾಸಿಸುತ್ತಾನೆ.

ಶಕ್ತಿದೇವತೆಗಳಿಗೆ ವಿಶ್ವವ್ಯಾಪ್ತಿ ಮಹತ್ವವಿರುವುದು ಕಂಡುಬರುತ್ತದೆ. ಶಕ್ತಿಯು ಶಿವನಿಂದ ಬೇರೆಯಲ್ಲ. ಸಾಕ್ಷಾತ್ ಶಿವನೇ ಕ್ರಿಯಾಶಕ್ತಿಯ ಗುಣದಿಂದ ಶಕ್ತಿಯಾಗಿದ್ದಾನೆ. ಸ್ತ್ರೀ ದೇವತೆಗಳಿಗೆ ಮೊದಲ ಪ್ರಾಶಸ್ತ್ಯವಿದ್ದರೂ ಈ ಶಕ್ತಿ ದೇವತೆಗಳ ಉದ್ಭವದ ಹಿಂದೆ ಪುಲ್ಲಿಂಗ (ಗಂಡು ದೇವರು) ದೇವರುಗಳು ಬೆಂಬಲವಿದೆ. ಪುರಾಣಗಳಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರು ಸಮ್ಮಿಲಿತರಾಗಿ ಶಕ್ತಿರೂಪ ಪಡೆದರು ಎಂದು ಹೇಳಲಾಗಿದೆ. ಇದರಿಂದ ಶಕ್ತಿದೇವತೆಗಳ ಒಳಗೆ ಅಡಗಿರುವುದು ಪುರುಷತತ್ವ. ಆದ್ದರಿಂದ ಮಾಳವ್ವ ಮಾಳಪ್ಪನಾಗಿ, ಮೈಲಾರಿ ಮೈಲಾರನಾಗಿದ್ದು, ಪಾರ್ವತಿ ಪರ್ವತನಾಗಿ ಮೈದಳೆದಳು. ಭಾರತದಲ್ಲಿ ಪುರುಷದೇವತೆಗಳಿಗಿಂತ ಮಿಗಿಲಾಗಿ ಸ್ತ್ರೀದೇವತೆಗಳಿಗೆ ಅಗಾಧ ಶಕ್ತಿ, ರೌದ್ರತ್ವ, ಶೀಘ್ರುವರ ಪ್ರಾಪ್ತಿ, ಮಾಂಸ ಮದಿರೆ ಬಯಕೆ ಮುಂತಾದ ಗುಣಲಕ್ಷಣಗಳು ಪ್ರಖ್ಯಾತಗೊಂಡಿವೆ. ಆದ್ದರಿಂದ ಪ್ರತಿಯೊಂದು ಶಕ್ತಿದೇವತೆಯ ಕೈಯಲ್ಲಿ ಪಾನಪಾತ್ರೆ ಇರುವುದನ್ನು ಕಾಣಬಹುದು. ಪ್ರತಿಯೊಂದು ಸಸ್ಯಾಹಾರಿ ದೇವತಾ ಮಂದಿರಗಳ ಪಕ್ಕದಲ್ಲಿಯೇ ಬಲಿ ಮಾಂಸ, ಸುರೆ(ಮಧು) ಬಯಸುವ ಶಕ್ತಿ ದೇವತೆ ಇಲ್ಲವೆ ರಾಕ್ಷಸಿ(ಸ) ಮಂದಿರ ಇದ್ದೇ ಇರುತ್ತದೆ. ಮನುಷ್ಯ ತಾನು ಬಯಸುವ ಖಾದ್ಯವಸ್ತುಗಳನ್ನು ಹರಕೆಯ ರೂಪದಲ್ಲಿ ನೀಡುವ ಸ್ವಭಾವದವನು. ತನಗೆ ಬೇಕಾದ ವಸ್ತುಗಳನ್ನು ಮಾತ್ರ ಅವನು ದೇವರಿಗೆ ಅರ್ಪಿಸುತ್ತ ಬಂದಿದ್ದಾನೆ.

ಪಾರ್ವತಿ-ಪರಮೇಶ್ವರ(ಶಿವ-ಪಾರ್ವತಿ), ವಿಷ್ಣು-ಲಕ್ಷ್ಮಿ, ಬ್ರಹ್ಮ-ಸರಸ್ವತಿ ಈ ತ್ರಿಮೂರ್ತಿಗಳಲ್ಲಿರುವ ಉಭಯಲಿಂಗಿ ತತ್ವಗಳು ಇಂದಿನ ಬೀರದೇವರ ದೈವ. ಕಲ್ಪನೆಯಲ್ಲಿ ಪ್ರತ್ಯಕ್ಷವಾಗಿ ಕಂಡುಬರುವುದಿಲ್ಲ. ಅವನಲ್ಲಿರುವುದು ಪುರುಷತತ್ವ, ವೀರತೆ ಎಂದು ನಾವೆಲ್ಲ ಭಾವಿಸಿಕೊಂಡಿದ್ದೇವೆ. ಭರಮ ನೇರವಾಗಿ ಉಭಯಲಿಂಗಿ. ಆಗದಿದ್ದರೂ ತನ್ನಿಂದಲೇ ಜನಿಸಿದ ರಸವತಿ ಸರಸ್ವತಿಯನ್ನು ವಿವಾಹವಾಗಿ ವೀರನ ಜನನಕ್ಕೆ ಕಾರಣನಾಗಿದ್ದಾನೆ. ಆ ಹೊತ್ತಿಗಾಗಲೇ ಬದಲಾದ ವ್ಯವಸ್ಥೆಯಲ್ಲಿ ವೀರತ್ವದ ದೃಷ್ಟಿಕೋನವು ಆಯಾ ಪ್ರದೇಶದ ರಾಜನಲ್ಲಿ ಕೇಂದ್ರೀಕೃತಗೊಂಡಿತು. ಆಯಾ ಪ್ರದೇಶದ ರಾಜನೇ ಪ್ರಜೆಗಳ ಪಾಲಿಗೆ ಆರಾಧ್ಯ ವೀರ ದೈವನಾದನು. ಇದನ್ನು ಪ್ರಪಂಚದ ಅನೇಕ ಸಂಸ್ಕೃತಿಗಳಲ್ಲಿ ಕಾಣಬಹುದು. ಭಾರದಲ್ಲಿಯೂ ರಾಜಾ ಪ್ರತ್ಯಕ್ಷ ದೈವ ಎಂಬ ಲೋಕನುಡಿ ಪ್ರಚಾರದಲ್ಲಿದೆ. ಅವುಗಳ ಸಾಲಿಗೆ ಬರುವವನೇ ಬೀರದೇವ. ಬೀರದೇವನ ಪೌರಾಣಿಕ ಜನಪದ ಕಥೆಗಳಲ್ಲಿ ಭರಮ ಚಂದ್ರಗಿರಿಯ ಅರಸ. ಅವನ ಪುತ್ರ ಬೀರಪ್ಪ.

ಪ್ರಾಚೀನ ಗ್ರಂಥಗಳಾದ ರಾಮಾಯಣ, ಮಹಾಭಾರತ, ವೇದೋಪನಿಷತ್ ಮತ್ತು ಪುರಾಣಗಳಲ್ಲಿ ಎದ್ದು ಕಾಣುವ ದೇವತೆ ಎಂದರೆ ಇಂದ್ರ. ಅದು ಆತನ ಅಂಕಿತನಾಮವಲ್ಲ. ಇಂದ್ರಿಯಗಳ ಮೇಲೆ ನಿಯಂತ್ರಣವಿಲ್ಲದವನು ಎಂಬರ್ಥದ್ದು. ಇಂದ್ರಿಯಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ಅವಕಾಶ ರಾಜನೊಬ್ಬನಿಗೆ ಮಾತ್ರ ಇರುತ್ತದೆ. ಇಂದ್ರ ಒಂದು ನಾಮಪದ. ಇಂದಿನ ಶಬ್ದಕೋಶಗಳು ಇಂದ್ರ ಎಂಬ ಪದಕ್ಕೆ ದೇವತೆಗಳ ಒಡೆಯ, ದೇವತೆಗಳ ರಾಜ. ದ್ವಾದಶಾದೀಶರಲ್ಲಿ ಒಬ್ಬ ರಾಜ, ಒಡೆಯ, ಯಜಮಾನ, ಶ್ರೇಷ್ಠನಾದವನು, ಮುಖ್ಯನಾದವನು, ಒಂದು ಜಾತಿಯ ಕುದುರೆ ಎಂದು ಅರ್ಥೈಸಿವೆ. ಇಂದ್ರ ಎಂಬುದು ರಾಜ ಪದವಿಯಾಗಿದೆಯೇ ಹೊರತು ಅದು ಒಬ್ಬ ವ್ಯಕ್ತಿಯ ಅಂಕಿತನಾಮವಲ್ಲ. ಅದು ರಾಜ ಅಥವಾ

ಚಕ್ರವರ್ತಿ ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಆದ್ದರಿಂದ ಪ್ರಾಚೀನ ಗ್ರಂಥಗಳ ಪ್ರಕಾರ ಇಂದ್ರ ಒಬ್ಬ ಅರಸ, ಚಕ್ರವರ್ತಿ. ರಾಜನೇ ಪ್ರತ್ಯಕ್ಷ ದೈವ ಎಂಬ ಕಲ್ಪನೆಯ ಕಾಲಕ್ಕೆ ಅವನು ದೇವ. ಅದರಲ್ಲಿಯೂ ದೇವತೆಗಳ ದೇವ. ದೇವತೆ, ರಾಕ್ಷಸ, ಸುರ, ಅಸುರ ಮುಂತಾದ ಪದಗಳು ಮೂಲನಿವಾಸಿ ಬುಡಕಟ್ಟು ಜನಾಂಗ ಮತ್ತು ವಲಸೆ ಬಂದ ನಾಗರಿಕತೆಯ ಜನವರ್ಗಗಳನ್ನು ವಿಭಜಿಸಿ ಹೇಳುವ ಪದಗಳು. ಇಲ್ಲಿ ದೇವತೆಗಳ ಒಡೆಯ ಎಂದರೆ ಉಚ್ಚಸಂಸ್ಕೃತಿಯ ಆಧುನಿಕ ಜನಸಮುದಾಯಕ್ಕೆ ರಾಜನಾದವನು. ರಾಜರು ಅತಿಯಾದ ಸರ್ವಾಂಗ ಭೋಗಿಗಳು. ಆದ್ದರಿಂದ ಇಂದ್ರನು ಮೊದಲು ನಾಯಕನಾಗಿ ಅನಂತರ ಖಳನಾಯಕನಾಗಿರುವುದನ್ನು ಅವನ ಕಥೆಯಲ್ಲಿಯೇ ಕಾಣುತ್ತೇವೆ. ಇಂತಹ ದೈವೀ ಪರಿಕಲ್ಪನೆಗಳು ಭಾರತೀಯೇತರ ಧರ್ಮ ಇಲ್ಲವೇ ಸಂಸ್ಕೃತಿಗಳಲ್ಲಿಯೂ ಕಂಡುಬರುತ್ತದೆ.

ಈಜಿಪ್ಟ್‌ನ ಫೆರೊ ಎಂದರೆ ರಾಜನೂ ಹೌದು ಮತ್ತು ದೈವವೂ ಹೌದು. ಫೆರೋ ಪದವು ಫಿರ್‌ಔನ್ ಪದದ ಸಂಕ್ಷಿಪ್ತರೂಪ. ಇದರ ಅರ್ಥ ಸೂರ್ಯವಂಶಿ. ಅರಬ್ಬಿಯಲ್ಲಿ ಸೂರ್ಯನಿಗೆ ಈಆ, ಎಂದು ಕರೆಯುತ್ತಾರೆ. ಈಜಿಪ್ಷಿಯನ್‌ರಲ್ಲಿ ಅರಸನಾಗುವವನು ಮೊದಲು ಸೂರ್ಯನಾಗಬೇಕು. ಅಂದರೆ ಅವನು ಧಾರ್ಮಿಕ ಪುರುಷನಾಗಿರಬೇಕು. ಪಟ್ಟಕ್ಕೆ ಬಂದವರೆಲ್ಲರು ಫಿರ್‌ಔನ್ ಸೂರ್ಯವಂಶಿ ಎಂಬ ಬಿರುದು ಪಡೆಯುತ್ತಿದ್ದರು. ಈಜಿಪ್ಟ್‌ನ ರಾಜರ ದೈವತ್ವವನ್ನು ಪ್ರಶ್ನಿಸಿದನು ಇಬ್ರಾಹಿಂ. ರೋಮ್ ರಾಜರ ದೈವತ್ವವನ್ನು ಪ್ರಶ್ನಿಸಿದನು ಏಸುಕ್ರಿಸ್ತ. ಗ್ರೀಕ್ ರಾಜರೇ ಅಲ್ಲಿಯ ದೈವಗಳು. ಪ್ರಾಚೀನ ರಾಜರು ಅಲ್ಲಿಯ ಆರಾಧ್ಯ ದೈವಗಳಾಗಿದ್ದರು. ಅದೇ ರೀತಿ ಇಸ್ರೇಲ್ ಪ್ಯಾಲಿಸ್ಟೇನಿನ ಪ್ರದೇಶದ ಸುಲೇಮಾನ್ ಕ್ರಿ.ಪೂ. ೯೬೫-೯೨೬ ಒಬ್ಬ ಪ್ರವಾದಿ. ಅವನೇ ಆ ಪ್ರದೇಶದ ರಾಜನೂ ಕೂಡ. ಅವನ ಅರಮನೆಯು ಮಹಾಭಾರತದ ಪಾಂಡವರ ಅರಮನೆಯನ್ನು ಹೋಲುತ್ತಿತ್ತು. ಸುಲೇಮಾನ್ ಮತ್ತು ಸಭಾ ಜನಾಂಗದ ರಾಣಿಯ ಸಮ್ಮಿಲನದಿಂದ ಹುಟ್ಟಿದ ಪುತ್ರನಿಂದ ಜರುಸ್ಲೇಮ್ ನಾಶವಾಯಿತು. ಇದು ಬೈಬಲ್, ಜೆನಸಿಸ್, ಖುರಾನ್‌ಗಳಲ್ಲಿ ಉಲ್ಲೇಖಗೊಂಡಿದೆ.

ಜೈನರ ಅನೇಕ ತೀರ್ಥಂಕರರು ಅರಸರಾಗಿದ್ದು ಅನಂತರ ಸನ್ಯಾಸ ದೀಕ್ಷೆಯಿಂದ ದೈವತ್ವಕ್ಕೇರಿದರು. ಜನರ ಪ್ರಥಮ ತೀರ್ಥಂಕರ ಆದಿನಾಥ ವೃಷಭನಾಥ ಅಯೋಧ್ಯೆಯ ಅರಸನಾಗಿದ್ದನು. ಜೊತೆಗೆ ತೀರ್ಥಂಕರನೂ ಆಗಿದ್ದನು. ಅವನ ಪುತ್ರರಾದ ಭರತ ಮತ್ತು ಬಾಹುಬಲಿಗಳೂ ಅರಸರಾಗಿದ್ದರು. ಅವರ ರಾಜ ಪದವಿಗಳು ಅವರ ಸನ್ಯಾಸ ಜೀವನದಲ್ಲಿ ಸಹಕರಿಸಿದವು ಎಂಬ ಸಂಗತಿ ಇಂದು ಗುಟ್ಟಾಗಿ ಉಳಿದಿಲ್ಲ. ಹಾಗೆಯೇ ಬೌದ್ಧ ಕೂಡ ಒಂದು ಪ್ರದೇಶದ ಅರಸ. ಉಪನಿಷತ್ತಿನ ಜನಕನೂ ಒಬ್ಬ ರಾಜನೆಂದು ಸಂಪ್ರದಾಯ ಹೇಳುತ್ತದೆ. ಬದಲಾದ ಕಾಲಚಕ್ರದಲ್ಲಿ ಇವರೆಲ್ಲರೂ ಧರ್ಮ ಸಂಸ್ಥಾಪಕರೆನಿಸಿ ಶತಶತಮಾನಗಳಿಂದ ಪೂಜಿಸಲ್ಪಡುತ್ತಿದ್ದಾರೆ.

ವೀರ (ಬೀರ) ಎಂಬ ಪದಕ್ಕೆ ಸಮಾನಾರ್ಥವಾಗಿ ಇಂಗ್ಲಿಷ್‌ನಲ್ಲಿ ಹೀರೊ, ನಾಯಕ ಎಂಬ ಪದವಿದೆ. ಇದು ಇಂಗ್ಲಿಷ್ ಭಾಷೆಯದ್ದಲ್ಲ. ಗ್ರೀಕ್ ಭಾಷೆಯಿಂದ ಇಂಗ್ಲಿಷ್ ಭಾಷೆಗೆ ವಲಸೆ ಬಂದ ಪದ. ಈ ಹಿನ್ನೆಲೆಯಲ್ಲಿ ಅಲ್ಲಿಯ ವೀರನೊಬ್ಬನಿಗೆ ಹೆರೋಕ್ಲಿಯಸ್, ಹರ್ಕೂಲಿಸ್ ಎಂಬಂತಹ ನಾಮ ಪ್ರಾಪ್ತವಾಗಿದೆ.

ಈ ನಾಮದ ಪೂರ್ವಪದ ಹೀರೊ. ಸಾಹಸ, ಪರಾಕ್ರಮ, ದಕ್ಷ, ವಿಶಿಷ್ಟ ಸಾಧನೆ ಮಾಡುವ ಯೋಧನನ್ನು ಹೀರೊ ಎಂದು ಕರೆಯುತ್ತಾರೆ. ಹೋಮರ್ ಎಂಬ ಕವಿಯು ಇಲಿಯಡ್ ಮಹಾಕಾವ್ಯದಲ್ಲಿ ದೈವೀಶಕ್ತಿಯುಳ್ಳ ಮನುಷ್ಯನನ್ನು ಹೀರೊ ಎಂಬ ವಿಶೇಷಣದಿಂದ ಕರೆದಿದ್ದಾನೆ. ವೀರರನ್ನು ದಾನವೀರ, ಧರ್ಮವೀರ, ದಯಾವೀರ, ಯುದ್ಧವೀರ, ಸತ್ಯವೀರ, ಕ್ಷಮಾವೀರ ಮುಂತಾಗಿ ಕರೆಯಲಾಗಿದೆ. ಆ ಹೀರೋಗಳ ಸಾಲಿನಲ್ಲಿ ಬ್ರಹ್ಮ ಮತ್ತು ಅವನ ಪುತ್ರ ಬೀರಪ್ಪ ಬರುತ್ತಾರೆ. ಇವರು ತತ್ಪೂರ್ವ ಪ್ರಸಿದ್ಧ ಬೀರ ಅರಸರಾಗಿದ್ದವರು.

ಬಹುದೇವೋಪಾಸನೆ ತಡೆಯುವ ಸಂಕಲ್ಪದೊಂದಿಗೆ ಜನ್ಮ ತಳೆದ ಜರುತುಷ್ಟ್ರ, ಬೌದ್ಧ, ಜೈನ, ಕ್ರೈಸ್ತ, ಇಸ್ಲಾಂ ಮುಂತಾದ ಧರ್ಮಗಳು ಉದಯಕ್ಕೆ ಬಂದವು. ಆಯಾ ಧರ್ಮ ಸಂಸ್ಥಾಪಕರಲ್ಲಿ ಅನೇಕ ವೀರರು ದೈವತ್ವಕ್ಕೇರಿದರು. ಆದರೂ ಅವರು ತಲೆ ತಲಾಂತರಗಳಿಂದ ಹಿರಿಯರು ಪೂಜಿಸಿಕೊಂಡು ಬಂದ ವೀರನ್ನು ಮರೆಯಲಿಲ್ಲ. ಅವರನ್ನು ವಿವಿಧ ನಾಮಗಳಿಂದ ಪೂಜಿಸಲು ತಮ್ಮತಮ್ಮ ಅನುಯಾಯಿಗಳಿಗೆ ಅನುವು ಮಾಡಿ ಕೊಟ್ಟಿದ್ದಾರೆ. ಅದೇ ರೀತಿ ಹಲವಾರು ಕಾರಣಗಳಿಂದ ಆತ್ಮಬಲಿಯನ್ನು ಮಾಡಿಕೊಂಡು ವ್ಯಕ್ತಿಗಳನ್ನು ವೀರರೆಂದೇ ಪರಿಗಣಿಸುವುದುಂಟು. ಅವರು ಸ್ವತಃ ಯೋಧರಾಗಿದ್ದುದು ಒಂದು ಕಾರಣವಾದರೆ ಆತ್ಮಬಲಿಯನ್ನು ಮಾಡಿಕೊಳ್ಳುತ್ತಿದ್ದ ರೀತಿ ಮತ್ತು ಉದ್ದೇಶ ಮತ್ತೊಂದು ಕಾರಣವಾಗಿತ್ತು. ಮಹಾರಾಷ್ಟ್ರದಲ್ಲಿರುವ ಕುರುಬರು ವೀರನ ನೆನಪಿಗಾಗಿ ಕಲ್ಲು ಅಥವಾ ಕಂಬವನ್ನಿಟ್ಟು ಪೂಜಿಸುತ್ತಾರೆ. ಕೆಲವೊಮ್ಮೆ ಬೀರನ ವಿಗ್ರಹ ಅಥವಾ ಚಿತ್ರವಿರುವ ತಾಮ್ರಪಟವನ್ನು ವೀರನೆಂದು ಪೂಜಿಸುವುದುಂಟು. ಇವುಗಳನ್ನು ಅವರು ವೀರ ಎಂಬುದಾಗಿ ಕರೆಯುತ್ತಾರೆ. ತಮಿಳುನಾಡಿನ ಮದುರೈ ಜಿಲ್ಲೆಯಲ್ಲಿನ ಕುರುಬ ಜನಾಂಗದವರು ಬೀರನ ಜತೆಗೆ ವೀರ ಲಕ್ಕಮ್ಮ ಎಂಬ ಸ್ತ್ರೀದೇವತೆಯನ್ನು ಆರಾಧಿಸುತ್ತಾರೆ. ಕರ್ನಾಟಕದ ಕೆಲವು ಭಾಗಳಲ್ಲಿ ಕುರುಬರ ದೇವರಾದ ಬೀರಪ್ಪನ ಗುಡಿಗಳನ್ನು ಕಾಣಬಹುದು. ಬೆಂಗಳೂರು, ತುಮಕೂರು, ಮೈಸೂರು, ಕೋಲಾರ, ಮಂಡ್ಯ ಮುಂತಾದ ಜಿಲ್ಲೆಗಳ ಹಳ್ಳಿಗಳಲ್ಲಿ, ಇತರೆ ಕರ್ನಾಟಕದಲ್ಲಿ ನೆಲೆಸಿರುವ ಕುರುಬರ ಹಟ್ಟಿ, ಊರುಗಳಲ್ಲಿ ಇಂತಹ ಗುಡಿಗಳನ್ನು ವಿಶೇಷವಾಗಿ ಕಾಣಬಹುದು. ಹೀಗೆ ಒಂದು ಕಡೆ ಒಂದೇ ಗುಡಿಯಿರಬಹುದು ಅಥವಾ ಹಲವಾರು ಗುಡಿಗಳು ಕುದುರೆ ಲಾಳಾಕಾರದಲ್ಲಿ ಸಾಲು ಸಾಲಾಗಿ ಇರಬಹುದು. ಹೀಗೆ ಹಲವಾರು ಗುಡಿಗಳಿರುವಲ್ಲಿ ಒಂದು ಪ್ರಧಾನವಾದ ಗುಡಿ ಇರುತ್ತದೆ. ಇಲ್ಲಿ ವೀರಗಲ್ಲು ಇರದೇ ವೀರನ ವಿಗ್ರಹವಿರುತ್ತದೆ. ಈ ವಿಗ್ರಹದಲ್ಲಿ ಸಾಮಾನ್ಯವಾಗಿ ವೀರನು ತನ್ನ ಎಡಗೈಯಲ್ಲಿ ಗುರಾಣಿಯನ್ನು ಹಿಡಿದುಕೊಂಡೋ ಅಥವಾ ಅದರ ಮೇಲೆ ತನ್ನ ಕೈಯನ್ನು ಊರಿಕೊಂಡಂತೆಯೋ ತನ್ನ ಬಲಗೈಯಲ್ಲಿ ಕತ್ತಿಯನ್ನು ಹಿಡಿದಿರುವಂತೆಯೋ ಇದ್ದು ವೀರನನ್ನು ಅನೇಕ ಭಂಗಿಯಲ್ಲಿ ಕೆತ್ತಿರುತ್ತಾರೆ. ಇದು ಎಲ್ಲಾ ಗುಡಿಗಳ ಪ್ರಧಾನ ದೈವ.

ವೀರಗಲ್ಲುಗಳನ್ನು ಸಾಮಾನ್ಯವಾಗಿ ವೀರಕಲ್ಲು, ವೀರಗಲ್ಲು, ಬೀರಕಲ್ಲು ಎಂದು ಕರೆಯಲಾಗಿದೆ. ಕೆಲವು ವೀರಗಲ್ಲುಗಳನ್ನು ಬಾವಿ ಶಾಸನದ ಕಲ್ಲು, ಬೀರಲಿಂಗ ಸಾಂಗತ್ಯದ ಕಲ್ಲು ಎಂಬುದಾಗಿ ಕರೆಯುವುದುಂಟು. ಕೊಡಗಿನಲ್ಲಿ ವೀರಗಲ್ಲುಗಳನ್ನು ಕೊಲೆಕಲ್ಲುಗಳೆಂದು ಕರೆಯುತ್ತಾರೆ. ವೀರಗಲ್ಲುಗಳನ್ನು ಶಿಲ್ಪವನ್ನು ಆಧರಿಸಿ ಕುದುರೆಯ ಮೇಲೆ ಕುಳಿತ ಯೋಧನು ತನ್ನ ಎಡಗೈಯಲ್ಲಿ ಲಗಾಮನ್ನು ಹಿಡಿದು, ಬಲಗೈಯಲ್ಲಿ ಕತ್ತಿ ಮುಂತಾದ ಆಯುಧಗಳನ್ನು ಹಿಡಿದು ಪ್ರತಿಪಕ್ಷದವರೊಡನೆ ಯುದ್ಧ ಮಾಡುತ್ತಿದ್ದನೆಂದು ಹೇಳಬಹುದು.

ಈ ಮೇಲಿನ ವಿಷಯಗಳಿಂದ ವೀರ, ಬೀರ ಶಬ್ದದ ಬಳಕೆ ಹೀಗೆ ಬಂದಿರಬಹುದೆಂದು ಈ ಅಧ್ಯಾಯದಲ್ಲಿ ಬೀರಪ್ಪನ ಇತ್ತಿವೃತ್ತ ವಿಚಾರವನ್ನು ವಿವರವಾಗಿ ಚರ್ಚಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಕಲಬುರ್ಗಿ ಎಂ.ಎಂ., ಸಂಸ್ಕೃತಿ-ವಿಕೃತಿ, ೨೦೦೬, ಪು.೪

೨. ವೀರಣ್ಣದಂಡೆ(ಸಂ), ಜನಪದ ಹಾಲುಮತ ಮಹಾಕಾವ್ಯ, ೨೦೦೦, ಪು. ೩೮

೩. ಖಂಡೋಬಾ ಪಿ.ಕೆ., ಗಿರಿಜನ ಸಿರಿ, ಅಭಿನಂದನಾ ಗ್ರಂಥ, ವೀರಣ್ಣದಂಡೆ (ಲೇ), ಬೀರಪ್ಪ ಮಾಳಿಂಗರಾಯ ಇಬ್ಬರು ಬುಡಕಟ್ಟು ಸಾಂಸ್ಕೃತಿಕ ನಾಯಕರು, ೨೦೦೩, ಪು.೪೪

೪. ಚಂದ್ರಕಾಂತ ಬಿಜ್ಜರಗಿ, ಹಾಲುಮತ ಅನರ್ಘ್ಯ ರತ್ನಗಳು, ೨೦೧೧, ಪು. ೨೮

೫. ಸಂಭಾಗೂತನಯನವಿಲು(ಸಂ), ಹಾಲ್ಮತೋತ್ತೇಜಕ ಪುರಾಣ, ೧೯೮೨, ಪು. ೮೫

೬. ವೀರಣ್ಣ ದಂಡೆ(ಸಂ), ಜನಪದ ಹಾಲುಮತ ಮಹಾಕಾವ್ಯ, ೨೦೦೦, ಪು. ೧೭೨

೭. ಅದೇ ಪು.೨೮

೮. ಖಂಡೋಬಾ ಪಿ.ಕೆ., ಗಿರಿಜನ ಸಿರಿ, ಅಭಿನಂದನಾ ಗ್ರಂಥ, ೨೦೦೩, ಪು. ೪೪೨

೯. ವೀರಣ್ಣ ದಂಡೆ(ಸಂ), ಜನಪದ ಹಾಲುಮತ ಮಹಾಕಾವ್ಯ, ೨೦೦೦, ಪು. ೧೭೨

೧೦. ಖಂಡೋಬಾ ಪಿ.ಕೆ., ಗಿರಿಜನ ಸಿರಿ, ಅಭಿನಂದನಾ ಗ್ರಂಥ, ೨೦೦೩, ಪು. ೪೪೩

೧೧. ಶ್ರೀ ಲಕ್ಷ್ಮಣ ಪಟಾತ, ಹಾಲುಮತ ಪುರಾಣ, ಪು.೯೮

೧೨. ಸಂಭಾಗೂತನಯನವಿಲು (ಸಂ), ಹಾಲ್ಮತೋತ್ತೇಜಕ ಪುರಾಣ, ೧೯೮೨, ಪು. ೮೫

೧೩. ಹಳ್ಳಿಕೇರಿ ಎಫ್.ಟಿ., (ಸಂ), ಹಾಲುಮತ ವ್ಯಾಸಂಗ-೧, ಶ್ರೀರಾಮ ಇಟ್ಟಣ್ಣವರ (ಲೇ), ಬೀರಲಿಂಗೇಶ್ವರ, ೨೦೦೯, ಪು. ೧೦೭-೧೨೧

೧೪. ಗೋವಿಂದಮೂರ್ತಿ ದೇಸಾಯಿ (ಲೇ), ಹಂಪೆಯ ವಿರೂಪಾಕ್ಷ ಬೀರದೇವರೇ, ಸಂಯುಕ್ತ ಕರ್ನಾಟಕ, ೩.೦.೫.೧೯೯೩, ಪು. ೨೩

೧೫. ಶ್ರೀ ಲಕ್ಷ್ಮಣ ಪಟಾತ, ಹಾಲುಮತ ಪುರಾಣ, ಪು.೯೮

೧೬. ವೀರಣ್ಣ ದಂಡೆ, ದೇಶಿ ಹಾಲುಮತ ಪುರಾಣದ ಬೀರಪ್ಪ, ೨೦೦೩, ಪು. ೩೯೦

೧೭. ಬಸವನಾಳ ಶಿ.ಶಿ., ಬಸವಣ್ಣನವರ ವಚನ, ಪು. ೫೫೭

೧೮. ಬಸವರಾಜ ನೆಲ್ಲಿಸರ, ಡೊಳ್ಳಿನ ಹಾಡು, ೧೯೭೮, ಪು. ೮೯

೧೯. ಅದೇ ಪು. ೯೦

೨೦. ಹಿರೇಮಠ ಆರ್.ಸಿ., ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ ಭಾಗ-೩, ಪು. ೮೦

೨೧. ವಿನೀತ ರಾಮಚಂದ್ರರಾಯರು (ಸಂ), ಹಳ್ಳಿಯ ಹಾಡುಗಳು, ೧೯೯೬, ಪು. ೧೩

೨೨. ಲಿಂಗಯ್ಯ ಡಿ. (ಸಂ), ಬಯಲು ಸೀಮೆಯ ಜನಪದ ಗೀತೆಗಳು, ೧೯೭೩, ಪು. ೨೩೮

೨೩. ವೀರಣ್ಣ ದಂಡೆ (ಸಂ), ಜನಪದ ಹಾಲುಮತ ಮಹಾಕಾವ್ಯ, ೨೦೦೦, ಪು. ೧೭೪

೨೪. ಅದೇ ಪು. ೧೭೬

೨೫. ಅದೇ ಪು. ೧೨೭

೨೬. ಕೋಸಾಂಬಿ ಡಿ.ಡಿ., ಪುರಾಣ ಮತ್ತು ವಾಸ್ತವ, ಪು. ೨೯

೨೭. ವೀರಣ್ಣ ದಂಡೆ (ಸಂ), ಜನಪದ ಹಾಲುಮತ ಮಹಾಕಾವ್ಯ, ೨೦೦೦, ಪು. ೧೨೯

೨೮. ಅದೇ ಪು. ೧೬೨

೨೯. ಚಂದ್ರಪ್ಪ ಎಚ್. ಅಜ್ಜಂಪುರ, ಕುರುಬರ ಕುರುಹುಗಳು, ೨೦೧೧, ಪು. ೧೨೧

೩೦. ಚಂದ್ರಕಾಂತ ಬಿಜ್ಜರಗಿ, ಬೀರದೇವರ ಅವತಾರ, ೨೦೧೧, ಪು. ೨೮

೩೧. ವೀರಣ್ಣ ದಂಡೆ (ಲೇ), ಬೀರಪ್ಪ ಮಾಳಿಂಗರಾಯ ಇಬ್ಬರು ಬುಡಕಟ್ಟು ಸಾಂಸ್ಕೃತಿಕ ನಾಯಕರು, ಪು. ೪೪೪

೩೨. ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣ, ೧೯೧೨, ಪು.೩೨, ೪ನೇ ಸಂಧಿ

೩೩. ವೀರಣ್ಣ ದಂಡೆ (ಸಂ), ಜನಪದ ಹಾಲುಮತ ಮಹಾಕಾವ್ಯ, ೨೦೦೦, ಪು.೧೭೯

೩೪. ಮಹೇಶ್ವರಯ್ಯ ಎಚ್.ಎಂ. (ಸಂ), ಗೌಳಿಗರು ಕರ್ನಾಟಕದ ಬುಡಕಟ್ಟುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮

೩೫. ಲಿಂಗಣ್ಣ ಸಿಂಪಿ., ಜಾನಪದ ಸಾಹಿತ್ಯ ದರ್ಶನ-೧, ಪು. ೨೧೩

೩೬. ಸುಂಕಾಪುರ ಎಂ.ಎಸ್. (ಸಂ), ಡೊಳ್ಳಿನ ಹಾಡು, ೧೯೭೬

೩೭. ವೀರಣ್ಣ ದಂಡೆ (ಸಂ), ದೇಶಿ, ಸಂಪುಟ-೧, ಹಾಲುಮತ ಪುರಾಣದಲ್ಲಿ ಬೀರಪ್ಪ, ೨೦೦೩, ಪು. ೩೯೩

೩೮. ವೀರಣ್ಣ ದಂಡೆ (ಸಂ), ಜನಪದ ಹಾಲುಮತ ಮಹಾಕಾವ್ಯ, ೨೦೦೦, ಪು. ೨೯೮

೩೯. ಅದೇ ಪು. ೪೧೦

೪೦. ಅದೇ ಪು. ೨೯೪

೪೧. Gunther sonthiemer, A note on Biroba the Dhanagar God of Maharastra.

೪೨. ಢೇರೆ ರಾ.ಚಿಂ. ಶ್ರೀ ವಿಠ್ಠಲ: ಒಂದು ಮಹಾಸಮನ್ವಯ, (ಅನು) ಚಂದ್ರಕಾಂತ ಪೋಕಳೆ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೨, ಪು. ೭೧

೪೩. ಕಲಬುರ್ಗಿ ಎಂ.ಎಂ., ಮಾರ್ಗ, ಸಂ-೪, ೨೦೦೪, ಪು.೩೭೫

೪೪. ಗೋವಿಂದಮೂರ್ತಿ ದೇಸಾಯಿ (ಲೇ), ಹಂಪೆಯ ವಿರೂಪಾಕ್ಷ ಬೀರದೇವರೆ, ಸಂಯುಕ್ತ ಕರ್ನಾಟಕ ೩೦.೫.೧೯೯೩

೪೫. ರಾಯಚೂರು ಜಿಲ್ಲೆಯ ಶಾಸನಗಳು (ಸಂ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ಸಂ-೭ ಲಿಂಗಸುಗೂರು ಪು. ೩೬-೩೯.

ಅಧ್ಯಾಯ - ೪

ಬೀರಪ್ಪನ ಕ್ಷೇತ್ರಗಳು

ಅಲಕನೂರು,	ಎಕ್ಸಂಬಾ,	ರಾಯಬಾಗ,	ಹಾರೊಗೇರಿ,
ಕಂಕಣವಾಡಿ,	ಘೋಡಗೇರಿ,	ಕೊಣ್ಣೂರು,	ನಾಗರಾಣ,
ಮಲಘಾಣ,	ಬೆಳ್ಳೊಳ್ಳಿ,	ಝುಳಕಿ,	ಹಿರೇರೂಗಿ,
ಶಿರಾಡೋಣ,	ಹಿರೇ ಸಿಂಧೋಗಿ,	ತಳಗಿಹಾಳ,	ಶಿರಗುಪ್ಪಿ,
ಮುರನಾಳ,	ದಾವಣಗೆರೆ,	ಆನೆಕೊಂಡ,	ಬೆಣ್ಣೆಹಳ್ಳಿ,
ಕೊಡವಗುಡ್ಡ,	ಹಲಕನಾಳ,	ಚಿಗಟೇರಿ,	ಭಾನುವಳಿ,
ಜಿಗಳಿ,	ಮತ್ತಿಘಟ್ಟ,	ಹೀರೇನಲ್ಲೂರು,	ಅಂಬಳಿ,
ಅನುವನಹಳ್ಳಿ,	ಆಸಂದಿ,	ಮುಗಳಿಕಟ್ಟೆ,	ಚಿಕ್ಕಬಾಸೂರು,
ಕಡೂರು,	ಬೀರೂರು,	ಮುಗುಳಿ,	ಗಡಿಹಳ್ಳಿ,
ಹೊಸೂರು,	ಗೋಪಗೊಂಡನಹಳ್ಳಿ,	ಸಂಪಿಗೆ ಹಳ್ಳಿ ಬೆಂಗಳೂರು,	
ಬಾಪೂಜಿ ನಗರ,	ರಾಣಾಸಿಂಗಪೇಟೆ,	ಕೋಡಿದೊಡ್ಡಿ,	ಉಮ್ಮಡಹಳ್ಳಿ,
ಆಲೂರು,	ಸಾತನೂರು,	ಹೊಸೂರುದೊಡ್ಡಿ,	ಹೊಸಕೆರೆ,
ಭರಗೂರು,	ಆದಿಹಳ್ಳಿ,	ಕುಪ್ಪೂರು,	ಆಲೂರು,
ಬಾಗೂರು,	ದೊಡ್ಡಕೊಪ್ಪಲು,	ಕಡಕೋಳ,	ಹೆಮ್ಮರಗಾಲ,
ಅರೆವಾಡಿ.			

ಅಧ್ಯಾಯ ನಾಲ್ಕು

ಬೀರಪ್ಪನ ಕ್ಷೇತ್ರಗಳು

ಯಾವುದೇ ಒಂದು ಸಮುದಾಯದ ಸಾಂಸ್ಕೃತಿಕ ವೀರನ ಅಧ್ಯಯನಕ್ಕೆ ಅಥವಾ ಆತನನ್ನು ಅರ್ಥೈಸಿಕೊಳ್ಳುವುದಕ್ಕೆ ಆತ ನೆಲೆಸಿದ, ತಿರುಗಾಡಿದ ಸ್ಥಳಗಳು ಮತ್ತು ಆತನನ್ನು ಆರಾಧನೆ ಮಾಡಿದ ಮತ್ತು ಮಾಡುತ್ತಿರುವ ಸ್ಥಳಗಳ ಸಾಂಸ್ಕೃತಿಕ ಚರಿತ್ರೆ ಬಹಳ ಮುಖ್ಯ. ಏಕೆಂದರೆ ಸ್ಥಳ ಮೂಲಕ್ಕೂ ಮತ್ತು ವ್ಯಕ್ತಿ ಆರಾಧನೆಗೂ ವೃತ್ತಿ ಮೂಲಕ್ಕೂ ತಾತ್ವಿಕವಾದ ಸಂಬಂಧವಿದೆ. ಹಾಗಾಗಿಯೇ ಆ ಸ್ಥಳಗಳನ್ನು ಮತ್ತು ಆ ಸ್ಥಳಗಳಲ್ಲಿ ನಡೆಯುವ ಆಚರಣೆಗಳನ್ನು ಅಧ್ಯಯನ ಮಾಡಬೇಕು. ಇವುಗಳನ್ನು ಅಧ್ಯಯನ ಮಾಡುವುದೆಂದರೆ ಬೀರಪ್ಪನ ಕಾಲದ ಮತ್ತು ಬೀರಪ್ಪನನ್ನು ಆರಾಧಿಸುತ್ತಾ ಬಂದಿರುವ ಸಮುದಾಯಗಳ ಸಾಂಸ್ಕೃತಿಕ ಚರಿತ್ರೆಯನ್ನು ಅಧ್ಯಯನ ಮಾಡಿದಂತಾಗುತ್ತದೆ ಎನ್ನುವುದು ಪ್ರಸ್ತುತ ಅಧ್ಯಯನದ ಆಶಯ. ಆದ್ದರಿಂದ ಅಧ್ಯಯನಕ್ಕೆ ಕರ್ನಾಟಕದ ಕೆಲವು ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅಲ್ಲಿ ಸಿಕ್ಕಿರುವ ವಿಭಿನ್ನ ಕಥನಗಳನ್ನು ಸಂಗ್ರಹಿಸಲಾಗಿದೆ. ಆ ಮುಖಾಂತರ ಬೀರಪ್ಪನ ಸಮಗ್ರ ಚರಿತ್ರೆಯನ್ನು ಭಿನ್ನ ಆಯಾಮಗಳನ್ನು ಗುರುತಿಸಲಾಗಿದೆ. ಬೀರಪ್ಪನ ನೆಲೆಗಳು ಭಿನ್ನವಾದ ಸಾಂಸ್ಕೃತಿಕ ಸಂದರ್ಭಗಳಲ್ಲಿ ರೂಪುಗೊಂಡಿವೆ. ಆ ಕ್ಷೇತ್ರಗಳ ವಿಶೇಷತೆಯನ್ನು ಗುರುತಿಸುವ ಪ್ರಯತ್ನವನ್ನು ಈ ಅಧ್ಯಯದಲ್ಲಿ ಮಾಡಲಾಗಿದೆ.

ಅಧ್ಯಯನಕ್ಕಾಗಿ ಕರ್ನಾಟಕದ ಎಲ್ಲಾ ಜಿಲ್ಲೆಗಳ ಕ್ಷೇತ್ರಕಾರ್ಯ ಕೈಗೊಂಡ ವೇಳೆಯಲ್ಲಿ ಗ್ರಾಮಗಳಿಗೆ ತೆರಳಿ ಅಲ್ಲಿ ಹಾಲುಮತ ಸಮಾಜದ ಹಿರಿಯರೊಂದಿಗೆ ಹಾಗೂ ದೇವಾಲಯದ ಪೂಜಾರಿಗಳೊಂದಿಗೆ ಮಾತನಾಡಿಕೊಂಡು ಆ ಸಂದರ್ಭದಲ್ಲಿ ಅಭಿವ್ಯಕ್ತಗೊಂಡ ವಿಷಯಗಳನ್ನು ಇಲ್ಲಿ ಬಳಸಿಕೊಂಡಿದ್ದೇನೆ. ದೇವಾಲಯಗಳು ವಿವಿಧ ಶೈಲಿ ಮತ್ತು ಆಕಾರದಲ್ಲಿವೆ. ಇದಕ್ಕೆ ಹಲವಾರು ಕಾರಣಗಳಿದ್ದರೂ ಆ ದೇವಾಲಯಗಳು ನಿರ್ಮಾಣಗೊಂಡ ಕಾಲ, ಪ್ರದೇಶ ಹಾಗೂ ಆರಾಧನೆ ಮಾಡುವ ಸಮುದಾಯಗಳ ಅನನ್ಯತೆ ಕಾರಣವಾಗಿದೆ.

ಬೀರದೇವರ ಕಟ್ಟೆಯಾಕಾರದ (ಚೌಕಕಾರದ) ಗುಡಿಗಳಲ್ಲಿ ಕಾಡುಗಲ್ಲಿನ ಮೂರ್ತಿಗಳು ಇವೆ. ಗರ್ಭಗುಡಿ ಹಾಗೂ ಮೊಗಸಾಲೆ ಇದ್ದಕಡೆ ಕಂಚು, ಪಂಚಲೋಹಗಳಿಂದ ಮಾಡಲ್ಪಟ್ಟ ಹಿತ್ತಾಳೆ, ಬೆಳ್ಳಿಯ ಮೂರ್ತಿಗಳನ್ನು ಕಾಣಬಹುದು. ಇನ್ನು ಹಲವೆಡೆ ಇರುವುದು ಸುಸಜ್ಜಿತ ಮಾದರಿಯ ದೇವಾಲಯ ಕಟ್ಟಡಗಳಿವೆ. ಇವುಗಳಲ್ಲಿ ಹೆಚ್ಚು ದೇವಾಲಯಗಳು ಆಧುನಿಕ ಕಾಲಕ್ಕೆ ಅಂದರೆ, ಇತ್ತೀಚೆಗೆ ನಿರ್ಮಾಣವಾಗಿವೆ. ಈ ಬೀರಪ್ಪನ ನೆಲೆಗಳು ವೈವಿಧ್ಯವಾದ ಕ್ಷೇತ್ರಗಳಾಗಿಯೂ ಪ್ರಸಿದ್ಧಿ ಪಡೆದಿವೆ. ಇವು ಆಯಾ ಸಮುದಾಯದ ಸಾಂಸ್ಕೃತಿಕ ಕೇಂದ್ರಗಳಾಗಿ ರೂಪಗೊಂಡಿವೆ. ಇವು ಸಮುದಾಯದ ಆರ್ಥಿಕತೆಯನ್ನು ಅಥವಾ ಸ್ಥಿತಿಗತಿಯನ್ನು ಅರಿಯಲು ಇರುವ ಪ್ರಮುಖ ಆಕರವೂ ಹೌದು. ಅಂತಹ ಕ್ಷೇತ್ರಗಳಲ್ಲಿ ವಿಜಾಪುರ ಜಿಲ್ಲೆ ಜಮಖಂಡಿ ತಾಲೂಕಿನ ಕೊಣ್ಣೂರು ಗ್ರಾಮವು ಒಂದು.

ಈ ಗ್ರಾಮವು ಜಮಖಂಡಿಯಿಂದ ಪೂರ್ವಕ್ಕೆ ಸುಮಾರು ೧೨ ಕಿ.ಮೀ. ದೂರದಲ್ಲಿದೆ. ಪ್ರಸ್ತುತ ಸಂದರ್ಭದಲ್ಲಿ ಈ ಕ್ಷೇತ್ರವು ಶ್ರೀ ಕರಿಸಿದ್ದೇಶ್ವರ ಕ್ಷೇತ್ರವೆಂದು ಪ್ರಸಿದ್ಧಿ ಪಡೆದಿದೆ. ಈ ದೇವರ ಇನ್ನೊಂದು ನೆಲೆ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಅಲಕನೂರು ಗ್ರಾಮದಲ್ಲಿದೆ. ಅಲಕನೂರು ಹಾರೂಗೇರಿಯಿಂದ ೫ ಕಿ.ಮೀ. ದೂರದಲ್ಲಿದೆ. ಇಲ್ಲಿನ ಕರಿಸಿದ್ಧೇಶ್ವರ ದೇವಾಲಯ ಎರಡು ಎಕರೆಯಷ್ಟು ವಿಸ್ತೀರ್ಣದಲ್ಲಿ ನಿರ್ಮಾಣಗೊಂಡಿದೆ. ಈ ದೇವಾಲಯವನ್ನು ಕರಿಸಿದ್ಧನ ಅರಮನೆಯೆಂದೇ ಕರೆಯಲಾಗುತ್ತದೆ. ಅಷ್ಟೇ ಅಲ್ಲ; ಬೆಳಗಾವಿ, ವಿಜಾಪುರ, ಬಾಗಲಕೋಟೆ, ಕೊಪ್ಪಳ, ದಾವಣಗೆರೆ, ಚಿಕ್ಕಮಗಳೂರು, ಬೆಂಗಳೂರು, ಮಂಡ್ಯ, ಹಾಸನ, ತುಮಕೂರು, ಚಿತ್ರದುರ್ಗ, ಮೈಸೂರು ಜಿಲ್ಲೆಗಳಲ್ಲಿ ಕಂಡುಬರುವ ಬೀರಪ್ಪನ, ಕರಿಸಿದ್ಧನ ಮೂಲ ಸ್ಥಳವೆಂಬ ಅನ್ಯನತೆ ಈ ಸ್ಥಳಕ್ಕಿದೆ. ಅಲ್ಲದೆ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಚಿಂಚಲಿಯೂ ಒಂದಾಗಿದೆ. ಈ ಪ್ರದೇಶದಲ್ಲಿ ನೆಲೆಸಿರುವ ಮಾಯವ್ವ ಬೀರಪ್ಪನ ಅಕ್ಕನೆಂದು ಕಥನಗಳಿಂದ ತಿಳಿದುಬರುತ್ತದೆ. ಈ ದೇವತೆಯು ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಸ್ತ್ರೀಶಕ್ತಿ ನೆಲೆಯೂ ಆಗಿದೆ. ಚಿಂಚಲಿ ಗ್ರಾಮದ ಊರ ಹೊರಗಡೆ ಇವತ್ತಿನ ಹಾಳು ಮಣ್ಣಿನ ದಿಬ್ಬದ ಮೇಲೆ ಕಲ್ಲಿನಿಂದ ನಿರ್ಮಾಣಗೊಂಡ ಮಾಯಕ್ಕನ ಗುಡಿಯಿದೆ. ಇನ್ನು ಬೇರೆ ಬೇರೆ ಈ ಸಮುದಾಯದ ತಾಲೂಕಿನ ಬೀರಪ್ಪನ ಕ್ಷೇತ್ರಗಳ ಬಗ್ಗೆ ತಿಳಿಯಬಹುದು.

ಉತ್ತರ ಕರ್ನಾಟಕದ ಬೀರಪ್ಪನ ಕ್ಷೇತ್ರಗಳು ಕೊಣ್ಣೂರು, ನಾಗಠಾಣ, ಅಲಕನೂರು, ಎಕ್ಸಾಂಬಾ, ರಾಯಬಾಗ, ಹಾರೊಗೇರಿ, ತಳಗಿಹಾಳ, ಶಿರಗುಪ್ಪಿ, ಮಲಘಾಣ, ಮುರನಾಳ, ಕಂಕಣವಾಡಿ ಮುಂತಾದ ಕ್ಷೇತ್ರಗಳು ಉತ್ತರ ಕರ್ನಾಟಕದಲ್ಲಿ ಜನಪ್ರಿಯತೆಯನ್ನು ಪಡೆದಿವೆ.

ದಕ್ಷಿಣ ಕರ್ನಾಟಕದ ಬೀರದೇವರ ದೇವಾಲಯಗಳು ಉತ್ತರ ಕರ್ನಾಟಕದ ಬೀರದೇವರ ದೇವಾಲಯಗಳಿಗಿಂತ ಭಿನ್ನವಾದ ಶೈಲಿಯಲ್ಲಿವೆ. ಪ್ರಾದೇಶಿಕ ಭಿನ್ನತೆಗಳಿದ್ದರೂ ಕೇವಲ ಪ್ರಾದೇಶಿಕ ಭಿನ್ನತೆಯಿಂದ ಭಿನ್ನವಾದ ಸ್ವರೂಪವನ್ನು ಪಡೆದಿಲ್ಲ. ದೇವಾಲಯಗಳು ನಿರ್ಮಾಣಗೊಂಡಿರುವ ಪ್ರದೇಶ ಮತ್ತು ಕಾಲಗಳು ಸಹ ವಿಶಿಷ್ಟವಾದ ಚಾರಿತ್ರಿಕ ಕಥನಗಳನ್ನು ಹೇಳುತ್ತವೆ. ಇವುಗಳಲ್ಲಿ ವಲಸೆ ಮೂಲ ಮತ್ತು ಸೃಷ್ಟಿಮೂಲ ಕಥನಗಳು ಗಮನಸೆಳೆಯುತ್ತವೆ. ಅಂತಹ ದೇವಾಲಯಗಳಲ್ಲಿ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ

ರಾಮಗಿರಿ ಹೋಬಳಿಯ ತಾಳೆಕಟ್ಟೆ ಗ್ರಾಮವು ಒಂದು. ಗ್ರಾಮ ಮತ್ತು ಈ ಗುಡಿಕಟ್ಟೆ ವ್ಯವಸ್ಥೆಗೆ ಸೇರಿದ ಜನರು ಇದನ್ನು ಹಿರಯ್ಯ ಅಥವಾ ಹಿರೇಬೀರದೇವರ ಪುಣ್ಯ ಕ್ಷೇತ್ರವೆಂದು ಕರೆಯುತ್ತಾರೆ. ಈತನನ್ನು ಸಾವಿರ ಕುದುರೆ ಸರದಾರನೆಂದು ಸ್ಥಳೀಯರು ಕರೆಯುತ್ತಾರೆ. ಇದೇ ಜಿಲ್ಲೆಯ ಗಡಿಹಳ್ಳಿ ಹೊಸೂರು, ಮುಗಳಿ, ಶಿವನಿ, ಬೀರನಹಳ್ಳಿ, ಹನುಮನಹಳ್ಳಿ, ತಗಡಿ, ಆಸಂದಿ, ಬೀರೂರು, ಕಡೂರು, ತರೀಕೆರೆ ಈ ಸ್ಥಳಗಳೆಲ್ಲವೂ ಆರಾಧ್ಯ ದೈವವಾದ ಬೀರದೇವರ ನೆಲೆಗಳು (ಕ್ಷೇತ್ರಗಳು), ಇದೇ ರೀತಿ ಮಂಡ್ಯ ಹಾಗೂ ರಾಮನಗರಗಳಲ್ಲೂ ಸಾಂಸ್ಕೃತಿಕ ಕೇಂದ್ರಗಳಾದ ಆಲೂರು, ಕೆರಗೊಂಡ, ಹೊಸೂರದೊಡ್ಡಿ, ಸಾತನೂರು, ಹೊಸಗೆರೆ, ಮಳವಳ್ಳಿ, ಉಮ್ಮಡಹಳ್ಳಿ, ಕೆಸಲಗೆರೆ, ಬೆಟ್ಟದಹಳ್ಳಿ ಪ್ರಮುಖವಾದವು. ಮೈಸೂರು ಜಿಲ್ಲೆಯ ತಾಂಡವಪುರ, ಕೊಡಿಯಾಲ ಪ್ರಮುಖ ಸಾಂಸ್ಕೃತಿಕ ಕ್ಷೇತ್ರಗಳು. ಬೆಂಗಳೂರು ಜಿಲ್ಲೆಯ ಸಂಪಿಗೆಹಳ್ಳಿ, ಬೆನಸನಟೌನ್, ಅವೆನ್ಯೂರಸ್ತೆ, ರಾಣಾಸಿಂಗಪೇಟೆ ಪ್ರಮುಖವಾದ ನೆಲೆಗಳಾಗಿವೆ. ಇವಷ್ಟೇ ಅಲ್ಲದೇ ವಿವಿಧ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಇನ್ನು ಅನೇಕ ಜಿಲ್ಲೆಯ ಕ್ಷೇತ್ರಕಾರ್ಯ ಮಾಡಿ ಬೀರಲಿಂಗೇಶ್ವರ ದೇವಾಲಯಗಳ ವಿಶ್ಲೇಷಣೆಯನ್ನು ಮಾಡಲಾಗಿದೆ.

೧. ಅಲಕನೂರು

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಅಲಕನೂರು ಗ್ರಾಮವು ಹಿರಿಹೊಳೆಯ ಬೆನ್ನಿಗಂಟಿಕೊಂಡು ಪುಟ್ಟ ಪುಟ್ಟ ಬೆಟ್ಟಗಳಿಂದೊಡಗೂಡಿದ ವಿಶಾಲ ಬಯಲಿನಲ್ಲಿ ಮೈಚಾಚಿಕೊಂಡಿದೆ. ನಸುಗೆಂಪು ಬಣ್ಣದ ಮಣ್ಣಿನ ಈ ವಿಶಾಲ ಮೈದಾನ ಒಂದು ಕಾಲಕ್ಕೆ ಕುರುಚಲು ಕಾಡಾಗಿತ್ತು. ಪಶುಪಾಲನೆ ಇಲ್ಲಿನ ಜನರ ಮುಖ್ಯ ಕಸುಬಾಗಿದೆ. ಇಲ್ಲಿ ಹಾಲುಮತದವರೇ ಬಹುಸಂಖ್ಯಾತರು. 'ಬಾಗೆನಾಡು' ಎಂದು ಹೆಸರಾಗಿದ್ದ ರಾಯಬಾಗ ತಾಲೂಕು ಹಾಲುಮತ ಪರಂಪರೆಯ ತೊಟ್ಟಿಲು ಎಂದು ಭೌಗೋಳಿಕ ಹಾಗೂ ಸಾಂಸ್ಕೃತಿಕ ಅಧ್ಯಯನಕಾರರು ಗುರುತಿಸಿದ್ದಾರೆ. ಈ ಗುರುತಿಸುವಿಕೆ ಅರ್ಥಪೂರ್ಣವಾಗಿದೆ. ಇಲ್ಲಿ ಅನೇಕ ಹಾಲುಮತದ ಕ್ಷೇತ್ರಗಳಿವೆ. ಬಾಗಿನಾಡದ ಬಣ್ಣದ ಮಾಯವ್ವನ ಚಿಂಚಲಿ ಕರ್ನಾಟಕದ ಶಕ್ತಿಕೇಂದ್ರಗಳಲ್ಲೊಂದು. ಬಣ್ಣದ ಮಾಯವ್ವನ ತಮ್ಮ ಬೀರಣ್ಣದೇವರು ಚಿಂಚಲಿಸೂರೆ ವನದೇವತೆಯನ್ನು ಕೊಂದು ಚಿಂಚಲಿಯ 'ಹಕ್ಕು' ಅಕ್ಕನಿಗೆ ದಕ್ಕುವಂತೆ ಮಾಡಿದನೆಂದು ಜನಪದ ಹಾಲುಮತ ಮಹಾಕಾವ್ಯವು ಪ್ರತಿಪಾದನೆ ಮಾಡುತ್ತದೆ.

"ಬಾಗಿಯ ಭಗನಾಥನ ಹರುವ ರಾಜಕಿ ಇದ್ದಾವ
ಒಂದು ಕೊರಗಿ ಹೊಲವೇನಯ್ಯ ಹೂವಿನ ಬಗಹಿಚನಿದ್ದಾವ
ಹೂವಿನ ಬಗಿಚನಿದ್ದಾವ ಬಾರಾಂಗಬಾಂಯಿನಿದ್ದಾವ
ಬಾರಾಂಗಬಾಂಯಿ ಬಸರಿ ತಳಿಕೆ ಕಲ್ಲಹಾಸಿಗಿ ಇದ್ದಾವ"

ಇಲ್ಲಿ ವರ್ಣಿತಗೊಂಡ ಬಾಗಿಯ ಭಗನಾಥ ಈ ಬಾಗಿನಾಡಿನವನೇ ಆಗಿರಬೇಕು.[೧]

ಏಳು ಬಾಗಿಲುಗಳ ದೇಗುಲದೊಳಗಿದ್ದ ದೈತ್ಯ ಭಗನಾಥನ ಶಿರವನ್ನು ಕಡಿದು ಅಕ್ಕ ಮಾಯವ್ವನ ಮಾನವನ್ನು ಚಿಕ್ಕ ಬೀರಣ್ಣ ರಕ್ಷಿಸಿದ್ದನಂತೆ, ಕೊಂಕಣನಾಡಿಗೆ ತಲೆಬಾಗಿಲನಂತಿರುವ ಬಾಗೆನಾಡು ಬೀರಣ್ಣದೇವರ ಎಂದು ಹೇಳಬಹುದು.

ಹಾಲುಮತದವರ ಹಲವಾರು ಕ್ಷೇತ್ರಗಳು ಈ ತಾಲೂಕಿನುದ್ದಕ್ಕೂ ಹರಡಿಕೊಂಡಿವೆ. ಇದು ಹಾಲುಮತದವರ ಸಾಂಸ್ಕೃತಿಕ ಈ ಅನನ್ಯತೆಯನ್ನು, ನೆಲೆಯ ಚಾರಿತ್ರಿಕತೆಯನ್ನು ಬಿಂಬಿಸುತ್ತದೆ. ಇವುಗಳಲ್ಲಿ ಮಾಯಕ್ಕನ ಚಿಂಚಲಿ ಮತ್ತು ಕರಿಸಿದ್ಧನ ಅಲಕನೂರು, ರಾಯಬಾಗ, ಎಕ್ಸೆಂಬಾ, ಕಂಕಣವಾಡಿ, ಹಾರೂಗೇರಿ ಮತ್ತು ಕೊಣ್ಣೂರು ಕರಿಸಿದ್ಧ ಮುಂತಾದ ಕ್ಷೇತ್ರಗಳು ಗಮನಾರ್ಹವಾದವು.

ಮುಖ್ಯ ದೇವಾಲಯ : 'ಕರಿಸಿದ್ಧನ ಅರಮನೆ' ಎಂದು ಗುರುತಿಸಲ್ಪಡುವ ಅಲಕನೂರು, ಹಾರೂಗೇರಿ ಚಿಂಚಲಿ ರಸ್ತೆಯ ಮೇಲಿರುವ ಸಣ್ಣ ಊರು. ಇದು ಹಾರೂಗೇರಿಯಿಂದ ಪಶ್ಚಿಮಕ್ಕೆ ೫ ಕಿ.ಮೀ. ಅಂತರದಲ್ಲಿದೆ. ಎತ್ತರದ ಬಯಲು ಪ್ರದೇಶದಲ್ಲಿರುವ ಅಲಕನೂರು ಅಷ್ಟೇನೂ ಪ್ರಾಚೀನವಾದುದಲ್ಲ. ಊರಲ್ಲಿಯ ಮುಕ್ಕಾಲು ಪಾಲು ಜನ ಹಾಲುಮತದವರು. ಗ್ರಾಮದ ಉತ್ತರ ಭಾಗವೆಲ್ಲ ಹಾಳುಬಿದ್ದಿದೆ. ೮೦-೯೦ ಮನೆಗಳಿರುವ ಅಲಕನೂರಿನ ಪ್ರಮುಖ ಆಕರ್ಷಣೆಯೆಂದರೆ ಕರೆಸಿದ್ಧೇಶ್ವರನ ಭವ್ಯ ದೇವಾಲಯ. ಎರಡು ಎಕರೆಗಳಷ್ಟು ವಿಸ್ತೀರ್ಣದ ದೇವಾಲಯಕ್ಕೆ ಪೂರ್ವ ದಿಕ್ಕಿನಲ್ಲಿ ಪ್ರವೇಶದ್ವಾರವಿದೆ. ಗರ್ಭಗೃಹ, ಸುಕನಾಸಿ, ಮುಖಮಂಟಪ ಗಳನ್ನು ಹೊಂದಿರುವ ಈ ದೇವಾಲಯ ತಗ್ಗು ಪ್ರದೇಶದಲ್ಲಿದೆ. ಇದರ ಸುತ್ತಲೂ ಪ್ರಾಂಗಣವಿದ್ದು, ಪಶ್ಚಿಮ ಮತ್ತು ದಕ್ಷಿಣೋತ್ತರ ದಿಕ್ಕುಗಳಲ್ಲಿ ಅಂತಸ್ತಿನ ಸುಂದರ ಮೊಗಸಾಲೆಗಳಿವೆ. ಈ ಮೊಗಸಾಲೆಗಳ ಮೇಲಂತಸ್ತಿನಲ್ಲಿ ಹಾಲುಮತ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಚಿತ್ರಗಳನ್ನು ಬಿಡಿಸಲಾಗಿದೆ.

ದೇವಾಲಯದ ಮುಖಮಂಟಪ : ಕಬ್ಬಿಣದ ಕಂಬಿಗಳಿಂದ ನಿರ್ಮಾಣಗೊಂಡಿದ್ದು ಛಾವಣಿಗೆ ಝಿಂಕು ಶೀಟು(ರೆಟ್ಟೆ)ಗಳನ್ನು ಜೋಡಿಸಲಾಗಿದೆ. ದೇವಾಲಯದ ಮುಖಮಂಟಪಕ್ಕೆ ಎದುರಾಗಿ ಜೋಡು ಟಗರುಗಳ ಮೂರ್ತಿಗಳಿವೆ. ದೇವಾಲಯದ ಹೊರನಕ್ಷೆ ವಿಜಯನಗರ ವಾಸ್ತುಶೈಲಿಯ ಮಾದರಿಯಲ್ಲಿದೆ. ಆದರೆ ದ್ವಾರಗೋಪುರಗಳಿಲ್ಲ. ಗರ್ಭಗೃಹದ ದಕ್ಷಿಣದಲ್ಲಿರುವ ನಿರ್ಗಮನ ದ್ವಾರ ದೇವಾಲಯದ ಹೊರ ಪ್ರಾಂಗಣಕ್ಕೆ ಸಂಪರ್ಕ ಕಲ್ಪಿಸುವುದು. ಕರಿಸಿದ್ಧನ ಕುದುರೆ, ಆನೆಯ ಮೂರ್ತಿ ಶಿಲ್ಪವಿದೆ. ಉತ್ಸವ ಸಂದರ್ಭಗಳಲ್ಲಿ ಆನೆ ಮತ್ತು ಕುದುರೆಯನ್ನು ಬಳಸಲಾಗಿದೆ. ದೇವಾಲಯದ ಪೂರ್ವೋತ್ತರ ದಿಕ್ಕುಗಳಲ್ಲಿ ದ್ವಾರಗಳನ್ನು ಜೋಡಿಸಲಾಗಿದೆ. ಹೊರಾಂಗಣದಲ್ಲಿ ಪಾಕಶಾಲೆ, ಸಾಮೂಹಿಕ ಭೋಜನ ಶಾಲೆಯನ್ನು ಕಾಣಬಹುದು.

ಗರ್ಭಗುಡಿಯಲ್ಲಿ ಅಸ್ಪಷ್ಟ ಆಕೃತಿಯ ಮೂರ್ತಿಶಿಲ್ಪವಿದೆ. ಅದಕ್ಕೆ ಹಿತ್ತಾಳೆ ಮುಖ ಜೋಡಿಸಲಾಗಿದೆ. ಪೂಜಾರಿಗಳನ್ನು ಹೊರತುಪಡಿಸಿ ಬೇರೆ ಯಾರಿಗೂ ಗರ್ಭಗೃಹದಲ್ಲಿ ಪ್ರವೇಶವಿರುವುದಿಲ್ಲ. ಕರೆದೇವರ ಮೂರ್ತಿಯ ಬಲಭಾಗದಲ್ಲಿ ಮಾಯಕ್ಕನ ಮೂರ್ತಿಯಿದೆ. ಕರಿದೇವರದು ಶ್ವೇತವರ್ಣ, ಪೂಜಾರಿಗಳು ಬಿಳಿಪಂಚೆ, ಬಿಳಿ ಅಂಗಿ ತೊಟ್ಟುಕೊಂಡು ತಲೆಗೆ ಶುಭ್ರ ರುಮಾಲು ಸುತ್ತಿಕೊಳ್ಳುವರು. ದೇವರಿಗೆ ಬೇರಾವುದೇ ಆಡಂಬರವಿಲ್ಲ. ಸತ್ತಿಗೆ, ನಿಶಾನೆ, ಗೊಂಡೆ, ಕಂಬಳಿ, ಡೊಳ್ಳು ಇವು ದೇವರ ಲಾಂಛನಗಳು. ಇವುಗಳ ಮೇಳಕ್ಕೆ ಶಿವಸ್ಥಾನವೆಂದು ಕರೆಯುವರು. ರವಿವಾರದಂದು ದೇವಾಲಯಕ್ಕೆ ಬರುವ ದರ್ಶನಾಕಾಂಕ್ಷಿಗಳ ಸಂಖ್ಯೆ ಅಧಿಕವಾಗಿರುತ್ತದೆ. ಈ ಸಂದರ್ಭದಲ್ಲಿ ಉಪ್ಪಿಲ್ಲದ ಸಪ್ಪೆ ಅನ್ನ ಮತ್ತು ತುಪ್ಪವನ್ನು ದೇವರಿಗೆ ನೈವೇದ್ಯವಾಗಿ ಅರ್ಪಿಸುತ್ತಾರೆ. ಅಲಕನೂರಿನ ಬೇಡ ಸಮುದಾಯದವರು ನೈವೇದ್ಯದ ಬದಲಾಗಿ ಅಕ್ಕಿ, ಬೆಳೆ, ಬೆಲ್ಲ ಮುಂತಾದ ವಸ್ತುಗಳನ್ನು ಪಡಿ ರೂಪದಲ್ಲಿ ಕೊಡುವರು.

ಮದುವೆ, ಗೃಹಪ್ರವೇಶ ವಾಸ್ತುಶಾಂತಿ, ಹಬ್ಬ ಮೊದಲಾದ ಸಂದರ್ಭಗಳಲ್ಲಿ ಜನರು ತಮ್ಮ ಮನೆಗಳಿಗೆ ದೇವರ ಪಲ್ಲಕ್ಕಿಗಳನ್ನು ಬರಮಾಡಿಕೊಳ್ಳುತ್ತಾರೆ. ಆದರೆ ಈ ದೇವರು ಯಾರ ಮನೆಗೂ ಹೋಗುವುದಿಲ್ಲ. ದೇವರ ಕೋತ್ವಾಲರೆಂದು ಹೇಳುವ ಆನೆ, ಕುದುರೆಗಳು ಮಾತ್ರ ಆಮಂತ್ರಣದ ಮೇರೆಗೆ ಭಕ್ತರ ಮನೆಗೆ ಹೋಗುತ್ತವೆ. ಭಕ್ತರ ಮನೆಗೆ ಬಂದ ಕರೆದೇವರ ಕುದುರೆಗೆ ೫೦೦ ರೂ.ಗಳನ್ನು, ಆನೆಗೆ ಸಾವಿರ ರೂ.ಗಳನ್ನು ಅರ್ಚಕರಿಗೆ ೫೦೦, ಹಾಡುವ ಮೇಳಕ್ಕೆ ೫೦೦ ರೂ.ಗಳಂತೆ ಲೆಕ್ಕ ಹಾಕಿ ಕಾಣಿಕೆ ನೀಡುತ್ತಾರೆ. ಈ ಹಣವೆಲ್ಲ ದೇವರ ಭಂಡಾರಕ್ಕೆ ಸಂದಾಯವಾಗುವುದು. ಈ ಹಣವನ್ನು ಭಂಡಾರಕ್ಕೆ ಸೇರಿಸಿ, ಉತ್ಸವಗಳ ವೆಚ್ಚಕ್ಕೆ ವಿನಿಯೋಗಿಸಲಾಗುತ್ತದೆ. ಕರಿಸಿದ್ಧೇಶ್ವರ ಜಾತ್ರೆ ಹಾಗೂ ಉತ್ಸವಗಳಿಗಾಗಿ ಜನರಿಂದ ವಂತಿಗೆ ಎತ್ತುವ ವಿಶಿಷ್ಟ ಸಂಪ್ರದಾಯವಿಲ್ಲ.

ಐತಿಹ್ಯ

ಕರೆಸಿದ್ಧ, ಕರಿಸಿದ್ಧ, ಕರಿಯಪ್ಪ, ಖರಸಿದ್ಧ, ಕರಿಯದೇವರು ಹೀಗೆ ಅನೇಕ ನಾಮಗಳಿಂದ ಕರೆಯಲ್ಪಡುವ ಈ ದೇವರ ಉಗಮದ ಕುರಿತು ದಂತಕಥೆಯೊಂದು ಈ ಭಾಗದಲ್ಲಿ ಹೆಚ್ಚು ಪ್ರಚಲಿತದಲ್ಲಿದೆ. ಇಲ್ಲಿಯ ಜನರು ತಮ್ಮ ಕುಲ ದೇವರೆಂದು, ಉದ್ಭವಮೂರ್ತಿ ಎಂದು ನಂಬಿ ಈ ಕಥೆ ಹೇಳುತ್ತಾರೆ. ಅಲಕನೂರಿನ ಮೂಲ ಹೆಸರು ತಿಪ್ಪರಟ್ಟಿ, ಬೀರಣ್ಣದೇವರು ಕೊಣ್ಣೂರಲ್ಲಿ ಕ್ಯಾಣೇಸೂರ ದೈತ್ಯನನ್ನು ವಧೆಮಾಡಿ, ತನ್ನ ಕೈಯಲ್ಲಿಯ ಆಯುಧ ಅಲಗನ್ನು ಹಾರಿಸಿದ. ಅದು ತಿಪ್ಪರಟ್ಟಿಯ ಆಲದ ಕಟ್ಟೆಯ ಮೇಲೆ ಬಂದು ಬಿತ್ತು. ಅಂದಿನಿಂದ ತಿಪ್ಪರಟ್ಟಿಗೆ ಅಲಕನೂರು ಎಂಬ ಹೆಸರು ಬಳಕೆಗೆ ಬಂತು.[೨] (ಇದು ಪಾಮರ ನಿಷ್ಪತ್ತಿ, ಅಲಕ ಎಂಬ ಪದಕ್ಕೆ ಕೋಶದಲ್ಲಿ ಅಳಿಕೆ ಅಲರ್ಕ ಎಂಬ ಅರ್ಥಗಳನ್ನು ಕೂಡ ಮಾಡಿರುವರು. ಕುಬೇರನ ರಾಜಧಾನಿಗೆ ಅಲಕಾಪುರ ಎಂದು ಹೆಸರು ಬಂದಿದೆ) ಕಂಕಣವಾಡಿ ದೇಶಗತಿಯ ಒಂದು ಹಳ್ಳಿಯಾಗಿದ್ದ ಈ ತಿಪ್ಪರಟ್ಟಿಯಲ್ಲಿ ಬೇಡರ ಒಡೆತನವಿತ್ತು. ಊರ ದಕ್ಷಿಣದಲ್ಲಿ ದನಕರುಗಳು ಮೇಯುವ ಬಯಲು ಪ್ರದೇಶವಿತ್ತು. ಅಲ್ಲಿ ಹಳ್ಳದ ಒರತಿಯಿತ್ತು. ಹಾರೂಗೇರಿಯ ಗೌಡನ ಆಕಳುಗಳು ಅಲ್ಲಿಗೆ ಪ್ರತಿದಿನ ಮೇಯಲು ಬರುತ್ತಿದ್ದವು. ಅವುಗಳನ್ನು ಶಿದ್ಧರಾಯಮುತ್ಯಾ ಎಂಬ ಆಳುಮಗ ಕಾಯುತ್ತಿದ್ದ. ದನಗಳನ್ನು ಮೇಯಲು ಬಿಟ್ಟು ಆತ ವಿಶ್ರಮಿಸುತ್ತಿದ್ದ ಸಂದರ್ಭದಲ್ಲಿ ಸಮಯದಲ್ಲಿ ಆ ಹಿಂಡಿನಲ್ಲಿಯ ಹುಟ್ಟು ಗೋಮಾರಿ, ಹುಟ್ಟು ಕುಮಾರಿ ಆಕಳೊಂದು ಇತ್ತು. ಆ ಆಕಳು ಹುತ್ತಿನಲ್ಲಿ ಪ್ರತಿನಿತ್ಯ ಹಾಲು ಕರೆಯುತ್ತಿತ್ತಂತೆ. ಯಾರೂ ಇದನ್ನು ಗಮನಿಸಿರಲಿಲ್ಲ. ಆ ಆಕಳ ಮೊಲೆಗಳಿಗೆ ನೊರೆ ಮಾತ್ರ ಹಾಗೆಯೇ ಉಳಿಯುತ್ತಿತ್ತು. ಹೀಗೆ ಹನ್ನೆರಡು ವರ್ಷ ಕಳೆದವು. ಒಂದು ದಿನ ಆಕಳ ಮೊಲೆಗಳಿಗೆ ಅಂಟಿದ ನೊರೆ ಗೌಡತಿಯ ಕಣ್ಣಿಗೆ ಬಿತ್ತು. ಅವಳು ಈ ವಿಸ್ಮಯವನ್ನು ಗಂಡನಿಗೆ ತಿಳಿಸಿದಳು. ಆತನಿಗೂ ಆಶ್ಚರ್ಯವಾಯಿತು. ರಹಸ್ಯವನ್ನು ಭೇದಿಸಲು ಗೌಡ ಒಡಕಿ ತಾಣಕ್ಕೆ ಬಂದು ಅಡಗಿ ಕುಳಿತುಕೊಂಡ. ಆ ಆಕಳು ದಿನದಂತೆ ಹುತ್ತಿಗೆ ಹಾಲೆರೆಯುತ್ತಿರುವುದನ್ನು ನೋಡಿದ ಗೌಡನಿಗೆ ರೋಮಾಂಚನವಾಗುತ್ತದೆ. ಆ ಸಂದರ್ಭದಲ್ಲಿ "ಹಾಳು ಹಾರೂಗೇರಿಗೆ ಬರುವವನಿದ್ದೇನೆ; ಹಳುಪಿನ ಬಂಡಿಗೆ ಹನ್ನೆರಡು ಎತ್ತು ಹೂಡಿ, ಐವರು ಮುತ್ತೈದೆಯರೊಂದಿಗೆ ಬಂದು ನನ್ನನ್ನು ಕರೆದುಕೊಂಡು

ಹೋಗು" ಎಂಬ ಅಶರೀರವಾಣಿ ಗೌಡನ ಕಿವಿಗೆ ಬೀಳುತ್ತದೆ. ರವಿವಾರದಂದು ಗೌಡ ಬಂಗಾರದ ತಟ್ಟೆಗಳಲ್ಲಿ ಮುತ್ತಿನಾರತಿ ಹಿಡಿದುಕೊಂಡು ಐವರು ಮುತ್ತೈದೆಯರೊಂದಿಗೆ ಹನ್ನೆರಡು ಎತ್ತುಗಳ ಹಳುವಿನ ಬಂಡಿ ಹೂಡಿಕೊಂಡು ಅಲಕನೂರಿನ ಒಡಕಿ ತಾಣಕ್ಕೆ ಬರುತ್ತಾನೆ. ಹುತ್ತವನ್ನು ಅಗಿದಾಗ ಅವನಿಗೆ ಕರೆಸಿದ್ಧಮೂರ್ತಿ ಸಿಗುತ್ತದೆ. ಅವನು ಕರಿಸಿದ್ಧಮೂರ್ತಿಯನ್ನು ಬಂಡಿಯಲ್ಲಿಟ್ಟುಕೊಂಡು ಹಾರೂಗೇರಿಗೆ ಬರುವಾಗ ದಾರಿಯಲ್ಲಿ ಬಂಡಿಯ ಹಾರಿ ಮುರಿದು ನೆಲಕ್ಕೆ ಕುಸಿಯಿತು".[೩] ಅಗ ದೇವರ ಮೂರ್ತಿ ನೆಲಕ್ಕುರುಳಿತು. ಅದನ್ನು ಎತ್ತಲು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಅಲಕನೂರಿನಲ್ಲಿಯೆ ನೆಲೆಸಿ, ಅಲಕನೂರನ್ನು ಅರಮನೆ ಮಾಡುವುದಾಗಿ ದೇವವಾಣಿ ಮೊಳಗಿತು".[೪] ಅಗ ಹಾರೂಗೇರಿಯ ಗೌಡ ಕರೆಸಿದ್ಧನಮೂರ್ತಿಯನ್ನು ಬಿಟ್ಟು ಹಿಂದಿರುಗಿದ ಗೌಡನ ಆಳುಮಗ ಸಿದ್ಧರಾಯಮುತ್ಯಾ ಕರೆಸಿದ್ಧನ ಮುಖಪೂಜೆ ಮಾಡುತ್ತಾ ಅಲ್ಲಿಯೇ ನೆಲೆಸಿದ".[೫] ಮಣ್ಣಮಾಳಿಕೋಟೆಯ ಹೆಣ್ಣುಮಗಳೊಬ್ಬಳು ತನ್ನ ನಾಲ್ವರು ಗಂಡುಮಕ್ಕಳೊಂದಿಗೆ ಅಲಕನೂರಕ್ಕೆ ಬಂದಿದ್ದಳು. ಅವರಲ್ಲಿಯ ಮೂವರು ಮಕ್ಕಳು ಒಂದೇ ದಿನ ತೀರಿದರು. ಉಳಿದವನು ೧೨ ವರ್ಷಗಳ ಕಾಲ ದೇವರ ಬೆನ್ನುಪೂಜೆ ಮಾಡಿ ವರ ಪಡೆಯುತ್ತಾರೆ. ಆತನ ವಂಶದವರೇ ಇಂದು ಕರೆಸಿದ್ಧನ ಅರ್ಚಕರಾಗಿರುವರು. ಭವಿಷ್ಯ ಹೇಳುತ್ತಿದ್ದ ಕಂಟಿಕಾರಸಿದ್ಧಪ್ಪನ ವಂಶಜರು ದೇವಾಲಯದ ಉಸ್ತುವಾರಿ ವಹಿಸಿಕೊಂಡಿದ್ದಾರೆ. ಹದಿನಾರು ಹಳ್ಳಿಯ ಒಡೆಯನಾಗಿದ್ದ ಕಂಕಣವಾಡಿ ದೇಸಾಯಿ ದೇವಸ್ಥಾನಕ್ಕೆ ೮೦ ಎಕರೆ ಜಮೀನು ದತ್ತಿಯಾಗಿ ನೀಡಿದ್ದನು. ಉತ್ತೂರು ಕಟ್ಟಿಗೆ ವ್ಯಾಪಾರಿ ಹರಕೆ ಹೊತ್ತು ಗುಡಿ ಕಟ್ಟಿಸಿದುದನ್ನೂ ಊರಿನ ಹಿರಿಯರು ಕಥೆ ಕಟ್ಟಿ ಹೇಳುತ್ತಾರೆ. ಈ ಸಂಗತಿಯ ಬಗ್ಗೆ ಭಿನ್ನ ಕಥನಗಳಿವೆ. ಅವುಗಳ ಭಿನ್ನತೆಗಳು ಅನೇಕ ಕುತೂಹಲಗಳನ್ನು ಹುಟ್ಟಿಸುತ್ತವೆ. ಇವುಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಬೇಕಾದ ಅವಶ್ಯಕತೆ ಇದೆ. ಆದರೆ ಇತ್ತೀಚೆಗೆ ಹಳೆಯ ಗುಡಿಯನ್ನು ತೆಗೆದುಹಾಕಿ ಆಧುನಿಕ ಭವ್ಯದೇವಾಲಯ ನಿರ್ಮಿಸಲಾಗಿದೆ. ಇಷ್ಟಾದರೂ ಹಳೆಯ ಚಿಕ್ಕ ಗುಡಿಯನ್ನು ಹಿರಿಯರು ಇಂದಿಗೂ ನೆನಪಿಸಿಕೊಳ್ಳುತ್ತಾರೆ ಹಾಗೂ ಆ ಶೈಲಿಯನ್ನು ಬಹಳ ಜನ ಇಷ್ಟಪಡುತ್ತಾರೆ. ಇದು ಪಾರಂಪರಿಕ ದೇವಾಲಯದ ಜೊತೆಗೆ ಜನರು ಇಟ್ಟುಕೊಂಡಿದ್ದ ಭಾವನಾತ್ಮಕ ಸಂಬಂಧವನ್ನು ತಿಳಿಸುತ್ತದೆ. ಅಲ್ಲದೆ ಮೂಲ ಮಣ್ಣಿನ ಶೈಲಿಯೇ ಕಾಂಕ್ರೀಟ್‌ಗಿಂತ ಶ್ರೇಷ್ಠವೆಂಬುವುದನ್ನು ಪ್ರತಿಪಾದನೆ ಮಾಡುತ್ತದೆ.

ಅಣ್ಣಪ್ಪ ಮುತ್ತೂರ ಬರೆದಿರುವ ಶ್ರೀ ಕರಿಸಿದ್ಧೇಶ್ವರ ಪುರಾಣದಲ್ಲಿ ಬಾಗಿಯ ಬಂಕನಾಥನ ವಧೆ ಮಾಡಿ ಬೀರೇಶ್ವರನು ಹಾಲಹಳ್ಳಕ್ಕೆ ಬಂದು ಅಲ್ಲಿ ಸಿಂಗಾಡಿ ಸುಲ್ತಾನನೆಂದು ಹೆಸರಾಗಿ ಅಲಕನೂರಿರುವ ಸ್ಥಳದಲ್ಲಿ ಬೀರಪ್ಪನಾಗಿ ನೆಲೆಸಿದನೆಂದು ವಿವರಿಸಲಾಗಿದೆ.[೬]

೨. ಎಕ್ಸಂಭಾ

ಎಕ್ಸಂಭಾ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲೂಕು. ಇಲ್ಲಿ ಪಶುಪಾಲನೆಯೇ ಮುಖ್ಯ ಕಸುಬಾಗಿದೆ. ೩೦೦ ಹಾಲುಮತದ ಮನೆತಗಳಿವೆ. ಬೀರಪ್ಪನ ಮೂಲಸ್ಥಳ ಮುರಗುಂಡಿಯಲ್ಲಿ ಸ್ಥಾಪನೆಗೊಂಡ ಬಳಿಕ ಯನಾಪುರದಲ್ಲಿ ನೆಲಸಿ ತರುವಾಯ ಅಂಕಲಿಯಿಂದ ಎಕ್ಸಂಬಾದಲ್ಲಿ ೧೯೨೦ ರಲ್ಲಿ ಸ್ಥಾಪನೆಯಾಗಿದೆ. ಎಕ್ಸಂಭಾದ ಪ್ರಮುಖ ಆಕರ್ಷಣೆಯೆಂದರೆ ಬೀರಪ್ಪನ ಭವ್ಯ ದೇವಾಲಯ. ಸುಮಾರು ಎರಡು ಎಕರೆಗಳಷ್ಟು ವಿಸ್ತಾರವಾದ ಜಾಗದಲ್ಲಿ

ದೇವಾಲಯ ನಿರ್ಮಾಣಗೊಂಡಿದೆ. ಪೂರ್ವದಿಕ್ಕಿನಲ್ಲಿ ಪ್ರವೇಶದ್ವಾರವಿದೆ. ಗರ್ಭಗೃಹ, ಸುಕನಾಸಿ ಮುಖಮಂಟಪ ಗಳನ್ನು ಹೊಂದಿದೆ. ಇದರ ಸುತ್ತಲೂ ಪ್ರಾಂಗಣವಿದ್ದು, ಈ ದೇವಾಲಯ ಬೃಹದಾಕಾರದಲ್ಲಿದೆ. ಕೆಳಗಡೆ ಎಂಟು ಕಮಾನುಗಳಿಂದ ಕೂಡಿದೆ. ಮೇಲಂತಸ್ತಿನಲ್ಲಿ ೧೫ ಕಮಾನುಗಳಿವೆ. ಗೋಪುರದ ಮೇಲೆ ಸಿಂಹ ಲಾಂಛನವಿದೆ. ದೇವಾಲಯ ಸುತ್ತಲೂ ಆವರಣದಿಂದ ಕೂಡಿದೆ. ಈ ದೇವಾಲಯಕ್ಕೆ ಎರಡು ಬಾಗಿಲುಗಳು ಗರ್ಭಗುಡಿಯ ಒಳಗೆ ಬಲಗಡೆ ಮತ್ತು ಎಡಗಡೆ ಎರಡು ವಿಶಾಲವಾದ ಕೋಣೆಗಳಿವೆ. ಕುಳಿತುಕೊಳ್ಳಲು ಕಟ್ಟೆಗಳಿವೆ. ಅನೇಕ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಬಿಂಬಿಸುತ್ತದೆ.

ಡೊಳ್ಳಿನ ಮನೆ : ಈ ದೇವಾಲಯದ ಬಲಗಡೆ ಒಂದು ವಿಶಾಲವಾದ ಡೊಳ್ಳಿನ ಮನೆಯಿದೆ. ಒಳಬಾಗಿಲು ಕಂಚಿನಿಂದ ಮಾಡಲ್ಪಟ್ಟಿದೆ. ಪ್ರಸ್ತುತ ದಿನಮಾನಗಳಲ್ಲಿ ದೇವಸ್ಥಾನದ ಟ್ರಸ್ಟಿನ್ ಕಾರ್ಯಕಲಾಪಗಳು ಇದರಲ್ಲಿಯೇ ನಡೆಯುತ್ತವೆ.

ಮೂರ್ತಿಗಳು : ಬೆಳ್ಳಿಯಿಂದ ಲೇಪಿಸಲ್ಪಟ್ಟ ತ್ರಿಮೂರ್ತಿ ಆಕೃತಿಯ ಬೀರಲಿಂಗೇಶ್ವರನ ಮೂರ್ತಿ ಇಲ್ಲಿದೆ. ಎಡಕ್ಕೆ ಮಾಯವ್ವನ ಮೂರ್ತಿಯಿದೆ. ಬಲಕ್ಕೆ ಮೂರು ದೊಡ್ಡ ನಾಗಪ್ಪನ ಮೂರ್ತಿಗಳಿವೆ. ಬೀರಪ್ಪನ ಮುಂದೆ ಹನ್ನೊಂದು ಕುದುರೆಗಳಿವೆ. ಚೌರ, ದೀಪಾರತಿ, ದೀವಟಿಗಿ, ಗಂಟೆ, ಭಂಡಾರದ ತಟ್ಟೆ ಇವು ದೇವರ ಲಾಂಛನಗಳು. ಇಲ್ಲಿ ಎತ್ತರವಾದ ಕರಿಲುಡ್ಡಿ ಲಿಂಗವಿದೆ. ಎರಡು ಬೆಳ್ಳಿ ಮೂರ್ತಿಗಳು, ಒಂದು ಕಂಚಿನ ಮೂರ್ತಿಯೂ ಇದೆ. ಈ ದೇವಾಲಯದಲ್ಲಿ ವಿಶೇಷವಾದ ಮೂರ್ತಿಗಳು ಕಂಡುಬರುತ್ತವೆ. ಇದು ಬೀರದೇವರ ಪರಿವಾರ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಇವುಗಳೆಲ್ಲವೂ ಬೀರಪ್ಪನ ಅಸ್ಮಿತೆಗಳೂ ಹೌದು.

ಕಂಬ : "ಈ ಗರ್ಭಗುಡಿಯ ಒಳಗಡೆ ಇರುವ ಕಂಬಗಳಲ್ಲಿ ಒಂದು ಕಂಬದ ವಿಶೇಷತೆಯಿಂದ ಕೂಡಿದೆ. ಎರಡು ತೋಳುಗಳಿಂದ ಕೂಡಿದೆ. ಚೇಳು ಹಾವು ಕಚ್ಚಿದಾಗ ಭಕ್ತಿಯಿಂದ ಮಡಿಯಲ್ಲಿ ಸ್ನಾನ ಮಾಡಿ ಬೇಡಿಕೊಂಡರೆ ಕಡಿಮೆಯಾಗುತ್ತದೆ. ಸ್ನಾನ ಮಾಡಲಾರದೆ ಮುಟ್ಟಿದರೆ ಮತ್ತೆ ಮರಳಿ ಕಡಿದು ನಿದ್ರೆ ಹೊಂದುತ್ತಾರೆ"[೨] ಎಂದು ದಂತಕಥೆಯನ್ನು ಹೇಳುತ್ತಾರೆ ಅಲ್ಲಿಯ ಜನರು. ಈ ಬೀರಪ್ಪ ದೇವರಿಗೆ ಕರೆಲುಡ್ಡಿಲಿಂಗ ಎಂದು ಕರೆಯುತ್ತಾರೆ. ಕರಿ ಕಲ್ಲಿನಿಂದ ಕಟ್ಟಿದ ಕಾರಣ ಕರಿಲುಡ್ಡಿಲಿಂಗ ಎಂಬ ಹೆಸರು ಬಳಕೆಗೆ ಬಂದಿದೆ ಎನ್ನುವುದು ಇಲ್ಲಿನ ಜನರ ಅಭಿಪ್ರಾಯ.

ತೆಂಗಿನಕಾಯಿ ಪವಾಡ : ಈ ದೇವರ ಆಚರಣೆಗಳಲ್ಲಿ ವಿಶೇಷ ಆಚರಣೆ ಎಂದರೆ ಯುಗಾದಿ, ಮಹಾನವಮಿ ದಿನ ಒಂದು ಲಕ್ಷ ತೆಂಗಿನಕಾಯಿ ಹಾರಿಸುತ್ತಾರೆ. ಏಕಸ್ತಂಭಾದಿಂದ ವಿಜಾಪೂರ ಹತ್ತಿರದ ಕೃಷ್ಣಾನದಿಗೆ ದೇವರು ಸ್ನಾನಕ್ಕಾಗಿ ಹೋಗುತ್ತಾರೆ. ವರ್ಷಕ್ಕೆ ಎರಡು ಬಾರಿ ಪಲ್ಲಕ್ಕಿ ಉತ್ಸವ ಜರುಗತ್ತದೆ. ನಂದಿಕೋಲು, ಕೋಲಾಟ, ಡೊಳ್ಳುವಾಲಗ, ಕೈಪೆಟ್ಟು ಈ ಎಲ್ಲ ಉತ್ಸವಗಳೊಂದಿಗೆ ಜೋಡು ಪಲ್ಲಕ್ಕಿ ಹೊರಗಡೆ ಬರುತ್ತದೆ. ಮೇ ತಿಂಗಳಲ್ಲಿ ಬೀರಪ್ಪನ ಜನ್ಮೋತ್ಸವ ಆಚರಣೆ ನಡೆಯುತ್ತದೆ. ಮಹಾನವಮಿಗೆ ೯ ದಿನ ಜಾತ್ರೆ ನಡೆಯುತ್ತದೆ. ಎಳ್ಳ ಅಮವಾಸ್ಯೆ ದಿನದಿಂದ ೫ ದಿನ ಉತ್ಸವ ನಡೆಯುತ್ತದೆ. ಮೂರು ದಿನಕ್ಕೆ

ಮಹಾಪ್ರಸಾದ ಸಂಪ್ರದಾಯ ಜರುಗುತ್ತದೆ. ಈ ದೇವರಿಗೆ ಏಳು ದಿನ ಕರಿಕಟ್ಟುತ್ತಾರೆ. ನಂತರ ಎಲ್ಲಾ ಕಾರ್ಯಕ್ರಮಗಳು ಮುಕ್ತಾಯವಾಗುತ್ತವೆ.

೩. ರಾಯಬಾಗ

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕು ಆಗಿದೆ. ಈ ನಗರವು ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಈ ಊರಿನಲ್ಲಿ ಹಾಲುಮತದ ಜನಸಂಖ್ಯೆ ಹೆಚ್ಚಿದೆ. ಪಶುಪಾಲನೆ ಇಲ್ಲಿನ ಜನರ ಮುಖ್ಯ ಕಸುಬಾಗಿದೆ. ಈ ಊರಲ್ಲಿ ಬೀರಪ್ಪನ ದೇವಾಲಯಗಳಿವೆ. ಗುಡಿಯು ಊರ ಒಳಗಡೆ ಒಂದಿದ್ದು, ಊರ ಹೊರಗಡೆ ಅಂದರೆ ೨ ಕಿ.ಮೀ. ಅಂತರದಲ್ಲಿ ಒಂದು ಗುಡಿಯಿದೆ.

ಊರ ಒಳಗಿನ ದೇವಾಲಯ : ಊರ ಒಳಗಿನ ದೇವಾಲಯ ಪ್ರಾಚೀನವಾದದ್ದು. ಸ್ಥಳೀಯರು ಈ ದೇವಾಲಯವು ೧೧ನೇ ಶತಮಾನದಲ್ಲಿ ರಚನೆಯಾಗಿದೆ ಎಂದು ಹೇಳುತ್ತಾರೆ. ಇಲ್ಲಿ ಗರ್ಭಗುಡಿ ಮಹಾದ್ವಾರವು ಉತ್ತರಾಭಿಮುಖವಾಗಿರುವ ಮಹಾದ್ವಾರವೆ ಪ್ರಧಾನವಾಗಿದೆ. ಮಹಾದ್ವಾರದ ಮುಂಭಾಗದಲ್ಲಿ ಉತ್ಸವ ಬೀದಿ, ಅದರ ಎಡ ಬಲಗಳಲ್ಲಿ ಅಂಗಡಿಗಳು, ಮನೆಗಳು ಇವೆ. ಮಹಾದ್ವಾರದ ಮಂಟಪದ ಸ್ವಲ್ಪ ದೂರದಲ್ಲಿ ದೀಪಸ್ತಂಭವಿದೆ. ಒಳ ಗರ್ಭಗೃಹದಲ್ಲಿ ಒಟ್ಟು ನಾಲ್ಕು ಮೂರ್ತಿಗಳಿವೆ. ಬೀರಪ್ಪ, ಇಟ್ಟಪ್ಪ, ಮಾಳಿಂಗರಾಯ, ಮಾಯಕ್ಕ ಮುಂತಾದ ಹಾಲುಮತದ ದೈವಗಳ ಒಟ್ಟು ಹನ್ನೆರಡು ಕಂಚಿನ ಕುದುರೆಗಳಿವೆ. ಈ ದೇವಾಲಯ ಸುತ್ತಲೂ ವಿಶಾಲವಾದ ಬಯಲು ಪ್ರದೇಶವಿದೆ. ಇಲ್ಲಿ ದಿನನಿತ್ಯ ಪೂಜೆ ಮಾಡಲಾಗುತ್ತದೆ.

ಊರ ಹೊರಗಿನ ದೇವಾಲಯ : ಈ ದೇವಾಲಯವನ್ನು ಹೊಸದಾಗಿ ನಿರ್ಮಿಸಲಾಗಿದೆ. ಇದು ಸುಮಾರು ೨೦೦ ಎಕರೆ ಪ್ರದೇಶವನ್ನು ಹೊಂದಿದೆ. ಇದು ತುಂಬಾ ವಿಶಾಲವಾದ ದೇವಾಲಯವಾಗಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದೆ. ಮುಖ್ಯದ್ವಾರದ ಮೇಲೆ ಸುಂದರವಾದ ಕುಸುರಿಯ ಕೆತ್ತನೆಗಳಿವೆ. ಈ ದೇವಾಲಯವೆ ಇಲ್ಲಿನ ಪ್ರಾಚೀನ ದೇವಾಲಯ ಎನ್ನುವ ಅನುಮಾನಗಳು ಬರುತ್ತವೆ.

ಬಾವಿ : ಈ ದೇವಾಲಯದ ಆವರಣದಲ್ಲಿ ಒಂದು ಹಳೆ ಕಾಲದ ಬಾವಿ ಇದೆ. ಇಲ್ಲಿ ದೇವರ ಕಾರ್ಯಗಳಿಗೆ ನೀರು ತೆಗೆದುಕೊಂಡು ಹೋಗುತ್ತಾರೆ. ಅಲ್ಲಿ ಮಹಿಳೆಯರಿಗೆ ಪ್ರವೇಶವಿಲ್ಲ. ಮಹಿಳೆಯರು ಆ ಬಾವಿಯತ್ತ ಹೋದರೆ ದೇವರು ಕೇಡುಂಟು ಮಾಡುತ್ತಾನೆ ಎನ್ನುವ ಕಥನಗಳಿವೆ. ಪ್ರವೇಶದ್ವಾರದಿಂದ ಒಳಹೊಕ್ಕರೆ ಎರಡು ಬದಿಗೆ ಮಂಟಪದಂತಿರುವ ವಿಸ್ತಾರವಾದ ಕಟ್ಟೆಯ ಪ್ರದೇಶವಿದೆ. ಈ ಕಟ್ಟೆಯ ಎರಡು ಬದಿಯಲ್ಲಿ ದೇವಸ್ಥಾನದ ಪರಿಕರಗಳನ್ನು ಇಡಲು ಸ್ಥಾನಗಳನ್ನು ಕಲ್ಪಿಸಲಾಗಿದೆ. ಪಶ್ಚಿಮದ ಕಡೆ ಒಂದು ಕೋಣೆಯಿದೆ. ಇದು ಪ್ರಸಾದ ನೀಡುವ ಅಂಬಲಿ ಕೋಣೆ. ಇಲ್ಲಿ ಪ್ರತಿದಿನ ದಾಸೋಹ ನಡೆಯುತ್ತದೆ. ಅಲ್ಲಿಂದ ನೇರ ಎದುರಿಗೆ ಮುಖ್ಯ ದೇವರ ಗುಡಿ. ಗುಡಿಯ ಸುತ್ತ ವಿಸ್ತಾರವಾದ ಆವರಣ ಇದೆ. ಈ ದೇವಾಲಯ ೨೨ ಕಂಬಗಳಿಂದ ಕೂಡಿದ್ದು, ಗರ್ಭಗುಡಿಯ ಒಳಗಡೆ ಒಂದು ಗದ್ದುಗೆಯಿದೆ. ಆ ಗದ್ದುಗೆಯ ಮುಂದೆ ಎರಡು ನಾಗಪ್ಪನ ಮೂರ್ತಿಗಳಿವೆ. ಬೀರಪ್ಪನ ಕಂಚಿನ ಮತ್ತು ಬೆಳ್ಳಿಯ ಎರಡು ಮೂರ್ತಿಗಳಿವೆ.

ಒಂದು ಉತ್ಸವ ಮೂರ್ತಿ ಮತ್ತೊಂದು ಪೂಜಾ ಮೂರ್ತಿ ಎನ್ನುತ್ತಾರೆ. ಈ ಮೂರ್ತಿಗಳ ಎಡಗಡೆ ಮತ್ತು ಬಲಗಡೆ ಎರಡು ಟಗರುಗಳಿವೆ. ಕುರಿಗಾರರ ಅನನ್ಯತೆಯ ಸಂಕೇತಗಳಾಗಿ ಬಳಕೆಯಾಗಿದೆ.

ಅಡಕೆ ಕವಲು : ಈ ದೇವಾಲಯದಲ್ಲಿ ಒಂದು ವಿಶೇಷವಾದ ನಂಬಿಕೆಯಿದೆ. ಇಲ್ಲಿ ಅಡಕೆ ಕವಲು ಹಚ್ಚುತ್ತಾರೆ. "ಈ ದೇವರು ಬೇಡಿದ ಭಕ್ತರಿಗೆ ಬೇಡಿದ ವರವನ್ನು ಕೊಡುತ್ತಾನೆ. ಹೂವಿನ ಗಿಡಗಳನ್ನು ನೆಟ್ಟು ೭ ಸಾರಿ ಸುತ್ತು ಹಾಕಿ ಪೂಜೆ ಮಾಡಿದರೆ ಮಕ್ಕಳಾಗದವರಿಗೆ ಮಕ್ಕಳನ್ನು ಕೊಡುತ್ತಾನೆ ಎಂಬುದಾಗಿ ಇಲ್ಲಿನ ಜನರಲ್ಲಿ ನಂಬಿಕೆ ಮನೆಮಾಡಿದೆ".[೮]

೪. ಹಾರೂಗೇರಿ

ಹಾರೂಗೇರಿ ಗ್ರಾಮದಲ್ಲಿ ಬೀರಪ್ಪನ ದೇವಾಲಯವು ಊರ ಹೊರಗಿನ ಪೂರ್ವದ ದಿಕ್ಕಿನಲ್ಲಿದೆ. ಈ ದೇವಾಲಯವು ಪೂರ್ವಕ್ಕೆ ಮುಖ ಮಾಡಿಕೊಂಡಿದ್ದು ದೇವಾಲಯದ ಮುಂದೆ ಒಂದು ದೀಪದ ಸ್ತಂಭವಿದೆ. ಈ ಗುಡಿಯ ಸುತ್ತ ಪೌಳಿಯಿದೆ. ಆವರಣದ ಒಳಗಡೆ ಒಂದು ಕುರುಬ ಸಮುದಾಯದ ಕಾಲೇಜು ಸ್ಥಾಪಿಸಿದ್ದಾರೆ. ಗರ್ಭಗುಡಿಯ ಒಳಗೆ ಬೀರಪ್ಪ ಮತ್ತು ಆತನ ಪರಿವಾರ ದೈವಗಳ ಮೂರ್ತಿಗಳಿವೆ. ಎಡಕ್ಕೆ ಮಾಳಿಂಗರಾಯ, ಬಲಗಡೆ ಮಾಯಕ್ಕ ಮಧ್ಯ ಬೀರಪ್ಪ(ಕರಿಸಿದ್ದೇಶ್ವರ)ನ ಮೂರ್ತಿಗಳನ್ನು ಪ್ರತ್ಯೇಕವಾಗಿ ಪ್ರತಿಷ್ಠಾಪಿಸಿದ್ದಾರೆ.

ಈ ಊರಲ್ಲಿ ಮಡ್ಡಿ ಬೀರಪ್ಪ ಎಂದು ಇನ್ನೊಂದು ದೇವಾಲಯವಿದೆ. ಅದು ಹಾರೂಗೇರಿಯಿಂದ ೨ ಕಿ.ಮೀ. ದೂರದಲ್ಲಿದೆ. ದಕ್ಷಿಣ ಬದಿಯಲ್ಲಿ ಎತ್ತರವಾದ ಗುಡ್ಡವಿದ್ದು, ಅದರ ಮೇಲೆ ಈ ಮಡ್ಡಿ ಬೀರಪ್ಪ ದೇವಾಲಯ ನಿರ್ಮಿಸಿದ್ದಾರೆ. ದೇವಾಲಯದ ಆವರಣ ವಿಶಾಲವಾದ ಪ್ರದೇಶದಿಂದ ಕೂಡಿದೆ. ಹೊರವಲಯದಲ್ಲಿ ಒಂದು ಗದ್ದುಗೆ, ಒಂದು ದೀಪದ ಸ್ತಂಭವಿದೆ. ಗರ್ಭಗುಡಿಯ ಒಳಗಡೆ ಕಲ್ಲಿನ ಮೂರ್ತಿ ಇದೆ. ಈ ದೇವಾಯವು ೧೯೩೩ರಲ್ಲಿ ಸ್ಥಾಪನೆಯಾಗಿದೆ ಎಂದು ವಕ್ತೃರಾದ ಕರಿಯಪ್ಪ ಚೌಗ ತಿಳಿಸಿದ್ದಾರೆ".[೯]

೫. ಕಂಕಣವಾಡಿ

ಬೆಳಗಾವಿ ಜಿಲ್ಲೆ ರಾಯಬಾಗ ತಾಲೂಕಿನ ಕಂಕಣವಾಡಿಗೆ 'ಕಂಕನುಡಿ' ಎಂದು ಕರೆಯುತ್ತಾರೆ. ಈ ಊರಲ್ಲಿ ನೆಲೆಸಿರುವ ಮುಕ್ಕಾಲು ಪಾಲು ಜನ ಹಾಲುಮತದವರ ಮನೆತನಗಳಿವೆ. ಈ ಊರಲ್ಲಿ ಹಾಲಸಿದ್ಧೇಶ್ವರ ದೇವಾಲಯ ಪ್ರಸಿದ್ಧವಾಗಿದೆ. ವಿಶಾಲವಾದ ಪ್ರದೇಶದಲ್ಲಿರುವ ಈ ದೇವಾಲಯದಲ್ಲಿ ಹಾಲುಮತ ಸಂಸ್ಕೃತಿ ಚರಿತ್ರೆಗೆ ಸಂಬಂಧಿಸಿದ ಅನೇಕ ಪ್ರಾಚೀನ ಕುರುಹುಗಳು ಸಿಗುತ್ತವೆ. ಇದು ಸುಮಾರು ೨೦೦ ಎಕರೆಯಷ್ಟು ವಿಸ್ತೀರ್ಣ ಹೊಂದಿದೆ. ಪೂರ್ವಕ್ಕೆ ಪ್ರವೇಶ ದ್ವಾರವಿದೆ. ಗರ್ಭಗೃಹ ಸುಕನಾಸಿ ಮೂಲಮಂಟಪಗಳನ್ನು ಹೊಂದಿರುವ ಈ ದೇವಾಲಯ ತಗ್ಗು ಪ್ರದೇಶದಲ್ಲಿದೆ. ಇದರ ಸುತ್ತಲೂ ಆವರಣ ಇದೆ. ಈ ದೇವಾಲಯವು ೨೫ ಕಮಾನುಗಳಿಂದ ಕೂಡಿದೆ. ದೇವಾಲಯದ ಕೆಳಗಿನ ಭಾಗವು ಹಿಂದೂ ಧರ್ಮದ ಪ್ರಕಾರ ಗುಡಿಯಿರುವುದು. ಮೇಲ್ಭಾಗ ಮುಸ್ಲಿಂ ಆಕಾರದ ಎರಡು ದೊಡ್ಡ ಗುಮ್ಮಟಗಳಿವೆ. ಇಲ್ಲಿ ಹಿಂದೂ ಮತ್ತು ಮುಸ್ಲಿಂ ಪ್ರಭಾವ ಇರುವುದರಿಂದ ಈ ದೇವಾಲಯ ಮಸೀದಿ ಆಕಾರದಲ್ಲಿದೆ. ಮುಸ್ಲಿಂ ಮಸೀದಿಗಳಿಗೆ ಈ ಹಾಲುಮತದ

ದೇವಾಲಯಗಳು ಪ್ರೇರಣೆ ಆಗಿರುವುದಕ್ಕೆ ಸಾಧ್ಯವಿದೆ ಎಂದು ಸಾಂತ್ಯೆಮಸ್ ಅವರು ತಿಳಿಸುತ್ತಾರೆ. ಈ ಪರಿಕಲ್ಪನೆಯ ಬಗ್ಗೆ ಅಧ್ಯಯನ ಆಗಬೇಕಾಗಿದೆ. ಈ ದೇವರಿಗೆ ಮೂರು ಅವತಾರಗಳಿವೆ ಎಂದು ಹೇಳುತ್ತಾರೆ. ವೀರ, ಬೀರ, ಪೀರ ಎಂದು ಕರೆಯುತ್ತಾರೆ. ಇಲ್ಲಿ ಅನ್ಯ ಸಮುದಾಯಗಳ ಪ್ರಭಾವ ಕಂಡುಬರುತ್ತದೆ. ಮೇಲಂತಸ್ತಿನಲ್ಲಿ ಸುಂದರವಾದ ಭಿತ್ತಿಚಿತ್ರಗಳನ್ನು ಬಿಡಿಸಲಾಗಿದೆ. ೧೨ ಕಂಬಗಳಿಂದ ಆವೃತ್ತವಾಗಿದೆ. ಗರ್ಭಗುಡಿಯ ಆವರಣದಲ್ಲಿ ಕಲ್ಲಿನಿಂದ ಕೆತ್ತಿದ ೯ ನಾಗಪ್ಪನ ಮೂರ್ತಿಗಳಿವೆ. ಈ ಮೂರ್ತಿಯ ಬಲಗಡೆ ವೀರಗಲ್ಲುಗಳಿವೆ. ಗರ್ಭಗುಡಿ ಹಿಂದುಗಡೆ ಒಂದು ಶಿವಲಿಂಗವಿದ್ದು, ಗಣೇಶ, ಬಸವಣ್ಣನ ಮೂರ್ತಿಗಳಿವೆ. ಗರ್ಭಗುಡಿಯ ಒಳಗೆ ಒಂದು ಗದ್ದುಗೆಯಿದೆ. ಈ ಗದ್ದುಗೆಯ ವಿಶೇಷತೆ ಹಿಂದೆ ಜೀವಂತವಾಗಿ ಅಜ್ಜಿ ಐಕ್ಯವಾಗಿದ್ದಾಳೆ. ಏಕೆಂದರೆ ಈ ಗುಡಿಯು ಕಟ್ಟಿದ ನಂತರ ಪದೇ ಪದೇ ಬೀಳುತ್ತಿದ್ದು, ಇದನ್ನು ತಡೆಯಲು ಈ ಅಜ್ಜಿಯು ಐಕ್ಯವಾದುದರಿಂದ ಈ ಗುಡಿಯು ನಿಂತಿದೆ ಎಂದು ಅಲ್ಲಿನ ಹಿರಿಯರು ಹೇಳುತ್ತಾರೆ. ಈ ಗದ್ದುಗೆಯ ಮೇಲೆ ಬೀರಪ್ಪನ ಕಂಚಿನ ಮೂರ್ತಿಯಿದೆ. ಮಧ್ಯದಲ್ಲಿ ಹಾಲಸಿದ್ಧ, ಕೊನೆಯದು ವಿಠ್ಠಲನ ಒಟ್ಟು ಮೂರು ಮೂರ್ತಿಗಳು ಇವೆ. ಎರಡು ಎತ್ತರವಾದ ಬೆಳ್ಳಿ ಕುದುರೆಗಳಿವೆ. ಇದಲ್ಲದೆ ಎಡ ಬಲ ಎರಡೂ ಕಡೆ ೧೨ ಚಿಕ್ಕ ಕುದುರೆಯ ಮೂರ್ತಿಗಳಿವೆ ಹಾಗು ಪಕ್ಕದಲ್ಲಿ ಬೆತ್ತಗಳಿವೆ.

ಬೀರಪ್ಪ ದೇವರಿಗೆ ಮೂರು ಅವತಾರಗಳಿವೆಂದು ವಕ್ತೃಗಳು ಹೇಳುತ್ತಾರೆ. ಅವುಗಳನ್ನು ವೀರ, ಪೀರ, ಬೀರ ಎಂದು ಕರೆಯುತ್ತಾರೆ. ೭೦೦ ವರ್ಷಗಳ ಹಿಂದೆ ವೀರ, ಪೀರ, ಬೀರ ಎಂಬ ಮೂರು ಹೆಸರುಗಳಿಂದ ಬೀರಪ್ಪನನ್ನು ಕರೆಯುವ ಪ್ರತೀತಿ ಇದೆ. ಇಲ್ಲಿನ ಬೀರಪ್ಪನು ವಿಭೂತಿಯಲ್ಲಿ ಉತ್ಪತ್ತಿಯಾಗಿದ್ದನೆಂದು ಸ್ಥಳೀಯರು ಹೇಳುತ್ತಾರೆ. ಇದು ಹಾಲುಮತದ ಭಂಡಾರ ಆರಾಧನೆಯ ಸಂಪ್ರದಾಯಕ್ಕಿಂತ ಭಿನ್ನವಾದ ಚರಿತ್ರೆಯನ್ನು ತಿಳಿಸುತ್ತದೆ. ಆದರೂ ಇಲ್ಲಿ ವಿಭೂತಿ ಮತ್ತು ಭಂಡಾರ ಎರಡೂ ಬಳಕೆಯಲ್ಲಿವೆ. ಈ ದೇವರಿಗೆ ಮಾಂಸಾಹಾರ ಅರ್ಪಣೆಯು ನಡೆಯುವುದಿಲ್ಲ. ಹಾಲು ಬಾಳೆಹಣ್ಣುಗಳ ನೈವೇದ್ಯ ಮಾತ್ರ ನಡೆಯುತ್ತದೆ. ಇಲ್ಲಿಯವರೆಗೆ ಹಾಲಸಿದ್ಧೇಶ್ವರನ ಬಗ್ಗೆ ಸಾಕಷ್ಟು ಅಧ್ಯಯನಗಳಾಗಿಲ್ಲ. ಈತನಕ ಆಗಿರುವ ಅಧ್ಯಯನಗಳಲ್ಲಿ ಚಿಂತಾಮಣಿ ಢೇರೆ ಅವರ ಮಹಾರಾಷ್ಟ್ರ ಮತ್ತು ಮಲ್ಲಿಕಾರ್ಜುನ ಗಮನಸೆಳೆಯುತ್ತದೆ. ಆದರೆ ಡೊಳ್ಳಿನ ಹಾಡುಗಳಲ್ಲಿ ಶ್ರೀ ಹಾಲಸಿದ್ಧೇಶ್ವರನ ಚರಿತ್ರೆಯು ನಿರೂಪಿತಗೊಂಡಿದೆ.

ಐತಿಹ್ಯ

ಶ್ರೀ ಹಾಲಸಿದ್ಧೇಶ್ವರನ ಬಗ್ಗೆ ಸ್ಥಳೀಯ ಐತಿಹ್ಯ ಇಂತಿದೆ "ಒಮ್ಮೆ ತಂದೆ ತಾಯಿಯವರು ಮೂಡಣ ದಿಕ್ಕಿಗೆ ಬಂದಾಗ 'ಚಂದನ ಚೌತಿ' ಎಂಬ ಭೀಕರ ಬರ ಬೀಳುತ್ತದೆ. ಜನರಿಗೆ ಕುಡಿಯಲು ನೀರು, ತಿನ್ನಲು ಆಹಾರ ಸಿಗದಂತಾಗಿ ಬಹಳಷ್ಟು ಸಂಕಷ್ಟಕ್ಕೆ ಒಳಗಾದರು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಹಾಲು ಹಸುಳೆಯಾಗಿರತಕ್ಕಂತಹ ಆ ಪುಟ್ಟ ಕಂದನನ್ನು ಮಾರಿ ಬಿಡುತ್ತಾರೆ. ತಂದೆ, ತಾಯಿ ಅವನನ್ನು ಬಿಟ್ಟ ನಂತರ ಅವನ ಮೂಡಲನಾಡನ್ನು ಬಿಟ್ಟು ಪಡುವಣ ನಾಡಿಗೆ ಅಂದರೆ ಕೊಲ್ಲಾಪುರಕ್ಕೆ ಹೋಗುತ್ತಾರೆ. ಕೊಲ್ಲಾಪುರದ ಊರಾಗ "ರಾಕಾಳೀ ಪದ್ಮಾಳೇನ" ಅಂದರೆ ರಾಕಾಳೀ ಪದ್ಮಾಳೇನೆಂದರೆ "ಸಿದ್ಧರು ಕಟ್ಟಿದ ಕೆರೆ" ಎಂಬ ಹೆಸರು.

ಆ ಕೆರೆಯ ದಂಡೆಗೆ ಹೋಗಿ ಹಾಲಸಿದ್ಧೇಶ್ವರ ಏಕಾಂಗಿಯಾಗಿ ನಿಂತುಕೊಂಡಿದ್ದ. ಆ ಕೆರೆಗೆ ನೀರು ಕುಡಿಸಲೆಂದು ಎತ್ತು, ಎಮ್ಮೆಗಳನ್ನು ಹೊಡೆದುಕೊಂಡು ಎಲೆಗಾರ ತುಳಜಣ್ಣನು ಕೆರೆಯ ದಂಡೆಗೆ ಬರುತ್ತಾನೆ. ಅಲ್ಲಿ ನಿಂತುಕೊಂಡಿದ್ದ ಹುಡುಗನನ್ನು ನೋಡಿ ತುಳಜಣ್ಣ ಕೈ ಮಾಡಿ ಕರೆಯುತ್ತಾ ಏ! ತಮ್ಮಾ ನೀನು ಯಾರು? ಏಕಾಂಗಿಯಾಗಿ ಏಕೆ ನಿಂತುಕೊಂಡಿದ್ದೀಯಾ? ನಿನ್ನ ಊರು ಯಾವುದು? ನಿನ್ನ ತಂದೆ ತಾಯಿ ಹೆಸರೇನು? ಎಂದು ಕೇಳುತ್ತಾನೆ. ಆಗ ಆ ಹುಡುಗ ನಮ್ಮ ತಂದೆ ತಾಯಿಯವರು ಚಂದನಚೌತಿ ಬಂದಾಗ ಕಂದನ ಮಾರಕೊಂಡ ಹೋಗ್ಯಾರು ಎಂದು ಉತ್ತರಿಸುತ್ತಾನೆ. ನನ್ನ ಹೆಸರು 'ನವಲಣ್ಣ' ಎಂದು ತನ್ನ ಪರಿಚಯ ಮಾಡಿಕೊಡುತ್ತಾನೆ. ಅಂದರೆ ಈ ಕಥನದಿಂದ ಹಾಲಸಿದ್ಧನ ಬಾಲ್ಯದ ಹೆಸರು 'ನವಲಣ್ಣ' ಎಂದು ನಮಗೆ ಗೊತ್ತಾಗುತ್ತದೆ.

ಆಗ ತುಳಜಣ್ಣ "ನೀನು ನಮ್ಮ ಮನೆಗೆ ಬಾ ನವಲಣ್ಣ. ಆದರೆ ನೀನು ನಮ್ಮ ಮನೆಯಲ್ಲಿ ಜೀತಕ್ಕೆ ಇರುತ್ತಿಯೇನು?" ಎಂದಾಗ ನನಗೆ ಹೊಟ್ಟೆಗೆ ಅಂಬಲಿ, ಹೊರಲಿಕ್ಕೆ ಹೊದಿಕೆ ಕೊಟ್ಟರೆ ನಿನ್ನ ಮನೆಯಲ್ಲಿ ಜೀತಕ್ಕೆ ಇರುತ್ತೇನೆ ಎಂದು ಹೇಳಿದಾಗ ಎಲೆಗಾರ ತುಳಜಣ್ಣ ಕರೆದುಕೊಂಡು ಹೋಗಿ ಹಾಲಸಿದ್ಧನಿಗೆ ಮುಂಜಾನೆಯಿಂದ ಸಂಜೆಯವರೆಗೂ ದನಕರುಗಳನ್ನು ಮೇಯಿಸುವ ಕೆಲಸ; ಬೆಳತನಕ ಎಲೆ ಕತ್ತರಿಸುವ ಕೆಲಸ ಕೊಡುತ್ತಾನೆ.

ಎಲೆಗಾರ ತುಳಜಣ್ಣ ಮನೆಯಲ್ಲಿ ನವಲಣ್ಣ ೧೨ ವರ್ಷಗಳ ಕಾಲ ಕಷ್ಟಕರ ಚಾಕರಿ ಮಾಡುತ್ತಾ ಯಾವ ಆಹಾರವು ಸೇವಿಸದೆ ದಿನಕ್ಕೆ ಕೇವಲ ೨೫ ಎಲೆಗಳನ್ನು ತಿಂದು ಜೀವಿಸುತ್ತಿದ್ದ. ಇಷ್ಟೆಲ್ಲ ಚಾಕರಿ ಮಾಡಿದ ಮೇಲೆ ಹಾಲಸಿದ್ಧ ತುಳಜಣ್ಣನಿಗೆ "ಹೊಟ್ಟೆಗೆ ಅಂಬಲಿ ಹೊರಲಿಕೆ ಹೊದಿಕೆಯನ್ನು ಕೇಳಿದಾಗ ತುಳಜಣ್ಣ ಭಯಂಕರ ಸಿಟ್ಟಿಗೆ ಬಂದು, ಕಣ್ಣು ಕೆಂಪಾಗಿಸಿ ಕೈಮೇಲೆ ಮಾಡಿ ಹೊಡಿಯಲಿಕ್ಕೆ ಬರುತ್ತಾನೆ. ಆಗ ಮಾಯರೂಪದ ಹಾಲಣ್ಣ ನಿನ್ನ ಮನೆತನ ಮೊದಲು ಹೇಗೆ ಇತ್ತೊ ಹಾಗೆ ಆಗಲಿ ಬಂಗಾರ, ಹಣ ಇದ್ದಿಲು ಆಗಲಿ. ನಿನ್ನ ಮನ್ಯಾಗಿನ ದನಗಳೆಲ್ಲವೂ ಕುಂಟಾಗಲಿ, ಕುದುರೆಗಳು ನಾಶವಾಗಲಿ" ಎಂದು ಹಾಲಸಿದ್ಧ ಅವನಿಗೆ ಶಾಪ ಕೊಡುವಷ್ಟರಲ್ಲಿಯೇ ಹೊಲದೊಳಗಿದ್ದ ಆಳು ಮನುಷ್ಯ ಓಡೋಡಿ ಬಂದು ಮಾಲಿಕರೇ ಎತ್ತು ಕುಂಟಾಗೈತಿ, ಎಮ್ಮೆಗೆ ಏಳಾಕ ಬರುವಲ್ಲು, ನೀವು ನೋಡಾಕ ಬರಬೇಕು ಎಂದು ಹೇಳುತ್ತಾನೆ.

ತುಳಜಣ್ಣಾ ತನ್ನ ಆಳಿಗೆ ಒಳಗೆ ಹೋಗಿ ಬೇಗ ಕುದುರೆ ತೆಗೆದುಕೊಂಡು ಬಾ ಎಂದು ಹೇಳುತ್ತಾನೆ. ಆಗ ಆಳು ಕುದುರೆ ತರಲು ಒಳಗೆ ಹೋಗುತ್ತಾನೆ. ಹೋದಾಗ ಆ ಕುದುರೆಯೂ ಕುಂಟಲಿಕ್ಕೆ ಪ್ರಾರಂಭಿಸಿತು. ರೊಕ್ಕ ರೂಪಾಯಿ ನೋಡುವುದರೊಳಗಾಗಿ ಎಲ್ಲವೂ ಇದ್ದಿಲಾವಾಗಿದ್ದವು. ಇಷ್ಟಾಗುವುದರೊಳಗಾಗಿಯೇ ತುಳಜಣ್ಣನಿಗೆ ತನ್ನ ತಪ್ಪಿನ ಅರಿವು ಆಯಿತು.

ಹಾಲಸಿದ್ಧನ ಶಾಪದಿಂದ ತುಳಜಣ್ಣನಿಗೆ ಮೊದಲಿದ್ದಂತೆ ಕಡುಬಡತನ ಉಂಟಾಯಿತು. ಆಗ ತುಳಜಣ್ಣ ಹಾಲಸಿದ್ಧನಲ್ಲಿ ಕ್ಷಮೆ ಕೇಳಬೇಕೆಂದು ನಾಲ್ಕು ದಿಕ್ಕುಗಳಲ್ಲಿ ಹುಡುಕಿದರೂ ಹಾಲಸಿದ್ಧನಾಥ ಸಿಗಲಿಲ್ಲ. ಬಂದ ದಾರಿಗೆ ಸುಂಕವಿಲ್ಲವೆನ್ನುವಂತೆ ನಿರಾಶೆಯಿಂದ ತುಳಜಣ್ಣ ಮನೆಗೆ ಮರಳುದ.

ಹಾಲಸಿದ್ಧ ಸಂಚರಿಸುತ್ತಾ ಕೊಲ್ಲಾಪೂರ ಬಿಟ್ಟು ನಟ್ಟನಡುವೆ ಕಡೋಳಿ ದಾರಿಯಲ್ಲಿ ನಿಂತಿದ್ದ. ಇಟ್ಟಪ್ಪನ ಮಗಳು ಭಾಗೂಬಾಯಿ ಕೊಲ್ಲಾಪೂರ ಸಂತೆಗೆ ಹೋಗಿ ಅದೇ ದಾರಿಯಲ್ಲಿ ಮರಳಿ ಬರುತ್ತಿರುವಾಗ ನಡುದಾರಿಯಲ್ಲಿ ಹಾಲಸಿದ್ಧನು ನಿಂತಿದ್ದ. ಭಾಗೂಬಾಯಿ ಅವರ ಅಪ್ಪ ತಿನ್ನುವ ಎಲಿ ಸಂತ್ಯಾಗ ಮರೆತು ಬಂದಿದ್ದಳು. ಭಾಗೂಬಾಯಿ ಆ ಹುಡುಗನನ್ನು ನೋಡಿ ಸಂತ್ಯಾಗ ಎಲಿ ಮರೆತು ಬಂದಿನಿ, ಎಲಿ ತೆಗೆದುಕೊಂಡು ಬರುತನಕ ಸಂತಿ ಬುಟ್ಟಿ ನೋಡತೀರು ಎಂದು ಹೇಳಿ ಸಂತೆಗೆ ಹೋಗಿ ತೆಗೆದುಕೊಂಡು ಬರುವಷ್ಟರಲ್ಲಿ ಹಾಲಸಿದ್ಧನಾಥ ಅಳಲಿಕ್ಕೆ ಪ್ರಾರಂಭಿಸಿದನು. ಆಗ ಯಾಕೆ ದುಃಖಪಡತಿಯಾ? ಎಂದು ಕೇಳಿದಳು. ಹಾಲಸಿದ್ಧ ತಾಯಿ ನಾನು ೧೨ ವರ್ಷ ಕಷ್ಟಪಟ್ಟು ಜೀತಾ ಮಾಡಿನಿ. ನನಗೀಗ ಗುರುಬೇಕು ಎಂದು ಹೇಳುತ್ತಾನೆ.

ಈ ಮಾತನ್ನು ಕೇಳಿದ ಭಾಗೂಬಾಯಿ ನಾನು ನಿನಗೆ ಗುರುವನ್ನು ತೋರಸ್ತೀನಿ ಅಂತ ಹೇಳಿ ಅವನನ್ನು ಕರೆದುಕೊಂಡು ಹೋಗಿ ಅವರ ಅಪ್ಪನ ಕರೆದು, ಅಪ್ಪ ಈ ಹಾಲಸಿದ್ಧ ೧೨ ವರ್ಷ ಕಷ್ಟಪಟ್ಟು ಜೀತಾ ಮಾಡಿದ್ದಾನೆ. ಆದರೂ ಇವನಿಗೆ ಗುರು ದೊರೆತಿಲ್ಲ, ನೀನು ಇವನಿಗೆ ಗುರು ಆಗಬೇಕು ಎಂದು ಕೇಳುತ್ತಾಳೆ. ಆ ನಂತರ ಹಾಲಸಿದ್ಧನಿಗೆ ಕಡೋಳಿ ಇಟ್ಟಪ್ಪರಾಯ ಗುರುವಾಗುತ್ತಾನೆ. ಗುರುವಿನ ಕೃಪಾಶೀರ್ವಾದದಿಂದ ತನ್ನ ಜೀವನವನ್ನು ಪಾವನ ಮಾಡಿಕೊಂಡು ಅಪ್ಪನಟ್ಟಿಗೆ ಒಂದು ಸ್ಥಾನ ಮಾಡಿದ. ಹುಕ್ಕೇರಿಗೊಂದು ಸ್ಥಾನ; ಗುಡ್ಡದ ಬ್ಯಾಕೊಡಕ್ಕೆ ಒಂದು ಸ್ಥಾನ; ಕಂಕಣವಾಡಿ ಮತ್ತು ಹಿಡಕಲ್ಲಕ್ಕೆ ಒಂದು ಸ್ಥಾನ ಮಾಡಿ 'ಹಾಲಸಿದ್ಧ'ನೆಂದು ಪ್ರಖ್ಯಾತಿಯನ್ನು ಪಡೆದಿದ್ದಾನೆ ಎಂದು ಡೊಳ್ಳಿನ ಹಾಡುಗಳಲ್ಲಿ ಚಿತ್ರಣಗೊಂಡಿದೆ".[೧೦]

ದೈವ ಪುರುಷನಾಗಿ ರಾಯಬಾಗ ತಾಲೂಕಿನಲ್ಲಿ ಅಲೆಯುತ್ತಾ ಬಂದ ಶ್ರೀ ಹಾಲಸಿದ್ಧನು ಕಂಕಣವಾಡಿ ಗ್ರಾಮದಲ್ಲಿ ನೆಲೆಸಬೇಕೆಂದು ನಿರ್ಧರಿಸಿದನು. ಕಂಕಣವಾಡಿ ಗ್ರಾಮದ ಹೊರಗೆ ಪ್ರತಿದಿನ ದೇಸಾಯಿಯವರ ಆಕಳ ಹಿಂಡನ್ನು ಮೇಯಿಸುವುದಕ್ಕಾಗಿ ದನಕಾಯುವವನು ಬರುತ್ತಿದ್ದನು. ಹಾಗೆ ಒಂದು ದಿನ ಹಿಂಡಿನೊಳಗಿನ ಒಂದು ಬರಡು ಆಕಳು ಹುತ್ತದ ಮೇಲೆ ನಿಂತು ಹಾವಿಗೆ ಹಾಲು ಕುಡಿಸುವುದನ್ನು ಆಕಸ್ಮಿಕವಾಗಿ ಕಂಡು ದನ ಕಾಯುವನು ಈ ವಿಷಯವನ್ನು ಮಾಲೀಕರಾದ ದೇಸಾಯಿ ಅವರಿಗೆ ತಿಳಿಸಿದನು. ಈ ಘಟನೆಯನ್ನು ಪರೀಕ್ಷಿಸಲು ದೇಸಾಯಿಯವರು ಮರುದಿನ ಊರ ಹೊರಗಡೆ ಇದ್ದ ಹುತ್ತದ ಕಡೆಗೆ ಬಂದರು. ಬಾಲಕ ಹೇಳಿದ ಅಲ್ಲಿ ದೃಶ್ಯಕಂಡು ಬೆರಗಾಗುತ್ತಾರೆ.

ಇತ್ತ ಮತ್ತೊಂದು ಕಡೆ ಅಜ್ಜನಹಳ್ಳಿ ರಾಯಪ್ಪ ಎಂಬುವನ್ನು ಗುರುಗುದ್ದಿ ಹಳ್ಳದ ಸುತ್ತ ಆಡು ಕುರಿಗಳನ್ನು ಮೇಯಿಸುತ್ತಿದ್ದನು ಮತ್ತು ದಿನಾಲು ಮನೆಗೆ ಬರುವಾಗ ಹಾಲು ಬಿಂದಿಗೆ ಹೊತ್ತುಕೊಂಡು ಬರುತ್ತಿದ್ದನು. ಒಂದು ದಿನ ಹಾಲು ಬಿಂದಿಗೆಯಲ್ಲಿ ಹಾವು ಹಾಲು ಕುಡಿಯುವುದನ್ನು ಕಂಡು ಬೆರಗಾದನು. ಹೀಗೆ ಮೂರು ದಿನವೂ ಹಾವು ಹಾಲು ಕುಡಿಯುವುದನ್ನು ಕಂಡು ಬೆಚ್ಚಿ ಹೋದನು.

ಮೂರನೇ ದಿನ ರಾಯಪ್ಪನ ಕನಸ್ಸಿನಲ್ಲಿ ಬಂದು ಶ್ರೀ ಹಾಲಸಿದ್ಧನು "ನಾನು ಹಾಲಸಿದ್ಧನು. ನೀನು ನನ್ನ ದೇವಾಲಯದ ಅರ್ಚಕನಾಗಿ ಸೇವೆ ಮಾಡಬೇಕೆಂದು ತಿಳಿಸುತ್ತಾನೆ". ಅದೇ ದಿನ ಕಂಕಣವಾಡಿ ದೇಸಾಯಿಯವರ

ಕನಸಿನಲ್ಲಿಯೂ ಹೋಗಿ "ಹುತ್ತದಲ್ಲಿ ಹಾಲು ಕುಡಿದ ಹಾವು ನಾನೇ, ಹಾಲಸಿದ್ಧನೆಂದು ತನ್ನ ಹೆಸರು ಹೇಳಿ, ನನ್ನ ದೇವಾಲಯಕ್ಕೆ ನೀನೆ ಹಿರಿತನ ಮಾಡಬೇಕೆಂದು ತಿಳಿಸುತ್ತಾನೆ".

ಈ ರೀತಿ ಕಂಕಣವಾಡಿಯಲ್ಲಿ ಅಜ್ಜನಳ್ಳಿ ರಾಯಪ್ಪ ಅರ್ಚಕರಾಗಿ ಕಂಕಣವಾಡಿ ದೇಸಾಯಿ ಅವರ ಹಿರಿತನದಲ್ಲಿ ಶ್ರೀ ಹಾಲಸಿದ್ಧನ ದೇವಾಲಯ ನಿರ್ಮಾಣವಾಯಿತ್ತೆಂದು ಹೇಳುವ ಅನೇಕ ಕಥನಗಳು ಸಿಗುತ್ತವೆ. ಕಾಲ ಕಳೆದಂತೆ ಶ್ರೀ ಹಾಲಸಿದ್ಧನ ಮಹಿಮೆ, ಪವಾಡಗಳು ಸುತ್ತ ನಾಡಿನಲ್ಲಿ ಪಸರಿಸಿವೆ. ದಿನ ದಿನ ದೇವಾಲಯಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚುತ್ತಾ ಹೋಗುತ್ತದೆ. ಅದೇ ಸಂದರ್ಭದಲ್ಲಿ ಇತ್ತ ಹಿಡಕಲ್ ಘಂಟಿ ಮನೆತನದವರಿಗೆ ತಮ್ಮ ವಂಶದೀಪಕ್ಕೆ ಗಂಡುಮಗು ಇಲ್ಲವೆಂದು ಕೊರಗು ಇರುತ್ತದೆ. ಶ್ರೀ ಹಾಲಸಿದ್ಧೇಶ್ವರನಿಗೆ ಬೇಡಿಕೊಂಡಾಗ ಘಂಟಿ ಮನೆತನದವರಿಗೆ ಗಂಡು ಸಂತಾನ ಪ್ರಾಪ್ತಿಯಾಗುತ್ತದೆ. ಆ ಕಾರಣಕ್ಕೆ ಘಂಟಿ ಮನೆತನದವರು ಶ್ರೀ ಹಾಲಸಿದ್ಧನ ಮೂರ್ತಿಯನ್ನು ಹಿಡಕಲ್ಲ ಗ್ರಾಮಕ್ಕೆ ತಂದು ದೇವಾಲಯ ನಿರ್ಮಿಸುತ್ತಾರೆ. ಆ ನಂತರ ಕಂಕಣವಾಡಿ ಅರ್ಚಕ ಮನೆತನದವರೆ ಹಿಡಕಲ್ಲಕ್ಕೆ ಅರ್ಚಕರಾಗಿ ಇರಬೇಕೆಂದು ಕೇಳುತ್ತಾರೆ. ನಾವು ಹಿಡಕಲ್ಲಕ್ಕೆ ಬಂದರೆ ನಮ್ಮ ಜೀವನೋಪಾಯ ಹೇಗೆ ಎಂದು ಕೇಳಿದಾಗ ಶ್ರೀ ಹಾಲಸಿದ್ಧನ ಪೂಜೆ ಮಾಡುವವರಿಗಾಗಿ ಎಂಟು ಎಕರೆ ಜಮೀನು ಅದಕ್ಕೆ ಪ್ರತಿಯಾಗಿ ಬಿಟ್ಟು ಕೊಡುತ್ತಾರೆ. ಇಂದಿಗೂ ಹಿಡಕಲ್ಲದಲ್ಲಿ ಎಂಟು ಎಕರೆ ಜಮೀನು ಅರ್ಚಕರಿಗಾಗಿಯೇ ಇರುವುದನ್ನು ಕಾಣುತ್ತೇವೆ.

ಕಂಕಣವಾಡಿ ಮೂಲದೇವರಾದ ಹಾಲಸಿದ್ಧನು ಹೊಳೆ ಸ್ನಾನಕ್ಕಾಗಿ ಪ್ರತಿ ೧೨ ವರ್ಷಕ್ಕೊಮ್ಮೆ ಅಥಣಿ ತಾಲೂಕಿನ ಹುಲಗಬಾಳಕ್ಕೆ ಹಿಡಕಲ್ಲ ಮಾರ್ಗವಾಗಿ ಹೋಗುತ್ತಾನೆ. ಹಿಡಕಲ್ಲದಲ್ಲಿ ಒಂದು ರಾತ್ರಿ ಕಳೆಯುವ ಪಾರಂಪರಿಕ ಸಂಪ್ರದಾಯವಿದೆ. ಆ ಸಂದರ್ಭದಲ್ಲಿ ಅನೇಕ ಆಚರಣೆಗಳು ನಡೆಯುತ್ತವೆ. ಇಲ್ಲಿ ದೇವರ ಹೇಳಿಕೆ ಹೇಳುವುದು ಪರಂಪರೆಯಿಂದ ನಡೆದು ಬಂದ ವಾಡಿಕೆ. ಇಲ್ಲಿ ಈಗಿರುವ ಹಾಲಸಿದ್ಧನ ಗದ್ದುಗೆ ಮೂರನೆಯದೆಂದು ಇಲ್ಲಿನ ಹಿರಿಯರು ಹೇಳುತ್ತಾರೆ. ಹಾಗಾಗಿಯೇ ಎಷ್ಟು ರೂಪಾಂತರಗಳನ್ನು, ಸ್ಥಳಾಂತರಗಳನ್ನು ಕಂಡಿದೆ ಮತ್ತು ಈ ಗುಡಿಯು ಎಷ್ಟು ಪ್ರಾಚೀನ ಕಾಲದ್ದೆಂದು ನಾವು ಊಹಿಸಬಹುದಾಗಿದೆ.[೧೧]

ಪವಾಡ : ಚಿಕ್ಕ ಬಾಲಕನಾಗಿ ನಾಡು ತಿರುಗುತ್ತಲೆ ಬಂದ ಹಡಗಲಿ ಕಪ್ಪತಗಿರಿ ಸುತ್ತಮುತ್ತ ತಿರುಗಿದ. ಕಂಕಣವಾಡಿಗೆ ಬಂದ. ಆಗ ಕಂಕಣವಾಡಿಯಲ್ಲಿ ಮುಸ್ಲಿಂರ ಪ್ರಾಬಲ್ಯ ಹೆಚ್ಚಾಗಿ ಬೆಳೆದಿತ್ತು. ಇದನ್ನು ತಿಳಿದ ಹಾಲಸಿದ್ಧ ಕಳ್ಳಿಮುಳ್ಳುಗಳಲ್ಲಿ ವಸ್ತಿ ಮಾಡುವನು. ಇವನು ಆಡಿದ ಮಾತುಗಳು ಹುಸಿಹೋಗುತ್ತಿರಲಿಲ್ಲ ಕಂಕಣವಾಡಿ ಎಂಬುವುದೇ ಇವತ್ತಿನ ಕಂಕನುಡಿ. ಈ ಊರಲ್ಲಿ ಒಂದು ಇಟ್ಟಪ್ಪನ ಗುಡಿ ಇದೆ. ಹಾಲಸಿದ್ಧ ಮತ್ತು ಇಟ್ಟಪ್ಪ ಗುರುಶಿಷ್ಯರು ಆದರೂ ಕಡೋಳಿ ಗ್ರಾಮ ಬಿಟ್ಟು ಅಪ್ಪಾಜಿವಾಡಿಗೆ ಹಾಗೂ ಅಪ್ಪಾಜಿವಾಡಿಯಿಂದ ಹುಕ್ಕೇರಿ ನಾಡಿಗೆ ದನಗಳನ್ನು ಕಾಯುತ್ತಾ ಬಂದರು. ಆಗ ಹುಕ್ಕೇರಿ ನಾಡಿನಾಗ ಗಜಬೀರ ಸಾಬ ಎಂಬ ಮುಸ್ಲಿಂ ವ್ಯಕ್ತಿ ವಾಸವಾಗಿದ್ದನು ಅವನಿಗೆ ಒಬ್ಬಳು ಮಗಳು ಇದ್ದಳು. ಅವಳ ಹೆಸರೇ ಬೇಗುಬಾಯಿ. ಆಗ ಮುಸ್ಲಿಂರು ಮಾಂಸದ ಎಡೆ ಮಾಡಿ ಹಾಲಸಿದ್ಧನನ್ನು ಊಟಕ್ಕೆ ಕರೆಯುತ್ತಾರೆ".[೧೨]

"ಖಾನಾಬಾಯಿ ಏ ಮುಸ್ಲಿಂರು ಎಂದವರಾ
ಅಷ್ಟರಲ್ಲಿ ಎಡೆನೋಡಿ ತೋರಿಸಿದ ಚಮತ್ಕಾರ
ಮುಂದೆ ಇಟ್ಟಿರುವವರು ಎಡೆ ನೋಡಿ ಜೈ ಅಲಕ ನಿರಂಜನ ಅಂದರಾ ||
ಭಂಡಾರ ಹೊಡೆದು ಮಾಂಸದ ಎಡೆಯಲ್ಲಿ ಮಲ್ಲಿಗಿ ಹೂವು ಮಾಡೆಸ್ಯಾರಾ ||
ಮಲ್ಲಿಗೆ ಹೂವಿನ ಊಟ ಮಾಡಿ ಹರಕೆ ಕೊಟ್ಟ"[೧೩]

ಹಾಲಸಿದ್ಧ ಕಾಯುವ ಆಕಳುಗಳನ್ನು ಗಜಬೀರ ಸಾಬನ ಮಗಳು ನೋಡಿದಳು. ಇದನ್ನು ತಂದೆಗೆ ಹೋಗಿ ಹೇಳಿದಳು. ಗಜಬೀರ ಸಾಲು ಹಿಂಡಿನೊಳಗಿಂದ ಒಂದು ಆಕಳು ಹಿಡಿದು ಕಡಿದು ಮಾಂಸದ ಅಡುಗೆ ಮಾಡಿದನು. ಎಲ್ಲರೊಂದಿಗೆ ಹಾಲಸಿದ್ಧನನ್ನೂ ಊಟಕ್ಕೆ ಕೂಡಿಸಿದ್ದರು. ಎಲ್ಲರಿಗೂ ಮಾಂಸದ ಅಡುಗೆ ನೀಡಿದರು. ಆದರೆ ಹಾಲಸಿದ್ಧನ ತಟ್ಟೆಯಲ್ಲಿ ಮಲ್ಲಿಗೆ ಹೂ ಆಗಿತು. ಇದನ್ನು ನೋಡಿಕೊಂಡು ಗಜಬೀರ ಸಾಬ ನೀನು ಮನುಷ್ಯನೇ ಅಲ್ಲ. ನೀನು ದೇವರು ಎಂದು ಸಾಷ್ಟಾಂಗ ನಮಸ್ಕಾರ ಹಾಕಿದನು. ಆಗ ಹಾಲಸಿದ್ಧ ಗಜಬೀರ ಸಾಬನಿಗೆ ಇದು 'ಹುಕ್ಕೇರಿ' ಅಲ್ಲ 'ಹೊಲಿ ಹುಕ್ಕೇರಿ'ಯಾಗಲೆಂದು ಶಾಪಕೊಟ್ಟನು ಎಂಬ ದಂತಕಥೆ ಪ್ರಚಲಿತದಲ್ಲಿದೆ.

ಭಾಗಮ್ಮದೇವಿ ಗುಡಿ : ಈ ದೇವಸ್ಥಾನ ಹಾಲಸಿದ್ಧನ ದೇವಸ್ಥಾನದ ಎಡಕ್ಕೆ ದಕ್ಷಿಣ ಪಾರ್ಶ್ವದಲ್ಲಿದೆ. ಪೂರ್ವಭಿಮುಖವಾದ ಈ ಚಿಕ್ಕ ದೇವಾಲಯಕ್ಕೆ ಕಿರಿಯ ಪ್ರವೇಶದ್ವಾರವಿದ್ದು ಅದಕ್ಕೆ ಕಿಟಕಿ ಬಾಗಿಲುಗಳಿಲ್ಲ. ದೇವಾಲಯದ ಒಳಗಡೆ ಒಂದು ಸಲಕ್ಕೆ ಒಬ್ಬರಿಗೆ ಪ್ರವೇಶಿಸಲು ಮಾತ್ರ ಸಾಧ್ಯ. ವಿಗ್ರಹ ಬಹಳ ಸುಂದರವಾಗಿದ್ದು ಪ್ರಾಚೀನ ಕಾಲದ ರಚನೆ ಮಾಡಿರುವಂತೆ ತೋರುತ್ತದೆ.

ಇಟ್ಟಪ್ಪನ ಗುಡಿ : ಈ ದೇವಸ್ಥಾನ ಹಾಲಸಿದ್ಧನ ದೇವಾಲಯದಿಂದ ಸುಮಾರು ೧ ಕಿ.ಮೀ. ದೂರದಲ್ಲಿ ಊರ ಮಧ್ಯ ಇದೆ. ಗರ್ಭಗೃಹ, ಸುಕನಾಶಿ ಮತ್ತು ಹೊರಮಂಟಪ ಹೀಗೆ ಮೂರು ವಿಭಾಗವುಳ್ಳ ಈ ಗುಡಿಯ ಗರ್ಭಗೃಹದಲ್ಲಿ ಒಂದು ಶೀಲಾಪೀಠವಿದೆ. ಈ ದೇವಾಲಯದ ಜಾತ್ರೆ ಉತ್ಸವ ಮಹಾಲಯ, ಯುಗಾದಿ, ದೀಪಾವಳಿಗೆ ಜಾತ್ರೆ ನಡೆಯುತ್ತದೆ. ಹಾಲಸಿದ್ಧ ಮತ್ತು ಇಟ್ಟಪ್ಪ ಗುರುಶಿಷ್ಯರು ಎಂದು ಅಲ್ಲಿಯ ಹಿರಿಯರು ಹೇಳುತ್ತಾರೆ.

ಕಂಕನವಾಡಿಯಲ್ಲಿರುವ ಹಾಲಸಿದ್ಧ ದೇವಾಲಯವು ಹಾಲುಮತ ಚರಿತ್ರೆಯ ಅನೇಕ ಚಾರಿತ್ರಿಕ ಆಕರಗಳನ್ನು ಅನಾವರಣ ಮಾಡುತ್ತದೆ. ರೇವಣಸಿದ್ಧ ಮತ್ತು ಹಾಲಸಿದ್ಧನ ರೂಪಾಂತರಗಳನ್ನು ಮತ್ತು ಹಾಲಸಿದ್ಧ ಮತ್ತು ಬೀರಪ್ಪನ ನಡುವಿನ ಸಂಬಂಧಗಳನ್ನು ಇಟ್ಟಪ್ಪ ಮತ್ತು ಹಾಲಸಿದ್ಧನ ಬಗೆಗೆ ಇರುವ ಸಂಬಂಧಗಳನ್ನು ಕುರಿತು ಅಧ್ಯಯನ ಮಾಡುವುದಕ್ಕೆ ಅನೇಕ ಮಾಹಿತಿಯನ್ನು ಒದಗಿಸುತ್ತವೆ. ಮುಸ್ಲಿಂ ಸಮುದಾಯ ವಿಶೇಷವಾಗಿ 'ಪಶುಬಲಿ' ಸಂಬಂಧಿಸಿದ ಮತ್ತು ರೇವಣಸಿದ್ಧ ಅದನ್ನು ಬಹಳ ಗೌರವಪೂರ್ವಕವಾಗಿ ಪ್ರತಿರೋಧಿಸಿದ ಸಾಂಕೇತಿಕ ಕಥನಗಳು ಗಮನ ಸೆಳೆಯುತ್ತವೆ. ಇಂತಹ ಇನ್ನೂ ಅನೇಕ ಕಥನಗಳು ಮತ್ತು ಬಿನ್ನ ಪಠ್ಯಗಳು ಸಿಗುವ ಸಾಧ್ಯತೆ ಇದೆ. ಅವುಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಬೇಕಾದ ಅನಿವಾರ್ಯತೆ ಇದೆ.

೬. ಘೋಡಗೇರಿ

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕು ಘೋಡಗೇರಿ ಗ್ರಾಮದಲ್ಲಿ ಬೀರಲಿಂಗೇಶ್ವರನ ಭವ್ಯವಾದ ದೇವಾಲಯ ಇದೆ. ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪಗಳನ್ನೊಳಗೊಂಡಿದೆ. ಗರ್ಭಗುಡಿಯು ಚೌಕಕಾರವಾಗಿದ್ದು ಅದರಲ್ಲಿ ಬೀರಲಿಂಗೇಶ್ವರ ಮೂರ್ತಿ ಇದೆ. ಇದು ವಿಜಯನಗರ ಕಾಲದ ಶೈಲಿಯಲ್ಲಿದೆ. ಗರ್ಭಗೃಹದ ದ್ವಾರ ಮತ್ತು ಲಲಾಟಗಳು ಸರಳವಾಗಿವೆ. ಅದರ ಮುಂದಿರುವ ನವರಂಗದಲ್ಲಿ ನಾಗರಕಲ್ಲು, ದೀಪಸ್ತಂಭ ಇದೆ. ದೇವಾಲಯದ ಮೇಲ್ಹಾವಣಿಯನ್ನು ಹಲಗೆ ಮತ್ತು ಬಂಡೆಗಳನ್ನು ಉಪಯೋಗಿಸಿ ಕಟ್ಟಲಾಗಿದೆ. ದೇವಾಲಯದ ಅಧಿಷ್ಠಾನ ಮತ್ತು ಭಿತ್ತಿ ಸರಳವಾಗಿದೆ. ಈ ಊರಲ್ಲಿ ಬೀರಲಿಂಗೇಶ್ವರನಿಗೆ 'ನಿರವಾಣೇಶ್ವರ', 'ಗಜಲಿಂಗ'ವೆಂದು ಕರೆಯಲಾಗುತ್ತಿದೆ. ಈ ಹೆಸರುಗಳು ಬಳಕೆಗೆ ಬಂದಿರುವುದರ ಬಗ್ಗೆ ಅನೇಕ ಕಥನಗಳು ಗ್ರಾಮದಲ್ಲಿ ಪ್ರಚಲಿತದಲ್ಲಿವೆ. ಇವನು ಗುಡ್ಡದ ಮೇಲೆ ಹನ್ನೆರಡು ವರ್ಷಗಳ ಕಾಲ ತಪಸ್ಸು ಮಾಡಿದನೆಂದು ಅಲ್ಲಿನ ಜನರು ಹೇಳುತ್ತಾರೆ. ಈ ದೇವರ ಜಾತ್ರೆ ಪ್ರತಿವರ್ಷ ದೀಪಾವಳಿ, ಯುಗಾದಿ, ಮಹಾನವಮಿ ದಿನ ಬೀರಲಿಂಗೇಶ್ವರ ಜಾತ್ರೆ ನಡೆಯುತ್ತದೆ.

೭. ನಾಗಠಾಣ

ಬೀರಪ್ಪನ ಅರಮನೆ ಎಂದು ಗುರುತಿಸಲ್ಪಡುವ ನಾಗಠಾಣ ವಿಜಾಪುರದಿಂದ ಇಂಡಿ ಮಾರ್ಗವಾಗಿ ಪೂರ್ವಕ್ಕೆ ತೆರಳಿದರೆ ನಾಗಠಾಣ. ಇದು ಸಮೃದ್ಧವಾದ ನೀರಾವರಿ ಪ್ರದೇಶ. ಇಲ್ಲಿ ಕೆಲವೊಂದು ಪ್ರಾಚೀನತೆಯ ಕುರುಹುಗಳು ಸಿಗುತ್ತವೆ. ಈ ಊರಿನ ಜನಸಂಖ್ಯೆಯಲ್ಲಿ ಶೇ. ೭೫ರಷ್ಟು ಜನ ಹಾಲುಮತದವರೇ. ಇಲ್ಲಿ ಇರುವ ಮನೆಗಳಲ್ಲಿ ೪೦೦ ಮನೆಗಳು ಇವರದ್ದೇ ಆಗಿವೆ. ಗ್ರಾಮದ ಉತ್ತರ ಭಾಗದಲ್ಲಿ ಗಂಗೆ ಎಂಬ ಹಳ್ಳವಿದೆ. ನಾಗಠಾಣದ ಪ್ರಮುಖ ಆಕರ್ಷಣೆಯೆಂದರೆ ಬೀರಪ್ಪನ ಭವ್ಯದೇವಾಲ. ಇದು ಬಸ್ ನಿಲ್ದಾಣದಿಂದ ಎಡಕ್ಕೆ ೫೦ ಮೀ. ಅಂತರದಲ್ಲಿದೆ. ಈ ದೇವಾಲಯದ ಪ್ರವೇಶದ್ವಾರವೂ ಪೂರ್ವಕ್ಕೆ ಮುಖಮಾಡಿದೆ. ಈ ದೇವಾಲಯವು ಸುಮಾರು ಒಂದು ಎಕರೆಯಷ್ಟು ವಿಸ್ತೀರ್ಣಹೊಂದಿದೆ. ವಿಶಾಲವಾದ ಅಂಗಳದಿಂದ ಕೂಡಿದೆ.

ಈ ದೇವಾಲಯ ಪ್ರವೇಶದ್ವಾರದ ಮುಂದೆ ಎತ್ತರದ ದೀಪದ ಸ್ತಂಭವಿದೆ. ಪ್ರವೇಶದ್ವಾರದ ಮೇಲೆ ಶಿವ ಪಾರ್ವತಿಯ ಮೂರ್ತಿಗಳಿವೆ. ಮೇಲಂತಸ್ತಿನಲ್ಲಿ ಹಾಲುಮತ ಪುರಾಣ ಕೇಂದ್ರಿತ ಚಿತ್ರಗಳನ್ನು ಬಿಡಿಸಲಾಗಿದೆ. ಪ್ರವೇಶದ್ವಾರದ ಬಲಕ್ಕೆ ಒಂದು ಮಠವಿದೆ. ಎಡಗಡೆ ಬೀರಲಿಂಗೇಶ್ವರ ಡೊಳ್ಳಿನ ಗಾಯನ ಸಂಘವಿದೆ. ಗುಡಿಯ ಸುತ್ತಲು ಪೌಳಿಯಿದೆ. ಗುಡಿಯ ಹಿಂದೆ ಹತ್ತು ಕೋಣೆಗಳಿವೆ. ಜಾತ್ರೆಗೆ ಬಂದವರಿಗೆ ವಸತಿ ವ್ಯವಸ್ಥೆಯಿರುತ್ತದೆ. ಇಲ್ಲಿ ಅಮವಾಸ್ಯೆಗೊಮ್ಮೆ ಪ್ರಸಾದ ವಿನಿಯೋಗ ವ್ಯವಸ್ಥೆಯಿದೆ.

ಈ ದೇವಾಲಯವನ್ನು ೧೬ನೇ ಶತಮಾನದಲ್ಲಿ ಕಟ್ಟಲಾಗಿದೆ. ಅಂದರೆ ಆದಿಲ್‌ಶಾಹಿ ಕಾಲದಲ್ಲಿ ನಿರ್ಮಿಸಲಾಗಿದೆ. ಈ ದೇವಾಲಯ ಹಿಂದುಗಡೆ ಗೋಲಗುಮ್ಮಟ ಆಕಾರವನ್ನು ಹೊಂದಿದೆ. ಮೇಲೆ ಕಳಸದಿಂದ ಕೂಡಿದೆ. ಈ ದೇವಾಲಯದ ಪ್ರವೇಶದ್ವಾರದ ಮುಂದೆ ಒಂದು 'ಚೌಕಿಕಟ್ಟೆ' 'ಸದರಿನಕಟ್ಟೆ'ಯಿದೆ. ಗರ್ಭಗೃಹವು ಐದು ಕಮಾನುಗಳಿಂದ ಕೂಡಿದೆ. ಗರ್ಭಗುಡಿಯ ಬಾಗಿಲನ್ನು ಕಂಚಿನಿಂದ ತಯಾರಿಸಲಾಗಿದೆ. ಗರ್ಭಗುಡಿಯೊಳಗೆ

ಮೂರು ಆಕೃತಿಗಳ ಬೀರಲಿಂಗೇಶ್ವರ ಮೂರ್ತಿಗಳಿವೆ. ಇವುಗಳಲ್ಲಿ ಒಂದು ಬೆಳ್ಳಿ ಮೂರ್ತಿ, ಎರಡು ಕಂಚಿನ ಮೂರ್ತಿಗಳು, ಬಲಕ್ಕೆ ಮಾಯವ್ವನ ಗದ್ದುಗೆಯಿದೆ. ಇದರ ಪಕಕ್ಕೆ ರೇವಣಸಿದ್ಧೇಶ್ವರ ಹಾಗೂ ಮಾಳಿಂಗರಾಯನ ಎತ್ತರವಾದ ಕಂಚಿನ ಮೂರ್ತಿಗಳಿವೆ. ಎಡಕ್ಕೆ ಬೀರಪ್ಪನ ಮಂಚವಿದೆ. ಇಲ್ಲಿ ದೇವರು 'ಶಯನ' ಮಾಡುತ್ತಾನೆ ಎಂದು ಹೇಳುವ ಅನೇಕ ಕಥನಗಳು ಪ್ರಚಲಿತದಲ್ಲಿವೆ.

ದೇವರ ಎದುರಲ್ಲಿ ಕಂಚಿನ ಪಂಚಗಂಟಿ, ದೂಪಾರತಿ, ನಾಗಪ್ಪನ ಮೂರ್ತಿಗಳಲ್ಲದೆ ಕಲ್ಲಿನ ಬಸವ ಮೂರ್ತಿ ಇದೆ. ಒಂದು ದೊಡ್ಡ ಶಿವಲಿಂಗವಿದೆ. ಕುದುರೆ ಮೂರ್ತಿಗಳು, ಪಲ್ಲಕ್ಕಿ, ಡೊಳ್ಳುಗಳು, ಚೌಕಿ, ದೀಪದಾರತಿ, ದಿವಟಿಗೆ, ಸತಿಗೆ ಇವು ಈ ದೇವರ ಪ್ರಮುಖ ಲಾಂಛನಗಳು. ಈ ಊರಲ್ಲಿ ಕಂಡುಬರುವ ವಿಶೇಷವೆಂದರೆ ಊರ ಹೊರಗಡೆ ೩ ಕಿ.ಮೀ. ದೂರದಲ್ಲಿ ಕೆರೆಬೀರಪ್ಪ ದೇವಾಲಯವಿದೆ. ಇದಕ್ಕೆ 'ಒಡೆಯನಕೆರೆ' ದೇವಾಲಯವೆಂದೆ ಅಲ್ಲಿಯ ಜನರು ಕರೆಯುತ್ತಾರೆ. ಅಲ್ಲಿ 'ಮೂರು ಕಣ್ಣಿನ ಹುತ್ತವಿದೆ'. ಈ ಹುತ್ತದ ಬಗ್ಗೆ ಒಂದು ಕಥೆಯಿದೆ. ನಾಲ್ಕು ಜನ ಅಣ್ಣ-ತಮ್ಮಂದಿರು ಇದ್ದರಂತೆ. ಅವರು ದಿನಾಲು ಒಡೆಯನ ಕೆರೆಗೆ ಕುರಿ ಕಾಯಲು ಹೋಗುತ್ತಿದ್ದರು. ಒಂದು ಆಡು ದಿನಾಲು ಹುತ್ತಿನ ಹೆಡೆಗೆ ಹಾಲು ಉಣಿಸುತ್ತಿತ್ತು. ಆಡು ಯಾಕೆ ಅಲ್ಲಿಗೆ ಹೋಗುತ್ತದೆ. ಅಂತ ಕುಳಿತುಕೊಂಡು ನೋಡಿದಾಗ ಆವಾಗ ಆ ಹಾವು ನಾನು ಬೀರಪ್ಪ ಅಲಕಂಡಿನ ಅವರಿ ಕಟ್ಟೆಯಲ್ಲಿದವನು ಈಗ ಒಡೆಯನ ಕೇರಿಗೆ ಬಂದಿನಿ ಯಾಕೆಂದರೆ ನಾಲ್ಕು ಹಳ್ಳಿ ಮುರಿದು ನಾಗಠಾಣ ಮಾಡತಿನಿ ಎಂದು ನುಡಿದವನೆಂಬುದಾಗಿ ವಕ್ತೃಗಳು ವಿವರಿಸಿರುವರು.[೧೪]

ಈ ದೇವರಿಗೆ ಒಡೆಯನಕೆರೆ ಬೀರಪ್ಪ, ನಾಗಠಾಣಸಿದ್ಧ ಬೀರಪ್ಪ, ಅಲಕಂಡಿಯ ಬೀರಪ್ಪ, ಮಹಾರಾಷ್ಟ್ರದ ವಿಠೋಬಾ, ಖಂಡೋಬಾ ಮುಂತಾದ ದೈವಗಳು ಹಾಗೂ ಮಹಾರಾಷ್ಟ್ರ, ಕರ್ನಾಟಕದ ಭಕ್ತರ ಸಮೂಹಗಳು ಈ ಊರಿಗೆ ಬರುತ್ತಾರೆ. ಬೀರಪ್ಪ ದೇವರ ಪವಾಡ ನಾಗಠಾಣದಿಂದ ಕೊಣ್ಣೂರವರೆಗೂ ಹರಡಿದೆ. ನಾಗಠಾಣದಿಂದ ನಾಗರಹೆಡೆ ಮೂಗಿನಿಂದ ಉಸಿರು ಬಿಟ್ಟರೆ ಮೂರು ಹರಿದಾರಿ ಹೋಗುತ್ತಿತಂತೆ. ಅದಕ್ಕೆ ಕೊಣ್ಣೂರುವರೆಗೆ ಹೋದ ಕಾರಣ ಈ ದೇವರಿಗೆ ಕರಿಸಿದ್ಧೇಶ್ವರ ಎಂಬ ಹೆಸರಿನಿಂದ ಕರೆಯುತ್ತಾರೆ.[೧೫]

ಈ ಊರಲ್ಲಿ ಇನ್ನೊಂದು ವಿಶೇಷವಾದ ದೇವಾಲಯವಿದೆ. ಬೀರಪ್ಪನ ಗುಡಿಗೂ ಈ ದೇವಾಲಯಕ್ಕೂ ನಿಕಟವಾದ ಸಂಬಂಧವಿದೆ. ಗುಳಪ್ಪನ ಗುಡಿ ಬಲಕ್ಕೆ ತುಳಜಪ್ಪನ ದೇವಾಲಯವಿದೆ. ಈ ಗುಡಿಯ ಹಿಂದುಗಡೆ ಐದು ಗದ್ದುಗೆಗಳಿವೆ. ಈ ದೇವಾಲಯ ಸೃಷ್ಟಿಯ ಬಗ್ಗೆ ಒಂದು ಕಥೆಯಿದೆ. ಇಲ್ಲಿ ಚೌಕಿ ಹೊರುವ ಪದ್ಧತಿಯಿದೆ.

ಚೌಕಿ ಹೊತ್ತ ಪೂಜಾರಿ ವಂಶಸ್ಥರು

↓

ಬೀರಪ್ಪ ಅರ್ಚಕರು (೭ ವರ್ಷ ಚೌಕಿ ಹೊತ್ತಿದ್ದಾರೆ)

↓

ಗುಳಪ್ಪ (೧೨ ವರ್ಷ ಚೌಕಿ ಹೊತ್ತಿದ್ದಾರೆ)

↓

ಗುಳಪ್ಪನ ಮಗ ತುಳಜಪ್ಪ (೨೮ ವರ್ಷ ಚೌಕಿ ಹೊತ್ತಿದ್ದಾರೆ)

↓

ಗುಳಪ್ಪನ ಅಣ್ಣ ಮಲ್ಲಪ್ಪ (೪೫ ವರ್ಷ ಚೌಕಿ ಹೊತ್ತಿದ್ದಾರೆ)

↓

ಇವಾಗ ಜೋತ್ಯೆಪ್ಪ, ಗುಳಪ್ಪ ಅರ್ಚಕರು ಮುಂದುವರಿಸಿದ್ದಾರೆ.

ಇಲ್ಲಿ ಜನರು ಬೀರಪ್ಪನನ್ನೇ ಕಾಲಿಲ್ಲದ ಗುಳಪ್ಪ ಎಂದು ಕರೆಯುತ್ತಾರೆ. ಈ ರೀತಿ ಕರೆಯಲಿಕ್ಕೆ ಕಾರಣವಿದೆ. ಇವನಿಗೆ ೧೨ ವರ್ಷ ಆದ ಮೇಲೆ ಕಾಲು ಬರುತ್ತಿತಂತೆ. ಅದಕ್ಕೆ ಈ ಹೆಸರು ಬಳಕೆಗೆ ಬಂತು. ಈ ಪರಿಕಲ್ಪನೆ ಡಾ. ಎಂ. ಚಿದಾನಂದಮೂರ್ತಿ ಅವರು ಬರೆದಿರುವ ಕಾಲಿಲ್ಲದ ಐಯನಾರ್ ಅಥವಾ ಕಾಲಿಲ್ಲದ ಐಯನವರ ಸಂಸ್ಕೃತಿಗೆ ಹತ್ತಿರ ಇರುವ ಸಾಧ್ಯತೆ ಇದೆ. ಇವರೆಡು ಕಥನಗಳ ತೌಲನಿಕ ಅಧ್ಯಯನ ಆಗಬೇಕು. ದೀಪಾವಳಿ ಯುಗಾದಿಗೊಮ್ಮೆ ಜಾತ್ರೆಯಾಗುತ್ತದೆ. ಜಾತ್ರೆಯ ಸಂದರ್ಭದಲ್ಲಿ ಮಾತ್ರ ಚೌಕಿ ಹೊರುತ್ತಾರೆ. ಚೌಕಿ ಹೊತ್ತಾಗ ಕಾಲು ಬಂದು ಮತ್ತೆ ನೆಲಕ್ಕೆ ಕೂಡುತ್ತಿದನಂತೆ.[೧೬]

ಬೀರಪ್ಪನ ಜಾತ್ರೆ, ಯುಗಾದಿ, ದೀಪಾವಳಿ, ಗಣಾಚೌತಿಗೊಮ್ಮೆ ನಡೆಯುತ್ತದೆ. ನಾಗರ ಅಮವಾಸ್ಯೆದಿನ ಇಲ್ಲಿ ಮೂಕ ಹೇಳಿಕೆ ನಡೆಯುತ್ತದೆ. ಮಳೆ, ಬೆಳೆಗಳ ಬಗ್ಗೆ ಮುಂಗಾರು ಮಳೆಗಳ ಬಗ್ಗೆ ಹೇಳಿಕೆ ನಡೆಯುತ್ತವೆ. ಜಾತ್ರೆಯ ದಿವಸ ಪಲ್ಲಕ್ಕಿ ಉತ್ಸವ, ಚೌಕಿ ಹೊರುವುದು, ರಾತ್ರಿಯಲ್ಲ ಡೊಳ್ಳು ಹಾಡುಗಳು ನಡೆಯುತ್ತವೆ. ಈ ದೇವರು ಗಣಾಚೌತಿ ದಿನ ವಿಜಾಪುರದ ತಾಜಬೊಡಿಗೆ ಸ್ನಾನಕ್ಕೆ ಹೋಗುತ್ತಾನೆ. ಈ ದೇವರಿಗೆ ಮಾಂಸದ ಎಡೆ ನಡೆಯಲ್ಲ, ಹೋಳಿಗೆ, ಕರಿಗಡಬು ಮಾತ್ರ. ಈ ಜಾತ್ರೆಗೆ ಮಹಾರಾಷ್ಟ್ರ, ಕರ್ನಾಟಕದ ಜನರು ಸಾಗರವಾಗಿ ಹರಿದು ಬರುತ್ತಾರೆ.

೮. ಮಲಘಾಣ

ಮಲಘಾಣ ಬೀರಲಿಂಗೇಶ್ವರ ದೇವಾಲಯವು ಈ ದೇವಾಲಯವು ಮಲಘಾಣ ಗ್ರಾಮದ ಊರ ಹೊರಗೆ ಅಂದರೆ ಪಶ್ಚಿಮಕ್ಕೆ ಇದೆ. ದೇವಾಲಯದ ಮುಖ್ಯದ್ವಾರದ ಮೇಲೆ ಶಿವಪಾರ್ವತಿಯ ಮೂರ್ತಿಗಳಿವೆ. ಈ ಊರಲ್ಲಿ ೪೫೦ ಹಾಲುಮತಸ್ಥರ ಮನೆತನಗಳಿವೆ. ಸುಮಾರು ಒಂದೂವರೆ ಎಕರೆಗಳಷ್ಟು ವಿಸ್ತೀರ್ಣದ ದೇವಾಲಯವು ಈ ೧೯೭೬ರಲ್ಲಿ ಸ್ಥಾಪನೆಯಾಗಿದೆ. ಪೂರ್ವದಿಕ್ಕಿನಲ್ಲಿ ಪ್ರವೇಶದ್ವಾರವಿದೆ. ಗರ್ಭಗೃಹ, ಸುಕನಾಸಿ ಮುಖಮಂಟಪಗಳನ್ನು ಹೊಂದಿರುವ ಈ ದೇವಾಲಯ ತಗ್ಗು ಪ್ರದೇಶದಲ್ಲಿದೆ. ಸುತ್ತಲೂ ಪ್ರಾಂಗಣವಿದ್ದು ಪಶ್ಚಿಮಕ್ಕೆ ಬಾವಿಯಿದೆ. ದಕ್ಷಿಣಕ್ಕೆ ಅಡುಗೆಯ ಮಾಡುವ ಕೋಣೆ ಇದೆ. ಗರ್ಭಗುಡಿಯ ಹಿಂದೆ ನಾಕಪ್ಪನ ದೇವಾಲಯವಿದೆ. ಗರ್ಭಗುಡಿಯಲ್ಲಿ ಬೀರಲಿಂಗೇಶ್ವರ ಕಲ್ಲಿನ ಲಿಂಗಸ್ವರೂಪಿ ಮೂರ್ತಿಯಿದೆ. ಇದು ನಿಂತಿರುವ ಮೂರ್ತಿಯಾಗಿದೆ. ದೇವರ ಬಲಬದಿಯಲ್ಲಿ ತೂಗುಮಂಚ(ಪಲ್ಲಕ್ಕಿ)ಯಿದೆ. ದೂಪಾರತಿ,

ಗಂಟೆ, ನಾಗಪ್ಪ ಇಷ್ಟು ಗರ್ಭಗುಡಿಯ ಒಳಗಡೆ ಇವೆ. ಇವುಗಳನ್ನು ಬೀರಪ್ಪನ ಲಾಂಛನಗಳೆಂದು ಹೇಳಲಾಗುತ್ತದೆ. ದಿನಕ್ಕೆ ಎರಡು ಬಾರಿ ಪೂಜೆ ನಡೆಯುತ್ತದೆ.

ಜಾತ್ರೆ ಉತ್ಸವಗಳು ನಡೆಯುತ್ತವೆ. ಅಂಥವುಗಳಲ್ಲಿ ಪ್ರಮುಖವಾದವುಗಳ ವಿವರ ಇಂತಿದೆ. ಯುಗಾದಿ ಶ್ರಾವಣ ತಿಂಗಳಲ್ಲಿ ವಿಶೇಷ ಉತ್ಸವ ಜರುಗುತ್ತದೆ. ಕಡೆಯ ಸೋಮವಾರ ಜಾತ್ರೆಗೆ ಸುತ್ತಮುತ್ತಲಿನ ಗ್ರಾಮಗಳಿಂದ ಅಪಾರ ಜನ ಸೇರುತ್ತಾರೆ. ಆ ಸಂದರ್ಭದಲ್ಲಿ ಇಲ್ಲಿ ಮೂರು ದೇವರು ಕೂಡುತ್ತಲೆ ಕೋಣೂರು ಕರಿಸಿದ್ಧ, ನಾಗಠಾಣ ಬೀರಲಿಂಗೇಶ್ವರ, ಮಲಘಾಣ ಬೀರಲಿಂಗೇಶ್ವರ. ಈ ಮೂರು ದೇವರು ಕೂಡಿ ಕೊಲ್ಹಾರ ಕೃಷ್ಣಾನದಿಯ ಸ್ನಾನಕ್ಕೆ ಹೋಗುತ್ತವೆ. ಕೊಲ್ಹಾರವು ಇಲ್ಲಿಂದ ೯ ಕಿ.ಮೀ. ದೂರದಲ್ಲಿದೆ. ಆರು ದಿನಗಳು ಇಲ್ಲಿ ಅನ್ನ ಪ್ರಸಾದ ನಡೆಯುತ್ತದೆ. ಇಲ್ಲಿಯ "ಬೀರಲಿಂಗೇಶ್ವರ ನಾಗಠಾಣದಿಂದ ಗುಂಗಿ ಹುಳವಾಗಿ ಮೊದಲು ತಳೆವಾಡ ಕೋಣ್ಣೂರು ನಂತರ ಮಲಘಾಣಕ್ಕೆ ಬಂದು ನೆಲೆಸಿದ್ದಾನೆ ಎಂದು ಇಲ್ಲಿಯ ಜನ ಹೇಳುತ್ತಾರೆ".[೧೨] ಈ ಊರಲ್ಲಿ ಇನ್ನೊಂದು ವಿಶೇಷತೆಯೆಂದರೆ ಮುಖ್ಯ ದೇವಾಲಯದ ಉತ್ತರಕ್ಕೆ ಪೌಳಿಯ ಗೋಡೆಗೆ ಹೊಂದಿರುವಂತೆ ಪೂರ್ವಭಿಮುಖವಾಗಿ ಒಂದು ಚಿಕ್ಕದೇವಾಲಯವಿದೆ. ಅದರಲ್ಲಿರುವ ಒಂದು ಪೀಠದಲ್ಲಿ ಕೂಡಿಸಲಾಗಿರುವ ಏಳುಹೆಡೆ ಸರ್ಪದ ಮೂರ್ತಿ ಇದೆ. ಅಲ್ಲದೇ ಪೀಠದ ಮೇಲೆ ಗರುಡನ ಚಿತ್ರ ಬಿಡಿಸಲಾಗಿದೆ. ಶಿವನ ಪ್ರತಿಪಾಲಕ ಎಂಬುದು ಗಮನಿಸಬಹುದು. ದಕ್ಷಿಣ ಪೌಳಿಗೆ ಹೊಂದಿದಂತೆ ಎರಡು ಗದ್ದುಗೆಗಳು ಇವೆ. ಈ ದೇವರ ಗದ್ದುಗೆಗಳನ್ನು ಪೂಜಿಸುವ ಅರ್ಚಕರು ಕಾರ್ತಿಕೋತ್ಸವದಲ್ಲಿ, ಜಾತ್ರೆಗಳನ್ನು ನಡೆಸಿಕೊಂಡು ಬರುತ್ತಾರೆ. ಇಂತಹ ವೈಶಿಷ್ಟ್ಯತೆಗಳಲ್ಲಿ ಗಮನ ಸೆಳೆಯುವ ಅಂಶವೆಂದರೆ ಮೂರು ಬೀರದೇವರು ಗಳು ಒಂದು ಕಡೆ ಸೇರುವುದು ಮತ್ತು ಮೂರು ಗ್ರಾಮಗಳು ಸೌಹರ್ದಯುತವಾಗಿ ಬಾಳುವುದು ಅಥವಾ ಸಾಂಸ್ಕೃತಿಕವಾಗಿ ಸಂಯುಕ್ತಗೊಳ್ಳುವುದು ವಿಶೇಷ.

೯. ಬಳ್ಳೊಳ್ಳಿ

ವಿಜಾಪುರ ಜಿಲ್ಲೆ ಇಂಡಿ ತಾಲೂಕಿನ ಭೀಮಾನದಿ ಸಮೀಪದಲ್ಲಿ ಇರುವಂತಹ ಬೆಳ್ಳೊಳ್ಳಿ ಗ್ರಾಮವೂ ಸುಮಾರು ೩೫೦೦ ಜನಸಂಖ್ಯೆಯನ್ನು ಹೊಂದಿದೆ. ಗ್ರಾಮದ ಪ್ರಮುಖ ರಸ್ತೆಯ ಬಲಭಾಗದಲ್ಲಿ ಪೂರ್ವದಿಕ್ಕಿಗೆ ಅಭಿಮುಖವಾಗಿರುವ ಬೀರದೇವರ ಗುಡಿಯನ್ನು ಕಾಣಬಹುದು. ಈ ದೇವಾಲಯವು ೩೦-೪೦ ವರ್ಷಗಳ ಇತ್ತೀಚಿನದಾಗಿದೆ. ಇದಕ್ಕೂ ಮೊದಲು ಈ ದೇವಾಲಯವು ಈಗಿರುವ ದೇವಾಲಯದ ಸ್ಥಳದಲ್ಲಿಯೇ ಕಟ್ಟೆಯಾಕಾರದಲ್ಲಿ ಬೇವಿನ ಮರದ ಕೆಳಗೆ ಇತ್ತೆಂದು ಇಲ್ಲಿಯ ಸ್ಥಳೀಯ ಹಾಗೂ ಶ್ರೀ ಭಗವಂತರಾಯ ಅರ್ಚಕ ಅವರು ಹೇಳುತ್ತಾರೆ. ಈ ದೇವಾಲಯದಲ್ಲಿ ಕಾಡುಗಲ್ಲಿನ ರೂಪದ ಮೂರ್ತಿಗಳನ್ನು ಪೂಜಿಸುತ್ತಿರುವುದು ಇಲ್ಲಿನ ರೂಢಿಗತವಾಗಿ ಕಂಡುಬರುತ್ತದೆ.

ಪ್ರತಿವರ್ಷ ದೀಪಾವಳಿ ಅಮವಾಸ್ಯೆಗೆ ಹಾಲುಮತ ಸಮಾಜ ಬಾಂಧವರೆಲ್ಲಾ ಒಂದುಗೂಡಿ ಒಂದು ದಿನದ ಜಾತ್ರೆಯನ್ನು ಮಾಡಿ, ಡೊಳ್ಳಿನ ಹಾಡಿಕೆ ಮೂಲಕ ದೇವರ ಜಾಗರಣೆ ಮಾಡುವ ಸಂಪ್ರದಾಯವಿದೆ.

ಸಜ್ಜಕ, ಹುಗ್ಗಿಯನ್ನು ಮಾಡಿ ದೇವರಿಗೆ ನೈವೇದ್ಯ ಹಿಡಿದು ಬಂದ ಭಕ್ತರಿಗೆಲ್ಲಾ ಪ್ರಸಾದವನ್ನು ನೀಡುತ್ತಾರೆ. ಬೀರಪ್ಪನ ಮೂರ್ತಿ ಮತ್ತು ಕುದುರೆ ಮೂರ್ತಿಗಳನ್ನು ಪ್ರತಿದಿನವು ಪೂಜಿಸುತ್ತಿರುವ ಸಂಗತಿ ತಿಳಿದುಬಂದಿದೆ.

೧೦. ಝಳಕಿ

ವಿಜಾಪುರ ಜಿಲ್ಲೆ ಇಂಡಿ ತಾಲೂಕಿನ ಝಳಕಿ ಗ್ರಾಮದ ಎಡಬದಿಗೆ ಪೂರ್ವದಿಕ್ಕಿಗೆ ಅಭಿಮುಖವಾಗಿ ಕಟ್ಟಿರುವ ಬೀರದೇವರ ದೇವಾಲಯವನ್ನು ಕಾಣಬಹುದು. ೨೦ ವರ್ಷಗಳ ಹಿಂದೆ ಗ್ರಾಮದಲ್ಲಿರುವಂತಹ ಜಾಗದಲ್ಲಿ ಕಲ್ಲುಮಣ್ಣಿನಿಂದ ನಿರ್ಮಿಸಿದ ಕಟ್ಟಡದ ಮೇಲ್ಛಾವಣಿಯ ಜಂತಿಗಳಿಂದ ಕೂಡಿತ್ತು. ಸುಮಾರು ೨೦ ವರ್ಷಗಳ ಈಚೆಗೆ ನಿರ್ಮಾಣಗೊಂಡ ದೇವಾಲಯದಲ್ಲಿ ಬೀರದೇವರ ಕಂಚಿನ ಮೂರ್ತಿಯನ್ನು ನಿರ್ಮಿಸಲಾಗಿದೆ. ಇಲ್ಲಿ ನಿತ್ಯ ಎರಡು ಬಾರಿ ಪೂಜೆಯಾಗುತ್ತದೆ. ಈ ದೇವರ ಪೂಜೆಗಾಗಿ ಕಂಬಳಿ, ಕಂಚಿನ ಕುದುರೆ, ಭಂಡಾರ, ಗಂಟೆಯ ಸಪ್ಪಳ, ನಗಾರಿ, ಡೊಳ್ಳನ್ನು ಬಡಿದು ಪೂಜೆ ಮಾಡಬೇಕು ಅಥವಾ ಪೂಜೆ ಮಾಡುತ್ತಿರುವಾಗ ಅವುಗಳನ್ನು ಬಡಿಯುತ್ತಿರಬೇಕು ಎನ್ನುವ ಪಾರಂಪರಿಕ ಸಂಪ್ರದಾಯವನ್ನು ಕಾಣಬಹುದು. ಗ್ರಾಮದ ಜನರೆಲ್ಲಾ ದೇವರ ಆಚರಣೆಗಳಿಗಾಗಿ ಚಂದಾ ಎತ್ತಿ ಹಣವನ್ನು ಸಂಗ್ರಹಿಸುವರು. ನಂತರ ಪ್ರಸಾದ ವಿನಿಯೋಗ ಕಾರ್ಯಕ್ರಮ ಜರಗುತ್ತದೆ. ಈ ಜಾತ್ರೆಯ ದಿನದಂದು ಮಾಳಿಂಗರಾಯನ ನಾಟಕ, ಡೊಳ್ಳಿನ ಹಾಡಿಕೆ ಮುಖಾಂತರ ಬೀರದೇವರ ಆರಾಧನೆ ಮಾಡುವ ಪದ್ಧತಿಯನ್ನು ಬೆಳೆಸಿಕೊಂಡು ಬಂದಿರುವರು".[೧೮]

ವಿಜಯದಶಮಿ ದಸರೆಯೆಂದು ಮಧ್ಯಾಹ್ನ ಮೂರರಿಂದ ಮೂರುವರೆ ಗಂಟೆಗೆ ಪವಾಡಗಳ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಪವಾಡ ಮಾಡುವ ವೀರರು ಡೊಳ್ಳು ಕುಣಿತದವರು, ಇತರ ಭಕ್ತಾದಿಗಳೆಲ್ಲರೂ ಅಂದು ವೇಳೆಗೆ ಸರಿಯಾಗಿ ದೇವಾಲಯದ ಆವರಣದಲ್ಲಿ ಸೇರಿ ವಿವಿಧ ಆಚರಣೆಗಳನ್ನು ಮಾಡಿ ಮುಗಿಸುತ್ತಾರೆ.

೧೧. ಹಿರೇರೂಗಿ

ಬಿಜಾಪುರ ಜಿಲ್ಲೆ ಇಂಡಿ ತಾಲೂಕಿನ ಹಿರೇರೂಗಿ ಸರ್ವಧರ್ಮೀಯರನ್ನು ಹೊಂದಿರುವ ಕರಿಯ ಕಲ್ಲಿನ ಕಟ್ಟಡಗಳ ಊರೇ ಎಂದು ಪ್ರಸಿದ್ಧಿ ಹೊಂದಿದೆ. ಸುಮಾರು ೧೫೦೦೦ ಜನಸಂಖ್ಯೆ ಇದೆ. ಊರಿನ ಸುತ್ತಲೂ ತೋಟಗಳನ್ನು ಹೊಂದಿದ ಸಿರಿವಂತ ಗ್ರಾಮ. ಈ ಊರಿನ ಹಲವು ಪ್ರಮುಖ ದೇವರುಗಳಲ್ಲಿ ಬೀರದೇವನೂ ಒಬ್ಬ. ಗ್ರಾಮ ಪ್ರವೇಶಿಸುತ್ತಿದ್ದಂತೆಯೇ ಹನುಮಾನ ಮಂದಿರದ ಬದಿಯಲ್ಲಿ ಹಾಯ್ದು ಊರ ಒಳ ಹೋದರೆ ಸಾಕು. ಅಲ್ಲಿ ಬೇವಿನ ಗಿಡದ ಕಟ್ಟೆಯ ನೆರಳಿನಲ್ಲಿ ಕಾಣಸಿಗುವ ದೇವಸ್ಥಾನವೇ ಬೀರದೇವರದು. ಈ ದೇವರನ್ನು ಇಲ್ಲಿ ಆರಾಧನೆ ಮಾಡುವುದಕ್ಕೆ ಅನೇಕ ಕಥನಗಳು ಕೇಳಿಬರುತ್ತಿವೆ. ಸುಮಾರು ಮೂರು ತಲೆಮಾರುಗಳ ಹಿಂದೆ ಬೀರಪ್ಪ ಕಲ್ಲಿನ ಗುಂಡೆಯಲ್ಲಿ ಹೂತೂ ಹೋಗಿದ್ದನಂತೆ. ಆತ ಆಗಾಗ ಊರ ಜನರ ಕನಸಿನಲ್ಲಿ ಬರುತ್ತಿದ್ದನಂತೆ. ಆಗ ಊರವರೆಲ್ಲಾ ಸೇರಿ ಕಲ್ಲಿನ ಹೊದಿಕೆಯನ್ನು ತೆಗೆದು ನೋಡಿದರು. ಎಲ್ಲರಿಗೂ ವಿಸ್ಮಯ, ಆ ಕಲ್ಲಿನ ಹೊದಿಕೆಯ ಮಧ್ಯದ ಕಲ್ಲೊಂದರಲ್ಲಿ ಒಡಮೂಡಿದ ಬೀರಪ್ಪನ ಮೂರ್ತಿ ಕಾಣಿಸಿತು. ಕ್ರಮೇಣ ಇವನ ಮಹಿಮೆಗೆ ಭಕ್ತಾದಿಗಳೆಲ್ಲ ಒಂದು ಕಲ್ಲಿನ ಸುಂದರ ಮೂರ್ತಿಯನ್ನು ಕಡಿದು ಇಟ್ಟಿದ್ದರೂ ಕೂಡ ಪುನಃ ಭಿನ್ನ ಆಗಿದ್ದರಿಂದ ೧೯೯೧ರಲ್ಲಿ ಕರಿಯಕಲ್ಲಿನಲ್ಲಿ ಕೆತ್ತಿದ ಸುಂದರ ಮೂರ್ತಿಯನ್ನೇ

ಪ್ರತಿಷ್ಠಾಪಿಸಲಾಯಿತೆಂದು ರಾಚಪ್ಪ ಪೂಜಾರಿ ಹೇಳುತ್ತಾರೆ".[೧೯] ಈ ಮೂರ್ತಿಯು ೩ ಅಡಿ ಎತ್ತರ ೩ ಅಡಿ ಅಗಲ ಇದೆ. ಕಲ್ಲುಮಣ್ಣಿನಿಂದ ಕಟ್ಟಿದ ಹಾಗೂ ಮೇಲ್ಛಾವಣಿ ಹೊಂದಿದ ಗರ್ಭಗುಡಿ ತೀರಾ ಇತ್ತೀಚಿನದು. ಈಗ ನಿತ್ಯ ತಪ್ಪದೆ ಎರಡೂ ಹೊತ್ತು ಪೂಜೆ ಮಾಡಬೇಕು ಎನ್ನುವ ಸಂಪ್ರದಾಯ ಚಾಲ್ತಿಯಲ್ಲಿದೆ.

ಈ ಊರಲ್ಲಿ ೩೦೦ರಿಂದ ೪೦೦ ಹಾಲುಮತಸ್ಥರ ಮನೆಗಳಿವೆ. ಶ್ರಾವಣಮಾಸದಲ್ಲಿ ಜಾತ್ರೆ ನಡೆಯುತ್ತದೆ. ಇಲ್ಲಿ ಮಳೆ-ಬೆಳೆ ಹೇಳಿಕೆಯನ್ನು ಕೇಳುತ್ತಾರೆ. ಆ ಸಂದರ್ಭದಲ್ಲಿ ಡೊಳ್ಳಿನ ಹಾಡುಗಾರಿಕೆ ರಾತ್ರಿಯಿಡೀ ನಡೆಯುತ್ತದೆ. ಈ ಊರಿನವರು ಅಷ್ಟೇ ಅಲ್ಲ ಸುತ್ತಮುತ್ತ ಹತ್ತಾರು ಹಳ್ಳಿಯವರು ಪಾಲ್ಗೊಳ್ಳುತ್ತಾರೆ.

ಭಂಡಾರ ಬಕ್ಸ : ಭಂಡಾರಬಕ್ಸ ಅಥವಾ ಭಂಡಾರ ಚೀಲ ಮೊದಲಲ್ಲಿ ಹುಲಿ ಚರ್ಮದ್ದಾಗಿರುಬೇಕಾದುದು ಅನಿವಾರ್ಯವಾಗಿತ್ತು. ಹುಲಿಯ ಚರ್ಮ ಈಗ ದುರ್ಲಭವಾಗಿರುವುದರಿಂದ ಜಿಂಕೆಯ ಚರ್ಮದಿಂದ ಮಾಡುತ್ತಿರುವುದು ಕಂಡುಬರುತ್ತದೆ. ಅದರಲ್ಲಿರುವ ಭಂಡಾರ ಎಂದರೆ ಅರಿಶಿಣಪುಡಿ, ಛಟ್ಟಿ ಹಬ್ಬದಂದು ತಯಾರಾದುದು. ಇದರ ಮಹತ್ವ ತುಂಬಾ ದೊಡ್ಡದಿದೆ. ಶಿವರಾತ್ರಿಯ ದಿನ ಅಭಿಷೇಕ, ಬಿಲ್ವಾರ್ಚನೆ ಪೂಜೆಗಳು ನಡೆಯುತ್ತವೆ. ಇದರ ಮುಂದೆ ಮಾಳಿಂಗರಾಯನ ದೇವಾಲಯವಿದೆ. ಬೆಳಕು ಹರಿಯುವ ತನಕ ದೇವಾಲಯದಲ್ಲಿ ಡೊಳ್ಳಿನ ಹಾಡುಗಳೊಂದಿಗೆ ಜಾಗರಣೆ ಮಾಡುವುದು ಇಲ್ಲಿನ ಆಚರಣೆಯ ವೈಶಿಷ್ಟ್ಯತೆ.

೧೨. ಶಿರಡೋಣ

ಬಿಜಾಪುರ ಜಿಲ್ಲೆ ಇಂಡಿ ತಾಲೂಕಿಗೆ ಸೇರಿದ ಶಿರಾಡೋಣ ಇದಕ್ಕೆ ಡೋಣಿಹೆಗ್ಗೆರಿ ಎಂದೂ ಕರೆಯಲಾಗುತ್ತಿದೆ. ಈಗಿನ ಡೋಣಜ ಗ್ರಾಮ ಶಿರಾಡೋಣವಾಗಿದೆ. ಈ ದೇವಾಲಯ ಕೆರೆ ಒಡ್ಡಿಯ ಮೇಲೆ ಇರುವುದು ಇಲ್ಲಿ ಮಾಳಿಂಗರಾಯನ ಶಿಷ್ಯನಾಗಿ ಪಡೆದ ಕುರುಹುಗಳ ಕಂಡುಬರುತ್ತವೆ. ಇಷ್ಟೇ ಅಲ್ಲದೇ ಮಹಾಲಿಂಗರಾಯನನ್ನು ಬೀರಪ್ಪನ ಸೇವೆ ಮಾಡಿದ್ದು ಇದೇ ಊರಲ್ಲಿ ಎನ್ನುವುದು ಗ್ರಾಮದಲ್ಲಿರುವ ಕಥನದ ವೈಶಿಷ್ಟ್ಯತೆ. ಶಿವನು ಇಳಿದು ಬಂದ ಸ್ಥಳವು ಇದೆ. ಎಂದು ಅಷ್ಟೇ ಅಲ್ಲದೆ ಗುರುವಿಗೆ ಮಹಾಲಿಂಗರಾಯ ಹುಲಿಗಿಣ್ಣ ಉಣ್ಣಿಸಿದ್ದು ಇದೇ ಊರಲ್ಲಿ ಎಂದು ಅಲ್ಲಿಯ ಪೂಜಾರಿಗಳು ಭಿನ್ನ ಬಗೆಯ ಕಥನಗಳನ್ನು ಹೇಳುತ್ತಾರೆ.

ಈ ದೇವಾಲಯ ತುಂಬಾ ಪ್ರಾಚೀನ ಕಾಲದ್ದು. ಆದರೆ ಇತ್ತೀಚಿಗೆ ನಿರ್ಮಿಸಿದ ಆಧುನಿಕ ಶೈಲಿಯ ಮುಖಮಂಟಪವಿದೆ. ಗರ್ಭಗೃಹ ಚೌಕಾಕಾರವಾಗಿದ್ದು ಹತ್ತು ಕಂಬಗಳ ಆಧಾರದ ಮೇಲೆ ನಿರ್ಮಾಣವಾಗಿದೆ. ಮೇಲಿನ ಭಾಗದಲ್ಲಿ ಮಾಳಿಂಗರಾಯನ ಮೂರ್ತಿ, ಎಡಕ್ಕೆ ಮಾಳಿಂಗರಾಯನು ವಾಸ ಮಾಡಿದ ಗವಿ, ಅಲ್ಲಿ ಹಲವು ದೇವರ ವಸ್ತುಗಳು ಇವೆ. ಮುಂದೆ ಎರಡು ದೀಪದ ಸ್ತಂಭಗಳಿವೆ. ಇಲ್ಲಿ ಎರಡು ಮೂರು ಸಮಾಧಿಗಳಿವೆ. ಈ ದೇವಸ್ಥಾನದ ಹಿಂದುಗಡೆ ಅರ್ಧಫರ್ಲಾಂಗ ನಡೆದರೆ ಶೀಲವಂತಿ ಎಂಬ ದೇವಸ್ಥಾನವು ಇದೆ, ಈ ದೇವಾಲಯ ಪಶ್ಚಿಮದ ದಿನ್ನೆಯ ಮೇಲೆ ಸುಮಾರು ಅರ್ಧ ಎಕರೆಯಷ್ಟು ವಿಸ್ತಾರವಾದ ದೊಡ್ಡ ದೇವಾಲಯ ಬೀರಪ್ಪನದು ಬಲಕ್ಕೆ ಮಾಳಪ್ಪನ ಜೀವಿತ ಸಮಾಧಿ.

ಈ ದೇವಾಲಯದ ಎದುರಿಗೆ ಒಂದು ಕಟ್ಟೆಯಿದೆ. ಇದಕ್ಕೆ ಮಾಳಪ್ಪನ ಗದ್ದುಗೆ ಎಂದು ಹೆಸರು. ಇದರ ಸುತ್ತಲೂ ಅನೇಕ ಗದ್ದುಗೆಗಳಿರುವುದು ಕುತೂಹಲವನ್ನು ಹುಟ್ಟಿಸುತ್ತದೆ. ಗರ್ಭಗೃಹದಲ್ಲಿ ಬೀರಪ್ಪನ ಮೂರ್ತಿ ಭವ್ಯವಾಗಿ ಇದೆ. ಇಲ್ಲಿ ಇಟ್ಟಪ್ಪನ ಗುಡಿಯೂ ಇದೆ. ಈ ಗುಡಿಯ ಹಿಂದೆ ಒಂದು ಕಟ್ಟೆಯಿದೆ. ಅಲ್ಲಿ ಒಂದು ಸ್ತ್ರೀ ವಿಗ್ರಹವಿದ್ದು, ಕಲ್ಲಿನ ಮೂರ್ತಿಯಾಗಿದೆ. ಇದು ಮಾಯಪ್ಪನ ವಿಗ್ರಹ, ಎಡಕ್ಕೆ ಕೆಂಚಮಾಳಪ್ಪ, ಮಾಳಿಂಗರಾಯನ ಮೊಮ್ಮಗ ಬೀರದೇವರ ಸೇವಕ ಗುರುವಿನ ಬಲಭಾಗಕ್ಕೆ ವಾಲಗ, ಡೊಳ್ಳು, ತಾಳು, ಮುತ್ತಿನ ಪಲ್ಲಕ್ಕಿ, ನಿಶಾಣಿ, ಅಷ್ಟ ಐಶ್ವರ್ಯ ಸರ್ವಸಾಹಿತ್ಯ ೨೦ ಅಡಿ ಉದ್ದ ೧೦ ಅಡಿ ಅಗಲದ ಗವಿಯಲ್ಲಿ ಈ ಎಲ್ಲಾ ವಸ್ತುಗಳನ್ನು ಇಡಲಾಗಿದೆ. ಈ ಊರಿನಿಂದ ೨-೩ ಕಿ.ಮೀ. ದೂರದಲ್ಲಿ ಹುಲಿಜಂತಿ ಇದೆ. ಮಾಳಿಂಗರಾಯನ ಭವ್ಯವಾದ ದೇವಾಲಯ ನಿರ್ಮಾಣವಾಗಿದೆ. ಶಿರಾಡೋಣಕ್ಕೆ ಹತ್ತಿರವಾಗುತ್ತದೆ. ಶೀರಾಡೋಣ ಬೀರಪ್ಪನಿಗೆ ಒಂದು ಐತಿಹಾಸಿಕವಾದ ಹಿನ್ನೆಲೆ ಇದೆ.

ಬೀರಪ್ಪನ ಬಗ್ಗೆ ಅನೇಕ ಕಥನಗಳು ಬಳಕೆಯಲ್ಲಿವೆ. ಉದಾಹರಣೆಗೆ "ಬೀರಪ್ಪನು ಎಲ್ಲಾ ಬಿಟ್ಟು ತಪಸ್ಸಿಗೆ ಕೂಡುವನು. ಆಗ ಬೀರಪ್ಪನ ಮೇಲೆ ಹುತ್ತ ಬೆಳೆಯಿತು. ಇದು ಶಿವನ ಅರಿವಿಗೆ ಬಂದಿತು. ಆತನು ಬೀರಪ್ಪನಲ್ಲಿಗೆ ಬಂದು ಹುತ್ತಿನ ಮೇಲೆ ಕೈಯಿಡಲು, ಹುತ್ತೆಲ್ಲ ಬಿಚ್ಚಿಕೊಂಡು ಬೀರಪ್ಪ ಕಾಣಿಸುವನು. ಆ ವೇಳೆಗಾಗಲೆ ಜಟಗಳು ಬೆಳೆದಿದ್ದವು. ಶಿವನು ಬೀರಪ್ಪನ ಈ ಘೋರ ತಪಸ್ಸಿನ ಕಾರಣ ಕೇಳುವನು. ಆಗ ಬೀರಪ್ಪ ತನ್ನ ಸರಿಜೋಡಿಯಾದ ಒಬ್ಬ ಶಿಷ್ಯನನ್ನು ಕೇಳುತ್ತಾನೆ. ಶಿವನು ಮೂಡಲ ದಿಕ್ಕಿನಲ್ಲಿ ಜಾತಜ್ಯೋತಿ ಮಕ್ಕಳಾದ ಜಕ್ಕಪ್ಪ ಮಾಳಪ್ಪರು ೧೨೦೦ ದಂಡಿನೊಡನೆ ಇದ್ದಾರೆ. ಕೆಂಪುಕುದುರೆ, ಕೆಂಪು ನಿಶಾನಿಯುಳ್ಳವನು ಜಕ್ಕಪ್ಪನೆಂದೂ, ಬಿಳಿಕುದುರೆ, ಹಸಿರು ನಿಶಾನಿವುಳ್ಳವನು ಮಾಳಪ್ಪನೆಂಬುವರು ಇದ್ದಾರೆ ಅವರಲ್ಲಿ, ಮಾಳಪ್ಪನು ನಿನಗೆ ತಕ್ಕ ಶಿಷ್ಯನಾಗುವನು ಎಂದು ಹೇಳುವನು. ಜಲಮಾಯಿ ಕೆರೆಯ ಮೇಲೆ, ಡೋಣಜ ಕೆರೆಯ ಕೆಳಗೆ ಯಕ್ಕಿಯ ಗಿಡದ ಬನ ಇದೆ. ಅಲ್ಲಿಗೆ ಜಕ್ಕಪ್ಪ ಮಾಳಪ್ಪರು. ೧೨೦೦ ದಂಡಿನೊಡನೆ ಬೇಟೆಗೆ ಬರುತ್ತಾರೆ. ನೀನು ಗಂಡು ಎರಳಿಯಾಗಿ ಹೋಗಬೇಕು, ನಿನ್ನನ್ನು ನೋಡಿ ಮಾಳಪ್ಪ ಬೆನ್ನು ಹತ್ತುವನು" ಎಂದು ಹೇಳಿದ ಶಿವನು ಅಲ್ಲಿ ಮಾಡಬೇಕಾದ ಮಾಯದಾಟವನ್ನು ಅರುಹಿ ಮಾಯವಾಗುವನು.

ಅದರಂತೆ ಬೀರಪ್ಪ ಎರಳೆಯಾಗಿ ಡೋಣಜ ಕೆರೆಯ ಮೇಲೆ ಹೋಗುವನು. ಮಾಳಪ್ಪನು ಅದರ ಬೆನ್ನು ಹತ್ತುವನು. ಎರಳೆಕೆರೆಯಲ್ಲಿ ಜಾರುವುದು. ಮಾಳನೂ ಕೆರೆಗೆ ಹಾರುವನು. ಪಾತಾಳಕ್ಕೆ ಹೋದಾಗ ಎರಳೆಯ ದೂಪದಲ್ಲಿದ್ದ ಬೀರಪ್ಪ ಮಾನವ ರೂಪದಲ್ಲಿ ಹೊರಳಿ ನಿಲ್ಲುವನು. ಮಾಳಪ್ಪ ಗುರುವಿನ ಪಾದಕ್ಕೆ ಹೊಂದುವನು.

ಮಾಳಿಂಗರಾಯನು ಗುರುವಿಗೆ ಸಿಡಿಯಾಣದಲ್ಲಿ ಒಂದು ಗುಡಿ ಕಟ್ಟಿಸುವುದಾಗಿ ಹೇಳಿದನು. ಗೌಡಗಿರಿಯ ಗುಡ್ಡದಲ್ಲಿ ತಾನು ಕಾಯ್ದು ಕುರಿಗಳು ಇದ್ದು. ಅವನ್ನು ನೀನು ಜೋಪಾನ ಮಾಡಬೇಕೆಂದು ಮಾಳಿಂಗರಾಯನಿಗೆ ಹೇಳುವನು. ಬಿಜ್ಜಳಗುಂತಿಗೆ ಬಂದು ಸಾಲದಾವಣಿ ಹಾಕುವರು. ಬೀರಪ್ಪ ಮಾಳಿಂಗರಾಯ ಇಬ್ಬರೂ ಸಿಡಿಯಾಣಕ್ಕೆ ಬರುವರು. ಗುರುವಿಗಾಗಿ ಪಾಯ ಹೊಡೆದು ಗಚ್ಚಿನ ಗುಡಿಯನ್ನು ಕಟ್ಟಿಸುವನು. ಲಿಂಗಬೀರಣ್ಣ ಗದ್ದುಗಿ ಏರುವನು. ಗುರು ಬೀರಣ್ಣನು ಗದ್ದುಗೆ ಏರಿದ ನಂತರ ಆತನಿಗೆ ಊಟಕ್ಕೆ ಹುಲಿಗಿಣ್ಣವನ್ನೂ, ಆಟಕ್ಕೆ

ಹುಲಿಮರಿಯನ್ನು ಒಪ್ಪಿಸಲು ಮಾಳಪ್ಪನು ಪ್ರಯಾಣ ಮಾಡುವನು. ನಿಂಬರ್ಗಿ ಭೀಮಾರಾಯನಲ್ಲಿ ಬಂದು ಹುಲಿಗಿಣ್ಣ ಎಲ್ಲಿ ಸಿಗುತ್ತದೆ ಎಂದು ಕೇಳಿದರೆ, ಆತ ಹಳೆಗುಣಕಿ ಭೀಮರಾಯನಲ್ಲಿ ಹೋಗುವಂತೆ ಹೇಳುತ್ತಾನೆ. ಆತ ಗಂಗಿ ಮಾಳಮ್ಮನ ಹತ್ತಿರ ಜಗುಲಿಗುಡ್ಡಕ್ಕೆ ಕಳಿಸುತ್ತಾನೆ. ಮಾಳಪ್ಪ ಅಲ್ಲಿಗೆ ಬಂದು ಮಾಳಮ್ಮನಿಗೆ ವಿಷಯ ತಿಳಿಸುತ್ತಾನೆ.

ಮಾಳಮ್ಮಳ ಗುಡ್ಡದ ಕೆಳಗಿನ ಗುಡ್ಡ ನದಿ, ಅಲ್ಲೊಂದು ಗವಿ, ಅಲ್ಲಿಗೆ ಮಾಳಪ್ಪನನ್ನು ಮಾಳಮ್ಮ ಕಳುಹಿಸಿದಳು. ಅಲ್ಲಿಗೆ ಹೋಗಿ ಮಾಳಪ್ಪ ಹುಲಿಮರಿಗಳನ್ನು ನೋಡುತ್ತಾನೆ. ಹುಲಿಯೊಂದು ಈದ ಮರಿಗಳನ್ನು ಬಿಟ್ಟು ಅವು ಕಣ್ಣು ತೆರೆಯುವ ಮುನ್ನವೇ ಮೇಯಲು ಹೋಗಿತ್ತು. ಅಷ್ಟರಲ್ಲಿ ಅಲ್ಲಿಗೆ ಒಂದು ಹಾವು ಬಂದಿತು. ಮಾಳಪ್ಪ ಅದರ ಮೇಲೆ ಭಂಡಾರ ಎರಚಿದ್ದಾಗ ಸರ್ಪ ಹಿಂದಕ್ಕೆ ಹೋಯಿತು. ಹುಲಿಮರಿಗಳ ಮೇಲೆ ಭಂಡಾರ ಎರಚಿದ್ದಾಗ ಅವುಗಳ ಕಣ್ಣುಗಳು ಬಂದವು.

ತಾಯಿ ಹೊರಗಿನಿಂದ ಬಂದಾಗ ಮರಿಗಳು ಮಾಳಪ್ಪನ ಉಪಕಾರವನ್ನು ತಿಳಿಸಿದವು. ನಂತರ ತನ್ನ ಹಾಲು ಬೇಕೆಂಬ ವಿಷಯ ತಿಳಿದು, ಆ ಹುಲಿ ಮಾಳಪ್ಪನಿಗೆ ಹಾಲು ಕೊಡುವುದಲ್ಲದೆ ತನ್ನ ಮರಿಗಳನ್ನು ಬಹುಮಾನವಾಗಿ ಕೊಟ್ಟಿತು. ಹಾಲು ಮತ್ತು ಹುಲಿಮರಿಗಳನ್ನು ಪಡೆದುಕೊಂಡು ಬಂದ ಮಾಳಪ್ಪನು ಗುರುವಿಗೆ ಅವುಗಳನ್ನು ಸಲ್ಲಿಸಿ, ಪೂಜೆ ಮಾಡಿದನು. ಹೀಗೆ ಗುರುವಿಗೆ ಪೂಜೆಸಲ್ಲಿಸಿ ಆರತಿ ಬೆಳಗುವಾಗ ಈ ಬೆಳಕು ಕೈಲಾಸದಲ್ಲಿ ಬಿದ್ದಿತು. ಪಾರ್ವತಿ ಯಾವ ಬೆಳಕಿದು ಎನ್ನಲು ಶಿವನು ಇದು ಬೀರಪ್ಪನ ಭಕ್ತನಾದ ಮಾಳಿಂಗರಾಯನ ಬೆಳಕೆಂದು ಹೇಳುವನು. ಆಗ ಮಾಳಪ್ಪನನ್ನು ಪರೀಕ್ಷಿಸಲು ಪಾರ್ವತಿ ಬಯಸಿದಳು.

ತಾಯಿ ಪಾರ್ವತಿಯ ಇಚ್ಛೆಯಂತೆ ಶಿವನ ಮಗಳು ಸತ್ಯವತಿ (ಶೀಲವಂತಿ) ಮಾಳನನ್ನು ತಾನು ತರುತ್ತೇನೆಂದು ಹೊರಟಳು. ಮಾಯವ್ವ ಬಂಡಿಕಟ್ಟಿ ಕುತ್ತು(ಕಂಟಕ)ಗಳನ್ನು ಉಡಿಯಲ್ಲಿ ಹಾಕಿಕೊಂಡು ಸಿಡಿಯಾಣ ಮಠಕ್ಕೆ ಬಂದಳು. ಮಾಳನು ಮಾರುವೇಷದಲ್ಲಿ ಬಂದು ಆಕೆ ಇಲ್ಲಿಗೆ ಬಂದಿರುವ ಉದ್ದೇಶ ಕೇಳುವನು. ಆಗ ತಾನು ಮಾಳನನ್ನು ಒಯ್ಯಲು ಬಂದನೆಂದು ಹೇಳುವಳು. ಆತ ಇದೀಗ ಪೂಜೆ ಮುಗಿಸಿಕೊಂಡು ಮುಂದಿನ ಮಠಕ್ಕೆ ಹೋದನೆಂದು ಹೇಳುವನು. ಆಕೆ ಮುಂದಿನ ಮಠಕ್ಕೆ ಬಂಡಿ ಹೊಡೆದುಕೊಂಡು ಹೋಗುತ್ತಾಳೆ.

ಮತ್ತೆ ಆ ಮಠದಲ್ಲಿ ಮತ್ತೊಂದು ವೇಷದಲ್ಲಿ ಭೇಟಿಯಾಗಿ, ಮಾಳನು ಮತ್ತೆ ಮುಂದಿನ ಮಠಕ್ಕೆ ಹೋದನೆಂದು ಹೇಳುತ್ತಾನೆ. ಇದೇ ರೀತಿ ಒಂಬತ್ತು ಮಠಗಳಿಗೂ ಅಡ್ಡಾಡಿಸಿದನು ಎನ್ನುವ ಕಥನಗಳು ಸಿಗುತ್ತವೆ. ಅನೇಕ ಸಲ ಗುರುವೇ ಕಾಪಾಡಬೇಕೆಂದು ಬೀರಪ್ಪನಿಗೆ ಮಾಳಿಂಗರಾಯ ಮೊರೆಹೊಕ್ಕಾಗೆಲ್ಲ, ಬೀರಪ್ಪನು ಪ್ರತ್ಯುತ್ತರವಾಗಿ ನೀನೆ ಉಳಿದು ಬಂದು ನನ್ನ ಪೂಜೆ ಮಾಡಬೇಕೆಂದು ಹೇಳುತ್ತಿದ್ದನು. ಕೊನೆಗೆ ಮಾಳಪ್ಪನು ಹನುಮಂತನಿಗೆ ಮೊರೆಹೊಕ್ಕನು. ಮಾಳನು ತನಗೆ ಮೊರೆ ಹೋದುದರಿಂದ ಹನುಮಂತನು ಅವನನ್ನು ಕೊಡುವುದಿಲ್ಲ ಎಂದು ಶೀಲವಂತಿಗೆ ಹೇಳಿದನು. ಹನುಮಂತನ ಗುಡಿಯ ಹತ್ತಿರ ಆಕೆ ಮಲಗಿದಾಗ ಮಾಳನು ಶೀಲವಂತಿಯ ಮೂಗಿನ ನತ್ತು ತೆಗೆದು, ಆಕೆಯ ಉಡಿ ಚೀಲದಲ್ಲಿಯೇ ಇಟ್ಟನು. ಆಕೆ ಎಚ್ಚರವಾಗಿ ಮುಖ ತೊಳೆಯಲು ಹೋದಾಗ ನತ್ತು ಇಲ್ಲದಿರುವುದು ಅರಿವಿಗೆ ಬಂದು ಗಾಬರಿಯಾದಳು. ಬಾವಿಯ

ಮೇಲೆ ನಿಂತಿದ್ದ ಮಾಳಪ್ಪನು, ನತ್ತು ನಿನ್ನ ಉಡಿಯಲ್ಲಿಯೇ ಇದೆ ಎಂದು ಹೇಳಿದನು. ನೋಡಿದರೆ ನತ್ತು ಅಲ್ಲಿಯೇ ಇತ್ತು. ಆಕೆ ನತ್ತು ಇಟ್ಟುಕೊಂಡು ಕೈಕಾಲು ಮುಖ ತೊಳೆದುಕೊಂಡು, ತಿರುಗಿ ನೋಡಿದರೆ ಅಲ್ಪ ಸ್ವುರದ್ರೂಪಿಯಾದ ಮಾಳಪ್ಪನೇ ಇದ್ದಾನೆ. "ನೆರಿಯ ಗಡ್ಡದ ಹಿರಿಯ ಬಾ ನನ್ನ ಕರಿಯ ಗಡ್ಡದ ಎಳಿಯಾನೆ" ಎಂದು ಆಕೆ ನೀನೆ ಅಣ್ಣನೆಂದು ಶರಣಾಗುವಳು. ಆಕೆಯನ್ನು ಸಿಡಿಯಾಣದಲ್ಲಿಯೇ ನೆನೆಯಲು ಮಾಳ ಹೇಳುವನು. ಆಕೆ ಅಲ್ಲಿಯೆ ನೆನೆಯುವಳು. ಸಿರಾಡೋಣದಲ್ಲಿ ಶೀಲವಂತಿಯ ಭವ್ಯ ದೇವಾಲಯವು ಇದೆ.

ಬೀರಪ್ಪ, ಮಾಳಿಂಗರಾಯ, ಶೀಲವಂತಿ ಈ ಮೂರು ದೇವರುಗಳ ಜಾತ್ರೆಗಳು, ದೀಪಾವಳಿ, ಯುಗಾದಿ, ಭಾರತಹುಣ್ಣಿಮೆ, ನೂಲುಹುಣ್ಣಿಮೆ ದಿವಸ ಜಾತ್ರೆ ನಡೆಯುತ್ತವೆ. ಮಾಳಿಂಗರಾಯ ಹುಲಜಂತಿಯಿಂದ ಬಂದು ಬೀರಪ್ಪನಿಗೆ ಊಟ ಮಾಡಿಸುತ್ತಾನೆ. ಈ ದೇವಾಲಯದಲ್ಲಿ ಅನ್ನಸಂತರ್ಪಣೆ, ಭಾರತಹುಣ್ಣಿಮೆ, ನೂಲಹುಣ್ಣಿಮೆ ದಿನ ಪ್ರಸಾದ ಸಂತರ್ಪಣೆ ಜೊತೆಗೆ ಇಲ್ಲಿ ಜನ ಪತ್ರಿಯ ಕೌಲ ಕೇಳುತ್ತಾರೆ. ಡೊಳ್ಳಿನ ಆಚರಣೆ, ಮುಡಿಸೇವೆ, ಪಲ್ಲಕ್ಕಿ ಉತ್ಸವ, ಅನೇಕ ಪವಾಡಗಳು ನಡೆಯುತ್ತವೆ. ಗುರುಪೀಠ ಹುಲಜಂತಿಯ ಸುತ್ತಲು ಪ್ರದೇಶಗಳಿಂದ ಜನರು ಜಾತ್ರೆಗೆ ಜನಸಾಗರವಾಗಿ ಹರಿದು ಬರುತ್ತಾರೆ. ಮಾಳಿಂಗರಾಯ ಮುಂಡಾಸು ಕೊಟ್ಟಿದ್ದು ಇಲ್ಲಿಂದ ಸೀರಾಡೋಣ ಬೀರಲಿಂಗೇಶ್ವರ ಪ್ರಸಿದ್ಧವಾದ ಸ್ಥಳವಾಗಿದೆ.

ಇಲ್ಲಿ ಪೂಜೆ ವಿಶೇಷವಾಗಿದೆ. ಬೀರದೇವರಿಗೆ, ಶೀಲವಂತಿಗೆ, ಕಾರಹುಣ್ಣಿಮೆಯಿಂದ ಯುಗಾದಿವರೆಗೆ ಎರಡು ಹೊತ್ತು ಪೂಜೆ ನಡೆಯುತ್ತದೆ. ಯುಗಾದಿಯಿಂದ ಕಾರಹುಣ್ಣಿಮೆಯವರೆಗೆ ಮೂರು ಹೊತ್ತು ಪೂಜೆ ನಡೆಯುತ್ತದೆ. ಈ ದೇವರಿಗೆ, ವಿಭೂತಿ, ಭಂಡಾರ ಎರಡು ಆಚರಣೆಗಳು ಜಾರಿಯಲ್ಲಿವೆ. ಈ ದೇವಾಲಯವು ತುಂಬಾ ಪ್ರಸಿದ್ಧವಾದ ಕ್ಷೇತ್ರವಾಗಿದೆ. ಬೀರಪ್ಪನ ಭವ್ಯವಾದ ದೇವಾಲಯವಿದೆ.

೧೩. ಹಿರೇಸಿಂಧೋಗಿ

ಕೊಪ್ಪಳ ಜಿಲ್ಲೆಯ ಹಿರೇಸಿಂಧೋಗಿಯಲ್ಲಿ ೧೮ನೇ ಶತಮಾನದಲ್ಲಿ ಪಾಳೆಯಗಾರರು ನಿರ್ಮಿಸಿದ ದೇವಾಲಯವಿದೆ. ಈ ದೇವಾಲಯದ ನಿರ್ಮಾಣಕ್ಕೆ ಸಂಬಂಧಿಸಿದಂತೆ ಒಂದು ಐತಿಹ್ಯವಿದೆ. "ಕೆಂಭಾವಿ ಮೂಲದ ಕುರುಬರ ಒಂದು ಗುಂಪು ಆ ಊರಿನ ಶ್ರೀಮಂತನ ಮಗನನ್ನು ಕೊಂದರು. ಆ ಹುಡುಗ ಕುರುಬರಿದ್ದ ಓಣಿಯಲ್ಲಿ ಹೋದನೆಂದು ಕೆಲವರು ಹೇಳಿದರು ಆಗ ಪ್ರತಿಮನೆಯನ್ನು ಪರೀಕ್ಷಿಸಲಾಯಿತು. ಆದರೆ ಆ ಹುಡುಗನನ್ನು ಕಡಿದು ಹಾಕಲಾಗಿತ್ತು. ಆಗ ಅಲ್ಲಿದ್ದ ಹಿರೇಕ್ಕ ಈ ಹುಡುಗ ಟಗರಿನ ಮಾಂಸವಾಗಲೆಂದು ಬೇಡಿಕೊಂಡಳು. ಆ ಬುಟ್ಟಿಯನ್ನು ತೆರೆದು ನೋಡಿದರೆ ಟಗರಿನ ಮಾಂಸವಿತ್ತು. ಅಂದೇ ಇವರೆಲ್ಲ ಊರು ಬಿಟ್ಟು ಕೃಷ್ಣಾನದಿ ದಾಟಿ ಬಂದರು. ಬರುವಾಗ ನೆರವಾಗಿದ್ದ ಕಂಸಾಳೆಯ ಮಾದಿಗರು ಇವರ ಜೊತೆಗಿದ್ದರು. ಇವರು ಕುಕನೂರು ಮಹಾಮಾಯಿ ದೇವಸ್ಥಾನದ ಆಶ್ರಯ ಪಡೆದಿದ್ದರು. ಹಿರೇಸಿಂಧೋಗಿಗೆ ಬಂದು ತಾವು ತಂದಿದ್ದ ಕರೆಕಲ್ಲನ್ನು ಪೂಜಿಸುತ್ತಿದ್ದರು. ಆ ಕರೆಕಲ್ಲು ಅಲ್ಲಿಯೇ ಕುಸಿದು ಬಿದ್ದಿತು. ಎಲ್ಲರೂ ಎತ್ತುವುದಕ್ಕೆ ಪ್ರಯತ್ನಿಸಿದರು ಮೇಲೆ ಎತ್ತಲಾಗಲಿಲ್ಲ. ಹೀಗಾಗಿ ಅಲ್ಲಿಯೆ ಈ ಬೀರದೇವರ ಗುಡಿಯನ್ನು ಸ್ಥಾಪಿಸಿದರು. ನಂತರ ಈ ಪ್ರದೇಶವು ಕಾತರಕಿ ದೇಸಾಯಿಯ ಅಧೀನಕ್ಕೆ ಬಂದಿತು. ಇವರು ಹಿರೇಸಿಂಧೋಗಿ

ಗ್ರಾಮದಲ್ಲಿ ಬೀರದೇವರ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. ಇಂದಿಗೂ ಈ ದೇವಾಲಯವು ಎರಡು ಗರ್ಭಗೃಹಗಳು ಮತ್ತು ತೆರೆದ ಸಭಾಮಂಟಪ ಹೊಂದಿದೆ. ಎಡಬದಿಯ ಗರ್ಭಗೃಹದಲ್ಲಿ ಬೀರಲಿಂಗೇಶ್ವರ ಶಿಲ್ಪಗಳಿವೆ".[೨೦] ಹೀಗಾಗಿ ಬೀರದೇವ ಕೈಲಾಸಕ್ಕೆ ಹೊರಟು ಹೋದದ್ದು ರವಿವಾರವಾದ್ದರಿಂದ ಕುರುಬರಿಗೆ ರವಿವಾರ ಪವಿತ್ರ ದಿನವಾಗಿದೆ. ರವಿವಾರದಂದು ದೇವರಿಗೆ ವಿಶೇಷವಾದ ಪೂಜೆ ಸಲ್ಲಿಸಲಾಗುತ್ತದೆ.[೨೧] ಹಬ್ಬದ ದಿನಗಳಂದು ಬೀರದೇವರ ಮೂರ್ತಿಯನ್ನು ಅಲಂಕರಿಸಲಾಗುತ್ತದೆ. ಸಿಹಿ ಅಡುಗೆ ಮಾಡಿ ನೈವೇದ್ಯ ಇಡಲಾಗುತ್ತದೆ. ಈ ದೇವಾಲಯದಲ್ಲಿ ಪ್ರತಿ ಎರಡು ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಶಿವರಾತ್ರಿಯಲ್ಲಿ ನಡೆಯುವ ಎರಡು ದಿನದ ಜಾತ್ರೆಯಲ್ಲಿ ಹಲವೆಡೆಯಿಂದ ಜನರು ಆಗಮಿಸುತ್ತಾರೆ. ದೇವರ ಅಲಂಕಾರ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಭಕ್ತರು ತಮ್ಮ ಹರಕೆಗಳನ್ನು ನೆರವೇರಿಸಿಕೊಳ್ಳುತ್ತಾರೆ. ಅಂದು ಬೀರದೇವನಿಗೆ ಗೋಧಿಹುಗ್ಗಿ ಅನ್ನ ಪ್ರಸಾದ ಮಾಡುತ್ತಾರೆ. ಮಾಂಸಹಾರದ ನೈವೇದ್ಯ ಮಾಡುವಂತಿಲ್ಲ ಎನ್ನುವ ಅಲಿಖಿತ ನಿಯಮವಿದೆ. ಹೀಗಾಗಿ ಭಕ್ತರು ಸ್ವಲ್ಪ ದೂರದಲ್ಲಿರುವ ದೇವಿಗೆ ಕುರಿಬಲಿ ನೀಡುತ್ತಾರೆ. ಜಾತ್ರೆಯ ದಿನದಂದು ರಾತ್ರಿಯಿಡಿ ಪುರಾಣ ಪ್ರವಚನ ನಡೆಯುತ್ತದೆ. ಹೀಗೆ ಇತರ ಬೀರದೇವರ ದೇವಾಲಯಗಳಲ್ಲೂ ಜಾತ್ರೆ ಉತ್ಸವಗಳು ನಡೆಯುತ್ತವೆ.

೧೪. ಕೊಣ್ಣೂರ

ಕೊಣ್ಣೂರು ಗ್ರಾಮವು ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನಲ್ಲಿದೆ. ವಿಜಾಪುರದಿಂದ ಸುಮಾರು ೬೦ ಕಿ.ಮೀ. ಅಂತರದಲ್ಲಿದೆ. ಸುಮಾರು ನಾಲ್ಕು ಸಾವಿರ ಜನಸಂಖ್ಯೆಯನ್ನು ಹೊಂದಿರುವ ಈ ಗ್ರಾಮದಲ್ಲಿ ಮುಕ್ಕಾಲು ಪಾಲು ಹಾಲುಮತಸ್ಥರೇ ಇದ್ದಾರೆ. ಈ ಗ್ರಾಮದ ಪ್ರಾಚೀನ ಹೆಸರು 'ಕೋಣೆಗನೂರು'. ಕ್ರಿ.ಶ. ೧೧೪೯-೫೦ ರ ಶಾಸನವೊಂದರಲ್ಲಿ "ಜಂಬುಲಖಂಡಿಯ ಬೀರಣ್ಣ ದೇವನ ಅರವಟ್ಟಿಗೆಗೆ ಕೋಣೆಗನೂರು ಮಹಾರಾಜರಿಂದ ಭೂಮಿ ಮತ್ತು ಗೃಹದಾನ ಮಾಡಿದ ಪ್ರಸ್ತಾಪವಿದೆ (SIIXV 542). ಬೀರೇಶ್ವರ ಅಥವಾ ಕರಿಸಿದ್ಧೇಶ್ವರನಿಗೆ ಸಂಬಂಧಪಟ್ಟ ಕಾವ್ಯ ಪುರಾಣಗಳಲ್ಲಿ ಕೋಣನೂರು ಎಂದಿದೆ".[೨೨]

"ಶಿವನಧ್ಯಾನಿಸಿ ಕೋಣನಸುವಳಿದ ಸ್ಥಲದಿ ಮೀರ
ಗುವ ಕೋಣನೂರು ಮೇಣ ಮುಂಡ ಬಿದ್ದಿದ ಸ್ಥಳ
ಮನವನಿಯೊಳ್ಮೆರೆವ ಮುಂಡಗನೂರು ಸ್ಥಿರವಾಗಲೆಂದರಿಕೆ ಕೊಟ್ಟ ನಡೆದ"[೨೩]

"ಕೋಣನು ಬಿದ್ದಸುವಳಿದ ಸ್ಥಲದಿ ಮುಂದೆ
ಕೋಣನೂರಾಗಲಿ ಮತ್ತೆ
ಅಣತಿಯಿಂ ಮುಂಡ ಬಿದೆಡೆಯೊಳು ಜನ
ಶ್ರೇಣೆಯ ಮುಂಡಗನೂರು"[೨೪]

"ನಿನ್ನ ರುಂಡವನ್ನು ಚೆಂಡಾಡಿದ ಸ್ಥಳದಲ್ಲಿ ನಾನು ಪುನಃ
ಕಲಿಯುಗದಲ್ಲಿ ಸಿದ್ದಬೀರೇಶ್ವರನೆಂಬ ಹೆಸರಿನಿಂದ

ಅವತರಿಸಿ ನೀನು ಮಡಿದ ಸ್ಥಳದಲ್ಲಿ ನಿನ್ನ ಹೆಸರಿನ ಮೇಲೆ
ಕೋಣನೂರ ಎಂಬ ಗ್ರಾಮವನ್ನು ಸ್ಥಾಪಿಸಿ ಕೋಣನೂರ
ಕರಿಸಿದ್ಧ ಬೀರೇಶ್ವರನೆಂದು ಪ್ರಸಿದ್ಧನಾಗುವೆನೆಂದು
ವರವನ್ನೀಯಲು ....".[೨೫]

ಕರಿಸಿದ್ಧೇಶ್ವರನು ಕೋಣಾಸುರನನ್ನು ವಧಿಸಿದ ಕಾರಣದಿಂದ ಕೊಣ್ಣೂರಿಗೆ ಈ ಹೆಸರು ಬಂದಿದೆಯೆಂಬುದು (ಕೋಣನೂರು - ಕೊಣ್ಣೂರು) ಜನಜನಿತವಾಗಿದೆ.

ಕೊಣ್ಣೂರು ಕರಿಸಿದ್ಧೇಶ್ವರ (ಬೀರಪ್ಪ) ದೇವಾಲಯವು ಊರ ಹೊರಗಡೆ ಪಶ್ಚಿಮ ದಿಕ್ಕಿನಲ್ಲಿದೆ. ದೇವಾಲಯವು ಪೂರ್ವಾಭಿಮುಖವಾಗಿದೆ. ಮುಖ್ಯದ್ವಾರದ ಮೇಲೆ ಗೋಪುರ ಕಟ್ಟಿಸಿರುವುದರಿಂದ ಊರ ಹೊರಗೆ ಬಹುದೂರಕ್ಕೆ ಕಾಣುತ್ತದೆ. ಈ ಮುಖ್ಯದ್ವಾರ ಮತ್ತು ಗರ್ಭಗುಡಿಯ ಆಚೆಯಿರುವ ಕಮಾನಿನಾಕಾರದ ಕೋಣೆಗಳು ಶಾಸನಗಳು ಕಂಡುಬರುತ್ತವೆ.

ಗರ್ಭಗುಡಿಯಲ್ಲಿ ಕರಿಸಿದ್ಧೇಶ್ವರನ ಕಲ್ಲಿನ ಮೂರ್ತಿ ಕುಳಿತ ಭಂಗಿಯಲ್ಲಿದೆ. ಆರಂಭದಲ್ಲಿ ಈ ಮೂರ್ತಿ ಮಾತ್ರ ಇತ್ತು. ಕಾಲಕ್ರಮೇಣ ಒಂದೇ ಮೂರ್ತಿ ಬೇಡವೆಂದು ಇನ್ನೊಂದು ಮೂರ್ತಿಯನ್ನು ನಿಲ್ಲಿಸಲಾಯಿತು. ಇದಕ್ಕೆ ಕಾರಣಗಳು ತಿಳಿದಿಲ್ಲ. ಆದರೆ ಕುಳಿತ ಭಂಗಿಯ ಮೂರ್ತಿಗೆ 'ಕುಂತಿರಪ್ಪ'ನೆಂದು, ನಿಂತಿರುವ ಮೂರ್ತಿಗೆ 'ನಿಂತಿರಪ್ಪ'ನೆಂದೂ ಕರೆಯಲಾಗುತ್ತಿದೆ. ದೇವಾಲಯವು ಬೆಳೆಯುತ್ತಾ ಬಂದಂತೆ ಕಲ್ಲಿನ ಮೂರ್ತಿಗಳು ಮರೆಯಾಗಿ ಬೆಳ್ಳಿಯ ಮೂರ್ತಿಗಳನ್ನು ಇಡಲು ಪ್ರಾರಂಭಿಸಿದ್ದರು. ಈ ದೇವರ ಎಡಬದಿ ಅರ್ಚಕರು ಕುಳಿತುಕೊಳ್ಳುತ್ತಾರೆ. ಬಲಬದಿಯಲ್ಲಿ 'ತೂಗುಮಂಚ'(ಪಲ್ಲಕ್ಕಿ)ವಿದೆ. ಇಲ್ಲಿ ದೇವರು ಮಲಗುತ್ತಾನೆಂದು ಹೇಳುತ್ತಾರೆ. ದೇವರ ಪಾದುಕೆಗಳನ್ನು ಈ ತೂಗುಮಂಚದ ಮೇಲೆ ತೂಗು ಹಾಕಲಾಗಿದೆ. ಬೇಡಿಕೊಂಡ ಭಕ್ತರು ತಮ್ಮ ಯೋಗ್ಯತೆಗೆ ತಕ್ಕಂತೆ ಪಾದುಕೆಗಳನ್ನು ಮಾಡಿಕೊಡುವರು. ದೇವರ ಎದುರಿಗೆ ಕಂಚಿನ ಪಂಚಗಂಟೆ, ದೂಪಾರತಿ, ಕುದುರೆ, ನವಿಲು, ನಾಗಪ್ಪಗಳಲ್ಲದೆ, ಶಂಖ, ಕಲ್ಲಿನ ಬಸವಣ್ಣ ಮುಂತಾದವುಗಳು ಈ ದೇವರ ಲಾಂಛನಗಳು. ಸಾಮಾನ್ಯ ದಿನಗಳಲ್ಲಿ ಭಕ್ತರಿಗೆ ಗರ್ಭಗುಡಿಯೊಳಗೆ ಬರಲು ಅವಕಾಶವಿದೆ. ಉತ್ಸವ, ಜಾತ್ರೆಗಳಲ್ಲಿ ಅವಕಾಶವಿಲ್ಲ.

ಡೊಳ್ಳಿನ ಮನೆ : ಗರ್ಭಗುಡಿಯ ಪಕ್ಕದಲ್ಲಿ ಪೂರ್ವಕ್ಕೆ ಮುಖಮಾಡಿ ಎರಡು ಕೋಣೆಗಳಿವೆ. ದಕ್ಷಿಣೋತ್ತರ ಸಾಲಾಗಿ ಎದುರು ಬದರು ಕಮಾನುಗಳನ್ನು ಕಟ್ಟಲಾಗಿದೆ. ಕೆಲವು ಕಮಾನುಗಳು ಇತರೆ ದೇವರಿಗೆ ಸಂಬಂಧಪಟ್ಟವುಗಳು. ಇನ್ನು ಕೆಲವು ಗುಡಿಯ ಸಾಮಗ್ರಿಗಳನ್ನು ಇಡಲು ಬಳಸಲಾಗಿದೆ. ಇನ್ನೂ ಕೆಲವು ಭಕ್ತರಿಗೆ ಉಳಿದುಕೊಳ್ಳಲು, ಗರ್ಭಗುಡಿಯ ಬಲಕ್ಕೆ ಒಂದು ಡೊಳ್ಳಿನ ಮನೆ ಇದೆ. ನಂತರ ಈ ಮನೆಯಲ್ಲಿ ಅಡುಗೆಯ ಪಾತ್ರೆಗಳನ್ನು ಇಡಲಾಗುತ್ತದೆ. ಎಡಗಡೆ ಕಮಾನಿನಲ್ಲಿ ಲಕ್ಷ್ಮೀದೇವಿ ಇದ್ದಾಳೆ. ಮೊದಲೆರಡು ಕಮಾನಗಳಲ್ಲಿ ಭರಮಪ್ಪ, ಭೃಂಗಿದೇವ, ಮೂರನೆಯದರಲ್ಲಿ ಸಿತಾಳ, ಇಲ್ಲಿ ದೇವರ ಕಾರ್ಯಕ್ಕಾಗಿಯೇ ನೀರು

ಕಾಯಿಸಲಾಗುತ್ತದೆ. ಎಡಗಡೆಗೆ ನಗಾರಿ ಕಮಾನು ಇಲ್ಲಿ ಗುಡಿಯ ನಗಾರಿಗಳನ್ನು ಇಡಲಾಗಿದೆ. ಇನ್ನೊಂದರಲ್ಲಿ ದೇವರಿಗೆ ಸಂಬಂಧಪಟ್ಟ ಆಭರಣ, ಬಟ್ಟೆ ಇರಿಸಲಾಗಿದೆ. ಎದುರುಗಡೆ ನೀರಿನ ರಂಜಣಗಿ ಇದೆ. ಇನ್ನೊಂದರಲ್ಲಿ ಪಲ್ಲಕ್ಕಿ ದಂಡಗಿಗಳನ್ನು ಇಡುವುದಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ.

ಮುಖ್ಯದ್ವಾರ ಹಳೆ ಶಿಥಿಲಾವಸ್ಥೆಯನ್ನು ತಲುಪಿದ್ದ ಕಾರಣ ಅದನ್ನು ಕೆಡವಿ ಇತ್ತೀಚೆಗೆ ಹೊಸದಾಗಿ ಆರ್.ಸಿ.ಸಿ. ಛಾವಣಿ ಕಟ್ಟಿಸಿದ್ದಾರೆ. ಮುಖ್ಯದ್ವಾರವನ್ನು ಪ್ರವೇಶಿಸಿದ ಕೂಡಲೆ ಮೊದಲಿಗೆ ಎದುರಾಗುವುದು ಮಾಲಗಂಬ. ಈ ಮಾಲಗಂಬ ಕೋಣಾಸುರನೆಂಬ ದೈತ್ಯನನ್ನು ವಧಿಸಿ ದಹನ ಮಾಡಿದ ಸ್ಥಳದಲ್ಲಿ ನಿರ್ಮಾಣ ಗೊಂಡಿದೆ. ಇದು ಕಲ್ಲಿನಿಂದ ಕಟ್ಟಲ್ಪಟ್ಟಿದೆ. ತರುವಾಯ ಬರುವ ಎರಡನೆಯ ಬಿಳಿಯ ಮಾಲಗಂಬ ಹೋಮ ಮಾಡುವ ಸ್ಥಳದಲ್ಲಿ ನಿರ್ಮಾಣಗೊಂಡುದು. ಈ ಹೋಮದ ಕೊಂಡಕ್ಕೆ ಐತಿಹಾಸಿಕವಾದ ಒಂದು ಹಿನ್ನೆಲೆಯಿದೆ. ಕರಿಸಿದ್ದೇಶ್ವರನ್ನು ಹಬ್ಬ ನಡೆಯುವ ಸಂದರ್ಭದಲ್ಲಿ ತನ್ನ ಶಿಷ್ಯರಿಗೆ ಭಂಡಾರ ಕೊಟ್ಟು ಕರೆ ಕಳುಹಿಸಿದ. ಆದರೆ ಮಾಳಿಂಗರಾಯನಿಗೆ ಮಾತ್ರ ಭಂಡಾರದ ಜೊತೆ ಉಂಗುರ ಕೊಟ್ಟು ಕಳುಹಿಸಿದ. ಇದನ್ನು ಕಂಡು ಉಳಿದವರಿಗೆ ಸಹಿಸಲಾಗಲಿಲ್ಲ. ಅವರಿಗೆ ಆಗ ಗುರು ಮಾಡುವ ಭೇದಭಾವವೆನಿಸಿ ಅಸಹನೆ ಸ್ಪಷ್ಟಪಡಿಸಿದರು. ಕರಿಸಿದ್ದೇಶ್ವರ ನೀವು ನಿಜವಾಗಿಯೂ ನನ್ನ ಮಕ್ಕಳಾಗಿದ್ದರೆ ಯಾಕೆ ಬಡಿದಾಡುತ್ತೀರಿ. ಅವನಿಗೆ ತಕ್ಕಂತೆ ಅವನಿಗೆ ಕೊಟ್ಟಿದ್ದೇನೆ. ನಿಮಗೆ ತಕ್ಕಂತೆ ನಿಮಗೆ ಕೊಟ್ಟಿದ್ದೇನೆ. ನೀವು ನನ್ನ ನಿಜವಾದ ಶಿಷ್ಯಮಕ್ಕಳಾಗಿದ್ದರೆ ಇಲ್ಲಿ ಹೋಮ ಮಾಡಲಾಗುತ್ತದೆ. ಈ ಹೋಮದಲ್ಲಿ ಯಾರು ಪಾರಾಗಿ ಬರುತ್ತಿರೋ ಅವರೇ ನಿಜವಾದ ಶಿಷ್ಯರೆಂದು ಹೇಳಿದ. ಆಗ ಈ ಪಂಥಕ್ಕೆ ಎಲ್ಲರೂ ಹಿಂದಕ್ಕೆ ಸರಿದರು. ಆದರೆ ಮಾಳಿಂಗರಾಯ ಹೋಮಕ್ಕೆ ಗಂಧದ ಕಟ್ಟಿಗೆ ಯೊಟ್ಟಿ ಈ ಹೋಮದಲ್ಲಿ ಜಿಗಿದು ಮುಂಡಗನೂರು ಮಡ್ಡಿಯಲ್ಲಿ ಉದಯವಾದನಂತೆ”.[೨]

ಈ ಬಿಳಿಯ ಮಾಲಗಂಬವನ್ನು ಚೀನಿ ಕಲ್ಲುಗಳಿಂದ ಅಲಂಕೃತಗೊಳಿಸಿದ್ದಾರೆ. ಎರಡು ಮಾಲಗಂಬಗಳ ನಡುವೆ ಇತ್ತೀಚೆಗೆ ಕುದುರೆ ಹತ್ತಿನಿಂತ ಬೀರೇಶ್ವರನ ಕಲ್ಲಿನ ಮೂರ್ತಿಯನ್ನು ನಿಲ್ಲಿಸಲಾಗಿದೆ. ಗರ್ಭಗುಡಿಯ ಎದುರು ನವರಂಗಕ್ಕೆ ಹೋಗುವ ಎಡಬಲಗಳಲ್ಲಿ ನಾಗಪ್ಪ ಮತ್ತು ಹುಲಿಯ ಶಿಲ್ಪಗಳನ್ನು ಕಾಣಬಹುದು. ಮುಖ್ಯದ್ವಾರಕ್ಕೆ ಎರಡು ಬೃಹದಾಕಾರದ ಗಂಟೆಗಳನ್ನು ಕಟ್ಟಲಾಗಿದೆ. ಈ ಗಂಟೆಗಳನ್ನು ೧೯೪೦ರಲ್ಲಿ ತೂಗು ಹಾಕಲಾಗಿದೆ. ಸ್ವಲ್ಪ ದೂರದಲ್ಲಿ ಎಡಬದಿಗೆ ಅಂಬಲಿ ಮನೆಯೊಂದನ್ನು ೧೯೭೭ರಲ್ಲಿ ಕಟ್ಟಿಸಲಾಗಿದೆ. ಈಗ ಇಲ್ಲಿ ನಿತ್ಯವೂ ದಾಸೋಹ ನಡೆಯುತ್ತದೆ. ಈ ದಾಸೋಹ ಖರ್ಚು ಭಕ್ತರು ಕೊಟ್ಟ ಆದಾಯದಲ್ಲಿ ನಡೆಯುತ್ತದೆ. ಗುಡಿಯ ಹೊರಗೆ ಬಲಬದಿಯಲ್ಲಿ ಮೂರು ಸಣ್ಣ ಗುಡಿಗಳಿವೆ. ೧. ಮಾಯವ್ವನ ಗುಡಿ ೨. ಭರಮದೇವರ ಗುಡಿ ೩. ಕಂಬಾರ ಶಿವಕ್ಕನ ಗುಡಿ ಇದನ್ನು ದಾಟಿಕೊಂಡು ಹೋದರೆ ಅನೇಕ ಗದ್ದುಗೆಗಳಿವೆ. ಗುಡಿಯ ಹಿಂಬದಿಯಲ್ಲಿ ಸಿತಾಳ ಬಾವಿಯಿದೆ. ಈ ಸಿತಾಳ ಬಾವಿಯಿಂದಲೇ ದೇವರ ಸ್ನಾನಕ್ಕಾಗಿ ನಿತ್ಯವೂ ನೀರು ತರಲಾಗುತ್ತದೆ. ಈ ಬಾವಿಯಿರುವ ಹೊಲಕ್ಕೆ ಗುಡಿಹೊಲ ಎನ್ನುತ್ತಾರೆ. ತುಸು ದೂರದಲ್ಲಿ ಸದರಗಟ್ಟಿಯಿದೆ. ಈ ಸದರಗಟ್ಟಿ ತುಂಬಾ ಪ್ರಾಚೀನವಾದದ್ದು. ದೀಪಾವಳಿ ಜಾತ್ರೆಯಲ್ಲಿ ದೇವರ ಪಲ್ಲಕ್ಕಿ ಗುಡಿಯ ಪ್ರದಕ್ಷಣೆ ಮುಗಿಸಿದ ಮೇಲೆ ಈ ಕಟ್ಟೆಯ ಮೇಲೆ ಕುಳಿತುಕೊಳ್ಳುತ್ತದೆ.

ಗರ್ಭಗುಡಿ ಕಟ್ಟುವ ಕಾಲದಲ್ಲಿ ನಡೆದ ಘಟನೆ : ಗುಡಿ ಕಟ್ಟುವ ಕಾಲಕ್ಕೆ ಒಂದು ಘಟನೆ ನಡೆಯಿತೆಂದು ಇಲ್ಲಿಯ ಅರ್ಚಕರು ಹೇಳುತ್ತಾರೆ. ಈ ಕಟ್ಟಡದ ರಚನೆ ನಡೆದದ್ದು ಕರಿಸಿದ್ಧನ ಪರಮ ಭಕ್ತ ಮಾಳಪ್ಪನ ನೇತೃತ್ವದಲ್ಲಿಯ ಗರ್ಭಗುಡಿಯನ್ನು ಹಗಲಿಡಿ ಕಟ್ಟಿ ಮುಂಜಾನೆ ಬಂದು ನೋಡುವುದರೊಳಗೆ ರಾತ್ರಿ ಬಿದ್ದಿರುತ್ತಿತ್ತು. ಮಾಳಪ್ಪನಿಗೆ ಚಿಂತೆಯಾಯಿತು. ನೀನು ಕಟ್ಟು ಎಂದದ್ದರಿಂದ ಕಟ್ಟುತ್ತಿದ್ದೇನೆ. ಗುಡಿ ಏಕೆ ಹೀಗೆ ಬೀಳುತ್ತಿದೆ ಎಂದು ಕೇಳಿದ. ಆಗ ಅದಕ್ಕೆ ದೇವರು ನನ್ನ ಬೆನ್ನ ಹಿಂದೆ ಥರದಲ್ಲಿ ನೀನು ಜೀವಂತ ನಿಂತರೆ ಮಾತ್ರ ಗುಡಿ ನಿಲ್ಲುತ್ತದೆ ಎಂದನಂತೆ. ಮಕ್ಕಳ ಬಗ್ಗೆ ಚಿಂತೆಯಾಯಿತು. ಮಾಯಪ್ಪ ಆಗ ದೇವರನ್ನು ಕೇಳುತ್ತಾನೆ. ನೀನು ಹೇಳಿದಂತೆ ನಾನು ಥರದಲ್ಲಿ ನಿಲ್ಲುತ್ತೇನೆ. ಮುಂದೆ ನನ್ನ ಮಕ್ಕಳ ಗತಿಯೇನು ಎಂದನು. ಈ ಮಾತನ್ನು ಕೇಳಿಸಿಕೊಂಡ ದೇವರು ನಿನ್ನ ಮಕ್ಕಳಿಗಾಗಿ ಏನು ಕೇಳುತಿ ಕೇಳು? ಎಂದನಂತೆ. ದೇವರ ಮಾತಿಗೆ ಮಾಯಪ್ಪ ಒಂದು ಕ್ಷಣ ಯೋಚಿಸಿ ಕೊನೆಗೊಂದು ನಿರ್ಣಯಕ್ಕೆ ಬಂದ. ಮಾಯಪ್ಪ ದೇವರಿಗೆ ಹೇಳಿದ "ಭಕ್ತರಿಗೆ ಭಾಗ್ಯಕೊಡು, ನನ್ನ ಮಕ್ಕಳಿಗೆ ಬಡತನ ಕೊಡು. ಅವರಿಗೆ ಬೊಗಸಿ ಅಂಬಲಿ ತಪ್ಪಬಾರದು. ಅವರು ಸುಳ್ಳು ಹೇಳಬಾರದು" ಎಂದನಂತೆ. ದೇವರು ಮಾಯಪ್ಪನಿಗೆ ವಚನಕೊಟ್ಟು ಮೇಲೆ ಹಿಂಬದಿ ಥರದಲ್ಲಿ ನಿಂತ, ಅವನ ಮೇಲೆ ಗೋಡೆ ಕಟ್ಟಿದರು. ಆಗ ಗುಡಿ ಬೀಳಲಿಲ್ಲ. ಈ ಊರಲ್ಲಿ ಇರುವ ಪೂಜಾರಿಗಳು ಮರಳ ಮಾಯಪ್ಪನ ಸಂತತಿಯವರು. ಮಾಯಪ್ಪನು ತನ್ನ ವಂಶದವರಿಂದ ಮುಂದಿನ ಸಂತತಿಗೆ ತನ್ನ ಹೆಸರಿಡಬಾರದೆಂದು ವಚನ ತೆಗೆದುಕೊಂಡಿದ್ದಾನೆ. ಅರ್ಚಕ ಸಂತತಿಯವರೂ ಅವನ ಹೆಸರು ಇಡುವುದಿಲ್ಲ. "ಮುಂದಿನ ಸಂತತಿಯಲ್ಲಿ ಯಾರಾದರೂ ತೀರಿಕೊಂಡಾಗ ಗಡಿಗೆ ತೆಗೆದುಕೊಂಡು ಗೋರಿಯನ್ನು ಸುತ್ತು ಹಾಕಬೇಡಿರಿ, ತಲೆದಂಡ ಕೊಡಬೇಡಿರಿ, ಮೀಸೆ ತೆಗೆಯಬೇಡಿರಿ" ಎಂದು ಹೇಳಿದ ಮಾಯಪ್ಪನ ಈ ಮಾತುಗಳನ್ನು ಅವನ ಸಂತತಿಯ ಪೂಜಾರಿಗಳು ಪಾಲಿಸುತ್ತಾ ಬಂದಿದ್ದಾರೆ.

ಪೂಜಾ ವಿಧಾನ : ಕರಿಸಿದ್ಧೇಶ್ವರನಿಗೆ ಪ್ರತಿದಿನ ಮುಂಜಾನೆ ಮತ್ತು ಸಾಯಂಕಾಲ ಎರಡು ಹೊತ್ತು ಪೂಜೆ ಮಾಡಲಾಗುತ್ತದೆ. ಮುಂಜಾನೆ ಪತ್ರಿಪೂಜೆ, ಸಾಯಂಕಾಲ ಶಲ್ಲೆಯ ಪೂಜೆ ಎನ್ನುವ ಎರಡು ಪೂಜಾ ಪದ್ಧತಿಗಳು ಬಳಕೆಯಲ್ಲಿವೆ. 'ಪತ್ರಿಪೂಜೆ' ಎಂದರೆ ಅವರಿ ಪತ್ರಿಯ ಸಂಗಡ ಬೇರೆ ಬೇರೆ ಹೂ ತಂದು ದೇವರಿಗೆ ಏರಿಸಲಾಗುವುದು. 'ಶಲ್ಲೆ ಪೂಜೆ' ಎಂದರೆ ಅಂಗಿ ತೊಡಿಸಿ ಶಲ್ಯೆ ಹೊದಿಸುವುದು. ಪೂಜೆಯ ಸಮಯದಲ್ಲಿ ಅರ್ಚಕರು ಅಂಗಿ ಕಳೆದು ತಲೆಯ ಮೇಲೆ ಪಟಿಕ ಮಾತ್ರ ತೊಟ್ಟು ಪೂಜೆ ಮಾಡುತ್ತಾರೆ. ಆಗ ದೇವರಿಗೆ ಸೀಗೆಕಾಯಿ ಜಳಕ ಮಾಡಿಸುವ ಸಂಪ್ರದಾಯವಿದೆ. ಇದಾದ ನಂತರ ಹೂ-ಪತ್ರಿ ಏರಿಸಿ ದೇವರಿಗೆ ಧೂಪಾರತಿ ಬೆಳಗುತ್ತಾರೆ.

ಚೌಕಿ (ಬೆಳ್ಳಿಯದು) ಗುಂಡುಗಡಿಗೆ (ಬೆಳ್ಳಿಯದು) ಉಡುದಾರ (ಬೆಳ್ಳಿಯದು), ಚಂದ್ರಹಾರ (ಬಂಗಾರದ್ದು), ಕಡ್ಡಿಸರ (ಬಂಗಾರದ್ದು), ಲಿಂಗವಸ್ತು, ರುದ್ರಾಕ್ಷಿಸರ ಮುಂತಾದವುಗಳನ್ನು ಹಾಕಿ ದೇವರನ್ನು ಅಲಂಕರಿಸಲಾಗುತ್ತದೆ. ಅಮಾವಾಸ್ಯೆಯ ದಿವಸ ಮುಂದಾಸ(ಪಟಿಕೆ)ದಿಂದ ದೇವರನ್ನು ಸಿಂಗರಿಸಿ ಪೂಜಿಸಲಾಗುವುದು. ಶ್ರಾವಣಮಾಸದ ನಾಲ್ಕು ಸೋಮವಾರಗಳಂದು ೨ಜ (ಮುಖ) ಇಟ್ಟು ಪೂಜಿಸಲಾಗುವುದು.

ರವಿವಾರ ಈ ದೇವರ ವಾರ. ರವಿವಾರ ನಡೆಯುವ ಪೂಜೆ ವಿಶೇಷವಾಗಿದೆ. ಅಂದು 'ಕುಲದವಾರ' ಅಥವಾ 'ದೈವದವಾರ' ಎನ್ನುವ ಕಾರಣಕ್ಕಾಗಿ ಸಾಮಾನ್ಯ ದಿನಗಳಿಗಿಂತಲೂ ವಿಶೇಷ ಜನದಟ್ಟಣೆ ಇರುತ್ತದೆ. ನಿಜವಾಗಿ ಇವನು ಹುಟ್ಟಿದ್ದು ಶ್ರಾವಣಮಾಸದ ಮೂರನೆಯ ಸೋಮವಾರ ನೂಲು ಹುಣ್ಣಿಮೆಯ ದಿನ ಎನ್ನುವುದು ಕರಿಯಪ್ಪ ಪೂಜಾರಿಯವರ ಅಭಿಪ್ರಾಯ. ಇಂದಿಗೂ ಕರಿಸಿದ್ದೇಶ್ವರನ (ಬೀರಪ್ಪನ) ಭಕ್ತರಿಗೆ ರವಿವಾರವೇ ಪವಿತ್ರ ವಾರವೆನಿಸಿದೆ.

ಜಾತ್ರೆ ಹಬ್ಬಗಳು

ಇಲ್ಲಿ ವರ್ಷದಲ್ಲಿ ಎರಡು ಬಾರಿ ಜಾತ್ರೆ ನೆರೆಯುತ್ತದೆ. ಒಮ್ಮೆ ದೀಪಾವಳಿಗೆ, ಮತ್ತೊಮ್ಮೆ ಯುಗಾದಿಗೆ. ಪುರಾತನ ಕರಿಸಿದ್ದೇಶ್ವರ ದೇವಸ್ಥಾನ ಅನೇಕ ಜಾತ್ರೆ ಉತ್ಸವಗಳನ್ನು ಬಹುಕಾಲದಿಂದ ರೂಢಿಸಿಕೊಂಡು ಬಂದಿದೆ. ಈ ಸಂದರ್ಭಗಳಲ್ಲಿ ದೂರದೂರಿಂದ ಸಹಸ್ರಾರು ಭಕ್ತರು ದೇವಾಲಯಕ್ಕೆ ಆಗಮಿಸಿ ಉತ್ಸವಗಳಲ್ಲಿ ಭಾಗಿಯಾಗುತ್ತಾರೆ. ಈ ಸಂದರ್ಭದಲ್ಲಿ ದೇವರಿಗೆ ಸಂಬಂಧಪಟ್ಟ ಅನೇಕ ದೈವಿಕ ಆಚರಣೆ, ಸಂಪ್ರದಾಯಗಳು ಉಲ್ಲೇಖನೀಯ.

ದೀಪಾವಳಿ : ಭರಮ ಹಬ್ಬದೊಂದಿಗೆ ಜಾತ್ರೆಯ ಕಲಾಪಗಳು ಪ್ರಾರಂಭಗೊಳ್ಳುತ್ತವೆ. ಭರಮಹಬ್ಬದ ದಿನ ಹೊತ್ತೇರುವುದುರೊಳಗಾಗಿ ಗುಡಿ ತೊಳೆದು ಗರ್ಭಗುಡಿಗೆ ಸುಣ್ಣ ತುಂಬಲಾಗುವುದು. ತರುವಾಯ ದೇವರನ್ನು ಶಲ್ಯೆ, ಮುಂಡಾಸದಿಂದ ಅಲಂಕರಿಸಿ ಪೂಜಿಸಲಾಗುವುದು.

ಭರಮಹಬ್ಬದ ಸಂಜೆ ದೇವರನ್ನು ತೆಗೆದುಕೊಂಡು ಹೊಳೆ ನೀರಿಗೆ ಹೋಗುತ್ತಾರೆ. ದೀಪಾವಳಿ ಮತ್ತು ಯುಗಾದಿ ಹಬ್ಬಗಳಿಗೊಮ್ಮೆ ಹಿರಿಹೊಳೆ ಕೃಷ್ಣಾನದಿಯ ನೀರಿನಿಂದಲೇ ಕರಿಸಿದ್ದೇಶ್ವರನಿಗೆ ಜಳಕವಾಗಬೇಕೆನ್ನುವ ಸಂಪ್ರದಾಯವಿದೆ. ಇದಕ್ಕಾಗಿ ಕೊಣ್ಣೂರು ಮತ್ತು ಸುತ್ತಮುತ್ತಲಿನ ಹಳ್ಳಿಯ ಪೂಜಾರಿಗಳು, ಭಕ್ತರು ಹೆಗಲ ಮೇಲೆ ಕೊಡ ತೆಗೆದುಕೊಂಡು ಹೊಳೆಗೆ ಹೋಗುತ್ತಾರೆ. ದಾರಿಯಲ್ಲಿ ನೂರಾರು ಸಂಖ್ಯೆಯ ಪಂಜು ಹಚ್ಚುವುದು ಈ ಆಚರಣೆಯ ವಿಶೇಷ. ಹೊಳೆಯಲ್ಲಿ ಜಕಣೆಯರಿದ್ದಾರೆಂಬ ನಂಬಿಕೆಯಿರುವುದರಿಂದ ತಾವು ಒಯ್ದಿರುವ ಬಾನ ಕೂಡಿಸಿ, ಪೂಜೆಮಾಡಿ ನೈವೇದ್ಯ ಹಿಡಿಯುತ್ತಾರೆ. ತರುವಾಯ ಎಲ್ಲರೂ ಊಟ ಮಾಡಿ ಕೊಡಗಳಲ್ಲಿ ನೀರು ತುಂಬಿಕೊಂಡು ಹೊರಡುತ್ತಾರೆ.

ಹೂವು ತರುವ ಆಚರಣೆಗೆ ವಿಜಾಪುರದವರೆಗೂ ನಡೆಯುತ್ತಲೇ ಬರುತ್ತಾರೆ. ಇದು ಹಿಂದಿನ ಕಾಲದಿಂದಲೂ ರೂಢಿಯಲ್ಲಿರುವ ವಿಧಾನ. ಇವರಿಗೆ ಅಲ್ಲಲ್ಲಿಗೆ ಬಾಬುಗಳಿವೆ, ದಾರಿಯಲ್ಲಿ ಮಾಲೆಗೆ ಆರತಿ ಪೂಜೆಗಳಾಗುತ್ತವೆ. ತೊರವಿ, ಬಬಲ್ಲೇಶ್ವರ, ನಿಡೋಣಿ, ಸಂಗಾಪುರ, ಚಿಕ್ಕಲಕಿ, ಚಿನಗುಂಡಿ, ಮುಂಡಗನೂರ, ಕೋಳೂರು, ಸಿಂಗನೂರ, ಬುದ್ನಿ ಇಷ್ಟು ಊರುಗಳ ಮಾರ್ಗದ ಮುಖಾಂತರ ಮಾಲೆ ಬರುತ್ತದೆ. ಪಟ್ಟಣದ ಹೂ ತರುವವರು ಸೀಗೆ ಹುಣ್ಣಿಮೆಯ ಮರುದಿನ ಹೋಗಿರುತ್ತಾರೆ. ಹೀಗೆ ಹೂವಿನವರು ಮತ್ತು ಹೊಳೆ ನೀರಿನವರು ಸೇರಿದ ಮೇಲೆ ಗುಡಿಯನ್ನು ಪ್ರವೇಶಿಸುತ್ತಾರೆ. ಚತುರ್ದಶಿಯ ನಸುಕಿನ ೩ ೪ ಗಂಟೆಯ ಸುಮಾರಿಗೆ ಹೊಳೆ

ನೀರಿನವರು ಮತ್ತು ಹೂವಿನವರು ಗುಡಿಯನ್ನು ಪ್ರವೇಶಿಸಿದಾಗ ಡೊಳ್ಳು ಬಡಿತದ ಶಬ್ದ, ಕಹಳೆಯ ಧ್ವನಿ, ಹರಹರ ಮಹಾದೇವ ಎಂಬ ತಾರಕಸ್ವರದ ಸ್ಮರಣೆ ಎಲ್ಲವೂ ಕೂಡಿ ಗುಡಿ ದಿಮಿಗುಡುತ್ತದೆ. ಇದಿಷ್ಟು ನರಕ ಚತುರ್ದಶಿ ನಡೆಯುವ ಮುಖ್ಯ ಆಕರ್ಷಣೆ.

ಪಾಡ್ಯದಂದು ಜಾತ್ರೆ ಪ್ರಾರಂಭವಾಗುತ್ತದೆ. ಅಂದೆ ಪಲ್ಲಕ್ಕಿ ಪ್ರದಕ್ಷಿಣೆ, ಬಾವಿನವರಾದ ಶ್ರೀ ಮರನೂರ ಅವರ ಮನೆಯಿಂದ ಅಂಬಲಿಯ ಕೊಡಗಳು ಬರುತ್ತವೆ. ಅವರು ಊದಿಸುತ್ತ, ಬಾರಿಸುತ್ತ ಅದನ್ನು ತಂದು ಅಂಬಲಿ ಮನೆಯಲ್ಲಿಡುತ್ತಾರೆ. ಈ ಕೊಡಗಳು ಬರುವುದು ಮಧ್ಯಾಹ್ನ ಮೂರು ಗಂಟೆಯ ಸುಮಾರಿಗೆ. ಇದಾದ ಮೇಲೆ ಕೊಣ್ಣೂರಿನ 'ಹೂಗಾರ ಮನೆ'ಯಿಂದ 'ಚೆಂಡು ಹೂವಿನ ಮಾಲೆ' ಬರುತ್ತದೆ. ಆ ಮಾಲೆಗಳನ್ನು ಸದರಿಗೆ ಕಟ್ಟಿದ ಕೂಡಲೇ ಪಲ್ಲಕ್ಕಿ ಏಳುತ್ತವೆ. ಏಳುವ ಪಲ್ಲಕ್ಕಿಗಳು ಎರಡಾಗಿದ್ದು ಇವು ಗುಡಿಯನ್ನು ಐದು ಸುತ್ತ ಹಾಕುತ್ತವೆ. ಈ ಸಂದರ್ಭದಲ್ಲಿ ಹೊರಡುವ ನಾನಾ ವಾದ್ಯಗಳ ಧ್ವನಿ ಮುಗಿಲು ಮುಟ್ಟುವಂತಿರುತ್ತದೆ. ನೆರೆದಿರುವ ಭಕ್ತರು, ಪೂಜಾರಿಗಳು ಪ್ರದಕ್ಷಿಣೆ ಹಾಕುವ ಪಲ್ಲಕ್ಕಿಗಳಿಗೆ ಭಂಡಾರ, ಎಣ್ಣೆ, ಕಾರಿಕ ಹಾರಿಸುತ್ತಾರೆ. ನೆರೆದಿರುವ ಸಾವಿರಾರು ಜನ ಭಕ್ತರು ಹಾರಿಸುವ ಭಂಡಾರದಿಂದ ವಾತಾವರಣವೆಲ್ಲ ಭಂಡಾರಮಯವಾಗುತ್ತದೆ. ಪಲ್ಲಕ್ಕಿಗಳ ಸಮೀಪದಲ್ಲಿರುವ ಭಕ್ತರ ಪೂಜಾರಿಗಳ ಬಟ್ಟೆಗಳೆಲ್ಲ ಹಳದಿ ವರ್ಣಕ್ಕೆ ತಿರುಗುತ್ತವೆ. ಆದರೆ ಈ ಭಂಡಾರದ ಕಣಕಣಗಳು ಗಾಳಿಯಲ್ಲಿ ತೇಲಾಡುತ್ತ ಶಿವನಿಗೆ ಸೇರುತ್ತವೆ ಎನ್ನುವ ನಂಬಿಕೆ ಈ ಭಕ್ತರದು. ಪಲ್ಲಕ್ಕಿಯಲ್ಲಿ ಕೊಡುವ ದೇವರ ಉತ್ಸವ ಮೂರ್ತಿಯೆಂದು ಪ್ರತ್ಯೇಕವಿಲ್ಲ. ಗುಡಿಯಲ್ಲಿಯ ಒಟ್ಟು ೨೪ ಮೂರ್ತಿಗಳ ಪೈಕಿಯೇ ಎರಡನ್ನು ಈ ಪಲ್ಲಕ್ಕಿಗಳಲ್ಲಿ ಕೊಡಿಸುತ್ತಾರೆ.

ಯುಗಾದಿ : ಯುಗಾದಿಯಲ್ಲಿಯೂ ದೇವರಿಗೆ ವೈಭವದ ಪೂಜೆ ನಡೆಯುತ್ತದೆ. ಯುಗಾದಿಯ ಅಮವಾಸ್ಯೆ ಪಾಡ್ಯಗಳಂದು ವಿಶೇಷ ಪೂಜೆಯಿರುತ್ತದೆ. ಈ ಆಚರಣೆಯ ಸಂದರ್ಭದಲ್ಲೂ ದೇವರಿಗೆ ಪಟ್ಟಣದ ಹೂ ಬರುತ್ತವೆ. ಅಮವಾಸ್ಯೆ, ಪಾಡ್ಯಗಳಂದು ದೇವರಿಗೆ ಅಭಿಷೇಕ ನಡೆಯುತ್ತದೆ. ದೀಪಾವಳಿಯತೆಯೇ ಎಲ್ಲ ಪೂಜಾ ವ್ಯವಸ್ಥೆಯಿರುವ ದೀಪಾವಳಿಯಲ್ಲಿ ಕೇವಲ ಗರ್ಭಗುಡಿಗೆ ಸುಣ್ಣ ತುಂಬಿದರೆ ಯುಗಾದಿಯಲ್ಲಿ ಸಂಪೂರ್ಣ ಗುಡಿಗೆ ಸುಣ್ಣ ತುಂಬಲಾಗುತ್ತದೆ. ಯುಗಾದಿಯಲ್ಲೂ ಹಿರಿ ಹೊಳೆಯ ನೀರು ಪಾಡ್ಯದ ನಸುಕಿನ ಮೂರು ಗಂಟೆಯ ಸುಮಾರಿಗೆ ದೇವರ ಜಳಕಕ್ಕೆ ಬರುತ್ತದೆ. ಹೊಳೆನೀರಿನವರು, ಹೂವಿನವರು ಕೂಡಿಯೇ ಗುಡಿಯನ್ನು ಪ್ರವೇಶಿಸುತ್ತಾರೆ. ದೀಪಾವಳಿಯಂತೆಯೇ, ಶ್ರಾವಣ ಸೋಮವಾರ ಎಲ್ಲ ಮೂರ್ತಿಗಳನ್ನಿಟ್ಟು ಪೂಜೆ ಮಾಡಲಾಗುತ್ತದೆ. ಈ ಬಗೆಯ ಪೂಜೆಗೆ 'ದಶವತಾರ ಪೂಜೆ' ಎನ್ನುವರು. ಪ್ರತಿ ಅಮವಾಸ್ಯೆಗೊಮ್ಮೆ ವಿಶೇಷ ಪೂಜೆಯಿದ್ದು ಮುಂಜಾನೆಯಿಂದ ಸಂಜೆಯವರೆಗೆ ಭಕ್ತರು ದೇವರ ದರ್ಶನಕ್ಕೆ ಬರುತ್ತಾರೆ. ಈ ಹಬ್ಬದ ದಿನಗಳಿಂದಲ್ಲದೆ ಪ್ರತಿ ರವಿವಾರ ಗುಡಿಯಲ್ಲಿ ಹಾಡಿಕೆಯಿರುತ್ತದೆ.

ದೀಪಾವಳಿ ಹಬ್ಬದ ಜಾತ್ರೆಯಲ್ಲಿ ಗುಡಿಯ ಎದುರಿನ ಬಯಲಿನಲ್ಲಿ ಬಗೆ ಬಗೆಯ ಅಂಗಡಿಗಳು ಸಾಲುಗಟ್ಟುತ್ತವೆ. ಜಾತ್ರೆಯಲ್ಲಿ ರಾತ್ರಿ ಸಂದರ್ಭಗಳಲ್ಲಿ ಹಾಲುಮತದ ದೈವಗಳಿಗೆ ಮತ್ತು ಇತರೆ ವಸ್ತುಗಳನ್ನು ಆಧರಿಸಿದ ಬಯಲಾಟಗಳಾಗುತ್ತವೆ. ಹಾಲುಮತದವರ ವಿಶೇಷವಾದ ದಟ್ಟಿ ಕುಣಿತ ಮತ್ತು ಡೊಳ್ಳಿನ ಕುಣಿತಗಳು

ನಡೆಯುತ್ತವೆ. ಹಗ್ಗ ಜಗ್ಗುವುದು, ಕಲ್ಲು ಎತ್ತುವುದು, ಕಬಡ್ಡಿ, ಸೈಕಲ್, ಕುಸ್ತಿ ಮುಂತಾದ ಬಗೆ ಬಗೆಯ ದೈಹಿಕ ಕಸರತ್ತುಗಳನ್ನು ಏರ್ಪಡಿಸುವುದುಂಟು.

೧೫. ತಳಗಿಹಾಳ

ಬಾಗಲಕೋಟೆ ಜಿಲ್ಲೆ ಚಿಕ್ಕ ತಳಗಿಹಾಳ ಗ್ರಾಮವು ಹಾಲುಮತದ ೩೦೦ ಮನೆಗಳನ್ನು ಹೊಂದಿದೆ. ಇಲ್ಲಿನ ಬೀರಪ್ಪನ ದೇವಾಲಯವು ಪೂರ್ವಕ್ಕೆ ಮುಖ ಮಾಡಿರುವ ಈ ದೇವಸ್ಥಾನವು ಪುರಾತನವಾದದ್ದೆಂದೂ ಮೊದಲು ಕಟ್ಟೆಯಾಕಾರದ ದೇವಸ್ಥಾನವಿದ್ದಿತೆಂದೂ ನಂತರ ಕೆಲವು ವರ್ಷಗಳಿಂದೀಚೆಗೆ ಐದು ಕಮಾನಿನ ಕಲ್ಲಿನ ಗರ್ಭಗುಡಿ ಎರಡು ಅಂಕಣದ ಪಡಸಾಲೆ ಮಣ್ಣಿನ ಮೇಲ್ಹಾವಣಿ ಹೊಂದಿದೆ. ವರ್ಷದಲ್ಲಿ ಎರಡು ಬಾರಿ ಅಂದರೆ ಯುಗಾದಿ ಹಾಗೂ ದೀಪಾವಳಿ ವೇಳೆಯಲ್ಲಿ ಒಂದು ದಿನ ಜಾತ್ರೆ-ಉತ್ಸವ ನಡೆಯುವುದೆಂದು ಅರ್ಚಕರಾದ ರಾಮಚಂದ್ರಪ್ಪನವರು ಹೇಳುತ್ತಾರೆ.[೨೨]

ದೇವಾಲಯದ ಸುತ್ತಲೂ ಪೌಳಿಯಿದ್ದು ಪ್ರಶಾಂತವಾದ ಸ್ಥಳವಾಗಿದೆ. ನಿತ್ಯ ಎರಡು ಹೊತ್ತು ಪೂಜೆಗೊಳ್ಳುತ್ತಿರುವ ಈ ದೇವಾಲಯದಲ್ಲಿ ಬೀರಪ್ಪನ ಮೂಲ ಕಾಡುಗಲ್ಲಿನ ಮೂರ್ತಿಯಿದೆ. ಉತ್ಸವ ಸಂದರ್ಭದಲ್ಲಿ ಯುಗಾದಿಯಲ್ಲಿ ಈ ದೇವರಿಗೆ ಹಿರೇಹೊಳೆ ಸ್ನಾನ, ದೀಪಾವಳಿಯಲ್ಲಿ ಚಿಗಹೊಳೆಯ ಸ್ನಾನ ಮಾಡಿಸುವ ಪಾರಂಪರಿಕ ಸಂಪ್ರದಾಯವಿದೆ. ಅಂದು ರಾತ್ರಿಯಿಡಿ ಡೊಳ್ಳಿನ ಹಾಡಿಕೆ ಮಾಡಲಾಗುತ್ತದೆ. ಮರುದಿನ ಅನ್ನ ಪ್ರಸಾದವು ನಡೆಯುವುದು. ಈ ದೇವಸ್ಥಾನದ ಸ್ವಲ್ಪ ದೂರದಲ್ಲಿ ದಕ್ಷಿಣಕ್ಕೆ ಮುಖಮಾಡಿರುವ ಭರಮದೇವರ ಕಟ್ಟೆಯಾಕಾರದ ದೇವಸ್ಥಾನವಿದೆ. ಮನಸಿಟ್ಟು ನಡೆದುಕೊಂಡವರನ್ನು ಈ ದೇವರು ಎಂದೂ ಕೈಬಿಟ್ಟಿಲ್ಲ ಎನ್ನುವ ಪೂಜಾರಿಯವರ ಹೇಳಿಕೆ. ಈ ದೇವರಿಗೆ ಇವಾಗ ಬೆಳ್ಳಿಯ ಮುಖವನ್ನು ಮಾಡಿಸಿದ್ದಾರೆಂದು ಊರ ಜನರು ಹೇಳುತ್ತಾರೆ.

೧೬. ಶಿರಗುಪ್ಪಿ ಗ್ರಾಮ

ಬಾಗಲಕೋಟೆ ಜಿಲ್ಲೆಯಲ್ಲೆ ಹಾಲುಮತದವರೇ ಹೆಚ್ಚಿರುವ ಊರೆಂದರೆ ಶಿರಗುಪ್ಪಿ ಗ್ರಾಮ. ಬೀರಪ್ಪದೇವರ ಇತಿಹಾಸ ಕುರಿತು ಇಲ್ಲಿಯ ಜನರನ್ನು ಕೇಳಿದಾಗ ನಿತ್ಯ ಎರಡು ಹೊತ್ತು ಪೂಜಿಸುತ್ತಾರೆ. ೪೦ ವರ್ಷಗಳಿಂದೀಚೆಗೆ ಗರ್ಭಗುಡಿ ಕಟ್ಟಿದ್ದಾರೆ. ಈ ಗುಡಿಯು ಮೂರು ಅಂಕಣದ ಬಂಕ ಐದು ಕಮಾನಿನ ಕಲ್ಲಿನ ಮೇಲ್ಹಾವಣೆಯನ್ನು ಹೊಂದಿದೆ. ಹೊರಗಿನ ಬಂಕ ಡಬ್ಬಹಲಗೆ ಹೊಂದಿದೆ. ಈ ದೇವರ ಉತ್ಸವವು ವರ್ಷದಲ್ಲಿ ಎರಡು ಸಾರಿ ಜರಗುತ್ತಿದೆ. ದೇವಾಲಯದ ಎತ್ತರವಾದ ಪ್ರವೇಶದ ಮೇಲೆ ಸ್ಥಾಪಿತವಾಗಿದ್ದು ಸುತ್ತಲೂ ಕೋಟೆಯ ಗೋಡೆಯಿದೆ. ಉತ್ತರ ಬದಿಯಿಂದ ದೇವಸ್ಥಾನಕ್ಕೆ ಪ್ರವೇಶಿಸಲು ಮಹಾದ್ವಾರವಿದೆ.

ಮುಖ್ಯ ದೇವಾಲಯದ ದಕ್ಷಿಣ ಭಾಗದಲ್ಲಿ ಗರ್ಭಗೃಹದಲ್ಲಿ ಕಾಡುಗಲ್ಲಿನ ಬೀರಪ್ಪನ ಲಿಂಗವಿದೆ. ಇದು ಆರರಿಂದ ಏಳು ಇಂಚುಗಳಷ್ಟು ಎತ್ತರವಾಗಿದ್ದು ಸುಮಾರು ಹತ್ತು ಇಂಚುಗಳಷ್ಟು ವ್ಯಾಸವುಳ್ಳದ್ದಾಗಿದೆ. ಇದರ ಸುತ್ತಲೂ ಪಾಣಿಪೀಠವನ್ನು ಕೂಡಿಸಲಾಗಿಲ್ಲ. ನೈಸರ್ಗಿಕವಾದ ಬಂಡೆಗಲ್ಲು ಹೊರಗೆ ಸ್ಪಷ್ಟವಾಗಿ

ಕಾಣುತ್ತದೆ. ಇದರ ಹಿಂಭಾಗದಲ್ಲಿ ಒಂದು ಶಿಲಾಫಲಕ ಸ್ಥಾಪಿಸಲಾಗಿದ್ದು, ಅದರ ಮೇಲೆ ಅಶ್ವರೋಹಿಯಾದ ಬೀರಪ್ಪನ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಈ ಶಿಲಾಫಲಕ ಎತ್ತರ ಸುಮಾರು ಎರಡು ಅಡಿ. ಮುಖ್ಯ ದೇವಾಲಯಕ್ಕೆ ಹೋಗುವ ದಾರಿಯ ಎಡ ಭಾಗದಲ್ಲಿ ಅಂದರೆ ದೇವಸ್ಥಾನದಿಂದ ಸುಮಾರು ಅರ್ಧ ಮೈಲು ಅಂತರದಲ್ಲಿ ಪಶ್ಚಿಮಕ್ಕೆ ಎರಡು ಶಿಬಾರಗಳಿವೆ. ಇವುಗಳಲ್ಲಿ ಮೊದಲಿನದು ಅಷ್ಟೇನೂ ಸ್ಪಷ್ಟವಾದ ಆಕಾರದಲಿಲ್ಲ. ಎರಡನೆಯದು ಮಾತ್ರ ಅಚ್ಚುಕಟ್ಟಾದ ರಚನೆಯಾಗಿದೆ. ಅಲ್ಲಿನ ಜನ ದೇವರ ಉತ್ಸವ ಮೂರ್ತಿ ಭಾರತಹುಣ್ಣಿಮೆಯ ಜಾತ್ರೆಯಲ್ಲಿ ಈ ಎರಡೂ ಶಿಬಾರಗಳಿಗೆ ಬಂದು ಹೋಗುವ ಪರಿಪಾಠವಿದೆ.

ಯುಗಾದಿಯ ಉತ್ಸವದಲ್ಲಿ ದೇವರು ಹಿರೆಹೊಳೆ ಸ್ನಾನ ಮಾಡಿದರೆ ದೀಪಾವಳಿಯಲ್ಲಿ ಚಿಗಹೊಳಿಯಲ್ಲಿ ಸ್ನಾನ ಮಾಡಿ ದೇವರು ತನ್ನ ಗದ್ದುಗೆಗೆ ಕುಳಿತ ನಂತರ ಆ ಒಂದೊಂದು ದಿನದ ಉತ್ಸವದಲ್ಲಿ ಸಜ್ಜಕ, ಅನ್ನಪ್ರಸಾದ ನಡೆಯುವುದು. ದೇವರು ಮೂರು ಬೆಳ್ಳಿಯ ಮುಖಗಳಿದ್ದು ಪ್ರತಿ ಹಬ್ಬ ಹುಣ್ಣಿಮೆಗೆ ರುಮಾಲು, ಅಂಗಿ ತೊಡಿಸಿ ಸದರಿ ಮಾಡುವ ಪದ್ಧತಿ ರೂಢಿಯಲ್ಲಿದೆ. ಉತ್ಸವದ ಸಂದರ್ಭದಲ್ಲಿ ಇಡೀ ರಾತ್ರಿ ಡೊಳ್ಳಿನ ಹಾಡುಗಳು ನಡೆಯುತ್ತದೆ. ಎಲ್ಲಾ ಜಾತಿಯವರು ಭೇದಭಾವವಿಲ್ಲದೆ ಹಾಡುಗಾರಿಕೆಯಲ್ಲಿ ಪಾಲ್ಗೊಳ್ಳುತ್ತಾರೆ.

ಇಲ್ಲಿ ಮೊದಲು ಬೀರಪ್ಪ ಕಾಡುಗಲ್ಲಿನ ರೂಪದಲ್ಲಿದ್ದು ಇತ್ತೀಚೆಗೆ ಅವನಿಗೆ ಬೆಳ್ಳಿಯ ಮುಖ ಮಾಡಿಸಿ ಪೂಜಿಸುತ್ತಾರೆ. ಸ್ವಲ್ಪ ದೂರದಲ್ಲಿ ದಕ್ಷಿಣಾಭಿಮುಖವಾಗಿರುವ ಹಳೆಯ ಭರಮಪ್ಪನ ಗುಡಿಯು ಕಟ್ಟೆಯಾಕಾರ ದಲ್ಲಿದೆ.

೧೭. ಮುರನಾಳ ಗ್ರಾಮ

ಬಾಗಲಕೋಟೆ ಜಿಲ್ಲೆ ಮುರನಾಳ ಗ್ರಾಮವು ಸುಮಾರು ೨೦೦ ಮನೆತನಗಳು ಹಾಲುಮತಸ್ಥರವು ಇವೆ. ಈ ಗ್ರಾಮವು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸಾಕಷ್ಟು ಪ್ರಗತಿ ಸಾಧಿಸಿದೆ. ಊರಿನ ಪಶ್ಚಿಮ ದಿಕ್ಕಿನ ಕಡೆಗೆ ನಡೆದರೆ ಅಲ್ಲಿ ಸಿಗುವ ಪೂರ್ವಾಭಿಮುಖ ವಾಗಿರುವ ದೇವಸ್ಥಾನವೇ ಬೀರಪ್ಪನ ದೇವಸ್ಥಾನ. ಇದನ್ನು ೨೫-೩೦ ವರ್ಷಗಳಿಂದೀಚೆಗೆ ನಿರ್ಮಿಸಲಾಗಿದೆ. ದೇವಸ್ಥಾನ ಗರ್ಭಗುಡಿ ಹಾಗೂ ಅಂಕಣದ ಬಂಕವನ್ನು ಹೊಂದಿದೆ. ಮೇಲ್ಛಾವಣಿ ಹಾಗೂ ಗೋಡೆ ಕಲ್ಲಿನಿಂದ ನಿರ್ಮಿಸಲಾಗಿದೆ. ಗರ್ಭಗುಡಿಯ ಮೇಲ್ಗಡೆ ಇರುವ ಕಳಸವನ್ನು ನೋಡಿಯೇ ಆನಂದಿಸಬೇಕು. ಒಳಗಡೆ ಎರಡು ಹಿತ್ತಾಳೆ ಎರಡು ಬೆಳ್ಳಿಯ ಮುಖವಿರುವ ಬೀರಪ್ಪನ ಮೂರ್ತಿಗಳು ಕಳೆಭರಿತವಾಗಿವೆ. ದೇವಸ್ಥಾನದ ಮುಂದೆ ವಿಶಾಲವಾದ ಕಾಂಪೌಂಡ ಇದ್ದು, ಒಳಗಡೆ ಬಾವಿ ಇದೆ. ಬಲಗಡೆ ಒಂದು ಮಸೀದಿ, ಬಸವಣ್ಣ ಹಾಗೂ ಈಶ್ವರಲಿಂಗನ ಪುಟ್ಟ ಪುಟ್ಟ ಗುಡಿಗಳಿದ್ದು ಎದುರಿಗೆ ಭರಮದೇವರ ಗುಡಿಯೂ ಇದೆ. ಸುಮಾರು ಒಂದು ಶತಮಾನದ ಹಿಂದೆ ನಿರ್ಮಿಸಿದ ನಾಲ್ಕು ಉಗ್ರಾಣ ಕೋಣೆಗಳಿವೆ. ದೇವಸ್ಥಾನದ ಮುಂದೆ ಬೇವು ಮತ್ತು ಅರಳಿ ಮರಗಳು ಹೊಂದಿದ ಅಚ್ಯುತರಾಯನ ವಿಶಾಲ ಕಟ್ಟೆ ಮಂಗಳ ಕಾರ್ಯಕ್ಕೆ ಅತ್ಯುಪಯುಕ್ತವಾಗಿದೆ. ಹೀಗಿರುವ ದೇವಸ್ಥಾನದ ಸ್ಥಿತಿಗತಿಯನ್ನು ಈ ಹಿಂದೆ ಹೇಗಿತ್ತೆಂದು ಇಲ್ಲಿಯ ಪೂಜಾರಿ ಹೇಳುತ್ತಾರೆ. ಈ ದೇವಸ್ಥಾವು ಸುಮಾರು ೪-೫ ತಲೆಮಾರುಗಳಿಂದ ಬಂದಿದ್ದು, ಕಲ್ಲು ಮಣ್ಣಿನ ಗೋಡೆ ಮೇಲ್ಛಾವಣೆ ಹೊಂದಿತ್ತೆಂದು. ಸುತ್ತಿಗೆ ಈ

ದೇವರ ಪ್ರಮುಖ ಪೂಜಾ ವಸ್ತುವೆಂದು ಈ ಮೊದಲು ಬಹುಶಃ ಇಲ್ಲಿ ಉದ್ಭವಮೂರ್ತಿ ಇತ್ತೆಂಬುದು ಹಿರಿಯರ ಹೇಳಿಕೆ".[೨೮]

೧೮. ದಾವಣಗೆರೆ

ಜಿಲ್ಲಾ ಕೇಂದ್ರವಾದ ದಾವಣಗೇರಿಯಲ್ಲಿ ಸ್ಥಾನಿಕರು ಮತ್ತು ಸುಶಿಕ್ಷಿತ ಮೇಲ್ವರ್ಗದವರು ಬೀರಪ್ಪ ಕ್ಷೇತ್ರ ಮತ್ತು ಶಿವನ ಕ್ಷೇತ್ರವೆಂದು ಗುರುತಿಸುತ್ತಾರೆ. ಮಾನವ ಅಭಿವೃದ್ಧಿ ಇಲಾಖೆಯ ಗೆಝೆಟಿಯರ್‌ನಲ್ಲಿ ಕೂಡ ಇಲ್ಲಿಯ ದೇವರನ್ನು ಬೀರಪ್ಪ ಎಂದು ಸಂಬೋಧಿಸಲಾಗಿದೆ.

ಒಳಬೀರಪ್ಪನ ಗುಡಿ : ದಾವಣಗೆರೆಯಲ್ಲಿ ಅಂದು ಪೂಜನೀಯ ಧರ್ಮಕಾರ್ಯಗಳಲ್ಲಿ ಶ್ರೀ ಬೀರದೇವರ ಗುಡಿಯು ವಿಶೇಷ ಮಾನ್ಯತೆ ಪಡೆದು ಎರಡು ಬೀರಪ್ಪನ ಗುಡಿಗಳು ಪೂಜಿಸಲ್ಪಡುತ್ತಿದ್ದವು. ಒಂದು ಬೀರಪ್ಪನ ಗುಡಿಯು ಈಗಿನ ದುರ್ಗಾಂಬಿಕಾ ದೇವಾಲಯ ಪಕ್ಕದಲ್ಲಿರುವ ಕುರುಬರ ಕೇರಿಯಲ್ಲಿದೆ. ಇದನ್ನು "ಒಳಬೀರಪ್ಪ ದೇವರು" ಎಂಬ ಹೆಸರಿನಲ್ಲಿ ಕರೆಯುತ್ತಾರೆ. ಈ ದೈವ ಕುರುಬರು ಮತ್ತು ಇತರೆ ಹಿಂದುಳಿದ ಜಾತಿಯ ಜನರ ಆರಾಧನೆಗೆ ಒಳಪಟ್ಟಿದೆ.

ಒಳಬೀರಪ್ಪ ದೇವರ ಗುಡಿಯು ವಿಶಾಲವಾಗಿದೆ. ಆರ್.ಸಿ.ಸಿ. ಛಾವಣಿಯಿಂದ ಕೂಡಿದೆ. ಗುಡಿಯ ಮುಂದೆ ಪರಸಿ ಜೋಡಣೆಯಿಂದ ಕೂಡಿದೆ. ವಿಶಾಲವಾದ ಕಟ್ಟೆಯಿದೆ. ಪ್ರವೇಶದ್ವಾರವು ವಿಶಾಲವಾಗಿದ್ದು. ಮೇಲೆ ಎರಡು ಟಗರಿನ ಚಿತ್ರಗಳಿವೆ. ಗುಡಿಯ ಮೇಲೆ ಕನಕದಾಸರ ಮೂರ್ತಿಯಿದ್ದು ಪ್ರವೇಶದ್ವಾರದ ಒಳಗಡೆ ಬೀರಪ್ಪನ ಮೂರ್ತಿಯಿದೆ. ಮುಂದೆ ೨೮ ಕುದುರೆ ಮೂರ್ತಿಗಳಿವೆ. ದೀಪಾರ್ಥಿ, ಸಮೆ, ಬೆತ್ತ ಇವೆಲ್ಲವನ್ನು ಎಡಕ್ಕೆ ಪಲ್ಲಕ್ಕಿ ಇಟ್ಟಿದ್ದಾರೆ. ದೀಪಾವಳಿ, ಮಹಾನವಮಿ, ಶಿವರಾತ್ರಿ ಶ್ರಾವಣಗಳಲ್ಲಿ ಅಂದು ವಿಶೇಷವಾದ ಪೂಜೆ ನಡೆಯುತ್ತದೆ.

ಹೊರಬೀರಪ್ಪನ ಗುಡಿ : ಊರ ಒಳಗಿನ ಬೀರಪ್ಪನ ದೇವಾಲಯದಿಂದ ೧ ಕಿ.ಮೀ. ದೂರದಲ್ಲಿದೆ. ಎಡಭಾಗಕ್ಕೆ ಅಂಚೆ ಬಾಗಿಲಿಗೆ ಹೊಂದಿಕೊಂಡಿದ್ದ ಸರ್ಕಾರಿ ಸರ್ವೇ ನಂ. ೪೯ರಲ್ಲಿನ ಹೊಲದಲ್ಲಿ ಸುಮಾರು ೧೫೦ ವರ್ಷಗಳಷ್ಟು ಹಿಂದೆಯೇ ಒಂದು ಮಣ್ಣಿನ ಗದ್ದುಗೆಯ ಒಳಗಡೆ ಲಿಂಗರೂಪದ ಉದ್ಭವಮೂರ್ತಿಗಳಿದ್ದವು. ಹೊರಗಡೆ ಇರುವ ಕಂಚಿನ ಬಾಗಿಲಲ್ಲಿ ಹೂವು ಮತ್ತು ಬಳ್ಳಿಗಳ ಕುಸುರಿ ಕೆತ್ತನೆಗಳನ್ನು ಕಾಣಬಹುದು. ಗರ್ಭಗುಡಿಯ ಒಳಗಡೆ, ಪೀಠದ ಕೆಳಭಾಗದಲ್ಲಿ ಆರು ಉದ್ಭವ ಲಿಂಗಗಳಿವೆ. ಇದರ ಹಿಂದೆ ಜಕಣಾಚಾರ್ಯರು ಕೆತ್ತಿರುವ ಪ್ರಭಾವಳಿಯಿದೆ. ಇದರ ಮೇಲೆ ಲಕ್ಷ್ಮೀಮೂರ್ತಿಯಿದೆ. ಎಡಭಾಗ ಮತ್ತು ಬಲಭಾಗದಲ್ಲಿ ಶಿವ ಪಾರ್ವತಿ ಚಿತ್ರಗಳಿವೆ. ಶಿವರಾತ್ರಿ ಮತ್ತು ಶ್ರಾವಣಗಳಲ್ಲಿ ಜಾತ್ರೆ ನಡೆಯುತ್ತದೆ.

ಈ ಗುಡಿಯು ತುಂಬಾ ಹಳೆಯ ಕಾಲದ್ದು. ಈ ದೇವಸ್ಥಾನದ ಸುತ್ತಲೂ ಜಮೀನುಗಳು ಇದ್ದವು. ಈ ದೇವಾಲಯದ ಜೀರ್ಣೋದ್ಧಾರವು ೧೮೬೪ರಿಂದ ಆರಂಭಗೊಂಡು. ಕಟ್ಟಡದ ಆಕಾರ ೧೯೫೭ರಲ್ಲಿ ಬದಲಾವಣೆಗೊಂಡಿರುತ್ತದೆ. ೧೯೫೭ರಲ್ಲಿ ಆಗಿನ ಕಾಲದ ಕುರುಬ ಜನಾಂಗದ ಪ್ರಮುಖ ಗಣ್ಯವ್ಯಕ್ತಿಗಳಾದ, ಕಾಪಪ್ಪನವರು ಶ್ರೀ ಎಚ್.ಕೆ. ಹೊನ್ನಪ್ಪ, ಸೊಪ್ಪಿನ ಗುರುಪಾದಪ್ಪ, ಶ್ರೀ ಸಿದ್ಲಿಂಗ ದುಗ್ಗಪ್ಪ, ಶ್ರೀ ಗೌಡ್ರ

ಬಾಲಪ್ಪ ಮತ್ತು ಇತರರು ಮುಂದಾಳತ್ವ ವಹಿಸಿಕೊಂಡು ಕುರುಬ ಜನಾಂಗ ಮತ್ತು ಇತರ ವರ್ಗದ ಜನರಿಂದ ವಂತಿಕೆ ಸಂಗ್ರಹಿಸಿ, ಹಳೆಯ ಕಟ್ಟಡವನ್ನು ತೆಗೆದುಹಾಕಿ ಹೊಸ ಕಲ್ಲಿನ ಕಟ್ಟಡವನ್ನು ನಿರ್ಮಿಸಿರುತ್ತಾರೆ".[೨೯] ದೇವಾಲಯದ ಪಕ್ಕದಲ್ಲಿ ಶ್ರೀ ಚೌಡೇಶ್ವರಿ ದೇವಾಲಯವಿದೆ. ಶ್ರೀ ಬೀರಲಿಂಗೇಶ್ವರ ದೇವಾಲಯದ ಎದುರು ಭಾಗದಲ್ಲಿ ಅಂದರೆ ಪೂರ್ವದ ಕಡೆಗೆ ಕುಸ್ತಿ ಅಖಾಡವನ್ನು ಕಾಣಬಹುದು. ಸುಮಾರು ೪೦ ವರ್ಷಗಳಿಂದಲೂ ಕುಸ್ತಿ ಅಖಾಡವು ಶ್ರೀ ಕೆ. ಮಲ್ಲಪ್ಪನವರ ಮುಂದಾಳತ್ವದಲ್ಲಿ ಪ್ರತಿವರ್ಷ ಜಾತ್ರೆಯ ಸಂದರ್ಭದಲ್ಲಿ ನಡೆಯುತ್ತದೆ.

ಶ್ರೀ ಬೀರಲಿಂಗೇಶ್ವರ ದೇವರು ದಿನಗಳು ಕಳೆದಂತೆ ಪ್ರಸಿದ್ಧಿ ಹೊಂದುತ್ತಾ ಬಂದಿದ್ದನ್ನು ಗಮನಿಸಿದ ಸರ್ಕಾರವು ೨೪.೫.೧೯೫೮ರಲ್ಲಿ ಸರ್ಕಾರವು ಅಧಿಸೂಚನೆಯನ್ನು ಹೊರಡಿಸುವ ಮೂಲಕ ದೇವಾಲಯವನ್ನು ಮುಜರಾಯಿ ಇಲಾಖೆಯ ಆಡಳಿತಕ್ಕೆ ಒಳಪಡಿಸಿದೆ. ಮುಜರಾಯಿ ಇಲಾಖೆಯಿಂದ ನೇಮಿಸಲ್ಪಟ್ಟ ಕನ್ವೀನರ್ ಮತ್ತು ಧರ್ಮದರ್ಶಿಗಳು ಆಡಳಿತವನ್ನು ನಡೆಸುತ್ತಾ ಬಂದಿರುತ್ತಾರೆ. ದೇವಾಲಯವು ದಾವಣಗೆರೆ ನಗರದ ಮಧ್ಯಭಾಗದಲ್ಲಿ ಅಂದರೆ ಪುಣೆ, ಬೆಂಗಳೂರು ರಸ್ತೆಗೆ ಹೊಂದಿಕೊಂಡು ಇರುತ್ತದೆ. ಪ್ರತಿದಿನ ಸಾವಿರಾರು ಜನರ ಆಕರ್ಷಣೆಯ ಕೇಂದ್ರಬಿಂದು ಆಗಿರುತ್ತದೆ. ದಾವಣಗೆರೆ ನಗರ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ವಾಸಿಸುವ ಕುರುಬ ಜನಾಂಗ ಮತ್ತು ಹಿಂದುಳಿದ ವರ್ಗದವರು ಪೂಜಿಸಲ್ಪಡುತ್ತಾ ಬಂದಿದ್ದಾರೆ. ದಾವಣಗೆರೆಯ ಬೀರಲಿಂಗೇಶ್ವರ ದೇವಾಲಯವು ಕರ್ನಾಟಕ ರಾಜ್ಯದ ಕುರುಬ ಜನಾಂಗದ ಆರಾಧನೆಯ ಕೇಂದ್ರ ಸ್ಥಳವಾಗಿದೆ. ದೇವಾಲಯ ಹೊಂದಿಕೊಂಡು ಅಂದರೆ ದೇವಾಲಯ ಇರುವ ಜಾಗವನ್ನು ಬಿಟ್ಟು ಸುಮಾರು ೪ ಎಕರೆ ೬ ಗುಂಟೆ ಜಮೀನು ಇಂದಿಗೂ ಬೀರದೇವರ ಸ್ವಾಧೀನದಲ್ಲಿದೆ. ಇದನ್ನು ಜನರು ಬೀರದೇವರ ದೇವಾಲಯದ ಮೈದಾನವೆಂದು ಕರೆಯುತ್ತಾರೆ. ಈ ಮೈದಾನವನ್ನು ನಗರದ ನಾಗರೀಕರು ಮತ್ತು ಹಲವಾರು ರಾಜಕೀಯ ಪಕ್ಷದವರು ದೇವಾಲಯದ ಕಮಿಟಿಯ ಅನುಮತಿ ಪಡೆದು ತಮ್ಮ ತಮ್ಮ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುತ್ತಾ ಬಂದಿದ್ದಾರೆ.

ಬೀರಲಿಂಗೇಶ್ವರ ದೇವರ ಸ್ಥಳದ ಚರಿತ್ರೆ : ದಾವಣಗೆರೆ ನಗರದ ಸರ್ವೇ ನಂ. ೫೩. ಇದು ಬೀರದೇವರ ಆಸ್ತಿಯಾಗಿರುತ್ತದೆ. ಇದರ ಒಟ್ಟು ವಿಸ್ತೀರ್ಣ ೧೮ ಎಕರೆ ೨ ಗುಂಟೆ. ಇದು ಬೀರದೇವರಿಗೆ ಇನಾಂ ಮೂಲಕ ಬಂದಿರುತ್ತದೆ. ಈ ವಿಚಾರಗಳನ್ನು ದಿನಾಂಕ ೫.೧.೧೯೨೧ರ ದಿ ಮೈಸೂರು ಗೆಝೇಟಿನ ನೋಟಿಫಿಕೇಷನ್ ಪಾರ್ಟ್ ೫ ರಿಂದ ತಿಳಿದುಕೊಳ್ಳಲಾಗಿದೆ. ಈ ಮೇಲಿನ ಗೆಜೆಟ ನೋಟಿಫಿಕೇಷನ್ ಪ್ರಕಾರ ದಿನಾಂಕ ೫.೧.೧೯೨೧ ರಲ್ಲಿ ಒಟ್ಟು ೬೨ ಎಕರೆಯ ಜಮೀನನ್ನು ಸರ್ಕಾರಿ ಬಾಲಕರ ಪ್ರೌಢಶಾಲೆಗಾಗಿ ಮತ್ತು ನಗರದ ಬಡಾವಣೆಗಳಿಗಾಗಿ ಸರ್ಕಾರದಿಂದ ಸ್ವಾಧೀನಪಡಿಸಿಕೊಂಡಿರುವುದು ತಿಳಿದುಬರುತ್ತದೆ. ದೇವಾಲಯದ ೧೮ ಎಕರೆ ೨ ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿರುವ ಸರ್ಕಾರವು ದೇವಾಲಯಕ್ಕೆ ಬರಬೇಕಾದ ಪರಿಹಾರದ ಮೊತ್ತವನ್ನು ನೀಡಿರುವುದಿಲ್ಲ ಮತ್ತು ಒಂದು ವೇಳೆ ನೀಡಿದ್ದರೆ ಇದಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳು ಸಹ ದೊರೆತಿಲ್ಲ. ಬೀರದೇವರ ಜಮೀನು ೧೮ ಎಕರೆ ೨ ಗುಂಟೆ ಮತ್ತು ಜಮೀನು ಅಕ್ಕಪಕ್ಕದ ಜಮೀನುಗಳು ವ್ಯಾಜ್ಯದ ಜಮೀನಿನ ಸರ್ವೇ ನಂ. ೪೯ ಇರುತ್ತದೆ. ಈ ಜಮೀನನ್ನು ಸಹ ೧೯೨೧ರ ಗೆಜೆಟಿನ ಪ್ರಕಾರ

ಸರ್ಕಾರದವರು ಸ್ವಾಧೀನಪಡಿಸಿಕೊಂಡಿರುತ್ತಾರೆ. ೧೯೨೧ರಲ್ಲಿ ಸರ್ಕಾರದವರು ಸಾರ್ವಜನಿಕ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳುವ ಕಾಲಕ್ಕೆ ಜಮೀನಿನ ಮಾಲೀಕರು ಮಾಗನಹಳ್ಳಿ ಚನ್ನಬಸಪ್ಪ ಮತ್ತು ವೀರಬಸಪ್ಪ ಎಂಬುವರು ಆಗಿದ್ದರು ಎಂಬುದು ಗೆಜೆಟ್‌ನಿಂದ ತಿಳಿದುಬರುತ್ತದೆ. ಬೀರದೇವರ ದೇವಾಲಯದ ಸರ್ವೇ ನಂ. ೫೩ ಆಗಿದ್ದಾಗೂ ದೇವಾಲಯ ಸರ್ವೇ ನಂ. ೪೯ರಲ್ಲಿ ಸ್ಥಾಪನೆಗೊಂಡಿದೆ. ಈಗಲೂ ದೇವಾಲಯ ಸರ್ವೇ ನಂ. ೪೯ರಲ್ಲೇ ಇದೆ.

ಜಮೀನಿನ ಚರಿತ್ರೆ : ಜಮೀನಿನ ಹಳೆಯ ಸರ್ವೇ ನಂ. ೧೨೮ ರಿ. ಸರ್ವೇ ನಂ. ೪೯ ಆಗಿದ್ದು ಮೂಲತಃ ಈ ಸರ್ವೇ ನಂ. ೪೯ ಸರ್ಕಾರದ ಜಮೀನು ಇದೆ. ಸರ್ಕಾರದಿಂದ ಹರಪ್ಪನಹಳ್ಳಿಯ ಸಂಜೀವಪ್ಪನ ಮಗ ದುರ್ಗಣ್ಣ ಬ್ಯಾಡರ ಎಂಬುವವರಿಗೆ ಗ್ರಾಂಟ್ ಮೂಲಕ ಬಂದಿದ್ದು, ನಂತರ ದುರ್ಗಣ್ಣನು ೧೯.೯.೧೯೦೩ ರಲ್ಲಿ ತಿರುಕವ್ವ ಬಿನ್ ಮೈಲವ್ವ ಮತ್ತು ಮಗ ಬಸಪ್ಪನಿಗೆ ಕೈಯ ಪತ್ರದ ಮೂಲಕ ಮಾರಿರುತ್ತಾರೆ. ನಂತರ ತಿರುಕವ್ವ ಬಿನ್ ಮೈಲವ್ವ ಸರ್ವೇ ನಂ. ೪೯ರ ಅರ್ಧಭಾಗ ಅಂದರೆ ಪೂರ್ವದ ಕಡೆಯ ೪೦೦ ಅಡಿ ಪಶ್ಚಿಮ ೨೫೦ ಅಡಿ, ಉತ್ತರ ದಕ್ಷಿಣ ಈ ಆಸ್ತಿಯನ್ನು ದಾವಣಗೆರೆಯ ಮಾಗಾನಹಳ್ಳಿ ಮನೆತನಕ್ಕೆ ಸೇರಿದೆ. ಮಾಗಾನಹಳ್ಳಿ ಚನ್ನವೀರಪ್ಪನವರಿಗೆ ೮.೧೦.೧೯೦೩ರಲ್ಲಿ ರೂ. ೫೦ಗಳಿಗೆ ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿ ಅಂದೇ ಅಸ್ತಿಯ ಸ್ವಾಧೀನ ಕೊಟ್ಟಿರುತ್ತಾಳೆ. ಈ ಪತ್ರಕ್ಕೆ ತಿರುಕವ್ವ ಮತ್ತು ಮಗ ಬಸಪ್ಪ ಇಬ್ಬರೂ ಸಹಿ ಮಾಡಿರುತ್ತಾರೆ. ನಂತರ ೧೯೧೩ರಲ್ಲಿ ತಿರುಕವ್ವ ಮತ್ತು ಇನ್ನೊಬ್ಬ ಮಗನಾದ ಮೈನರ್ ಭರಮ್ಮಜ್ಜನು ಸರ್ವೇ ನಂ. ೪೯ರ ಆಸ್ತಿಯಲ್ಲಿ ಈ ಹಿಂದೆ ಮಾರಿದ ನಂತರ ಉಳಿದ ಪಶ್ಚಿಮಾರ್ಧ ಭಾಗವನ್ನು ಅದೇ ಮಾಗಾನಹಳ್ಳಿ ಮನೆತನಕ್ಕೆ ಸೇರಿದ ಮಾಗಾನಹಳ್ಳಿ ಚನ್ನವೀರಪ್ಪನ ಮಕ್ಕಳಾದ ಚನ್ನಬಸಪ್ಪ ಮತ್ತು ವೀರಬಸಪ್ಪ ಎಂಬುವವರಿಗೆ ರೂ. ೫೦೦ಗಳಿಗೆ ಮಾರಾಟ ಮಾಡಿರುತ್ತಾರೆ. ೧೯೦೩ ಮತ್ತು ೧೯೧೩ರ ಪತ್ರಗಳ ಮೂಲಕ ಇವರೇ ಮಾಲೀಕತ್ವ ಮತ್ತು ಸ್ವಾಧೀನವನ್ನು ಹೊಂದಿದ್ದಾರೆ. ತಿರುಕವ್ವನಿಗಾಗಲೀ ಅಥವಾ ಆಕೆಯ ಮಕ್ಕಳಿಗಾಗಲಿ ೧೯೧೩ರ ನಂತರ ಯಾವುದೇ ಹಕ್ಕುಇರಲಿಲ್ಲ. ಇದು ಸರ್ವೇ ನಂ. ೪೯ರ ಜಮೀನಿನ ಹಕ್ಕುಪತ್ರಗಳಿಂದ ತಿಳಿದುಬರುತ್ತದೆ. ಈ ಎರಡು ದಾಖಲೆಗಳು ಸಾಕ್ಷಿಯಾಗುತ್ತವೆ.

ಈ ಮೇಲಿನ ಎರಡು ದಾಖಲೆಗಳ ಪ್ರಕಾರ ಹಕ್ಕು ವರ್ಗಾವಣೆ (ಮಾಗಾನಹಳ್ಳಿ ಮನೆತನಕ್ಕೆ) ಆಗಿದ್ದವು ಎಂಬುದನ್ನು ತೋರಿಸಲು ೧೯೨೧ರಲ್ಲಿ ಸರ್ಕಾರದವರು ಸರ್ವೇ ನಂ. ೪೯ನ್ನು ಸ್ವಾಧೀನ ಮಾಡಿಕೊಂಡು ಹೊರಡಿಸಿರುವ ಗೆಜೆಟ್ ನೋಟಿಫಿಕೇಷ್‌ನಲ್ಲಿ ಮಾಗಾನಹಳ್ಳಿ ಮನೆತನದವರಿಂದಲೇ ಸ್ವಾಧೀನ ಮಾಡಿಕೊಂಡು ಅವರ ಹೆಸರುಗಳನ್ನು ಮಾಲೀಕರ ಕಾಲಂನಲ್ಲಿ ಕಾಣಿಸಿರುವುದನ್ನು ಗೆಜೆಟ್ ನೋಟಿಫಿಕೇಷನ್ ನಂಬರ ಎಲ್. ೩೬೭೨, ಎಂ.ಎಲ್. ೧೦೨೧.೬, ದಿನಾಂಕ ೨೨.೧೨.೧೯೨೧ರಿಂದ ತಿಳಿದುಕೊಳ್ಳಲಾಗಿದೆ. ಈ ಮೇಲಿನ ೧೯೦೩ರ ಮತ್ತು ೧೯೧೩ರ ಕ್ರಯಪತ್ರಗಳು ಮತ್ತು ಗೆಜೆಟ್ ನೋಟಿಫಿಕೇಷನ್‌ಗಳ ಪ್ರತಿಗಳು ಈ ದೇವಾಲಯದಲ್ಲಿ ಲಭ್ಯವಿರುತ್ತದೆ.

ಹೀಗೆ ಮಾಗಾನಹಳ್ಳಿ ಮನೆತನಕ್ಕೆ ಸರ್ವೇ ನಂ. ೪೯ ಬಂದಿದೆ. ೨೨.೬.೧೯೧೭ರಲ್ಲಿ ತಿರುಕವ್ವಳ ಮಗನಾದ ಭರಮಜ್ಜನು ತನ್ನ ತಾಯಿಗೆ ಹುಚ್ಚು ಹಿಡಿದಿದೆ ಎಂದು ಆಕೆಯ ಪಾಲನೆ ಪೋಷಣೆಗಾಗಿ ಹಣ ಬೇಕೆಂದು ಸುಳ್ಳು ಕಾರಣವನ್ನು ಸೃಷ್ಟಿಮಾಡಿ ತುಕಾರಾಮಪ್ಪನಿಗೆ ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾನೆ. ಆದರೆ ಒಂದೇ ಆಸ್ತಿಯನ್ನು ಬೇರೆ ಬೇರೆಯವರಿಗೆ ಮಾರಾಟ ಮಾಡಿರುವುದಷ್ಟೇ ಅಲ್ಲದೇ, ತುಕಾರಾಮಪ್ಪನಿಗೆ ೧೯೦೩ ಮತ್ತು ೧೯೧೩ರ ಪತ್ರದ ಬಗ್ಗೆ ತಿಳುವಳಿಕೆಯಿದ್ದರೂ ಮೋಸದಿಂದ ತಿರುಕವ್ವಳ ಮಗ ಭರಮ್ಮಜ್ಜನಿಂದ ಕ್ರಯಪತ್ರವನ್ನು ಬರೆಯಿಸಿಕೊಂಡಿರುವುದು ಸ್ಪಷ್ಟವಾಗಿದೆ. ತುಕಾರಾಮಪ್ಪನು ಭರಮಜ್ಜನಿಂದ ಬರೆಯಿಸಿಕೊಂಡಿರುವ ೨೨.೬.೧೯೧೭ರ ಪತ್ರವೆ ಮುಂದೆ ನಡೆದಂತಹ ಕಾನೂನು ಸಮರಕ್ಕೆ ಅಸ್ತ್ರವಾಗಿದೆ. ಭರಮಜ್ಜನಿಗೆ ಈ ರೀತಿ ಮಾಡುವ ಯಾವ ಹಕ್ಕು ಇರುವುದಿಲ್ಲ ಎನ್ನುವುದು ಅಲ್ಲಿನ ಭಕ್ತರ ಅಭಿಪ್ರಾಯವಾಗಿದೆ.

ಸರ್ಕಾರದಿಂದ ಜಮೀನನ್ನು ಶಾಲೆ ಮತ್ತು ಬಡಾವಣೆಗಳಿಗಾಗಿ ಕಲಂ ಆಗಿರುವ ಬಗ್ಗೆ ವಿವರ

೧೯೨೧ರಲ್ಲಿ ಸರ್ಕಾರದವರು ಜಮೀನಾದ ಸರ್ವೇ ನಂ. ೪೯ನ್ನು ಮತ್ತು ಬೀರದೇವರ ಜಮೀನು ಸರ್ವೇ ನಂ. ೫೩ನ್ನು ಮತ್ತು ಇತರ ಜಮೀನುಗಳನ್ನು ಬಡಾವಣೆಗಳಿಗೆ ಮತ್ತು ಶಾಲೆಯನ್ನು ಕಟ್ಟಿಸಲು ಸ್ವಾಧೀನ ಮಾಡಿಕೊಂಡಿರುವ ವಿಷಯವು ಗೆಜೆಟ್ ನೋಟಿಫಿಕೇಷನ್ ನಂಬರ್ ಎಲ್-೩೬೭೨-ಎಂ ಐ-೧೦:೨೧-೬ ದಿನಾಂಕ ೨೨.೧೨.೧೯೨೦ ರಿಂದ ಸ್ಪಷ್ಟವಾಗಿದೆ.

ಸರ್ವೇ ನಂ. ೪೯ನ್ನು ೧೯೦೩ ಮತ್ತು ೧೯೧೩ರ ಕ್ರಯಪತ್ರದ ಮೂಲಕ ಕ್ರಯ ಪಡೆದ ಮಾಗಾನಹಳ್ಳಿ ಚನ್ನಬಸಪ್ಪನಿಂದ ಸ್ವಾಧೀನ ಮಾಡಿಕೊಂಡಿರುವುದು ಈ ಮೇಲಿನ ಗೆಜೆಟ್ ನೋಟಿಫಿಕೇಷನ್‌ನಿಂದ ತಿಳಿದುಬರುತ್ತದೆ. ಈ ಗೆಜೆಟ್ ನೋಟಿಫಿಕೇಷನಲ್ಲಿ ಎಲ್ಲಿಯೂ ೧೯೧೭ರ ವಿವಾದಾತ್ಮಕ ಕ್ರಯದಾರ ತುಕಾರಾಮಪ್ಪನ ಹೆಸರು ಎಲ್ಲಿಯೂ ಕಂಡುಬಂದಿರುವುದಿಲ್ಲ ಮತ್ತು ಸರ್ಕಾರದವರು ಸ್ವಾಧೀನ ಮಾಡಿಕೊಳ್ಳುವ ಕಾಲಕ್ಕೆ ಮಾಗಾನಹಳ್ಳಿ ಮನೆತನವದರೇ ಖಾತೆದಾರರು ಆಗಿರುವುದರಿಂದ ಅವರ ಹೆಸರು ಗೆಜೆಟ್ ನೋಟಿಫಿಕೇಷನಲ್ಲಿ ಕಂಡುಬಂದಿದೆ. ೧೯೨೧ರಲ್ಲಿ ಸರ್ಕಾರದವರು ಸರ್ವೇ ನಂ. ೪೯ನ್ನು ಗೆಜೆಟ್ ನೋಟಿಫಿಕೇಷನ ಮೂಲಕ ಸ್ವಾಧೀನ ಮಾಡಿಕೊಳ್ಳಲು ಯೋಚಿಸಿ, ನೋಟಿಫಿಕೇಷನ್ ಹೊರಡಿಸಿ ನಂತರ ಈ ಜಮೀನು ಸದ್ಯಕ್ಕೆ ಅವಶ್ಯಕತೆ ಇರುವುದಿಲ್ಲವೆಂದು ಸ್ವಾಧೀನ ಮಾಡಿಕೊಳ್ಳುವುದನ್ನು ಕೈಬಿಡಲಾಗಿದೆ ಎನ್ನುವ ವಿವರಗಳು ದೇವಾಲಯದ ದಾಖಲೆಗಳಿಂದ ತಿಳಿದುಬಂದಿರುತ್ತದೆ. ನಂತರ ಸರ್ಕಾರದವರು ಸರ್ವೇ ನಂ. ೪೯ನ್ನು ಅಂದರೆ ವ್ಯಾಜ್ಯದ ಜಮೀನನ್ನು ೮.೧೨.೧೯೨೫ರಲ್ಲಿ ಮತ್ತೊಮ್ಮೆ ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಸರ್ಕಾರಿ ಬಾಲಕರ ಪ್ರೌಢಶಾಲೆಯ ಆವರಣದ ವಿಸ್ತರಣೆಗಾಗಿ ಈ ಆಸ್ತಿಯನ್ನು ಸ್ವಾಧೀನ ಮಾಡಿಕೊಂಡಿದ್ದಾರೆ. ಈ ಸಂಗತಿ ನಂಬರ್ ಎಲ್-೪೧೨೯-ಎಂ ಎಲ್- ೧೧-೨೫-೬ ದಿನಾಂಕ ೮.೧೨.೧೯೨೫ರ ಗೆಜೆಟ್ ನೋಟಿಫಿಕೇಷನ್‌ನಿಂದ ತಿಳಿದುಬಂದಿದೆ. ಈ ದಾಖಲೆಯ ದೃಢೀಕೃತ ನಕಲು ದೇವಾಲಯದಲ್ಲಿ ಲಭ್ಯವಿದೆ ಮತ್ತು ದೇವಾಲಯದ ಪೂಜಾರಿಗಳು ಕಾಪಾಡಿಕೊಂಡು ಹೋಗುತ್ತಿದ್ದಾರೆ.

೨೦೦೧ರಲ್ಲಿ ಮಾನ್ಯ ದಾವಣಗೆರೆ ತಹಶೀಲ್ದಾರರು (ಪ್ರಭಾರ) ಇವರು ಯಾವುದೇ ನೋಟಿಸನ್ನು ನೀಡದೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡದ ಹಾಗೇ ಮಾಡಿ ನಾಗೇಂದ್ರಪ್ಪನವರಿಗೆ ಖಾತೆ ವರ್ಗಾವಣೆ ಮಾಡಿರುತ್ತಾರೆ.

ಈ ಹಿಂದೆ ಹೇಳಿದಂತೆ ೧೯೪೦ರಲ್ಲಿ ದೇವರ ಹೆಸರಿಗೆ ಖಾತೆ ಬದಲಾವಣೆಗೊಂಡ ನಂತರ ೨೫ ವರ್ಷಗಳು ಅಂದರೆ ೧೯೬೫ರವರೆಗೆ ಯಾರು ಯಾವ ವಿಧದಲ್ಲೂ ಈ ಖಾತೆ ವರ್ಗಾವಣೆ ಆದೇಶವನ್ನು ಪ್ರಶ್ನಿಸಿರುವುದಿಲ್ಲ ಇಷ್ಟು ಈ ದೆವಾಲಯದ ಆಡಳಿತಾತ್ಮಕ ಮತ್ತು ಚರಿತ್ರೆಯ ವಾಗ್ವಾದಗಳು. ಆದರೆ ಈ ವಾಗ್ವಾದಗಳು ಅಥವಾ ಸಂಘರ್ಷಗಳು ಆಚರಣೆ ಸಂಪ್ರದಾಯಗಳ ಮೆಲೆ ಅನೇಕ ಬಗೆಯ ಪರಿಣಾಮಗಳಿವೆ. ಆಚರಣೆಗಳ ವಿಸ್ಮೃತಿಗೆ ಕಾರಣವಾಗಿವೆ.

೧೯. ಆನೆಕೊಂಡ

ದಾವಣಗೆರೆ ಜಿಲ್ಲೆಯ ಈ ದೇವಾಲಯವನ್ನು ಪೂರ್ವಾಭಿಮುಖವಾಗಿ ಬಳಪದ ಕಲ್ಲಿನಿಂದ ಕಟ್ಟಲಾಗಿದೆ. ಈ ಊರಲ್ಲಿ ೨೦೦ ಹಾಲುಮತದ ಮನೆತನಗಳಿವೆ. ಇಲ್ಲಿ ಮೂರು ಗರ್ಭಗುಡಿಗಳಿದ್ದು ಈಗ ಈ ದೇವಾಲಯದಲ್ಲಿ ಪೂರ್ವ ಹಾಗೂ ಉತ್ತರದಲ್ಲಿ ತಲಾ ಒಂದೊಂದು ಗರ್ಭಗುಡಿ ಅಂತರಾಳ, ನವರಂಗ ಮತ್ತು ಮುಖಮಂಟಪವಿದೆ. ಅಲ್ಲದೆ ದೇವಾಲಯದ ಎದುರುಗಡೆ ನಂದಿ ಮಂಟಪವಿದೆ.

ಚೌಕಾಕಾರದ ಗರ್ಭಗುಡಿಯಲ್ಲಿ ಲಿಂಗವಿದ್ದು ಅಂತರಾಳವು ಆಯಾತಾಕಾರವಾಗಿದ್ದು ಇಲ್ಲಿ ಒಂದು ಲಿಂಗವಿದೆ. ಲಲಾಟಬಿಂಬದಲ್ಲಿ ಮಕರ ತೋರಣದ ಮಧ್ಯದಲ್ಲಿ ಶಿವನಿದ್ದು, ಶಿವನ ಎಡಭಾಗಕ್ಕೆ ವಿಷ್ಣು ಮತ್ತು ಕಾರ್ತಿಕೇಯ ಹಾಗೂ ಶಿವನ ಬಲಭಾಗಕ್ಕೆ ಬ್ರಹ್ಮಶಿಲ್ಪಗಳ ಮೂರ್ತಿಗಳನ್ನು ಕೆತ್ತಲಾಗಿದೆ. ನಾಲ್ಕು ಸುಂದರ ಕಂಬಗಳಿವೆ. ಅವು ಚೌಕಕಾರ ಹಾಗೂ ನಕ್ಷತ್ರಾಕಾರದಲ್ಲಿವೆ. ಕಂಬಗಳ ಕೆಳಭಾಗದ ಚೌಕಾಕಾರದ ಪಟ್ಟಿಕೆಗಳಲ್ಲಿ ತೋರಣಗಳ ಮಧ್ಯೆ ಭೈರವ, ಸರಸ್ವತಿ, ಬ್ರಹ್ಮ, ವಿಷ್ಣು ವಿಗ್ರಹಗಳನ್ನು ಕೆತ್ತಲಾಗಿದೆ. ಇವುಗಳಿಗೆ ಅಲ್ಲಲ್ಲಿ ಪುಷ್ಪದ ಅಲಂಕರಣ ಮಾಡಲಾಗಿದೆ. ತೆರೆದ ಮುಖಮಂಟಪದ ಒಳಭಾಗದಲ್ಲಿ ಕಕ್ಷಾಸನಗಳಿವೆ. ಈ ಕಕ್ಷಾಸನದ ಮೇಲೆ ಸುಂದರ ಕಂಬಗಳಿವೆ. ಇದು ದೇವಾಲಯದ ಆಕರ್ಷಣೆಗೆ ಕಾರಣವಾಗಿದೆ. ಈ ಮುಖಮಂಟಪದ ಮುಂಭಾಗದಲ್ಲಿನ ಮಂಟಪದಲ್ಲಿ ಸುಂದರ ನಂದಿ ಮೂರ್ತಿ ಇದೆ. ಯುಗಾದಿ, ದೀಪಾವಳಿ, ಮಹಾಲಯ ಹಬ್ಬದ ದಿನಗಳಲ್ಲಿ ಈ ದೈವದ ಜಾತ್ರೆ ಉತ್ಸವ ನಡೆಯುವುದು ವಿಶೇಷ. ಅನೇಕ ಭಕ್ತಾದಿಗಳು ಈ ದೇವರಿಗೆ ಬಂದು ಹೋಗುತ್ತಾರೆ. ಈ ದೇವರಿಗೆ ಪಲ್ಲಕ್ಕಿ ಉತ್ಸವವನ್ನು ಮಾಡುವ ಪಾರಂಪರಿಕ ಸಂಪ್ರದಾಯವಿದೆ.

೨೦. ಬೆಣ್ಣೆಹಳ್ಳಿ

ಬೆಣ್ಣೆಹಳ್ಳಿ ದಾವಣಗೆರೆ ಜಿಲ್ಲೆ ಹರಪ್ಪನಹಳ್ಳಿ ತಾಲೂಕಿನಲ್ಲಿದೆ. ಇಲ್ಲಿ ಬೀರಪ್ಪ ದೇವಾಲಯ ಕಂಡು ಬರುತ್ತದೆ. ಇದನ್ನು ಕಪ್ಪುಶಿಲೆಯಿಂದ ಕಟ್ಟಲಾಗಿದೆ. ಇಲ್ಲಿ ಸುಮಾರು ೨೦ ಹಾಲುಮತದ ಮನೆಗಳಿವೆ. ಪೀಠದ ಮೇಲೆ ಸ್ಥಾನಿಕವಾಗಿರುವ ಈ ಮೂರ್ತಿಯು ಕಿರೀಟಧಾರಿಯಾಗಿದ್ದು ಚತುರ್ಭುಜಧಾರಿಯಾಗಿದೆ. ಕಂಠಹಾರ, ವೃತ್ತಾಕಾರದ ಕಿವಿಯೋಲೆ, ಯಜ್ಞೋಪವೀತ, ಪಾದದವರೆಗೆ ಇಳಿಬಿದ್ದ ವೈಜಯಂತಿಹಾರ,

ಕಟಿಬಂಧವನ್ನು ಈ ಮೂರ್ತಿ ಧರಿಸಿದ್ದು, ತ್ರಿಶೂಲ, ಬಿಲ್ಲು, ಖಡ್ಗ ಮತ್ತು ಖೇಟಿಕವನ್ನು ಕ್ರಮವಾಗಿ ಮೇಲಿನ ಬಲ ಮತ್ತು ಕೆಳಗಿನ ಎಡಗೈಗಳಲ್ಲಿ ಹಿಡಿದಿದೆ. ಕೈ ಮತ್ತು ಕಾಲ್ಗಡದಿಂದ ಅಲಂಕೃತವಾದ ಈ ಮೂರ್ತಿಯ ಹಿಂಭಾಗದಲ್ಲಿ ಸರ್ಪತೋರಣಯುಕ್ತ ಪ್ರಭಾವಳಿ ಇದೆ. ಮುಖದಲ್ಲಿ ರೌದ್ರವತಾರವಿರುವ ಈ ಮೂರ್ತಿಯ ಲಕ್ಷಣಗಳು ಇಲ್ಲಿ ವಿಶೇಷವಾದ ಪೂಜೆ, ಜಾತ್ರೆ ಉತ್ಸವಗಳು, ಹಾಲರವಿ ಸೇವೆ, ಅಗ್ನಿ ಸೇವೆ ಪಂಚಾಮೃತ ಅಭಿಷೇಕ ಮುಂತಾದ ಆಚರಣೆಗಳು ಜರಗುತ್ತವೆ.

೨೧. ಕೊಡದ ಗುಡ್ಡ

ದಾವಣಗೆರೆ ಜಿಲ್ಲೆ ಜಗಳೂರು ತಾಲೂಕು ಕೊಡದ ಗುಡ್ಡ ಗ್ರಾಮದಲ್ಲಿ ಬೀರಲಿಂಗೇಶ್ವರ ದೇವಾಲಯವಿದೆ. ಈ ಊರಲ್ಲಿ ಸುಮಾರು ೧೫೦ ಹಾಲುಮತಸ್ಥರ ಒಕ್ಕಲುಗಳಿವೆ. ಪಶುಪಾಲಕರು, ಕೃಷಿ ಪ್ರಧಾನ ಊರಾಗಿದೆ. ಈ ದೇವಾಲಯವು ತುಂಬಾ ಸುಂದರವಾಗಿದೆ. ಬೀರಲಿಂಗೇಶ್ವರನ ಮೂರ್ತಿಯನ್ನು ಗರ್ಭಗುಡಿಯಲ್ಲಿನ ಹಿಂಭಾಗದ ನೈಸರ್ಗಿಕ ಬಂಡೆಯಲ್ಲಿ ಕೆತ್ತಲಾಗಿದೆ. ಇದು ಉಬ್ಬುಶಿಲ್ಪವಾಗಿದ್ದರೂ ಸಹ ಪ್ರತ್ಯೇಕವಾಗಿ ಕೆತ್ತಲ್ಪಟ್ಟಿದ್ದರಿಂದಾಗಿ ವಿವರಿಸಬೇಕಾಗಿದೆ. ಕಿರೀಟಧಾರಿಯಾಗಿರುವ ಈ ಮೂರ್ತಿ ಚತುರ್ಭುಜಧಾರಿಯಾಗಿದ್ದು, ಮೇಲಿನ ಬಲಗೈಯಲ್ಲಿ ತ್ರಿಶೂಲ, ಕೆಳಗಿನ ಬಲಗೈಯಲ್ಲಿ ಸೊಂಟಕ್ಕೆ ಸಿಕ್ಕಿಸಿದ ಕಠಾರಿಯನ್ನು ಹಿಡಿದಿರುವುದು ವಿಶೇಷ. ಇದು ವೀರ ಪರಂಪರೆಯನ್ನು ಅನಾವರಣ ಮಾಡುತ್ತದೆ. ಮೇಲಿನ ಎಡಗೈಯಲ್ಲಿ ಧನಸ್ಸು ಬಿಲ್ಲು ಕೆಳ ಎಡಗೈಯಲ್ಲಿ ಡಮರುಗವನ್ನು ಹಿಡಿದು ಸ್ಥಾನಿಕವಾಗಿದೆ. ಈ ಮೂರ್ತಿ ಕಿವಿಯೋಲೆ ಸೊಂಟಪಟ್ಟಿ ಮೊಳಕಾಲದವರೆಗೂ ಇಳಿಬಿದ್ದ ರುಂಡ ರೂಪದ ಉಪವೀತ್ತೆ ಧರಿಸಿದ ಈ ಮೂರ್ತಿ ಕೈ ಮತ್ತು ಕಾಲ್ಗಡಗ ಹಾಗೂ ಕೇಯೂರದಿಂದ ಅಲಂಕೃತವಾಗಿರುವುದು ವಿಶೇಷ. ಮಿತವಾದ ಅಲಂಕಾರ ನೆರಿಗೆಯುಕ್ತ ವಸ್ತ್ರಗಳು ಮುಖಭಾವ ಬಳಿಸಿರುವ ಶಿಲೆಯನ್ನು ಆಧರಿಸಿ ಈ ದೈವದ ಮೂರ್ತಿ ಅಥವಾ ದೇವಾಲಯ ವಿಜಯನಗರ ಕಾಲದೆಂದು ಹೇಳಬಹುದು. ಈ ದೇವಾಲಯಕ್ಕೆ ವೀರಭದ್ರ ದೇವಾಲಯವೆಂದು ಕೂಡ ಕರೆಯುತ್ತಾರೆ. ಬೀರ ಮತ್ತು ವೀರ ವೀರಭದ್ರ ಸಂಸ್ಕೃತಿಗಳ ಸಂಯುಕ್ತ ರೂಪಕವಾಗಿ ಈ ದೇವಾಲಯದ ಸಾಂಸ್ಕೃತಿಕ ಚರಿತ್ರೆಯನ್ನು ಅಧ್ಯಯನಕ್ಕೆ ಒಳಪಡಿಸಬಹುದು. ಪ್ರತಿವರ್ಷ ಯುಗಾದಿ, ದೀಪಾವಳಿ, ಮಹಾಲಯ ದಿನಗಳಲ್ಲಿ ಜಾತ್ರೆ ಮತ್ತು ಉತ್ಸವಗಳು ನಡೆಯುತ್ತವೆ.

೨೨. ಹಲಕನಾಳು

ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕು ಹಲಕನಾಳ ಬೀರಲಿಂಗೇಶ್ವರ ದೇವಾಲಯವನ್ನು ಕಪ್ಪು ಬಳಪದ ಶಿಲೆಯಿಂದ ಕಟ್ಟಲಾಗಿದೆ. ಪೀಠದ ಮೇಲೆ ಸ್ಥಾನಿಕ ಭಂಗಿಯಲ್ಲಿರುವ ಈ ಮೂರ್ತಿಯು ಚತುರ್ಭುಜಧಾರಿ ಯಾಗಿದೆ. ಜಟಾಮುಕುಟಿ ಬೀರಪ್ಪ ಕಿವಿಯಲ್ಲಿ ಸರ್ಪಕುಂಡಲಗಳಿದ್ದು, ಜೊತೆಗೆ ಕಂಠಾಭರಣ ಎದೆಹಾರ ಯಜ್ಞೋಪವೀತ ರುಂಡಮಾಲೆ, ಕಟಿಬಂಧ ಹಾಗೂ ಕೈಕಡಗಗಳಿವೆ. ಎದೆಯಲ್ಲಿ ಮತ್ತು ಮೊಣಕಾಲಿನ ಬಳಿ ಸರ್ಪವೊಂದು ಸುತ್ತುವರಿದಿದೆ. ಕಾಲಗಡಗ ಪಾದರಕ್ಷೆಗಳನ್ನು ಧರಿಸಿದ ಈ ಮೂರ್ತಿಯ ಹಿಂಭಾಗದಲ್ಲಿ ಸರ್ಪ ತೋರಣಯುಕ್ತ ಪ್ರಭಾವಳಿರುವುದು ಆಕರ್ಷಣೀಯ ಮತ್ತು ಅಧ್ಯಯನಕ್ಕೆ ಹೊಸ ಆಯಾಮವನ್ನು

ನೀಡುತ್ತದೆ. ನಾಗರಾಧನೆಯೊಂದಿಗೆ ಸಂಯುಕ್ತಗೊಂಡಿರುವ ಸಾಧ್ಯತೆಯನ್ನು ತಿಳಿಸುತ್ತದೆ. ಈ ಮೂರ್ತಿಯ ಕಾಲಿನ ಬಲಬದಿಯಲ್ಲಿ ಮೃದಂಗ ಬಾರಿಸುವ ಮತ್ತು ಎಡ ಬದಿಯಲ್ಲಿ ಕಹಳೆ ಊದುತ್ತಿರುವ ಚಿಕ್ಕ ಚಿಕ್ಕ ಶಿಲ್ಪಗಳಿವೆ. ಪಾಣಿಪೀಠದ ಬಿಂಬದಲ್ಲಿ ಚೇಳು ಇದೆ. ದೀಪಾವಳಿ, ಯುಗಾದಿ, ಮಹಾನವಮಿ ದಿವಸ ಜಾತ್ರೆ, ಉತ್ಸವ ನಡೆಯುತ್ತದೆ. ಈ ದೇವಾಲಯದಲ್ಲಿ ನಿತ್ಯ ಎರಡು ಹೊತ್ತು ಪೂಜೆ ಮಾಡುವ ಪಾರಂಪರಿಕ ಸಂಪ್ರದಾಯವಿದೆ. ಈ ದೇವರಿಗೆ ಕಿಚ್ಚು ಹಾಯುವ ಪದ್ಧತಿಯೂ ರೂಢಿಯಲ್ಲಿದೆ. ಈ ದೇವರಿಗೆ ದೀಪದ ಮಾಲೆಗಳನ್ನು ಮಾಡಿ ಬೆಳಗಲಾಗುತ್ತದೆ. ಇಲ್ಲಿ ಬೀರಪ್ಪನಿಗೆ ಸಂಬಂಧಿಸಿದ ಅನೇಕ ಪಾರಂಪರಿಕ ಆಚರಣೆಗಳನ್ನು ಮಾಡಲಾಗುತಿತ್ತು. ಈ ಕಾರಣಗಳಿಂದ ಈಗ ಕೆಲವೊಂದು ಆಚರಣೆಗಳನ್ನು ಮಾಡಲಾಗುತ್ತಿಲ್ಲ. ಕೆಲವೊಂದು ಆಚರಣೆಗಳು ಮುಂದುವರೆದಿದೆ ಎಂದು ಊರಿನ ಹಿರಿಯರು ಹೇಳುತ್ತಾರೆ.

೨೩. ಚಿಗಟೇರಿ

ಚಿಗಟೇರಿ ಗ್ರಾಮ ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲೂಕಿನಲ್ಲಿದೆ. ಇಲ್ಲಿನ ಬೀರಲಿಂಗೇಶ್ವರ ದೇವಾಲಯ ಬಳಪದ ಶಿಲೆಯಿಂದ ಕಟ್ಟಲಾಗಿದೆ. ಪೀಠದ ಮೇಲೆ ಹೆಡೆಬಿಚ್ಚಿದ ಸರ್ಪವಿದ್ದು, ಈ ಸರ್ಪದ ಮೇಲೆ ಚತುರ್ಭುಜಧಾರಿಯಾದ ಬೀರಪ್ಪನ ಮೂರ್ತಿಯು ಸುಖಾಸನದಲ್ಲಿ ಕುಳಿತಿರುವುದು ವಿಶೇಷವಾಗಿದೆ. ಜಟಾಧಾರಿ ಬೀರಪ್ಪನ ಹಣೆಯ ಮೇಲ್ಭಾಗದಲ್ಲಿ ಹೆಡೆಬಿಚ್ಚಿದ ಸರ್ಪವು ತಲೆಯನ್ನು ಸುತ್ತುವರಿದಿದೆ. ಕಿವಿಯಲ್ಲಿ ಸರ್ಪಕುಂಡಲ, ಕೊರಳಲ್ಲಿ ಒಂದು ಸರ್ಪ ರುಂಡಮಾಲೆಯ ಯಜ್ಞೋಪವೀತ ಕೈ ಕಡಗ ಹಾಗೂ ಸರ್ಪ ಈ ಮೂರ್ತಿ ಧರಿಸಿದೆ. ಸರ್ಪವೊಂದು ಉದರವನ್ನು ಸುತ್ತಿದ್ದು ಕಟಿಯಲ್ಲಿ ರುಂಡಮಾಲೆ ಸರವಿದೆ. ತ್ರಿಶೂಲ, ಡಮರುಗ, ಅಂಕುಶ ಪಾತ್ರೆಯೊಂದಿಗೆ ಕಪಾಲಗಳನ್ನು ಕೈಯಲ್ಲಿ ಕ್ರಮವಾಗಿ ಹಿಡಿದಿದ್ದು, ಕಾಲಿನಲ್ಲಿ ಕಾಲ್ಕಡಗ ಗಳಿವೆ. ಸುತ್ತಲೂ ಸರ್ಪ ತೋರಣಯುಕ್ತ ಪ್ರಭಾವಳಿ ಇದೆ. ಮೂರ್ತಿಯ ಲಕ್ಷಣದಿಂದಾಗಿ ಈ ದೇವಾಲಯವು ತುಂಬಾ ಸುಂದರವಾಗಿದೆ. ಪ್ರತಿವರ್ಷ ದೀಪಾವಳಿ, ಯುಗಾದಿ ಪಾಡ್ಯ ದಿನದಂದು ಜಾತ್ರೆ, ಉತ್ಸವ ಪಲ್ಲಕ್ಕಿ ಮೆರವಣಿಗೆಯನ್ನು ಮಾಡಲಾಗುತ್ತಿದೆ.

ಈ ದೇವಾಲಯ ರಸ್ತೆಯ ಉತ್ತರ ಬದಿಯಲ್ಲಿ ಬೀರಪ್ಪನ ಪ್ರಖ್ಯಾತ ದೇವಾಲಯವಿದೆ. ಇದು ಪೂರ್ವಾಭಿಮುಖವಾಗಿದ್ದು ವಿಸ್ತಾರವಾದ ಪೌಳಿಯಿಂದ ಕೂಡಿದೆ. ಇದರ ದ್ವಾರಮಂಟಪ ಮೂರು ಅಂತಸ್ತಿನಿಂದ ಕೂಡಿದೆ. ಮೇಲ್ಗಡೆ ಎರಡು ಬದಿಗೆ ಒಂದೊಂದು ದೀಪಸ್ತಂಭಗಳಿವೆ. ಪೌಳಿಯ ಒಳಗಡೆ ಭಕ್ತ ಜನವಸತಿಗಾಗಿ ನಿರ್ಮಿಸಿರುವ ಕಮಾನುಗಳ ಆಕಾರದ ಕೋಣೆಗಳ ಪೈಕಿ ಒಂದರಲ್ಲಿ ಮಾಯವ್ವನ ಮೂರ್ತಿಯನ್ನು ಇರಿಸಿದೆ. ಇದು ಬೀರಪ್ಪ ಮತ್ತು ಆತನ ಅಕ್ಕ ಮಾಯವ್ವನ ಸಾಂಸ್ಕೃತಿಕ ಚರಿತ್ರೆಯನ್ನು ತಿಳಿಸುತ್ತದೆ.

ಕಮಾನುಗಳ ಸಮೀಪ ಒಂದು ದೊಡ್ಡ ಚೌಕು ಅಥವಾ ಶಿಲಾಮಂಟಪವಿದೆ. ಈ ಶಿಲಾಮಂಟಪದ ಉತ್ತರದಲ್ಲಿ ಗರ್ಭಗೃಹ ಮತ್ತು ರಂಗಮಂಟಪಗಳಿಂದ ಕೂಡಿದ ದೇವಾಲಯವಿದ್ದು, ಇದರಲ್ಲಿ ಭೂಮಿಯಲ್ಲಿ ಒಡಮೂಡಿದಂತಿರುವ ಶಿವಲಿಂಗವಿದೆ. ಇಲ್ಲಿನ ಗ್ರಾಮಸ್ಥರು ಮತ್ತು ಈ ದೈವದ ಭಕ್ತರು ಇದನ್ನು ಮೂಲ ಲಿಂಗವೆಂದು ಕರೆಯುತ್ತಾರೆ. ಈ ಗ್ರಾಮದ ಮೂಲತಃ ಬೀರಪ್ಪನ ಗುಡಿ ಇದೆ ಎಂದು ಹೇಳಲಾಗುತ್ತದೆ.

ಸಾಮಾನ್ಯವಾಗಿ ಗ್ರಾಮದ ಹೊರಗಡೆ ಇರುವ ಬೀರಪ್ಪನ್ನು ಮೂಲ ಬೀರಪ್ಪನೆಂದು, ಹಿರೇ ದೇವರು, ಹಿರೇ ಬೀರಪ್ಪನೆಂದು ಕರೆಯುವ ಸಂಪ್ರಾಯ ಹಾಲುಮತ ಸಂಸ್ಕೃತಿಯಲ್ಲಿದೆ. ಹಾಗಾಗಿ ಗ್ರಾಮಸ್ಥರ ಹೇಳಿಕೆ ಬಹುಶಃ ಸತ್ಯವಾದದ್ದು. ಈಗ ದೇವಾಲಯವನ್ನು ಪುನರ್ ನಿರ್ಮಾಣಮಾಡಲಾಗಿದೆ. ಇದು ಹೊರಗಿನಿಂದ ಮುಸ್ಲಿಂ ದೇವಾಲಯಗಳ ಶೈಲಿಯ ಕಟ್ಟಡದಂತೆ ಕಾಣುತ್ತದೆ. ಬೀರಪ್ಪನ ಮೂಲ ನೆಲೆಯಾದ ಸಿರಾಡೋನದಲ್ಲೂ ಈ ಶೈಲಿಯನ್ನು ಕಾಣಬಹುದು. ರಂಗಮಂಟಪದ ಉತ್ತರ ಗೋಡೆಯಲ್ಲಿ ಮಾಳಿಂಗರಾಯಣ ಮೂರ್ತಿಯಿದೆ. ಹಾಗಾಗಿ ಪ್ರಾಚೀನ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಈಗಲೂ ಸಿರಾಡೋನ ಗ್ರಾಮದ ಪಕ್ಕದಲ್ಲಿ ಮಾಳಪ್ಪನ ಸ್ಥವಾದ ಹುಲಿಜಂತಿಯಿದೆ. ಈ ವಾತವರಣ ಹುಲಿಜಂತಿ ಸುತ್ತಮುತ್ತಲಿನ ಸಾಂಸ್ಕೃತಿಕ ವಾತವರಣವನ್ನು ಕಾಣಬಹುದು.

ಪ್ರಸ್ತುತ ದೇವಾಲಯದ ಎದುರಿಗೆ ಒಂದು ಕಟ್ಟೆಯಿದೆ. ಇದು ಹಾಳಾದ ಮುಖಮಂಟಪ ಅಥವಾ ದೇವರ ವಾಹನ ಮಂಟಪದಂತೆ ಕಾಣುತ್ತದೆ. ಇದರ ಸುತ್ತಲೂ ಅನೇಕ ಪ್ರಾಚೀನ ಅವಶೇಷಗಳು ಹರಡಿವೆ. ಲಿಂಗಕ್ಕೆ ಅಭಿಮುಖವಾಗಿ ಈ ಕಟ್ಟೆಗೆ ತಾಗಿದಂತೆ ಪ್ರಾಚೀನ ಕಾಲದ ಸ್ತ್ರೀಪುರುಷರ ವಿಗ್ರಹಗಳ ಜೋಡಿಯಿದೆ. ಇದರ ಬಲಬದಿಯಲ್ಲಿ ಸರ್ವಾಲಂಕಾರ ಭೂಷಿತವಾದ ವಿಗ್ರಹವಿದೆ.

ಈ ದೇವಾಲಯದ ಎದುರಿಗೆ ವಿಸ್ತಾರವಾದ ಬಯಲು ಮತ್ತು ದ್ವಾರಮಂಟಪದ ಮುಂಭಾಗದಲ್ಲಿ ಒಂದು ಹೊಂಡವಿದೆ. ನಾಲ್ಕು ಕಡೆಯಿಂದ ಇಳಿಯಲು ಇದಕ್ಕೆ ಪಾವಟಿಗೆಗಳನ್ನು ನಿರ್ಮಿಸಿದ್ದಾರೆ. ಇದು ಬಹುಶಃ ಓಕಳಿಯ ಹೊಂಡವಾಗಿರಬೇಕು. ಇಂಥ ಓಕಳಿ ಹೊಂಡಗಳು ಬೀರಪ್ಪನ ದೇವಸ್ಥಾನಗಳಲ್ಲಿಯೂ ಇರುವುದನ್ನು ಕಾಣಬಹುದು. ಆದರೆ ಈ ನವ್ಯ ದೇವಾಲಯದಲ್ಲಿ ಓಕುಳಿಯ ಕಾರ್ಯಕ್ರಮ ನಡೆಯುವುದಿಲ್ಲ.

ಓಕುಳಿಯ ಹೊಂಡದ ಉತ್ತರ ಪಾರ್ಶ್ವದಲ್ಲಿ ಒಂದು ಹಳೆಯ ದೀಪಸ್ತಂಭವಿದೆ. ಇದು ಮೂಲ ದೀಪಸ್ತಂಭವಲ್ಲ. ಕರ್ನಾಟಕದ ಪ್ರಾಚೀನ ದೇವಾಲಯಗಳಲ್ಲಿರುವಂಥ ನೇರವಾದ ಸಾಮಾನ್ಯ ದೀಪಸ್ತಂಭ, ಇದು ಬೀರಪ್ಪನ ಎದುರಿಗೆ ಇರದೇ ಸ್ವಲ್ಪ ಉತ್ತರಕ್ಕಿದೆ. ಇದರ ಎದುರುಗಡೆ ಈಗ ಯಾವ ದೇವಾಯಲವೂ ಇಲ್ಲ. ಒಂದು ಚಿಕ್ಕ ಮಸೀದಿಯಿದೆ. ಈ ಮಸೀದಿಯೂ ವಸತಿಗೆ ಅನುಕೂಲವಾಗುವಂತೆ ಕಮಾನುಗಳಾಗಿ ಪರಿವರ್ತಿಸಲ್ಪಟ್ಟಿದೆ. ದೀಪಸ್ತಂಭ ನೋಡಿದರೆ ಅದರ ಎದುರಿಗಿರುವ ಇದು ಮೂಲತಃ ಹಿಂದೂ ದೇವಾಲಯವು ಪ್ರಾಚೀನ ಕಾಲದು ಎಂಬುದು ಸತ್ಯ. ಇದು ಹಿಂದುಧರ್ಮ ದೇವಾಲಯಗಳನ್ನು ಮುಸ್ಲಿಂ ಧರ್ಮಕ್ಕೆ ಪರಿವರ್ತಿಸುವ ಅಥವಾ ಸಾಂಸ್ಕೃತೀಕರಣಗೊಳಿಸುವುದರ ಉದಾಹರಣೆ ಆಗಿರುವುದಕ್ಕೆ ಸಾಧ್ಯವಿದೆ. ಇನ್ನೂ ಅಧ್ಯಯನವಾಗಬೇಕು, ಆಗ ಖಚಿತವಾದ ನಿರ್ಧಾರಕ್ಕೆ ಬರಬಹುದು.

ಪ್ರಸ್ತುತ ಮಸೀದಿಯ ಉತ್ತರ ಬದಿಯಲ್ಲಿ ಹನ್ನೊಂದು ಕಮಾನುಗಳುಳ್ಳ ದೊಡ್ಡದೊಂದು ಪ್ರಾಂಗಣವಿದೆ. ಇದರ ಪೂರ್ವದಲ್ಲಿ ಒಂದರ ನಂತರ ಒಂದರಂತೆ ಎರಡು ದೊಡ್ಡ ಹೊಂಡ ಅಥವಾ ಕಲ್ಯಾಣಿಗಳಿವೆ. ಇದನ್ನು ಬೇರೆ ಬೇರೆ ಹೆಸರಿಟ್ಟು ತೀರ್ಥದ ಹೊಂಡಗಳೆಂದು ಕರೆಯುತ್ತಾರೆ. ಇವೆಲ್ಲ ಹೊಂಡಗಳಲ್ಲಿ ತಂತಾನೆ ಚಿಮ್ಮುವ

ಚಿಲುಮೆಗಳಿದ್ದು ಇದು ನೀರು ಸಂಗ್ರಹಣೆಗೆ ಕಂಡುಕೊಂಡಿರುವ ವೈಜ್ಞಾನಿಕ ಕ್ರಮ. ಈಗ ಈ ಚಿಲುಮೆಗಳಿಂದ ನೀರು ಬರುವುದು ಕಡಿಮೆಯಾಗಿದೆ. ಇದಕ್ಕೆ ಅಂತರಜಲ ಕುಸಿತವೆ ಕಾರಣ.

ಒಟ್ಟಿನಲ್ಲಿ ಲಿಂಗ, ಅದರ ಮುಂದಿನ ಓಕುಳಿ ಹೊಂಡ, ಬದಿಯ ದೀಪಸ್ತಂಭ ಆವರಣದಲ್ಲಿರುವ ಪ್ರಾಚೀನ ಬೀರಪ್ಪನ ಮೂರ್ತಿ, ವಿಸ್ತಾರವಾದ ಪೌಳಿ ಇವನ್ನೆಲ್ಲ ನೋಡಿದಾಗ ಹಳೆಯ ದೇವಾಲಯವೆಂದು ದೃಢಪಡುತ್ತದೆ. ಮೇಲೆ ವಿವರಿಸಿರುವ ವಸ್ತುಗಳ ನಡುವೆ ಸದ್ಯ ಪೂಜೆಗೊಳ್ಳುತ್ತಿರುವ ದೊಡ್ಡ ದೇವಸ್ಥಾನವಿದೆ. ಇದರ ಸುತ್ತಲೂ ವಿಸ್ತಾರವಾದ ಪೌಳಿಯಿದ್ದು ಮತ್ತು ನಾಲ್ಕು ದಿಕ್ಕಿನಿಂದ ಪ್ರವೇಶಿಸಲು ಪ್ರವೇಶದ್ವಾರಗಳಿವೆ. ಅವುಗಳಲ್ಲಿ ಪೂರ್ವದ ಮಹಾದ್ವಾರ ಭವ್ಯವಾಗಿದ್ದು ಜಾತ್ರೆಯ ಕಾಲದಲ್ಲಿ ಮಾತ್ರ ಅದನ್ನು ಸಾರ್ವಜನಿಕ ಉಪಯೋಗಕ್ಕಾಗಿ ತೆರೆಯುತ್ತಾರೆ. ಇದರ ಎರಡನೆಯ ಅಂತಸ್ತಿನಲ್ಲಿ ನಗಾರಿ, ಡೊಳ್ಳನ್ನು ಇಡುವ ವ್ಯವಸ್ಥೆ ಇದೆ. ಇದನ್ನು ಡೊಳ್ಳಿನ ಮನೆ ಎಂದೇ ಕರೆಯುತ್ತಾರೆ.

ಈ ದೇವಾಲಯದ ಎದುರಿಗಿದ್ದ ಪ್ರಾಚೀನ ಮಂಟಪ ಈ ಶಿಥಿಲವಾಗಿದೆ. ಅದರಲ್ಲಿ ಮಾಳಿಂಗರಾಯನ ಮೂರ್ತಿಯಿದೆ. ಮೂರ್ತಿ ಅಷ್ಟೇನೂ ಹಳೆಯದಲ್ಲ. ಇದರ ಜೊತೆಗೆ ಎರಡು ಚಿಕ್ಕ ನಾಗಮೂರ್ತಿಗಳು ಪಂಚಲಿಂಗ ಮುಂತಾದ ಶಿಲ್ಪಗಳು ಅಸ್ತವ್ಯಸ್ಥವಾಗಿ ಬಿದ್ದಿವೆ. ೨೦೧೧ರ ಡಿಸೆಂಬರಿನಲ್ಲಿ ಭೇಟಿ ನೀಡಿದಾಗ ಜೀರ್ಣೋದ್ಧಾರ ಕಾರ್ಯ ನಡೆದಿತ್ತು. ಇದರ ಸಮೀಪದ ಮತ್ತೊಂದು ಮಂಟಪದಲ್ಲಿ ಸುಮಾರು ಆರು ಅಡಿ ಎತ್ತರದ ನಾಗರಮೂರ್ತಿ ಇದೆ. ಬದಿಯಲ್ಲಿ ಬೇವಿನಮರವೂ ಇದೆ. ದೊಡ್ಡ ಗರ್ಭಗೃಹ ಅದಕ್ಕೆ ಹೊಂದಿದಂತೆ ಚೌಕಾಕಾರದ ಎರಡು ಅಂಕಣಗಳ ಪಡಸಾಲೆಯಂಥ ವಿಸ್ತಾರವಾದ ಭಾಗ ಮತ್ತು ಇದಕ್ಕೆ ಹೊಂದಿದಂತೆ ಹದಿನಾರು ಕಂಬಗಳ ಮುಖಮಂಟಪ ಇದೆ. ಗರ್ಭಗೃಹದಲ್ಲಿ ಸಾಮಾನ್ಯ ಮನುಷ್ಯನ ಎದೆ ಎತ್ತರದಷ್ಟು ಕಟ್ಟೆಯ ಮೇಲೆ ಬೀರಪ್ಪನ ಮೂರ್ತಿಯಿದೆ. ಈ ಮೂರ್ತಿಯನ್ನು ನಿತ್ಯ ಪೂಜೆ ಮಾಡಲಾಗುತ್ತದೆ.

ಆದರೆ ಇಲ್ಲಿಯ ಹಿರಿಯರಾದ, ಕರಿಯಪ್ಪ ಪೂಜಾರಿ ಅವರು ದೇವಾಲಯದಲ್ಲಿ ಎರಡು ಮೂರ್ತಿಗಳಿದ್ದುದಾಗಿ ಹೇಳಿದ್ದಾರೆ.[೨೦] ಅವರ ಪ್ರಕಾರ ಗರ್ಭಗುಡಿ ಎರಡು ಮೂರ್ತಿಗಳಿದ್ದವು. ಇದೀಗ ಒಂದು ಮೂರ್ತಿಯಿಲ್ಲ ಈ ವಿಷಯಕ್ಕೆ ಸಂಬಂಧಿಸಿದಂತೆ ದೇವಾಲಯದ ವಕ್ತಾರರನ್ನು ವಿಚಾರಿಸಿದಾಗ ಆ ಮೂರ್ತಿ ಹಾಳಾಗಿದೆಯಾದಷ್ಟೇ ಹೇಳುತ್ತಾರೆ.

ಮೇಲಿನ ಮೂರ್ತಿಗಳಿಲ್ಲದೆ ಈ ಗರ್ಭಗೃಹದ ಉತ್ತರ ಬದಿಯ ಕಮಾನಿನಲ್ಲಿ ಸುಮಾರು ಒಂದು ಅಡಿ ಎತ್ತರದ ಪಂಚಲೋಹದ ಬೀರಪ್ಪನ ಮೂರ್ತಿ ಇದೆ. ಸದ್ಯದ ಈ ಗರ್ಭಗೃಹದ ಹಿಂದೆ ಇನ್ನೊಂದು ಗರ್ಭಗೃಹವಿರುವುದಾಗಿ ತಿಳಿದುಬರುತ್ತದೆ. ಆದರೆ ಆ ದೇವಾಲಯ ಎಲ್ಲ ಬದಿಯಿಂದಲೂ ಮುಚ್ಚಿದೆ. ಇಲ್ಲಿ ಈಗ ದಿನನಿತ್ಯ ಎರಡು ಬಾರಿ ಪೂಜೆ ನಡೆಯುತ್ತದೆ. ಇಲ್ಲಿ ಕುರುಬರು ಮತ್ತು ವೀರಶೈವರು ಪೂಜೆ ಮಾಡುತ್ತಾರೆ. ಬೆಳಗ್ಗೆ ವೀರಶೈವರಿಂದ ಪೂಜೆ ಸಂಜೆ ಕುರುಬರಿಂದ ಪೂಜೆ ಕ್ರಮ ನಡೆಯುವ ವ್ಯವಸ್ಥೆಯಿದೆ. ಈ ವ್ಯಾಜ್ಯ ಹೈಕೋರ್ಟ್‌ವರೆಗೂ ಹೋಗಿಬಂದಿದೆ. ಈಗ ಸೌಹಾರ್ದಯುತವಾಗಿ ಆಚರಣೆ ಕ್ರಮವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಈ ವ್ಯವಸ್ಥೆಯು ಅಥವಾ ಪದ್ಧತಿಯು ಹಿಂದೆ ನಡೆದಿರಬಹುದಾದ ಕುರುಬರ

ಮತ್ತು ಹಾಲುಮತಸ್ಥರ ಸಂಘರ್ಷವನ್ನು ತಿಳಿಸುತ್ತದೆ. ಸಂಘರ್ಷವು ಹಾಲುಮತಸ್ಥರ ಮೂಲ ಮತ್ತು ಸಂಸ್ಕೃತೀಕರಣಗೊಂಡ ಹಾಲುಮತ (ವೀರಶೈವ ಲಿಂಗಾಯತ) ಸಂಸ್ಕೃತಿಯನ್ನು ಪ್ರತಿಪಾದನೆ ಮಾಡುತ್ತದೆ. ಈ ಸಮುದಾಯಗಳು ದೈವದ ಆಚರಣೆಯನ್ನು ಹಂಚಿಕೊಂಡು ಪೂಜಿಸುತ್ತಿರುವವು ಆಶಾದಾಯಕ. ದೇವಸ್ಥಾನದ ಆಡಳಿತವನ್ನು ಟ್ರಸ್ಟ್ ನಡೆಸುತ್ತದೆ.

ದಸರೆಯಲ್ಲಿ ದೇವರ ಪಲ್ಲಕ್ಕಿಯಲ್ಲಿ ಕುಳಿತು ರಸ್ತೆಯ ಬದಿಯ ಮಾಯವ್ವ, ಮಾಳಿಂಗರಾಯ, ಇಟ್ಟಪ್ಪನ ದೇವರ ಗುಡಿಗೆ ಹೋಗಿ, ಬರುವಾಗ ಕುದುರೆಯ ಮೇಲೆ ಬರುತ್ತಾನೆ. ಮಾರ್ಗಶಿರ ಮಾಸದ ಛಟ್ಟಿಯಲ್ಲಿ ಮುಖ್ಯ ಉತ್ಸವ ನೆರವೇರುತ್ತದೆ. ಛಟ್ಟಿ ಅಮವಾಸ್ಯೆಯಲ್ಲಿ ನಡೆಯುವ ಭಂಡಾರ ಪೂಜೆ, ಅಭಿಷೇಕ, ವೀರಗಾಸೆ ಕುಣಿತ, ಡೊಳ್ಳುಕುಣಿತ ಮುಂತಾದ ಆಚರಣೆಗಳು ನಡೆಯುತ್ತವೆ. ಪ್ರತಿ ರವಿವಾರ ವಿಶೇಷವಾದ ಪೂಜೆ ನಡೆಯುತ್ತದೆ.

ಈ ಊರು ಪ್ರಾಚೀನ ಪರಂಪರೆಗೆ ಹೆಸರು ವಾಸಿ ಹೊಂದಿದೆ. ಪ್ರವಾಸಿ ನಗರವೂ ಕೂಡ ಆಗಿದೆ. ಈ ದೇವಾಲಯ ವಿಜಯನಗರ ಶೈಲಿಯಲ್ಲಿ ರೂಪಗೊಂಡಿದೆ. ಗರ್ಭಗೃಹ ಸುಕನಾಸಿ ಮತ್ತು ರಂಗಮಂಟಪದ ಮೇಲೆ ಅವುಗಳ ಪ್ರಮಾಣಕ್ಕೆ ತಕ್ಕಂತೆ ಪ್ರತ್ಯೇಕವಾದ ಮೂರು ಶಿಖರಗಳನ್ನು ನಿರ್ಮಿಸಲಾಗಿದೆ. ಇವುಗಳ ಮೂಲ ಅಂತಸ್ತುಗಳು ಇತರೆಲ್ಲ ಭಾಗಗಳು ವಿಜಯನಗರ ಕಾಲದ ವಾಸ್ತುಶಿಲ್ಪವನ್ನು ಹೊಂದಿದೆ.

೨೪. ಭಾನುವಳ್ಳಿ

ಭಾನುವಳ್ಳಿ ಗ್ರಾಮವು ಹರಿಹರ ತಾಲೂಕಿನ ಮಲೇಬೆನ್ನೂರು ಹೋಬಳಿಗೆ ಸೇರಿದ ಒಂದು ದೊಡ್ಡ ಗ್ರಾಮ. ಈ ಗ್ರಾಮದಲ್ಲಿ ಹಾಲುಮತ ಜನಾಂಗದವರು ಹೆಚ್ಚು ವಾಸವಾಗಿದ್ದಾರೆ. ಇಲ್ಲಿ ಹೊರ ಬೀರಪ್ಪನ ಗುಡಿ ಮತ್ತು ಒಳ ಬೀರಪ್ಪನ ಗುಡಿ ಎನ್ನುವ ಎರಡು ಗುಡಿಗಳಿವೆ. ಒಳಬೀರಪ್ಪನ ಗುಡಿ ಕಲ್ಲಿನ ಹಾಸಿಗೆಗಳಿಂದ ನಿರ್ಮಿಸಲ್ಪಟ್ಟಿದೆ. ಹೊರ ಬೀರಪ್ಪನ ಗುಡಿಯು ಗ್ರಾಮದ ಹೊರಗಡೆ ಊರಿನ ಪಶ್ಚಿಮ ಭಾಗದಲ್ಲಿದ್ದು ಸುಮಾರು ೩೬ ಗುಂಟೆ ಜಾಗ ವಿಸ್ತೀರ್ಣವನ್ನು ಹೊಂದಿದೆ. ಈ ಜಾಗವು ಬೀರಪ್ಪನ ಆರಾಧಕರಾದ ಪೂಜಾರ ವಂಶಸ್ಥರಿಂದ ದಾನವಾಗಿ ಬಂದಿರುವುದೆಂದು ಭಕ್ತರ ಹೇಳುತ್ತಾರೆ. ಹಿಂದೆ ಈ ಜಾಗದಲ್ಲಿ ಒಂದು ಸಣ್ಣ ಬೀರಪ್ಪನ ಗುಡಿಯಿತ್ತು. ಅದನ್ನು ಕೆಡವಿ ೧೯೬೭ರಲ್ಲಿ ಹೊಸದೊಂದು ಕಲ್ಲಿನ ದೇವಸ್ಥಾನವನ್ನು ನಿರ್ಮಿಸಿದ್ದಾರೆ. ಆ ನಂತರ ದಿನಾಂಕ ೨೯.೦೧.೨೦೦೧ರಲ್ಲಿ ಹೊರ ಬೀರದೇವರ ಮೂರ್ತಿ ಪ್ರತಿಷ್ಠಾಪನಾ ಮಾಡಲಾಯಿತೆಂದು ಗ್ರಾಮದವರು ಹೇಳುತ್ತಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಆಚರಣೆಯ ಛಾಯಾಚಿತ್ರಗಳನ್ನು ಗಮನಿಸಿರುವೆ.

ಒಳ ಬೀರಪ್ಪನ ಗುಡಿಯ ರಚನೆ : ಭಾನುವಳ್ಳಿ ಗ್ರಾಮದ ಮಧ್ಯಭಾಗದಲ್ಲಿ ಬೀರಪ್ಪನ ಒಳಗುಡಿಯು ನಿರ್ಮಾಣಗೊಂಡಿದ್ದು, ಕಲ್ಲಿನ ಮೇಲ್ಛಾವಣಿಯ ಕೂಡಿದೆ. ಹೊರ ಛಾವಣಿಯು ವಿಶಾಲವಾಗಿ ನಿರ್ಮಿಸಲ್ಪಟ್ಟಿದೆ. ಗರ್ಭಗುಡಿಯಲ್ಲಿ ದೇವರು ತೂಗುಮಂಚದ ಸದರಿನ ಮೇಲೆ ಇದೆ. ಆನೆ, ಒಂಟೆ, ಕುದುರೆ, ಮೇಷ, ಖಡ್ಗ, ಖಟಾರಿ ಹಾಗೂ ಬೀರದೇವರ ಮೂರ್ತಿಗಳು ಕಂಚಿನಿಂದ ಮಾಡಲ್ಪಟ್ಟಿದ್ದು, ಸದರಿನ ಮೇಲೆ ಚಿತ್ರದೊಂದಿಗೆ

ಪೂಜೆಗೊಳ್ಳುತ್ತವೆ. ಗರ್ಭಗುಡಿಯ ಹೊರಭಾವಣೆಯ ಪಕ್ಕಕ್ಕೆ ಒಂದು ಡೊಳ್ಳನ್ನು ಇಟ್ಟಿದ್ದಾರೆ. ಇದು ಪವಿತ್ರವಾದ ಡೊಳ್ಳು ಎನ್ನುವುದು ಆ ದೈವದ ಭಕ್ತರ ಮತ್ತು ಜನರ ನಂಬಿಕೆ. ಈ ಡೊಳ್ಳನ್ನು ಚೌಡಿಡೊಳ್ಳು ಎಂದು ಕರೆಯುತ್ತಾರೆ. ಇದನ್ನು ಪೂಜೆ ಸಂದರ್ಭದಲ್ಲಿ ಬಾರಿಸುತ್ತಾರೆ. ದೈವದ ಆಚರಣೆಯ ಸಂದರ್ಭದಲ್ಲಿ ಈ ಡೊಳ್ಳು ಕಡ್ಡಾಯವಾಗಿರಬೇಕು ಎನ್ನುವ ಸಂಪ್ರದಾಯವಿದೆ. ಈ ಗುಡಿ ಪೂರ್ವಕ್ಕೆ ಮುಖ ಮಾಡಿದೆ. ಕ್ರಿ.ಶ. ೧೯೭೩ ಕಟ್ಟಲ್ಪಟ್ಟಿರುತ್ತದೆ. ಈ ದೇವರ ವಿಗ್ರಹದ ಮೂರ್ತಿಯ ವಿಶೇಷವೆಂದರೆ ದೇವರ ಸದರಿನ ಮೇಲೆ, ಹಿಂದೆ ಮುಂದೆ ದೊಡ್ಡ ಕಂಚಿನ ಮಂಟಪವಿದೆ. ದೇವರ ಹಿಂದೆ ದೊಡ್ಡನಾಗರ ಹೆಡೆಯ ಕಂಚಿನ ಮೂರ್ತಿ ಇದೆ. ಗರ್ಭಗುಡಿ ಬಾಗಿಲು ಮತ್ತು ವರಾಂಡದ ಬಾಗಿಲುಗಳು ಪ್ರಾಚೀನ ಕಾಲದ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುತ್ತವೆ.

ಹೊರ ಗುಡಿಯ ರಚನೆ : ಹೊರ ಬೀರಪ್ಪನ ಗುಡಿಯು ಊರ ಪಶ್ಚಿಮ ಭಾಗದಲ್ಲಿದ್ದು ಕಲ್ಲಿನ ಮೇಲ್ಛಾವಣಿಯಿಂದ ನಿರ್ಮಿಸಲ್ಪಟ್ಟಿದೆ. ಗರ್ಭಗುಡಿಯ ಮುಂದೆ ಮೂರಂಕಣದ ಕಲ್ಲಿನ ಮೇಲ್ಛಾವಣಿಯಿದೆ. ಈ ದೇವಸ್ಥಾನದ ಮುಂಭಾಗ ಸುಮಾರು ೬೦ ಅಡಿ ಅಗಲ, ೬೦ ಅಡಿ ಉದ್ದದ ಎರಡು ಅಂತಸ್ತಿನ ಕಲ್ಯಾಣ ಮಂದಿರವನ್ನು ಸುಮಾರು ೫೦ ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಗರ್ಭಗುಡಿಯ ಒಳಗಡೆಗೆ ಒಂದು ಉದ್ದನೆಯ ಸುಮಾರು ಒಂದು ಅಡಿ ಎತ್ತರ, ಒಂದು ಅಡಿ ಅಗಲವಿರುವ ಕಟ್ಟೆ ಹಾಕಿದ್ದು, ಆ ಕಟ್ಟೆಯ ಮಧ್ಯೆ ಎರಡೂವರೆ ಅಡಿ ಎತ್ತರದ ರೇಣುಕರ ಲಿಂಗೋದ್ಭವ ಮೂರ್ತಿಯನ್ನು ಸ್ಥಾಪಿಸಿ ಅಕ್ಕಪಕ್ಕದಲ್ಲಿ ಕಪ್ಪುಶಿಲೆಯ ಕಲ್ಲಿನ ಚೌಕಾಕಾರದ ಎರಡು ಫಲಕಗಳನ್ನು ಇಟ್ಟು ಸ್ಥಾಪನೆ ಮಾಡಿದ್ದಾರೆ. ಈ ಕಲ್ಲಿನ ಹೋಳುಗಳ ಮೇಲೆ ಆನೆ, ಅಂಬಾರಿಯನ್ನೇರಿದ ಒಬ್ಬ ರಾಹುತನ ಚಿತ್ರವನ್ನು ಅಕ್ಕಪಕ್ಕದಲ್ಲಿ ಎರಡೆರಡು ಕುದುರೆ, ಆ ಕುದುರೆಯ ಸವಾರರು ಪ್ರಾಪ್ತ ಹೆಣ್ಣುಗಳ ಸೊಂಟಕ್ಕೆ ಕೈ ಬಳಸಿ ಎಡಗಡೆಗೆ ಕುದುರೆಯ ಮೇಲೆ ಕೂರಿಸಿಕೊಂಡು ಹೋಗುತ್ತಿರುವ ಚಿತ್ರಗಳು ಆ ಎರಡೂ ಕಲ್ಲಿನ ಹಾಸುಗೆಗಳಲ್ಲಿ ಕೆತ್ತಲ್ಪಟ್ಟಿರುವುದು ವಿಶೇಷ. ಈ ರಾಹುತ ಮತ್ತು ಬೀರಪ್ಪನ ನಡುವೆ ಇರುವ ಆಚರಣೆಗಳ ಸಂಬಂಧವನ್ನು ಕುರಿತು ಅಧ್ಯಯನ ಮಾಡಬೇಕು.

ಈ ಎರಡೂ ಕಲ್ಲಿನಲ್ಲಿ ಕೆತ್ತಿರುವ ಮೂರ್ತಿಗಳು ಬೀರದೇವರ ರಾಜನಾಗಿ ಆನೆಯ ಅಂಬಾರಿಯನ್ನು ಏರಿರುವುದು ಮತ್ತು ಕುದುರೆ ಸವಾರನಾಗಿ ತನ್ನ ಸೋದರಮಾವ ಕಾಳಿನಾರಾಯಣನ ಮಗಳನ್ನು ಬೀರದೇವರು ಅಪಹರಿಸಿ ಕುದುರೆಯ ಮೇಲೆ ಕೂರಿಸಿಕೊಂಡು ಪಲಾಯನ ಮಾಡಿದ ದೃಶ್ಯಗಳು ಆ ಕಲ್ಲುಗಳಲ್ಲಿ ಕೆತ್ತಲ್ಪಟ್ಟಿವೆ. ಇದು ಬೀರಪ್ಪನ ಜೀವನ ಚರಿತ್ರೆಯನ್ನು ಅನಾವರಣ ಮಾಡುತ್ತದೆ. ಆ ಕಲ್ಲು ಚಪ್ಪಡಿಗಳ ಅಕ್ಕಪಕ್ಕದಲ್ಲಿ ಎರಡು ಕಂಬಗಳನ್ನು ನೆಟ್ಟಿದ್ದು, ಆ ಕಂಬಗಳಿಗೆ ತಳಕು ಹಾಕಿರುವ ಸರ್ಪಗಳ ಚಿತ್ತಾರಗಳನ್ನು ಕೆತ್ತಲ್ಪಟ್ಟಿವೆ. ಈ ಎಲ್ಲಾ ಮೂರ್ತಿಗಳು ಹೊರಗುಡಿಯಲ್ಲಿದ್ದು ಅವುಗಳ ಸಂಪ್ರದಾಯದಂತೆ ಭೂಮಿಯ ಆಧಾರವನ್ನು ಹೊಂದಿವೆ. ಇವೆಲ್ಲ ಅಂಶಗಳ ಸೊಬಟವೇ ಭಾನುವಳ್ಳಿಯ ಹೊರ ಬೀರದೇವರ ಗುಡಿಯಾಗಿದೆ.

ಇಲ್ಲಿ ದೇವರ ಹೆಸರಿನಲ್ಲಿ ಈರಗಾರರನ್ನು ಬಿಡುವ ಪದ್ಧತಿಯನ್ನು ಕಾಣಬಹುದು. ಈರಗಾರರು ಈರಗಾಸೆ, ತಲೆಗೆ ಪೇಟ, ಬಲಗೈಯ್ಯಲ್ಲಿ ಚಾಕು, ಖಡ್ಗ, ಅಲಗು, ಎಡಗೈಯ್ಯಲ್ಲಿ ವಸ್ತ್ರ, ಪೇಟದಲ್ಲಿ ಬಿಳಿ

ಹದ್ದಿನ ಗರಿ, ರುಂಡಮಾಲೆ, ರುದ್ರಾಕ್ಷಿ, ಮುಂತಾದ ಉಡುಪುಗಳನ್ನು ಧರಿಸಿ ನಾಟ್ಯ ಮಾಡುತ್ತಾ ದೇವರ ಸೇವೆ ಮಾಡುತ್ತಾರೆ. ಕಂತೆ ಭಿಕ್ಷದ ಕಾರ್ಯವೂ ಕೂಡ ಪಾರಂಪರಿಕ ಸಂಪ್ರದಾಯದಂತೆ ನಡೆದುಕೊಂಡು ಬಂದಿದೆ.

ದಸರಾ ಹಬ್ಬದಲ್ಲಿ ಬೀರದೇವರ ಒಳಗುಡಿಯಲ್ಲಿ ಒಂಭತ್ತು ದಿನ ದೀಪ ಹಾಕುವ ಪಾರಂಪರಿಕ ವಿಧಾನ ರೂಢಿಯಲ್ಲಿದೆ. ಹಾಲುಮತ ಪುರಾಣ, ರೇವಣ ಸಾಂಗತ್ಯ ಹರಿಭಕ್ತಸಾರದಂತಹ ಧಾರ್ಮಿಕ ಗ್ರಂಥಗಳ ಪ್ರವಚನ ಕಾರ್ಯಕ್ರಮವೂ ನಡೆಯುತ್ತದೆ. ಆ ದಿನದಂದು ಬೀರದೇವರ ಪಲ್ಲಕ್ಕಿಯಲ್ಲಿ ಮೂರ್ತಿಯನ್ನು ಮೆರವಣಿಗೆಯ ಮೂಲಕ ತಂದು ಬನ್ನಿ ಮುಡಿಯುತ್ತಾರೆ. ಆದರೆ ಭಾನುವಳ್ಳಿಯ ಬೀರದೇವರ ಭಕ್ತರಲ್ಲಿ ಬನ್ನಿಯ ಕಾರ್ಯಕ್ರಮವು ಸಾಂಪ್ರದಾಯಕ ರೀತಿಯಲ್ಲಿ ನಡೆದುಕೊಂಡು ಬಂದಿದೆ.

ಜಾತ್ರಾ ಮೂಹೂರ್ತ ಅಶ್ವಿಜ ಶುದ್ಧ ಮಾಸವು ಮಹಾಲಯ ಅಮವಾಸ್ಯೆಯ ನಂತರ ಪ್ರಾರಂಭವಾಗುತ್ತದೆ. ಅಮವಾಸ್ಯೆಯನ್ನು ಬಿಟ್ಟು ನವಮಿಯ ತಿಥಿಯಿಂದ ನವರಾತ್ರಿಯವರೆಗೂ ಭಾನುವಳ್ಳಿ ಬೀರದೇವರ ದೇವಸ್ಥಾನದಲ್ಲಿ ದೀಪ ಮತ್ತು ಬನ್ನಿ ಮುಡಿಯುವ ಕಾರ್ಯಕ್ರಮಗಳು ಜರುಗುತ್ತವೆ. ನಂತರ ಅನ್ನದಾಸೋಹ ಕಾರ್ಯಕ್ರಮ ನಡೆಯುತ್ತದೆ. ವಿಶೇಷವಾಗಿ ಕಾರ್ತಿಕ ಮಾಸದ ಕೊನೆಯ ಗುರುವಾರ, ಕಾರ್ತಿಕ ಮಾಸಾಚರಣೆಯನ್ನು ಅದ್ದೂರಿಯಾಗಿ ಮಾಡುತ್ತಾರೆ. ಆ ದಿನದಂದು ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಮಾಡುವ ಪದ್ಧತಿಯನ್ನು ಇತ್ತೀಚೆಗೆ ಆರಂಭಿಸಿದ್ದಾರೆ.

೨೫. ಜಿಗಳಿ

ಜಿಗಳಿ ಗ್ರಾಮವು ಹರಿಹರ ತಾಲೂಕಿನಲ್ಲಿದೆ. ಈ ಗ್ರಾಮದಲ್ಲಿ ಹಲವು ಶಿಲಾಶಾಸನಗಳಿವೆ. ಇದು ಗ್ರಾಮದ ಸಾಂಸ್ಕೃತಿಕ ಚರಿತ್ರೆಯನ್ನು ಬಿಂಬಿಸುತ್ತದೆ. ಈ ಗ್ರಾಮದಲ್ಲಿ ಸುಮಾರು ೫೦ ಹಾಲಮತಸ್ಥರ ಮನೆಗಳಿವೆ. ಸಂಪ್ರದಾಯದಂತೆ ಈ ಗ್ರಾಮದಲ್ಲೂ ಎರಡು ಬೀರದೇವರ ಗುಡಿಗಳಿವೆ. ಹೊರ ಬೀರಪ್ಪನ ಗುಡಿಯು ಊರ ಪಶ್ಚಿಮಕ್ಕೆ ಸುಮಾರು ಒಂದು ಕಿ.ಮೀ. ದೂರದಲ್ಲಿದೆ. ಇದು ಹಳೆಯ ಕಟ್ಟಡ ಹೊಂದಿದ್ದು ಮಣ್ಣಿನ ಮೇಲ್ಛಾವಣಿ ಹೊಂದಿದ್ದು ಪೂರ್ವಭಿಮುಖವಾಗಿ ಕಟ್ಟಲ್ಪಟ್ಟ ಈ ಗುಡಿಯು ನೂರಾರು ವರ್ಷಗಳ ಹಿಂದೆ ಇಲ್ಲಿ ದೊಡ್ಡ ದೇವರು ಮಾಡುವ ಸಂಪ್ರದಾಯವಿತ್ತಂತೆ. ದೊಡ್ಡದೇವರು ಮಾಡುವಾಗ ಗುಡಿಗಟ್ಟು ದೇವರುಗಳು ಬರುತ್ತಿದ್ದವು. ಆ ದೈವಗಳ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಯುತ್ತಿತ್ತಂತೆ. ಆ ಸಂದರ್ಭದಲ್ಲಿ ಈ ಜಾಗದಲ್ಲಿ ನೂರಾರು ಕುರಿಗಳನ್ನು ಬಲಿ ಕೊಡಲಾಗುತ್ತಿತ್ತು. ಆ ಸಂದರ್ಭದಲ್ಲಿ ಬಲಿಯಾದ ಕುರಿಗಳ ರಕ್ತ ಕೋಡಿಯಾಗಿ ಹರಿಯುತ್ತಿತ್ತಂತೆ. ಈ ಗುಡಿಯ ಪಕ್ಕದ ಆಲದ ಮರದಲ್ಲಿ ಗೊಗ್ಗ ಎಂಬ ಗ್ರಾಮದಿಂದ ಬಂದ ಬೀರಪ್ಪನ ಮೂರ್ತಿಯಿದೆ. ವಲಸೆ ಬೀರಪ್ಪನೆಂದು ಕರೆಯುತ್ತಾರೆ. ಇಂದಿಗೂ ಜಿಗಳಿ ಗ್ರಾಮದ ಭಕ್ತರು ಪೂಜಿಸುತ್ತಿದ್ದಾರೆ. 'ಗೊಗ್ಗ' ಎಂಬ ಗ್ರಾಮದ ಬೀರಪ್ಪ ಒಬ್ಬ ಪೌರಾಣಿಕ ವ್ಯಕ್ತಿಯಾಗಿದ್ದು, ಆತ ದೇಶ ಸಂಚಾರ ಮಾಡುತ್ತಾ ಬಂದಾಗ ಜಿಗಳಿಯ ಹೊರ ಬೀರಪ್ಪನ ಗುಡಿಯಲ್ಲಿ ವೈಭವದಿಂದ ಪೂಜೆ ನಡೆಯುತ್ತಿತ್ತಂತೆ. ಅದನ್ನು ಕಂಡ ಗೊಗ್ಗದ ಬೀರಪ್ಪನು ಜಿಗಳಿಯ ಬೀರಪ್ಪನ ಪೂಜೆಯ ವೈಭವಕ್ಕೆ ಮೆಚ್ಚಿ ಅಲ್ಲಿಯೇ ಇದ್ದ ಆಲದ ಮರದ ನೆರಳಿಗೆ ತಪೋನಿರತನಾದನಂತೆ ಎನ್ನುವ ಕಥೆಗಳು ಸಿಗುತ್ತವೆ. ಇದು ವ್ಯಕ್ತಿ ಚರಿತ್ರೆ ಯಾರೋ

ಒಬ್ಬ ಪವಾಡ ಪುರುಷ ಅಥವಾ ಗೊಗ್ಗ ಅಂದರೆ ಮೈಲಾರಲಿಂಗನ ಭಕ್ತನಾದವನ್ನು ಅಲೆದಾಡುತ್ತ ಬಂದು ಇಲ್ಲಿ ವಾಸವಾಗಿರಬೇಕು. ಗೊಗ್ಗದ ಬೀರಪ್ಪನ ಊಟವಿಲ್ಲದ ತಪವನ್ನು ಕಂಡ ಇರುವೆಗಳ ಹಿಂಡು ಜಿಗಳಿ ಗ್ರಾಮದಿಂದ ಅಕ್ಕಿಯ ಕಾಳಗಳನ್ನು ಕಚ್ಚಿಕೊಂಡು ಹೋಗಿ ಗೊಗ್ಗದ ಬೀರಪ್ಪನ ಮುಂದೆ ರಾಶಿ ಹಾಕಿದವಂತೆ. ಆಗ ಗೊಗ್ಗದ ಬೀರಪ್ಪ ಎಂಜಲಿಲ್ಲದ, ನೊಣ ಮುಟ್ಟದ ಅಡುಗೆ ಮಾಡಿಕೊಂಡು ತನ್ನ ಹಸಿವು ಹಿಂಗಿಸಿ ಕೊಂಡನಂತೆ. ಈಗಲೂ ಕೂಡ ಹಬ್ಬ-ಹರಿದಿನಗಳಲ್ಲಿ ವಾರ-ಹುಣ್ಣಿಮೆಗಳಲ್ಲಿ ಗೊಗ್ಗದ ಬೀರಪ್ಪನಿಗೆ ಹೊಸ ಮಡಿಕೆಯಲ್ಲಿ ಒಲೆ ಊದದಂತೆ, ಬೆಳಗಿನ ನಾಲ್ಕು ಗಂಟೆಯಲ್ಲಿ ನೊಣ ಮುಟ್ಟದಂತೆ ಅಕ್ಕಿಯನ್ನು ತೊಳೆಯದೆ ಅನ್ನಮಾಡಿ ಎಡೆ ಕೊಡುವ ಪದ್ಧತಿ ಈಗಲೂ ರೂಢಿಯಲ್ಲಿದೆ.

ಇನ್ನು ಒಳಬೀರಪ್ಪನ ಗುಡಿಯ ಬಗೆಗೆ ಹೇಳುವುದಾದರೆ ಇದು ಜಿಗಳಿ ಗ್ರಾಮದಲ್ಲಿರುವ ಪುರಾತನ ಗುಡಿ. ಮಣ್ಣಿನ ಮೇಲ್ಛಾವಣಿಯ ಮಾಳಿಗೆ ಮನೆಯಂತಹ ಗುಡಿಯಲ್ಲಿ ಬೀರಪ್ಪನನ್ನು ಪ್ರತಿಷ್ಠಾಪಿಸಲಾಗಿದೆ. ಇತ್ತೀಚೆಗೆ ಆ ಹಳೆಯ ಗುಡಿಯನ್ನು ಕೆಡವಿ ೨೦೦೦ನೇ ಇಸವಿಯಿಂದ ಈಚೆಗೆ ಕಲ್ಲಿನ ಮೇಲ್ಛಾವಣಿ ಹೊಂದಿದ ಹೊಸ ಗುಡಿಯನ್ನು ಕಟ್ಟಿಸಿದ್ದಾರೆ. ಈ ಗುಡಿಯು ಕಲ್ಲಿನಿಂದ ಕಟ್ಟಿದ್ದು ಸಂಪ್ರದಾಯದಂತೆ ದ್ವಾರಬಾಗಿಲು ಮತ್ತು ಗರ್ಭಗುಡಿಯ ಬಾಗಿಲೆಂದು ಎರಡು ಕಲ್ಲಿನ ಬಾಗಿಲುಗಳಿವೆ. ಗರ್ಭಗೃಹದ ಬಾಗಿಲಿನ ಲಲಾಟ ಬಿಂಬದಲ್ಲಿ ಗಣೇಶನ ವಿಗ್ರಹವಿದೆ. ಬಾಗಿಲಿನ ಎರಡೂ ಕಲ್ಲಿನ ತೋಳುಗಳಲ್ಲಿ ಅಕ್ಕಪಕ್ಕ ಎರಡು ಕುರಿಯ ಟಗರುಗಳನ್ನು ಕೆತ್ತಿಸಿದ್ದಾರೆ. ಇದು ಕುರುಬರ ಮತ್ತು ಕುರಿಗಾರಿಕೆಯ ಅನನ್ಯತೆಯಾಗಿ ಅಲ್ಲಲ್ಲಿ ಬಳಕೆಯಾದಂತೆ ಇಲ್ಲಿಯೂ ಸಹ ಬಳಕೆಯಾಗಿದೆ. ದ್ವಾರಬಾಗಿಲ ಮೇಲಿನ ಅಡ್ಡ ತೋಳ ಪಟ್ಟಿಯ ಮಧ್ಯ ಕುಳಿತುಕೊಂಡ ಲಕ್ಷ್ಮೀಯ ಚಿತ್ರವಿದೆ. ದ್ವಾರಬಾಗಿಲಿನ ಅಕ್ಕಪಕ್ಕ ರಾಮ ಲಕ್ಷ್ಮಣರನ್ನು ಕೆತ್ತಲ್ಪಟ್ಟಿದೆ. ಮೇಲ್ಛಾವಣಿಯ ಹುಸಿಯಲ್ಲಿ ಅಕ್ಕಪಕ್ಕ ಹೂವುಗಳ ಮಧ್ಯದಲ್ಲಿ ಗಂಡುಭೇರುಂಡದ ಚಿತ್ರ ಮತ್ತು ಒಂದು ಹೆಡೆಯ ಸರ್ಪದ ಚಿತ್ರವನ್ನು ಕೆತ್ತಲ್ಪಟ್ಟಿದೆ. ಹೀಗೆ ಗುಡಿಯ ಪ್ರತಿ ಕಂಬಗಳ ತುಂಬಾ ಬೇರೆ ಬೇರೆಯ ಉಬ್ಬು ಚಿತ್ರಗಳು ಕೆತ್ತಲ್ಪಟ್ಟಿದ್ದು ಇವು ಅದೇ ಗ್ರಾಮದ ಕಲಾವಿದ ಶ್ರೀ ಬಸವನಗೌಡರ ಕೆತ್ತನೆಂದು ಗ್ರಾಮಸ್ಥರು ತಿಳಿಸಿದ್ದಾರೆ. ಹುಲಿ ಚರ್ಮವನ್ನು ಹಾಸಿದ ತೂಗು ಮಂಚದ ಮೇಲೆ ಬೀರಪ್ಪ ಆಸೀನನಾಗಿರುವುದು ಇಲ್ಲಿ ವಿಶೇಷ. ಕಂಬಳಿ ಹಾಸುಗೆಯ ಬದಲು ಹುಲಿಚರ್ಮದ ಹಾಸಿಗೆ ಭಿನ್ನ ಬಗೆಯ ಅಸ್ಮಿತೆಯನ್ನು ತಿಳಿಸುತ್ತಾರೆ.

೨೬. ಮತ್ತಿಘಟ್ಟಿ

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಶ್ರೀ ಬಾಳಗಲ್ಲು ಬೀರಲಿಂಗೇಶ್ವರ ದೇವಸ್ಥಾನವಿದೆ. ಇದರ ಪೀಠ ಸ್ಥಾನದಲ್ಲಿ ಬಾಳಗಲ್ಲು ಬೀರಲಿಂಗೇಶ್ವರ ಹೊನ್ನಾಳಪ್ಪ ಎಂಬ ಎರಡು ಬೀರದೇವರ ಮೂರ್ತಿಗಳಿವೆ. ಇವು ಕುದುರೆ ಸವಾರರ ಶೈಲಿಯಲ್ಲಿದೆ. ಈ ಊರಲ್ಲಿ ರೇವಣಸಿದ್ಧೇಶ್ವರ ಮಠವಿದೆ. ಬಾಳಗಲ್ಲು ಬೀರದೇವರು ಸಂಪೂರ್ಣವಾಗಿ ನಾಶವಾಗಿದ್ದು ನೆಲದಲ್ಲಿ ಕಂಬಗಳು ಮಾತ್ರ ಕಾಣುತ್ತವೆ. ಇಲ್ಲಿಯ ಜನ ಇದೀಗ ಜೀರ್ಣೋದ್ಧಾರ ಮಾಡುವ ಉದ್ದೇಶ ಹೊಂದಿದ್ದಾರೆ.

ಹೊನ್ನಾಳಪ್ಪ ಬೀರದೇವರು ಗ್ರಾಮದ ಪಶ್ಚಿಮಕ್ಕೆ ೧ ಕಿ.ಮೀ. ದೂರದಲ್ಲಿರುವ ಆಲದ ಮರದ ಕೆಳಗೆಯಿದೆ. ಈ ದೇವಸ್ಥಾನ ಸುಮಾರು ಆರು ಅಡಿ ಎತ್ತರಕ್ಕೆ ಕಟ್ಟಿಸಿದ ಗೋಡೆಯಿದೆ. ಮೇಲ್ಛಾವಣಿ ಇದೆ. ಈ ಗುಡಿಯ ಒಳಗಡೆ ಪೀಠಸ್ಥಾನದಲ್ಲಿ ಎರಡು ಲಿಂಗರೂಪದ ಶಿಲೆಗಳಿವೆ. ಗುಡಿಯ ಮುಂಭಾಗದಲ್ಲಿ ಎರಡು ಟಗರುಗಲ್ಲುಗಳು ಅಭಿಮುಖವಾಗಿವೆ. ಇಲ್ಲಿ ಒಂದು ಸ್ಮಾರಕ ಕಲ್ಲು ಮಂಟಪವಿದೆ.

ಈ ದೈವಗಳ ಜಾತ್ರೆಯಲ್ಲಿ ವೀರಗಾರರ ಪವಾಡ ನಡೆಯುತ್ತದೆ. ೧೯೭೪ರಲ್ಲಿ ಜಾತ್ರೆಯಾಗಿದ್ದು, ಇಲ್ಲಿಯವರೆಗೂ ಜಾತ್ರೆಯೇ ನಡೆದಿಲ್ಲವೆಂದು ಗ್ರಾಮಸ್ಥರು ತಿಳಿಸುತ್ತಾರೆ. ಗ್ರಾಮದಲ್ಲಿ ನಡೆಯುವ ಜಾತ್ರೆಗಳನ್ನು ನೋಡಿದ ಹಿರಿಯರು ತಿಳಿಸಿದಂತೆ ಆಚರಣೆಗಳ ವಿವರ ಇಂತಿದೆ. ಇಲ್ಲಿ ದಳವಾಯಿ ಪೂಜೆ ಸಲ್ಲಿಸುತ್ತಾನೆ. ಇಲ್ಲಿಯ ದೇವರಿಗೆ ಸ್ಥಳೀಯರು ಕೆಂಡರಾಯ ಎಂದು ಕರೆಯುತ್ತಾರೆ. ಇಲ್ಲಿಯ ದಸರಾ, ಕಾರ್ತಿಕ ಹಬ್ಬಗಳಲ್ಲಿ ವಿಶೇಷ ಪೂಜೆ ಇರುತ್ತದೆ. ಪೂಜಾರಿಗಳಿಗೆ ಮತ್ತು ವೀರಗಾರರಿಗೆ ಗುಡಿಯಲ್ಲಿ ಪಟ್ಟದೀಕ್ಷೆ ನೀಡುತ್ತಾರೆ. ದೇವರಿಗೆ ಮೈದುಂಬಿದಾಗ ಎಡಗೈಯಲ್ಲಿ ಬೆತ್ತ ಬಲಗೈಯಲ್ಲಿ ಮುರಿಗೆ ದೊಣ್ಣೆಯನ್ನು ಹಿಡಿದಿರುತ್ತಾನೆ. ಇಲ್ಲಿಯ ಜನರ ನಂಬಿಕೆ ಅಕ್ಷತೆ ಕಾಳುಗಳ ಎಣಿಕೆಯಲ್ಲಿ ಬೆಸಸಂಖ್ಯೆಯಲ್ಲಿ ಬಂದರೆ ಶುಭವೆಂದು, ಸರಿ ಸಂಖ್ಯೆ ಕಾಳುಗಳು ಬಂದರೆ ಅಶುಭವೆಂದು ನಂಬಿಕೆ ಇದೆ. ಕ್ರಿ.ಶ. ೧೯೭೪ರಲ್ಲಿ ನಡೆದ ಬೀರದೇವರ ಜಾತ್ರೆಯಲ್ಲಿ ಮೂವರು ಪೂಜಾರಿಗಳಿಗೆ ನಾಲ್ಕು ಜನ ಈರಗಾರರಿಗೆ, ಒಬ್ಬ ಕೆಂಡರಾಯನಿಗೆ ಪಟ್ಟದೀಕ್ಷೆ ನೀಡಲಾಗಿತ್ತು ಎಂದು ಇಲ್ಲಿಯ ಜನ ಹೇಳುತ್ತಾರೆ.

೨೭. ಹೀರೇನಲ್ಲೂರು

ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕು ಕೇಂದ್ರದಿಂದ ಸುಮಾರು ೧೩ ಕಿ.ಮೀ. ದೂರದಲ್ಲಿದೆ. ಈ ಊರಲ್ಲಿ ೮೦೦ ಹಾಲುಮತಸ್ಥರ ಮನೆಗಳಿವೆ. ಇಲ್ಲಿ ಹೊಯ್ಸಳರ ಕಾಲದ ಸುಂದರ ಶಿಲ್ಪಕಲೆಯ ಶಿವಾಲಯವಿದೆ. ೬೦ ವರ್ಷಗಳ ಹಿಂದೆ ಕಟ್ಟಲಾದ ಮನೆಯ ರೂಪದ ಬೀರಪ್ಪನ ಗುಡಿಯಿದೆ. ಈ ಗುಡಿಗೆ ಎರಡು ದ್ವಾರಗಳಿದ್ದು, ವಿಶಾಲವಾದ ನವರಂಗವಿದೆ. ಗರ್ಭಗುಡಿಯ ಒಳಗೆ ಪೀಠಸ್ಥಾನದಲ್ಲಿ ಎರೆಬೀರಪ್ಪ, ಕಳ್ಳಿ ಬೀರಪ್ಪ, ಈರಗಿಡಪ್ಪ ಮತ್ತು ಬಾಳಪ್ಪ ಎಂಬ ನಾಲ್ಕು ದೇವರ ಮೂರ್ತಿಗಳಿವೆ.

ಎರೆಬೀರಪ್ಪನ ಮೂಲಸ್ಥಾನ ಹೀರೆನಲ್ಲೂರು ಬಳಿ ಇರುವ ಕೆದಿಗೇರೆ ಗ್ರಾಮದ ದಕ್ಷಿಣಕ್ಕೆ ಒಂದು ಕಿ.ಮೀ. ದೂರದ ಶಿವಾನಂದಸ್ವಾಮಿ ಆಶ್ರಮದಲ್ಲಿದೆ. ಈ ದೇವಾಲಯವು ಪ್ರಾಚೀನವಾಗಿದ್ದು, ಸಾಧಾರಣ ಕಲ್ಲಿನಿಂದ ಕಟ್ಟಲಾಗಿದೆ. ಪೀಠಸ್ಥಾನದಲ್ಲಿ ನಾಲ್ಕು ಲಿಂಗ ಶಿಲೆಗಳಿವೆ. ಎರೆಬೀರಪ್ಪ ದೇವರಿಗೆ ೧೯೯೦ರಲ್ಲಿ ಮೆಟ್ಟುಗಲ್ಲು ಜಾತ್ರೆಯಾಗಿದ್ದು, ೫೦೦ ಗೂಡೆಗಳ ಮೀಸಲು ಅರ್ಪಿತವಾಯಿತು. ಈ ದೇವರಿಗೆ ಒಬ್ಬರು ದಳವಾಯಿ, ನಾಲ್ಕು ಜನ ಪೂಜಾರಿಗಳು ನಾಲ್ಕು ಜನ ಈರಗಾರರು ಇದ್ದರೆ.

೨೮. ಅಂಬಳೆ

ಚಿಕ್ಕಮಗಳೂರಿನಿಂದ ಜಿಲ್ಲೆಯಲ್ಲಿ ಬರುವ ಅಂಬಳೆ ಗ್ರಾಮದಲ್ಲಿ ಸುಮಾರು ೧೦೦ ಹಾಲುಮತಸ್ಥರ ಮನೆತನಗಳು ಕಂಡುಬರುತ್ತವೆ. ಈ ಊರಲ್ಲಿ ಹೊಯ್ಸಳರ ಕಾಲದ ಶಿವದೇವಾಲಯಗಳಿವೆ. ಇಲ್ಲಿ ಮುಖ್ಯಾರ

ಬೀರಲಿಂಗೇಶ್ವರ ದೇವಾಲಯ ಇತ್ತೀಚೆಗೆ ಜೀರ್ಣೋದ್ಧಾರವಾಗಿದೆ. ಗರ್ಭಗುಡಿಯ ಒಳಗೆ ಪೀಠಸ್ಥಾನದಲ್ಲಿ ಅಶ್ವಾರೋಹಿ ಸವಾರರ ಶೈಲಿಯ ಸುಮಾರು ೨೦ ಬೀರದೇವರ ಕಂಚಿನ ವಿಗ್ರಹಗಳಿವೆ. ಇವುಗಳಲ್ಲಿ ಮುಳ್ಳಾರು ಬೀರದೇವರು, ಬ್ಯಾಲ್ಯದ ಕುಲದ ಬೀರದೇವರು, ಗೊಲ್ಲ ಕುಲದ ಬೀರದೇವರು ಪ್ರಮುಖವಾದವುಗಳು.

ಮುಳ್ಳಾರ ಬೀರದೇವರ ಮೂಲಸ್ಥಾನ ಅಂಬಳೆ. ಈ ಗ್ರಾಮ ಪಶ್ಚಿಮಕ್ಕೆ ೨ ಕಿ.ಮೀ. ದೂರದಲ್ಲಿರುವ ಸಿರಿಗಾಪುರ ಗ್ರಾಮದ ಪಶ್ಚಿಮ ಬಯಲಿನಲ್ಲಿದೆ. ಇಲ್ಲಿ ಸುಮಾರು ಸಣ್ಣ ಸಣ್ಣ ಗುಡಿಗಳಿದ್ದು ಪ್ರತಿ ಗುಡಿಯಲ್ಲಿ ೫ ಲಿಂಗಶಿಲೆಗಳಿವೆ. ಬ್ಯಾಲದ ಕುಲದ ಬೀರದೇವರ ಮೂಲ ದೇವಸ್ಥಾನ ಅಂಬಳೆ ಗ್ರಾಮ ನೈರುತ್ಯಕ್ಕೆ ೪ ಕಿ.ಮೀ. ದೂರದಲ್ಲಿದೆ. ಇದು ಮಧ್ಯಮ ಪ್ರಮಾಣದ ಗುಡಿಯಾಗಿದ್ದು, ಗುಡಿಯ ಪೀಠಸ್ಥಾನದಲ್ಲಿ ಐದು ಲಿಂಗ ಶಿಲೆಗಳಿವೆ.

ಗೊಲ್ಲಬೀರದೇವರ ದೇವಸ್ಥಾನ ಅಂಬಳೆಗೆ ೬ ಕಿ.ಮೀ. ಅಂತರದ ಹೊಸಹಳ್ಳಿಯಲ್ಲಿದೆ. ಅಂಬಳೆ ಬೀರದೇವರ ದೇವಾಲಯವು ಬಹುದೊಡ್ಡದಾಗಿದೆ. ಮುಳ್ಳಾರು ಬೀರಲಿಂಗೇಶ್ವರನನ್ನು ಸ್ಥಳೀಯರು 'ಸಾವಿರ ಕುದುರೆಯ ಸರದಾರ' ಎಂದೇ ಕರೆಯುತ್ತಾರೆ. ವಿವಿಧ ಕಾರಣಗಳಿಂದ ಗುಡಿಗಳು ಚದುರಿ ಹೋಗಿವೆ ಎನ್ನುತ್ತಾರೆ. ಆದರೂ ಈ ವಿಂಗಡಣೆ ಕುರುಬ ಕುಲ ವಿಸ್ತರಣೆಯನ್ನು ತಿಳಿಸುತ್ತದೆ. ಅಂದರೆ ಕುರುಬರ ಕುಲಗಳು, ಕುಟುಂಬಗಳು ಬೇರೆ ಕಡೆ ನೆಲೆಸಿದಂತೆ ದೇವಾಲಯಗಳನ್ನು ಕಟ್ಟಿಕೊಂಡಿದ್ದಾರೆ ಎನ್ನುವ ವಾಸತವ ಮೇಲ್ನೋಟಕ್ಕೆ ತಿಳಿದುಬರುತ್ತದೆ. ಅಂಬಳೆ ಬೀರದೇವರಿಗೆ ೧೯೨೬ರಲ್ಲಿ ತೋಪು ಜಾತ್ರೆಯಾಗಿತ್ತಂತೆ. ಸ್ಥಳೀಯರು ತೋಪು ಜಾತ್ರೆಯನ್ನು ಇಲ್ಲಿಯವರೆಗೂ ನೋಡಿಯೆ ಇಲ್ಲ ಎಂದು ಹೇಳುತ್ತಾರೆ. ಇಲ್ಲಿಯವರೆಗೆ ಪೂಜೆ ಸಲಿಸುವವರು, ಹಾಲಿನ ಕುರುಬರು ದಳವಾಯಿಗೌಡ ಕುಲದವರು ಪೂಜಾರಿಕೆ ನಡೆಸುಕೊಂಡು ಹೋಗುತ್ತಿದ್ದಾರೆ.

೨೯. ಅನುವನಹಳ್ಳಿ

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನ ಶಿವನಿಯಿಂದ ದಕ್ಷಿಣಕ್ಕೆ ಸುಮಾರು ೨ ಕಿ.ಮೀ. ದೂರದಲ್ಲಿದೆ. ಸುಮಾರು ೨೫೦ ಹಾಲುಮತಸ್ಥರ ಮನೆತನಗಳಿವೆ. ಇದು ಹೊಯ್ಸಳರ ಕಾಲದ ಪ್ರಸಿದ್ಧ ಪಟ್ಟಣವಾಗಿತ್ತು ಎನ್ನುವ ಕಥನಗಲು ಸಿಗುತ್ತವೆ. ಪ್ರಸ್ತುತ ಅಧ್ಯಯನಕ್ಕೆ ಅವು ಮುಖ್ಯವಲ್ಲವಾದರೂ ಈ ಗ್ರಾಮ ಹೊಯ್ಸಳರ ಕಾಲದಷ್ಟು ಹಿಂದಿನದು ಮತ್ತು ಆ ಕಾಲದಲ್ಲೇ ಪಟ್ಟಣಗಳು ಆಗುವಷ್ಟು ಬೆಳೆದಿತ್ತು ಎನ್ನುವುದು ಮುಖ್ಯವಾಗುತ್ತದೆ. ಅನುವನಹಳ್ಳಿ ಬೀರದೇವರು ಗೋಸಿಕೆರೆ ಬೀರದೇವರು ಎರಡು ದಳವಾಯಪ್ಪ ಕುದುರೆಯ ಮೇಲೆ ಕುಳಿತಿರುವ ವೀರಸವಾರರ ಶೈಲಿಯಲ್ಲಿದ್ದು ಒಟ್ಟು ನಾಲ್ಕು ಮೂರ್ತಿಗಳನ್ನು ಶಿವನಿಯ ಮಳದೇವರ ಗುಡಿಯಲ್ಲಿ ಇಟ್ಟಿದ್ದಾರೆ.

ಗೋಸಿಕೆರೆ ಬೀರದೇವರ ಮೂಲಸ್ಥಾನ ಅನುವನಹಳ್ಳಿಯ ಪೂರ್ವದಿಕ್ಕಿಗೆ ೨ ಕಿ.ಮೀ. ದೂರದಲ್ಲಿದೆ.ಇದು ಸಣ್ಣ ಸಣ್ಣ ಕಲ್ಲುಗಳಿಂದ ಕಟ್ಟಿರುವ ನೆಲಗುಡಿ, ಸಣ್ಣ ತೆರೆದ ಬಾಗಿಲಿದ್ದು ನವರಂಗ, ಗರ್ಭಗುಡಿದೆ. ಪೀಠಸ್ಥಾನದಲ್ಲಿ ನಾಲ್ಕು ಲಿಂಗಶಿಲೆಗಳಿವೆ. ಅನುವನಹಳ್ಳಿ ಗೋಸಿಕೆರೆ ಬೀರದೇವರಿಗೆ ಬಿಜ್ಜಳನ ಕುರುಬರು ಮಾತ್ರ ಒಕ್ಕಲಾಗಿದ್ದು ಇವರನ್ನು ಕೂಕನ ಕುರುಬ ಕುಲದವರೆಂದು ಕರೆಯುತ್ತಾರೆ. "ಈ ದೇವರಿಗೆ ಶಿವನಿಯ

ವೀರಶೈವ ಗೌಡರ ಮನೆಯವರೂ ಒಕ್ಕಲಾಗಿದ್ದು ತೋಪುಜಾತ್ರೆಯಲ್ಲಿ ಅವರೂ 'ಚೌಟು' ಹಾಕುತ್ತಾರೆ ಹಾಗೂ ಮೀಸಲು ಕೊಡುತ್ತಾರೆ. ಇಲ್ಲಿ ೧೯೮೫ರಲ್ಲಿ ತೋಪುಜಾತ್ರೆ ನಡೆದಿತ್ತು. ಆಗ ೧೮೦ ಮೀಸಲು ಬಂದಿದ್ದವು. ಇಂದು ಅವುಗಳ ಸಂಖ್ಯೆ ೨೨೦ಕ್ಕೆ ಮೀರಿರುತ್ತವೆ ಎಂದು ಅಲ್ಲಿಯ ಪೂಜಾರಿ ಸಿದ್ಧಪ್ಪ ದಳವಾಯಿ ಅವರು ಹೇಳುತ್ತಾರೆ".[೩೧] ಇಲ್ಲಿ ಒಂದೇ ಕುಲದವರು ಒಕ್ಕಲಾಗಿರುವುದರಿಂದ ಇರುವ ಒಕ್ಕಲುಗಳಲ್ಲೇ ದಳವಾಯಿ, ಪೂಜಾರಿ, ಈರಗಾರರ ಆಯ್ಕೆ, ಪಟ್ಟದೀಕ್ಷೆ ಮುಂತಾದ ಆಚರಣೆಗಳು ನಡೆಯುತ್ತವೆ. ಇಲ್ಲಿ ಒಬ್ಬ ದಳವಾಯಿ, ಆರು ಜನ ಈರಗಾರರು, ೧೨ ಜನ ಪೂಜಾರರು ಪಟ್ಟದೀಕ್ಷೆ ಪಡೆದಿದ್ದಾರೆ. ಕ್ಷೇತ್ರಕಾರ್ಯ ಮಾಡಿದ ಸ್ಥಳದಲ್ಲಿ ಹೆಚ್ಚು ಪೂಜಾರರು ಪಟ್ಟದೀಕ್ಷೆ ತೆಗೆದುಕೊಂಡಿರುವ ಸ್ಥಳವಿದೆ.

ಇಲ್ಲಿ ಗೋಸಿಕೆರೆ ಸಿದ್ಧಯ್ಯನ ದೇವಸ್ಥಾನವು ಇದೆ. ಇದಕ್ಕೆ ಬೀರಪ್ಪನ ದೇವಾಲಯ ಎಂದು ಕೆಲವು ಜನ ಹೇಳುತ್ತಾರೆ. ಎತ್ತರದ ಗುಡ್ಡದ ನೆಲಮಾಳಿಗೆಯಲ್ಲಿ ಈ ದೇವಾಲಯ ಗುಹೆಯಂತೆ ನಿರ್ಮಿಸಲ್ಪಟ್ಟಿದ್ದು ಲಿಂಗವೊಂದರ ಜೊತೆ ಗುಂಡುಕಲ್ಲುಗಳು ಮೂಲ ದೇವರಾಗಿವೆ. ಇಲ್ಲಿ ಹಬ್ಬದಲ್ಲಿ ಪೂಜೆ ಇರುತ್ತದೆ. ಇತರ ಸಮಯದಲ್ಲಿ ಇರುವುದಿಲ್ಲ. ೧೨ ವರ್ಷಗಳಿಗೊಮ್ಮೆ ಜಾತ್ರೆ ನಡೆಯುತ್ತಿದ್ದು, ಊರ ಹೊರಗಿನ ದೇವಾಲಯದ ಆವರಣದಲ್ಲಿ ಚೌಟು ಹಾಕಿ ತೋಪುಜಾತ್ರೆ ಮಾಡುತ್ತಾರೆ.

ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ತೋಪುಜಾತ್ರೆಯಲ್ಲಿ ಬೀರದೇವರ ಪಟ್ಟದವರನ್ನು ಆಯ್ಕೆ ಮಾಡುತ್ತಾರೆ. ದಳವಾಯಿ, ಈರಗಾರರು ಮತ್ತು ಪೂಜಾರಿಗಳನ್ನು ಪಟ್ಟಗಟ್ಟುತ್ತಾರೆ. ಈಗಾಗಲೇ ದಳವಾ ಜೀವಂತವಿದ್ದರೆ ಪಟ್ಟ ಕಟ್ಟುವುದಿಲ್ಲ. ಆದರೆ ಪೂಜಾರಿ ಈರಿಕೆಯವರು ಇದ್ದರೂ ಪುನಃ ನೇಮಕ ಮಾಡುತ್ತಾರೆ. ಇಂತಹ ವಿಧಾನಗಳು ಕರ್ನಾಟಕದಲ್ಲಿ ಕಂಡುಬರುವಂತೆ ಕಂಡುಬರುತ್ತವೆ.

ಊರ ಹೊರಗಿನ ದೇವಸ್ಥಾನದಲ್ಲಿ ಲಿಂಗವಿದ್ದು ಊರ ಒಳಗಿನ ಉಪಗುಡಿಯಲ್ಲಿ ದಳವಾಯಿ, ಗೋಸಿಕೆರೆ ಸಿದ್ಧಯ್ಯ ಮತ್ತು ಬೀರಪ್ಪನ ಮೂರ್ತಿಗಳಿದ್ದು ಮೂರು ಮೂರ್ತಿಗಳೂ ಕುದುರೆಯ ಮೇಲೆ ಕುಳಿತ ಸವಾರರನ್ನು ಹೋಲುತ್ತದೆ. ಅದೇರೀತಿ ಈ ದೇವಾಲಯ ರಚನೆ ಪೌಳಿಗೆ ಪೂರ್ವ, ಉತ್ತರ ಮತ್ತು ದಕ್ಷಿಣಗಳಿಂದ ಪ್ರವೇಶದ್ವಾರಗಳಿವೆ. ಪೂರ್ವ, ದಕ್ಷಿಣ ದ್ವಾರಗಳು ಕೋಟೆಯ ಹೆಬ್ಬಾಗಿಲಿನಂತಿವೆ. ಪೂರ್ವದ ಹೆಬ್ಬಾಗಿಲಿನದು ತುಂಬಾ ಹಳೆಯ ರಚನೆ. ಇದರ ಮುಂಭಾಗದಲ್ಲಿರುವ ಹೊಂಡವಿದೆ. ಇದು ಪ್ರಾಚೀನ ಕಾಲದ ಕಲ್ಯಾಣಿ ಅಥವಾ ಓಕಳಿಯ ಹೊಂಡವೆಂಬುದು ಸ್ಪಷ್ಟ. ಇದು ಈಗ ಉಪಯೋಗದಲ್ಲಿ ಇಲ್ಲ. ಉತ್ತರದ ದ್ವಾರ ಹೆಸರಿಗೆ ಮಾತ್ರ. ಸದ್ಯ ದಕ್ಷಿಣ ದ್ವಾರವೇ ಉಪಯೋಗದಲ್ಲಿದೆ. ಇದರ ಪೂರ್ವ ಬದಿಯ ಗೋಡೆಯಲ್ಲಿ ನಗಾರಿಖಾನೆಯಿದೆ.

ಪೂರ್ವದ ಕಡೆಯ ಪ್ರವೇಶದ್ವಾರದ ಪರಿಸರದಲ್ಲಿ ಒಂದು ದೀಪಸ್ತಂಭ ಇದರ ಸಮೀಪ ಮುಖ್ಯ ದೇವಸ್ಥಾನದ ಎದುರಿಗೆ ಕುದುರೆಯ ಒಂದು ಶಿಲ್ಪ. ಅದರ ಮುಂಭಾಗದ ನೆಲದ ಮೇಲೆ ಒಂದು ಆಮೆ ಚಿತ್ರವಿದೆ.

ಕುದುರೆ ಅಮೆಗಳ ಶಿಲ್ಪದ ಮುಂದೆ ಒಂದು ದೀಪಮಾಲಾಸ್ತಂಭವಿದ್ದು ಅದರ ಎದುರು ಮುಖ್ಯ ದೇವಾಲಯವಿದೆ. ಇದು ಚೌಕಾಕಾರದ ಗರ್ಭಗೃಹ, ಅದಕ್ಕೆ ತಾಗಿದಂತಿರುವ ಸುಕನಾಸಿ ಮತ್ತು ಮುಂಬದಿಯಲ್ಲಿ ಹದಿನಾರು ಕಂಬಗಳ ರಂಗಮಂಟಪವಿದೆ. ಈ ರಂಗಮಂಟಪದ ಸುತ್ತಲೂ ಕೂಳಿತುಕೊಳ್ಳಲು ಅನುಕೂಲ ವಾಗುವಂತೆ ಶಿಲಾಪೀಠವಿದೆ. ದೇವಾಲಯ ರಚನೆ ಪ್ರಾಚೀನವಾದುದೆಂದು ಇದರಿಂದ ಹೇಳಬಹುದು. ಗರ್ಭಗೃಹದ ಬಾಗಿಲು ತೋಲೆಗಳು, ಹೊಸ್ತಿಲುಗಳು ಕಂಬಗಳು ಮತ್ತು ಇಡಿಯಾದ ನವರಂಗಮಂಟಪ ಹಿತ್ತಾಳೆಯ ತಗಡಿನಿಂದ ಮುಚ್ಚಲ್ಪಟ್ಟಿವೆ. ಇದರ ಮೇಲೆ ಎಲ್ಲೆಡೆ ನಾನಾತರಹದ ಚಿತ್ತಾರಗಳನ್ನು ಬಿಡಿಸಿದ್ದಾರೆ.

ಗರ್ಭಗೃಹ ಸುಕನಾಸಿ ಮತ್ತು ರಂಗಮಂಟಪದ ಮೇಲೆ ಅವುಗಳ ಪ್ರಮಾಣಕ್ಕೆ ತಕ್ಕಂತೆ ಪ್ರತ್ಯೇಕವಾದ ಮೂರು ಶಿಖರಗಳನ್ನು ನಿರ್ಮಿಸಲಾಗಿದೆ. ಇವುಗಳ ಮೊದಲ ಅಂತಸ್ತು ಎಲ್ಲ ಭಾಗಗಳು ಇಟ್ಟಿಗೆ ಗಚ್ಚುಗಳಿಂದ ನಿರ್ಮಿಸಿದವುಗಳು. ಇವು ತರುವಾಯದ ರಚನೆಗಳಂತೆ ತೋರುತ್ತವೆ. ಗರ್ಭಗೃಹದ ಮೇಲಿನ ಶಿಖರ ದೊಡ್ಡ ದಾಗಿದ್ದು ಮೇಲೆರುತ್ತ ಹೋದಂತೆ ಕಿರಿದಾಗಿ ತುದಿಯಲ್ಲಿ ಕಳಸವುಳ್ಳದಾಗಿದೆ.

ಗರ್ಭಗೃಹದ ಮಧ್ಯ ನೆಲದ ಮೇಲೆ ಬೀರಪ್ಪ ಮತ್ತು ಮಾಳಿಂಗರಾಯನ ಎರಡು ಲಿಂಗಗಳಿವೆ. ಅವೆರಡಕ್ಕೂ ಒಟ್ಟಾಗಿ ಪಾಣಿಪೀಠವೊಂದನ್ನು ರಚಿಸಿದ್ದಾರೆ. ಇವುಗಳ ಮುಂದಿರುವ ಭಾಗದಲ್ಲಿ ಮಾಳಿಂಗರಾಯ ಮತ್ತು ಲಕ್ಷ್ಮೀದೇವಿಯ ಮುಖವಾಡಗಳನ್ನು ಸ್ಥಾಪಿಸಲಾಗಿದೆ. ಇವುಗಳ ಹಿಂದೆ ದೊಡ್ಡದಾದ ಹಿತ್ತಾಳೆಯ ಪ್ರಭಾವಳಿ ಇದೆ.

೩೦. ಆಸಂದಿ

ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕಿನ ಅಸಂದಿ ಗ್ರಾಮ ಹೊಸದುರ್ಗ ರಸ್ತೆಯಿಂದ ದಕ್ಷಿಣಕ್ಕೆ ಸುಮಾರು ೩ ಕಿ.ಮೀ. ದೂರದಲ್ಲಿದೆ. ಐತಿಹಾಸಿಕವಾಗಿ ಅಸವಾತಿ ಪಟ್ಟಣ ಎಂದು ಹೆಸರು ಪಡೆದಿದ್ದ ಈ ಗ್ರಾಮ ಹೊಯ್ಸಳರ ಮಾಂಡಲಿಕರಾದ ಆಸಂದಿ ಗಂಗರ ರಾಜಧಾನಿಯಾಗಿ ಪ್ರಸಿದ್ಧವಾಗಿತ್ತು. ಇಲ್ಲಿರುವ ಶ್ರೀ ಬೀರಲಿಂಗೇಶ್ವರನ ದೇವಾಲಯವು ವಿಶಾಲವಾದ ಪೌಳಿಯಾಗಿರುವ ಸಾಧಾರಣ ವಾಸ್ತು ಶೈಲಿಯ ಗುಡಿ. ಕಟ್ಟಡ ಸಾಮಾನ್ಯ ದರ್ಜೆಯದಿದ್ದು, ಗರ್ಭಗೃಹ, ಸುಕನಾಶಿ ರಂಗಮಂಟಪ ಹೊರಮಂಟಪಗಳಿಂದ ಕೂಡಿದೆ. ಈ ಗುಡಿಯ ಪೀಠಸ್ಥಾನದಲ್ಲಿ ಕುದುರೆ ಮೇಲೆ ಕುಳಿತ ವೀರರ ಭಂಗಿಯಲ್ಲಿರುವ ಐದು ಬೀರದೇವರ ಕಂಚಿನ ಮೂರ್ತಿಗಳಿವೆ. ಅವುಗಳನ್ನು ಮುದಿಯಪ್ಪ, ಮಾದಳೆಪ್ಪ, ಬೇಗೂರಪ್ಪ, ಉತ್ತಪ್ಪ ಮತ್ತು ಕಲ್ಲೆಪ್ಪ ಎಂದು ಕರೆಯುತ್ತಾರೆ. ಈ ಐದು ದೇವರುಗಳಿಗೆ ಮೂರು ಊರುಗಳಲ್ಲಿ ಮೂಲಸ್ಥಾನಗಳಿವೆ. ಇದು ಪಂಚಲಿಂಗ ಆರಾಧನೆಯ ಪರಿಕಲ್ಪನೆಯನ್ನು ಪ್ರತಿಪಾದನೆ ಮಾಡುತ್ತದೆ.

೧. ಮುದಿಯಪ್ಪನ ಮೂಲಸ್ಥಾನವು ಆಸಂದಿಗೆ ಸಮೀಪವಿದ್ದು ಹಡಗಲು ಗ್ರಾಮದ ಪೂರ್ವಕ್ಕೆ ಅರ್ಧ ಸುಮಾರು ಒಂದು ಕಿ.ಮೀ. ದೂರದಲ್ಲಿದೆ. ಇದು ಕಲ್ಲುಮಣ್ಣಿನಿಂದ ಸಾಧಾರಣವಾದ ಗುಡಿ. ತೆರೆದ ಬಾಗಿಲಿನ ಈ ಗುಡಿಯಲ್ಲಿ ಒಂದು ನವರಂಗ, ಒಂದು ಗರ್ಭಗುಡಿಯೂ ಇದೆ. ಗರ್ಭಗುಡಿಯ ಪೀಠಸ್ಥಾನದಲ್ಲಿ ಐದು ಲಿಂಗರೂಪದ ಬೀರಲಿಂಗ ಶಿಲೆಗಳಿವೆ. ಈ ಗುಡಿಯ ಹತ್ತಿರದಲ್ಲಿ ಒಂದು ಕಲ್ಯಾಣಿ ಇದೆ.

೨. ಮಾದಳೆಪ್ಪನ ಮೂಲಸ್ಥಾನ ಹಡಗಲಿ ಗ್ರಾಮವು ದಕ್ಷಿಣಕ್ಕೆ ಸುಮಾರು ೧ ಕಿ.ಮೀ. ದೂರದಲ್ಲಿದೆ. ದೇವಾಲಯದ ಸುತ್ತಲು ಹೊಲಗಳಿವೆ. ಈ ದೇವಸ್ಥಾನವನ್ನು ಕಲ್ಲುಮಣ್ಣಿನಿಂದ ಕಟ್ಟಲಾಗಿದೆ. ನವರಂಗವಿದೆ. ಗರ್ಭಗುಡಿಯ ಒಳಗೆ ಪೀಠಸ್ಥಾನದಲ್ಲಿ ಐದು ಲಿಂಗರೂಪದ ಶಿಲೆಗಳಿವೆ.

೩. ಬೇಗೂರಪ್ಪನ ಮೂಲಸ್ಥಾನ ಬೇಗೂರಿನ ವಾಯುವ್ಯ ದಿಕ್ಕಿಗೆ ಸುಮಾರು ೨೮ ಕಿ.ಮೀ. ದೂರದಲ್ಲಿದೆ. ಇದು ಕಲ್ಲುಮಣ್ಣಿನಿಂದ ಕಟ್ಟಲ್ಪಟ್ಟ ಸಣ್ಣಗಾತ್ರದ ಗುಡಿ. ಈ ಗುಡಿಗೆ ಬಾಗಿಲು ಇಲ್ಲ. ಸಣ್ಣ ಗುಡಿ. ನವರಂಗವಿದೆ. ಪೀಠಸ್ಥಾನದಲ್ಲಿ ಐದು ಲಿಂಗರೂಪದ ಶಿಲೆಗಳಿವೆ.

೪. ಕರ್ಲಪ್ಪನ ಮೂಲ ದೇವಸ್ಥಾನ ಬೇಗೂರಿನ ಬೇಗೂರಪ್ಪನ ಗುಡಿಯ ಪಕ್ಕದಲ್ಲಿದೆ. ಈ ಗುಡಿಯೂ ಕಲ್ಲುಮಣ್ಣಿನಿಂದ ಕಟ್ಟಲ್ಪಟ್ಟಿದೆ. ಸಣ್ಣ ಪ್ರಮಾಣದ ಗುಡಿಯಾಗಿದೆ. ಒಂದು ನವರಂಗವಿದೆ, ಗರ್ಭಗುಡಿಯ ಒಳಗಡೆ ಪೀಠದಲ್ಲಿ ಐದು ಲಿಂಗರೂಪದ ಶಿಲೆಗಳಿವೆ.

೫. ಉತ್ತಪ್ಪನ ಮೂಲ ಗುಡಿಯು ಅಸಂದಿಯ ವೀರಭದ್ರೇಶ್ವರನ ಗುಡಿಯ ಹತ್ತಿರದಲ್ಲಿದೆ. ಆದರೆ ಪ್ರತ್ಯೇಕವಾಗಿದೆ. ವೀರಭದ್ರನ ಅವತಾರವೇ ಬೀರೇಶ್ವರನ ಉಗಮವೆಂಬ ಮಾತಿದ್ದರೂ ಸಹ ಈ ದೇವಸ್ಥಾನದ ಸಮೀಪದಲ್ಲಿರುವ ಈ ಸಣ್ಣಗುಡಿ ಜೀರ್ಣೋದ್ಧಾರದ ವ್ಯವಸ್ಥೆಯಲ್ಲಿದೆ. ಬೇಗೂರು ಬೀರಲಿಂಗೇಶ್ವರನಿಗೆ ೧೨ ವರ್ಷಕ್ಕೊಮ್ಮೆ ನಡೆಯುವ ಮಟ್ಟುಕಲ್ಲ ಜಾತ್ರೆಗಳಲ್ಲಿ ಹಡಗಲಿ ಮತ್ತು ಬೇಗೂರುಗಳ ಮೂಲಸ್ಥಾನಗಳಲ್ಲಿ ಹಲ್ಲುಮರಿ ಸಿಗಿಯುತ್ತಾರೆ. ಅಸಂದಿ ಬೀರದೇವರಿಗೆ ೧೯೬೪ರಲ್ಲಿ ಮಟ್ಟುಗಲ್ಲು ಜಾತ್ರೆಯಾಗಿತ್ತು. ಆ ಜಾತ್ರೆಯಲ್ಲಿ ಪ್ರತಿ ಮನೆಯಿಂದ ಐದು ಸೇರು ಅಕ್ಕಿ. ಒಂದು ಉಂಡೆಬೆಲ್ಲ, ಪೂಜಾ ಸಾಮಗ್ರಿ, ದೀಪರಾಧನೆಯನ್ನು ದೇವಸ್ಥಾನದವರು ಪಡೆಯುತ್ತಾರೆ.

ಈ ಜಾತ್ರೆಯಲ್ಲಿ ವಿವಿಧ ಕುಲಗಳಿಗೆ ಸೇರಿದ ೫೨೫ 'ಮೀಸಲು ಮನೆ'ಗಳ ಗೂಡೆಗಳು ದೇವರಿಗೆ ಅರ್ಪಿತವಾದವು. ಅಸಂದಿ ಬೀರದೇವರಿಗೆ ಒಬ್ಬ ದಳವಾಯಿ, ಐದು ಜನ ಈರಗಾರರು, ಐದು ಜನ ಪೂಜಾರರು ಪಟ್ಟದೀಕ್ಷೆ ಪಡೆದಿದ್ದಾರೆ. ಇದು ಬೀರದೇವರ ಸಂಪ್ರದಾಯದ ವಿಸ್ತರಣೆಯಂತೆ ಕಾಣಿಸುತ್ತದೆ. ಏಕೆಂದರೆ ಬೀರಪ್ಪನ ಸಂಸ್ಕೃತಿಯನ್ನು ಜೀವಂತಗೊಳಿಸುವ ವಕ್ತಾರರಲ್ಲಿ ಈ ಸೇವಕ ವರ್ಗ ಪ್ರಮುಖವಾದದು.

ಐತಿಹ್ಯ : ಈ ಸ್ಥಳದ ಬಗ್ಗೆ ಒಂದು ಐತಿಹ್ಯ ಇಂತಿದೆ. ಬಹುಹಿಂದೆ ಬಳ್ಳಾರಿ ಜಿಲ್ಲೆಯ ಹಡಗಲಿ ಪ್ರಾಂತ್ಯದಲ್ಲಿ ಸುಲ್ತಾನರ ಆಳ್ವಿಕೆ ನಡೆದಿತ್ತು. ಇವರ ಕಾಟ ತಾಳಲಾರದ ಐದು ಜನ ಅಣ್ಣತಮ್ಮಂದಿರು ತಮ್ಮ ತಮ್ಮ ಬಂಧು ಬಳಗದ ಆಪ್ತಮಿತ್ರರು ಕೂಡಿಕೊಂಡು ತಮ್ಮ ತಮ್ಮ ಕುಲದೈವ ಹಾಗೂ ಸಾಮಾನುಗಳೊಡನೆ ಹಡಗಲಿ ಪ್ರಾಂತ್ಯದಿಂದ ದಕ್ಷಿಣ ದಿಕ್ಕಿಗೆ ನಡೆದರು. ನಾನಾ ಊರುಗಳನ್ನು ಸುತ್ತುತ್ತಾ ಇಂದಿನ ಹಡಗಲಿ ಗ್ರಾಮವೀರುವಲ್ಲಿಗೆ ಬಂದು ನೆಲೆನಿಂತರು. ಊರುಕಟ್ಟೆಗೆ ತಾವು ತಂದ ದೈವಗಳನ್ನು ಪ್ರತಿಷ್ಠಾಪಿಸಿ ತಾವು ಬಂದ ಊರಿನ ಹೆಸರನ್ನೆ ಇಡುತ್ತಾ ಬಂದ. ಕಾಲಕ್ರಮದಲ್ಲಿ ಇಲ್ಲಿನ ಕೆಲವು ಕುಟುಂಬಗಳು ಅಸಂದಿಗೂ, ಬೇಗೂರಿಗೂ ಹೋಗಿ ನೆಲಸಿದವು ಎಂದು ಇಲ್ಲಿನ ಹಿರಿಯರು ಹೇಳುತ್ತಾರೆ". ಇದು ಕುರುಬ ಸಮುದಾಯದ ವಲಸೆಯನ್ನು ತಿಳಿಸುತ್ತದೆ. ಹಾಗೆ ಬೀರದೇವರ ಆಚರಣೆ ಮತ್ತು ಸಂಪ್ರದಾಯಗಳ ವಿಸ್ತರಣೆಯನ್ನು ತಿಳಿಸುತ್ತದೆ.

ಗಡಿಹಳ್ಳಿಯ ಹೆಣ್ಣಿನಿಂದ ಆದ ದುರ್ಘಟನೆಯಿಂದ ಗಡಿಹಳ್ಳಿಗೂ ಅಸಂದಿಗೂ ಹೆಣ್ಣು ಕೊಡುವುದು ಮತ್ತು ತರುವುದು ನಿಷೇಧವಾಗಿದೆ. ಕುಲ ಸಂಘರ್ಷಗಳೇ ಇದಕ್ಕೆ ಪ್ರಮುಖ ಕಾರಣ.

೩೧. ಮುಗಳಿಕಟ್ಟೆ

ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕಿನ ಯುಗಟಿ, ಸಿಂಗಟಗೆರೆ ರಸ್ತೆಯಲ್ಲಿ ಯಗಟಿಯಿಂದ ೬ ಕಿ.ಮೀ. ದೂರದಲ್ಲಿದೆ. ಇದು ಸಣ್ಣ ಹಳ್ಳಿ. ಕ್ರಿ.ಶ. ೧೨೦೦ ರಿಂದಲೂ ಈ ಹೆಸರಿಂದ ಪ್ರಸಿದ್ಧಿಯಾಗಿದೆ. ಇಲ್ಲಿರುವ ಶ್ರೀ ಮುದ್ದಲಿಂಗ ಬೀರದೇವರು ಜನಪ್ರಿಯ. ಇದಕ್ಕೆ 'ಲಕ್ಕಳೆಪ್ಪ' ಎಂಬ ಹೆಸರೂ ಬಳಕೆಯಲ್ಲಿದೆ. ಈ ದೇವರ ಗುಡಿಯನ್ನು ಇತ್ತೀಚೆಗೆ ಅಭಿವೃದ್ಧಿಪಡಿಸಲಾಗಿದೆ. ಗ್ರಾನೈಟ್ ಕಲ್ಲಿನಿಂದ ಮತ್ತು ಸಿಮೆಂಟ್ ವಿಗ್ರಹಗಳಿಂದ ಅಲಂಕರಿಸಿದ್ದಾರೆ. ಈ ಗುಡಿಯ ಹೊರಗೆ ನವರಂಗಕ್ಕೆ ಹೊಂದಿಕೊಂಡಂತೆ ವಿಶಾಲವಾದ 'ಹೊರಜಗಲಿ' ಇದೆ. ಒಳಗೆ ವಿಶಾಲ ನವರಂಗವಿದ್ದು ಗರ್ಭಗುಡಿಯ ಪೀಠಸ್ಥಾನದಲ್ಲಿ ಕುದುರೆ ಮೇಲೆ ಕುಳಿತಿರುವ ಮುದ್ದಲಿಂಗ ದೇವರ ಕಂಚಿನ ಮೂರ್ತಿಯಿದೆ. ಗಿಂಡಿಯ ರೂಪದಲ್ಲಿ ಗುಂಡಿಹಳ್ಳಿದಯ್ಯ ಮತ್ತು ಜುಂಜಪ್ಪ ಎಂಬ ದೇವರಗಳಿಗೆ ಈ ಗುಡಿಯ ಮೇಲ್ಚಾವಣಿಯಲ್ಲಿ ದೊಡ್ಡಗಾತ್ರದ ಕುದುರೆ ಮೇಲೆ ಕುಳಿತ ಬೀರದೇವರ ಸಿಮೆಂಟ್‌ನ ಮೂರ್ತಿಯಿದೆ. ಇತ್ತೀಚೆಗೆ ನಿರ್ಮಿತವಾಗಿದೆಯಾದರೂ ಪರಿಕಲ್ಪನೆ ಪ್ರಾಚೀನವಾದದು. ಅಲ್ಲದೆ ಕನಕದಾಸ, ಕುರಿಯೊಡನೆ ಇರುವ ಕುರುಬ, ಕುದುರೆ, ಈರಗಾರ, ಶಿವಪಾರ್ವತಿ, ಲಕ್ಷ್ಮಿ ಇತ್ಯಾದಿ ಸಿಮೆಂಟ್‌ನಿಂದ ನಿರ್ಮಿಸಿರುವ ವಿಗ್ರಹಗಳಿವೆ. ಈ ಹಿಂದೆ 'ಓಣಿ ಬೀರಪ್ಪನ ಗುಡಿ' ಇತ್ತೆಂದೂ ಅದು ನಾಶವಾಗಿರುವುದಾಗಿದೆಯೆಂದು ಗ್ರಾಮಸ್ಥರು ಹೇಳುತ್ತಾರೆ.

ಈ ದೇವರ ಮೂಲಸ್ಥಾನ ಗುಡಿಯು ಈ ಊರಿನಿಂದ ಪೂರ್ವಕ್ಕೆ ಸುಮಾರು ೪ ಕಿ.ಮೀ. ದೂರದ ತೆಂಗಿನ ತೋಟಗಳ ನಡುವೆ ಇದೆ. ಲಕ್ಕಿಹಳ್ಳಿ ಮುದ್ದಲಿಂಗ ಬೀರದೇವರ ಗುಡಿಯನ್ನು ಸೈಜುಗಲ್ಲುಗಳಿಂದ ಕಟ್ಟಿದ್ದಾರೆ. ತೆರೆದ ಬಾಗಿಲು ಈ ಗುಡಿಯ ಹೊರಗೆ ಕುಳಿತುಕೊಳ್ಳಲು ಕಲ್ಲಿನ ಜಗಲಿ ಇದೆ. ಒಳಗೆ ವಿಶಾಲ ನವರಂಗವಿದ್ದು, ನವರಂಗದ ಬಲಗಡೆ ಪಟ್ಟ ವ್ಯಕ್ತಿಗಳ ಸ್ಮಾರಕ ಶಿಲೆಗಳಿವೆ. ಗುಡಿಯ ಮುಂದೆ ಸುಮಾರು ಹದಿನೈದು ಅಡಿ ಎತ್ತರದ ಕಲ್ಲಿನ ದೀಪಸ್ತಂಭವಿದೆ. ಹತ್ತಿರದಲ್ಲಿ ಇಪ್ಪತ್ತು ಅಡಿ ಎತ್ತರದ ಉಯ್ಯಾಲೆ ಕಂಬಗಳಿವೆ. ತೋಪುಜಾತ್ರೆಯ ಸಂದರ್ಭದಲ್ಲಿ ಹಿಂದೆ ಇಲ್ಲಿ ಉಯ್ಯಾಲೆ ಆಡುತ್ತಿದ್ದರೆಂದು ಸ್ಥಳೀಯರು ಹೇಳುತ್ತಾರೆ.[೩೩] ಈ ಊಯ್ಯಾಲೆ ಆಡುವ ಆಚರಣೆಯ ಬಗ್ಗೆ ಪ್ರತ್ಯೇಕವಾದ ಅಧ್ಯಯನ ಮಾಡುವ ಅಗತ್ಯವಿದೆ. ಬೀರದೇವರನ್ನು ಊಯ್ಯಾಲೆಯಾಡಿಸುವ ಆಚರಣಾತ್ಮಕ ಪರಿಕಲ್ಪನೆ ವೈಶಿಷ್ಟ್ಯತೆಯಿಂದ ಕೂಡಿದೆ. ದೇವರನ್ನು ಊಯ್ಯಾಲೆ ಆಡಿಸಿದ ನಂತರ ಜನರು ಉಯ್ಯಾಲೆ ಆಡುತ್ತಾರೆ. ಈ ಪಾರಂಪರಿಕ ಸಂಪ್ರದಾಯ ಹಲವು ಬೀರದೇವಾಲಯದಲ್ಲಿದೆ. ಮುಗಳಿಕಟ್ಟೆ ಬೀರದೇವರಿಗೆ ೧೯೬೪ರಲ್ಲಿ ಮೆಟ್ಟಗಲ್ಲು ಜಾತ್ರೆಯಾಗಿದ್ದಿತು.

ಈ ದೇವರಿಗೆ ಹೊಸ್ಸುಂಗರದವರು ಮಾತ್ರ ಒಕ್ಕಲಾಗಿದ್ದಾರೆ. ಕಡಿಮೆ ಒಕ್ಕಲು ಇರುವುದರಿಂದಲೊ ಏನೋ ಈ ಜಾತ್ರೆಯಲ್ಲಿ ಹದಿನಾರು ಮೀಸಲು ಗೂಡೆಗಳು ಬಂದಿದ್ದವು. ಈ ದೇವರಿಗೆ ಪ್ರತ್ಯೇಕ ದಳವಾಯಿ

ಪಟ್ಟದೀಕ್ಷೆ ಇಲ್ಲ. ದೇವತಾ ಕಾರ್ಯಗಳಿಗೆ ಸಿಂಗಟಗೆರೆಯ ದಳವಾಯಿಯನ್ನು ಕರೆಸುತ್ತಾರೆ. ಯಗಟ ಕಸನವಳ್ಳಿ ಎಸ್. ಮಾದಾಪುರ, ಮುಗುಳಿಕಟ್ಟೆ ಬೀರದೇವರುಗಳಿಗೆಲ್ಲ ಸಿಂಗಟಗೆರೆಯ ದಳವಾಯಪ್ಪನನ್ನೇ ಕರೆಸುತ್ತಾರೆ. ಮುಗಳಿಕಟ್ಟೆ ಬೀರದೇವರಿಗೆ ಮೂರು ಜನ ಪೂಜಾರರು, ಮೂರು ಜನ ಈರಗಾರರು ಸೇವಾ ಪಟ್ಟದೀಕ್ಷೆ ಪಡೆದಿದ್ದಾರೆ. ಆಸಂದಿ ಸಿಂಹಾಸನಕ್ಕೆ ಸೇರಿದ ಈ ದೇವರಿಗೆ ಹತ್ತು ಎಕರೆ ಕೃಷಿ ಜಮೀನು ಮತ್ತು ಎಂಟು ಎಕರೆ ತೆಂಗಿನ ತೋಟವಿದೆ. ಇದು ದೇವಾಲಯ ಮತ್ತು ಆ ದೈವದ ಸೇವಕವರ್ಗದ ಆರ್ಥಿಕಾಭಿವೃದ್ಧಿಗೆ ಕಾರಣವಾಗಿದೆ.

೩.೨. ಚಿಕ್ಕಬಾಸೂರು

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನಲ್ಲಿದೆ. ತಾಲೂಕು ಕೇಂದ್ರದಿಂದ ಉತ್ತರಕ್ಕೆ ೭ ಕಿ.ಮೀ. ದೂರದಲ್ಲಿದೆ. ಇಲ್ಲಿ ಸುಮಾರು ೨೦೦ ಹಾಲುಮತಸ್ಥರ ಮನೆಗಳಿವೆ. ಇಲ್ಲಿ ಕೋಣನಕಟ್ಟೆ ಬೀರಪ್ಪ ಮತ್ತು ಮೈಲಾರದೇವರ ಗುಡಿಗಳಿವೆ. ಪ್ರಾಚೀನವಾದ ದೇವಾಲಯಗಳಿವು. ಈ ದೇವಾಲಯಗಳನ್ನು ೧೯೫೦ರಲ್ಲಿ ಗುಡಿಕಟ್ಟು ದೈವದವರೆಲ್ಲ ಸೇರಿ ಪುನರ್ ನಿರ್ಮಾಣ ಮಾಡಿದ್ದಾರೆ. ಈ ಗುಡಿಯ ಪೀಠಸ್ಥಾನದಲ್ಲಿ ಕೋಣನಕಟ್ಟೆ ಬೀರಪ್ಪ ಮೈಲಾರ ಮಾಳಚಿಯರ ಮೂರ್ತಿಗಳಿದ್ದು ಈ ಮೂರ್ತಿಗಳು ಅಶ್ವಾರೋಹಿಯಾಗಿವೆ.

ಕೋಣನಕಟ್ಟೆ ಬೀರಪ್ಪ ಮತ್ತು ಮೈಲಾರ ಮಾಳಚಿಯರ ಮೂಲ ಗುಡಿಯು ಬಾಸೂರಿನ ಸಮೀಪದ ಅಮೃತಮಹಲ್ ಫಾರಂನಲ್ಲಿದೆ. ಅಂದರೆ ನೆಲಮಟ್ಟದಲ್ಲಿ ಪೀಠಸ್ಥವಾಗಿದೆ. ನಾಲ್ಕಾರು ಲಿಂಗರೂಪದ ಶಿಲೆಗಳನ್ನು ಇಲ್ಲಿ ಕಾಣಬಹುದು. ಆದರ ಸುತ್ತಲೂ ಕಲ್ಲಿನ ಸಣ್ಣಗೋಡೆ ಕಟ್ಟಿದ್ದಾರೆ. ಇದಕ್ಕೆ ಯಾವುದೇ ರೀತಿಯ ಮೇಲ್ಛಾವಣಿ ಇರದೇ ಬಯಲು ಗುಡಿಯಾಗಿದೆ. ಮಡಿದ ಈರಗಾರರ, ಪೂಜಾರರ ಸ್ಮಾರಕ ಶಿಲೆಗಳನ್ನು ಇರಿಸಿದ್ದಾರೆ. ಈರಗಾರರ ಕಲ್ಲುಗಳನ್ನು ಈರಮಕ್ಕಳ ಕಲ್ಲುಗಳೆಂದು ಕರೆಯುತ್ತಾರೆ. ತೋಪುಜಾತ್ರೆಯ ಸಂದರ್ಭದಲ್ಲಿ ಈ ಕಲ್ಲುಗಳಿಗಾಗಿಯೇ 'ಕುರಿಬಲಿ' ಕೊಡುವ ಸಂಪ್ರದಾಯವಿದೆ. ಆದರೆ ಈ ಶಿಲೆಗಳಿಗೆ ಆಕಾರವಿಲ್ಲ.

ಕೋಣನಕಟ್ಟೆ ಬೀರಪ್ಪ ಮೈಲಾರ ದೇವರಿಗೆ ೧೯೬೩ರಲ್ಲಿ ಮೆಟ್ಟಿಗಲ್ಲು ಜಾತ್ರೆಯಾಗಿದ್ದಿತು. ಈ ದೇವರಿಗೆ ಮಲ್ಲೆಗೊ(ಕು)ಲಕ್ಕೆ ಸೇರಿದವರು ಮಾತ್ರ ಒಕ್ಕಲಾಗಿದ್ದಾರೆ. ಈ ಜಾತ್ರೆಯಲ್ಲಿ ಮಲ್ಲೆಗೊಲದ ಸುಮಾರು ೭೫ ಮೀಸಲು ಗೂಡೆಗಳು ನೋಂದಣಿಯಾಗಿದ್ದರೆನ್ನುವುದು ಗುಡಿಕಟ್ಟು ಬಳಗದವರು ಬಳಸುವ ದಾಖಲಾತಿ ಪುಸ್ತಕದಿಂದ ತಿಳಿದುಬರುತ್ತದೆ. ಪ್ರತಿ ಗೂಡೆಯಿಂದ ೮ ಸೇರು ಅಕ್ಕಿ, ಒಂದು ಉಂಡೆ ಬೆಲ್ಲ, ಒಂದು ಪಾವು ಕಡ್ಲೆಬೇಳೆ, ಬಾಳೆಹಣ್ಣು, ತುಪ್ಪ, ಪೂಜೆ ಸಾಮಾನು ಮತ್ತು ೨೫ ರೂ. ಮೀಸಲು ಪಡೆಯಲಾಗಿದ್ದಿತು. ಆ ಸಂದರ್ಭದಲ್ಲಿ ದೇವರಿಗೆ ದಳವಾಯಿ ಪಟ್ಟ ನಡೆಸಲಾಗಿದೆ. ಆದರೆ ಪಟ್ಟದೀಕ್ಷೆ ನೀಡಿಲ್ಲ, ಕಾರಣಗಳು ತಿಳಿದಿಲ್ಲ. ದಳವಾಯಿ ಪದ್ಧತಿ ಇದೆ. ಆದರೆ ಆಯ್ಕೆ ಮಾಡಲಾಗಿಲ್ಲ. ಪೂಜಾರರು ಈರಗಾರರಿಗೆ ಪಟ್ಟದೀಕ್ಷೆ ಮಾಡಲಾಗಿದೆ.

ಈ ದೇವರ ಹೆಸರಿನಲ್ಲಿ ೮೦ ತೆಂಗಿನ ಮರಗಳಿರುವ ತೋಟ ಮೂರು ಎಕರೆ ಜಮೀನು ಆಸ್ತಿಯಾಗಿ ಉಳಿದಿದೆ. ಈ ಬೀರದೇವರೊಡನೆ ಮೈಲಾರದೇವರೂ ಇರುವುದರಿಂದ ದೇವರಿಗೆ ಜಾತ್ರೆಯಲ್ಲಿ ಪೂಜಾರರು ದಳವಾಯಿ, ಈರಗಾರರು, ಪಟ್ಟದ ಆಯ್ಕೆ ಮತ್ತು ದೀಕ್ಷೆ ಸಹ ಮಾಡಿಸುತ್ತಾರೆ.

ಐತಿಹ್ಯ : ಚಿಕ್ಕಬಾಸೂರಿನಿಂದ ಸ್ವಲ್ಪ ದೂರದಲ್ಲಿದ್ದ ಗ್ರಾಮವೊಂದು ಕಾರಣಾಂತರದಿಂದ ಹಾಳಾಯಿತು. ಇಲ್ಲಿದ್ದ ಜನರೆಲ್ಲಾ ವಲಸೆ ಹೋದರು. ಆಗ ಊರಲ್ಲಿದ್ದ ಮೈಲಾರ ಮಾಳಚಿಯರ ಗುಡಿ ಹಾಳಾಯಿತು. ಜೀರ್ಣೋದ್ಧಾರಗೊಂಡ ಈ ಗುಡಿಯಲ್ಲಿದ್ದ ಮೈಲಾರ ಮಾಳಚಿಯರ ವಿಗ್ರಹಗಳನ್ನು ಯಾರೋ ಭಕ್ತರು ಚಿಕ್ಕಬಾಸೂರಿನ ಕೋಣನಕಟ್ಟೆ ಬೀರದೇವರ ಗುಡಿಗೆ ತಂದುಕೊಟ್ಟರು. ಅಂದಿನಿಂದ ಬೀರಪ್ಪನ ದೇವಸ್ಥಾನದಲ್ಲಿ ಬೀರದೇವರ ಜೊತೆಗೆ ಮೈಲಾರ ದೇವರ ಪೂಜೆ ಪುರಸ್ಕಾರಗಳು ಆರಾಧನೆ ಪರಂಪರೆಯಾಗಿ ಬೆಳೆಯಿತು ಎಂದು ಹೇಳುತ್ತಾರೆ. ಬೀರಪ್ಪನ ದೈವದೊಂದಿಗೆ ಇತರೆ ದೈವಗಳು ಸಂಯುಕ್ತಗೊಂಡು ಆಚರಣೆಗೊಳ್ಳುತ್ತಿರುವ ಸ್ಥಳಗಳಲೆಲ್ಲ ಇಂತಹ ಕಥನಗಳೇ ಹೆಚ್ಚಾಗಿರುವುದನ್ನು ಕಾಣಬಹುದು.[೩೪]

೩೩. ಕಡೂರು

ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕು ಕಡೂರು. ಶಿವಮೊಗ್ಗದಿಂದ ೪೦ ಕಿ.ಮೀ. ದೂರದಲ್ಲಿದೆ. ಈ ಊರಲ್ಲಿ ೨೨೫ ಹಾಲುಮತಸ್ಥರ ಒಕ್ಕಲುಗಳಿವೆ. ಹಾಗೂ ಮೂರು ಬೀರಲಿಂಗೇಶ್ವರ ದೇವಾಲಯಗಳಿವೆ. ಒಂದು ಮೈಲಾರಲಿಂಗ ದೇವಸ್ಥಾನವಿದೆ. ೭ ಗಡಿ ದೇವರುಗಳಿವೆ. ಅವು ೧. ಕೊಕ್ಕನಹಳ್ಳಿ ೨. ಕೊಂಕಪ್ಪ ೩. ಹರನಾಳಪ್ಪ ೪. ಕಾಲೆದೊಳಪ್ಪ ೫. ಮಹೇಶ್ವರ ೬. ಸಿಂಗೇಶ್ವರ ೭. ಕಡೂರು ಬೀರಪ್ಪ ಎನ್ನುವ ಏಳು ಬೀರದೇವರುಗಳು ಒಂದೇ ಪೀಠದಲ್ಲಿವೆ. ಇವೆಲ್ಲವನ್ನು ಕೊಂಕನಹಳ್ಳಿ ಬೀರಲಿಂಗೇಶ್ವರ ಎಂದು ಕರೆಯುತ್ತಾರೆ. ಈ ಬೀರದೇವರ ಮೂಲಸ್ಥಾನ ಕೊಂಕನಹಳ್ಳಿ. ಈ ಕಡೂರದಿಂದ ೭ ಕಿ.ಮೀ. ಅಂತರದಲ್ಲಿದೆ. ಈ ದೇವಾಲಯಕ್ಕೆ ೨೦೦ ವರ್ಷಗಳಿಗಿಂತ ಹೆಚ್ಚು ಇತಿಹಾಸವಿದೆ. ಮುಖ್ಯ ದೇವಾಲಯದ ಮಂಟಪವು ದೇವಾಲಯವು ಪೂರ್ವಾಭಿಮುಖವಾಗಿದ್ದು ಒಳಗರ್ಭಗೃಹ, ಹೊರ ಗರ್ಭಗೃಹ, ಸುಕನಾಸಿ, ರಂಗಮಂಟಪ ಮತ್ತು ಮುಖಮಂಟಪಗಳಿಂದ ಕೂಡಿದೆ. ಮುಖಮಂಟಪಕ್ಕೆ ಹಳೆಬಾಗಿಲು ಇನ್ನುಳಿದಂತೆ ದೇವಾಲಯದ ಎಲ್ಲ ಭಾಗಗಳು ಗೋಡೆಗಳು, ಗರ್ಭಗೃಹ ಮೇಲೆ ಹಂಚುಗಳನ್ನು ಬಳಸಿ ಕಟ್ಟಲಾಗಿದೆ. ಇದು ಪ್ರಾಚೀನ ಕಟ್ಟಡವಾಗಿದೆ. ಒಳಗಡೆ ಆಯಕಟ್ಟಿನ ಸ್ಥಳಗಳಲ್ಲಿ ಕಲ್ಲಿನ ಕಂಬಗಳನ್ನು ನಿಲ್ಲಿಸಿ ದೇವಾಲಯದ ಮೇಲ್ಛಾವಣಿ ಮೇಲೆ ಶಿಲ್ಪಗಳು ಕಂಡುಬರುತ್ತವೆ.

ಈ ದೇವಾಲಯದ ಸ್ವಲ್ಪ ದೂರದಲ್ಲಿ ಇನ್ನೊಂದು ಬೀರಲಿಂಗೇಶ್ವರ ದೇವಾಲಯವಿದೆ. ಮುಖ್ಯ ದೇವಸ್ಥಾನದ ಉತ್ತರಕ್ಕೆ ಪೂರ್ವಾಭಿಮುಖವಾಗಿ ಬೃಹತ್ ನವ್ಯ ದೇವಾಲಯವನ್ನು ನಿರ್ಮಿಸಿದ್ದಾರೆ. ಒಂದು ಪೀಠದಲ್ಲಿ ಮೂರ್ತಿಯನ್ನು ಇಡಲಾಗಿದೆ. ಗರ್ಭಗುಡಿಯ ಒಳಗೆ ೯ ಚೌಕಗಳಿವೆ. ಬೀರಲಿಂಗೇಶ್ವರ ಕುದುರೆಯ ಮೇಲೆ ಕುಳಿತಿದ್ದಾನೆ. ಹಿಂದೆ ಪ್ರಭಾವಳಿಯಿದೆ, ಛತ್ರಿ, ಲಿಂಬೆಹಣ್ಣು, ಸುತ್ತಿಗೆ, ಈ ದೇವರ ಲಾಂಛನಗಳು. ಇಲ್ಲಿ ತಂತ್ರಜ್ಞಾನದ ನಗಾರಿ ಬಾರಿಸುತ್ತಾರೆ. ಬೀರಪ್ಪ, ನಾಗಪ್ಪ, ಕರ್ಲಪ್ಪ ಎಂದು ಈ ದೇವರ ನಾಮಗಳು.

ಈ ಊರಲ್ಲಿ ಇನ್ನೊಂದು ದೇವಾಲಯವಿದ್ದು, ಅದನ್ನು ಇತ್ತೀಚೆಗೆ ಕೆಡವಿ ಆ ಸ್ಥಳದಲ್ಲಿ ಹೊಸ ದೇವಾಲಯವನ್ನು ನಿರ್ಮಿಸಲಾಗಿದೆ. ಈ ದೇವಾಲಯವು ಒಂದು ಸುಂದರವಾದ ಗೋಪುರ ಮತ್ತು ಮೋಗಶಾಲೆದಿಂದ ಕೂಡಿದೆ. ಇದು ಆರ್.ಸಿ.ಸಿ.ಯಿಂದ ಕೂಡಿದೆ. ಇಲ್ಲಿ ಶಾಸನಗಳಿದ್ದವು. ಅವು ಕಾಣುತ್ತಿಲ್ಲ. ಆ ಶಾಸನಗಳನ್ನು ಮಣ್ಣಲ್ಲಿ ಮುಚ್ಚಿದ್ದಾರೆ ಎಂದು ಗ್ರಾಮಸ್ಥರು ಹೇಳುತ್ತಾರೆ. ಇವು ಪ್ರಕಟಿತ ಶಾಸನಗಳು.

ಕಡೂರು ಪಟ್ಟಣದಲ್ಲಿ ಬೀರದೇವರ ಕಟ್ಟೆ ಎಂದು ವಿಶೇಷವಾಗಿ ಹೆಸರು ಪಡೆದಿದೆ. ನಾಲ್ಕು ಎಕರೆ ದೇವಸ್ಥಾನದ ಜಾಗದಲ್ಲಿ ಹಿಂದಿನ ಕಾಲದಲ್ಲಿ ಒಂದು ಕಟ್ಟೆಯನ್ನು ನಿರ್ಮಿಸಿ ದನಕರುಗಳಿಗೆ, ಕುರಿಗಳಿಗೆ, ನೀರಿನ ವ್ಯವಸ್ಥೆ ಮಾಡಿದ್ದಾರೆ. ಗ್ರಾಮದ ಮೂರು ಬೀರಲಿಂಗೇಶ್ವರ ದೇವಾಲಯಗಳನ್ನು ೧. ಏಳೂರಪ್ಪ ಬೀರಲಿಂಗೇಶ್ವರ, ೨. ಅಮನಹಳ್ಳಿ ಬೀರಲಿಂಗೇಶ್ವರ, ೩. ಕೊಟ್ಟೆದತ್ತರ ಬೀರಲಿಂಗೇಶ್ವರ ದೇವಾಲಯಗಳೆಂದು ಕರೆಯುತ್ತಾರೆ. ಇಲ್ಲಿ ವಿಶೇಷವಾಗಿ ಪೂಜೆ, ಜಾತ್ರೆ, ಉತ್ಸವಗಳು ಜರುಗುತ್ತವೆ. ಮೀಸಲು ಅಳೆಯುವ ಗೂಡೆಹೊರುವ ಆಚರಣೆಗಳನ್ನು ಮಾಡುವ ಪಾರಂಪರಿಕ ಸಂಪ್ರದಾಯಗಳಿವೆ. ಇವುಗಳನ್ನು ತೋಪುಜಾತ್ರೆಯಲ್ಲಿ ಹೆಚ್ಚಾಗಿ ಮಾಡುತ್ತಾರೆ. ಈ ದೇವರಿಗೆ ಹಣ್ಣು, ತುಪ್ಪ ಎಡೆ ಮಾಡುತ್ತಾರೆ. ಅಮವಾಸ್ಯೆಯ ದಿನ ಹೊಳೆ ಪೂಜೆ ಮಾಡಿ ಮೀಸಲು ಎಡೆ ಸಿಹಿ ಊಟ ಮಾಡಿಸುತ್ತಾರೆ. ಇಲ್ಲಿ ಬಲಿ ಕೊಡುವ ಪದ್ಧತಿಯಿದೆ. ಇಲ್ಲಿ ಬಾಣಪ್ಪನನ್ನು ಆಚರಿಸುವ ವಿಶೇಷವಾದ ಪದ್ಧತಿಯಿದೆ. ಪ್ರಾಚೀನ ಕಾಲದಿಂದಲೂ ಬೆಳೆದು ಬಂದ ಪದ್ಧತಿ. ೨೦ ಅಡಿ ಲೋಹದಿಂದ ತಯಾರಿಸಿದ್ದು, ಜನರು ಹಿಂದಿನಿಂದಲೂ ಕೃಷಿ, ಕಷ್ಟ-ಸುಖಗಳ ಬಗ್ಗೆ ಕೇಳಿಕೊಂಡು ಆ ಹರಕೆ ಇಡೇರಿದಾಗ ತುಪ್ಪ ಬಾಳೆಹಣ್ಣು ಮಿಶ್ರಣ ಮಾಡಿ ಹರಕೆ ಅರ್ಪಿಸುವ ಆಚರಣೆಯಾಗಿದೆ.

'ಗೌರಿಹಬ್ಬದ ದಿನ ಪ್ರತಿಯೊಂದು ಮನೆಯ ಅಣ್ಣ-ತಮ್ಮಂದಿರು ಸೇರಿ ದೀಪರಾಧನೆ ಮಾಡಿ ಹಣವನ್ನು ಕಟ್ಟುವ ವಿಶಿಷ್ಟ ಸಂಪ್ರದಾಯ ಇಲ್ಲಿದೆ. ಪಳ್ಳವಳಿಗೆ ಅಂದರೆ ಎಲ್ಲಾ ತರಹದ ಕಾಳಿನಿಂದ ದೇವರನ್ನು ಅಲಂಕರಿಸುತ್ತಾರೆ. ಆದಿನ ಎಲ್ಲ ದೇವರುಗಳನ್ನು ಕುದುರೆಯ ಮೇಲೆ ಕೂಡಿಸುತ್ತಾರೆ. ದೀಪಾವಳಿ, ಕಾರ್ತಿಕ, ಕಾರಹುಣ್ಣಿಮೆ, ಸಂಕ್ರಾಂತಿ, ಧನುರ್ಮಾಸದಲ್ಲಿಯೂ ವಿಶೇಷವಾಗಿ ಹೂವಿನ ಅಲಂಕಾರ ಮಾಡಿ ೧ ತಿಂಗಳು ಸತತ ವಿಶೇಷವಾದ ಪೂಜೆ ಮಾಡಲಾಗುತ್ತದೆ. ಇಲ್ಲಿ ಭಂಡಾರ ಮತ್ತು ವಿಭೂತಿ ಬಳಕೆಯಿದೆ. ಭಂಡಾರ ಮನೆತನದವರು ಪೂಜೆಯನ್ನು ನಡೆಸಿಕೊಂಡು ಬರುತ್ತಾರೆ. ತೋಪು ಜಾತ್ರೆ ನಡೆಯುತ್ತದೆ. ಆ ಜಾತ್ರೆ ಮತ್ತು ವಿಶೇಷ ಪೂಜಾ ಕಾರ್ಯಕ್ರಮಗಳಲ್ಲಿ ಅಲಗ ಹಾಕೊಳ್ಳುವ ಪದ್ಧತಿಯು ಇದೆ. ಈ ದೇವರಿಗೆ ಕೇರೆ ನೀರು ತಂದು ಪೂಜೆ ಮಾಡಬೇಕೆನ್ನುವ ನಿಯಮವಿದೆ. ಬೀರಪ್ಪನ ದೇವರ ಎದುರುಗಡೆ ಕೆರೆಸಂತೆ ಮಹಾಲಕ್ಷ್ಮಿ ದೇವರಿದೆ. ಈ ದೈವಕ್ಕೆ ಸಂಬಂಧಿಸಿದಂತೆ ೧೨ ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಪೂಜೆ, ಉತ್ಸವ, ಜಾತ್ರೆ ಈ ದೇವರಿಗೆ ನಡೆದುಕೊಂಡು ಬಂದ ಪದ್ಧತಿಯಾಗಿದೆ".[೩೫]

೩೪. ಬೀರೂರು

ಚಿಕ್ಕಮಗಳೂರು ಜಿಲ್ಲೆ ಕಡೂರದಿಂದ ೪ ಕಿ.ಮೀ. ದೂರದಲ್ಲಿದೆ. ಬಿರೂರು ಹುಲಬೇಕಿ ಬೀರಲಿಂಗೇಶ್ವರ ಈ ಗುಡಿಯನ್ನು ೧೦೪೧-೧೦೪೩ ಸ್ಥಾಪನೆ ಮಾಡಲಾಗಿದೆ ಎಂದು ಇಲ್ಲಿಯ ಜನರು ಹೇಳುತ್ತಾರೆ. ಈ

ದೇವಸ್ಥಾನದ ಎದುರುಗೆ ಮಲ್ಲಪ್ಪನ ದೇವಾಲಯವಿದೆ. ಬೀರಲಿಂಗೇಶ್ವರ ದಕ್ಷಿಣ ಭಾಗದ ಊರ ಪಶ್ಚಿಮಕ್ಕೆ ವಿಸ್ತಾರವಾದ ಗರ್ಭಗುಡಿ ಇದೆ. ಹೊರನೋಟಕ್ಕೆ ಗುಡಿಯು ಕೆಂಪು ಕಲ್ಲಿನಿಂದ ಮಾಳಿಗೆ ಮನೆಯ ಶೈಲಿಯಲ್ಲಿದೆ. ಈ ದೇವಾಲಯದ ಪ್ರವೇಶದ್ವಾರವು ತೀರಾ ಚಿಕ್ಕದಾಗಿದೆ. ಒಳಗೆ ಹೋಗುವವರು ತೀರ ಬಗ್ಗಿ ಹೋಗಬೇಕು. ಒಳಗೆ ಒಂದು ಅಂಕಣದ ದೇವಾಲಯದಲ್ಲಿ ಬೀರಪ್ಪನ ಮೂರ್ತಿ ಇದೆ. ದೇವಾಲಯ ಒಂದು ಚಿಕ್ಕ ಶಿಲಾಮಂಟಪವಾಗಿದ್ದು, ಮೇಲಿನಿಂದ ಕಲ್ಲು ಹಾಸಿಗೆ ಮುಚ್ಚಲ್ಪಟ್ಟಿದೆ. ಸುತ್ತಲೂ ಇರುವ ಕಲ್ಲಿನ ಕಂಬಗಳು ಆಧಾರದಿಂದ ಕೂಡಿದೆ. ಸುಂದರವಾದ ಮೊಗಶಾಲೆಯಿಂದ ಗರ್ಭಗುಡಿಯ ಒಳಗಡೆ ಪೀಠದ ಮೇಲೆ ಮೂರು ಬೀರಲಿಂಗೇಶ್ವರ ಮೂರ್ತಿಗಳಿವೆ. ಹಿಂದೆ ಪ್ರಭಾವಳಿಯಿಂದ ನವ ಚಾಮರಗಳಿಂದ ಕೂಡಿದೆ. "ಈ ದೇವರ ಮೂಲಸ್ಥಾನ ಇರಿಗಳದಲ್ಲಿ ಇದ್ದ ಬೀರಲಿಂಗೇಶ್ವರ ಬೆಂಕಿಮಳೆ (ಕೆಂಡದ ಮಳೆ) ಬಂದು ಆ ಮಳೆ ಬಂದಾಗ ಇರಿಗಳ ಹಾಳಾಯಿತು. ಆವಾಗ ಬೀರೂರಿಗೆ ತಂದು ಸ್ಥಾಪನೆ ಮಾಡಿಕೊಂಡರು 'ಹುಲಬೆಂಕಿ ಬೀರಪ್ಪ' ಎಂದು ಹೆಸರು ಬರಲು ಒಂದು ಕಾರಣವಿದೆ" ಎನ್ನುವ ಜನಪ್ರಿಯ ಕಥನಗಳು ಈ ಗ್ರಾಮದಲ್ಲಿವೆ. ಅಲ್ಲಿಂದ ತಂದ ಹುಲಬೆಂಕಿ ಬೀರದೇವರನ್ನು ಹುಲ್ಲಲ್ಲಿ ದೇವರನ್ನು ಮುಚ್ಚಿದಕ್ಕೆ ಬೆಂಕಿ ಬಿದ್ದದಕ್ಕೆ 'ಹುಲಬೆಂಕಿ' ಎಂದು ಹೆಸರು ಬಂತು ಎಂದು ದಳವಾಯಿಗಳು ಹೇಳುತ್ತಾರೆ. ಇದನ್ನು ತಂದು ಸ್ಥಾಪನೆ ಮಾಡಿದಾಗ ಊರು ಬೆಳೆಯಿತು. ಈ ಗ್ರಾಮದಲ್ಲಿ ಹಾಲುಮತದ ಸುಮಾರು ೧೦೦ಂಕ್ಕೂ ಹೆಚ್ಚು ಮನೆತನಗಳಿವೆ. ಈ ಮನೆಗಳು ಬೆಳೆದಾಗ ಹೊನ್ನಿನ ಮಳೆ ಬಂತು ಎಂದು ಊರ ಹಿರಿಯರು ಹೇಳುತ್ತಾರೆ.[೨೬]

ಇದು ೫೦೦ ವರ್ಷಗಳ ಕಾಲ ಹಿಂದಿನ ದೇವಸ್ಥಾನ. ಇದು ಮೊದಲು ಮೂರು ಕಲ್ಲಿನ ಹಾಗೆ ಇತ್ತಂತೆ. ಆವಾಗ ದಳವಾಯಿಗಳು ತಂದುಯಿಟ್ಟು ಗುಡಿಕಟ್ಟಿದರು. ಮೊದಲು ಈ ಊರಿನ ಹೆಸರು ಬೀರನಹಳ್ಳಿಯಿದದ್ದು ಇವಾಗ ಬೀರೂರು ಆಗಿದೆ. ಈ ದೇವರಿಗೆ ಇನ್ನೊಂದು ಮೂಲಸ್ಥಾನವಿದೆ. ಅದು ಕೊಡಿಹಳ್ಳಿಯಿಂದ ೩ ಕಿ.ಮೀ. ಬೀರೂರದಿಂದ ದೂರದಲ್ಲಿದೆ. ಪೀಠದ ಮೇಲೆ ಮೂರು ಕುದುರೆ ಮೇಲೆ ಕುಳಿತ ಹುಲಿಬೆಂಕಿ ಬೀರಲಿಂಗೇಶ್ವರ ಪೀಠವಿದೆ. ಇನ್ನೊಬ್ಬ ಹಿರಿಯರು ದೇವಸ್ಥಾನದ ಮುಂದೆ ದೇವರ ಕೆಳಗೆ ಚಕ್ಕಮಕ್ಕಿ ಕಲ್ಲುಯಿತ್ತು. ಬೆಂಕಿ ಹತ್ತಿತ್ತು. ಅದಕ್ಕೆ ಹುಲಬೆಂಕಿ ಬೀರಲಿಂಗೇಶ್ವರ ಎಂದು ಹೆಸರು ಬಂತು. ಇವಾಗ ಚಕ್ಕಮಕ್ಕಿ ಕಲ್ಲು ಹಿರೆನಲ್ಲೂರು ಏಳೆಬೀರಲಿಂಗೇಶ್ವರ ಹತ್ತಿರ ಇದೆ.[೨೭] ಈ ದೇವರಿಗೆ ೧೨ ವರ್ಷಕ್ಕೊಮ್ಮೆ ತೋಪುಜಾತ್ರೆ ನಡೆಯುತ್ತಿತ್ತು. ಇವಾಗ ೧೫-೪೦ ವರ್ಷಗಳಿಗೆ ನಡೆಯುತ್ತದೆ. ಮೊದಲ ದಿನ ಧ್ವಜರೋಹಣ ಆದ ಮೇಲೆ ೧೨ ಬೀರದೇವರು ಸಿಂಹಾಸನದ ಮೇಲೆ ಬಂದು ಕುಳಿತುಕೊಳ್ಳುತ್ತವೆ. ಮೀಸಲು ಅಳೆಯುತ್ತಾರೆ. ೫ ಸೇರು ಅಕ್ಕಿ, ೬ ಸೇರು ಗಡಲೆ, ೫೦೧ ರೂಪಾಯಿ ಕಾಣಿಗೆ ನೀಡುವ ವಿಶಿಷ್ಟ ಪಾರಂಪರಿಕ ಸಂಪ್ರದಾಯವಿದೆ.

ಹೊಳೆಪೂಜೆ ಮೀಸಲು : ಹೊಳೆಪೂಜೆ ಅಥವಾ ಗಂಗೆಪೂಜೆ ಮಾಡುತ್ತಾರೆ. ಈ ದೇವಸ್ಥಾನಕ್ಕೆ ದವಾಯಿಗಳಿಗೆ ಪಟ್ಟಗಟ್ಟುವುದು. ಆ ಸಂದರ್ಭದಲ್ಲಿ ಬೇರೆ ಬೇರೆ ಕಡೆಯಿಂದ ಹತ್ತು ಬೀರಲಿಂಗೇಶ್ವರ ಮುಖಗಳನ್ನು ತಂದು ಗುಡಿಕಟ್ಟು ಎಂದು ಈ ದೇವರ ಮುಂದೆ ಮೀಸಲು ಅಳೆಯುತ್ತಾರೆ. ಇವೆಲ್ಲ ಮುಗಿದ ಮೂರನೆಯ ದಿನ ಹಲ್ಲುಮುರಿ ಪವಾಡ, ಈರಗಾರ ಪವಾಡದ ಆಚರಣೆಗಳನ್ನು ಮಾಡುತ್ತಾರೆ.

ಅರಿಶಿಣ ಎಣ್ಣೆ ಊಟ : ಇದಕ್ಕೆ ಮೂರು ದಿನ ಉಪವಾಸ ಇರಬೇಕು. ದಳವಾಯಿಗಳ ತಲೆಗೆ, ಮುಖಕ್ಕೆ ಅರಿಶಿಣ ಹಚ್ಚಿ, ಬಾಳೆ ಎಲೆ ಹಾಕಿ, ದೀಪ ಹಚ್ಚಿ ಊಟ ಮಾಡುತ್ತಾರೆ. ಆಮೇಲೆ ಭಕ್ತರೆಲ್ಲರೂ ಜಳಕ ಮಾಡಿಸಿ ಎತ್ತಿಕೊಂಡು ದೇವಸ್ಥಾನದಲ್ಲಿ ಕರೆದುಕೊಂಡು ಬರುತ್ತಾರೆ. ದಳವಾಯಿ ಪಟ್ಟವಾದ ನಂತರ ನಿಲುವಂಗಿ ಹಾಕಿಕೊಂಡು ದೇವರ ಪೂಜೆ, ಉತ್ಸವಗಳನ್ನು ಮಾಡುವ ಪಾರಂಪರಿಕ ಸಂಪ್ರದಾಯವಿದೆ.

ಪಲ್ಲಕ್ಕಿ ಉತ್ಸವ : ಇಲ್ಲಿ ಪಲ್ಲಕ್ಕಿ ಉತ್ಸವ ಜರುಗತ್ತದೆ. ಈ ದೇವರಿಗೆ ಮುಳ್ಳಪಲ್ಲಕ್ಕಿ, ಹೂವಿನ ಪಲ್ಲಕ್ಕಿ ಆಚರಣೆಗಳನ್ನು ಮಾಡುವ ಪದ್ಧತಿಗಳಿವೆ. ವೀರಗಾರು, ಈರಗಾರು, ಇತರರೂ ಪಂಜು ಬೆಳಗುವ (ದಿವಟಿಗೆ ಸೇವೆ) ಕಾರ್ಯ ನಡೆಯುತ್ತದೆ. ಕಾರಹುಣ್ಣಿಮೆಯಲ್ಲಿ ಮುತ್ತಿನ ಪಲ್ಲಕ್ಕಿ, ಗೌರಿಹಬ್ಬದಲ್ಲಿ ದೀಪರಾಧನೆ, ಕಾರ್ತಿಕ, ದೀಪಾವಳಿ ದೇವರನ್ನು ಒಂದು ತಿಂಗಳವರೆಗೆ ಪಟ್ಟಕೂಡಿಸಿ ಫಲಹಾರ ಪ್ರಸಾದ ಕೊಡುತ್ತಾರೆ.

ಕದಲಿ ಪೂಜೆ : ಈ ದೇವರಿಗೆ ಶಿವರಾತ್ರಿಯ ದಿವಸ ಕದಲಿ ಪೂಜೆ, ಜಾಗರಣೆ, ಡೊಳ್ಳುಕುಣಿತ, ಹಲ್ಲುಮರಿ ಪವಾಡ, ತೋಪು ನಂದಿಯನ್ನು ಕೊಡಿಸಿಕೊಂಡು ನೃತ್ಯ ಮಾಡುತ್ತಾ ಭೂಮಿಯಿಂದ ಬೀರಲಿಂಗೇಶ್ವರನನ್ನು ಮೇಲೆ ಎಳೆಯುತ್ತಾರೆ. ದಳವಾಯಿಗೆ ತ್ರಿಶೂಲದಿಂದ ಅಲಗ ಹಾಕಿ ಭೂಲೋಕದಲ್ಲಿ ಬೀರಪ್ಪ ಆಗತಿಯಾ, ದಳವಾಯಿ ಆಗತಿಯಾ, ಹಾಲಮತಸ್ಥರಿಗೆ ಜೀವಂತ ಬೀರಲಿಂಗೇಶ್ವರ ಆಗತಿಯಾ ಎಂದು ದಳವಾಯಿಗಳಿಗೆ ಜನರು ಕೇಳುತ್ತಾರೆ.[೩೮]

೩.೫. ಮುಗುಳಿ

ಮುಗಳಿಯು ತರೀಕೆರೆಯಿಂದ ೨೮ ಕಿ.ಮೀ. ದೂರದಲ್ಲಿದೆ. ಇಲ್ಲಿ ೨೦೦ ಒಕ್ಕಲುಗಳಿವೆ. ಇದು ಶಿವನಿಯ ಶ್ರೀ ರೇವಣಸಿದ್ಧೇಶ್ವರ ಸ್ವಾಮಿ ಸಂಸ್ಥಾನಕ್ಕೆ ಸೇರಿದ ಹೊಸೂರುದಾಗಿದ್ದೆ. ತೆಂಕಣ ದಿಕ್ಕಿನಲ್ಲಿ ಸುಮಾರು ಒಂದು ಕಿ.ಮೀ. ದೂರದಲ್ಲಿ ಹುಚ್ಚೀರ ತಿಮ್ಮಣ್ಣನ ಗುಡಿ ಇದೆ. ಮೊದಲ ಗುಡಿಯ ಮುಂಭಾಗದಲ್ಲಿ ಎರಡು ಕಲ್ಲುಗಳು ಇವೆ. ಅವುಗಳಿಗೆ ಟಗರು ಕಲ್ಲುಗಳು ಎನ್ನುತ್ತಾರೆ. ಈರಗಾರರು ಜಾತ್ರೆಯ ಸಮಯದಲ್ಲಿ ಹಲ್ಲುಮರಿ ಸಿಗಿಯುವಾಗ ದೇವರು ಬಂದಿದೆಯೋ, ಇಲ್ಲವೋ ಎಂದು ಪರೀಕ್ಷಿಸಲು ಆವೇಶದಿಂದ ಬಂದು ಈ ಕಲ್ಲುಗಳಿಗೆ ಗುದ್ದುತ್ತಿದ್ದಂತೆ. ಯಾವ ಗಾಸಿಯೂ ಆಗದಿದ್ದಾಗ ದೇವರು ಬಂದಿದೆ ಎಂದು ನಂಬಿ ಹಲ್ಲುಮರಿ ಸಿಗಿಯಲು ಮುಂದಾಗುತ್ತಿದ್ದರು. ಎರಡನೇ ದೇವಸ್ಥಾನಕ್ಕೆ ಉದ್ದೇ ಪಾದದಯ್ಯ ಎಂಬ ಹೆಸರಿದೆ. ಅದಕ್ಕೆ ಬಡಗನಾಡಯ್ಯ ಎಂದು ಕರೆಯುತ್ತಾರೆ. ಇವು ವಿಜಯನಗರ ಸಾಮ್ರಾಜ್ಯ ಪತನದನಂತರ ಕಾಲದ್ದವು ಎಂದು ಅಂದಾಜಿಸಲಾಗಿದೆ. ಈ ದೇವಸ್ಥಾನದ ಬಲಭಾಗದಲ್ಲಿ ಎರಡು ದಳವಾಯಿ ಗುಡ್ಡೆಗಳು ಇವೆ. ಸಮೀಪದಲ್ಲಿಯೇ ದಳವಾಯಿ ಹುಣಸೆ ಮರ ಎಂಬುದಿದೆ. ಇದು ಕುಬ್ಜ ರೀತಿಯಲ್ಲಿದ್ದು ಇತ್ತೀಚೆಗೆ ನಶಿಸಿ ಹೋಗುತ್ತಿದೆ. ಇದರ ಅಂದಾಜು ಆಯಸ್ಸು ನೂರಾ ಐವತ್ತು ವರ್ಷಗಳು.

ಊರೊಳಗಿನ ಗುಡಿಯಲ್ಲಿ ಮೂಲ ಗುಡಿಯಲ್ಲಿರುವಂತಹ ಮೂರು ದೇವರುಗಳ ಪ್ರತಿಷ್ಠಾಪಿಸಲ್ಪಟ್ಟಿವೆ. ನೂರಾರು ವರ್ಷಗಳಿಗೂ ಹಳೆಯದಾದ ಈ ಕಲ್ಲಿನ ದೇವಸ್ಥಾನದಲ್ಲಿ ಅನೇಕ ಕೆತ್ತನೆಯ ಚಿತ್ರಗಳು ಕಂಡು

ಬರುತ್ತದೆ. ಗರ್ಭಗುಡಿಯ ದ್ವಾರಪಾಲಕರ ಚಿತ್ರಗಳು, ಚಚ್ಚೌಕಾರದ ಕಂಬಗಳ ಮೇಲೆ ಆನೆ, ಹೂವುಗಳು, ಶಾರ್ದೂಲ, ನವಿಲುಗಳ ಚಿತ್ರಗಳಿವೆ.

ಬೇರ ಎಲ್ಲ ಕಡೆಗಳಂತೆ ಇಲ್ಲಿಯೂ ಸಹ ಮೂಲ ಗುಡಿಗೆ ವಿಶೇಷ ಸಂದರ್ಭದಲ್ಲಿ ಪೂಜೆ ಸಲ್ಲಿಸಲಾಗುತ್ತದೆ. ಊರೊಳಗಿನ ಗುಡಿಗೆ ನಿತ್ಯ ಪೂಜೆ ನೇರವೇರುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಕಾರ್ತಿಕ ಹಬ್ಬಗಳನ್ನು ಆಚರಿಸುತ್ತಾರೆ. ಯುಗಾದಿಯಲ್ಲಿ ಪಾನಕ ಫಲಹಾರಗಳನ್ನು ಶಿವರಾತ್ರಿಯಲ್ಲಿ ಜಾಗರಣೆಯನ್ನು ಮಾಡಿ ಬೆಳಗ್ಗೆ ಹನ್ನೆರಡು ಪಡಿ ಅಕ್ಕಿಯ ತಳಿಗೆ ಮಾಡಿ ಊರೊಳಗಿನ ಗುಡಿಯಲ್ಲಿ ಪೂಜೆ ಸಲ್ಲಿಸುತ್ತಾರೆ. ನಂತರ ಮೂಲ ಗುಡಿಯಲ್ಲಿ ಎಡೆಪೂಜೆ ಮಾಡಿ ಈರಿಕೆ ಮಾಡಲಾಗುತ್ತದೆ. ದೀಪಾವಳಿಯಲ್ಲಿ ದೀಪಹಚ್ಚಿ ಎಡೆ ಬಿಡಾರ ಮಾಡುತ್ತಾರೆ. ಕಾರ್ತಿಕದೊಳಗೆ ಮೇಲು ದೀಪಹಚ್ಚಿ ಕವಳಿ ಕಟ್ಟುತ್ತಾರೆ. ಆ ನಂತರ ದಳವಾಯಿಯನ್ನು ಹೊರಡಿಸಿ ಮೂಲ ಗುಡಿಯಲ್ಲಿ ಧೂಪದಸೇವೆ ಮಾಡುತ್ತಾರೆ. ಆ ಸಂದರ್ಭದಲ್ಲಿ ದಾಸಯ್ಯಗಳನ್ನು ಕರೆಸಿರುತ್ತಾರೆ.

ಪ್ರತಿ ೧೨ ವರ್ಷಕ್ಕೊಮ್ಮೆ ಇಲ್ಲಿ ಬೀರದೇವರ ಜಾತ್ರೆ ನಡೆಯುತ್ತದೆ. ಇದು ಊರ ಹೊರಗಡೆ ನಡೆಯುತ್ತದೆ. ಈ ಜಾತ್ರೆಯ ವಿಶೇಷವೆಂದರೆ ಸಿಡಿ ಆಡುವುದು. ಇದನ್ನು ಚೌಡಮ್ಮನ ಸಿಡಿ ಎಂದು ಕರೆಯುತ್ತಾರೆ. ಈ ಸಿಡಿಯನ್ನು ಬ್ಯಾಲನ್ ಕುರುಬರು ಆಡುತ್ತಾರೆ. ಇದರ ಬಗ್ಗೆ ಒಂದು ಸ್ವಾರಸ್ಯಪೂರ್ಣವಾದ ಕಥೆ ಇದೆ. ಹೊಸದುರ್ಗ ತಾಲೂಕಿನ ಹಳ್ಳಿಮಲಿಯಮ್ಮ (ಚೌಡಮ್ಮ) ಎಂಬ ದೇವತೆಯನ್ನು ಕಲ್ಲತ್ತಿಗಿರಿ ಕ್ಷೇತ್ರದಿಂದ ಕರೆದುಕೊಂಡು ಹೋಗುವಾಗ ಜೊತೆಯಲ್ಲಿದ್ದ ಒಂದು ಸಿಡಿಯ ಮರ ಅರ್ಧಕ್ಕೆ ತುಂಡಾಗಿ ಈ ಊರಿನಲ್ಲಿಯೇ ಬಿದ್ದಿತಂತೆ ದೇವರ ಅಪ್ಪಣೆ ಕೇಳಿದಾಗ ಮುಗಳಿಯಲ್ಲಿ ನೆಲಸಿ ಸಿಡಿ ಆಡಲು ಸೂಚಿಸಿದರಂತೆ ಅಂದಿನಿಂದ ಬೀರದೇವರ ಜಾತ್ರೆಯಲ್ಲಿ ಚೌಡಮ್ಮನ ಸಿಡಿಯನ್ನು ಆಡಲಾಗುತ್ತದೆ. ಕಳೆದ ಬಾರಿ ಜಾತ್ರೆ ೧೯೬೪ನೇ ಇಸ್ವಿಯಲ್ಲಿ ನಡೆದಿತ್ತು. ಭಿನ್ನಾಭಿಪ್ರಾಯದಿಂದಾಗಿ ಕೆಲವು ಒಕ್ಕಲು ಭಾಗವಹಿಸಲೇ ಇಲ್ಲ. ಇಲ್ಲಿ ಚಾಲನೆ ಕುರುಬರು ಬುದ್ಧಿವಂತಿಕೆ ಪೂಜಾರಿಕೆ ಈರಿಕೆಗಳನ್ನು ಹೊನ್ನುಂಗದವರು ಕೋಲ್ಕಾರಿಕೆಯನ್ನು ದಂಡೆ ಕುಲದವರು ದಳವಾಯಿಕೆ ಪೂಜಾರಿಕೆಗಳನ್ನು ಶಾವಂತ ಕುಲದವರು ಪೂಜಾರಿಕೆ, ಯಜಮಾನಿಕೆಗಳನ್ನು ದಾರಾಕುಲದವರು, ಗೌಡಿಕೆಯನ್ನು ಬ್ಯಾಲನ ಕುರುಬರು ಭಂಡಾರಿಕೆ ಈರಿಕೆಗಳನ್ನು ಹಾಗೂ ಅರ್ಥನ ಕುಲದವರು ದೀವಟಿಗೆಯ ಅಧಿಕಾರವನ್ನು ಹೊಂದಿದ್ದಾರೆ.

೩೬. ಗಡಿಪಳ್ಳಿ

ಗಡಿಹಳ್ಳಿಯು ಚಿಕ್ಕಮಗಳೂರು ಜಿಲ್ಲೆ ತರೀಕೆರೆಯಿಂದ ೨೫ ಕಿ.ಮೀ. ದೂರದಲ್ಲಿದೆ. ಇಲ್ಲಿ ಕುರುಬರು ೨೩೮ ಮನೆತನಗಳಿವೆ. ಇದು ಶಿವನಿ ರೇವಣ್ಣಸಿದ್ಧೇಶ್ವರ ಸಂಸ್ಥಾನಕ್ಕೆ ಸೇರಿದ ೭ ಗಡಿ ಕೂಟಗಳಲ್ಲಿ ಒಂದಾಗಿದೆ. ಊರಿನಿಂದ ಪೂರ್ವದಿಕ್ಕಿಗೆ ಸುಮಾರು ಒಂದೂವರೆ ಮೈಲಿ ದೂರದಲ್ಲಿ ಕಂಸಾಗರ ಬೀರಲಿಂಗೇಶ್ವರನ ಗುಡಿ ಇದೆ. ಅದೇ ದಿಕ್ಕಿನಲ್ಲಿ ಸುಮಾರು ಒಂದು ಫರ್ಲಾಂಗ ದೂರದಲ್ಲಿ ಮಾದಾಳಯ್ಯನ ಗುಡಿ ಕೋಡಿದೇವರ ಗುಡಿ ಇದೆ. ಈ ಎರಡು ಗುಡಿಗಳು ಊರಿನ ಸಮೀಪದಲ್ಲಿ ಇವೆ. ಕೋಡಿದೇವರ ಪಕ್ಕದಲ್ಲಿಯೇ ಬಸವೇಶ್ವರನ ಉದ್ಭವಮೂರ್ತಿ ಇದೆ.

ಊರೊಳಗೆ ಉಪಗುಡಿ ಇದ್ದು, ಮೂಲ ಗುಡಿಯಲ್ಲಿರುವ ಎಲ್ಲ ದೇವರುಗಳನ್ನು ಇಲ್ಲಿ ಪ್ರತಿಷ್ಠಾಪಿಸಲಾಗಿದೆ. ಕಂಸಾಗರದ ಬೀರಲಿಂಗೇಶ್ವರ ಮತ್ತು ಕೋಡಿಬೀರಲಿಂಗೇಶ್ವರ ಹಾಗೂ ಬಸವೇಶ್ವರ ದೇವರುಗಳು ಈ ದೇವಾಲಯದಲ್ಲಿ ಇದೆ.

ಮೂಲ ಗುಡಿಗಳಲ್ಲಿ ನಿತ್ಯಪೂಜೆ ನಡೆಯುವುದಿಲ್ಲ. ಬದಲಿಗೆ ಹಬ್ಬ ಹರಿದಿನಗಳಂತಹ ವಿಶೇಷ ಸಂದರ್ಭಗಳಲ್ಲಿ ಪೂಜೆ ನಡೆಯುತ್ತದೆ. ಊರೊಳಗಿನ ಗುಡಿಯಲ್ಲಿ ನಿತ್ಯಪೂಜೆ ಪುರಸ್ಕಾರಗಳು ನೆರವೇರುತ್ತವೆ. ಈ ಗುಡಿಗಳಿಗೆ ನಿಶ್ಚಿತವಾದ ಆದಾಯವೇನೂ ಇಲ್ಲ. ಜಮೀನಾಗಲಿ ಬೇರೆ ಯಾವುದೇ ಆದಾಯದ ಮೂಲವಾಗಲಿ ಇಲ್ಲ. ಇಲ್ಲಿ ಪ್ರತಿ ೧೨ ವರ್ಷಕ್ಕೊಮ್ಮೆ ಬೀರದೇವರ ಜಾತ್ರೆ ನಡೆಯುತ್ತದೆ. ಈ ಜಾತ್ರೆಯು ಊರ ಹೊರಗಿನ ತೋಪಿನಲ್ಲಿ ನಡೆಯುವುದರಿಂದ ಇದನ್ನು ತೋಪು ಜಾತ್ರೆ ಎಂತಲೂ ಕರೆಯುತ್ತಾರೆ. ಬಸವಣ್ಣ ದೇವರು ಇರುವುದರಿಂದ ಗಾವು ಸಿಗಿಯುವ ಸಂಪ್ರದಾಯವಿಲ್ಲ. ಕಳೆದ ಬಾರಿ ಈ ಜಾತ್ರೆಯು ೧೯೯೮ರ ಮಾರ್ಚ್ ತಿಂಗಳಲ್ಲಿ ನಡೆದಿತ್ತು. ಈ ಸಮಯದಲ್ಲಿ ಕುವೆಂಪು ವಿಶ್ವವಿದ್ಯಾಲಯದವರು ಜಾತ್ರಾ ಸಮಿತಿಯ ಸಹಕಾರದೊಂದಿಗೆ ಕುರುಬ ಜನಾಂಗದ ಬಗ್ಗೆ ಒಂದು ವಿಚಾರ ಸಂಕೀರ್ಣವನ್ನು ಏರ್ಪಡಿಸಿದ್ದರೆಂದು ಇಲ್ಲಿಯ ಜನರು ಹೇಳುತ್ತಾರೆ.

೩೭. ಹೊಸೂರು

ಚಿಕ್ಕಮಗಳೂರು ಜಿಲ್ಲೆ ಹೊಸೂರು ತರೀಕೆರೆಯಿಂದ ೩೦ ಕಿ.ಮೀ. ದೂರದಲ್ಲಿದೆ ಹಾಗೂ ಗಡಿಹಳ್ಳಿಯ ಸಮೀಪವಿದೆ. ಇಲ್ಲಿ ಕುರುಬರ ಒಕ್ಕಲುಗಳು ಸುಮಾರು ೨೦ ಒಕ್ಕಲುಗಳು ಇವೆ. ಶಿವನಿ ರೇವಣ್ಣಸಿದ್ದೇಶ್ವರ ಸಂಸ್ಥಾನಕ್ಕೆ ಸೇರಿರುವಲ್ಲಿ ಇದು ಒಂದಾಗಿದೆ. ಹೊಸೂರಿನ ಬೀರದೇವರು ಮೂಲತಃ ಗಡಿಹಳ್ಳಿಯ ಬೀರದೇವರಾಗಿದೆ. ಇಲ್ಲಿರುವ ಮೂಲ ಗುಡಿ ಬಹಳ ಪುರಾತನವಾದುದೇನಲ್ಲ. ಈ ಮೂಲ ಗುಡಿಯು ಊರಿನಿಂದ ಪೂರ್ವಕ್ಕೆ ಸುಮಾರು ಒಂದು ಫರ್ಲಾಂಗ್ ದೂರದಲ್ಲಿದೆ. ಇದನ್ನು ಚನ್ನಬಸವ ಬೀರದೇವರು ಅಥವಾ ಕಂಸಾಗರದಯ್ಯ ಎಂದು ಕರೆಯುತ್ತಾರೆ. ಊರೊಳಗಿನ ಗುಡಿಯಲ್ಲಿ ಕಂಸಾರಗದ್ಯನ ಮೂರ್ತಿ ಇದೆ. ಈ ಗುಡಿ ಸಹ ಇತ್ತೀಚೆಗೆ ನಿರ್ಮಾಣಗೊಂಡಿದ್ದಾಗಿದೆ. ಎಲ್ಲಾ ಬೀರದೇವರುಗಳಿಗೆ ನಡೆಯುವಂತೆ ಇಲ್ಲಿಯೂ ಪೂಜೆ ಪುರಸ್ಕಾರಗಳು ನಡೆಯುತ್ತವೆ. ಮೂಲ ಗುಡಿಯಲ್ಲಿ ನಿತ್ಯ ಪೂಜೆ ಇರುವುದಿಲ್ಲ. ಹಬ್ಬ ಹರಿದಿನಗಳಲ್ಲಿ ವಿಶೇಷ ರೀತಿಯ ಪೂಜೆ ಪುರಸ್ಕಾರಗಳು ನೆರವೇರುತ್ತವೆ. ಊರೊಳಗಿನ ಗುಡಿಯಲ್ಲಿ ನಿತ್ಯ ಪೂಜೆ ನಡೆಯುತ್ತದೆ. ಇಲ್ಲಿ ಕುರುಬ ಜನಾಂಗದವರು ಯುಗಾದಿ, ಶಿವರಾತ್ರಿ, ದೀಪಾವಳಿ, ಕಾರ್ತಿಕ ಹಬ್ಬಗಳನ್ನು ಆಚರಿಸುತ್ತಾರೆ. ಇಂತಹ ವಿಶೇಷ ಸಂದರ್ಭಗಳಲ್ಲಿ ಜಾಗರಣೆ, ಭಜನೆ, ಪುರಾಣಗಳ ಪಾರಾಯಣ ನಡೆಸುತ್ತಾರೆ.

ಇಲ್ಲಿನ ಗುಡಿಗಳಿಗೆ ನಿಖರ ಆದಾಯ ತರುವ ಜಮೀನಾಗಲಿ, ಸ್ಥಿರಾಸ್ತಿಗಳಾಗಲಿ ಇಲ್ಲ. ಬದಲಿಗೆ ಎಲ್ಲ ಖರ್ಚುವೆಚ್ಚಗಳನ್ನು ಒಕ್ಕಲುಗಳು ಸೇರಿ ಭರಿಸುತ್ತಾರೆ. ಇಲ್ಲಿ ಬೀರದೇವರ ಜಾತ್ರೆ ನಡೆಯುವುದಿಲ್ಲ. ಆದರೆ ಗಡಿಹಳ್ಳಿ ಬೀರದೇವರ ಜಾತ್ರೆಯಲ್ಲಿ ಭಾಗಿಗಳಾಗುತ್ತಾರೆ. ಹೊಸೂರಿನಲ್ಲಿ ದಂಡೆ ಕುಲದವರು ಮಾತ್ರ ವಾಸವಾಗಿರುತ್ತಾರೆ. ದಳವಾಯಿಕೆ ಪೂಜಾರಿಕೆ ಚೌಡಿಕೆ ಎಲ್ಲವನ್ನೂ ಇವರೇ ನಿರ್ವಹಿಸುತ್ತಾರೆ. ಇಲ್ಲಿ ಇದುವರೆಗೆ

ಜಾತ್ರೆ ನಡೆಯದಿದ್ದರೂ ಸಹ ದಳವಾಯಿಕೆ ಪಟ್ಟವನ್ನು ಕಟ್ಟಲಾಗಿದೆ. ಜಾತ್ರೆಯ ಬದಲಿಗೆ ಸ್ವಾಮಿಗಳನ್ನು ಕರೆಯಿಸಿ ಉತ್ಸವ ಮಾಡಿ ದಳವಾಯಿಕೆಯ ಪಟ್ಟ ಕಟ್ಟಲಾಗಿದೆ.

೩೮. ಗೋಪಗೊಂಡನಹಳ್ಳಿ

ಗೋಪಗೊಂಡನಹಳ್ಳಿ ಹೊನ್ನಾಳಿ ತಾಲೂಕು ಊರಿನ ಪೂರ್ವಭಾಗಕ್ಕೆ ಬಲಮುರಿಗೆ ಹೋಗುವ ರಸ್ತೆಯ ಎಡಬದಿಯಲ್ಲಿ ಪೂರ್ವಾಭಿಮುಖವಾಗಿ ಕ್ರಿ.ಶ. ೧೩-೧೪ನೇ ಶತಮಾನದಲ್ಲಿ ಬಳಪದ ಕಲ್ಲಿನಿಂದ ಈ ದೇವಾಲಯವನ್ನು ನಿರ್ಮಿಸಲಾಗಿದೆ. ಈ ದೇವಾಲಯ ಗರ್ಭಗುಡಿ ನವರಂಗ ಮುಖಮಂಟಪವನ್ನು ಹೊಂದಿದೆ.

ಹೊರಭಾಗದ ಅಧಿಷ್ಠಾನವು ಭೂಮಿಯಲ್ಲಿ ಮುಚ್ಚಿರುವುದರಿಂದ ಅದರ ವಿವಿಧ ಅಂಗಭಾಗಗಳು ಗೋಚರಿಸುವುದಿಲ್ಲ. ಬಿತ್ತಿಯಲ್ಲಿ ಅರೆಗಂಭಗಳನ್ನು ಕೆತ್ತಿದ್ದು, ಅವುಗಳ ಮಧ್ಯೆ ಅಲ್ಲಲ್ಲಿ ಕೆಲವು ಶಿಲ್ಪಗಳನ್ನು ಕೆತ್ತಲಾಗಿದೆ. ಗರ್ಭಗುಡಿಯ ಉತ್ತರ ಭಾಗದ ಬಿತ್ತಿಯ ಮಧ್ಯೆ ಪಟ್ಟಿಕೆಯಲ್ಲಿ ಲಿಂಗ ಗರ್ಭಗುಡಿಯ ಹಿಂಭಾಗದ ಪಶ್ಚಿಮ ಬಿತ್ತಿಯ ಮಧ್ಯ ಪಟ್ಟಿಕೆಯಲ್ಲಿ ಲಜ್ಜಾಗೌರಿ ಶಿಲ್ಪವಿದೆ. ನವರಂಗದ ಉತ್ತರ ಭಾಗದ ಭಿತ್ತಿಯಲ್ಲಿ ನಾಗಬಂಧ ಸ್ತ್ರೀ ಶಿಲ್ಪವಿದೆ. ಈ ಸ್ತ್ರೀ ಶಿಲ್ಪದ ಎರಡೂ ಕೈಗಳ ಮೇಲೆ ಎರಡು ಪಕ್ಷಿಗಳು ರೆಕ್ಕೆಯನ್ನೆತ್ತಿಕೊಂಡು ಕುಳಿತುಕೊಂಡಿವೆ. ಗರ್ಭಗುಡಿಯ ಹೊರಭಾಗದ ಭಿತ್ತಿ ಸುತ್ತ ನಂತರ ಕಾಲದಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ಮೂಲ ದೇವಾಲಯದ ಭಿತ್ತಿ ಕಾಣದಂತೆ ಮುಚ್ಚಲ್ಪಟ್ಟಿದೆ. ಅದರಿಂದ ಮೂಲ ಭಿತ್ತಿಯಲ್ಲಿನ ಶಿಲ್ಪಗಳು ಸ್ಪಷ್ಟವಾಗಿ ಕಾಣುತ್ತಿಲ್ಲ. ಪ್ರಸ್ತರದ ಮೇಲ್ಭಾಗದಲ್ಲಿ ಇಟ್ಟಿಗೆಯ ಅರಳಿದ ತಾವರೆಯಿದೆ. ಗಾರೆಗಳಿಂದ ನಿರ್ಮಿಸಿದ ಶಿಖರವಿದೆ.

ಚೌಕಾಕಾರದ ಗರ್ಭಗುಡಿಯಲ್ಲಿ ಚಿಕ್ಕ ಗಾತ್ರದ ಮೂರು ಲಿಂಗಗಳಿವೆ. ಇದರ ಮುಚ್ಚಿಗೆಯಲ್ಲಿ ಅರಳಿದ ತಾವರೆಯಿದೆ. ದ್ವಾರದ ಕೆಳಭಾಗದಲ್ಲಿ ತ್ರಿಶೂಲ, ಡಮರುಗ ಹಿಡಿದಿರುವ ಶೈವ ದ್ವಾರಪಾಲಕರಿದ್ದಾರೆ. ದ್ವಾರವು ಲತಾ ಶಾಖೆಯಿಂದ ಕೂಡಿದ್ದು ಲಲಾಟದಲ್ಲಿ ಗಜಲಕ್ಷ್ಮೀಯನ್ನು ಕೆತ್ತಲಾಗಿದೆ. ದ್ವಾರಪಾಲಕರ ವಿಧಿಯ ಭಿತ್ತಿಯಲ್ಲಿ ನಾಗರಗಳಿದ್ದು ನವರಂಗಕ್ಕೆ ದಕ್ಷಿಣ ಮತ್ತು ಪೂರ್ವದಿಂದ ಪ್ರವೇಶಿಸಲು ದ್ವಾರಗಳಿವೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಕೆಳಭಾಗ ಆಯತಾಕಾರವಾಗಿ ಮೇಲ್ಭಾಗವು ದುಂಡಾಕಾರವಾಗಿಯೂ ಇದೆ. ಆಯತಾಕಾರದ ಭಾಗದಲ್ಲಿ ಸೊಂಟಕ್ಕೆ ಕಠಾರಿಯೊಂದನ್ನು ಸಿಕ್ಕಿಸಿ ಕೈಯಲ್ಲಿ ಖಡ್ಗ, ಬಿಲ್ಲು ಹಿಡಿದ ವೀರ, ಕುದುರೆ ಏರಿದ ವೀರನ ತಲೆಯ ಮೇಲೆ ಗಡಿಗೆ ಕೊಡ ಹೊತ್ತೊಯ್ಯುತ್ತಿರುವ ಸ್ತ್ರೀ ತಪಸ್ಸಿನಲ್ಲಿ ಕುಳಿತ ಯತಿ ಯುದ್ಧದಲ್ಲಿ ತೊಡಗಿದ ವೀರರು ಗಣೇಶ ಮೊದಲಾದ ಶಿಲ್ಪಗಳಿವೆ. ಈ ಕಂಭಗಳಿಗೆ ಹೆಚ್ಚು ಸುಣ್ಣ ಲೇಪಿಸಿರುವುದರಿಂದ ಉಳಿದಿರುವ ಶಿಲ್ಪಗಳನ್ನು ಗುರುತಿಸುವುದು ತುಂಬಾ ಕಷ್ಟಕರವಾಗಿದೆ. ಕಂಬಗಳ ದುಂಡಾಕಾರದ ಭಾಗದಲ್ಲಿ ಈಟಿಗಳನ್ನು ಸುತ್ತಲೂ ಕೆತ್ತಲಾಗಿದೆ. ಈ ಕಂಬಗಳ ಮೇಲಿನ ಮೆಚ್ಚಿಗೆಯ ಮಧ್ಯೆದಲ್ಲಿ ಮೊಗ್ಗಿನಾಕಾರದ ಪದ್ಮವಿದ್ದು ಅದರ ಸುತ್ತಲೂ ಪದ್ಮಗಳು ನಾಗಬಂಧಗಳಿವೆ. ನವರಂಗದ ದಕ್ಷಿಣ ಭಾಗದ ಒಳಭಿತ್ತಿಯಲ್ಲಿ ಅಲಂಕೃತ ಹಂಸಗಳ ಪಟ್ಟಿಕೆ ಇದೆ. ಅವರ ಮುಂದಿನ ಅರೆ ಕಂಬದಲ್ಲಿ ಮಂಟಪದೊಳಗೆ ಇರುವ ಪುರುಷ ಮೇಲಿನ ಪಟ್ಟಿಯಲ್ಲಿ ಆನೆ ಇದೆ. ಉತ್ತರ ಭಾಗದ ಭಿತ್ತಿಯ ಮಧ್ಯದಲ್ಲಿ ಮಲ್ಲಯುದ್ಧದಲ್ಲಿ ತೊಡಗಿದ

ಇಬ್ಬರು ವೀರರ ಶಿಲ್ಪಗಳಿವೆ. ಅದರ ಮುಂದಿನ ಅರೆಗಂಬದಲ್ಲಿ ನಾಗಶಿಲ್ಪವಿದೆ. ಭಿತ್ತಿಯ ಒಳಭಾಗಕ್ಕೆ ಈ ರೀತಿಯ ಶಿಲ್ಪಗಳಿರುವುದು ಈ ದೇವಾಲಯದ ವಿಶೇಷವೆನ್ನಬಹುದು.

ನವರಂಗದ ಪೂರ್ವಪ್ರವೇಶದ್ವಾರದ ಕೆಳಭಾಗದಲ್ಲಿ ಶೈವ ದ್ವಾರಪಾಲಕರಿದ್ವಾರೆ. ಈ ದ್ವಾರಪಾಲಕರ ಬಳಿ ಡಮರ ಧಾರಣೆಯರಿದ್ವಾರೆ. ದ್ವಾರವು ರತ್ನ, ಕಂಬ, ಲತಾ ಶಾಖೆಗಳಿಂದ ಅಲಂಕೃತವಾಗಿದೆ. ಲಲಾಟ ಬಿಂಬಲದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು ಇದರ ಎರಡೂ ಕಡೆ ಇಳಿಬಿದ್ದ ತಾವರೆಯ ಮೊಗ್ಗಿನಾಕೃತಿಯು ಅಲಂಕೃತವಾಗಿದೆ. ಲಲಾಟದ ಮೇಲಿನ ಉತ್ತರಾಂಗ ಭಾಗದಲ್ಲಿ ಹಂಸಗಳನ್ನು ಅಲಂಕಾರಯುಕ್ತವಾಗಿ ಒಂದೇ ಸಾಲಿನಲ್ಲಿ ಕೆತ್ತಲಾಗಿದೆ. ಇಲ್ಲಿನ ದ್ವಾರದ ಎಡಭಾಗಕ್ಕೆ ಸಮನಾಂತರವಾಗಿರುವ ಭಿತ್ತಿಯ ಮಧ್ಯ ಪಟ್ಟಿಯಲ್ಲಿ ಮಿಥುನ ಶಿಲ್ಪವಿದೆ. ಬಲಭಾಗದ ಭಿತ್ತಿಯಲ್ಲಿ ನಾಗಬಂಧವಿದೆ.

ನಾಲ್ಕು ಸಾಧಾರಣ ಕಂಬಗಳಿಂದ ಕೂಡಿದ ತೆರೆದ ಮುಖಮಂಟಪವಿದೆ. ಈ ಮುಖಮಂಟಪದಲ್ಲಿ ದೇವಾಲಯಕ್ಕೆ ಪ್ರವೇಶಿಸುವ ದ್ವಾರವಿದ್ದು, ಅದರ ಎರಡು ಕಡೆ ಕಕ್ಷಾಸನಗಳಿವೆ. ಈ ಕಕ್ಷಾಸನಗಳನ್ನು ಎರಡು ಆನೆಗಳ ಹೊತ್ತೊಯ್ಯುತ್ತಿರುವ ರೀತಿಯಲ್ಲಿವೆ. ದಕ್ಷಿಣ ದ್ವಾರದ ಪೇದ್ಯಾಭಾಗದಲ್ಲಿ ಶೈವದ್ವಾರಪಾಲದ್ದು. ದ್ವಾರವು ರತ್ನ, ಸ್ತಂಭ, ಲತಾ ಶಾಖೆಯಿಂದ ಅಲಂಕೃತವಾಗಿದ್ದು ಲಲಾಟದಲ್ಲಿ ಪುಷ್ಪವಿದೆ.

ಮೂಲ ದೇವಾಲಯದ ಭಿತ್ತಿ ಸುತ್ತ ಮೂಲ ವಾಸ್ತು ಭಾಗಗಳು ಗೋಚರಿಸುವ ರೀತಿ ಮತ್ತೊಂದು ಬಾರಿ ಗೋಡೆಯನ್ನು ಇಟ್ಟಿಗೆ ಗಾರೆಯಿಂದ ಕಟ್ಟಲಾಗಿದೆ. ದೇವಾಲಯದ ಒಳಭಾಗದ ಉತ್ತರಾಂಗ ಭಾಗದ ಮೇಲಿನ ಪಕ್ಷಿಗಳು ಕಂಬ ಇವುಗಳನ್ನು ಆಧಾರವಾಗಿಟ್ಟುಕೊಂಡು ಇದು ವಿಜಯನಗರ ಕಾಲದ ದೇವಾಲಯವೆಂದು ಹೇಳಬಹುದು. ಇದೇ ದೇವಾಲಯದ ಸಮೀಪ ಮತ್ತೆರಡು ಶೈವ ದೇವಾಲಯಗಳಿದ್ದು ಈ ದೇವಾಲಯದ ವಾಸ್ತು ಲಕ್ಷಣಗಳನ್ನು ಒಳಗೊಂಡಿದೆ. ಈ ದೇವಾಲಯ ತುಂಬಾ ಸುಂದರವಾದ ಕೆತ್ತನೆಯಿಂದ ಕೂಡಿದೆ. ದೀಪಾವಳಿ, ಯುಗಾದಿ ಹಬ್ಬದ ದಿನಗಳ ಸಮಯದಲ್ಲಿ ಜಾತ್ರೆ, ಉತ್ಸವ ಜರಗುವುದು ವಿಶಷವಾದ ಪೂಜೆ ಪಲ್ಲಕ್ಕಿ ಉತ್ಸವ ಆಚರಣೆಗಳನ್ನು ಮಾಡುತ್ತಾರೆ.

೩೯. ಸಂಪಿಗೆಹಳ್ಳಿ ಬೀರೇಶ್ವರ

ಸಂಪಿಗೆಹಳ್ಳಿ ಬೀರೇಶ್ವರ ದೇವಾಲಯ ಇರುವುದು ಬೆಂಗಳೂರು ನಗರದ ಹೃದಯ ಭಾಗದಲ್ಲಿರುವ ಮಲ್ಯ ಆಸ್ಪತ್ರೆ ಪಕ್ಕಕೆ ಇಂದು ಬೆಂಗಳೂರು ವಿಶ್ವಮಟ್ಟದಲ್ಲಿ ಪ್ರಖ್ಯಾತಿಗಳಿಸಿದೆ. ಅದೇ ರೀತಿ ಬೆಂಗಳೂರನ್ನು ಕೆಂಪೇಗೌಡರು ನವದ್ವಾರಗಳನ್ನು ನಿರ್ಮಿಸಿ ವಿವಿಧ ಬಗೆಯ ವ್ಯಾಪಾರ ವಹಿವಾಟುಗಳಿಗೆ ಅನುಕೂಲವಾಗುವಂತೆ ಎಲ್ಲ ಧರ್ಮಿಯರಿಗೂ ಅವರವರ ಸಮುದಾಯಗಳೂ ಜಾತಿ ಬೇಧಗಳಿಲ್ಲದೆ ಸಮಾನತೆ ಸಾರುವ ಹಿನ್ನೆಲೆಯಲ್ಲಿ ಆ ಸಂದರ್ಭದಲ್ಲಿದ್ದ ಲಿಖಿತ ಆಧಾರಗಳ ಮೂಲಕ ಪುರಾತನ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿ ಅಭಿವೃದ್ಧಿ ಪಡಿಸಿದನು ಎಂಬುದನ್ನು ತಿಳಿಯಬಹುದು. ಸ್ತ್ರೀ ದ್ರೌಪದಿ ಧರ್ಮರಾಯಸ್ವಾಮಿ ಸನ್ನಿದಿಯ ಮುಂಭಾಗದಲ್ಲಿ ಅರ್ಧ ಕಿ.ಮೀ. ದೂರದಲ್ಲಿ ಸಂಪಗಿ ಕೆರೆಯೂ ಇದ್ದು ಈ ಕೆರೆ ಎದುರು ಪೂರ್ವಕ್ಕೆ ಮುಖ

ಮಾಡಿ ಶ್ರೀ ಬೀರೇಶ್ವರ ದೇವಾಲಯ ಕಂಡುಬರುತ್ತದೆ. ವಿಶಾಲವಾದ ಪ್ರವೇಶದ್ವಾರ ಹೊಂದಿದೆ. ಇಲ್ಲಿ ಒಂದೂವರೆ ಎಕರೆ ಜಾಗ ಇದೆ. ಕೌಂಪೌಂಡ ಒಳಗಡೆ ಒಂದು ಬೀರೇಶ್ವರ ವಸತಿನಿಲಯವಿದೆ. ಈ ದೇವಾಲಯವನ್ನು ಪುನರ್ ಸ್ಥಾಪಿಸಿದ್ದು ೧೯೫೬ರಲ್ಲಿ ಗುಡಿಯು ಬಿಳಿಕಲ್ಲಿನಿಂದ ಕಟ್ಟಲಾಗಿದೆ. ಗುಡಿಯ ಸುತ್ತಲೂ ವೀರಗಾರರ ಉಬ್ಬುಶಿಲ್ಪಗಳ ಕೆತ್ತನೆಗಳು ಕಾಣಸಿಗುತ್ತವೆ. ಗುಡಿಯ ಮೇಲುಗಡೆ ಶಿವ ಪಾರ್ವತಿ, ಗಣೇಶ ಮೂರ್ತಿಗಳನ್ನು ನಿರ್ಮಿಸಲಾಗಿದೆ. ಗರ್ಭಗುಡಿಯ ಒಳಗಡೆ ಬೀರಪ್ಪನ ಬಲಭಾಗದಲ್ಲಿ ಕಾಮಾಕ್ಷಿ ಎಡಭಾಗದಲ್ಲಿ ಇರಮ್ಮ ಮಧ್ಯೆ, ಗಣಪತಿ, ನಾಗರ ಕಲ್ಲು ಒಟ್ಟು ಗರ್ಭಗುಡಿಯಲ್ಲಿ ೯ ವಿಗ್ರಹಗಳಿವೆ. ಈ ದೇವರಿಗೆ ಒಂದು ಐತಿಹಾಸಿಕ ಹಿನ್ನೆಲೆ ಇದೆ.

ಐತಿಹಾಸಿಕ ಹಿನ್ನೆಲೆ : ಪ್ರತಿ ಕಾಲದಲ್ಲಿ ಒಂಬತ್ತು ದಿನಗಳು ಹಗಲು ರಾತ್ರಿ ದಟ್ಟಿಕುಲ ಕ್ಷತ್ರಿಯ ಸಮುದಾಯದವರು ಬೀರದೇವರ ಜಾತ್ರೆ ಪವಾಡ ಉತ್ಸವ ನಡೆಸುತ್ತಿದ್ದರು. ಬ್ರಿಟಿಷರು ಇವುಗಳಿಗೆಲ್ಲ ಕಡಿವಾಣ ಹಾಕಬೇಕೆಂದು ಸಮಯ ಕಾಯುತ್ತಿದ್ದರು. ಆ ಸಂದರ್ಭದಲ್ಲಿ ಅಂದಿಗೆ ಬೀರಪ್ಪನ ಗುಡಿ ಕೆರೆ ದಂಡೆಯ ಮೇಲಿದ್ದು. ಅಲ್ಲಿಯೇ ಒಂದು ಸಂಪಂಗಿಮರವಿದ್ದು, ಹಾಲುಮತದ ಕುರುಬರ ಮುದುಕಿಯೊಬ್ಬಳು ನಿತ್ಯ ಕುರಿಕಾಯುತ್ತ ಕುರಿಗಳನ್ನೆಲ್ಲ ಇದೇ ಮರದ ನೆರಳಿನಲ್ಲಿ ಕೂಡಿ ಹಾಕಿ ವಿಶ್ರಮಿಸುತ್ತಿದ್ದಳು. ಸಂಪಂಗಿ ಮರವೇ ಬೀರಪ್ಪ ದೇವರಂತೆ ಆಕೆಯ ಪಾಲಿನ ದೈವವಾಗಿತ್ತು ಎಂಬುದರಲ್ಲಿ ಎರಡು ಮಾತಿಲ್ಲ ವಿಧಿ ವಿಚಿತ್ರವೆಂಬಂತೆ ಮುದುಕಿಯು ನಂಬಿಕೊಂಡಿದ್ದ ಸಂಪಂಗಿ ಮರವು ಹಚ್ಚ ಹಸಿರು ಆಗಿ ಮೊಗ್ಗು ಹೂವುಗಳಿಂದ ತುಂಬಿ ಸುಗಂಧವನ್ನು ಸೂಸುತ್ತಿದ್ದ ಮರ ದಿನಂಪ್ರತಿ ಕಳೆಗುಂದುತ್ತ ದಿನೇ ದಿನೇ ಸಂಪೂರ್ಣ ಒಣಗಿ ಹೋಯಿತು. ಒಂದು ಬಾರಿ ಬ್ರಿಟಿಷ್ ಅಧಿಕಾರಿಯೊಬ್ಬನ ಆಜ್ಞೆಯಂತೆ ಒಣಗಿದ್ದ ಮರಗಳನ್ನು ಕಡಿಯಲು ಆಜ್ಞಾಪಿಸಿದ್ದು, ಕೊನೆಗೆ ಸಂಪಂಗಿ ಮರದ ಸರದಿಗೆ ಬಂದು ನಿಂತಿತು. ಮರ ಕಡಿಯಲು ಬಂದವನರ್ನು ಮುದುಕಿ ತಡೆದು ಓಡಿಸಿದ್ದಳು. ಅದು ಅಧಿಕಾರಿಗೆ ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ಅಧಿಕಾರಿಗೂ ಮುದುಕಿಗೂ ಮಾತಿಗೆ ಮಾತು ನಡೆಯಿತು. ಆದರೂ ಸಂಪಂಗಿ ಮರ ಕಡಿದು ಹಾಕುವುದು ಸಾಹಸವಾಯಿತು. ಕೊನೆಗೆ ಅಜ್ಜಿಯ ಮತ್ತು ಸಂಪಂಗಿ ಮರದ ಪ್ರಕರಣ ಹಿರಿಯ ಬ್ರಿಟಿಷ್ ದೊರೆ ಲೆವಿಲಿಗೆ ಮುಟ್ಟಿತು. ಹಿಂದೂಗಳ ಕಲ್ಲು ಪೂಜೆ, ಗಿಡ-ಮರ, ನೀರು, ಆಚಾರ-ವಿಚಾರಗಳಿಗೆ ಕಡಿವಾಣ ಹಾಕಬೇಕೆಂದಿದ್ದವನಿಗೆ ಸುಸಂದರ್ಭ ಒದಗಿ ಬಂದಿತು.

ಇದೇ ಸಮಯವೆಂದರಿತು ಮುದುಕಿಯ ಹಿನ್ನೆಲೆ ಇಟ್ಟುಕೊಂಡು ದೇವರುಗಳನ್ನು ಬಂಧಿಸಿದನು. ಕೊನೆಗೆ ಹಾಲುಮತ ಸಮುದಾಯದ ಮುಖಂಡರನ್ನು ಕರೆಯಿಸಿ ಪ್ರತಿಬಂಧಗಳನ್ನು ಹೇರಲು ಮುಂದಾದನು. ಅದಕ್ಕೆ ಉತ್ತರವಾಗಿ ಇವರೆಲ್ಲ ನಮ್ಮ ದೇವರುಗಳಲ್ಲಿ ಸತ್ಯವಿದೆ, ಧರ್ಮವಿದೆ, ನ್ಯಾಯ ನೀತಿಗಳು ಇವೆ. ಹಾಗಾದರೆ ನಿಮ್ಮ ದೇವರಲ್ಲಿ ಸತ್ಯವಿದ್ದರೆ ಒಣಗಿರುವ ಸಂಪಂಗಿ ಮರವನ್ನು ಚಿಗುರಿಸಿ, ನಮ್ಮ ಲಾಯದಲ್ಲಿ ಒಂದು ಕುದುರೆ ಸತ್ತು ಬಿದ್ದಿದೆ ಅದನ್ನು ಬದುಕಿಸಿ ಎಂದು ಸವಾಲು ಹಾಕಿದರು. ಹಾಗಿದ್ದರೆ ಮಾತ್ರ ನಿಮ್ಮ ದೇವರುಗಳನ್ನು ಬಿಟ್ಟುಕೊಡುತ್ತೇವೆ. ಇಲ್ಲವಾದರೆ ನೀವು ಯಾವ ದೇವರನ್ನು ಪೂಜಿಸಬಾರದು, ಯಾವುದೇ ಹಬ್ಬ, ಜಾತ್ರೆಗಳನ್ನು ಮಾಡಬಾರದೆಂದು ಶಾಸನ ವಿಧಿಸುತ್ತೇವೆ ಎಂದು ನಿರ್ಧರಿಸಿದರು.

ಅದಕ್ಕೆ ಹಾಲುಮತದ ಮುಖಂಡರೆಲ್ಲ ಒಪ್ಪುತ್ತಾರೆ. ಮರುದಿನವೇ ಉತ್ತಮ ವೇಳೆ ನೋಡಿ ಶ್ರೀ ಕರಿಯಾಲ ಲಿಂಗೇಶ್ವರನನ್ನು ಶ್ರದ್ಧಾಭಕ್ತಿಗಳಿಂದ ಸ್ತುತಿಸಿ ಆಹ್ವಾನಿಸಿದರು. ಶ್ರೀ ಕರಿಯಾಲ ಲಿಂಗೇಶ್ವರನೆ ಬೆಂಗಳೂರಿಗೆ ಬಂದು ತನ್ನ ಬಳಿಯಿದ್ದ ಭಾಂಡರವನ್ನು ಬ್ರಿಟಿಷರ ಲಾಯದಲ್ಲಿ ಸತ್ತು ಮಲಗಿದ್ದ ಕುದುರೆಯ ಮೇಲೆ ಚೆಲ್ಲಿ ತನ್ನ ಕೈಲಿದ್ದ ಅಲಗಿನಿಂದ ಕುದುರೆಗೆ ತಿವಿದೊಡನೆ ಛಂಗನೆ ಎದ್ದು ನಿಂತು ನೆಗೆಯತೊಡಗಿತು. ಬ್ರಿಟಿಷರ ಸೊಕ್ಕಡಗಿ ನೋಡುನೋಡುತ್ತಿದ್ದಂತೆಯೇ ಮೂಕವಿಸ್ಮಿತರಾಗಿ ಹೋಗಿದ್ದರು. ಅಲ್ಲಿ ನೆರೆದಿದ್ದ ಜನರು ಕರಿಯಾಲ ಲಿಂಗೇಶ್ವರನಿಗೆ ಜಯಕಾರ ಹಾಕಿದರು.

ತದನಂತರ ಬೀರದೇವರ ಗುಡಿಯ ಬಳಿಯ ಸಂಪಂಗಿ ಮರದ ಬಳಿ ಬಂದಾಯಿತು. ಒಣಗಿದ್ದ ಮರದ ಬಳಿ ಶ್ರೀ ಬೀರೇಶ್ವರನನ್ನು ಆಹ್ವಾನಿಸಲಾಯಿತು. ಈಶಾನ್ಯ ದಿಕ್ಕಿನಿಂದ ಶ್ರೀ ಬೀರೇಶ್ವರ ಸ್ವಾಮಿಯು ಬೆತ್ತವನ್ನು ಹಿಡಿದು ಬಂದವನೆ ಅಲುಗಿನಿಂದ ಮರವನ್ನು ಚುಚ್ಚಿ ತೀರ್ಥವನ್ನು ಸಿಂಪಡಿಸಿದೊಡೆ ನೋಡು ನೋಡುತ್ತಿದ್ದಂತೆ ಇಡೀ ಮರವೇ ತನ್ನ ಬಣ್ಣವನ್ನು ಬದಲಾಯಿಸಿಕೊಂಡು ತಿರುಳುಯೊಡೆದು ಚಿಗುರೊಡೆದು ಚೈತ್ರ ಮಾಸದ ಸೊಂಪು ಸೂಸಿ ಮೈತುಂಬಿ ಹಸಿರೊದ್ದು ಮೊಗ್ಗು ಹೂಗಳಿಂದ ಕಂಗೊಳಿಸತೊಡಗಿತು. ಇದನ್ನೆಲ್ಲ ನೋಡಿದ ಬ್ರಿಟಿಷ ದೊರೆ ಲೆವಿಲಿ ಮತ್ತೊಂದು ಚತುರ ಬುದ್ಧಿಯಿಂದ ನೀವು ತೆಂಗಿನ ಕಾಯಿಯನ್ನು ತಲೆಯ ಮೇಲೆ ಒಡೆದುಕೊಳ್ಳುತ್ತೀರಿ ಎಂದಿರಲ್ಲ ಮಾಡಿ ನೋಡೋಣ ಎಂದು ಮತ್ತೆ ರಾಗ ತೆಗೆದನು. ಹಾಲುಮತಸ್ಥರೆಲ್ಲ ಮುಂದೆ ನುಗ್ಗಿ ಬಂದು ನಿಂತರು. ದೀಕ್ಷಾ ವೀರಗಾರರು ಅಲಗು ಹಿಡಿದು ಮೈತುಂಬಿತು. ತಲೆಯ ಮೇಲೆ ತೆಂಗಿನ ಕಾಯಿಗಳೆಲ್ಲವನ್ನು ಒಡೆಯಲಾಯಿತು.

ಅದೃಶ್ಯ ಸನ್ನಿವೇಶ ದಕ್ಷಬ್ರಹ್ಮನ ಯಜ್ಞ ಸ್ಥಳಕ್ಕೆ ನುಗ್ಗಿದ ಶ್ರೀ ವೀರಭದ್ರನ ಘೋರ ಭಯಂಕರತೆಯನ್ನು ನೆನೆಸುವಂತಿತ್ತು. ತೆಂಗಿನ ಕಾಯಿಗಳೆಲ್ಲ ಮುಗಿದು ಹೋದವು. ಬೀರೇಶ್ವರನ ದೃಶ್ಯವನೆ ನೋಡಿ ಬ್ರಿಟಿ ಅಧಿಕಾರಿಗಳು ನಾವು ನಿಮ್ಮ ದೇವರುಗಳಿಗೆ ಶರಣಾಗಿದ್ದೇವೆ ನಮ್ಮಿಂದ ನಿಮಗೇನುಬೇಕೆಂದು ಕೇಳಿ ಎಂದಾಗ ಈ ಬೆಂಗಳೂರು ಒಂಭತ್ತು ಬಾಗಿಲುಗಳಲ್ಲಿ ಎಲ್ಲಿ ನಮ್ಮ ದೇವರ ಉತ್ಸವ ಕಾರ್ಯಗಳಿಗೆ ಅಡೆತಡೆ ಮಾಡಬಾರದೆಂದು ಕೇಳಲು ಬ್ರಿಟಿಷ್ ಲೆವಲಿ ದೊರೆ ತಾಮ್ರ ಶಾಸನದಲ್ಲಿ ಹಾಲಮತಕ್ಕೆ ನಿರ್ಧಾರ ಬರೆದು ಕೊಟ್ಟಿದ್ದಲ್ಲದೆ ಅಲ್ಲಿನ ಹಾಲುಮತದ ಯಜಮಾನನ ಕೈಲಿದ್ದ ಊರುಗೊಲಿನಿಂದ ಬೀರೇಶ್ವರ ಸನ್ನಧಿಯ ಸುತ್ತ ನಾಲ್ಕು ದಿಕ್ಕುಗಳಿಗೂ ಸಹ ಇಂತಿಷ್ಟು ಸ್ಥಳವೆಂದು ಊರುಗೋಲಿನಿಂದಲೇ ಅಳೆದು ಸ್ಥಳವನ್ನು ಪಡೆದು ಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಮುಗಳೂರಯ್ಯ, ಇಗ್ಗಲೂರು, ಹೊಸರಾಯಪ್ಪ, ಆನೆಕಲ್ಲು, ತಾಸಿಡಿ, ಹೊಸಕೋಟೆ ಹೊಸಕೋಟೆಪ್ಪ, ಆನೇಕಲ್ಲಿನ ತಾಲೂಕು ಹೊಸೂರು ಆನೇಲಿಂಗೇಶ್ವರ ಆನೇಕಲ್ಲು, ತ್ಯಾವಕನಹಳ್ಳಿ, ತೋಟದ ಸಿದ್ಧೇಶ್ವರ, ಬಿದರು ಕಂತೆಮ್ಮ ಹೆಣ್ಣುದೇವರು ಇಂತಿಷ್ಟು ದೇವರುಗಳು ಸೇರಿ ಒಂದು ಕೂಟವಾಗಿದೆ. ೩೦ ವರ್ಷಕ್ಕೆ ದೊಡ್ಡಹಬ್ಬ, ೫ ವರ್ಷ ೭ ವರ್ಷ, ೩ ವರ್ಷಗಳಿಗೊಮ್ಮೆ ಈ ಎಲ್ಲ ದೇವರುಗಳಿಗೂ ಜಾತ್ರೆ ಮಾಡುತ್ತಾರೆ. ಇದಕ್ಕೆ ಚಿಕ್ಕೊಸಳ್ಳಿ, ದೊಡ್ಡಮ್ಮ, ಚಿಕ್ಕಮ್ಮ ದೇವರನ್ನು ಸೇರಿಸಿ ಜಾತ್ರೆ ಮಾಡುತ್ತಾರೆ.

೪೦. ಬಾಪೂಜಿ ನಗರ

ಬೆಂಗಳೂರಿನ ಮೈಸೂರು ರಸ್ತೆಯಲ್ಲಿರುವ ಬಾಪೂಜಿ ನಗರದಲ್ಲಿ ಬೀರೇಶ್ವರ ದೇವಾಲಯ ಇದೆ. ಈ ನಗರದಲ್ಲಿ ಹಾಲಮತಸ್ಥರು ಸುಮಾರು ೫೦೦ ಮನೆತನಗಳಿವೆ. ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸಾಕಷ್ಟು ಪ್ರಗತಿ ಸಾಧಿಸಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದೆ. ತುಂಬಾ ಹಳೆಯ ಕಾಲದ ದೇವಾಲಯವಾದ್ದರಿಂದ ಸರ್ಕಾರಕ್ಕೆ ಸೇರಿದೆ. ೨೦೦೧ರಲ್ಲಿ ಕುರುಬರ ವರ್ಗಕ್ಕೆ ಬಂದಿದೆ. ೨೦೦೧ರಲ್ಲಿ ಹೊಸ ದೇವಾಲಯವನ್ನು ನಿರ್ಮಿಸಲಾಯಿತು. ಗರ್ಭಗುಡಿಯ ಸುತ್ತಳತೆ ೧೨x ೬೭ರಷ್ಟು ದೇವಾಲಯವಿದೆ. ಮೇಲ್ಛಾವಣೆ ಹಾಗೂ ಆರ್.ಸಿ.ಸಿ.ಯಿಂದ ನಿರ್ಮಿತವಾದ ಒಳಗಡೆ ಬಿಳಿಕಲ್ಲಿನಿಂದ ಕಟ್ಟಲಾಗಿದೆ. ಗುಡಿಯ ಮೇಲ್ಗಡೆ ಇರುವ ಶಿವನಮೂರ್ತಿಯನ್ನು ನೋಡಿಯೇ ಆನಂದಿಸಬೇಕು. ಶಿವನ ವಿಗ್ರಹವನ್ನು ನಿರ್ಮಿಸಿದ್ದವರು ತಮಿಳುನಾಡಿನ 'ರವಿ' ಎಂಬುವರು. ಬೆಂಗಳೂರಿನಲ್ಲಿ ೩ನೇ ಉದ್ದನೆಯ ಶಿವನಮೂರ್ತಿಯಾಗಿದೆ ಎಂದು ಇಲ್ಲಿಯ ಪೂಜಾರಿಗಳು ಹೇಳುತ್ತಾರೆ.[೪೦]

ಪ್ರವೇಶದ್ವಾರದ ಮುಂದೆ ವಿಶಾಲವಾದ ಪೌಳಿ ಇದೆ. ಇದರ ಮುಂದೆ ಒಂದು ದೀಪದ ಸ್ತಂಭವಿದೆ. ಪ್ರಸ್ತುತ ದೇವಾಲಯದ ಎದುರಿಗೆ ಹೋಮ ಮಾಡಲು ಕೊಂಡವಿದೆ. ಎರಡು ಬನ್ನಿಮರಗಳಿವೆ. ಇದರ ಕೆಳಗೆ ಹೆಣ್ಣುದೇವತೆ ನೆಲೆಸಿದ್ದಾಳೆ. ಹಿಂದುಗಡೆ ಎರಡು ಉಗ್ರಾಣ ಕೋಣೆಗಳಿವೆ. ಗುಡಿಯ ಮೇಲಗಡೆ ಸುತ್ತಲೂ ಹೂವಿನ ಚಿತ್ರಗಳಿಂದ ಕೆತ್ತನೆ ಮಾಡಿದ ಅಲಂಕಾರವಿದೆ.

ಗರ್ಭಗುಡಿಯ ಒಳಗಡೆ ಅಸ್ಪಷ್ಟ ಆಕೃತಿಯ ಶಿವನಮೂರ್ತಿ ಶಿಲ್ಪವಿದೆ. ಅದಕ್ಕೆ ಹಿತ್ತಾಳೆ ಮುಖ ತೊಡಿಸಲಾಗಿದೆ. ಮುಖದ ಮೇಲೆ ನಾಗರಹೆಡೆಯಿದೆ. ಎಡಗಡೆ ಬಲಗಡೆ ಎರಡೆರಡು ಹಿತ್ತಾಳೆ ಲಿಂಗ ಮೂರ್ತಿಗಳಿವೆ. ಮುಂದೆ ಬಸವಮೂರ್ತಿಯನ್ನು ಹಿತ್ತಾಳೆಯಿಂದ ನಿರ್ಮಿಸಲಾಗಿದೆ. ಬೆಳಗ್ಗೆ ಸಂಜೆ ಎರಡು ಸಮಯದಲ್ಲಿ ಪೂಜೆ ನಡೆಯುತ್ತದೆ. ಈ ದೇವಾಲಯದ ವಿಶೇಷತೆ ಎಂದರೆ ಮುಡುಕ ತೊರೆಯಿಂದ(ಮಳವಳ್ಳಿ) ಯಿಂದ ಐದು ಲಿಂಗಗಳನ್ನು ತಂದು ಉದ್ಭವ ಮಾಡಲಾಯಿತು. ಹೊಸದುರ್ಗ ಶಾಖಮಠದ ಶ್ರೀ ಶ್ರೀ ಈಶ್ವರ ನಂದಾಪೂರಿ ಸ್ವಾಮಿಯವರಿಂದ ೨೦೦೩ರಲ್ಲಿ ಕುಂಭಭಿಷೇಕವಾಯಿತು. ಈ ದೇವಾಲಯವು ಮತ್ತೆ ಈಗ ಸರ್ಕಾರಕ್ಕೆ ಸೇರಿದೆ. ಬೈಲಾ ಟ್ರಸ್ಟನವರು ಮತ್ತು ಜನರು ಸೇರಿ ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆ. ಒಂದು ವೇಳೆ ಸರ್ಕಾರದಿಂದ ವಜಾ ಆದರೆ ಸಮಸ್ತ ಆಸ್ತಿ ಕುರುಬ ಸಂಘಕ್ಕೆ ಸೇರಬೇಕು ಎಂದು ಇಲ್ಲಿಯ ಜನರು ಬಾಂಡ ಮೇಲೆ ಬರೆಸಿಕೊಂಡಿದ್ದಾರೆ.

ಪೂಜಾ ವಿಧಾನ ಸೋಮವಾರ, ಗುರುವಾರ, ಶುಕ್ರವಾರ, ಪ್ರದೋಷ ಅಮವಾಸ್ಯೆ ದಿನಗಳಂದು ವಿಶೇಷ ಪೂಜೆಗಳು ನಡೆಯುತ್ತವೆ. ಧನುರ್ಮಾಸದಲ್ಲಿ ಒಂದು ತಿಂಗಳ ಪೂಜೆ ನಡೆಯುತ್ತದೆ. ಮಹಾಶಿವರಾತ್ರಿಯಲ್ಲಿ ಬೀರೇಶ್ವರನನ್ನು ಪಲ್ಲಕ್ಕಿ, ಮುತ್ತಿನ ಪಲ್ಲಕ್ಕಿಯಲ್ಲಿ ಮೆರವಣಿಗೆ ನಡೆಯುತ್ತದೆ. ಶ್ರೀರಾಮ ನವಮಿ ಮಾರನೇ ದಿನ ಬನ್ನಿವೃಕ್ಷಕ್ಕೆ ಪೂಜೆ, ಹೂವಿನ ಪಲ್ಲಕ್ಕಿ ಮೆರವಣಿಗೆ, ವೀರಗಾಸೆ ಕುಣಿತ ನಡೆಯುತ್ತದೆ. ಕಾರ್ತಿಕ ಮಾಸದಲ್ಲಿ ನಾಲ್ಕನೇ ಸೋಮವಾರ ಹರಿಕಥೆ, ದೀಪೋತ್ಸವ ನಡೆಯುತ್ತದೆ.[೪೧] ಇಲ್ಲಿ ಸೋಮವಾರದವರು,

ಗುರುವಾರದವರು ಇದ್ದಾರೆ. ಒಂದೇ ಭಾವನೆಯಿಂದ ಪೂಜೆ ಮಾಡುತ್ತಾರೆ. ಈ ದೇವಾಲಯದಲ್ಲಿ ಎಲ್ಲ ಜಾತಿ ಜನರಿಗೂ ಪ್ರವೇಶವಿದೆ ಎಂದು ಅರ್ಚಕರು ಹೇಳುತ್ತಾರೆ.

೪೧. ರಾಣಾಸಿಂಗಪೇಟೆ

ರಾಣಾಸಿಂಗಪೇಟೆ ಬೀರಲಿಂಗೇಶ್ವರ ದೇವಾಲಯ ಇರುವುದು ಬೆಂಗಳೂರಿನ ಉಪ್ಪಾರಪೇಟೆ ಪೋಲಿಸ್ ಠಾಣೆ ರಸ್ತೆಗೆ ಹೋದರೆ ಈ ದೇವಾಲಯ ಸಿಗುತ್ತದೆ. ಈ ಓಣಿಯಲ್ಲಿ ಮುಕ್ಕಾಲು ಪಾಲು ಜನ ಹಾಲುಮತದವರೇ ಇದ್ದಾರೆ. ಈ ದೇವಾಲಯದ ಪಕ್ಕಕ್ಕೆ ಕುರುಬರಪೇಟೆ ಎಂದು ಹೆಸರು ಇದೆ. ಆಕರ್ಷಣೆಯ ಭವ್ಯ ದೇವಾಲಯ ಇದಾಗಿದೆ. ಇದನ್ನು ಬಿಳಿ ಕಲ್ಲಿನಿಂದ ಕಟ್ಟಲಾಗಿದೆ. ಗರ್ಭಗುಡಿಯ ದೇವಾಲಯದ ಮೇಲಂತಸ್ತಿನಲ್ಲಿ ಶಿವಪಾರ್ವತಿ, ಬಾಲಕೃಷ್ಣ, ಗಣೇಶ, ಬಸವಣ್ಣ ಇನ್ನು ಸುಂದರವಾದ ಮೂರ್ತಿಗಳನ್ನು ನೋಡಿಯೇ ಆನಂದಿಸಬೇಕು. ಈ ಗುಡಿಯ ಬಲಗಡೆ ಇನ್ನೊಂದು ಸುಬ್ರಮಣ್ಯ ಸ್ವಾಮಿಯ ದೇವಾಲಯ ಇದೆ. ಈ ದೇವಾಲಯದ ಮುಂದೆ ಕನಕದಾಸರ ಮೂರ್ತಿ, ಆಂಜನೆಯ ಸ್ವಾಮಿ, ನವಗ್ರಹಗಳು, ನಾಗರಮೂರ್ತಿಗಳು ಕಂಡುಬರುತ್ತದೆ.

ಗರ್ಭಗುಡಿಯ ಒಳಗಡೆ ಶಿವಲಿಂಗ ಮೂರ್ತಿಗೆ ಹಿತ್ತಾಳೆ ಮುಖವನ್ನು ತೊಡಿಸಲಾಗಿದೆ. ಇಲ್ಲಿ ಜಾತಿ, ಮತ, ಲಿಂಗಭೇದವಿಲ್ಲದೆ ಯಾರು ಬೇಕಾದರೂ ದೇವಸ್ಥಾನದ ಸುಕನಾಸಿಯವರೆಗೆ ಹೋಗಿ ದೇವರ ದರ್ಶನ ಪಡೆದುಕೊಳ್ಳಬಹುದು. ದಿನಂಪ್ರತಿ ಮುಂಜಾನೆ ಮತ್ತು ಸಂಜೆ ಪೂಜೆ ನಡೆಯುವುದು. ಮಹಾನವಮಿ, ದೀಪಾವಳಿ, ಯುಗಾದಿ ಸಂದರ್ಭಗಳಲ್ಲಿ ವಿಶೇಷವಾದ ಉತ್ಸವ ಜರಗುತ್ತದೆ. ಈ ದೇವರಿಗೆ ಹೂವಿನ ಪಲ್ಲಕ್ಕಿಯಲ್ಲಿ ಹೊರಗೆ ಬರುತ್ತಾನೆ. ವಿಶೇಷವಾದ ಪೂಜಾ ವಿಧಾನಗಳು ನಡೆಯುತ್ತದೆ.

೪೨. ಕೋಡಿದೊಡ್ಡಿ

ಮಂಡ್ಯದಿಂದ ಪಶ್ಚಿಮ ದಿಕ್ಕಿನಲ್ಲಿ ೧೫ ಕಿ.ಮೀ. ದೂರದಲ್ಲಿರುವ ಪುಟ್ಟ ಗ್ರಾಮವೇ ಕೋಡಿದೊಡ್ಡಿ. ಈ ಗ್ರಾಮದಲ್ಲಿ ಸುಮಾರು ೧೫೦ ಹಾಲುಮತ ಮನೆತನಗಳಿವೆ. ಈ ಊರಿನ ಪಶ್ಚಿಮ ದಿಕ್ಕಿನ ಕಡೆಗೆ ನಡೆದರೆ ಅಲ್ಲಿ ಸಿಗುವ ಪೂರ್ವಾಭಿಮುಖವಾಗಿರುವ ದೇವಾಲಯವೇ ಬೀರಪ್ಪನ ದೇವಸ್ಥಾನ. ೪೦೦-೫೦೦ ವರ್ಷದ ಹಿಂದಿನ ಕಾಲದಲ್ಲಿ ನಿರ್ಮಿಸಿರುವ ಊರು ಬಿಟ್ಟು ಅರ್ಧ ಕಿ.ಮೀ. ದೂರದಲ್ಲಿದೆ.

ಮುಖ್ಯ ದೇವಸ್ಥಾನದ ಸುತ್ತ ಚತುಷ್ಕೋಣಾಕಾರದ ಪೌಳಿ ಇದೆ. ಪೌಳಿ ಈಶಾನ್ಯ ಭಾಗದಲ್ಲಿ ಮಾತ್ರ ಉಗ್ರಾಣ ಕೋಣೆ, ಪೂರ್ವಕ್ಕೆ ಭವ್ಯವಾದ ವೈಭವಪೂರ್ಣ ದ್ವಾರವು, ವಿಜಯನಗರ ಕಾಲದ ರಚನೆ ತೋರುತ್ತದೆ. ವಿಸ್ತೃತವಾದ ಗರ್ಭಗೃಹ, ಸುಕನಾಸಿ ಮತ್ತು ರಂಗಮಂಟಪದ ಭಾಗಗಳು ಪ್ರಾಚೀನ ಕಾಲದ ರಚನೆಗಳಾಗಿವೆ. ಪ್ರಸ್ತುತ ಇದಕ್ಕೆ ಹೊಂದಿದಂತೆ ಮುಂಭಾಗದಲ್ಲಿ ಎರಡು ಬದಿಯ ಎರಡು ಕಟ್ಟೆಗಳಿಂದ ಕೂಡಿದ ದೊಡ್ಡ ಪ್ರಾಂಗಣವಿದೆ. ಇದು ತರುವಾಯದ ಬೆಳವಣಿಗೆ ಗರ್ಭಗೃಹದ ಮೇಲೆ ಶಿಖರವಿದೆ. ಇದರ ಮೇಲೆ ದೇವ ದೇವತೆಗಳ ವಿಗ್ರಹವನ್ನು ಬಿಡಿಸಲಾಗಿದೆ. ಆದರೆ ಅವು ಸುಣ್ಣದಿಂದ ಮುಚ್ಚಿಹೋಗಿ ಕಾಣದಂತಾಗಿದೆ.

ಗರ್ಭಗುಡಿಯ ಒಳಗಡೆ ಎಂಟು ಅಂಕಣದ ಬೀಕವನ್ನು ಹೊಂದಿದೆ. ಮೇಲ್ಚಾವಣಿ ಹಾಗೂ ಗೋಡೆ ಕಲ್ಲಿನಿಂದ ನಿರ್ಮಿತವಾಗಿದೆ. ಒಳಗಡೆ ಐದು ಬೀರಪ್ಪನ ಕಲ್ಲಿನ ಲಿಂಗಮೂರ್ತಿಗಳು ಕಳೆಭರಿತವಾಗಿದೆ. ಇಲ್ಲಿ ಋಷಿಮುನಿಗಳು ಒಂದು ಕಾಲದಲ್ಲಿ ತಪಸ್ಸು ಆಚರಣೆಗಳನ್ನು ಮಾಡುತ್ತಿದ್ದರು. ಬ್ರಾಹ್ಮಣರು ಕಾಶಿಯಿಂದ ಲಿಂಗ ತಂದು ಸ್ಥಾಪಿಸಿದರು ಎಂದು ಇಲ್ಲಿಯ ಜನ ಹೇಳುತ್ತಾರೆ.

ಈ ದೇವರ ವಾರ ವಿಶೇಷವಾಗಿ ಗುರುವಾರವಾಗಿದೆ. ಇಲ್ಲಿ ಜನ ಕೃಷಿಕರಾದರಿಂದ ರಾತ್ರಿ ಪೂಜೆ ಮಾಡುತ್ತಾರೆ. ಇಲ್ಲಿ ಸೋಮವಾರದವರು ಗುರುವಾರದವರು ಪೂಜೆ ಮಾಡುತ್ತಾರೆ. ಎಲ್ಲ ಜಾತಿಯ ಜನರು ಲಿಂಗಧಾರಣೆ ಮಾಡಿದ್ದಾರೆ. ಬೀರಲಿಂಗೇಶ್ವರ ಜಾತ್ರೆ ಯುಗಾದಿ, ಮಹಾನವಮಿ ದಿನ ನಡೆಯುತ್ತದೆ. ಮೈಸೂರು ದಸರಾದಿನ ದೇವರ ಪಲ್ಲಕ್ಕಿ ತೆಗೆದುಕೊಂಡು ಬನ್ನಿಮಂಟಪಕ್ಕೆ ಹೋಗಿ ಬನ್ನಿಪತ್ರಿ ಮುಡಿದು ಬರುತ್ತಾರೆ. ಈ ದೇವರ ಲಾಂಛನ ಕತ್ತಿ ಕಂಬ, ಫಿರಂಗಿ ಕತ್ತಿ, ಹಲಗೆ ಇವೆಲ್ಲ ತೆಗೆದುಕೊಂಡು ಹೋಗಿ ಬನ್ನಿಮುಡಿದು ದೇವರಿಗೆ ಮೆರವಣಿಗೆ ಕೈಗೊಳ್ಳುತ್ತಾರೆ.[೪೨]

ನಂಜುಂಡೇಶ್ವರ ದೇವಾಲಯ ಪೌಳಿಯ ಪ್ರವೇಶದ್ವಾರದ ಹೊರಗೆ ಆಗ್ನೇಯ ಮೂಲೆಯಲ್ಲಿ ಉತ್ತರಾಭಿಮುಖವಾಗಿ ನಂಜುಂಡೇಶ್ವರ ಗುಡಿಯಿದೆ. ವಿಶಾಲವಾದ ಮೈದಾನವನ್ನು ಹೊಂದಿದೆ. ಸುತ್ತಲೂ ಪ್ರಕಾರ ಗೋಡೆಯಿದ್ದೆ ಪ್ರಸ್ತಾರ ಭಾಗ ನಾಲ್ಕು ಕಂಬಗಳು ಇವೆ. ದೇವಾಲಯದ ಭಾಗಗಳು ಚೌಕಾಕಾರದ ಕಂಬಗಳಿವೆ. ಮೇಲ್ಗಡೆ ಇರುವ ಶಿಖರವನ್ನೇ ನೋಡಿಯೇ ಆನಂದಿಸಬೇಕು. ಪಕ್ಕಕ್ಕೆ ಕೋಷ್ಟಕ ಪಂಜರಗಳು ಇವೆ. ನವರಂಗದ ಹೊರಗಡೆ ಮುಖಮಂಟಪ ಸಭಾಮಂಟಪ ಹೊಂದಿದೆ. ದೇವಸ್ಥಾನಕ್ಕೆ ಎಲ್ಲ ಜಾತಿಗಳ ಜನ ಬರುತ್ತಾರೆ. ಬೆಂಗಳೂರು, ಮೈಸೂರು, ಹೈದರಾಬಾದ್ ಮುಂತಾದ ಊರುಗಳಿಂದಲೂ ಜನ ಬರುತ್ತಾರೆ ಎಂದು ಊರ ಜನರು ಹೇಳುತ್ತಾರೆ.

೪೩. ಉಮ್ಮಡಹಳ್ಳಿ

ಮಂಡ್ಯದಿಂದ ೨೫ ಕಿ.ಮೀ. ದೂರದಲ್ಲಿದೆ. ಈ ದೇವಸ್ಥಾನ ಊರುಬಿಟ್ಟು ೩ ಕಿ.ಮೀ. ದೂರದಲ್ಲಿದೆ. ಇದು ಪ್ರಾಚೀನವಾದ ದೇವಾಲಯ ಊರಲ್ಲಿ ಮುಕ್ಕಾಲುಪಾಲು ಜನ ಹಾಲುಮತದವರು ಗ್ರಾಮದ ಉತ್ತರ ಭಾಗವೆಲ್ಲ ಗದ್ದೆಗಳಿವೆ. ಉಮ್ಮಡಹಳ್ಳಿ ಬೀರೇಶ್ವರ ಪ್ರಮುಖ ಆಕರ್ಷಣೆಯ ಭವ್ಯ ದೇವಾಲಯ. ಎರಡು ಎಕರೆಗಳಷ್ಟು ವಿಸ್ತೀರ್ಣದ ದೇವಾಲಯ ಪೂರ್ವ ದಿಕ್ಕಿನಲ್ಲಿ ಪ್ರವೇಶದ್ವಾರವಿದೆ. ಗರ್ಭಗೃಹ, ಸುಕನಾಸಿ ಮುಖಮಂಟಪಗಳನ್ನು ಹೊಂದಿರುವ ಈ ದೇವಸ್ಥಾನ ವಿಶಾಲವಾದ ಮೈದಾನವನ್ನು ಹೊಂದಿದೆ. ಇದರ ಮುಂದೆ ಒಂದು ಮಾಲಗಂಬವಿದೆ. ಸುತ್ತಲೂ ಪ್ರಾಂಗಣವಿದ್ದು ಪಶ್ಚಿಮ ಮತ್ತು ಪೂರ್ವ ದಿಕ್ಕುಗಳಲ್ಲಿ ಅಂತಸ್ತಿನ ಸುಂದರ ಮೊಗಶಾಲೆಗಳಿವೆ. ಮೇಲ್ಗಡೆ ಇರುವ ಶಿಖರವನ್ನೇ ನೋಡಿ ಆನಂದಿಸಬೇಕು. ಶಿಖರದ ಪಕ್ಕಕ್ಕೆ ಪಂಜರಗಳು ಇವೆ. ಗರ್ಭಗುಡಿಯ ಒಳಗಡೆ ಶಿವಲಿಂಗ ಆಕೃತಿಯ ಮೂರ್ತಿಶಿಲ್ಪವಿದೆ. ಅದಕ್ಕೆ ಬೆಳ್ಳಿ ಮುಖ ತೊಡಿಸಲಾಗಿದೆ. ಪೂಜಾರಿಯನ್ನು ಹೊರತುಪಡಿಸಿ ಬೇರೆ ಯಾರಿಗೂ ಗರ್ಭಗೃಹದಲ್ಲಿ ಪ್ರವೇಶವಿರುವುದಿಲ್ಲ. ದೇವರಿಗೆ ಬೇರಾವುದು ಆಡಂಬರವಿಲ್ಲ. ಸತ್ತಿಗೆ, ನಿಶಾನೆ, ಹಲಗೆ, ಕಂಬಳಿ ಇವು

ದೇವರ ಲಾಂಛನಗಳು ಇವುಗಳ ಮೇಳಕ್ಕೆ ಶಿವಸ್ಥಾನವೆಂದು ಕರೆಯುವರು. ಇಲ್ಲಿ ರವಿವಾರ ಸೋಮವಾರದವರು ಇದ್ದಾರೆ. ವಿಶೇಷವಾಗಿ ವಾರದಲ್ಲಿ ಎರಡೂ ಬಾರಿ ಪೂಜೆ ನಡೆಯುತ್ತದೆ. ಬೀರಪ್ಪನ ಭಕ್ತರಿಗೆ ರವಿವಾರವೇ ಪವಿತ್ರವಾರವೆನಿಸಿದೆ.

೪೪. ಆಲೂರು

ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ಆಲೂರು ಗ್ರಾಮದಿಂದ ದೇವಸ್ಥಾನ ೨ ಕಿ.ಮೀ. ದೂರದಲ್ಲಿದೆ. ಈ ದೇವಸ್ಥಾನ ತುಂಬಾ ವಿಶಾಲವಾಗಿದೆ. ನಾಲ್ಕು ಎಕರೆ ಭೂಮಿಯನ್ನು ಹೊಂದಿದೆ. ಪ್ರವೇಶದ್ವಾರದ ಒಳಗಡೆ ಹೊದ ನಂತರ ದೇವಸ್ಥಾನದ ಮೇಲೆ ಎರಡು ಬಸವಮೂರ್ತಿಗಳಿವೆ. ಗರ್ಭಗುಡಿಯ ಒಳಗೆ ಒಂದು ಲಿಂಗಮೂರ್ತಿ ಇದೆ. ಬೀರಲಿಂಗೇಶ್ವರ ಮುಂದುಗಡೆ ಬಸವಣ್ಣನ ಮೂರ್ತಿಕೂಡ ಇದೆ. ೪೦೦ ವರ್ಷಗಳ ಹಿಂದೆ ಈ ದೇವಸ್ಥಾನ ಕಟ್ಟಲಾಗಿದೆ. ಇಲ್ಲಿ ಸುಂದರವಾದ ಮೊಗಶಾಲೆಗಳು ದೀಪಸ್ತಂಭ, ಲಿಂಗ, ಪ್ರಭಾವಳಿ, ಶಾಸನಗಳು, ವೀರಗಲ್ಲುಗಳು, ಗುಡಿ ಹಿಂದೆ ಶ್ರೀಕಾಳಮ್ಮ ತಾಯಿಯ ಸನ್ನಿಧಿ ಮತ್ತು ಬಾವಿ ಇದೆ.

ಈ ದೇವಸ್ಥಾನದಲ್ಲಿ ಕೆಳಜಾತಿಯವರಿಗೆ ಪ್ರವೇಶವಿಲ್ಲ. ಅವರು ಹೊರಗಡೆ ನಿಂತು ತಮಟೆ ಬಾರಿಸುತ್ತಾರೆ. ಇಲ್ಲಿ ತಮಟೆ ಬಾರಿಸುವ ಶಿಲ್ಪಗಳಿವೆ. ಮುಖ್ಯ ದೇವಾಲಯದ ದಕ್ಷಿಣ ಭಾಗದ ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದು ಆರೇಳು ಇಂಚುಗಳಷ್ಟು ಎತ್ತರವಾಗಿದ್ದು ಸುಮಾರು ಹತ್ತು ಇಂಚುಗಳಷ್ಟು ವ್ಯಾಸವುಳ್ಳದ್ದಾಗಿದೆ. ಇದರ ಸುತ್ತಲೂ ಪಾಣಿಪೀಠವನ್ನು ಕೂಡಿಸಲಾಗಿದೆ. ಇದಕ್ಕೆ ಕಂಚಿನ ಮೂರ್ತಿ ದೊಡ್ಡದಾಗಿ ಮಾಡಿಸಲಾಗಿ. ಈ ದೇವಾಲಯದ ಎದುರುಗಡೆ ಒಂದು ದೀಪದ ಸ್ತಂಭವೂ ಇದೆ. ಮುಖ್ಯ ದೇವಸ್ಥಾನದ ಉತ್ತರದ ಪಾರ್ಶ್ವದಲ್ಲಿ ಕಾಳಮ್ಮನ ಸನ್ನಿಧಿಯಿದೆ. ಈ ದೇವಾಲಯಕ್ಕೆ ಕಿರಿದಾದ ಪ್ರವೇಶದ್ವಾರವಿದ್ದು ಅದಕ್ಕೆ ಕಿಟಕಿ ಬಾಗಿಲುಗಳಿಲ್ಲ. ಒಂದು ಕಾಲಕ್ಕೆ ಒಬ್ಬರಿಗೆ ಮಾತ್ರ ಪ್ರವೇಶಿಸಲು ಬರುವಂತಿರುವ ಇದರ ಒಳಗಡೆ ಏಕಕಾಲಕ್ಕೆ ೨ರಿಂದ ೩ ಜನರು ಮಾತ್ರ ನಿಲ್ಲಬಹುದಾದಷ್ಟು ಸ್ಥಳವಿದೆ. ಬೀರಪ್ಪನ ಪ್ರವೇಶದ್ವಾರದಿಂದ ಒಳಹೊಕ್ಕರೆ ಎರಡು ಬದಿಗೆ ಮಂಟಪದಂತಿರುವ ವಿಸ್ತಾರವಾದ ಕಟ್ಟೆಯ ಎರಡೂ ಬದಿಯಲ್ಲಿ ಪರಿಕರಗಳನ್ನಿಡಲು ಸ್ಥಾನಗಳನ್ನು ಕಲ್ಪಿಸಲಾಗಿದೆ. ಪಶ್ಚಿಮಕ್ಕೆ ಕಟ್ಟೆಯ ಆಕಾರದ ಒಂದು ದೊಡ್ಡದಾದ ಬಾವಿಯಿದೆ.

ಪ್ರಸ್ತುತ ದೇವಾಲಯದ ಎದುರಿಗೆ ಒಂದು ಕಟ್ಟೆಯಿದೆ. ಇದು ಹಾಳಾದ ಮುಖಮಂಟಪ ಇಲ್ಲಿ ಒಂದು ಆಲದ ಮರವಿದೆ. ಬೀರಪ್ಪನ ಪಲ್ಲಕ್ಕಿ ಅಲ್ಲಿ ಬಂದು ಕೂಡುತ್ತದೆ. ಈ ದೇವಸ್ಥಾನಕ್ಕೆ ಒಂದು ಮೂಲ ಕಥೆ ಇದೆ. ನಂಜನಗೂಡಿನಿಂದ ನಂಜುಂಡೇಶ್ವರ ಆರಾಧಕರು ಕಿರುಕುಳಕ್ಕೆ ಒಳಗಾದಾಗ ಕುರುಬರು ಕಿರುಕುಳ ಸಹಿಸಲಾರದೆ ಆಲೂರಿಗೆ ಬಂದರು. ಲಿಂಗವನ್ನು ತೆಗೆದುಕೊಂಡು ಬರುವಾಗ ಗಾಡಿ ಬಂಡಿಯ ಕೀಲು ಮುರಿದು ಹೋಯಿತು. ಆ ಲಿಂಗವು ಹೊಳೆಯಲ್ಲಿ ಉಳಿಯುತ್ತದೆ. ಆ ಸಂದರ್ಭದಲ್ಲಿ ಸದಾ ಕಾಲ ಪೂಜೆ ಮಾಡಿ ಕುರಿಕಾಯುವವರು ನಂಜನಗೂಡಿನಿಂದ ಲಿಂಗವನ್ನು ತಂದು ಆಲೂರದಲ್ಲಿ ಪ್ರತಿಷ್ಠಾಪನೆ ಮಾಡಿದರು. ಇಲ್ಲಿ ಭಾನುವಾರದವರು, ಗುರುವಾರದವರು, ಸೋಮವಾರದವರು ಎಂದು ಮೂರು ಕೂಟಗಳಿವೆ. ಪ್ರತಿದಿನ

ಬಾನುವಾರದವರು ಗರುಡ ಗಂಭದ ಮೇಲೆ ನಿಂತು ದೇವಸ್ಥಾನಕ್ಕೆ ದೀಪ ಹಚ್ಚುತ್ತಾರೆ. ಗುರುವಾರದವರು ೯ ಕೂಟಗಳಿವೆ. ಸೋಮವಾರದವರು ೭ ಕೂಟಗಳಿವೆ.

ಈ ದೇವಾಲಯದ ಮುಂದೆ ಒಂದು ವಿಶೇಷವಾದ ಕಲ್ಲು ಇದೆ. ಭಕ್ತರು ಬೇಡಿಕೊಂಡ ಕೋರಿಕೆಗಳು ನೆರವೆರುತ್ತದೆ. ಒಂದು ವೇಳೆ ಸತ್ಯ ಹೇಳಿದನ್ನು ಸುಳ್ಳು ಎಂದು ವಾದ ಮಾಡಿದವರಿಗೆ ತೊಂದರೆಯಾಗುತ್ತದೆ. ಬೀರಲಿಂಗೇಶ್ವರನಿಗೆ ದಸರಾ, ಗೌರಿಹಬ್ಬ, ದೊಡ್ಡಹಬ್ಬ ದಿನ ಇಲ್ಲಿ ಜಾತ್ರೆ ಉತ್ಸವ ಜರುಗುತ್ತದೆ. ಕತ್ತಿ ಪವಾಡ, ಹಲಮರಿ ಪವಾಡ, ಕಹಳೆ ಮುಂತಾದ ಪವಾಡಗಳು ನಡೆಯುತ್ತವೆ. ಈ ಊರಿಗೆ ಹಾಲುಮತಸ್ಥರು ಬಂದಿದ್ದರಿಂದ ಈ ಊರಿಗೆ ಆಲೂರು ಎಂದು ಹೆಸರು ಬಂತು ಎಂದು ಹೇಳಲಾಗಿದೆ.[೪೩]

೪೫. ಸಾತನೂರು

ಮಂಡ್ಯದಿಂದ ೩ ಕಿ.ಮೀ. ದೂರದಲ್ಲಿದೆ. ಸಾತನೂರು ಬೀರಲಿಂಗೇಶ್ವರ ದೇವಾಲಯವು ತುಂಬಾ ಹಳೆಯ ಕಾಲದ್ದು. ಇಲ್ಲಿ ಒಟ್ಟು ಎರಡು ಬೀರಪ್ಪನ ದೇವಾಲಯಗಳಿವೆ. ಹಳೆಯ ದೇವಾಲಯ ಮತ್ತು ಹೊಸ ದೇವಾಲಯ ಎಂದು ಕರೆಯುವ ಪದ್ಧತಿ ಬಳಕೆಯಲ್ಲಿದೆ. ಭವ್ಯವಾದ ಈ ಗುಡಿ ೪೦೦ ರಿಂದ ೫೦೦ ವರ್ಷಗಳ ಹಿಂದೆ ಕಟ್ಟಲಾಗಿದೆ. ಬಲಗಡೆ ಹಳೆ ಗುಡಿ, ಎಡಕ್ಕೆ ಹೊಸ ಗುಡಿ. ಗೋಪುರದ ಮೇಲೆ ಸುಂದರವಾದ ಮೂರ್ತಿಗಳನ್ನು ಕೆತ್ತಿದ್ದಾರೆ. ಗುರುವಾರ ಸೋಮವಾರ ಕೂಟಗಳಿವೇ. ಅದಕ್ಕಾಗಿಯೇ ಎರಡು ದೇವಾಲಯಗಳನ್ನು ನಿರ್ಮಿಸಿದ್ದಾರೆ ಎನ್ನುವ ಕಥನಗಳು ಪ್ರಚಲಿತದಲ್ಲಿವೆ. ಚಿಕ್ಕಮ್ಮ ಎಂದು ಇನ್ನೊಂದು ಹೆಣ್ಣುದೇವರು ಇದೆ.

ಗರ್ಭಗುಡಿಯ ಒಳಗೆ ನಾಲ್ಕು ಶಿವಲಿಂಗಗಳಿವೆ. ನಾಗ, ಬಸವ ಮೂರ್ತಿಗಳಿವೆ. ಇದು ಎರಡು ತುಂಬಾ ಭವ್ಯವಾದ ದೇವಾಲಯಗಳು ದೀಪಾವಳಿ ಮಹಾನವಮಿ ದಿನ ಜಾತ್ರೆ ನಡೆಯುತ್ತದೆ. ಆ ಸಂದರ್ಭದಲ್ಲಿ ಏಳು ಗಡಿ ದೇವರುಗಳು ಸೇರುತ್ತವೆ. ಪಲ್ಲಕ್ಕಿ ಕುದುರೆ ಉತ್ಸವಗಳು ನಡೆಯುತ್ತವೆ. ಈ ಎರಡು ದೇವಾಲಯ ಕೂಟದವರು ಜಗಳವಾಗಿ ಇವಾಗ ಕೋರ್ಟ್‌ಗಳಲ್ಲಿ ಕೇಸ್ ನಡೆಯುತ್ತದೆ.

೪೬. ಹೊಸರದೊಡ್ಡಿ

ಚನ್ನಪಟ್ಟಣ ತಾಲೂಕು ಹೊಸೂರದೊಡ್ಡಿ ಗ್ರಾಮದ ಶ್ರೀ ದೊಡ್ಡ ಬೀರೇಶ್ವರ ಸ್ವಾಮಿ ದೇವಾಲಯವು ಸುಮಾರು ೨೫೦ರಿಂದ ೩೦೦ವರ್ಷಗಳ ಹಿಂದೆ ನಿರ್ಮಾಣವಾಗಿರಬಹುದೆಂದು ಹೇಳಬಹುದು. ಈ ದೇವಾಲಯದ ಸೃಷ್ಟಿಯ ಬಗ್ಗೆ ಅನೇಕ ಕಥನಗಳು ಬಳಕೆಯಲ್ಲಿವೆ ಅಂತಹ ಕಥನಗಳಲ್ಲಿ ಒಂದು ಇಂತಿದೆ. "ಚನ್ನಪಟ್ಟಣದ ವೈಶ್ಯ ಜನಾಂಗದ ಸಂಜೀವಶೆಟ್ಟರ ಮನೆತನದ ಹಿರಿಯರು ತಮ್ಮ ವ್ಯಾಪಾರ ಮುಗಿಸಿಕೊಂಡು ಈ ಬೀರದೇವರ ಉದ್ಭವ ಮೂರ್ತಿ ಉದ್ಭವಿಸಿದ ಪ್ರಾಂಗಣದಲ್ಲಿ ಅಡಿಗೆ ಮಾಡಿ ಉಂಡು ಅಲ್ಲೆ ರಾತ್ರಿ ಕಳೆಯುತ್ತಿದ್ದರು. ಆಗ ದೇವರು ಈ ಶೆಟ್ಟರ ಹಿರಿಯನ ಕನಸಿನಲ್ಲಿ ಬಂದು ಈ ಜಾಗದಲ್ಲಿ ಒಂದು ದೇವಸ್ಥಾನ ಕಟ್ಟಿಸಿರಿ ಎಂದಾಗ ಇದರಿಂದ ಪ್ರೇರಿತವಾಗಿ ಕುರುಬರ ದೇವಸ್ಥಾನದ ನಿರ್ಮಾಣ ಕಾರ್ಯದಲ್ಲಿ ಅವರು ತೊಡಗಿಕೊಂಡರು ಎಂದು ಹೇಳುತ್ತಾರೆ". ಇದಕ್ಕೆ ಪುರಾವೆ ಎಂದರೆ ಆಚರಣೆಗಳ ಸಂದರ್ಭಗಳಲ್ಲಿ ಆ ಮನೆತನದವರಿಗೆ ಈಗಲೂ ಗಂಧ ಮತ್ತು ತೀರ್ಥ ಪ್ರಸಾದವನ್ನು ಅವರಿಗೆ ವಿನಿಯೋಗಿಸಲಾಗುತ್ತಿರುವುದೇ ಸಾಕ್ಷಿಯಾಗಿ ಕಂಡುಬರುತ್ತದೆ. ಇದಕ್ಕೆ

ಪೂರಕವಾಗಿ ಈ ಶೆಟ್ಟರ ಮನೆತನದವರು ಈಗಲೂ ಬೀರದೇವರನ್ನು ಮನೆದೇವರಾಗಿಸಿಕೊಂಡಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಮತ್ತೀಕೆರೆಯ ಗೌಡ ಜನಾಂಗದವರು ಶ್ರಮದಾನದಲ್ಲಿ ಪಾಲ್ಗೊಂಡಿರುತ್ತಾರೆಂದು ತೋರಿಬರುತ್ತದೆ. ಇದರಲ್ಲಿ ಯಾವುದೇ ಸಂದೇಹವಿರುವುದಿಲ್ಲ. ಯಾಕೆಂದರೆ ಈಗಲೂ ಗೌಡರು ಹಾಗೂ ಇತರರು ಈ ದೇವರ ಒಕ್ಕಲಾಗಿರುತ್ತಾರೆ. ಇದು ಐತಿಹ್ಯ ತದನಂತರ ಕುರುಬರ ಜನಾಂಗ ಮತ್ತು ಜನಾಂಗದ ಯಜಮಾನರುಗಳ ಮುಂದಾಳತ್ವದಲ್ಲಿ ಪೂಜಾಕಾರ್ಯಗಳು, ಜಾತ್ರೆಗಳು ಇತ್ಯಾದಿ ಆಚರಣೆಗು ನಡೆಯುತ್ತವೆ.

ಈ ದೊಡ್ಡ ಬೀರೇಶ್ವರನು ಸಪ್ತಕೋಟೇಶ್ವರ ದೇವರಾಗಿದ್ದಾನೆ. ಅಂದರೆ ಈತನ ನಾಯಕತ್ವದಲ್ಲಿ ಇನ್ನು ಆರು ಬೀರದೇವರಗಳಿವೆ. ಬಹುತೇಕವಾಗಿ ಎಲ್ಲಾ ಬೀರದೇವರ ದೇವಸ್ಥಾನಗಳಿಗೂ ೫ ರಿಂದ ೩೦ ಎಕರೆ ತೋಪು ಭೂಮಿಯಿದೆ. ಈ ತೋಪಿನಲ್ಲಿ ದೇವರಕಾಡು ಇದೆ. ಸೌದೆಗಾಗಿ ಯಾರೂ ಈ ಕಾಡಿನಲ್ಲಿರುವ ಗಿಡಮರಗಳನ್ನು ಕಡಿಯುವುದಿಲ್ಲ. ಈ ತೋಪಿನ ಸೌದೆಯನ್ನು ಅಪರೂಪಕ್ಕೆ ನಡೆಯುವ ಕೊಂಡೋತ್ಸವಕ್ಕೆ ಮಾತ್ರವೆ ಬಳಸಲಾಗುವುದು. ಈ ತೋಪಿನಲ್ಲಿ ಶ್ರೀ ಬೀರೇಶ್ವರ ಸ್ವಾಮಿ ಮನುಷ್ಯರ ರೂಪವಾಗಿ ಘಟಸರ್ಪದ ರೂಪವಾಗಿ ಏಕಾಂಗಿಯಾಗಿ ವಿಹಾರ ಹೋಗುವನೆಂದು ಪ್ರತೀತಿ ಇದೆ. ದಕ್ಷಿಣ ಕರ್ನಾಟಕದ ಬೀರದೇವರ ದೇವಸ್ಥಾನಗಳಿಗೆ ಮೈಸೂರು ಅರಸರು ಭೂದಾನ ಮಾಡಿದ್ದಾರೆ. ಈ ಕುರಿತು ಈಗಲೂ ಕೆಲವು ಬೀರದೇವರ ದೇವಸ್ಥಾನಗಳಲ್ಲಿ ದಾಖಲೆಗಳಿವೆ. ಉದಾಹರಣೆಗೆ ಶ್ರೀ ದೊಡ್ಡ ಬೀರೇಶ್ವರ ಹೊಸೂರು ದೊಡ್ಡಿ, ಶೆಟ್ಟಿಹಳ್ಳಿ, ಚನ್ನಪಟ್ಟಣ ತಾಲೂಕು ಮತ್ತು ಶ್ರೀ ಬೀರೇಶ್ವರ ಸ್ವಾಮಿ ಅಥವಾ ಶ್ರೀ ಚನ್ನಕೇಶ್ವರ ಸ್ವಾಮಿ, ಹಳೇಗುಡಿ ಸಾತನೂರು ಮಂಡ್ಯ ಜಿಲ್ಲೆ ಅಂದರೆ ಕುರುಬ ಜನಾಂಗಕ್ಕೆ ಸೇರಿದ ಮೈಸೂರು ಅರಸರು ತಮ್ಮ ಕುಲದೇವತೆಯಾದ ಬೀರೇಶ್ವರನಿಗೆ ನಡೆದುಕೊಂಡಿರುವುದು ಸ್ಪಷ್ಟವಿದೆ.

ಮೈಸೂರು ಮಹಾರಾಜರು ದೇವಸ್ಥಾನಕ್ಕಾಗಿ ಕೊಟ್ಟ ಭೂಮಿ

ಮೈಸೂರು ದಸರ ಮೆರವಣಿಗೆ ಸಂದರ್ಭದಲ್ಲಿ ನಂದಿಧ್ವಜವನ್ನು ನಾಲ್ಕು ಜನರು ಸೇರಿ ಕುಣಿಸಿ ತೋರಿಸಿದರು. ಇದನ್ನು ಗಮನಿಸಿದ ಆಗಿನ ಮೈಸೂರು ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ ಅವರು ಪವಾಡದಂತೆ ಕಂಡುಬಂದ ಇದನ್ನು ನೋಡಿ ಬೆರಗಾಗಿ ಹೆಗ್ಗಡೆಯವರನ್ನು ಆಸ್ಥಾನಕ್ಕೆ ಕರೆಯಿಸಿದರು. ಇವರ ಪೂರ್ವಪರಗಳನ್ನು ವಿಚಾರಿಸಲಾಗಿ ಇವರು ದೊಡ್ಡ ಬೀರೇಶ್ವರ ಸ್ವಾಮಿಯ ಪರಮಭಕ್ತರೂ. ಆ ದೇವಸ್ಥಾನದ ಅರ್ಚಕರೆಂದು ತಿಳಿದುಬಂತು. ಆ ಸಂದರ್ಭದಲ್ಲಿ ದೇವಸ್ಥಾನಕ್ಕಾಗಿ ನನ್ನಿಂದ ನೀವು ಏನನ್ನು ಬಯಸುತ್ತೀರಿ ಎಂದಾಗ ಹೆಗ್ಗಡೆಯವರು ದೇವಸ್ಥಾನಕ್ಕೆ ಅವಶ್ಯಕವಾದ ಜಮೀನನ್ನು ದಯಪಾಲಿಸಬೇಕೆಂದು ಕೇಳುತ್ತಾರೆ. ಆಗ ಜಯಚಾಮರಾಜೇಂದ್ರ ಒಡೆಯರವರು ದೇವರಹಳ್ಳಿ, ಹೊಸೂರುದೊಡ್ಡಿ ಮತ್ತು ಶೆಟ್ಟಿಹಳ್ಳಿ ಗ್ರಾಮಗಳ ನಡುವೆ ನೆಲೆಸಿರುವ ಶ್ರೀ ದೊಡ್ಡಬೀರೇಶ್ವರ ಸ್ವಾಮಿ ದೇವಸ್ಥಾನಕ್ಕೆ ಬಂದು ಆಗ ಸ್ವಾಮಿ ಸನ್ನಿಧಿಯಿಂದ ಒಂದು ಕವಡೆಕಾಳನ್ನು ಪೂರ್ವಾಭಿಮುಖವಾಗಿ ಚಿಮ್ಮಿದರು. ಕವಡೆ ಬಿದ್ದ ಸ್ಥಳದಿಂದ ಸುತ್ತಳತೆ ಪೂರಾ ದೇವಸ್ಥಾನಕ್ಕೆ ಜಹಗೀರಿಯಾಗಿ ಬಿಟ್ಟುಕೊಟ್ಟಿರುತ್ತಾರೆ. ಈಗ ಆ ತೋಪು ೪೦ ಎಕರೆ ೩೩ ಗುಂಟೆ ಬುಟ್ಟಿರುತ್ತದೆ. ಆ ಜಮೀನಿಗೆ ಯಾವುದೇ ರೀತಿಯ ಕಂದಾಯವಿರುವುದಿಲ್ಲ. ವಿಜಯನಗರ ಮೂಲದ

ಮೈಸೂರು ಅರಸರು ಒಡೆಯರ ಮತ್ತು ಬಹಾದ್ದೂರ ಎಂಬ ಬಿರುದಾವಳಿ ಧರಿಸಿರುವುದು ಸರಿಯಷ್ಟೇ. ಈ ಎರಡೂ ಸರ್‌ನೇಮಗಳೂ ವಿಜಯನಗರ ಸಾಮ್ರಾಜ್ಯದ ಪ್ರಪ್ರಥಮ ರಾಜವಂಶವಾದ ಸಂಗಮವಂಶದ ಅರಸರದ್ದಾಗಿದೆ. ಏಕೆಂದರೆ ಸಂಗಮ ವಂಶವು ಕುರುಬರೊಡೆಯರದ್ದಾಗಿದೆ.

ದಕ್ಷಿಣ ಕರ್ನಾಟಕ ಅನೇಕ ಬೀರದೇವರ ದೇವಸ್ಥಾನಗಳಲ್ಲಿ ಈ ಪ್ರದೇಶದ ಒಕ್ಕಲಿಗ ಜನಾಂಗಕ್ಕೆ ಯಜಮಾನಿಕೆ ನೀಡಲಾಗಿದೆ. ಈ ಒಕ್ಕಲಿಗ ಯಜಮಾನರು ಕುರುಬ ಜನಾಂಗದ ಯಾಜಮಾನರೊಂದಿಗೆ ಸೇರಿ ಪರಸ್ಪರ ಭ್ರಾತೃತ್ವ ಪ್ರೀತಿ ಸ್ನೇಹದಿಂದ ಶ್ರೀ ಬೀರದೇವರ ಸೇವೆಯಲ್ಲಿ ತೊಡಗಿರುವುದುಂಟು.

ಕೋರ್ಟ ತೀರ್ಪು : ಮೇಲ್ಕಂಡ ಶ್ರೀ ದೊಡ್ಡ ಬೀರೇಶ್ವರ ಸ್ವಾಮಿ ದೇವಸ್ಥಾನವು ಹೊಸೂರದೊಡ್ಡಿ ಕುರುಬರಿಗೆ ಸೇರಿದ್ದಾಗಿದ್ದು ಇದರ ಬಗ್ಗೆ ಒಕ್ಕಲಿಗ ಗೌಡ ಜನಾಂಗದವರು ದೌರ್ಜನ್ಯದಿಂದ ದೇವಸ್ಥಾನವು ಅವರಿಗೆ ಸೇರಿದ್ದೆಂದು ವಾದಿಸತೊಡಗಿದರು. ಇದಕ್ಕೆ ಸಂಬಂಧಿಸಿದಂತೆ ೧೯೪೨ರಲ್ಲಿ ಚನ್ನಪಟ್ಟಣದ ಮುನ್ಸಿಫ ಕೋರ್ಟನಲ್ಲಿ ಕೇಸೊಂದು ದಾಖಲಾಯಿತು. ಸುಮಾರು ನಾಲ್ಕು ದಶಕಗಳ ಕಾಲ ಚನ್ನಪಟ್ಟಣ, ರಾಮನಗರ ಮತ್ತು ಬೆಂಗಳೂರಿನ ಹೈಕೋರ್ಟಗಳಲ್ಲಿ ವ್ಯಾಜ್ಯ ನಡೆದು ೧೯೭೭ರಲ್ಲಿ ಶ್ರೀ ದೊಡ್ಡ ಬೀರೇಶ್ವರ ಸ್ವಾಮಿ ದೇವಸ್ಥಾನವು ಕುರುಬ ಜನಾಂಗಕ್ಕೆ ಸೇರಿದ್ದೆಂದು ಕೋರ್ಟ ತೀರ್ಪು ಕೊಟ್ಟಿತು. ಈಗ ಕುರುಬರ ಯಜಮಾನಿಕೆ ಯಲ್ಲಿ ದೇವಸ್ಥಾನದ ಪೂಜಾಕಾರ್ಯಗಳು ಸುಸೂತ್ರವಾಗಿ ನಡೆದುಕೊಂಡು ಹೋಗುತ್ತಿದೆ.

ಸುಮಾರು ದಶಕಗಳಿಂದ ಶ್ರೀ ದೊಡ್ಡಬೀರೇಶ್ವರ ಸ್ವಾಮಿ ಸರ್ಕಾರಿ ತೋಪು ಎಂದು ತಪ್ಪಾಗಿ ಸರ್ಕಾರಿ ಕಡತಗಳಲ್ಲಿ ನಮೂದಾಗಿತ್ತು. ಇದರ ಬಗ್ಗೆ ಒಂದು ಮನವಿಯನ್ನು ಕುರುಬರ ಯಜಮಾನರುಗಳು ಗ್ರಾಮಪಂಚಾಯ್ತಿಗೆ ಸಲ್ಲಿಸಿ ಮೇಲ್ಕಂಡ ತೋಪನ್ನು ಶ್ರೀ ಬೀರೇಶ್ವರ ದೇವಸ್ಥಾನದ ತೋಪು ಎಂದು ಬದಲಾವಣೆ ಮಾಡಿ ಕಾಗದಪತ್ರಗಳನ್ನು ಮಾಡಿಸಲಾಗಿದೆ.

ದಕ್ಷಿಣ ಕರ್ನಾಟಕದ ಅನೇಕ ಊರುಗಳಲ್ಲಿ ಶ್ರೀ ಬೀರದೇವರ ಗುಡಿಗಳು, ಚಿಕ್ಕಯ್ಯ ದೊಡ್ಡಯ್ಯರ ಗುಡಿಗಳನ್ನು ನಿರ್ಮಿಸುವಾಗ ಅನೇಕ ಗ್ರಾಮೀಣ ಸಮಾಜಗಳ ನೆರವು, ಸಹಭಾಗಿತ್ವ, ಸಹಕಾರವು ಕುರುಬ ಜನಾಂಗಕ್ಕೆ ದೊರೆತಿದೆ. ಈ ಐತಿಹಾಸಿಕ ಸತ್ಯವನ್ನು ಇಲ್ಲಿ ದಾಖಲಿಸಲೇಬೇಕು. ವ್ಯಾಪಾರಿಗಳಾದ ವೈಶ್ಯರು, ಕೃಷಿಕರಾದ ಒಕ್ಕಲಿಗ ಗೌಡರು, ಮಧ್ಯೆ ತಯಾರಕರಾದ ಈಡಿಗ ಗೌಡರು, ಗಾಣಿಗರು ಮುಂತಾದವರು ಬೀರದೇವರ ದೇವಸ್ಥಾನಗಳ ನಿರ್ಮಾಣಕ್ಕೆ ಹಣಕಾಸು, ದವಸಧಾನ್ಯ, ಎಣ್ಣೆ, ಶ್ರಮದಾನ ನೀಡಿದ್ದಾರೆ. ಹೀಗೆ ಬೀರದೇವರ ಶೈವ ಪ್ರಧಾನವಾಗಿರುವುದರಿಂದ ಆತನು ಎಲ್ಲಾ ಗ್ರಾಮೀಣರ ಆರಾಧ್ಯ ದೈವವಾಗಿದ್ದಾನೆ.

ಇಂದಿಗೂ ಈ ಮೇಲೆ ಹೆಸರಿಸಲಾದ ಎಲ್ಲ ಜನಾಂಗಗಳೂ ಬೀರದೇವರ ಒಕ್ಕಲುಗಳಾಗಿ ಮುಂದುವರಿ ಯುವುದನ್ನು ಕಾಣಬಹುದಾಗಿದೆ. ಹಿಂದಿನಂತೆ ಬೀರದೇವರ ಉತ್ಸವಗಳು ಮತ್ತು ಜಾತ್ರೆಗಳಲ್ಲಿ ಒಕ್ಕಲಿಗರೂ ಸೇರಿದಂತೆ ಸಮಾಜದ ಬೇರೆ ಬೇರೆ ಜನಾಂಗಗಳಿಗೆ ಪೂರ್ವ ಮರ್ಯಾದೆ ಸಲ್ಲುತ್ತಾ ಬಂದಿದೆ. ಕೆಲವೊಮ್ಮೆ ಮುಖ್ಯವಾಗಿ ಈ ವಿಷಯಗಳಿಗೆ ಸಂಬಂಧಿಸಿದಂತೆ ಕುರುಬರಿಗೂ ಒಕ್ಕಲಿಗ ಯಜಮಾನರುಗಳಿಗೂ ಭಿನ್ನಾಭಿಪ್ರಾಯಗಳುಂಟಾಗಿ ಜಗಳಗಳಾಗುವುವು ಕೆಲವೊಮ್ಮೆ ಇಬ್ಬರೂ ತಮ್ಮ ಧಾರ್ಮಿಕ ಹಕ್ಕುಗಳಿಗಾಗಿ

ನ್ಯಾಯಾಲಯ ಮೆಟ್ಟಿಲು ಹತ್ತಿರುವುದೂಂಟು. ಹುಂಜನಕೆರೆ ಮತ್ತು ಆಲಗೂಡಿನ ಬೀರದೇವರ ದೇವಸ್ಥಾನಗಳಲ್ಲಿ ಕಾರಣಾಂತರದಿಂದ ಲಿಂಗಾಯಿತರು ಪೂಜಾರಿಗಳಾಗಿರುವುದುಂಟು. ಹೀಗೆ ಬೀರದೇವರು ಗ್ರಾಮೀಣ ಸಮಾಜದ ಎಲ್ಲರ ದೈವವಾಗಿದ್ದಾನೆ.

೪೭. ಹೊಸಕೆರೆ

ಮಂಡ್ಯ ಜಿಲ್ಲೆಯಲ್ಲಿ ಹೊಸಕೆರೆ ಬೀರದೇವರು ೨೫೦-೩೦೦ ವರ್ಷಗಳ ಹಿಂದೆ ನಿರ್ಮಾಣವಾಗಿದೆ ಎಂದು ಕಂಡುಬರುತ್ತದೆ. ಇಲ್ಲಿ ಮುಸ್ಲಿಂರ ಆಕ್ರಮಣದಿಂದ ದೇವಸ್ಥಾನವು ನಾಶವಾಗಬಹುದೆಂಬ ಭೀತಿಯಿಂದ ದೇವರ ವಿಗ್ರಹಗಳನ್ನು ದೊಡ್ಡ ಬೀರೇಶ್ವರ ದೇವಸ್ಥಾನದಿಂದ ತೆಗೆದುಕೊಂಡು ಸುರಕ್ಷಿತ ಸ್ಥಳಕ್ಕೆ ಹೋಗುತ್ತಿದ್ದರು. ಶಿಂಸಾ ನದಿಯನ್ನು ದಾಟಿದ ನಂತರ ವಿಗ್ರಹಗಳಿದ್ದ ಪೆಟ್ಟಿಗೆಯ ಭಾರದಿಂದಾಗಿ ಆ ಪೆಟ್ಟಿಗೆಯನ್ನು ಇಳಿಸಲಾಯಿತು. ಪೂಜಾರಿಗಳು ನಂತರ ಪೆಟ್ಟಿಗೆಯನ್ನು ಎತ್ತಿಕೊಂಡು ಹೊರಟರು. ಆ ಸ್ಥಳದಲ್ಲಿ ಸ್ವಾಮಿಯು ಮೂಡಿದನೆಂದು ನಂಬಲಾಗಿದೆ. ಆ ಸ್ವಾಮಿಗೆ ಪೆಟ್ಟಿಗೆ ಬೀರೇಶ್ವರನೆಂಬ ಹೆಸರಿನಿಂದ ಪೂಜಾಕಾರ್ಯಗಳು ನಡೆಯುತ್ತಿದ್ದವು. ಆ ಪೆಟ್ಟಿಗೆಯನ್ನು ಹೊಸಕೆರೆಗೆ ತಂದು ಈಗಿರುವ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾಯಿತು. ಹಾಗಾಗಿ ಹೊಸಕೆರೆ ದೇವರು ಮುಖ್ಯ ದೇವಸ್ಥಾನವಾದ ದೊಡ್ಡ ಬೀರೇಶ್ವರನಿಂದ ಸಿಡಿದ ದೇವರಾಗಿರುತ್ತದೆ. ಹಾಗಾಗಿ ಶೆಟ್ಟಿಹಳ್ಳಿಯ ದೊಡ್ಡ ಬೀರೇಶ್ವರ ಮತ್ತು ಹೊಸಕೆರೆಯ ಬೀರೇಶ್ವರರನ್ನು ಅಣ್ಣತಮ್ಮಂದಿರೆಂದು ಭಾವಿಸಿ ಇವರಿಬ್ಬರನ್ನು ಒಟ್ಟಿಗೆ ಪೂಜಿಸಲಾಗುತ್ತದೆ. ಹೊಸಕೆರೆಯ ಬೀರೇಶ್ವರನಿಲ್ಲದೆ ದೊಡ್ಡ ಬೀರೇಶ್ವರನ ಗದ್ದುಗೆಯನ್ನು ಮಾಡುವಂತಿಲ್ಲ.

ಕುರುಬರ ಬೀರದೇವರ ಸತ್ಯವನ್ನು ಇತರ ಜಾತಿಗಳ ಮತ್ತು ಧರ್ಮಗಳ ಜನ ಪರೀಕ್ಷಿಸಿರುವುದುಂಟು. ಈ ಕುರಿತು ಕರ್ನಾಟಕದಾದ್ಯಂತ ಐತಿಹ್ಯಗಳಿವೆ. ಉದಾಹರಣೆಗೆ ಜೆಜೂರು ಶ್ರೀ ಮೈಲಾರಲಿಂಗ ಕ್ಷೇತ್ರದ ಮಾರ್ಗವಾಗಿ ದಕ್ಷಿಣಕ್ಕೆ ಹರಿದುಬಂದ ಮೊಗಲ ಚಕ್ರವರ್ತಿ ಔರಂಗಜೇಬನ ಸೇನೆ ಮೈಲಾರಲಿಂಗನಿಗೆ ನಮಿಸಿ ಮುಂದೆ ಸಾಗುತ್ತದೆ. ಅವನ ಜಾತ್ರೆ ಸೇನೆಯು ಬಯಲಿನಲ್ಲೇ ವಿಶ್ರಮಿಸಿದಾಗ ಔರಂಗಜೇಬನ ಮುಖ್ಯ ಸೇನಾಧಿಪತಿಯ ಕನಸಿನಲ್ಲಿ ಮೈಲಾರಲಿಂಗ ದರ್ಶನವಿತ್ತು. ಬಹುಮನಿ ಸುಲ್ತಾನರ ವಿರುದ್ಧ ವಿಜಯ ದೊರೆಯುವುದೆಂದು ಭವಿಷ್ಯ ನುಡಿದದ್ದಾಗಿ ಐತಿಹ್ಯವಿದೆ.

ಬನ್ನೂರು ಮತ್ತು ಟಿ. ನರಸೀಪುರದ ಬಳಿ ಪ್ರಾಯಶಃ ಹೈದರಾಲಿ ಟಿಪ್ಪು ಆಡಳಿತ ಕಾಲದಲ್ಲಿ ಪ್ರತಿವರ್ಷ ಮಂಡ್ಯ ಜಿಲ್ಲೆಗೆ ಸೇರಿದ ಬೀರದೇವರುಗಳು ಸಾತನೂರಿನ ಶ್ರೀ ಚೆನ್ನಕೇಶ್ವರ ಬೀರಪ್ಪ ಮತ್ತು ಹುಂಜನಕೆರೆ ಆಲಗೂಡಿನ ಬೀರೇಶ್ವರ ದೇವರುಗಳ ಕೂಟ ಸೇರಲು ಜಾತ್ರೆಗೆಂದು ಹೋಗಿದ್ದವು. ಆಗ ಮುಸ್ಲಿಮರು ಬೀರದೇವರುಗಳನ್ನು ಅಡ್ಡಗಟ್ಟಿ ಜಾತ್ರೆಗೆ ಹೋಗಲು ಬಿಡಲಿಲ್ಲ. ಆಗ ಮುಸ್ಲಿಮರಿಗೂ ಬೀರದೇವರಿಗೂ ಜಗಳವಾಗಿ ನ್ಯಾಯಕ್ಕೆ ಬೀಳುತ್ತದೆ. ಮುಸ್ಲಿಮರು ಅಲ್ಲೊಂದು ಕೊಂಡ ನಿರ್ಮಿಸಿ ಅದಕ್ಕೆ ಬೀರದೇವರ ಖಡ್ಗವನ್ನು ಎಸೆದು ಅದನ್ನು ಸ್ವಲ್ಪವೂ ಗಾಯವಾಗದಂತೆ ಬೀರದೇವರು ಪೂಜಾರಿ ತರುವಂತೆ ಪಂಥ ಒಡ್ಡುತ್ತಾರೆ. ಈ ಸವಾಲನ್ನು ಸ್ವೀಕರಿಸಿ ಕೊಂಡ ಹಾಯ್ದು ಲೀಲಾಜಾಲವಾಗಿ ಬೆಂಕಿಯಲ್ಲಿದ್ದ ಖಡ್ಗವನ್ನು

ಎತ್ತಿ ತರುತ್ತಾರೆ. ಆಗ ಈ ಅಲೌಕಿಕ ಸಾಧನೆಯನ್ನು ಮೆಚ್ಚಿಕೊಂಡು ಮುಸ್ಲಿಮರು ಬೀರದೇವರ ಪವಾಡವನ್ನು ಮೆಚ್ಚಿ ಭಕ್ತಿಯಿಂದ ದಾರಿ ಬಿಡುತ್ತಾರೆ. ಶಿವರಾತ್ರಿ, ದೀಪಾವಳಿ, ಗೌರಿ ಗಣೇಶ, ಯುಗಾದಿ ಸಂಕ್ರಾತಿ ಮುಂತಾದ ಹಬ್ಬಗಳಲ್ಲಿ ವಿಶ್ಲೇಷ ಪೂಜೆ ಸಲ್ಲುತ್ತದೆ.

೪೮. ಬರಗೂರು

ಹೊಳೆನರಸಿಂಹಪೂರ ತಾಲೂಕು ಹಾಸನ ಜಿಲ್ಲೆ ಬರಗೂರು ಗ್ರಾಮದಲ್ಲಿ ಎರಡು ಭವ್ಯವವಾದ ಬೀರಪ್ಪನ ದೇವಾಲಯಗಳಿವೆ. ಒಂದು ಊರಲ್ಲಿದ್ದಾರೆ. ಇನ್ನೊಂದು ಊರು ಬಿಟ್ಟು ಅಂದರೆ ೩ ಕಿ.ಮೀ. ದೂರದಲ್ಲಿದೆ. ಪಶ್ಚಿಮಕ್ಕೆ ಮುಖಮಾಡಿದ ದ್ವಾರಬಾಗಿಲನ್ನು ಕಾಣಬಹುದು. ಗ್ರಾಮದ ಸುತ್ತಮತ್ತಲು ಗದ್ದೆಗಳಿಂದ ಕೂಡಿದೆ. ಸುಮಾರು ಒಂದು ಎಕರೆ ವಿಸ್ತೀರ್ಣ ಹೊಂದಿದೆ. ಗರ್ಭಗೃಹ, ಸುಕನಾಸಿ, ಮುಖಮಂಟಪಗಳನ್ನು ಹೊಂದಿರುವ ವಿಶಾಲವಾದ ಪ್ರದೇಶವನ್ನು ಹೊಂದಿದೆ. ಇದರ ಸುತ್ತಲೂ ಪ್ರಾಂಗಣವಿದ್ದು ಮುಖದ್ವಾರವನ್ನು ಪ್ರವೇಶಿಸಿದ ಕೂಡಲೇ ಮೊದಲಿಗೆ ಎದುರಾಗುವುದು ಮಾಲಗಂಭ, ಇದರ ಹತ್ತಿರ ಹೋಮಕೊಂಡುವಿದೆ. ಪೂಜಾರಿಯನ್ನು ಹೊರತುಪಡಿಸಿ ಬೇರೆ ಯಾರಿಗೂ ಪ್ರವೇಶವಿಲ್ಲ.

ಗರ್ಭಗುಡಿಯಲ್ಲಿ ಅಸ್ಪಷ್ಟ ಆಕೃತಿ ಕುದುರೆ ಮೇಲೆ ಕೂತಿರುವ ಬೀರಪ್ಪನ ಕಂಚಿನ ಮೂರ್ತಿ ಇದೆ. ಮೇಲೆ ಶಿವ ಪಾರ್ವತಿಯ ಮೂರ್ತಿಗಳಿವೆ. ಇಲ್ಲಿ ತೋಪುಜಾತ್ರೆ ನಡೆಯುತ್ತದೆ. ಈ ಜಾತ್ರೆಯಲ್ಲಿ ಬುಡ್ಡರ ಕುಣಿತ ನಡೆಯುವುದು ವಿಶೇಷ. ಇವರು "ಮಾತಾಡು ಲಿಂಗವೇ ಮಾತಾಡು ಲಿಂಗವೇ" ಎಂಬ ಹಾಡಿನ ಮೂಲಕ ದೇವರ ಮುಂದೆ ಕುಣಿಯುತ್ತಾರೆ. ಇಲ್ಲಿ ಬಾಯಿ ಬೀಗ ಹಾಕುವ ಆಚರಣೆ ಬಳಕೆಯಲ್ಲಿದೆ. ಈ ದೇವರಿಗೆ ಕುರಿಗಳ ಬಲಿ ಕೊಡುತ್ತಾರೆ.

ಇಲ್ಲಿ ಪ್ರತಿವರ್ಷ ಅಥವಾ ಮೂರು ವರ್ಷಕ್ಕೆ ಒಂದು ಬಾರಿ ತೋಪುಜಾತ್ರೆ ಮಾಡುತ್ತಾರೆ. ಆ ಸಂದರ್ಭದಲ್ಲಿ ನಡೆಯುವ ಆಚರಣೆಗಳು ಗಮನಸೆಳೆಯುತ್ತದೆ. ಕೋಣದಮ್ಮ ಆಚರಣೆ ವಿಶಿಷ್ಟವಾಗಿದೆ. ಈ ದೈವದ ಪೂಜಾರಿ ಮತ್ತು ಬೀರದೇವರ ಪೂಜಾರಿ ಸೇರಿ ನೃತ್ಯ ಮಾಡುವ ಹಾಗೂ ಬೀರಪ್ಪನ ಸುತ್ತ ಕುಣಿಯುವ ಆಚರಣೆ ಕುರಿಗಾರಿಕೆ ಮತ್ತು ದನಗಾರಿಕೆ ಸಮುದಾಯಗಳ ಸಂಕರಶೀಲ ಸಂಸ್ಕೃತಿಯನ್ನು ಅನಾವರಣ ಮಾಡುತ್ತವೆ.

೪೯. ಆದೀಹಳ್ಳಿ

ಆದೀಹಳ್ಳಿ ಅರಸಿಕೆರೆ ತಾಲೂಕು ಹಾಸನ ಜಿಲ್ಲೆಯಲ್ಲಿದೆ. ಗ್ರಾಮದಲ್ಲಿ ಬೀರಪ್ಪ ದೇವಾಲಯ ಪ್ರಕೃತಿಯ ಮಡಿಲಲ್ಲಿ ಇದೆ. ಇದು ಪ್ರಾಚೀನ ಕಾಲದ್ದಾಗಿದೆ. ಟಗರು ಜೋಡಿ ಟಗರುಗಳು ನಾಲ್ಕು ದಿಕ್ಕಿಗಿರುವುದು ವಿಶೇಷ. ಇದು ಜೀರ್ಣೋದ್ಧಾರ ಹೊಂದಿದೆ. ಗರ್ಭಗುಡಿಯಲ್ಲಿ ಗುಂಡಿನಾಕಾರದ ಮೂರು ಕಲ್ಲುಗಳಿವೆ. ಸುಮಾರು ೧೦೦ರಿಂದ ೧೫೦ ವರ್ಷಗಳ ಹಿಂದಿನ ದೇವಾಲಯವಾಗಿದೆ. ದೇವಸ್ಥಾನವು ಸಾಧಾರಣವಾಗಿ ವಿಜಯನಗರ ಕಾಲದಾಗಿದೆ. ಕಾಡುಗಲ್ಲಿನಿಂದ ಮೂರು ಗೋಡೆಗಳನ್ನು ರಚಿಸಿ ತೆರೆದ ಭಾಗದ ಒಳಗೆ ಮೂರು ಕಲ್ಲುಗಳ ಚಿತ್ರಣವಿದೆ. ಪಕ್ಕಕೆ ಟಗರುಗಳಿವೆ.

೫೦. ಕುಪ್ಪೂರು

ಕುಪ್ಪೂರು ಬೀರಪ್ಪ ಶೆಟ್ಟಿಹಳ್ಳಿ ತಿಪಟೂರು ತಾಲೂಕು ತುಮಕೂರು ಜಿಲ್ಲೆ. ಈ ಊರಲ್ಲಿ ಹಾಲುಮತದವರೇ ಹೆಚ್ಚಾಗಿದ್ದಾರೆ. ೬೦ ವರ್ಷಗಳಿಂದೀಚೆಗೆ ಗರ್ಭಗುಡಿಯನ್ನು ನವಿಕರಿಸಲಾಗಿದೆ. ಈ ದೇವಾಲಯವೂ ಊರಿನಿಂದ ಪೂರ್ವಕ್ಕೆ ಸುಮಾರು ಒಂದು ಫರ್ಲಾಂಗ್ ದೂರದಲ್ಲಿದೆ. ಗುಡಿಯ ಮೇಲೆ ಸುಂದರವಾದ ಕೆತ್ತನೆಗಳು ಉಬ್ಬು ಶಿಲ್ಪಗಳು ಇವೆ. ಆವರಣದಲ್ಲಿ ದೀಪದಸ್ತಂಭವಿದೆ. ಗರ್ಭಗುಡಿಯ ಒಳಗೆ ಬೀರಪ್ಪನ ಬೆಳ್ಳಿಯ ಮೂರ್ತಿಯಿದೆ. ಇಲ್ಲಿ ಬೀರಪ್ಪನನ್ನು ದಳವಾಯಿಗಳು ಪೂಜೆ ಮಾಡುತ್ತಾರೆ. ಯುಗಾದಿ, ಮಹಾನವಮಿಯ ಸಂದರ್ಭಗಳಲ್ಲಿ ಬಿರಪ್ಪನ ಜಾತ್ರೆ ನಡೆಯುತ್ತದೆ.

೫೧. ಆಲೂರು

ಆಲೂರು ಗ್ರಾಮ ತಿಪಟೂರು ತಾಲೂಕು ತುಮಕೂರು ಜಿಲ್ಲೆಯಲ್ಲಿದೆ. ತಿಪಟೂರಿನಿಂದ ಸುಮಾರು ೧೨ ಕಿ.ಮೀ. ದೂರದಲ್ಲಿದೆ. ಆಲೂರು ಬೀರಲಿಂಗೇಶ್ವರ ಪ್ರಾಚೀನವಾದ ದೇವಸ್ಥಾನ ೧೬ ಅಡಿ ಉದ್ದ, ೧೬ ಅಡಿ ಅಗಲ, ೧೬ ಎತ್ತರ ಗರ್ಭಗೃಹ ಹೊಂದಿದ್ದು ಅದರ ಮೇಲಿನ ವಿಮಾನವು ಇತ್ತೀಚಿನದ್ದಾಗಿದ್ದು, ನವರಂಗ ಮಂಟಪದ ಬಾಗಿಲು ವಾಡವು ಎರಡು ಶಾಖೆಗಳಿಂದ ಕೂಡಿದೆ. ಈ ದ್ವಾರಗಂಬಕ್ಕೆ ದ್ವಾರಬಾಲಕರಾಗಲಿ, ಲಲಾಟಪಟ್ಟಿಕೆಯಾಗಲಿ ಇರುವುದಿಲ್ಲ. ಬಾಗಿಲು ಮರದ್ದಾಗಿದೆ. ಗರ್ಭಗುಡಿಯ ದ್ವಾರಬಂಧವು ಪತ್ರಶಾಖೆ, ಕಂಬ ಮತ್ತು ಕಮಲದ ಚಿತ್ರ, ರೇಖಾಚಿತ್ರಗಳಿಂದ ಅಲಂಕೃತವಾಗಿದೆ. ದೇವಸ್ಥಾನವು ಇತ್ತೀಚೆಗೆ ಜೀರ್ಣೋದ್ಧಾರವಾಗಿ ಹಾಸುಗಲ್ಲಿನ ಮೇಲೆ ಅಳವಡಿಸಲಾಗಿದೆ. ನವರಂಗದ ನಾಲ್ಕು ಕಂಬಗಳು ಮಾತ್ರ ಕಪ್ಪುಕಲ್ಲಿನಿಂದ ಮಾಡಲ್ಪಟ್ಟಿದು. ಉಳಿದ ಹೊರ ಪ್ರಕಾರ ಹನ್ನೆರಡು ಕಂಬಗಳು ಕಾಡಗಲ್ಲುಗಳಿಂದ ಸಾಧಾರಣವಾದ ರೀತಿಯಲ್ಲಿ ಮಾಡಲ್ಪಟ್ಟಿವೆ. ಗರ್ಭಗುಡಿ ನವರಂಗ ಮತ್ತು ಮೇಲ್ಛಾವಣಿಗಳು ಬಂಡೆಗಲ್ಲಿನಿಂದಲೇ ಮಾಡಲ್ಪಟ್ಟಿವೆ. ಐದು ಕಲ್ಲಿನ ಮೂರ್ತಿಗಳು ದಕ್ಷಿಣಾಭಿಮುಖ ಹಿಂದೆ ಕಂಚಿನ ಪ್ರಭಾವಳಿಯನ್ನು ಇಡಲಾಗಿದೆ.

ಈ ದೇವರಿಗೆ ಯುಗಾದಿ ಮತ್ತು ಮಹಾನವಮಿ ದಿವಸ ಜಾತ್ರೆ ನಡೆಯುತ್ತದೆ. ವಿಶೇಷವಾದ ಪೂಜಾ ವಿಧಾನ ಹೂವಿನಿಂದ ಅಲಂಕಾರ ಮಾಡಿ ಚಿಕ್ಕಮಕ್ಕಳಿಗೆ ಜಡೆ ತೆಗೆಯುವ ಆಚರಣೆಯು ಬಳಕೆಯಲ್ಲಿದೆ.

೫೨. ಬಾಗೂರು

ಬಾಗೂರು ಬೀರಲಿಂಗೇಶ್ವರ ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲೂಕಿನ ಹೊಸದುರ್ಗದಿಂದ ೨ ಕಿ.ಮೀ. ದೂರದಲ್ಲಿದೆ. ಬೀರಪ್ಪ ದೇವಾಲಯವು ಊರ ಹೊರಗೆ ಪಶ್ಚಿಮಕ್ಕೆ ಮುಖಮಾಡಿಕೊಂಡಿದ್ದು, ಮುಖದ್ವಾರದ ಮೇಲೆ ಚಿತ್ರಗಳನ್ನು ಬಿಡಿಸಲಾಗಿದೆ. ಗರ್ಭಗುಡಿಯಲ್ಲಿ ಬೀರಲಿಂಗೇಶ್ವರ ಕಲ್ಲಿನ ಮೂರ್ತಿ ಮೇಲೆ ಬೆಳ್ಳಿಯ ಮೂರ್ತಿ ಇಡಲಾಗಿದೆ. ಸುಮಾರು ೯೦೦ ವರ್ಷಗಳ ಹಿಂದೆ ಕಟ್ಟಲಾಗಿದೆ. ಇಲ್ಲಿ ಹೊಯ್ಸಳರ ಕಾಲದ ಸುಂದರ ಶಿಲ್ಪಕಲೆಗಳಿವೆ, ಮಾಲಗಂಬ ಇದೆ. ಇತ್ತೀಚೆಗೆ ಹಳೆಯ ದೇವಾಲಯವನ್ನು ಕೆಡವಿ ನವೀಕರಣ ಮಾಡಿದ್ದಾರೆ. ಮುಂಜಾನೆ, ಸಂಜೆ ಪತ್ರಿ ಪೂಜೆ, ಬೇರೆ ಬೇರೆ ಹೂವುಗಳನ್ನು ತಂದು ದೇವರಿಗೆ ಏರಿಸುತ್ತಾರೆ.

ಈ ದೇವರಿಗೆ ಕುರಿಗಳನ್ನು ಕಡಿಯುತ್ತಾರೆ. ಮಾಂಸಾಂಹಾರಿ ಎಡೆ ನಡೆಯುತ್ತದೆ. ಪೂಜೆಯ ಸಮಯದಲ್ಲಿ ಹೆಂಡ-ಖಂಡಗಳನ್ನು ಕುಲಮೆಯಲ್ಲಿಟ್ಟು ಬೇಯಿಸುವ ಪದ್ಧತಿ ಬಳಕೆಯಲ್ಲಿದೆ.

ಈ ದೇವಾಲಯದ ತುಸು ಅಂತರದಲ್ಲಿ ಮಾಳಿಂಗರಾಯನ ಗುಡಿ ಇದೆ. ಸುತ್ತಲು ಪೌಳಿ ಕಟ್ಟಲಾಗಿದೆ. ದೀಪಾವಳಿಯಲ್ಲಿ ಜಾತ್ರೆ ನಡೆಯುವಾಗ ಬೀರಲಿಂಗೇಶ್ವರ, ಮಾಳಿಂಗರಾಯ ಹೊರಗಡೆ ಬರುತ್ತಾರೆ. ಪಲ್ಲಕ್ಕಿ ಉತ್ಸವ ಜರಗುತ್ತದೆ.

೫೩. ದೊಡ್ಡಕೊಪ್ಪಲು

ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲೂಕು ದೊಡ್ಡಕೊಪ್ಪಲು ಗ್ರಾಮ. ಸುಮಾರು ಇಲ್ಲಿ ೫೦೦ ಕುರುಬ ಕುಲದ ಒಕ್ಕಲುಗಳಿವೆ. ಇಲ್ಲಿರುವ ಮೂಲಗುಡಿ ಬಹಳ ಪುರಾತನವಾದದ್ದು, ಇತ್ತೀಚೆಗೆ ಹೊಸ ದೇವಾಲಯವನ್ನು ನಿರ್ಮಿಸಿದ್ದಾರೆ. ಇದು ಊರಿನಿಂದ ಪೂರ್ವಕ್ಕೆ ಮುಖಮಾಡಿ ಇದೆ. ಎಲ್ಲ ಬೀರದೇವರುಗಳಿಗೆ ನಡೆಯುವಂತೆ ಇಲ್ಲಿಯೂ ಪೂಜೆ ಪುರಸ್ಕಾರಗಳು ನಡೆಯುತ್ತವೆ. ಇಲ್ಲಿ ಕುರುಬ ಜನಾಂಗದವರು ಯುಗಾದಿ, ಶಿವರಾತ್ರಿ, ದೀಪಾವಳಿ, ಕಾರ್ತಿಕ ಹಬ್ಬಗಳನ್ನು ಆಚರಿಸುತ್ತಾರೆ. ಇಂತಹ ವಿಶೇಷ ಸಂದರ್ಭಗಳಲ್ಲಿ ಜಾಗರಣೆ, ಭಜನೆ ಪುರಾಣಗಳ ಪಾರಾಯಣ ನಡೆಸುತ್ತಾರೆ.

ಇಲ್ಲಿನ ಗುಡಿಗೆ ನಿಖರ ಆದಾಯ ತರುವ ಜಮೀನಾಗಲಿ, ಸ್ಥಿರಾಸ್ತಿಗಳಾಗಲಿ ಇಲ್ಲ. ಎಲ್ಲ ಖರ್ಚು-ವೆಚ್ಚಗಳನ್ನು ಒಕ್ಕಲುಗಳು ಸೇರಿ ಭರಿಸುತ್ತಾರೆ. ಇಲ್ಲಿ ಬೀರದೇವರ ಐದು ಲಿಂಗವಿದ್ದು ಕತ್ತಿ, ಗುರಾಣಿ ಇಲ್ಲಿ ವಿಶೇಷವಾದ ಈ ದೇವರ ಲಾಂಛನಗಳಾಗಿವೆ. ಇಲ್ಲಿ ಇದುವರೆಗೆ ಜಾತ್ರೆ ನಡೆಯದಿದ್ದರೂ ಸಹ ದಳವಾಯಿಕೆ ಪಟ್ಟವನ್ನು ಕಟ್ಟಲಾಗಿದೆ. ಜಾತ್ರೆಯ ಬದಲಿಗೆ ಸ್ವಾಮಿಗಳನ್ನು ಕರೆಯಿಸಿ ಉತ್ಸವ ಮಾಡಿ ದಳವಾಯಿಕೆಯ ಪಟ್ಟಿ ಕಟ್ಟಲಾಗಿದೆ.

೫೪. ಕಡಕೋಳ

ಈ ಗ್ರಾಮವು ಮೈಸೂರು ಜಿಲ್ಲೆ ಮೈಸೂರು ತಾಲೂಕು ಮೈಸೂರಿನಿಂದ ೧೦ ಕಿ.ಮೀ. ದೂರದಲ್ಲಿದೆ. ಗ್ರಾಮದಲ್ಲಿರುವ ಬೀರಪ್ಪನ ಊರು ಬಿಟ್ಟು ೨ ಕಿ.ಮೀ. ದೂರದಲ್ಲಿದೆ. ಈ ದೇವಾಲಯವು ಪ್ರಾಚೀನ ಕಾಲದ್ದು. ಗ್ರಾಮದಲ್ಲಿ ಸುಮಾರು ೪೦೦ ರಿಂದ ೫೦೦ ಕುರುಬ ಮನೆತನಗಳು ಇವೆ.

ಈ ಊರಿನ ಪಶ್ಚಿಮಕ್ಕೆ ದೊಡ್ಡದೊಂದು ಕೆರೆಯಿದ್ದು, ಇದರ ಸಮೀಪವಿರುವ ದಿನ್ನೆಯ ಮೇಲೆ ಸುಮಾರು ಎರಡು ಎಕರೆಯಷ್ಟು ವಿಸ್ತಾರವಾದ ದೊಡ್ಡಪೌಳಿಯಿದೆ. ಪೌಳಿಯ ಸುತ್ತಲೂ ಕಟ್ಟಲಾಗಿರುವ ಗೋಡೆಯು ಈಗ ಶಿಥಿಲಾವಸ್ಥೆಯಲ್ಲಿದೆ.

ದೇವಾಲಯದ ಪೌಳಿಯನ್ನು ಪೂರ್ವದ ಕಡೆಯಿಂದ ಪ್ರವೇಶಿಸಿದಾಗ ಶ್ರೀ ಬೀರಲಿಂಗೇಶ್ವರ ಬೃಹತ್ ದೇವಾಲಯಸಿಗುತ್ತದೆ. ದೇವಾಲಯದ ಕಂಬಗಳ ಮೇಲೆ ವೀರರ ಚಿತ್ರಗಳು ಕಂಡುಬರುತ್ತವೆ. ಎಡಕ್ಕೆ ಪ್ರಸಾದದ ಮನೆ, ಬಲಗಡೆ ಶ್ರೀ ಕಾಳಿ ಬೀರೇಶ್ವರಿಯ ಕಲ್ಯಾಣಮಂಟಪ ಇದೆ. ಇಲ್ಲಿ ಒಂದು ಲಕ್ಷ್ಮೀ ದೇವಾಲಯವು ಇದೆ. ಲಕ್ಕಮ್ಮನ ಆರಾಧನೆಯನ್ನು ತಿಳಿಸುತ್ತದೆ.

ಬೀರಪ್ಪನ ಮುಖ್ಯ ದೇವಾಲಯ ಪೂರ್ವಾಭಿಮುಖವಾಗಿದ್ದು ಒಳಗರ್ಭಗೃಹ, ಹೊರಗರ್ಭಗೃಹ ಸುಕನಾಸಿ ರಂಗಮಂಟಪ ಮತ್ತು ಮುಖಮಂಟಪಗಳಿಂದ ಕೂಡಿದೆ. ಇದು ಪ್ರಾಚೀನ ಕಟ್ಟಡವಾಗಿದೆ. ಒಳಗಡೆ ಆಯಾಕಟ್ಟಿನ ಸ್ಥಳಗಳಲ್ಲಿ ಕಲ್ಲಿನ ಕಂಬಗಳನ್ನು ನಿಲ್ಲಿಸಿದ್ದಾರೆ. ದೇವಾಲಯದ ಮೇಲ್ಛಾವಣಿ ಮೊದಲಾದವುಗಳಿಗೆ ಆಧಾರವುಂಟು ಮಾಡಲಾಗಿದೆ. ಒಟ್ಟಾರೆಯಾಗಿ ದೇವಾಲಯದ ವಾಸ್ತುಶಿಲ್ಪ ಅಥವಾ ಸಂರಚನೆ ಪ್ರಾಚೀನತೆಯನ್ನು ಬಿಂಬಿಸುತ್ತದೆ.

ಮುಖ್ಯ ದೇವಸ್ಥಾನದ ಉತ್ತರಕ್ಕೆ ಪೌಳಿಯ ಗೋಡೆಗೆ ಹೊಂದಿರುವಂತೆ ಪೂರ್ವಾಭಿಮುಖವಾಗಿ ಇನ್ನೊಂದು ಚಿಕ್ಕದೇವಾಲಯವಿದೆ. ಅದರಲ್ಲಿ ಒಂದು ಪೀಠದಲ್ಲಿ ಕೂಡಿಸಲಾಗಿರುವ ಚತುರ್ಭುಜದ ಮೂರ್ತಿಯಿದೆ. ಮುಖ್ಯ ದೇವಾಲಯದ ಮುಂದುಗಡೆ ಒಂದು ದೊಡ್ಡ ಬಾವಿ ಇದೆ. ಅದು ದೇವಾಲಯಕ್ಕೆ ಸಂಬಂಧಿಸಿದ ಕಲ್ಯಾಣಿಯಾಗಿದೆ.

ಯುಗಾದಿ, ದೀಪಾವಳಿ, ಕಾರ್ತಿಕೋತ್ಸವ, ಬನದ ಹುಣ್ಣಿಮೆಯ ದಿನ ವಿಶೇಷ ಪೂಜೆ ಜರಗುತ್ತದೆ. ಇಲ್ಲಿ ತೋಪು ಜಾತ್ರೆ ಕೂಡ ನಡೆಯುತ್ತದೆ. ದೇವರಿಗೆ ಪಲ್ಲಕ್ಕಿ ಉತ್ಸವ, ಕಾರ್ತಿಕೋತ್ಸವ ಈ ರೀತಿಯ ಆಚರಣೆಗೆ ಜನ ಸಾಮಾನ್ಯರಲ್ಲಿ ನಂಬಿಕೆಗಳೆ ಕಾರಣ. ಇಲ್ಲಿ ಹಲ್ಲುಮರಿ, ಸಿಗಿಯುವುದು, ಬಾಯಿಗೆ ಬೀಗ ಹಾಕಿಕೊಂಡು ಹರಕೆ ತೀರಿಸುವ ಪಾರಂಪರಿಕ ಆಚರಣೆಗಳು ನಡೆಯುತ್ತವೆ.

ಈ ದೇವಾಲಯದಲ್ಲಿ ದೈವಗಳ ಆಚರಣೆಗಳಲ್ಲಿ ಕೆಲವು ಪವಾಡಗಳು ನಡೆಯುತ್ತವೆ. ಇಲ್ಲಿ ಆಚರಿಸುವ ಪಾರಂಪರಿಕ ಆಚರಣೆಗಳಲ್ಲಿ ಗಂಧದ ಪೂಜೆ ವಿಶೇಷವಾಗಿದೆ. ದೇವಾಲಯದ ದಕ್ಷಿಣ ಭಾಗದ ಗರ್ಭಗೃಹದಲ್ಲಿ ಲಿಂಗವಿದೆ. ಇದು ಆರೇಳು ಇಂಚುಗಳಷ್ಟು ಎತ್ತರವಾಗಿದ್ದು ಸುಮಾರು ಹತ್ತು ಇಂಚುಗಳಷ್ಟು ವ್ಯಾಸವುಳ್ಳದ್ದಾಗಿದೆ. ನೈಸರ್ಗಿಕವಾದ ಬಂಡೆಗಲ್ಲು ಹೊರಗೆ ಸ್ಪಷ್ಟವಾಗಿ ಕಾಣುತ್ತದೆ. ಈ ಬಂಡೆಗಲ್ಲಿನ ಮೇಲೆ ಕೊಂಬಿನಂತೆ ಲಿಂಗ ಮೂಡಿದೆ.

ದೇವಾಲಯದ ಸುತ್ತಲೂ ಪೌಳಿ ಇರುವುದು ಮತ್ತು ಆ ಪೌಳಿಯಲ್ಲಿ ಲಕ್ಷ್ಮೀ ಲಕ್ಕಮ್ಮ ಬೀರಪ್ಪನೊಂದಿಗೆ ಆರಾಧನೆಗೆ ಒಳಗಾಗುತ್ತಿರುವುದು ವಿಶೇಷ. ಲಕ್ಕಮ್ಮನೇ ಲಕ್ಷ್ಮೀಯಾಗಿ ರೂಪಾಂತರಗೊಂಡಿದ್ದಾಳೆ ಎನ್ನುವುದು ವಿದ್ವಾಂಸಕವಾದ ಇಂತಹ ವಾದಗಳಿಗೆ ದೇವಾಲಯದಲ್ಲಿರುವ ಕಥನಗಳು ಕಟ್ಟಿತನವನ್ನು ಒದಗಿಸುತ್ತವೆ. ಪಶುಪಾಲನ ಸಮುದಾಯಗಳಲ್ಲಿ ಕಂಡುಬರುವ ಆಚರಣೆಯೊಂದಿಗೆ ಈ ದೈವಗಳ ಕಥನಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವ ಅವಶ್ಯಕತೆ ಇದೆ.

೫೫. ಹೆಮ್ಮರಗಾಲ

ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿನ ಹೆಮ್ಮರಗಾಲ ಎಂಬ ಊರಿನಲ್ಲಿರುವ ಹಾಲುಮತ ದೈವ ಬೀರದೇವರು ಬಹು ಪ್ರಾಚೀನ ಕಾಲದ ದೈವವಾಗಿದ್ದಾನೆ. ಈ ಗ್ರಾಮವನ್ನು ಪ್ರವೇಶಿಸುತ್ತಿದ್ದಂತೆ ಬಂಗಾರ ಬಣ್ಣ ಲೇಪನ ಮಾಡಿದ ಗೋಪುರವನ್ನು ಹೊಂದಿರುವ ದೇವಾಲಯವನ್ನು ಕಾಣುತ್ತೇವೆ. ಇದು ದೊಡ್ಡ ದೊಡ್ಡ ಕಲ್ಲುದಿಮ್ಮಿಗಳನ್ನು ಜೋಡಿಸಿ ಕಟ್ಟಿರುವಂತಹದು. ೫೦೦-೬೦೦ ವರ್ಷಗಳಷ್ಟು ಪ್ರಾಚೀನವೆಂದು

ತಜ್ಞರು ಅಭಿಪ್ರಾಯ ಪಡುತ್ತಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಿದಾಗ ತಜ್ಞರ ಅಭಿಪ್ರಾಯ ಸರಿಯಾಗಿದೆ ಎಂಬುದು ಅನಿಸುತ್ತದೆ. ಈ ದೇವಾಲಯದ ನಿರ್ಮಾಣದ ಬಗ್ಗೆ ಸಿಗುವ ಕಥನಗಳು ಸಹ ಅಷ್ಟೇ ಪ್ರಾಚೀನತೆಯನ್ನು ಮಂಡಿಸುತ್ತವೆ. ಅಂತಹ ಕಥನಗಳಲ್ಲಿ ಒಂದು ಇಂತಿದೆ. ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿದ ಹಕ್ಕ-ಬುಕ್ಕರು ಒಮ್ಮೆ ಸೈನ್ಯ ಸಮೇತ ಇಲ್ಲಿ ಹಾದು ಹೋಗುವಾಗ ಕುದುರೆಗಳು ಮುಂದೆ ಹೋಗದೆ ನಿಂತುಬಿಟ್ಟವಂತೆ. ಇದನ್ನು ಗಮನಿಸಿದ ರಾಜರು ಸೈನಿಕರನ್ನು ಬಿಟ್ಟು ಹುಡುಕಿಸಿದಾಗ ಒಂದು ಪೊದೆಯಲ್ಲಿ ಎರಡು ಲಿಂಗಗಳು ಸಿಗುತ್ತವೆ. ಅರಸರು ಆಶ್ಚರ್ಯಪಟ್ಟು ಅಲ್ಲಿ ಒಂದು ದೇವಾಲಯವನ್ನು ಕಟ್ಟಿಸಿ ಅವುಗಳನ್ನು ಪ್ರತಿಷ್ಠಾಪಿಸುತ್ತಾರೆ ಮತ್ತು ಆ ದೇವಾಲಯಕ್ಕೆ 'ಹರಿಹರ' ದೇವಾಲಯವೆಂದು ನಾಮಕರಣವನ್ನು ಮಾಡುತ್ತಾರೆ. ಇದು ವಿಜಯನಗರದ ಮೊದಲ ಸಾಮ್ರಾಟ ಕುರುಬ ಕುಲದ ಹಕ್ಕರಾಯನ ಹೆಸರನ್ನು ಸೂಚಿಸುತ್ತದೆ. ನಂತರ ಕಾಲಾನುಕ್ರಮದಲ್ಲಿ ಪೂಜೆಗೊಂಡು ಶ್ರೀಕೃಷ್ಣದೇವರಾಯನು ಭೇಟಿಕೊಟ್ಟು ಇಲ್ಲಿ ಜಾತ್ರೆ ನಡೆಯುವ ವ್ಯವಸ್ಥೆ ಮಾಡಿ ಹೋದನೆಂಬ ಕಥನ ಅನೇಕ ಕುತೂಹಲವನ್ನು ಹುಟ್ಟಿಸುತ್ತದೆ. ವಿಜಯನಗರ ಅರಸರ ಆರಾಧ್ಯದೈವ ಮತ್ತು ಈ ಸ್ಥಳ ಸೈನ್ಯದ ದಾರಿ ಆಗಿತ್ತು ಎನ್ನುವುದು ವಿಶೇಷ.

ವಿಜಯನಗರದ ನಾಶದ ನಂತರ ಮೈಸೂರು ಅರಸರಾದ ಕಂಠೀರವ ನರಸಿಂಹರಾಜರವರು ಕ್ರಿ.ಶ. ೧೫೭೪ರಲ್ಲಿ ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದರೆಂದು ದೇವಾಲಯದವಲ್ಲಿರುವ ಶಾಸನ ತಿಳಿಸುತ್ತದೆ. ಇದು ಇಲ್ಲಿನ ಒಂಬತ್ತು ಗಡಿಗಳ ಬೀರದೇವರೆಂದು ಹೆಸರುವಾಸಿಯಾಗಿದೆ. ಇಲ್ಲಿಗೆ ಭಕ್ತರು ವಿರಳವಾಗಿ ಬರುತ್ತಿದ್ದು ಮೊದಲಿಗೆ ಬ್ರಾಹ್ಮಣ ಪೂಜಾರಿಗಳು ಬಿಟ್ಟುಹೋದ ಮೇಲೆ ಒಡೆಯರು ಪೂಜಾರಿಕೆಯನ್ನು ನೋಡಿಕೊಳ್ಳುತ್ತಿದ್ದಾರೆ.

ಈ ದೇವಾಲಯದ ಚಾರಿತ್ರಿಕ ಕಥನಗಳು ಬೀರದೇವರಿಗೆ ಇದ್ದಂತಹ ರಾಜಮನ್ನಣೆಗಳನ್ನು ತಿಳಿಸುತ್ತದೆ. ಮೈಸೂರು ಅರಸನಿಂದ ಜೀರ್ಣೋದ್ಧಾರಗೊಂಡಿರುವುದು ಈ ದೈವದ ಅಥವಾ ದೇವಾಲಯದ ಪ್ರಾಮುಖ್ಯತೆ ಯನ್ನು ತಿಳಿಸುತ್ತದೆ.

೫೬. ಅರೆವಾಡಿ

ಈ ಗ್ರಾಮ ಇದು ಸಾಂಗಲಿ ಜಿಲ್ಲೆ ಮಹಾಂಕಾಳಕವರಾ ತಾಲೂಕಿನಲ್ಲಿದೆ. ಇಲ್ಲಿನ ಬೀರಪ್ಪ ದೇವಾಲಯ ಇಡೀ ಮಹಾರಾಷ್ಟ್ರದಲ್ಲಿ ಭವ್ಯವಾದ ದೇವಾಲಯ ಎನಿಸಿಕೊಂಡಿದೆ. ಬೀರಪ್ಪ ವಿಶ್ವವಿಖ್ಯಾತವಾದ ಕ್ಷೇತ್ರ ಇದು. ಈ ಊರು ಪೂರ್ವ ಮತ್ತು ಅಗ್ನೇಯ ದಿಕ್ಕುಗಳಲ್ಲಿ ವ್ಯಾಪಿಸಿದೆ. ಈ ಊರಿನ ಜನಸಂಖ್ಯೆಯಲ್ಲಿ ಮುಕ್ಕಾಲು ಪಾಲು ಕುರುಬರು ಇದ್ದಾರೆ.

ಬೀರಲಿಂಗೇಶ್ವರ ಮುಖ್ಯ ದೇವಸ್ಥಾನದ ಸುತ್ತ ಚತುಷ್ಕೋಣಾಕಾರದ ಪೌಳಿಯಿದೆ. ಪೌಳಿಯ ಈಶಾನ್ಯ ಭಾಗದಲ್ಲಿ ಒಂದಿಷ್ಟು ಖಾಲಿ ಜಾಗವಿದೆ. ದಕ್ಷಿಣ ಮತ್ತು ಉತ್ತರಗಳಿಂದ ಪ್ರವೇಶದ್ವಾರಗಳಿವೆ. ಪೂರ್ವದ ದ್ವಾರವು ಭವ್ಯವೂ ವೈಭವ ಪೂರ್ಣವೂ ಆಗಿದ್ದು ವಿಜಯನಗರ ಕಾಲದ ರಚನೆಯನ್ನು ತೋರುತ್ತದೆ. ಮುಖ್ಯ ದೇವರಾದ ಬೀರಪ್ಪನ ದೇವಾಲಯ ಇದರ ಮಧ್ಯದಲ್ಲಿದ್ದು ಸಾಕಷ್ಟು ದೊಡ್ಡದಾಗಿದೆ. ವಿಸ್ತೃತವಾದ ಗರ್ಭಗೃಹ,

ಸುಕನಾಸಿ ಮತ್ತು ರಂಗಮಂಟಪದ ಭಾಗಗಳು ಪ್ರಾಚೀನ ಕಾಲದ ರಚನೆಗಳಾಗಿವೆ. ಪ್ರಸ್ತುತ ರಂಗಮಂಟಪದ ಭಾಗಗಳು ಪ್ರಾಚೀನ ಕಾಲದ ರಚನೆಗಳಾಗಿವೆ. ರಂಗಮಂಟಪದ ದಕ್ಷಿಣ ಮತ್ತು ಉತ್ತರದ ಕಂಬದ ಮೇಲೆ ವಿವಿಧ ಬಿತ್ತಿಚಿತ್ರಗಳನ್ನು ಬಿಡಿಸಿದ್ದಾರೆ. ಎರಡು ಕಟ್ಟೆಗಳಿಂದ ಕೂಡಿದ ದೊಡ್ಡ ಪ್ರಾಂಗಣವಿದೆ. ಇದು ತರುವಾಯದ ಬೆಳವಣಿಗೆ. ಗರ್ಭಗೃಹದ ಮೇಲೆ ದೇವಾಲಯದ ಶಿಖರವಿದೆ. ಈ ಶಿಖರದದ ಭಾಗ ಇಟ್ಟಿಗೆಗಳಿಂದ ರಚಿತವಾಗಿದೆ. ಇದರ ಮೇಲೆ ದೇವ, ದೇವತೆಗಳ ವಿಗ್ರಹವನ್ನು ಬಿಡಿಸಲಾಗಿದೆ. ಆದರೆ ಅವು ಸುಣ್ಣದಿಂದ ಮುಚ್ಚಿಹೋಗಿ ಕಾಣದಂತಾಗಿದೆ.

ಪ್ರಾಂಗಣದ ಉತ್ತರ ಕಟ್ಟೆಯ ಮೇಲೆ ದೇವರ ಉತ್ಸವದ ಪಲ್ಲಕ್ಕಿ ಮತ್ತು ದೇವರ ವಾಹನವಾದ ಕುದುರೆಗಳಿವೆ. ದೇವಾಲಯದ ಎದುರುಗಡೆ ಒಂದು ಮತ್ತು ದಕ್ಷಿಣ ಪ್ರವೇಶದ್ವಾರದ ಮುಂದೆ ಮತ್ತೊಂದು ಹೀಗೆ ಎರಡು ದೀಪಸ್ತಂಭಗಳಿವೆ. ಮಹಾರಾಷ್ಟ್ರದಲ್ಲಿರುವ ದೇವಾಲಯ ಇಲ್ಲಿಗೆ ಪ್ರತಿ ವರ್ಷ ಕರ್ನಾಟಕದ ಅನೇಕ ಭಕ್ತರು ಹೋಗುತ್ತಾರೆ. ಹಾಗಾಗಿಯೇ ಕರ್ನಾಟಕದ ಬೀರದೇವರ ಸಂಪ್ರದಾಯಗಳ ಆಚರಮೆಗಳ ಮೇಲೆ ಗಾಢವಾದ ಪ್ರಭಾವ ಬೀರಿದೆ. ಶಂಭಾಜೋಶಿ ಅವರು ಈ ನೆಲವನ್ನು ಕನ್ನಡನೆಲ್ಲವೆಂದು ಗುರುತಿಸಿದ್ದಾರೆ. ಇಂತಹ ವೈಶಿಷ್ಟ್ಯತೆಯಿಂದ ಕೂಡಿರುವುದರಿಂದಲೇ ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು. ಪ್ರಮುಖವಾಗಿ ಆಚರಣೆ ಮತ್ತು ಸಂಪ್ರದಾಯಗಳಲ್ಲಿ ಆಗಿರುವ ಕೊಡುಕೊಳ್ಳುವಿಕೆಯನ್ನು ಗುರುತಿಸಲಾಗಿದೆ.

ಐತಿಹಾಸಿಕ ಹಿನ್ನೆಲೆ : ಈ ಊರಿಗೆ ಒಂದು ಐತಿಹಾಸಿಕ ಹಿನ್ನೆಲೆಯಿದೆ. ಬೀರಲಿಂಗೇಶ್ವರನ ಮಡದಿ ಕನ್ನಿಕಾಮಾಲಿಯ ಭವ್ಯವಾದ ದೇವಾಲಯವಿದೆ. ಬೀರಲಿಂಗೇಶ್ವರ ಅರೆವಾಡಿ ಎಂಬುದೆ ಅರುತಲೆ ಗುಡ್ಡಕ್ಕೆ ಮಡೆಯನ್ನು ಇಲ್ಲಿ ಇರಿಸಿ ಕನ್ನಿಕಾಮಾಲಿಯ ನಿಜವಾದ ವಾಸಸ್ಥಳವೆಂದು ಜನರು ಹೇಳುತ್ತಾರೆ. ಅಷ್ಟೇ ಅಲ್ಲದೇ ಅನೇಕ ಶಿಷ್ಯರು, ಸೇವಕರು ಇದ್ದಾರೆ ಎಂದು ಬೀರಲಿಂಗೇಶ್ವರನ್ನು ಕಾಮಾಲಿಗೆ ನೀನು ನೆನೆದಾಗಲೇ ನಾನು ನೀನ್ನಲೆ ಇರುತ್ತೇನೆ ಎಂದು ಹೇಳಿದರು. ಬೀರಲಿಂಗೇಶ್ವರ ಹೆಂಡತಿಗೆ ವಿಠಲ, ಗೋಪಾಲರಾದರೆಂಬ ಸೇವಕರು ಕಾಮಾಲಿ ಹತ್ತಿರ ಇದ್ದರು. ಅರೆವಾಡಿಯಲ್ಲಿ ಬಾರಾಹಟ್ಟಿ ಕುರುಬರು, ಇರುವರು, ಇವರು ಕೊಳೆಕಾರ ಮನೆತನದವರು ಎಂದು ಹೇಳುತ್ತಾರೆ. ಮುಂದೆ ಬೀರಲಿಂಗೇಶ್ವರ ಮಡದಿಯನ್ನು ಬಿಟ್ಟು ಅನೇಕ ಕಾಲ ತಪಶ್ಚರ್ಯದೊಳು ತೊಡಗಿ ಅನೇಕ ತಪಸ್ಸುಗಳನ್ನು ಮಾಡಿ ಶಿಷ್ಯ ಮಹಾಲಿಂಗರಾಯನನ್ನು ಪಡೆದನು. ನಂತರ ಕನ್ನಿಕಾಮಾಲೆ ಐಕ್ಯವಾದಳು. ನಂತರ ಇಲ್ಲಿಯ ಜನ ಸೇರಿ ದೇವಿಯ ಸುಂದರವಾದ ದೇವಾಲಯವನ್ನು ಕಟ್ಟಿಸಿದರು ಎಂದು ಶರಣಪ್ಪ ಕುಂಚಿಕಾರ ಅವರು ಮಾಹಿತಿ ನೀಡುತ್ತಾರೆ.

ಈ ದೇವರಿಗೆ ಯುಗಾದಿ ಪಾಡ್ಯದ ನಂತರದಿಂದ ಐದು ದಿನ ದೀಪಾವಳಿಗೆ ಬೀರಲಿಂಗೇಶ್ವರ ಜಾತ್ರೆ ಜಾಗುವುದು. ಇಲ್ಲಿ ಲಕ್ಷಾಂತರ ಜನ ಸೆರುವರು. ಇದು ಪ್ರಸಿದ್ಧವಾದ ಬೀರದೇವರ ಆರಾಧನಾ ಸ್ಥಳವಾಗಿದೆ ಎಂದು ಹೇಳಬಹುದು. ಇಲ್ಲಿ ಧ್ವಜಾರೋಹಣ, ಅಗ್ನಿಕುಂಡ, ಅಲಗ ಹಾಕಿಕೊಳ್ಳುವುದು, ಹಲ್ಲುಮರಿ ಸಿಗಿಯುವುದು, ತೀರ್ಥೋಂತ್ಸವ ಮುಂತಾದ ಆಚರಣೆಗಳು ಈ ಜಾತ್ರೆಯಲ್ಲಿ ಕಂಡುಬರುತ್ತವೆ. ತೀರ್ಥೋತ್ಸವ

ಇಲ್ಲಿ ಗಮನಸೆಳೆಯುವ ಆಚರಣೆ ಅಂದರೆ ಗಂಗೆ ಪೂಜೆ ಎಂದರ್ಥ ಎಂದು ಕರೆಯಲಾಗುತ್ತದೆ. ಜಾತ್ರೆಯ ಸಮಯದಲ್ಲಿ ವಿಶೇಷವಾದ ಅಭಿಷೇಕ ಪೂಜೆಗಳು ನೇರವೇರುತ್ತದೆ.

ಮೂರ್ತಿಗಳು

ಬೀರದೇವರ ಪ್ರಾಚೀನ ಗುಡಿಗಳು ಕಲ್ಲು ಚಪ್ಪಡಿಗಳಿಂದ ಕೂಡಿವೆ. ಅವು ಶಿಲಾಯುಗದ ಪುರಾತನ ಸಮಾಧಿಗಳನ್ನು ಹೋಲುತ್ತವೆ. ಮೂರು ದಿಕ್ಕುಗಳಿಗೆ ಎರಡು ಅಡಿ ಎತ್ತರದ ಒಂದೊಂದು ಚಪ್ಪಡಿ ಕಲ್ಲುಗಳನ್ನು ನೆಟ್ಟು ಅವುಗಳ ಮೇಲೆ ಮೇಲ್ಛಾವಣಿಗೆಂದು ದೊಡ್ಡದೊಂದು ಚಪ್ಪಡಿ ಹೊದಿಸಲಾಗಿದೆ. ಅದರ ಮೇಲೆ ಚಿಕ್ಕ ಚಿಕ್ಕ ಕಿಂಡಿಗಳನ್ನು ಬಿಟ್ಟಿದ್ದಾರೆ. ಇದು ಪ್ರಾಚೀನ ಬೃಹತ್ ಶಿಲಾಯುಗದಲ್ಲಿ ಕುರುಬರು ತಮ್ಮ ಶವಗಳನ್ನು ಇಂತಹ ಕಲ್ಲುಪೆಟ್ಟಿಗೆಯಲ್ಲಿ ಸಮಾಧಿಗಳು ಇರುವುದನ್ನು ಕಾಣಬಹುದು. ಇಂತಹ ಸಮಾಧಿಗಳು ಕರ್ನಾಟಕದ ವಿಜಾಪುರ ಜಿಲ್ಲೆ, ನಾಗಠಾಣ, ಬಾಗಲಕೋಟೆ ಜಿಲ್ಲೆ ಕಲಾದಗಿ ಮುಂತಾದ ಕಡೆಗಳಲ್ಲಿ ಇಂತಹ ಕಿಂಡಿ ಕೋಣೆಯ ಸಮಾಧಿಗಳು ದೊರೆಯುತ್ತವೆ.

ಗಮನಿಸಿದ ಬೀರದೇವರ ಮೂರ್ತಿಗಳು, ಗುಡಿಗಳು ಎಲ್ಲವೂ ವಿಜಯನಗರದ ಅರಸರ ಕಾಲದವು ಅಥವಾ ಆನಂತರದ ಅಥವಾ ಹತ್ತಿರ ಕಾಲದವು. ಆದರೆ ಹೊಯ್ಸಳರ ವಾಸ್ತುಶೈಲಿಯವು. ಈ ಬೀರದೇವರ ಗುಡಿಗಳಲ್ಲಿ ಕೆಲವು ದೇವಾಲಯಗಳು ಇತ್ತೀಚೆಗೆ ಪುನರ್ ನಿರ್ಮಾಣಗೊಂಡಿವೆ. ಆದರೆ ಈ ಗುಡಿಗಳಲ್ಲಿ ಯಾವುದೇ ಶಾಸನ ದಾಖಲೆಗಳು ಕೆಲವೊಂದು ಕಡೆ ಸಿಗುವುದಿಲ್ಲ. ಇನ್ನು ಕೆಲವೊಂದು ಕಡೆ ಸಿಗುತ್ತವೆ. ಈ ಬೀರದೇವರ ಗುಡಿಗಳು ಇರುವ ಸ್ಥಳ ವಾತಾವರಣವನ್ನಾಧರಿಸಿ ಊರ ಒಳಗಿನ ಗುಡಿ ಊರ ಹೊರಗಿರುವ ಗುಡಿ ಎಂದು ವಿಂಗಡಿಸಬಹುದು.

ಊರ ಒಳಗಿನ ಗುಡಿಗಳನ್ನು ಉಪಗುಡಿಗಳೆಂದು ಕರೆಯಬಹುದು. ಸಾಮಾನ್ಯವಾಗಿ ಇವು ಊರ ಪ್ರಮುಖ ಸ್ಥಳದಲ್ಲಿದ್ದು ಸುಸ್ಥಿಯಲ್ಲಿವೆ. ಇಲ್ಲಿ ನಿತ್ಯ ಪೂಜೆ, ಪುರಸ್ಕಾರಗಳು ನಡೆಯುತ್ತವೆ. ಬೀರದೇವರಿಗೆ ಸಂಬಂಧಿಸಿದ ದಳವಾಯಿ ತಾಳಿ. ಕಟ್ಟಲಗು, ಮುಳ್ಳಾವಿಗೆ, ಮುಳ್ಳು ಪಲ್ಲಕ್ಕಿ ಇತ್ಯಾದಿ ವಸ್ತುಗಳು ಇಲ್ಲಿರುತ್ತವೆ. ಈ ಗುಡಿಗಳ ಪೀಠದ ಸ್ಥಾನದಲ್ಲಿ ಒಂದಕ್ಕಿಂತ ಹೆಚ್ಚು ಬೀರದೇವರ ಮೂರ್ತಿಗಳಿರುವುದನ್ನು ಕಾಣಬಹುದು. ಒಳ ಬೀರದೇವರುಗಳ ವೈಶಿಷ್ಟ್ಯತೆಯನ್ನು ತಿಳಿಸುತ್ತದೆ.

ಬೀರಪ್ಪನ ವಿಗ್ರಹಗಳಿಗೆ ಕೊರೆಮೀಸೆ, ಕಣ್ಣುಬಟ್ಟುಗಳಿರುತ್ತವೆ. ಕೈಯಲ್ಲಿ ಕುರಿಕಾಯುವ ಕೋಲಿನ ಈಟಿ ಒಂದು ತುದಿಗೆ ಲೋಹದ ಚೂಪಾದ ಆಯುಧ ಭರ್ಚಿ ಅಳವಡಿಸಲಾಗಿದೆ. ಕುದುರೆ ಸವಾರಿ ಭಂಗಿಯಲ್ಲಿರುವ ಮೂರ್ತಿಗಳೂ ಇವೆ. ಈ ವಿಗ್ರಹಗಳು ಬಿಲ್ಲು, ಬಾಣ, ಖಡ್ಗಗಳನ್ನು ಹೊಂದಿವೆ. ಉತ್ಸವ ಮೂರ್ತಿಗಳಿಗೆ ಕಿರೀಟ ಇರುವುದು ವೈಶಿಷ್ಟ್ಯ ಗರ್ಭಗೃಹದಲ್ಲಿ ಆಡು, ಕುರಿಗಳಿಗೆ ಪಂಚಪ್ರಾಣವಾಗಿರುವ ಜಾಲಿಕಾಯಿಗಳನ್ನು ಉದರಿಸಲು ದೋಟಿ ೧೫ರಿಂದ ೨೦ ಅಡಿ ಉದ್ದದ ಬಿದರಿನ ಗಳ ಅಥವಾ ಕೋಲು ಇರುತ್ತದೆ. ಈ ದೋಟಿ ಇಂದಿನ ವೀರಭದ್ರನ ಜಗಲಿಯ ಮೇಲೆಯೂ ಇರುವುದು ಗಮನೀಯ. ಬಹುತೇಕ

ಸ್ಥಳಗಳಲ್ಲಿ ಬೀರದೇವರ ಕುದುರೆ ಮೇಲೆ ಕುಳಿತ ಭಂಗಿಯಲ್ಲಿವೆ. ಕೆಲವು ಕಡೆಗೆ ಆನೆಯ ಅಂಬಾರಿಯ ಮೇಲೆ ಕುಳಿತ ಭಂಗಿಯಲ್ಲಿರುವುದನ್ನು ಕಾಣಬಹುದು. ಕ್ವಚಿತ್ತಾಗಿ ಕೆಲವು ಕಡೆಗೆ ನಂದಿ ಮೇಲೆ ಕುಳಿತಿರುವುದೂ ವಿಶೇಷ. ಇದು ಪಶುಪಾಲನ ಸಮುದಾಯದ ವೈಶಿಷ್ಟ್ಯತೆಯನ್ನು ತಿಳಿಸುತ್ತದೆ.

ಉದಾಹರಣೆಗೆ ಮಂಡ್ಯ ಜಿಲ್ಲೆ, ಆದಿಹಳ್ಳಿ, ಕೋಡಿದೊಡ್ಡಿ, ತರೀಕೆರೆ ತಾಲೂಕು ಗಡಿಹಳ್ಳಿ, ಮುಗುಳಿ ಬೀರದೇವರ ಗುಡಿಗಳಲ್ಲಿ ತಲಾ ಮೂರು ಬೀರದೇವರ ಮೂರ್ತಿಗಳಿವೆ. ಕಡೂರು ತಾಲೂಕು ಆಸಂದಿಯಲ್ಲಿ ಐದು ಮೂರ್ತಿಗಳಿವೆ. ಹೊಳಲ್ಕೆರೆ ತಾಲೂಕು ತಾಳೀಕಟ್ಟೆಯಲ್ಲಿ ಹಾಗೂ ದಾವಣಗೆರೆಯಲ್ಲಿ ಹತ್ತಕ್ಕಿಂತ ಹೆಚ್ಚು ಮೂರ್ತಿಗಳಿವೆ. ಹೀಗೆ ಒಂದೇ ಪೀಠದಲ್ಲಿ ಹೆಚ್ಚು ಬೀರದೇವರುಗಳಿರುವುದಕ್ಕೆ ಪರಸ್ಪರ ಸೋದರ ಬಾಂಧವ್ಯ ಕಾರಣ ಎನಿಸುತ್ತದೆ. ಸ್ಥಳೀಯ ಭಕ್ತಾದಿಗಳು ಒಕ್ಕಲುಗಳ ಹಿರಿಯರು ಸಾಮಾನ್ಯವಾಗಿ ಬೀರದೇವರು ಎಲ್ಲಾ ಕಡೆಗಳಲ್ಲಿ ಕುದುರೆಯ ಮೇಲೆ ಕುಳಿತ ಬೀರನ ಭಂಗಿಯಲ್ಲಿದ್ದರೆ, ಭದ್ರಾವತಿ ತಾಲೂಕು ಅನ್ವೇರಿಯಲ್ಲಿ ಆನೆ ಮೇಲೆ ಕುಳಿತಿರುವ ಬೀರದೇರನ್ನು ಕಾಣಬಹುದು. ಹೊಸದುರ್ಗ ತಾಲೂಕು ಕೆಲ್ಲೋಡಿನಲ್ಲಿ ನಂದಿ ವಾಹನವಾದ ಈಶ್ವರನ ರೂಪದಲ್ಲೇ ಇವೆ. ಇವು ಬೀರಪ್ಪನ ಆರಾಧನೆಯ ಪ್ರಾದೇಶಿಕ ಸಾಂಸ್ಕೃತಿಕ ಅನನ್ಯತೆಯನ್ನು ತಿಳಿಸುತ್ತದೆ.

ಸಾಧಾರಣವಾಗಿ ಈತನ ಮಂದಿಗಳು ಊರ ಹೊರಗೆ ಇರುವ ಹುಣಸೆ ವನದಲ್ಲಿ ಇಲ್ಲವೇ ಹುತ್ತದ ಹತ್ತಿರ ಇವೆ. ಆದರೂ ಗ್ರಾಮದ ಮಧ್ಯದಲ್ಲಿ ಒಂದು ಪಕ್ಕದ ಕಲ್ಲಿನಿಂದ ನಿರ್ಮಿಸಿರುವ ಮಂದಿರದ ಹತ್ತಿರ ಇವೆ. ಊರ ಒಳಗಿನ ಗುಡಿಗಳು, ಉಪಗುಡಿಗಳು ಇವು ಗ್ರಾಮದ ಆಯಕಟ್ಟಿನ ಸ್ಥಳಗಳಲ್ಲಿದ್ದು ಸುಸ್ಥಿತಿಯಲ್ಲಿ ರುತ್ತವೆ. ಬೀರದೇವರಿಗೆ ಸಂಬಂಧಿಸಿದ ದಳವಾಯಿ, ತಾಳಿ, ಖಡ್ಗ ತಲವಾರ ಅಲಗು, ಈಟಿ, ಮುಳ್ಳಾವಿಗೆ ಅಸ್ತ್ರ-ಶಸತ್ರಗಳು, ಉತ್ಸವಮೂರ್ತಿಯ ಮುಖವಾಡ, ಪಲ್ಲಕ್ಕಿ, ಛತ್ರಿ, ಚಾಮರ, ದಿವಟಿಗೆ ಮುಂತಾದ ರಾಜರು ಉಪಯೋಗಿಸುತ್ತಿದ್ದ ರಾಜವೈಭವ ಪರಿಕರಗಳು ದೇವರ ಪರಿಕರಗಳಾಗಿ ಈವರೆಗೂ ಗುಡಿಯಲ್ಲಿಯೆವೆ. ಇವು ಸುಮಾರು ಹತ್ತು ಮುಖಗಳವರೆಗೂ ಇರುವುದುಂಟು. ಒಂದಕ್ಕಿಂತ ಹೆಚ್ಚಿನ ಮುಖವಾಡಗಳು ಬೀರಪ್ಪನ ಸೋದರ ಸಂಬಂಧಿಗಳು ಎಂದು ಭಕ್ತರ ನಂಬಿಕೊಂಡು ಆರಾಧನೆ ಮಾಡುವುದನ್ನು ಕಾಣಬಹುದು. ದಿನನಿತ್ಯದ ಪೂಜೆ, ನ್ಯಾಯ ತೀರ್ಮಾನಗಳು, ಒಪ್ಪಂದಗಳು ಇತರೆ ವ್ಯವಹಾರಗಳು ಊರಲ್ಲಿರುವ ಗುಡಿಯಲ್ಲಿಯೇ ನಡೆಯುತ್ತವೆ.

ಊರ ಹೊರಗಿನ ಗುಡಿಗಳೇ ಬೀರಪ್ಪನ ಮೂಲ ಗುಡಿಗಳು. ಈ ಗುಡಿಗಳು ಮಣ್ಣಿನ ಗುಡ್ಡೆಯಿಂದ ಸಣ್ಣ ಸಣ್ಣ ಕಲ್ಲುಗಳಿಂದ ಕೂಡಿರುತ್ತವೆ. ಎಲ್ಲಿ ಹುತ್ತಗಳು ಮಾಯವಾಗಿವೆಯೋ ಅಲ್ಲಲ್ಲಿ ಹುತ್ತಿನ ಸಂಕೇತವಾಗಿ ಈ ಗುಡ್ಡೆಗಳನ್ನು ಸಾಂಕೇತಿಕವಾಗಿ ನಿರ್ಮಿಸಿ ಆಚರಣೆ ಮಾಡುವ ಸಂಪ್ರದಾಯವನ್ನು ಕಾಣಬಹುದು. ಗುಡಿಯ ಸುತ್ತಮುತ್ತಲು ಹುಣಸೆಯ ಮರಗಳಿರುವುದು ಪರಂಪರೆಯಾಗಿ ನಡೆದು ಬಂದಿದೆ. ಈ ಪರಂಪರೆಯನ್ನು ಅರಿಯದವರು ಹುಣಸೆ ಮರಗಳನ್ನು ಕೆಲವು ಕಡೆಗೆ ಕಡಿದು ಹಾಕಿರುವುದು ಕಂಡುಬರುತ್ತದೆ. ಕೆಲವು ಕಡೆಗೆ ಹುಣಸೆ ಮರಗಳಿರುವ ಸ್ಥಳವನ್ನು 'ತೋಪು' ಎಂದು ಕರೆಯುತ್ತಾರೆ. ತೋಪು ಎಂಬ ಪದಕ್ಕೆ 'ವನ' ಎಂಬ

ಅರ್ಥವಿದೆ. ಎಲ್ಲ ಬೀರದೇವರ ಕ್ಷೇತ್ರಗಳಲ್ಲಿ ಹುಣಸೆಯ ತೋಪು ಇರುವುದರಿಂದ ರೂಢಿಗನುಗುಣವಾಗಿ ಬೀರಪ್ಪನ ಜಾತ್ರೆಗೆ ತೋಪಿನಜಾತ್ರೆ ಎಂದು ಕರೆಯುವ ರೂಢಿ ಬಾಗೂರು, ಹಳೆಮೈಸೂರು ಭಾಗದಲ್ಲಿವೆ. ಅನೇಕ ಮಂದಿರಗಳ ಎಂಟು ಜಮೀನುಗಳನ್ನು ಕಂದಾಯ ದಾಖಲೆಗಳಲ್ಲಿ (ಪಹಣಿ) ತೋಪು ಎಂತಲೂ, ಇನ್ನು ಕೆಲವು ಕಡೆಗೆ 'ಹುಣಸೆ ಬನ'(ವನ) ಎಂಬ ದಾಖಲೆಗಳಿವೆ. ಚಿಕ್ಕ ಗರ್ಭಗೃಹದ ಪೀಠ(ಜಗಲಿ)ದ ಮೇಲೆ ೩-೫ ಲಿಂಗಗಳಿರುತ್ತವೆ. ಗರ್ಭಗೃಹದ ಪಕ್ಕದಲ್ಲಿ ದಳವಾಯಿಗಾಗಿ ಒಂದು ಕೋಣೆ ಇರುತ್ತದೆ. ದೀಪಸ್ತಂಭ, ಊಯ್ಯಾಲೆ ಕಂಬ, ಶಿಖರ, ಗುಡಿಯ ಎದುರು ಟಗರುಗಲ್ಲುಗಳಿರುವುದು ವೈಶಿಷ್ಟ್ಯ. ಬೀರದೇವರ ಆವರಣದಲ್ಲಿ ದೇವರ ಪೂಜಾರಿ, ದಳವಾಯಿ ಮತ್ತು ಈರಗಾರರ ಸಮಾಧಿಗಳಿರುತ್ತವೆ. ಈ ಗುಡಿಗಳಲ್ಲಿ ದಿನನಿತ್ಯ ಪೂಜೆಗಳು ನಡೆಯುವುದಿಲ್ಲ. ಜಾತ್ರೆ ಮತ್ತು ವಿಶೇಷ ಹಬ್ಬ ಹರಿದಿನಗಳಲ್ಲಿ ಮಾತ್ರ ಇಲ್ಲಿ ಪೂಜೆ ನಡೆಯುತ್ತವೆ. ಇದೇ ರೀತಿಯ ಮೂರ್ತಿಗಳ ಬಗ್ಗೆ ವಿಶ್ಲೇಷಿಸಲಾಗಿದೆ. ಒಟ್ಟು ಈ ಅಧ್ಯಯನದಲ್ಲಿ ಬೀರಪ್ಪನ ಕ್ಷೇತ್ರಗಳ ಭೌಗೋಳಿಕ ಪರಿಸರದ ಸಮಗ್ರವಾದ ಚಿತ್ರಣವನ್ನು ಗುರುತಿಸಲಾಗಿದೆ. ಈ ಅಧ್ಯಯನದಿಂದ ಬೀರದೇವರ ಭೌಗೋಳಿಕ ವಿವರಗಳನ್ನು ವಿವಿಧ ಆಯಾಮಗಳಿಂದ ಗುರುತಿಸಲಾಗಿದೆ. ಇದರಿಂದ ಬೀರಪ್ಪನನ್ನು ಆರಾಧನೆ ಮಾಡುವ ಸಮುದಾಯಗಳ ನೆಲಮೂಲ ಕಥನಗಳನ್ನು ಅನಾವರಣ ಮಾಡುತ್ತವೆ.

ಕೊನೆ ಟಿಪ್ಪಣಿಗಳು

೧. ವೀರಣ್ಣದಂಡೆ (ಸಂ) ಜನಪದ ಹಾಲುಮತ ಮಹಾಕಾವ್ಯ, ೨೦೦೦, ಪು. ೨೮೯

೨. ಇದು ಪಾಮರ ನಿಷ್ಪತ್ತಿ: ಅಲಕ ಎಂಬ ಪದಕ್ಕೆ ಕೋಶದಲ್ಲಿ ಅಳಕ, ಅಲರ್ಕ ಎಂಬ ಅರ್ಥಗಳನ್ನು ಕೊಡಮಾಡಿರುವರು. ಕುಬೇರನ ರಾಜಧಾನಿಗೆ ಅಲಕಾಪುರ ಎಂದು ಹೆಸರು.

೩. ಮಾಹಿತಿ ನೀಡಿದವರು: ಶ್ರೀ ನಾಗಪ್ಪ ಶಿಂಗಾಡಿ ಕಂಠಿಕಾರ, ಅಲಕನೂರು

೪. ಅಥಣಿ ತಾಲೂಕು ಹಲ್ಯಾಳದಲ್ಲಿ ಈತನ ದೇವಾಲಯವಿದೆ.

೫. ಶ್ರೀ ಕರಿಸಿದ್ಧೇಶ್ವರ ಪುರಾಣ, ಅಣ್ಣಪ್ಪ ಮುತ್ತೂರು, ೧೯೭೧, ಪು. ೧೨೮

೬. ಶ್ರೀ ಕರಿಸಿದ್ಧೇಶ್ವರ ಪುರಾಣ, ಅಣ್ಣಪ್ಪ ಮೂತ್ತೂರ, ೧೯೭೧, ಪು. ೧೨೪

೭. ಮಾಹಿತಿ ನೀಡಿದವರು: ನಾಗಪ್ಪ ಒಡೆಯರು, ಎಕ್ಸಂಬಾ

೮. ಮಾಹಿತಿ ನೀಡಿದವರು: ಶ್ರೀ ಕೆಂಚಪ್ಪ ಶಿವರಾಯ ಪೂಜಾರಿ, ರಾಯಬಾಗ

೯. ಮಾಹಿತಿ ನೀಡಿದವರು: ಶ್ರೀ ಕರಿಯಪ್ಪ ಚೌಗಲಿ, ಹಾರೂಗೇರಿ

೧೦. ಮಾಹಿತಿ ನೀಡಿದವರು: ಶ್ರೀ ಬಸವರಾಜ ಕುದರಿ, ಕಂಕಣವಾಡಿ

೧೧. ಮಾಹಿತಿ ನೀಡಿದವರು: ಶ್ರೀ ಮಾರುತಿ ಘಂಟಿ, ಕಂಕಣವಾಡಿ

೧೨. ಶ್ರೀ ಮಹಾಲಿಂಗರಾಯರ ಹಾಲುಮತ ಹೊಂಬೆಳಕು ದರ್ಶನ ಮಹಾಕಾವ್ಯ, ಶ್ರೀ ಅಡಿವೆಪ್ಪ ಮಹಾರಾಯರು, ೨೦೦೯, ಪದ್ಯ-೪, ಪು. ೧೬೦

೧೩. ಶ್ರೀ ಮಹಾಲಿಂಗರಾಯರ ಹಾಲುಮತ ಹೊಂಬೆಳಕು ದರ್ಶನ ಮಹಾಕಾವ್ಯ, ಶ್ರೀ ಅಡಿವೆಪ್ಪ ಮಹಾರಾಯರು, ೨೦೦೯, ಪದ್ಯ-೫, ಪು. ೧೬೦

೧೪. ಮಾಹಿತಿ ನೀಡಿದವರು: ಕರಿಯಪ್ಪ ರೇವಪ್ಪ ಪೂಜಾರಿ, ಕಂಕಣವಾಡಿ

೧೫. ಮಾಹಿತಿ ನೀಡಿದವರು: ರಾಮಗೊಂಡ ಕೌಲಗಿ, ನಾಗರಾಣ

೧೬. ಮಾಹಿತಿ ನೀಡಿದವರು: ಕೆಂಚಪ್ಪ ಪೂಜಾರಿ, ನಾಗರಾಣ

೧೭. ಮಾಹಿತಿ ನೀಡಿದವರು: ನಾಗಪ್ಪ ಬೀರಪ್ಪ ದಳವಾಯಿ, ಮಲಘಾಣ

೧೮. ಮಾಹಿತಿ ನೀಡಿದವರು: ಸಿದ್ದಪ್ಪ ಪೂಜಾರಿ, ರಾಯಬಾಗ

೧೯. ಮಾಹಿತಿ ನೀಡಿದವರು: ರಾಜಪ್ಪ ಪೂಜಾರಿ, ಕೊಣ್ಣೂರು

೨೦. ಕರ್ನಾಟಕ ದೇವಾಲಯ ಕೋಶ, ಕೊಪ್ಪಳ ಜಿಲ್ಲೆ (ಸಂ) ಡಾ. ಕೆ.ಎಂ. ಸುರೇಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು.೭೪

೨೧. ಕರ್ನಾಟಕದ ಕುರುಬರು (ಲೇ) ಡಾ. ಶಿವಾನಂದ ಗುಬ್ಬಣ್ಣವರ, ಅಕ್ಷಯ ಪ್ರಕಾಶನ ಧಾರವಾಡ, ೧೯೯೩, ಪು. ೫೨

೨೨. ಶ್ರೀರಾಮ ಇಟ್ಟಣ್ಣವರ, ಕೊಣ್ಣೂರು ಶ್ರೀ ಕರಿಸಿದ್ದೇಶ್ವರ ದೇವಸ್ಥಾನ, ೧೯೯೫, ಪು. ೪

೨೩. ರಸ್ತಾಪೂರ ಭೀಮಕವಿ ಹಾಲ್ಮತೋತ್ತೇದೀಜಕ ಪುರಾಣ, ೧೯೧೬, ಪು. ೧೨೧

೨೪. ಎಂ.ಎಂ. ಚನ್ನಬಸವಶಾಸ್ತ್ರಿಗಳು, ಹಾಲುಮತದ ಪುರಾಣ, ೧೯೫೯, ಪು. ೧೦೫

೨೫. ಅಣ್ಣಪ್ಪ ವಾಸುದೇವರಾಯ ಶ್ರೀ ಕರಿಸಿದ್ದೇಶ್ವರ ಪುರಾಣ ಅಧ್ಯಾಯ, ಅಪೂರಕ ವಿಜಾಪುರ ಜಿಲ್ಲೆಯ ಶಾಸನ ಸೂಚಿ, ಡಾ. ಎಂ.ಎಂ. ಕಲಬುರ್ಗಿ

೨೬. ಶ್ರೀರಾಮ ಇಟ್ಟಣ್ಣವರ, ಕೊಣ್ಣೂರು ಶ್ರೀ ಕರಿಸಿದ್ಧೇಶ್ವರ ದೇವಸ್ಥಾನ, ೧೯೯೫, ಪು. ೧೮

೨೭. ಮಾಹಿತಿ ನೀಡಿದವರು: ರಾಮಚಂದ್ರಪ್ಪ ಕಂಬಳಿ, ತಳಗಿಹಾಳ

೨೮. ಮಾಹಿತಿ ನೀಡಿದವರು: ಮಾದೇವಪ್ಪ ಪೂಜಾರಿ, ಮುರನಾಳ

೨೯. ಮಾಹಿತಿ ನೀಡಿದವರು: ಕೊಟ್ರೇಶಪ್ಪ ಪೂಜಾರಿ, ದಾವಣಗೆರೆ

೩೦. ಮಾಹಿತಿ ನೀಡಿದವರು: ಕರಿಯಪ್ಪ ಪೂಜಾರಿ, ದಾವಣಗೆರೆ

೩೧. ಮಾಹಿತಿ ನೀಡಿದವರು: ಸಿದ್ದಪ್ಪ ದಳವಾಯಿ, ಅನುವನಹಳ್ಳಿ

೩೨. ಮಾಹಿತಿ ನೀಡಿದವರು: ಗಂಗಾಧರ, ಆಸಂದಿ

೩೩. ಮಾಹಿತಿ ನೀಡಿದವರು: ಕೆಂಚಪ್ಪ ದಳವಾಯಿ, ಮುಗಳಿಕಟ್ಟೆ

೩೪. ಮಾಹಿತಿ ನೀಡಿದವರು: ಸೀತಾರಾಮ (೭೪ ವರ್ಷ) ಚಿಕ್ಕಬಾಗೂರು

೩೫. ಮಾಹಿತಿ ನೀಡಿದವರು: ಈಶ್ವರಪ್ಪ ಎತಿಮ್ಮ, ಕಡೂರು

೩೬. ಮಾಹಿತಿ ನೀಡಿದವರು: ಶಂಕರಪ್ಪ ಪೂಜಾರಿ, ಬೀರೂರು

೩೭. ಮಾಹಿತಿ ನೀಡಿದವರು: ಕೆಂಚಪ್ಪ ಪೂಜಾರಿ, ಬೀರೂರು

೩೮. ಮಾಹಿತಿ ನೀಡಿದವರು: ಯೋಗೀಶ್ ದಳವಾಯಿ, ಬೀರೂರು

೩೯. ಮಾಹಿತಿ ನೀಡಿದವರು: ಮಾಳಪ್ಪ ಪೂಜಾರಿ, ಸಂಪಿಗೆಹಳ್ಳಿ, ಬೆಂಗಳೂರು

೪೦. ಮಾಹಿತಿ ನೀಡಿದವರು: ರವಿ ಪೂಜಾರಿ, ಬೆಂಗಳೂರು

೪೧. ಮಾಹಿತಿ ನೀಡಿದವರು: ರಾಮುಹೆಗ್ಗಡೆ (೬೫ ವರ್ಷ), ಬೆಂಗಳೂರು

೪೨. ಮಾಹಿತಿ ನೀಡಿದವರು: ರಮೇಶ ಎಚ್. (೪೦ ವರ್ಷ), ಕೊಡಿದೊಡ್ಡಿ

೪೩. ಮಾಹಿತಿ ನೀಡಿದವರು: ಮಧುಕುಮಾರ, ಆಲೂರು

ಅಧ್ಯಾಯ - ೫

ಬೀರಪ್ಪನ ಆಚರಣೆ, ನಂಬಿಕೆ ಮತ್ತು ಕಲೆಗಳು

ಅ. ಆಚರಣೆಗಳು

೧. ಪೂಜೆ ಉತ್ಸವ ಮತ್ತು ಜಾತ್ರೆ
೨. ಮೀಸಲು ಆಚರಣೆ
೩. ಗೂಡೆ ಆಚರಣೆ
೪. ಗಾವು ಸಿಗಿಯುವುದು
೫. ಅಲಗು ಹಾಕಿಕೊಳ್ಳುವ ಆಚರಣೆ
೬. ಕೀಲಕಟ್ಟೆಯ ಆಚರಣೆ
೭. ಹೊನ್ನಾಟಿ
೮. ಹಾಲುಬಾನ ಸೇವೆ
೯. ಅಗ್ನಿಸೇವೆ
೧೦. ಪಂಚಾಮೃತ ಅಭಿಷೇಕ
೧೧. ಕದಳಿಕಟ್ಟೋ ಸೇವೆ
೧೨. ಕಾಗೆ ಪರೇವು ಸೇವೆ
೧೩. ಬಾಯಿಬೀಗ ಆಚರಣೆ
೧೪. ಹಾಲರವಿ ಸೇವೆ
೧೫. ದೀವಟಿಗೆ ಸಲಾಮು
೧೬. ಗಂಗಾಸ್ನಾನ
೧೭. ಊರಾಡುವ ಆಚರಣೆ
೧೮. ಪತ್ರಿಕೌಲು ಕೇಳುವುದು
೧೯. ತೆಂಗಿನಕಾಯಿ ಪವಾಡ
೨೦. ದೀಪದ ಆಚರಣೆ
೨೧. ಧ್ವಜಾರೋಹಣ ಆಚರಣೆ
೨೨. ಖೇಲು ಹೊರುವುದು
೨೩. ಅಂಬಲಿ ಕೊಡುವ ಸೇವೆ
೨೪. ಬಿದಿಗೆ ಆಚರಣೆ
೨೫. ಹುಗ್ಗಿ ಹುಟ್ಟಿನ ಆಚರಣೆ
೨೬. ಗುಗ್ಗರಿ ಆಚರಣೆ
೨೭. ವಾಲಗ ಸೇವೆ
೨೮. ಜಲ ಪವಾಡ ಆಚರಣೆ
೨೯. ಮುಳುಗದ್ದುಗೆ ಆಚರಣೆ
೩೦. ಕಟ್ಟೆ ಹಿಡಿಯುವುದು
೩೧. ಬಿಲ್ಲಾಸುರನ ತಲೆ ಆಚರಣೆ
೩೨. ಕಾಳುಪೂಜೆ
೩೩. ಕಟ್ಟಿದೋಣಿ ಸೇವೆ
೩೪. ಕತ್ತಿ ಪವಾಡ
೩೫. ಟಗರುಗಲ್ಲು ಪವಾಡ
೩೬. ಕರಿಕಟ್ಟುವುದು
೩೭. ಭಂಡಾರ ಮಹಿಮೆ ಆಚರಣೆ
೩೮. ಈರೂಟ
೩೯. ಉಯ್ಯಾಲೆ
೪೦. ಓಕಳಿ
೪೧. ತಿಂಗಳ ಪೂಜೆ ಕಾರ್ಯ

ಆ. ನಂಬಿಕೆಗಳು

೧. ಮೀಸಲು ತುಪ್ಪದ ಹರಕೆ

೨. ಉಡುಗೊರೆಯ ಹರಕೆ

೩. ಕುರಿಮರಿ ಹರಕೆ

೪. ಗಿಣ್ಣದ ಹಾಲಿನ ಹರಕೆ

೫. ಮುಡುಪಿನ ಹರಕೆ

೬. ಉರುಳು ಹರಕೆ

೭. ಇಡಗಾಯಿ ಹರಕೆ

೮. ತಲೆಗೂದಲು ಹರಕೆ

ಇ. ಕಲೆಗಳು

೧. ಡೊಳ್ಳು ಕುಣಿತ

೨. ಈರಗಾರರ ಕುಣಿತ

೩. ದಟ್ಟಿ ಕುಣಿತ

೪. ಬುಡ್ಡರ ಕುಣಿತ

೫. ಸದರ ಕಲೆ

೬. ವೀರಗಾಸೆ ಕುಣಿತ

೭. ಹುಲಿಮನೆ ಕುಣಿತ

೮. ಮುಳ್ಳುಪಲ್ಲಕ್ಕಿ ಕುಣಿತ

೯. ಕದಳಿ ಕುಣಿತ

೧೦. ದಳವಾಯಿ ಕುಣಿತ

೧೧. ದೀಪದ ಕುಣಿತ

೧೨. ಬೀಂಗಯ್ಯನ ಕುಣಿತ

ಈ. ಪಟ್ಟಗಳ ಆಯ್ಕೆ ಮತ್ತು ದೀಕ್ಷೆ

೧. ದಳವಾಯಿ ಪಟ್ಟ ದೀಕ್ಷೆ

೨. ಪೂಜಾರಿಗಳ ಪಟ್ಟ ದೀಕ್ಷೆ

೩. ಬಿಂಗಯ್ಯನ ಪಟ್ಟ ದೀಕ್ಷೆ

ಅಧ್ಯಾಯ ಐದು

ಬೀರಪ್ಪನ ಆಚರಣೆ, ನಂಬಿಕೆ ಮತ್ತು ಕಲೆಗಳು

ಸಂಸ್ಕೃತ ಮೂಲ ಪರ್ವ ಪದದ ತದ್ಭವ ರೂಪ ಹಬ್ಬ. ಇದು ಜನಾಂಗಿಕ ಜೀವನದ ನಿರ್ದಿಷ್ಟ ಕಾಲದ ಉತ್ಸವದ ಸಂಕೇತವಾಗಿದೆ. ಒಂದು ಕಾಲಾವಧಿಯಲ್ಲಿ ಕೈಗೊಳ್ಳುವ ಆಚರಣೆಗಳ ರೂಢಿ, ಉತ್ಸವಗಳೇ ಹಬ್ಬ ಎನ್ನಬಹುದು. ಹಬ್ಬಗಳಿಗೆ ಸಂಪ್ರದಾಯ ಹಾಗೂ ಆಚರಣೆಗಳೇ ಮೂಲಪ್ರೇರಣೆ.

ಯಾವುದೇ ಜನಾಂಗದ ಸಾಂಸ್ಕೃತಿಕ ಬೆಳವಣಿಗೆಯನ್ನು ಗುರುತಿಸಲು ಸಿಗುವ ಮಹತ್ವಪೂರ್ಣ ಆಕರಗಳು ಆಯಾ ಜನಾಂಗದ ನಂಬಿಕೆ, ಶ್ರದ್ಧೆ ಹಾಗೂ ಕ್ರಿಯಾಚರಣೆಗಳು. ಜನಪದ ಬದುಕು ಪುರಾಣದ ಸೃಷ್ಟಿ ಹಾಗೂ ಆರಾಧನೆ, ಸ್ತುತಿ, ಆಚರಣೆ ಇವೆಲ್ಲ ಚಕ್ರಗತಿಯಲ್ಲಿ ರೂಪಗೊಂಡು ಕಾಲಾಂತರದಲ್ಲಿ ನಿರ್ದಿಷ್ಟ ಕಾಲದ ಆಚರಣೆಗಳಾಗಿ, ಆ ಆಚರಣೆಗಳೇ ಹಬ್ಬಗಳ ಸ್ವರೂಪವಾಗಿ ಬದಲಾದವು.[೧]

ಆಚರಣೆಗಳು ಮಾನವನ ಬದುಕಿನ ಪ್ರತೀಕಗಳು, ಪ್ರತಿಬಿಂಬಗಳು, ಪ್ರತಿಮೆಗಳು ಇವು ಬದುಕಿನ ಕ್ರಿಯೆಗಳ ಸಾಂಕೇತಿಕ ರೂಪಗಳು, ಅನುಸರಣದ ಆಯಾಮಗಳು ಮಾನವ ಬದುಕಿನ ಅಥವಾ ಪ್ರಕೃತಿಯ ಬದುಕಿನ ಛಾಯಾವರ್ತಿಗಳೇ ಆಚರಣೆಗಳು.[೨]

ಧಾರ್ಮಿಕ ವಿಧಿ, ಫಲಾಪೇಕ್ಷೆ ಇವು ಆಚರಣೆಗಳ ಪ್ರಮುಖ ಆಶಯಗಳು. ಒಬ್ಬ ವ್ಯಕ್ತಿಗಿಂತ ಒಂದು ಜನಾಂಗದ ಜೀವನ ವಿಧಾನದ ಬೇಡಿಕೆಯ ಫಲವಾಗಿ ಆಚರಣೆಗಳು ಹುಟ್ಟುತ್ತವೆ. ಪ್ರಕೃತಿ ಹಾಗೂ ಮಾನವ ದೇಹ ಮತ್ತು ಮನಸ್ಸುಗಳ ಬದಲಾವಣೆಗೂ ಆಚರಣೆಗಳಿಗೂ ನೇರ ಸಂಬಂಧವಿದೆ. ಸಸ್ಯ, ಪ್ರಾಣಿ, ದೇವರುಗಳು ಆಚರಣೆಯ ಸೃಷ್ಟಿಗೆ ದಾರಿ ಮಾಡಿವೆ. ಮನುಷ್ಯನ ಚಟುವಟಿಕೆಗಳಿಗೂ ಆಚರಣೆಗಳ ಆಶಯಗಳಿಗೂ ನಿಕಟವಾದ ಸಂಬಂಧಗಳಿವೆ.

ಜನಪದರ ಪ್ರಮುಖ ನಂಬಿಕೆಗಳು ಅವರ ಆಚರಣೆಗಳಿಂದ ವ್ಯಕ್ತವಾಗುತ್ತವೆ. ಸಾಮಾನ್ಯವಾಗಿ ತಮ್ಮ ನಿತ್ಯಜೀವನದ ಆಗುಹೋಗುಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದಕ್ಕೂ ದೈವವೇ ಕಾರಣ ಎಂಬ ನಂಬಿಕೆಗಳಿರುತ್ತವೆ. ಹೀಗಾಗಿ ಅವರು ತಮ್ಮ ದೈವಕ್ಕೆ ಶ್ರದ್ಧಾಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಅವರ ಆಚರಣೆಗಳು ದೈವತ್ವ ಹಾಗೂ ವ್ಯವಸ್ಥೆ ಎರಡನ್ನು ಸಮೀಕರಿಸಿಕೊಂಡಿರುವುದನ್ನು ನಾವು ಕಾಣಲು ಸಾಧ್ಯವಿದೆ. ಯಾವುದೇ ಆಚರಣೆ ಇದ್ದರೂ ಅದಕ್ಕೆ ದೈವಿಕ ಕಾರಣ ಅಥವಾ ಪ್ರಾಕೃತಿಕ ಕಾರಣವಿರುತ್ತದೆ. ಈ ನಿಟ್ಟಿನಲ್ಲಿ ಬೀರಪ್ಪನ ಕ್ಷೇತ್ರಗಳ ಜಾತ್ರೆಗಳು, ಉತ್ಸವಗಳು, ನಂಬಿಕೆಗಳು, ಆಚರಣೆಗಳಿಗೆ ಮಹತ್ವ ನೀಡಿರುವುದನ್ನು ಕಾಣಬಹುದು.

ವ್ಯಕ್ತಿಯು ಸಾಮಾಜಿಕ ಮತ್ತು ಧಾರ್ಮಿಕ ಜೀವನದಲ್ಲಿ ಅನುಸರಿಸಬೇಕಾದ ನಿಯಮ, ಕಟ್ಟುಪಾಡು ಸಂಪ್ರದಾಯಗಳನ್ನು ಆಚಾರ ಎನ್ನುತ್ತಾರೆ. ಒಂದು ಜನಾಂಗ ಅಥವಾ ಪಂಗಡದಲ್ಲಿ ಸಾಂಪ್ರದಾಯಿಕವಾಗಿ ಬೆಳೆದು ಬಂದಿರುವ ಆಚಾರ ವಿಚಾರಗಳನ್ನು ವೈಯಕ್ತಿಕ ಎನ್ನುವುದಕ್ಕಿಂತ ಸಾಮಾಜಿಕ ಅನುಷ್ಠಾನಗಳು ಎನ್ನಬಹುದು. ನಂಬಿಕೆ ಮತ್ತು ಆಚರಣೆಗಳು ಧರ್ಮದ ಪ್ರಧಾನ ಅಂಶಗಳು. ಪ್ರತಿಯೊಂದು ಧರ್ಮವೂ ಅಮಾನುಷ ಶಕ್ತಿಯನ್ನು ಕುರಿತು ತಾಳಿದ ಮಾನಸಿಕ ಧೋರಣೆಗಳು ಅವಿರ್ಭಾವವಾಗುವುದು ನಂಬಿಕೆಗಳು ಹಾಗೂ ಆಚರಣೆಗಳ ಮೇಲೆಯೇ ಎಂದು ಹೇಳಬಹುದು. ನಂಬಿಕೆಗಳು ಭಾವನೆ ಹಾಗೂ ಆಲೋಚನೆಗಳ ರೂಪದಲ್ಲಿರುತ್ತವೆ. ಸಾಮಾನ್ಯವಾಗಿ ಆಚರಣೆಗಳು ಕ್ರಿಯಾರೂಪದಲ್ಲಿರುತ್ತವೆ. ನಂಬಿಕೆಗಳು, ಆಚರಣೆಗಳು ನಿರಂತರತೆಯನ್ನು ಕಾಪಾಡಿಕೊಂಡು ಹೋಗಲು ಸಹಕಾರ ನೀಡುತ್ತವೆ. ಇವು ಒಂದೇ ನಾಣ್ಯದ ಎರಡು ಮುಖಗಳು.

ಬೀರಪ್ಪನ ಕುರಿತಾಗಿ ಇರುವ ನಂಬಿಕೆ ಹಾಗೂ ಆಚರಣೆಗಳು ವೈವಿಧ್ಯಪೂರ್ಣವಾದವುಗಳಾಗಿವೆ. ಇಲ್ಲಿ ಜಾನಪದ ಹಾಗೂ ಶಿಷ್ಟ ಅಂಶಗಳು ಮಿಳಿತವಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತವೆ. ಕುರುಬ ಜನಾಂಗ ಮೂಲತಃ ಅಲೆಮಾರಿ ಜನಾಂಗಕ್ಕೆ ಸೇರಿದ್ದಾಗಿದ್ದು ಪಶುಪಾಲನೆ ವೃತ್ತಿಗೆ ಸೇರಿದ ಸಂಸ್ಕೃತಿಯ ಸ್ಪಷ್ಟ ಚಿತ್ರಣ ನಮಗೆ ಈ ನಂಬಿಕೆ ಹಾಗೂ ಆಚರಣೆಗಳಲ್ಲಿ ಕಂಡುಬರುತ್ತದೆ. ವೀರತ್ವ, ಬೇಟೆ, ಭಂಡಾರ ಮೊದಲಾದವು ಬೇಟೆಗಾರಿಕೆಯ ಪ್ರಧಾನ ಅಂಶಗಳು. ಅದೇ ರೀತಿ ತುಪ್ಪ, ಕಂಬಳಿ, ಕೋರಿ ಮೊದಲಾದವು ಪಶುಪಾಲನೆಯ ಸಂಕೇತಗಳು. ಬೀರಪ್ಪನ ಆಚರಣೆಗಳು ಪ್ರಾಚೀನವಾದುವು. ಆ ದೇವರುಗಳು ಮಾನವರು ಸಾಧಿಸಲಾರದ್ದನ್ನು ಸಾಧಿಸಿ ತೋರಿಸಿ ಪವಾಡಪುರುಷರಾಗಿ ಕೊನೆಗೆ ದೇವರಾಗಿ ಪೂಜಾರ್ಹರಾಗಿದ್ದಾರೆ.

ನಮ್ಮ ರಾಷ್ಟ್ರದಲ್ಲಿ ಮನೆದೇವರು, ಕುಲದೇವರು, ಗ್ರಾಮದೇವರು, ನಾಡದೇವರು ಎಂದು ಇತ್ಯಾದಿಯಾಗಿ ವರ್ಗೀಕರಿಸಿ ಅವರನ್ನು ಪೂಜಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ಈ ರೀತಿಯಾಗಿ ಪ್ರತಿಯೊಂದು ಗುಂಪು ಜನಾಂಗಕ್ಕೂ ಒಬ್ಬೊಬ್ಬ ಆರಾಧ್ಯ ದೇವರಿರುವುದನ್ನು ನೋಡುತ್ತೇವೆ. ಆ ಸಮುದಾಯ ಅಥವಾ ಜನಾಂಗಕ್ಕೆ ದೇವರಾದವರು, ಅವರನ್ನು ರಕ್ಷಿಸಿ ಕಾಪಾಡಿದ ಸಂಕೇತವಾಗಿ, ಮುಂದಿನ ಸಂತತಿ ಅವರ ಅದ್ಭುತ ಲೀಲೆಗಳನ್ನು ಕೊಂಡಾಡಿ ಪುರಾಣವ್ಯಕ್ತಿಗಳನ್ನಾಗಿಸಿ, ಅವರಿಗೆ ಸಂಬಂಧಪಟ್ಟ ಪುರಾಣವನ್ನು ರಚಿಸಿಕೊಂಡು, ಅವರ ಮಹಿಮೆ

ಯನ್ನು ಕೊಂಡಾಡಿಕೊಳ್ಳುತ್ತ ತಮ್ಮ ಸಮುದಾಯದ ಮಹತ್ವವನ್ನು ಹೇಳಿಕೊಳ್ಳುತ್ತಾ ಬಂದಿರುವುದು ಸರ್ವೇಸಾಮಾನ್ಯವಾದ ಸಂಗತಿಯಾಗಿದೆ.

ಈ ನಿಟ್ಟಿನಲ್ಲಿ ಯೋಚಿಸುವುದಾದರೆ ಕರ್ನಾಟಕದ ಹಾಗೂ ನಾಡಿನ ಇತರ ಭಾಗದ ಕುರುಬರು ಅದರಲ್ಲೂ ವಿಶೇಷವಾಗಿ ಬೆಳಗಾವಿ ಜಿಲ್ಲೆಯ ಕುರುಬರ ಆರಾಧ್ಯ ದೇವರೆಂದರೆ ಬೀರದೇವರು. ಕುರುಬ ಕುಟುಂಬಗಳ ಸಂಖ್ಯೆ ಹೆಚ್ಚಿರುವ ಬೆಳಗಾವಿ ಜಿಲ್ಲೆಯ ಬಹಳಷ್ಟು ಗ್ರಾಮಗಳಲ್ಲಿ ಬೀರದೇವರ ದೇವಸ್ಥಾನಗಳಿರುವುದು ಸರ್ವೇಸಾಮಾನ್ಯ. ಈ ದೈವ ಕುರುಬರ ಆರಾಧ್ಯ ಮತ್ತು ಗ್ರಾಮದೇವರೆಂದು ಪರಿಗಣಿಸಲ್ಪಟ್ಟಿದೆ. ಕೆಲವು ಗ್ರಾಮಗಳಲ್ಲಿ ಊರ ಒಳಗೆ ಮತ್ತು ಊರ ಹೊರಗೆ ಎರಡು ದೇವಾಲಯಗಳಿರುವುದು ಕಂಡುಬರುತ್ತದೆ.

ಉದಾಹರಣೆಗೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಸೌಂದಲಗ ಹಾಗೂ ಎಕ್ಸಂಬಾ ಗ್ರಾಮಗಳು ಈ ದೇವರು ಆ ಸಮುದಾಯದ ಮೇಲೆ ಅತಿಯಾದ ಪ್ರಭಾವ ಬೀರಿರುವುದು ಅವನ ಜೀವನಚರಿತ್ರೆ ಹಾಗೂ ಡೊಳ್ಳಿನ ಹಾಡುಗಳಿಂದ ದೊರೆಯುತ್ತದೆ. ಹಾಲುಮತ ಪುರಾಣ ಹಾಗೂ ಡೊಳ್ಳಿನ ಹಾಡುಗಳ ಪ್ರಕಾರ ಕುರುಬರ ಮೂಲಪುರುಷ ಪದ್ಮಗೊಂಡ ಕುರಿಗಳ ರಕ್ಷಣೆಗೆ ಶಿವನು ಬೀರದೇವರನ್ನು ಅವನ ಜೊತೆ ಕಳುಹಿಸಿದ್ದಾನೆ. ಬೀರದೇವರು ಹಾಲುಕರೆದು ಹೈನು ಮಾಡುವುದನ್ನು ಕಲಿಸಿರುವುದಲ್ಲದೆ, ತಮಗೆ ತೊಂದರೆ ಕೊಡುತ್ತಿದ್ದ ಕೋಣಸೂರನನ್ನು ಕೊಂದು ತನ್ನ ಶಕ್ತಿ ಪ್ರದರ್ಶಿಸಿ ದೈವೀಪುರುಷನಾಗಿದ್ದಾನೆ ಎಂಬ ಗಾಢ ನಂಬಿಕೆಯಿಂದ ಈ ಸಮುದಾಯದವರು ಹಬ್ಬ, ಜಾತ್ರೆ ಉತ್ಸವಗಳಲ್ಲಿ ಆತನ ಪವಾಡವನ್ನು ಕೊಂಡಾಡುತ್ತಾರೆ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಕುರುಬರು ಕುರಿಗಳಿಗೆ ಮೇವು ನೀರು ಹುಡುಕಿಕೊಂಡು ಹೊಲ ಗದ್ದೆ, ಕಾಡು ಮೇಡುಗಳಲ್ಲಿ ಅಲೆದಾಡುವ ಸ್ಥಳಗಳಲ್ಲಿ ಬೀರದೇವರ ಮೂರ್ತಿ ಇಟ್ಟು ಪ್ರತಿದಿನ ಮುಂಜಾನೆ ನಮಸ್ಕಾರ ಮಾಡಿ ಹಣೆಯ ತುಂಬಾ ಭಂಡಾರ ಹಚ್ಚಿಕೊಳ್ಳುವುದನ್ನು ಕಾಣುತ್ತೇವೆ. ಅಮಾವಾಸ್ಯೆ, ಹುಣ್ಣಿಮೆ, ಆದಿತ್ಯವಾರ ಹಾಗೂ ಹಬ್ಬದ ದಿನಗಳಲ್ಲಿ ಎಡೆ ಮಾಡಿ ಪೂಜೆ ಸಲ್ಲಿಸುವುದನ್ನು ನೋಡಿದಾಗ ಆ ದೇವರ ಮೇಲೆ ಇವರಿಗಿರುವ ನಂಬಿಕೆ ಮತ್ತು ಅವರ ಮೇಲೆ ಬೀರದೇವರು ಬೀರಿರುವ ಪ್ರಭಾವ ಎಷ್ಟರ ಮಟ್ಟಿಗೆ ಇದೆ ಎಂಬುದು ಸ್ಪಷ್ಟವಾಗುತ್ತದೆ.

ಬೀರದೇವರು ತಮ್ಮ ಇಷ್ಟಾರ್ಥಗಳನ್ನು ಪೂರೈಸುತ್ತಾನೆಂಬ ನಂಬಿಕೆಯಿಂದ ಅವನ ಸಮೀಪ ಇರುವ ಹೆಣ್ಣುದೇವತೆಗೆ ಕುರಿಬಲಿ ಕೊಡುತ್ತಾರೆ. ಬೀರಪ್ಪನಿಗೆ ಕುರಿಬಲಿ ಮಾಂಸದ ಅಡುಗೆಯನ್ನು ಬೀರದೇವರ ಪೂಜೆಗೆ ಸಲ್ಲಿಸುವುದಿಲ್ಲ. ಈ ದೇವರನ್ನು ಗುಡಿಯಲ್ಲಿ ಪೂಜೆಗೈಯುವಾಗ ಪೂಜಾರಿ ಹಣೆಯ ಮೇಲೆ ಭಂಡಾರ ಹಚ್ಚಿಕೊಂಡು ಕೈಯಲ್ಲಿ ಭಂಡಾರದ ಚೀಲ ಹಾಕಿಕೊಂಡು ತಲೆಯ ಮೇಲೆ ಎರಡೂವರೆ ಎಡಿನ ಕಂಬಳಿ ಹಾಕಿಕೊಂಡು ದಿನಕ್ಕೆ ಎರಡು ಸಲ ಅಂದರೆ ಮುಂಜಾನೆ ಮತ್ತು ಸಾಯಂಕಾಲ ಪೂಜೆ ಮಾಡಬೇಕು. ಪೂಜೆ ಮಾಡುವುದು ಪೂಜಾರಿಗಳಿಗೆ ವಂಶಪರಂಪರೆಯಿಂದ ಬಂದಿದ್ದಾಗಿದೆ. ಇವರ ಕೈಯಲ್ಲಿ ನಾಗಬೆತ್ತ ಕಂಕುಳದಲ್ಲಿ ಭಂಡಾರ ಚೀಲ, ಹೆಗಲಮೇಲೆ ಕರಿಯ ಕಂಬಳಿ ಹಾಕಿಕೊಂಡಿರುತ್ತಾರೆ. ಭಕ್ತರು ಪೂಜಾರಿಯನ್ನು ಕಂಡ ಕೂಡಲೇ ಬೀರದೇವರೇ ಬಂದಿದ್ದಾನೆಂದು ಭಾವಿಸಿ ಕಾಲಿಗೆ ಬಿದ್ದು ನಮಸ್ಕಾರ ಮಾಡುತ್ತಾರೆ. ಪ್ರತಿಯಾಗಿ

ಪೂಜಾರಿಗಳು ಆಶೀರ್ವಾದ ಸಂಕೇತವಾಗಿ ಭಂಡಾರವನ್ನು ಹಣೆಗೆ ಹಚ್ಚುವುದನ್ನು ಕಾಣುತ್ತೇವೆ. ಕುರುಬರು ತಮ್ಮದೇ ಆದ ದೇವರನ್ನು ಸೃಷ್ಟಿಸಿಕೊಂಡು ಬಂದಂತೆ ಕಾಣುತ್ತದೆ. ಈಗಲೂ ಇವರು ಹಾಡಿ ಹೊಗಳಿ ಹಬ್ಬ, ಜಾತ್ರೆ, ಉತ್ಸವಗಳನ್ನು ನಡೆಸಿಕೊಂಡು ಬಂದಿರುವ ಪದ್ಧತಿ ಆ ಸಮುದಾಯದ ಸಂಸ್ಕೃತಿಯ ಪ್ರತೀಕವಾಗಿದೆ. ಇನ್ನೂ ಮುಂದುವರೆದು ಬೀರದೇವರ ಆಚರಣೆಗಳನ್ನು ಮೂರು ಭಾಗಗಳನ್ನು ಮಾಡಿಕೊಳ್ಳಬಹುದು.

ಬೀರಪ್ಪನ ಕುರಿತಾದ ಆಚರಣೆ, ನಂಬಿಕೆ, ಕಲೆಗಳು ಈ ಮೂರು ಪದಗಳು ಬೇರೆಯಾಗಿ ಕಂಡರೂ, ಒಂದರೊಳಗೊಂದು ಬೆರೆತು ಸಂಕೀರ್ಣ ಸ್ವರೂಪದವುಗಳಾಗಿವೆ. ಈ ಅಧ್ಯಯನದಲ್ಲಿ ಆಯಾ ದೇವರ ಆಚರಣೆಯ ಹಿನ್ನೆಲೆಯ ಚರ್ಚೆಗಿಂತ ಪ್ರಧಾನವಾಗಿ ಕಂಡುಬರುವ ಆಚರಣಾತ್ಮಕ ನೆಲೆಗಳು ನಂಬಿಕೆ, ಕಲೆಗಳನ್ನು ಐಚ್ಛಿಕವಾಗಿ ಶೋಧಿಸಲು ಪ್ರಯತ್ನಿಸಿದೆ.

ನಂಬಿಕೆ, ಆಚರಣೆಗಳನ್ನು ತೀರ ಒರಟಾಗಿ ವಿಶ್ಲೇಷಿಸಿದರೆ ಮೂಢನಂಬಿಕೆ ಎಂತಲೋ, ಅಜ್ಞಾನ ಎಂತಲೋ ವಿವರಿಸಲು ಸಾಧ್ಯವಿದೆ. ಆದರೆ ಈ ನಂಬಿಕೆ, ಆಚರಣೆಗಳಿಗೆ, ತನ್ನದೇ ಆದ ಒಂದು ಅಂತರ್ಯದ ಅರ್ಥವಿದೆ. ಈ ಅರ್ಥವನ್ನು ಶೋಧಿಸದೆ ಹೋದರೆ ಮೂಢನಂಬಿಕೆ ಎನ್ನುವಂತಹ ಜನಪ್ರಿಯ ಅಭಿಪ್ರಾಯದ ಬೆನ್ನಿಗೆ ಬೀಳುವ ಅಪಾಯವಿದೆ. ನಂಬಿಕೆ, ಆಚರಣೆಗಳಲ್ಲಿ ಜನರು ತಮ್ಮ ಬದುಕಿನ ಚೈತನ್ಯವನ್ನು ಕಂಡು ಕೊಳ್ಳುತ್ತಾರೆ. ಹೊಸ ಬದುಕಿನ ಭರವಸೆಯನ್ನು ಕಂಡುಕೊಳ್ಳುತ್ತಾರೆ. ತಮ್ಮ ಬದುಕಿನ ನೂರಾರು ತೊಡಕುಗಳಿಗೆ ಪರಿಹಾರವನ್ನು ಕಂಡುಕೊಂಡಿದ್ದಾರೆ. ಹಾಗಾಗಿ ಒಂದು ಆಚರಣಾಲೋಕ ಸಮಾಜದ ಸಂಘರ್ಷದ ಕಥನವನ್ನು ಒಡಲೊಳಗಿಟ್ಟುಕೊಂಡೇ ಜೀವಂತವಾಗಿರುತ್ತದೆ. ಈ ನೆಲೆಯಲ್ಲಿ ಆಚರಣೆ, ನಂಬಿಕೆ ಕಲೆಗಳ ಲೋಕವನ್ನು ವಿಶ್ಲೇಷಿಸಲಾಗಿದೆ.

ಆಚರಣೆ

ಮಾನವರು ತಮ್ಮ ಜೀವನ ಸಂಸ್ಕೃತಿಯಲ್ಲಿ ಆಚರಣೆಗಳಿಗೆ ಹೆಚ್ಚಿನ ಮಹತ್ವವನ್ನು ನೀಡುತ್ತಾ ಬಂದಿದ್ದಾರೆ. ದೈವಾಚರಣೆಯ ಸಂದರ್ಭದಲ್ಲಿ ಎಲ್ಲ ಸಮುದಾಯದವರೂ ಒಂದಾಗಿ ಅನೇಕ ಆಚರಣೆಗಳನ್ನು ಚಾಚೂತಪ್ಪದೆ ನಡೆಸಿಕೊಂಡು ಬರುತ್ತಿದ್ದಾರೆ. ಇದು ಮಾನವ ಸಂಸ್ಕೃತಿಯ ಅನನ್ಯತೆಯನ್ನು ಬಿಂಬಿಸುತ್ತದೆ. ಈ ಆಚರಣೆ, ವಿಧಿವಿಧಾನಗಳು ಸಮಾಜವನ್ನು ಒಂದುಗೂಡಿಸುವ, ತಿದ್ದುವ ಹಾಗೂ ವ್ಯಕ್ತಿಗಳು ಅಡ್ಡದಾರಿಗೆ ಹೋಗದಂತೆ ನಿಯಂತ್ರಿಸುವ ಸಾಮರ್ಥ್ಯವನ್ನು ಪಡೆದಿವೆ[1] ಎಂಬ ಅಭಿಪ್ರಾಯವಿದೆ. ಪ್ರಮುಖವಾಗಿ ಈ ಆಚರಣೆಗಳು ಸಮಾಜದ ಉನ್ನತ ಬೆಳವಣಿಗೆಗೆ ಸಹಕಾರಿಯಾಗಿ ನಿಲ್ಲುತ್ತವೆ. ಇಂದು ಆಧುನಿಕತೆ ನಮ್ಮನ್ನು ಎಷ್ಟು ಆವರಿಸಿದರೂ ಈ ಸಂಪ್ರದಾಯ, ಆಚರಣೆ, ವಿಧಿವಿಧಾನಗಳಿಂದ ಹೊರಬರಲಾಗಿಲ್ಲ. ಸಾಂಕೇತಿಕವಾಗಿಯಾದರೂ ನಾವು ಈ ಆಚರಣೆಯನ್ನು ಮುಂದುವರಿಸುತ್ತಾ ಬರುತ್ತಿದ್ದೇವೆ.

ಇಡೀ ಕರ್ನಾಟಕದಲ್ಲಿ ಬೀರಪ್ಪ ದೇವರ ಆರಾಧನೆ ಇಂದಿಗೂ ಜನಪ್ರಿಯವಾಗಿದೆ. ಪುರಾತನ ಇತಿಹಾಸವನ್ನು ಹೊಂದಿದೆ. ಬಹುಪಾಲು ಆಚರಣೆಗಳು ನಡೆಯುವುದು ಮಳೆಗಾಲದ ಸಂದರ್ಭದಲ್ಲಿ. ಕೃಷಿ ಚಟುವಟಿಕೆಗಳು

ಮಳೆಗಾಲದಲ್ಲಿ ಪ್ರಾರಂಭವಾಗಿ ಚಳಿಗಾಲ ಮತ್ತು ಬೇಸಿಗೆ ಕಾಲ ಬರುವ ಹೊತ್ತಿಗೆ ಮುಕ್ತಾಯವಾಗುತ್ತವೆ. ಈ ಸಂದರ್ಭದಲ್ಲಿ ಜನಸಮುದಾಯಗಳು ಹೆಚ್ಚೆಚ್ಚು ಸಂಪ್ರದಾಯ, ಆಚರಣೆಗಳನ್ನು ಮಾಡುತ್ತಾರೆ. ಇವುಗಳ ಹಿಂದಿನ ಮೂಲ ಆಶಯ ಧಾನ್ಯಸಂಪತ್ತು, ಪಶುಸಂಪತ್ತು ಸಮೃದ್ಧವಾಗಬೇಕು. ಜನ, ದನ, ಬೆಳೆಗಳು ರೋಗಮುಕ್ತವಾಗಬೇಕು. ಕಾಡುಪ್ರಾಣಿಗಳಿಂದ ತಮಗೆ ರಕ್ಷಣೆ ಸಿಗಬೇಕು. ಸಂಸಾರ, ಕೌಟುಂಬಿಕ ಜೀವನ ಸುಖಸಂತೋಷಗಳಿಂದ ತುಂಬಿರಬೇಕು. ಇಂತಹ ವಾಸ್ತವವಾದಿ ಆಶಯಗಳನ್ನು ಇಟ್ಟುಕೊಂಡೇ ಬಹುಪಾಲು ದೈವಗಳ ಆಚರಣೆಗಳು ನಡೆಯುತ್ತವೆ. ಜನಪದರು ತಾವು ಆಚರಿಸುವ ಆಚರಣೆಗಳು ಮೇಲ್ನೋಟಕ್ಕೆ ವೈಭವೀಕರಣದಿಂದ ಕೂಡಿದ್ದರೂ ಮೂಢನಂಬಿಕೆಯ ತವರುಗಳಂತೆ ಕಂಡರೂ ಅವರು ತಮ್ಮ ಭಕ್ತಿಭಾವಕ್ಕೆ ಅನುಸಾರವಾಗಿ ಚಾಚೂತಪ್ಪದೇ ಅನುಸರಿಕೊಂಡು ಬರುತ್ತಿದ್ದಾರೆ. ಇಲ್ಲಿ ಮೂಲ ಆಶಯಗಳೆಂದರೆ ದೈವಗಳು ತಮಗೆ ರಕ್ಷಣೆ ನೀಡಿ ಸುಖ ಸಂತೋಷವನ್ನು ನೀಡುವುದೇ ಆಗಿರುತ್ತದೆ.

ಜನಪದ ದೈವಗಳಿಗೆ ಸಂಬಂಧಿಸಿದ ಆಚರಣೆ ಮತ್ತು ಆರಾಧನೆಗಳಲ್ಲಿ ಅನೇಕ ವಿಸ್ಮಯಕಾರಿ ಅಂಶಗಳು ದೊರಕುತ್ತವೆ. ಪ್ರತಿಯೊಂದು ದೇವರಿಗೆ ವರ್ಷಕ್ಕೊಂದು ಹಬ್ಬ ಜರುಗುತ್ತದೆ. ಇಡೀ ವರ್ಷದಲ್ಲಿ ನಡೆಯುವ ಸಾಮಾನ್ಯ ಪೂಜೆಯ ಜೊತೆಗೆ ಹಬ್ಬದ ಸಂದರ್ಭದಲ್ಲಿ ವಿಶೇಷ ಆರಾಧನೆಗಳು ನಡೆಯುತ್ತವೆ. ಉದಾಹರಣೆಗೆ ಅಭಿಷೇಕ, ಲಕ್ಷದೀಪೋತ್ಸವ ಈ ಆರಾಧನೆಯ ಭಾಗವಾಗಿ ಅನೇಕ ಆಚರಣೆಗಳನ್ನು ಕಾಣುತ್ತೇವೆ. ಬಹುಪಾಲು ಹಬ್ಬಗಳು ಯುಗಾದಿಯಿಂದ ಪ್ರಾರಂಭವಾಗುತ್ತದೆ. ಸಾಮಾನ್ಯವಾಗಿ ಬೇಸಿಗೆಯ ಕಾಲದಲ್ಲಿ ನಡೆಯುವ ಹಬ್ಬಗಳು ಜಾಸ್ತಿ.

ಬೀರಲಿಂಗೇಶ್ವರ ಊರ ಒಳಗೆ ಮತ್ತು ಊರ ಹೊರಗೆ ಇರುವ ದೈವ. ಊರ ಒಳಗಿನ ದೇವರಿಗೆ ದಿನ ನಿತ್ಯಪೂಜೆ ನಡೆಯುತ್ತದೆ. ಊರ ಹೊರಗಿನ ದೇವರುಗಳಿಗೆ ಪೂಜೆಗಳು ನಡೆಯುವುದು ಕಡಿಮೆ. ಇದಕ್ಕೆ ಉದಾಹರಣೆಯಾಗಿ ಆಲೂರು, ಕೊಡಿದೊಡ್ಡಿ, ಉಮ್ಮಡಹಳ್ಳಿ, ಮಂಡ್ಯಜಿಲ್ಲೆ, ಬೀರಲಿಂಗೇಶ್ವರ ದೇವರ ಗುಡಿಗಳಲ್ಲಿ ಕಾಣಬಹುದು. ಇಲ್ಲಿ ಸಂಪ್ರದಾಯ, ಆಚರಣೆಗಳು ನಡೆಯುತ್ತವೆ.

ಸಾಮೂಹಿಕ ನೆಲೆಯಲ್ಲಿ ನಡೆಯುವ ಆಚರಣೆಗಳು ಬಹುಪಾಲು ಹಬ್ಬಹರಿದಿನಗಳಲ್ಲಿ ಜಾತ್ರೆಗಳಲ್ಲಿ, ಅಮಾವಾಸ್ಯೆ ಹುಣ್ಣಿಮೆಯಂತಹ ಸಂದರ್ಭಗಳಲ್ಲಿ ನಡೆಯುತ್ತವೆ. ಪ್ರತಿಯೊಂದು ಆರಾಧನೆ, ಆಚರಣೆ ಕೂಡ ಆಯಾ ಕಾಲ ಸಂದರ್ಭದ ಹಿನ್ನೆಲೆಯಲ್ಲಿ ವಿಶಿಷ್ಟವಾದ ಅರ್ಥಪೂರ್ಣತೆಯನ್ನು ಪಡೆಯುತ್ತವೆ. ಆಚರಣೆಗಳುನ್ನು ಇಲ್ಲಿ ಒಂದು ಸಂದರ್ಭದಲ್ಲಿ ಹೀನಾಯವಾಗಿ ಕಾಣಬಹುದು. ದೇವೇಂದ್ರಕುಮಾರ ಹಕಾರಿಯವರು ಹೇಳುವಂತೆ ಹಬ್ಬ ಮುಖ್ಯವಾಗಿ ಪ್ರತಿ ಜನಪದ ಕುಲದೇವರ ಆರಾಧನೆಯಾಗಿದ್ದು ಅದು ಕೌಟುಂಬಿಕ ವಲಯಕ್ಕೆ ಸೀಮಿತವಾಗುವಂತಹದು. ಆದರೆ ಜಾತ್ರೆ ಕುಲದೇವರುಗಳ ಉತ್ಸವವಾಗಿದ್ದು, ಕೌಟುಂಬಿಕ ಪರಧಿಯನ್ನು ದಾಟಿ ಸಾಮಾಜಿಕ ವಲಯದಲ್ಲಿ ವ್ಯವಹರಿಸುವಂತಹವು[4] ಎನ್ನುವ ಮಾತು ಅರ್ಥಪೂರ್ಣವೆನಿಸುತ್ತದೆ.

ಪ್ರಮುಖವಾಗಿ ಈ ಆಚರಣೆಗಳು ಆಯಾ ದೈವಗಳನ್ನು ಆಗಾಗ ಜಾಗೃತಾವಸ್ಥೆಗೆ ತರುವ ಪ್ರಯತ್ನಗಳೇ ಆಗಿವೆ. ಅಭಿಷೇಕ, ಎಲೆಪೂಜೆ, ಹೂವು, ಬಲಿಯಂತಹ ಆರಾಧನೆ ವಿಧಿಗಳಲ್ಲದೇ ಸ್ವಚ್ಛತೆಯು ಪ್ರತೀಕಗಳಾಗಿ

ಕಂಡುಬರುತ್ತದೆ. ಆಧುನಿಕ ಸಂದರ್ಭದಲ್ಲಿ ಪ್ರತಿಷ್ಠೆಯ ಪ್ರತೀಕವಾಗಿ ಈ ವಿಧಿವಿಧಾನಗಳು ನಡೆಯುತ್ತವೆ. ಉದಾಹರಣೆಗೆ ಮಂಡ್ಯ ಜಿಲ್ಲೆಯ ಕೊಡಿದೊಡ್ಡಿ, ಹೊಸೂರು, ಆಲೂರು, ಸಾತನೂರು, ಉಮ್ಮಡಹಳ್ಳಿ, ಬೆಂಗಳೂರು ಸಂಪಿಗೆಹಳ್ಳಿ, ರಾಣಾಸಿಂಗಪೇಟೆ, ಬೀರಪ್ಪನಿಗೆ ಆಗಾಗ ಹೋಮ, ಹವನ, ಪೂಜೆ, ಅಭಿಷೇಕ, ಹೂ ಪೂಜೆ ನಡೆಯುತ್ತವೆ. ಇಲ್ಲಿ ಕುರುಬ ಮನೆತನದವರು ಪೂಜಾರಿಗಳಿದ್ದರೂ ಇಂತಹ ಕಾರ್ಯಗಳಲ್ಲಿ ಒಡೆಯರು ಹೆಚ್ಚಾಗಿ ಭಾಗವಹಿಸುತ್ತಾರೆ. ಒಡೆಯರ ಮನೆತನದವರು ಹೆಚ್ಚು ಹೆಚ್ಚಾಗಿ ಈ ಪೂಜೆಗಳನ್ನು ಏರ್ಪಡಿಸುವುದನ್ನು ಕಾಣಬಹುದಾಗಿದೆ. ಜಿಲ್ಲೆಯ ಹಲವಾರು ಕಡೆಗಳಲ್ಲಿ ಈ ರೀತಿಯ ಕಾರ್ಯಗಳು ನಡೆಯುತ್ತಿರುವುದನ್ನು ಕಾಣುತ್ತೇವೆ. ಸಾಮೂಹಿಕ ನೆಲೆಯಲ್ಲಿ ಆಚರಣೆಗೊಳಪಡುವ ವಿಧಿವಿಧಾನಗಳು ಜನರ ಮನಸ್ಸನ್ನು ಕ್ರೀಯಾಶೀಲವಾಗಿರುವಂತೆ ಮತ್ತು ಮನುಷ್ಯ ಸಂಬಂಧಗಳನ್ನು ಪುನರ್ ಪ್ರತಿಷ್ಠಾಪಿಸುವ ಕೆಲಸವನ್ನು ಮಾಡುವ ಸಂಗತಿಗಳೇ ಆಗಿವೇ. ಅನೇಕ ಬೀರಪ್ಪನ ದೇವಸ್ಥಾನಗಳಲ್ಲಿ ಹಲವಾರು ವಿಶಿಷ್ಟ ಆಚರಣೆಗಳು ಕಂಡುಬರುತ್ತವೆ. ಮೀಸಲು ಆಚರಣೆ, ಗೂಡೆ ಆಚರಣೆ, ದೀಪದ ಆಚರಣೆ, ಅಲಗು ಹಾಕಿಕೊಳ್ಳುವುದು, ಗಾವು ಸಿಗಿಯುವುದು, ಕರಿಕಟ್ಟುವುದು, ಊರಾಡುವುದು, ಈರೂಟಿ, ಓಕುಳಿ ಮತ್ತು ಪತ್ರಿಕೌಲು ಕೇಳುವುದು ಹೀಗೆ ಅನೇಕ ಆಚರಣೆಗಳು ಕಂಡುಬರುತ್ತವೆ. ಬೆಳಗಾವಿ ಜಿಲ್ಲೆ ಎಕ್ಸಂಭಾ ಬೀರಪ್ಪನ ಜಾತ್ರೆಯಲ್ಲಿ ತೆಂಗಿನಕಾಯಿಯನ್ನು ವಿಶೇಷವಾಗಿ ಎಸೆಯುವುದು ಇದಕ್ಕೆ ತೆಂಗಿನಕಾಯಿ ಪವಾಡ ಎಂದು ಕರೆಯುತ್ತಾರೆ. ನಾಗತಾಣ ಬೀರಲಿಂಗೇಶ್ವರ ಜಾತ್ರೆಯಲ್ಲಿ ಚೌಕಿ ಹೊರುವುದು, ಅದೇ ರೀತಿ ದೊಡ್ಡದಾದ ಕಟ್ಟೆಯ ಮೇಲೆ ನಿಂತು ಹೇಳಿಕೆ ನುಡಿಯುವುದು. ಹೀಗೆ ಅನೇಕ ಆಚರಣೆಗಳು ಚಾಲ್ತಿಯಲ್ಲಿದ್ದು ಪ್ರಧಾನ ಕೃಷಿ ಮತ್ತು ಹೈನುಗಾರಿಕೆ ಸಂಪ್ರದಾಯ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕದಲ್ಲಿ ಬೀರಪ್ಪನ ಅನೇಕ ಆಚರಣೆಗಳು ನಡೆಯುವುದು ಕಂಡುಬರುತ್ತದೆ.

ಬೀರಪ್ಪನ ಬಗ್ಗೆ ಅಧ್ಯಯನ ಮಾಡಲು ಆಚರಣೆ, ಹರಕೆಗಳು ಆಧಾರ. ಆಚರಣೆ ಕಡ್ಡಾಯವಾದರೆ ಹರಕೆಯು ಹರಿಸಿಕೊಂಡವರನ್ನು ಮಾತ್ರ ಒಳಗೊಳ್ಳುತ್ತದೆ. ಆಚರಣೆ ಸಾಮಾಜಿಕವಾದರೆ ಹರಕೆ ವೈಯಕ್ತಿಕ ವಾದುದು. ಹರಕೆ ಬಹಳ ಸಲ ಆಚರಣೆ ರೂಪದಲ್ಲೇ ನಡೆಯುತ್ತದೆ.

ನಾಗತಾಣ, ಕೊಣ್ಣೂರು, ಅಲಕನೂರು, ಎಕ್ಸಂಭಾ, ದಾವಣಗೆರೆ, ಮಂಡ್ಯ, ಬೆಂಗಳೂರು ಮೈಸೂರು ಬೆಳಗಾವಿ ಇನ್ನೂ ಮುಂತಾದ ಬೀರಲಿಂಗೇಶ್ವರ ಜಾತ್ರೆಯಲ್ಲಿ ನವರಾತ್ರಿ ಉತ್ಸವಗಳು ವಿಶೇಷವಾಗಿ ನಡೆಯುತ್ತವೆ. ಒಂಬತ್ತು ದಿನಗಳ ಕಾಲ ನವಗ್ರಹ ಮತ್ತು ಕಳಶ ಸ್ಥಾಪನೆ, ಬೀರಪ್ಪನ ಡೊಳ್ಳಿನ ಹಾಡುಗಳು, ಪುರಾಣಗಳು, ಮಹಾನವಮಿ ಮತ್ತು ಕಾರ್ತಿಕ ಮಾಸದಲ್ಲಿ ದೀಪೋತ್ಸವ ಕಾರ್ಯಕ್ರಮಗಳು ನಡೆಯುತ್ತವೆ. ಇಲ್ಲಿ ಬೇರೆಬೇರೆ ಊರುಗಳಿಂದ ಜನರು ಜಾತ್ರೆಗೆ ಆಗಮಿಸುತ್ತಾರೆ. ಇಲ್ಲಿ ನಡೆಯುವ ಪೂಜೆ, ಉತ್ಸವಗಳು, ಪಶುಪಾಲನಾ ಸಂಸ್ಕೃತಿಗೆ ಪ್ರತೀಕವಾಗಿವೆ. ಜನಪದ ಸಂಸ್ಕೃತಿಯ ಆಚರಣೆಗೆ ಬೆನ್ನೆಲುಬಾಗಿವೆ. ಆಚರಣೆ ಇಲ್ಲದೇ ಯಾವ ದೈವದ ಅಸ್ತಿತ್ವವೂ ಸಾಧ್ಯವಿಲ್ಲ. ಈ ಆಚರಣೆ ನಿರ್ದಿಷ್ಟ ಕಾಲದಲ್ಲಿ ನಿರ್ದಿಷ್ಟ ಭಕ್ತಿಯಿಂದಲೇ ಆಗಬೇಕಾದುದು ದೇವತೆಗೂ ಸಮಾಜಕ್ಕೂ ಇರುವ ಸಂಬಂಧ ಅಭಿನಯಗೊಳ್ಳುವ ಕ್ರಮದ ವಿವರಗಳೇ ಆಚರಣೆಗಳು. ಇವು

ನಂಬಿಕೆಯ ಆಚರಣೆಯನ್ನು ಮುಂದುವರಿಸಿಕೊಂಡು ಹೋಗುವಂತೆ ಮಾಡುತ್ತವೆ. ಆಚರಣೆ ಹುಟ್ಟುವ ಮುನ್ನ ಅಥವಾ ನಂತರ ಪುರಾಣಗಳು ಹುಟ್ಟಿಕೊಳ್ಳುತ್ತವೆ. ಪುರಾಣಕಥೆ ಮರೆತುಹೋದ ಸಂದರ್ಭದಲ್ಲಿ ಯಾವುದೇ ಆತಂಕವಿಲ್ಲದೇ ಆಚರಣೆ ಮುಂದುವರೆಯುತ್ತಾ ಹೋಗುವುದನ್ನು ಕಾಣಬಹುದು.[೫]

ಧಾರ್ಮಿಕ ಆಚರಣೆಗಳು

ಶೈವ ಸಂಪ್ರದಾಯಕ್ಕೆ ಸೇರಿದ ಕುರುಬರ ಧಾರ್ಮಿಕ ಆಚರಣೆಗಳು ತುಂಬ ಕುತೂಹಲಕಾರಿಯಾದವುಗಳು ಮತ್ತು ವೈಶಿಷ್ಟ್ಯಪೂರ್ಣವಾದವುಗಳಾಗಿವೆ. ಸ್ವಭಾವತಃ ಮುಗ್ಧರಾದ ಕುರುಬರು "ದೇವರು" ಎಂಬ ಶಬ್ದ ಕಿವಿಗೆ ಬಿದ್ದರೆ ಸಾಕು ಕೂಡಲೇ ನಂಬಿ ನಡೆಯುವವರು. ಅಪನಂಬಿಕೆಗೆ ಅಲ್ಲಿ ಆಸ್ಪದವೇ ಇಲ್ಲ. ಭರಮದೇವ, ಬೀರದೇವ, ಮಾಳಿಂಗರಾಯ, ಕರಿಸಿದ್ದ, ಅಮೋಘಸಿದ್ಧ, ಮೈಲಾರಲಿಂಗ, ಕೆಂಚರಾಯ, ಇಟ್ಟಪ್ಪ, ಮಾಯವ್ವ ಮುಂತಾದ ದೇವತೆಗಳ ಆರಾಧಕರಾಗಿರುವ ಇವರಿಗೆ "ಪೂಜಾರಿಗಳು" ಎಂಬ ಅನ್ವರ್ಥಕ ನಾಮವು ಬಂದಿದೆ. ಏಕೆಂದರೆ ಉತ್ತರ ಕರ್ನಾಟಕದಲ್ಲಿ ಕುರುಬರನ್ನು ಪೂಜಾರಿಗಳೆಂದೇ ಕರೆಯುವುದು ವಾಡಿಕೆಯಲ್ಲಿದೆ. ವಿಚಾರವಂಥರಿಗೆ ಕುರುಬರ ಧಾರ್ಮಿಕ ಆಚರಣೆಗಳು ಮೌಢ್ಯತೆಯಿಂದ ಕೂಡಿರುವಂಥವುಗಳು ಎಂದು ಅನಿಸಬಹುದಾರೂ ದೇವರ ಮೇಲಿನ ಅವರ ಭಕ್ತಿ, ಶ್ರದ್ಧೆ, ನಿಷ್ಠೆಗಳು ಅನಾವಶ್ಯವಾದವುಗಳಾಗಿವೆ ಎಂಬುದರಲ್ಲಿ ಎರಡು ಮಾತಿಲ್ಲ. "ಉಪಾಸಿಸಲ್ಕೆ ಕಾಲಾಂತರಕ್ಕೆ ಕಲ್ಲುಂಕೂಡ ಈಶ್ವರ ಕೃಪೆಗೆಯವಿರ್ಕುಮ" ಎಂಬ ಕವಿ ಕುವೆಂಪು ಅವರ ವಾಣಿಯಂತೆ "ಕಲ್ಲನ್ನೇ ಈಶ್ವರ"(ಬೀರೇಶ್ವರ)ನೆಂದು, ಕುರಿಯ ಹಿಕ್ಕೆಯನ್ನೇ 'ಲಿಂಗ' (ಬೀರಲಿಂಗ)ನೆಂದು ನಂಬಿ ಆರಾಧಿಸಿ ಈಶ್ವರನ ಕೃಪೆಯನ್ನು ಪಡೆದವರು ಇವರಾಗಿದ್ದಾರೆ. ಹೀಗೆ ಅನುಪಮವಾದ ದೈವಭಕ್ತರು, ಸದಾಚಾರಿಗಳು, ಸತ್ಯಶುದ್ಧರು, ಕಪಟವರಿಯದ ಮುಗ್ಧ ಹೃದಯದವರೂ ಆದ ಇವರು ತಮ್ಮ ಸರಳವಾದ ನಡೆನುಡಿಗಳಿಂದ ಇತರ ಜನಾಂಗದವರಿಗೆ ಮಾದರಿಯಾಗಿದ್ದಾರೆ. ಅದಕ್ಕಾಗಿಯೇ ಇಂತಹ ಕುರುಬರು ಬಂದರೆಂದರೆ ದೇವರೇ ಬಂದಂತೆ ಎಂಬ ನಂಬಿಕೆಯು ನಮ್ಮಲ್ಲಿ ಇದೆ. ಅಂತೆಯೇ ಈ ಜನಾಂಗದ ಪೂರ್ವಜರು ಕಂಬಳಿ ಬೀಸಿ ಮಳೆ ತರುತ್ತಿದ್ದರಂತೆ. ಪ್ರತಿಯೊಂದು ಶುಭಕಾರ್ಯಗಳಿಗೆ ಕುರುಬನೇ ಮೊದಲು. ಉದಾಹರಣೆಗೆ ಯುಗಾದಿ ಪಾಡ್ಯಕ್ಕೆ ಕುರುಬನ ಕುಂಟೆ ಉಳಲು ಮುಂದಾದರೆ ಬೆಳೆ ಹುಲುಸು, ವ್ಯಾಪಾರದಲ್ಲಿ ಕುರುಬನ ಬೋಣಿಗೆಯಾದರೆ ವ್ಯಾಪಾರ ಲಾಭದಾಯಕ, ಮೋಜುಮಜಲಿಗೆ ಕುರುಬನೇ ಮುಂದಾಗಬೇಕು. ಇತ್ತೀಚೆಗೆ ಚುನಾವಣೆಗೆ ನಿಂತ ಅಭ್ಯರ್ಥಿಗಳು ಕುರುಬರಿಂದಲೇ ಮತಪೆಟ್ಟಿಗೆಯನ್ನು ಪೂಜಿಸಿ ಅವನಿಂದಲೇ ಮೊದಲು ಮತದಾನ ಮಾಡಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ. ಹೀಗೆ ಸಮಾಜದಲ್ಲಿ ಕುರುಬರಿಗೆ ಅಗ್ರಸ್ಥಾನ ಕಲ್ಪಿಸಿಕೊಟ್ಟಿದ್ದನ್ನು ಇಂದೂ ಕಾಣಬಹುದಾಗಿದೆ. ಇದಕ್ಕೆಲ್ಲ ಕಾರಣ ಅವರ ಕಪಟವರಿಯದ ಮುಗ್ಧ ಮುನಸ್ಸು. ಇಂತ ಧಾರ್ಮಿಕ ಪರಂಪರೆಯನ್ನು ಹೊಂದಿದ ಕುರುಬರ ಕೆಲವು ಮುಖ್ಯವಾದ ಆಚರಣೆಗಳನ್ನು ಮಾತ್ರ ಇಲ್ಲಿ ಪರಿಚಯಿಸಲಾಗುವುದು. ಕುರುಬರ ಆಚರಣೆ ಎನ್ನುವುದಕ್ಕಿಂತ ಬೀರದೇವರ ಆಚರಣೆ ಎಂದೇ ಹೇಳಬಹುದು".[೬]

ಕುರುಬರು ಬೀರೇಶ್ವರನನ್ನು ತಮ್ಮ ಕುಲದೇವರನ್ನಾಗಿ ಮಾಡಿಕೊಂಡು ಅತ್ಯಂತ ಶ್ರದ್ಧೆ, ಭಕ್ತಿಗಳಿಂದ ಆದಿಕಾಲದಿಂದಲೂ ಆರಾಧಿಸಿಕೊಂಡು ಬಂದಿದ್ದಾರೆ. ಬೀರಲಿಂಗೇಶ್ವರ, ಬೀರೇಶ್ವರ, ಕರಿಸಿದ್ಧೇಶ್ವರ, ಶಿವಸಿದ್ಧ

ಬೀರೇಶ, ಬೀರಪ್ಪ, ಬೀರೇದೇವರು ಎಂದು ಮುಂತಾದ ರೀತಿಯಲ್ಲಿ ಕರೆಯುತ್ತಿರುವುದನ್ನು ಕಾಣುತ್ತೇವೆ. ಕುರುಬರ ಕುಲದೇವರಾದ ಬೀರದೇವರ ಗುಡಿಗಳು ಕುರುಬರ ನೆಲೆಗಳಲ್ಲಿ ಇರುವುದನ್ನು ಸಾಮಾನ್ಯವಾಗಿ ಕಾಣಬಹುದಾಗಿದೆ. ಇಂಥ ದೇವಾಲಯಗಳಲ್ಲಿ ಚಿಕ್ಕದಾದ ಕಟ್ಟೆಯಾಕಾರದ ಗುಡಿಗಳೂ ಇವೆ. ವಿಜಯನಗರದ ವಾಸ್ತುಶೈಲಿಯಲ್ಲಿ ನಿರ್ಮಿತವಾದ ದೊಡ್ಡ ದೇವಾಲಯಗಳೂ ಇವೆ. ಆ ಎಲ್ಲ ದೇವಾಲಯಗಳ ಸಂಪ್ರದಾಯ, ಆಚರಣೆ, ಜಾತ್ರೆ ಮತ್ತು ವೈಶಿಷ್ಟ್ಯತೆಗಳನ್ನು ವಿವರಿಸಲಾಗುವುದು.

ಬೀರೇಶ್ವರನು ನರಸಿಂಹನನ್ನು(ವಿಷ್ಣು) ಮತ್ತು ಕೋಣಾಸುರನನ್ನು ಸಂಹರಿಸಿರುವುದರ ಸಾಂಕೇತಿಕತೆಯನ್ನು ಸೂಚಿಸುವಂತಹ ಆಚರಣೆಯೊಂದು ಈಗಲೂ ಕುರುಬರಲ್ಲಿ ಉಳಿದುಕೊಂಡು ಬಂದಿರುವುದು ಕಂಡುಬರುತ್ತದೆ. ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ಬೀರದೇವರ ತೋಪಿನ ಜಾತ್ರೆಗಳು ಜರುಗುತ್ತವೆ. ಈ ಜಾತ್ರೆಗಳಲ್ಲಿ 'ಈರಗಾರರು' ಎಂಬ ಬೀರಪ್ಪನ ಭಕ್ತರು "ಹಲ್ಮರಿಸಿಗಿಯುವ" (ಗಾವು ಜಿಗಿಯುವುದು) ಅಂದರೆ ಹಲ್ಲಿನಿಂದ ಕುರಿಯನ್ನು ಸೀಳಿ ಹಾಕುವ ರೌದ್ರವಾದ ಆಚರಣೆಯೊಂದು ಈಗಲೂ ಅಸ್ತಿತ್ವದಲ್ಲಿದೆ. ಒಟ್ಟಿನಲ್ಲಿ ಸಾಂಸ್ಕೃತಿಕ ಧಾರ್ಮಿಕ ಸಂಘರ್ಷದ ಸಂದರ್ಭದಲ್ಲಿ ಬೀರೇಶ್ವರನ ಹುಟ್ಟು ಆದಂತೆ ಕಾಣಿಸುತ್ತದೆ. ಆ ಮೂಲಕ ಪರಮತದ ಉಪಟಳದಿಂದ ಸ್ವಮತವನ್ನು ರಕ್ಷಿಸಿದ ಹಾಗೂ ಕೋಣಾಸುರನ ಹಾವಳಿಯಿಂದ ಕುರುಬರನ್ನು ಅವರ ಸಂಪತ್ತಾದ ಕುರಿಗಳನ್ನು ಸಂರಕ್ಷಿಸಿರುವುದಕ್ಕಾಗಿಯೇ ಕುರುಬರ ಕೃತಜ್ಞತೆಯಿದೆ. ಬೀರೇಶ್ವರನ್ನು ತಮ್ಮ ಕುಲದೇವರನ್ನಾಗಿ ಮಾಡಿಕೊಂಡು ಶ್ರದ್ಧೆ ಭಕ್ತಿಗಳಿಂದ ಪೂಜಿಸಿಕೊಂಡು ಬಂದಂತೆ ತೋರುತ್ತದೆ.

ಈ ಆರಾಧನೆಯನ್ನು ಕುರುಬರು ಎಂದಿನಿಂದ ಮಾಡಿಕೊಂಡು ಬಂದಿದ್ದಾರೆ ಎಂದು ಇದುಮಿತ್ಥಂ ಎಂದು ಹೇಳುವುದು ಕಷ್ಟ. ಆದಿಕಾಲದಿಂದಲೇ ಬೀರದೇವರನ್ನು ತಮ್ಮ ಕುಲದೇವರೆಂದು ಆರಾಧಿಸಿಕೊಂಡು ಬಂದಿದ್ದಾರೆ ಎಂದು ಹೇಳುತ್ತಾರೆ. ಬಸವಣ್ಣನವರು ತಮ್ಮ ಒಂದು ವಚನದಲ್ಲಿ

ಹಾಳು ಮೊರಡಿಗಳಲ್ಲಿ ಊರದಾರಿಗಳಲ್ಲಿ
....
....
ಮಾರಯ್ಯ ಬೀರಯ್ಯ ಕೇಚರಯ್ಯ ಗಾವಿಲ ಅಂತರ ವೆಂತರ
ಕಾಳಯ್ಯ ಮಾರಯ್ಯ ದೂಳಯ್ಯ ಕೇತಯ್ಯಾಗಳೆಂಬ ನೂರು ಮಡಕೆಗೆ
ನಮ್ಮ ಕೂಡಲ ಸಂಗಮದೇವ ಶರಣೆಂಬುದೊಂದು ದಡಿಸಾಲದೆ?[2]

ತಮ್ಮ ಕಾಲಾವಧಿಗಿಂತ ಎಷ್ಟೋ ಹಿಂದಿನಿಂದಲೂ ಸಾಮಾನ್ಯ ಜನರಿಂದ ಪೂಜೆಗೊಳ್ಳಲಿರುವ ಮಾರಯ್ಯ ಬೀರಯ್ಯ, ಕೇಚರಯ್ಯ, ಕಾಳಯ್ಯ, ಮಾರಯ್ಯ, ಕೇತಯ್ಯ ಮುಂತಾದ ಕ್ಷುದ್ರ ದೇವತೆಗಳನ್ನು ಉಲ್ಲೇಖಿಸಿದ್ದಾರೆ. ಅಂದರೆ ೧೨ನೆಯ ಶತಮಾನಕ್ಕಿಂತಲೂ ಪೂರ್ವದಿಂದಲೇ ಬೀರದೇವರು ಕುರುಬರ ಕುಲದೇವರಾಗಿ ಪೂಜೆಗೊಳ್ಳು ತ್ತಿದ್ದನೆಂಬುದು ನಿರ್ವಿವಾದ. ಮಹಾರಾಷ್ಟ್ರದಲ್ಲಿ ಕ್ರಿ.ಶ. ೬ನೆಯ ಶತಮಾನದಲ್ಲಿಯೇ ಖಂಡೋಬಾ ಬೀರೋಬಾ ಆರಾಧನೆಗೊಳ್ಳುತ್ತಿರುವ ಬಗ್ಗೆ ದಾಖಲೆಗಳಿವೆ. ಹೀಗೆ ನಾಲ್ಕನೆಯ ಶತಮಾನದಿಂದಲೇ ಆ ಪ್ರದೇಶದಲ್ಲಿ

ಪೂಜೆಗೊಳ್ಳುತ್ತಿರುವುದರಿಂದ ಅದಕ್ಕಿಂತಲೂ ೨-೩ನೆಯ ಶತಮಾನ ಮೊದಲು ಬೀರದೇವರ ಅಸ್ತಿತ್ವ ಇರಬೇಕು. ಬೀರಪ್ಪನು ಸುಮಾರು ಕ್ರಿಸ್ತನ ಅಸುಪಾಸಿನಲ್ಲಿರಬಹುದು[೮] ಎಂಬ ಊಹಾತ್ಮಕವಾದ ಅಭಿಪ್ರಾಯವನ್ನು ಸದ್ಯಕ್ಕೆ ಒಪ್ಪಬಹುದು. ಈ ಬೀರದೇವರ ಪೂಜೆ ಉತ್ಸವ ಮತ್ತು ಜಾತ್ರೆ ಆಚರಣೆಗಳು, ನಂಬಿಕೆ ಮತ್ತು ಕಲೆಗಳ ಬಗ್ಗೆ ತಿಳಿಯೋಣ.

೧. ಪೂಜೆ-ಉತ್ಸವ ಮತ್ತು ಜಾತ್ರೆ

ಹಾಲುಮತದವರೆಂದರೆ ಬೀರದೇವರು ಬೀರದೇವರೆಂದರೆ ಹಾಲುಮತದವರು ಎಂಬ ನುಡಿಗಟ್ಟಿಗೆ ಧಾತುವಾಗುವಷ್ಟರಮಟ್ಟಿಗೆ ಬೀರೇಶ್ವರ ಪ್ರಭಾವ ಪ್ರೇರಣೆ ಈ ಜನಾಂಗದ ಮೇಲೆ ಆಗಿದೆ. ಹೀಗಾಗಿ ಕುರುಬ ಜನಾಂಗದವರಿರುವ ಕಡೆಗಳಲ್ಲಿ ಬೀರದೇವರ ದೇವಾಲಯಗಳು ಇರುವುದು ಅಷ್ಟೇ ಸಹಜವಾಗಿದೆ. ಈ ದೇವರ ಮೇಲೆ ಕುರುಬ ಜನಾಂಗದವರಿಗೆ ಎಲ್ಲಿಲ್ಲದ ಭಕ್ತಿ ಶ್ರದ್ಧೆ, ತಮ್ಮ ಹಬ್ಬ ಹರಿದಿನಗಳಲ್ಲಿ ಬೀರದೇವರ ಉತ್ಸವ ಜಾತ್ರೆಗಳನ್ನು ನಡೆಸುವುದರ ಮೂಲಕ ತಮ್ಮ ದೈವಭಕ್ತಿಯನ್ನು ಪ್ರಕಟಪಡಿಸುತ್ತಾರೆ.

ಪೂಜಾ ವಿಧಾನ : ಬೀರದೇವರ ದೇವಾಲಯಗಳಲ್ಲಿ ಸಾಮಾನ್ಯವಾಗಿ ಎರಡು ಹೊತ್ತು ಪೂಜೆ ನಡೆಯುತ್ತದೆ. ಕೆಲವು ದೇವಾಲಯಗಳಲ್ಲಿ ತ್ರಿಕಾಲ ಪೂಜೆ ನಡೆಯುತ್ತದೆ. ಉದಾಹರಣೆಗೆ ಬೆಳಗಾವಿ ಜಿಲ್ಲೆ ಎಕ್ಸಂಭಾ, ಹೊಸದುರ್ಗ ತಾಲೂಕಿನ ಶ್ರೀರಾಮಪುರ ಬೀರದೇವರಿಗೆ ತ್ರಿಕಾಲ ಪೂಜೆ ನಡೆಯುತ್ತದೆ. ಬೀರದೇವರ ಪೂಜಾ ವಿಧಿವಿಧಾನಗಳನ್ನು ನೆರವೇರಿಸುವ ವ್ಯಕ್ತಿಗಳನ್ನು ಪೂಜಾರಪ್ಪ ತಮ್ಮಡಿಗಳೆಂದು ಕರೆಯುತ್ತಾರೆ. ಇವರು ಕುರುಬರೆ ಕೆಲವು ಕಡೆ ಬೀರದೇವರಿಗೆ ಒಡೆಯರುಗಳು, ಪೂಜಾರಿಗಳು, ಲಿಂಗಾಯತರು, ಕುರುಬರು ಪೂಜೆ ಮಾಡುತ್ತಿರುವುದು ಕಂಡುಬರುತ್ತದೆ. ಉದಾಹರಣೆಗೆ ಬೆಂಗಳೂರು, ಗ್ರಾಮಾಂತರ ಜಿಲ್ಲೆಯ ಹೊಸೂರು ದೊಡ್ಡಿ, ಮಂಡ್ಯ ಜಿಲ್ಲೆಯ ಕೊಡಿದೊಡ್ಡಿ, ಸಾತನೂರು, ಆಲೂರು ಮತ್ತು ಹೊಸದುರ್ಗ ತಾಲೂಕಿನ ಸುಡಗಾಡಿನ ಪಾಳ್ಯದಲ್ಲಿರುವ ಬೀರದೇವರನ್ನು ಒಡೆಯರುಗಳೇ ಪೂಜಿಸುತ್ತಿದ್ದಾರೆ. ಬೀರದೇವರ ಪೂಜೆ ಮಾಡುವ ಪೂಜಾರಿಗಳು ತುಂಬಾ ಆಚಾರನಿಷ್ಠರಾಗಿರಬೇಕಾದುದು ಅವಶ್ಯಕವಾದುದಾಗಿದೆ. ಪ್ರತಿನಿತ್ಯ ಬೆಳಗಿನ ಜಾವ ಮತ್ತು ಸಾಯಂಕಾಲದ ಪೂಜಾಸಮಯದಲ್ಲಿ ಸ್ನಾನವನ್ನು ಮಾಡಿ ಮಡಿ ಬಟ್ಟೆಯನ್ನು ಉಟ್ಟುಕೊಂಡೇ ಪೂಜೆಯನ್ನು ಮಾಡಬೇಕು. ಪೂಜೆಗೆ ಪರಿಶುದ್ಧ ಜಲವನ್ನು ತೆಗೆದುಕೊಂಡು ಬಂದು ಮಂಗಳ ಸ್ನಾನವನ್ನು ಮಾಡಿಸಿ. ದೇವರಿಗೆ ಪತ್ರಿ ಹೂಗಳನ್ನು ಏರಿಸಿ, ದೀಪ ಧೂಪಾರಾತಿಗಳನ್ನು ಬೆಳಗಿ ಉಪ್ಪು ಇಲ್ಲದ ಸಪ್ಪೆ ಅನ್ನ, ಮಾದಲಿ, ನೆನಸಿಟ್ಟ ಹೆಸರು ಬೇಳೆ, ಕೊಬ್ಬರಿ ಇತ್ಯಾದಿಗಳನ್ನು ನೈವೇದ್ಯವಾಗಿ ಅರ್ಪಿಸುತ್ತಾರೆ. ಬೀರದೇವರು ಶುದ್ಧ ಸಸ್ಯಾಹಾರಿ ದೇವರು, ಮಾಂಸಾಹಾರ ನಡೆಯುವುದಿಲ್ಲ. ಬೀರದೇವರ ಪೂಜಾರಿಗಳು ಕೂಡ ಮದ್ಯ ಮಾಂಸವನ್ನು ಸೇವಿಸುವುದಿಲ್ಲ, ಚಪ್ಪಲಿಯನ್ನು ಮೆಟ್ಟುವುದಿಲ್ಲ ಮತ್ತು ಮಡಿ ಮೈಲಿಗೆಯಿಂದ ಅಡುಗೆಯನ್ನು ಮಾಡದೇ ಇದ್ದರೇ ಅವರು ಊಟವನ್ನು ಸಹ ಮಾಡುವುದಿಲ್ಲ. ಕುರುಬರೂ ಕೂಡ ಪ್ರತಿನಿತ್ಯ ಸ್ನಾನವನ್ನು ಮುಗಿಸಿ ಲಗುಬಗೆಯಿಂದ ದೇವಸ್ಥಾನಕ್ಕೆ ಬಂದು ದೇವರಿಗೆ ನಮಿಸಿ ಪೂಜಾರಿಯಿಂದ ತೀರ್ಥಪ್ರಸಾದವನ್ನು ಸ್ವೀಕರಿಸಿ ತಮ್ಮ ಭಯಭಕ್ತಿಯನ್ನು ತೋರ್ಪಡಿಸುತ್ತಾರೆ.

ಬೀರದೇವರ ಪಲ್ಲಕ್ಕಿ ಉತ್ಸವ ಮತ್ತು ಜಾತ್ರೆಗಳು ವಿಶೇಷವಾಗಿ ದೀಪಾವಳಿ, ಮಹಾನವಮಿ, ಮಹಾಶಿವರಾತ್ರಿ, ಯುಗಾದಿಯ ಸಂದರ್ಭದಲ್ಲಿ ಏರ್ಪಾಡಾಗಿರುತ್ತವೆ. ದೀಪಾವಳಿ ಮತ್ತು ಯುಗಾದಿಯ ಪಾಡ್ಯದೆಂದು ಬೀರದೇವರ ಪಲ್ಲಕ್ಕಿಗಳು ಹಿರಿಹೊಳೆಯ ಸ್ನಾನಕ್ಕೆ ಹೋಗುವುದು ಸಾಮಾನ್ಯವಾಗಿ ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತವೆ. ಹಿರಿಹೊಳಿಯ ಸ್ನಾನವನ್ನು ಮಾಡಿಸಿ ವಿಶೇಷ ಪೂಜೆಯನ್ನು ಮಾಡಿಸಿಕೊಂಡು ದೇವರನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ಉದಾಹರಣೆಗೆ ಉತ್ಸವಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಇಲ್ಲವೇ ತೇರಿನಲ್ಲಿಟ್ಟು ಜಗ್ಗುವರು. ತೇರಿಗೆ ಆಧ್ಯಾತ್ಮಿಕ ಸಂಕೇತವು ಬಂದಿದೆ. ತೇರು ದೇಹಕ್ಕೆ ಪ್ರತೀಕ. ಸ್ಥೂಲ ಸೂಕ್ಷ್ಮ ಕಾರಣ ಶರೀರಗಳಿಂದ ಕೂಡಿದೆ. ದೇಹದಂತಿರುವ ಈ ತೇರಿಗೂ ಮೂರು ಭಾಗಗಳು ಇರುತ್ತವೆ. ಮಾನವ ಜೀವನದ ಪ್ರತೀಕವಾಗಿ ಈ ತೇರು ಉತ್ಸವ ನಡೆಯುತ್ತದೆ. ತೇರು ಉತ್ಸವಕ್ಕೆ ರಥೋತ್ಸವ ಎಂದು ಕರೆಯುತ್ತಾರೆ.

ಆಯಾ ದೇವರ ಹಬ್ಬಕ್ಕೆ ಮಾರನೆಯ ದಿನ ಅಥವಾ ಅದೇ ದಿನ ಸಾಯಂಕಾಲ ಈ ಉತ್ಸವ ನಡೆಯುತ್ತದೆ. ಆಯಾ ಪ್ರದೇಶದ ಆರ್ಥಿಕತೆಯ ಅನುಕೂಲಕ್ಕೆ ತಕ್ಕಂತೆ ಈ ತೇರುಗಳು ಮಾರ್ಪಟ್ಟಿವೆ. ಎಲ್ಲೂ ಬೀರಲಿಂಗೇಶ್ವರ ತೇರು ನಡೆಯುವುದಿಲ್ಲ. ಆದರೆ ಈ ತೇರು ಕರ್ನಾಟಕದ ಒಂದೇ ಒಂದು ಜಿಲ್ಲೆಯ ಊರಿನಲ್ಲಿ ನಡೆಯುತ್ತದೆ. ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲೂಕು ಶ್ರೀರಾಮಪುರಲ್ಲಿ ಬೀರಪ್ಪನ ತೇರನ್ನು ಎಳೆಯಲಾಗುತ್ತದೆ. ಈ ಊರಲ್ಲಿ ಸೆಟ್ಟರು ಮತ್ತು ಕುರುಬರಿಗೆ ವಾದವಾಗಿ ಶೆಟ್ಟರು ಈ ದೇವರಿಗೆ ತೇರು ಎಳೆಯಬೇಕು ಎಂದು ಕುರುಬರೊಡನೆ ವಾದ ಮಾಡುತ್ತಾರೆ. ತೇರು ಜಿಲ್ಲೆಯಲ್ಲಿಯ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಈ ತೇರುಗಳು ವಿಧವಿಧವಾಗಿ ಕಂಡುಬರುತ್ತವೆ. ಈ ಹಿಂದೆ ದೊಡ್ಡದೊಡ್ಡ ನಾಲ್ಕು ಮರದ ಗಾಲಿಗಳ ಮೇಲೆ ಈ ತೇರನ್ನು ಮಾಡಲಾಗುತ್ತಿತ್ತು. ಬೃಹದಾಕಾರದ ತೇರು ಕಟ್ಟಿಗೆಯ ಗಾಲಿಗಳ ಮೇಲೆ ನಡೆಯುವುದು ಕಷ್ಟಕರವಾದುದರಿಂದ ಪ್ರಸಕ್ತ ಎಲ್ಲ ಕಡೆಯಲ್ಲಿಯೂ ಕಲ್ಲಿನ ಗಾಲಿಗಳನ್ನು ಮಾಡಲಾಗಿದೆ. ತೇರಿನ ಮೇಲೆ ಮನುಷ್ಯನ ಜೀವನಕ್ಕೆ ಸಂಬಂಧಿಸಿದ ಸಾಂಸಾರಿಕ ಚಿತ್ರಗಳು, ದೇವಮಾನವರ ಚಿತ್ರಗಳು, ಪೌರಾಣಿಕ ಕಥೆಗಳ ಚಿತ್ರಗಳು ವಿಧವಿಧವಾಗಿ ಮೂಡಿರುತ್ತವೆ. ಇದು ಪ್ರಮುಖವಾಗಿ ಗೋಪುರದ ಆಕೃತಿಯಲ್ಲಿರುತ್ತದೆ. ಅದಕ್ಕೆ ಬಣ್ಣ ಬಣ್ಣದ ಬಟ್ಟೆಗಳಿಂದ ಬಾವುಟಗಳಿಂದ ಅಲಂಕರಿಸಿರುತ್ತಾರೆ. ಮೆಲ್ತುದಿಯಲ್ಲಿ ಹಿತ್ತಾಳೆಯ ಕಳಸವನ್ನು ಹಾಕಿರುತ್ತಾರೆ. ನಂದಿಕೋಲು, ಡೋಳ್ಳು ಕುಣಿತ ಹೀಗೆ ವಾದ್ಯಗಳ ಸಮೇತವಾಗಿ ದೇವರ ವಿಗ್ರಹವನ್ನು ತಂದು ತೇರಿನಲ್ಲಿ ಕೂರಿಸಿ, ಆನಂತರ ದೇವರ ಹಸಿರು ನಿಶಾನೆ ತೋರಿದ ನಂತರ ಈ ರಥೋತ್ಸವ ಜರಗುತ್ತದೆ. ಜಾತ್ರೆಗೆ ಬಂದ ಭಕ್ತರು ನೂರಾರು ಜನ ಸೇರಿಕೊಂಡು ತೇರಿಗೆ ಕಟ್ಟಿದ ಹಗ್ಗವನ್ನು ಎರಡು ಕಡೆ ಸಮನಾಗಿ ಎಳೆಯುತ್ತಾರೆ. ಬಹುಮುಖ್ಯವಾಗಿ ಈ ತೇರು ಉತ್ಸವವು ಜಾತ್ರೆ ಮುಗಿಯುವ ಸಂಕೇತವನ್ನು ಸೂಚಿಸುತ್ತದೆ.

ಕನ್ನಡದ ಆದಿ ಕವಿ ಪಂಪ, ರನ್ನರು ಈ ತೇರು ಶಬ್ದವನ್ನು ಬಳಸಿದ್ದರಿಂದ ತೇರಿನ ಪ್ರಾಚೀನತೆಯನ್ನು ಅರಿಯಬಹುದು. ಕೃಷ್ಣ ಇದರಲ್ಲಿ ಕೂತಿದ್ದರಿಂದ ತೇರು ಎಂದರೆ ದೇವರು ಕೂಡುವ, ದೇವತಾ ವಿಗ್ರಹವನ್ನಿಟ್ಟು ಎಳೆಯುವ ಅಲಂಕಾರದ ಬಂಡಿ ಎಂಬರ್ಥ ರೂಢಿಗೆ ಬಂದಿರಬಹುದು. ಕ್ರಮೇಣ ಈ ತೇರು ಎಂದರೆ ರಥೋತ್ಸವವು ಪ್ರಾಚೀನ ಕಾಲದಿಂದಲೂ ನಡೆಯುತ್ತಾ ಬಂದಿರುವುದು ಕಾಣುತ್ತದೆ. ಜಾತ್ರೆ ಮತ್ತು ತೇರು ಉತ್ಸವಗಳು ಒಟ್ಟೊಟ್ಟಿಗೆ ನಡೆಯುತ್ತವೆ.

ತೇರು ಉತ್ಸವದಲ್ಲಿ ಜಾತ್ರೆ ಪ್ರಮುಖವಾಗುತ್ತದೆ. ಜಾತ್ರೆಯ ದೇವರ ದರ್ಶನದ ಹಿನ್ನೆಲೆಯನ್ನಷ್ಟೇ ಅಲ್ಲದೇ ಬೇರೆ ಉದ್ದೇಶವನ್ನು ಹೊಂದಿದೆ. ಪ್ರಾಚೀನ ಕಾಲದಲ್ಲಿ ಜನಪದರು ತಾವು ತಯಾರಿಸುವ ಕರಕುಶಲ ವಸ್ತುಗಳನ್ನು ಮಾರುವುದಕ್ಕಾಗಿ ಮತ್ತು ಅಗತ್ಯವಾದ ವಸ್ತುಗಳನ್ನು ಖರೀದಿಸುವ ಪದ್ಧತಿಯನ್ನು ಹೊಂದಿತ್ತು. ಹಾಗಾಗಿ ವರ್ತಮಾನದ ಸಂದರ್ಭದಲ್ಲಿಯೂ ಈ ಪದ್ಧತಿ ಮುಂದುವರೆದುಕೊಂಡು ಬಂದಿದೆ. ಪ್ರಸ್ತುತ ಸಂದರ್ಭದಲ್ಲಿ ಮನರಂಜನೆ ಪ್ರದರ್ಶನ ಕಲೆಗಳ ಜೊತೆಗೆ ಕೈಗಾರಿಕಾ ವಸ್ತುಪ್ರದರ್ಶನ ಮೇಳಗಳು ನಡೆಯುತ್ತವೆ. ಹೀಗೆ ದೇವರ ಉತ್ಸವ ಕಾಲದಲ್ಲಿ ಸ್ಥಳೀಯ ಜನಪದ ಕಲೆಗಳು ವಿಜೃಂಭಿಸುತ್ತವೆ. ಇದರಿಂದ ನಾನಾ ನಂಬಿಕೆಗಳು, ಪದ್ಧತಿಗಳು, ಆಚರಣೆಗಳು ರೂಢಿಗೆ ಬಂದವು. ಒಂದೊಂದು ದೈವ ನೆಲೆಯೂ ಒಂದೊಂದು ಸಾಂಸ್ಕೃತಿಯ ಕೇಂದ್ರವಾಗಿ ಬಲಗೊಂಡಿತು. ಕಾಲಬದ್ಧವಲ್ಲದ ಈ ದೈವಾರಾಧನೆಯ ಯಾತ್ರೆ ನಿಶ್ಚಿತ ಕಾಲಬದ್ಧತೆಗೆ ಒಳಗಾಯಿತು. ದೇವರ ವಿಶೇಷ ಆರಾಧನೆಗೆ ಮತ್ತು ತತ್ಸಂಬಂಧವಾದ ಕಲೆಗಳ ಆಚರಣೆಗೆ ಒಂದು ನಿರ್ದಿಷ್ಟ ಸಮಯವನ್ನು ಗೊತ್ತುಪಡಿಸಿದರು. ಜಾತ್ರೆಗಳು ನಡೆಸಿದರು. ತೇರುಗಳನ್ನು ಎಳೆಸಿದರು.

ದೇವಾಲಯಗಳಲ್ಲಿರುವ ಮೂರ್ತಿಗಳನ್ನು ಕೂಡಿಸಿ ಮೆರವಣಿಗೆ ಮಾಡುವ ಒಂದು ವಾಹನವು ತೇರು ಅಥವಾ ರಥವಾಗಿ ಕಾಣುತ್ತದೆ. ತೇರನ್ನು ಎಳೆಯುವಾಗ ಪ್ರಮುಖವಾಗಿ ಆಯಾ ದೈವದ ಹೆಸರನ್ನು ಕರೆಯುತ್ತಾರೆ. ತೇರು ಸಾಗುವ ಭಕ್ತರು ಬೇಡಿಕೊಂಡ ಹರಕೆಯ ಕುರುಹುವಾಗಿ ಬಾಳೇಕಾಯಿ, ಉತ್ತತ್ತಿ, ಕಬ್ಬಿನ ಗಣಿಕೆ ಎಸೆಯುತ್ತಾರೆ. ಇವುಗಳೆಲ್ಲವೂ ಕೂಡ ಫಲವಂತಿಕೆಯ ಸಂಕೇತವಾಗಿವೆ. ಜಾತ್ರೆಗೆ ಬಂದ ಭಕ್ತರು ತೇರು ಚಲನೆಯ ಆಧಾರದ ಮೇಲೆ ಮಳೆ, ಬೆಳೆ, ಭವಿಷ್ಯವನ್ನು ಗುರುತಿಸಿಕೊಳ್ಳುತ್ತಾರೆ. ನವದಂಪತಿಗಳು ತೇರನ್ನು ಎಳೆದರೆ ಬೇಗ ಮಕ್ಕಳಾಗುತ್ತವೆ ಎಂಬ ನಂಬಿಕೆಯು ಇದೆ. ಈ ಹಿನ್ನೆಲೆಯಲ್ಲಿ ಶ್ರೀರಾಮಪುರದ ಬೀರಲಿಂಗೇಶ್ವರ ತೇರು ಉತ್ಸವ ಮಹತ್ವದ್ದಾಗಿ ಕಂಡುಬರುತ್ತದೆ. ಜಿಲ್ಲೆಯ ವೈವಿಧ್ಯಮಯ ತೇರು ಉತ್ಸವಗಳು ಪ್ರಾದೇಶಿಕವಾಗಿ ಸಾಂಸ್ಕೃತಿಕವಾಗಿ ಮಹತ್ವವನ್ನು ಪಡೆದುಕೊಂಡಿವೆ. ಇಷ್ಟೇ ಅಲ್ಲದೆ, ಬೀರೂರು ಬೀರಲಿಂಗೇಶ್ವರನಿಗೆ ಮುಳ್ಳುಪಲ್ಲಕ್ಕಿ, ಹೂವಿನಪಲ್ಲಕ್ಕಿಯಲ್ಲಿ ಉತ್ಸವ ಜರಗುತ್ತದೆ. ಡೊಳ್ಳುವಾದ್ಯ, ಕೊಂಬು, ಮಜಲು, ಕಹಳೆಗಳನ್ನು ಬಾರಿಸುತ್ತ ಊರಬೀದಿಗಳಲ್ಲಿ ಮೆರವಣಿಗೆಯನ್ನು ಮಾಡುತ್ತ, ಮರಳಿ ದೇವಸ್ಥಾನಕ್ಕೆ ಬರುತ್ತಾರೆ. ಇಷ್ಟೇ ಅಲ್ಲದೆ ದಕ್ಷಿಣ ಕರ್ನಾಟದಲ್ಲಿ ಬೀರದೇವರ ಜಾತ್ರೆಗಳು ತುಂಬಾ ವೈಶಿಷ್ಟ್ಯಪೂರ್ಣವಾಗಿ, ಅಷ್ಟೇ ಅದ್ದೂರಿಯಿಂದ ಜರಗುತ್ತವೆ. ಇವು ಪ್ರತಿ ವರ್ಷ ನಡೆಯುವುದಿಲ್ಲ. ಹನ್ನೆರಡು ವರ್ಷಗಳಿಗೊಮ್ಮೆ ತೋಪಿನ ಜಾತ್ರೆಗಳೆಂದು ಮಾಡುತ್ತಾರೆ. ತೋಪಿನ ಜಾತ್ರೆಗಳ ಒಂದು ವೈಶಿಷ್ಟವೆಂದರೆ ಜಾತ್ರೆ ನಡೆಯುವ ಬೀರದೇವರ ಕೂಟಕ್ಕೆ ಸೇರಿದ ಎಲ್ಲ ಗಡಿಗಳ ಬೀರದೇವರುಗಳಿಗೆ ಕಡ್ಡಾಯವಾಗಿ ಆಹ್ವಾನವನ್ನು ಕೊಡಬೇಕು. ಈ ಆಹ್ವಾನವನ್ನು ನೀಡದೇ ಇದ್ದರೆ ವ್ಯಾಜ್ಯಗಳು ಉಂಟಾಗುತ್ತವೆ. ಹೀಗಾಗಿ ಆಯಾ ದೇವರ ಕೂಟಕ್ಕೆ ಸೇರಿದ ಗಡಿಗಳ ದೇವರುಗಳಿಗೆ ಆಹ್ವಾನ ಕಡ್ಡಾಯವಾಗಿರುತ್ತದೆ. ಪ್ರತಿಕೂಟಕ್ಕೂ ಒಂದು ಗಡಿಯ ಬೀರದೇವರನ್ನು ಮುಖ್ಯವೆಂದು ಪರಿಗಣಿಸಲಾಗುತ್ತದೆ. ಈ ಬೀರದೇವರಿಗೆ ಉಳಿದ ಬೀರದೇವರುಗಳು ಸಲಾಮು ಸಲ್ಲಿಸಿ ಗೌರವ ನೀಡಬೇಕು. ಹೀಗೆ ನಡೆಯುವ ತೋಪಿನ ಜಾತ್ರೆಯ ಸಂದರ್ಭದಲ್ಲಿ ಬೀರದೇವರ ದೇವಸ್ಥಾನದ

ಸುತ್ತ ಇರುವ ವಿಸ್ತಾರವಾದ ತೋಪಿನಲ್ಲಿ ಎಲ್ಲ ಕುರುಬ ಜನಾಂಗದವರು ತಮ್ಮ ತಮ್ಮ ಕುಟುಂಬಗಳ ಅಗತ್ಯಕ್ಕೆ ತಕ್ಕ ಹಾಗೆ ಟೆಂಟುಗಳನ್ನು ಹಾಕಿಕೊಂಡು ಐದು ದಿವಸಗಳವರೆಗೆ ಅಲ್ಲಿಯೇ ಇರುತ್ತಾರೆ. ಈ ಬೀರದೇವರ ಜಾತ್ರೆಗಳು ನಡೆಯುವಾಗ ಕೆಲವು ಪ್ರತಿಷ್ಠಿತ ಕುರುಬರು ಅರವಟ್ಟಿಗೆಯನ್ನು ಇಡುತ್ತಾರೆ. ಅರವಟ್ಟಿಗೆಯೆಂದರೆ ಊಟ, ತಿಂಡಿ, ತೀರ್ಥವನ್ನು ಏರ್ಪಡಿಸಿ ಜಾತ್ರೆಗೆ ಬಂದಂತಹ ಭಕ್ತರಿಗೆ ಪ್ರಸಾದವನ್ನು ವಿನಿಯೋಗಿಸುವುದು ಎಂದರ್ಥ.

ಈ ಜಾತ್ರೆಗಳಲ್ಲಿ ಐದು ದಿನಗಳವರೆಗೆ ಪ್ರತಿದಿನ ಒಂದೊಂದು ದೇವತಾ ಆಚರಣೆಗಳು ನಡೆಯುತ್ತವೆ. ಕೊನೆಯ ದಿನ ಬೀರದೇವರ ದೇವಸ್ಥಾನದ ಪೌಳಿಯಲ್ಲಿ ಬೀರದೇವರ ಭಕ್ತರಾದ 'ಈರಗಾರರು' ಹಲ್ಮರಿಸಿಗಿ ಯುತ್ತಾರೆ. ಅಂದರೆ ಈರಗಾರರು ತಮ್ಮ ಹಲ್ಲುಗಳಿಂದ ಕುರಿಮರಿಯನ್ನು ಸೀಳಿ ಹಾಕುತ್ತಾರೆ. ಕೊನೆಯಲ್ಲಿ ಓಕುಳಿಯಾಟ ಆಡುತ್ತಾರೆ. ಇದಾದ ನಂತರ ಜಾತ್ರೆಗೆ ಬಂದಿರುವ ಎಲ್ಲ ಗಡಿಗಳ ಬೀರದೇವರುಗಳಿಗೆ ಗೌರವ ಸಮರ್ಪಣೆಯಾಗುತ್ತದೆ. ನಂತರ ಎಲ್ಲ ಪಲ್ಲಕ್ಕಿಗಳು ತಮ್ಮ ತಮ್ಮ ಊರುಗಳಿಗೆ ಹೋಗುತ್ತವೆ. ಇಲ್ಲಿಗೆ ಜಾತ್ರೆಯೂ ಮುಕ್ತಾಯವಾಗುತ್ತದೆ.[7] ಹೀಗೆ ಬೀರದೇವರ ಉತ್ಸವ, ಜಾತ್ರೆಗಳನ್ನು ಏರ್ಪಡಿಸಿ ಅದರಲ್ಲಿ ಅತ್ಯಂತ ಭಕ್ತಿ ನಿಷ್ಠೆಯಿಂದ ಭಾಗವಹಿಸುವುದರ ಮೂಲಕ ಕುರುಬ ಜನಾಂಗದವರು ತಮ್ಮ ಗೌರವಾಧರ ಭಾವನೆಯನ್ನು ತೋರಿಸುತ್ತಾರೆ.

ದಕ್ಷಿಣ ಕರ್ನಾಟಕದ ಹಲವು ಗ್ರಾಮಗಳಲ್ಲಿ ಬೀರದೇವರ ತೋಪು ಜಾತ್ರೆ ನಡೆಯುತ್ತದೆ. ಈ ಜಾತ್ರೆ ಏಳು ದಿನಗಳ ಕಾಲ ನಡೆಯುತ್ತದೆ. ಆ ದೇವಾಲಯದ ಆಡಳಿತಕ್ಕೆ ಸಂಬಂಧಿಸಿದ ಗುಡಿಕಟ್ಟು ದೈವಗಳು ಮತ್ತು ಭಕ್ತರು ಬಂದಿರುತ್ತಾರೆ. ಹಾಸನ ಜಿಲ್ಲೆ ಹೊಳೆನರಸೀಪುರ ತಾಲೂಕು ಬರಗೂರು ಗ್ರಾಮದಲ್ಲಿ ನಡೆದ ತೋಪುಜಾತ್ರೆ, ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಹಿರೇನೆಲ್ಲೂರು ಗ್ರಾಮದಲ್ಲಿ ನಡೆದ ತೋಪುಜಾತ್ರೆಗಳನ್ನು ಆಧಾರವನ್ನಾಗಿಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ. ಇಲ್ಲಿ ಹನ್ನೆರಡು ಗುಡಿಕಟ್ಟುಗಳು ಜಾತ್ರೆಗಾಗಿ ಆಗಮಿಸಿದ್ದವು. ಈ ಎಲ್ಲಾ ಗುಡಿಕಟ್ಟುಗಳಿಗೆ ಹೀರೆಗುಡಿಕಟ್ಟು, ಹಿರೇನಲ್ಲೂರು ಈ ಹನ್ನೆರಡು ಗುಡಿಕಟ್ಟುಗಳ ವ್ಯಾಪ್ತಿಯಲ್ಲಿ ಎಂಬತ್ತಕ್ಕೂ ಹೆಚ್ಚು ಹಳ್ಳಿಗಳು ಸೇರುತ್ತವೆ. ಆ ಎಲ್ಲಾ ಗುಡಿಕಟ್ಟುಗಳಿಗೆ ಹಳ್ಳಿಗಳ ಹಾಲಮತಸ್ಥರಿಗೆ ಆಸಂದಿ ಮಹಾಸಂಸ್ಥಾನದ ರೇವಣಸಿದ್ಧನೇ ನಾಯಕ. ನಂತರದ ಆಚರಣಾತ್ಮಕ ಸ್ಥಾನ ಕೆರೆಸಂತೆ ಲಕ್ಕಮ್ಮಳಿಗೆ ಸಲ್ಲುತ್ತದೆ. ಲಕ್ಷ್ಮೀಪೂಜೆ, ಕಾಚಿಬೀರಸೇವೆ, ಕೆಂಡಾರ್ಚನೆ, ಅಲಗಸೇವೆ, ಪಟ್ಟ ಕಟ್ಟುವಿಕೆ, ಗೂಡೆ ಅರ್ಪಿಸುವ ಆಚರಣೆ ಮುಂತಾದ ಆಚರಣೆಗಳು ಅನೇಕ ಜಾತ್ರೆಗಳಲ್ಲಿ ನಡೆಯುತ್ತವೆ. ಈ ಆಚರಣೆಗಳಲ್ಲಿ ಲಕ್ಕಮ್ಮ ಪ್ರಧಾನಪಾತ್ರ ವಹಿಸುತ್ತಾಳೆ. ಈ ಸಂದರ್ಭದಲ್ಲಿ ಭಂಡಾರ ಬಳಕೆ ಪ್ರಧಾನವಾಗಿ ಆಗುತ್ತದೆ. ಭಂಡಾರ ಹಾರಿಸುವವರು ಲಕ್ಕಮ್ಮನ ಶಿಷ್ಯರಾದ ಗೊರವರು. ಬೀರಪ್ಪನ ಶಿಷ್ಯರಾದ ಈರಗಾರರಿಗೆ ಗೊರವಯ್ಯಗಳು ಮೈಮೇಲೆ ಭಂಡಾರ ಹಾಕದಿದ್ದರೆ ಮೈಯಲ್ಲಿ ಬೀರಪ್ಪ ಬರುವುದಿಲ್ಲ. ಅಂದರೆ ಈರಗಾರರ ಆಚರಣೆಯ ಮುಖಾಂತರ ಬೀರಪ್ಪ ಜೀವಂತಿಕೆಯ ರೂಪ ತಾಳುವುದೇ ಇಲ್ಲ. ಅಲಗಸೇವೆ ಮತ್ತು ಕಾಚಿಬೀರಸೇವೆ ನಡೆಯುವುದಿಲ್ಲ. ಬೀರಪ್ಪನ ಶಿಷ್ಯರಾದ ಈರಗಾರರನ್ನು ಹುರಿದುಂಬಿಸುವವರು ಗೊರವಯ್ಯಗಳು

ಇದಕ್ಕೆ ರೇವಣಸಿದ್ದ ಒಡೆಯರುಗಳೂ ಕೈ ಜೋಡಿಸುತ್ತಾರೆ. ಈರಗಾರರನ್ನು ಮೈದುಂಬಿಸುತ್ತಾರೆ. ಮೈದುಂಬಿದ ಈರಗಾರರು ಕಾಚಿಬೀರಸೇವೆ ಮಾಡುತ್ತಿರುತ್ತಾರೆ. ಅಂದರೆ ಹಾಲುಮತಸ್ಥರು ಬೀರಪ್ಪನ ದೇವಸ್ಥಾನದ ಸುತ್ತ ಕುರಿಗಳನ್ನು ಬಿಡುತ್ತಾರೆ. ಆ ಕುರಿಗಳನ್ನು ಈರಗಾರರು ಜೀವಂತವಾಗಿ ಕುತ್ತಿಗೆ ಕಚ್ಚಿಕಚ್ಚಿ ರಕ್ತ ಕುಡಿಯುತ್ತಾರೆ. ಈ ತರಹದ ಆಚರಣೆ ಹಲವು ತಳಸಮುದಾಯಗಳಲ್ಲಿ ರೂಢಿಯಲ್ಲಿದೆ. ಬೇಡ ಸಮುದಾಯದ ಪೋತರಾಜ, ಈರಗಾರರ ಸಂಪ್ರದಾಯದ ವಿಧಾನಕ್ಕೆ ಸೇರುತ್ತಾರೆ. ಈ ಎರಡು ಸಮುದಾಯಗಳು ಗಾವು ಸಿಗಿಯುವ ಆಚರಣೆಗೆ ಮತ್ತು ಕಾಚಿಬೀರಸೇವೆಯನ್ನು ಪ್ರತಿಬಿಂಬಿಸುತ್ತದೆ. ಈರಗಾರರು ಕುರಿಗಳನ್ನು ಕಚ್ಚಿ ತಿನ್ನುವ ದೃಶ್ಯ ಹಸಿದ ತೋಳುಗಳ ಹಿಂಡು ಕುರಿಹಿಂಡಿಗೆ ಹೊಕ್ಕು ತಿನ್ನುತ್ತಿವೆ ಎನ್ನುವ ಹಾಗೇ ಕಾಣಿಸುತ್ತದೆ. ರಕ್ತ ಕಡಿಯುವಾಗ ಭಕ್ತಾದಿಗಳು ಉಘೇ ಉಘೇ ಎಂದು ಕೇಕೆ ಹಾಕುತ್ತಾ ಭಂಡಾರ ಹಾರಿಸುತ್ತಾರೆ. ಈ ಆಚರಣೆಗೆ ಐತಿಹಾಸಿಕ ಹಿನ್ನೆಲೆಯಿದೆ. ಹಾಲುಮತದ ಸಾಂಸ್ಕೃತಿಕ ವೀರನಾದ ಪದ್ಮಗೊಂಡ ಅನಿವಾರ್ಯವಾಗಿ ಸಿಕ್ಕ ಕುರಿಗಳನ್ನು ಕಾಯುತ್ತ ಅಡವಿ ಸೇರುತ್ತಾನೆ. ಆ ಒಂಟಿತನದಲ್ಲಿ ರಾಕ್ಷಸಿಯ ಮಗಳು ಪರಿಚಯವಾಗುತ್ತಾಳೆ. ಆತ್ಮೀಯ ಸಂಬಂಧ ಬೆಳೆಯುತ್ತದೆ. ವಿವಾಹ ಆಗಬೇಕೆಂದು ನಿರ್ಧಾರ ಮಾಡುತ್ತಾರೆ. ಆಗ ತಾಯಿ ರಾಕ್ಷಸಿ ಅಡ್ಡಬರಬಹುದೆಂದು ಮೋಸದಿಂದ ಪದ್ಮಗೊಂಡ ಮತ್ತು ರಾಕ್ಷಸಿ ಸೇರಿ ಮಾಂತ್ರಿಕ ಶಕ್ತಿಯಿಂದ ಕೊಲ್ಲುತ್ತಾರೆ. ಇದನ್ನರಿತ ತಾಯಿ ರಾಕ್ಷಸಿ ಸಾಯುವ ಮುಂಚೆ ಕೋಪದಿಂದ “ಎಲೋ ನರನೇ ನೀವಿಬ್ಬರೂ ಒಂದಾಗಿ ಸೇರಿ ನನ್ನನ್ನು ಈ ರೀತಿ ಮೋಸಗೊಳಿಸಿದರಲ್ಲವೇ? ಆಗಲಿ ನಾನು ಮುಂದಿನ ಜನ್ಮದಲ್ಲಿ ತೋಳವಾಗಿ ಹುಟ್ಟಿ ನಿನ್ನ ಕುರಿ ಹಿಂಡನ್ನು ನಾಶ ಮಾಡುವೆನು”[೧೦] ಎಂದು ಧ್ವನಿಗೈದು ಜೀವ ಬೀಡುತ್ತಾಳೆ. ಈ ಪರಿಕಲ್ಪನೆ ಹಾಲುಮತ ಪುರಾಣಗಳಲ್ಲಿ ಉಕ್ತಗೊಂಡಿದೆ.

“ರಕ್ಕಸಿ ಪ್ರಾಣ ಬಿಡುವ ಸಮಯದೊಳು
ಒಕ್ಕಣಿಸಿದಳು ವಾಕ್ಯದಲ್ಲಿ
ಗಕ್ಕನೇ ಕುರಿಯ ಹಿಂಡಿಗೆ ನಾನು ತೋಳವಾಗಿ
ಶಿಕ್ಷೆ ಮಾಡದೆ ಬಿಡೆನೆನುತ
ಏಳು ಕೊಪ್ಪರಿಗೆ ಕೂಳು ತಿನ್ನುವವಳು
ತೋಳವಾಗಿ ಜನಿಸಿದಳು
ಏಳುತ ಬೀಳುತ ಕುರಿಗಳ ತಿನ್ನುತ
ಕಾಳ ರಕ್ಕಸಿಯು ಮೆರೆದಾಳು”[೧೧]

ಹೀಗೆ ಸಾಂಸ್ಕೃತಿಕ ಸಂಬಂಧವುಳ್ಳ ಆಚರಣೆ ಪೂರೈಕೆ ಆಗುತ್ತಿದ್ದಂತೆ ಒಡೆಯರು, ಪೂಜಾರಿಗಳು, ಬೀರದೇವಾಲಯದ ಆವರಣದ ಸುತ್ತ ಸಂತೋಷಭರಿತವಾಗಿ ನರ್ತನ ಮಾಡುತ್ತಿರುತ್ತಾರೆ. ಕಾಚಿಬೀರಸೇವೆ ಮಾಡಿ ಸುಸ್ತಾದ ಈರಗಾರರನ್ನು ಆಶೀರ್ವದಿಸಿ ಎಚ್ಚರಗೊಳಿಸುತ್ತಾರೆ. ಅದೇ ರೀತಿ ಇನ್ನೂ ಅನೇಕ ಧಾರ್ಮಿಕ ವಿಚಾರಗಳು ಇವೆ. ಗಾವು ಸಿಗಿಯುವುದು, ಅಲಗ ಹಾಕಿಕೊಳ್ಳುವುದು ಈ ಮುಂದಿನಂತೆ ಧಾರ್ಮಿಕ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

೨. ಮೀಸಲು ಆಚರಣೆ

ಜಾತ್ರೆಯ ಮೊದಲ ದಿನದ ಕಾರ್ಯಕ್ರಮವೇ ಮೀಸಲು ಅಳಿಸುವುದು. ದೇವರಿಗಾಗಿ ಭಕ್ತಿಯಿಂದ ತೆಗೆದಿಟ್ಟ ವಸ್ತುಗಳೇ ಮೀಸಲು. ದೇವಸ್ಥಾನದ ಮುಂದಿನ ಚಪ್ಪರದಲ್ಲಿ ಗೌಡ ಬುದ್ಧಿವಂತ ಇತರೇ ಗಣ್ಯರು ಸೇರಿ ಪ್ರತಿ ಗೂಡೆಯಿಂದ ನಿರ್ದಿಷ್ಟ ಪ್ರಮಾಣದ ಅಕ್ಕಿ, ಬೇಳೆ, ಬೆಲ್ಲ, ಕಾಯಿ, ಬಾಳೆಹಣ್ಣು ದೀಪಾರಾಧನೆ, ಹಣ, ಮೀಸಲಾಗಿ ಪಡೆಯುತ್ತಾರೆ. ಜಾತ್ರೆಗೆ ಬಂದ ಭಕ್ತಾದಿಗಳಿಗೆ ಇದು ಮಹತ್ವದ ಆಚರಣೆ. ಭಕ್ತಾದಿಗಳು ಜಾತ್ರೆಗೆ ಬರುವುದೇ ಈ ಕಾರ್ಯಕ್ಕಾಗಿ. 'ಮೀಸಲು ಒಪ್ಪಿಸುವುದು ನಮ್ಮ ಕರ್ತವ್ಯ. ಈ ಕಾರ್ಯವನ್ನು ನಾವು ಮಾಡದೇ ಇದ್ದರೆ ಅಥವಾ ತಪ್ಪಿಸಿದರೆ ಬೀರದೇವರು ನಮಗೆ, ನಮ್ಮ ಮಕ್ಕಳಿಗೆ ನಮ್ಮ ದನಕರುಗಳಿಗೆ ಹಾನಿಯನ್ನುಂಟು ಮಾಡುತ್ತಾನೆ' ಎನ್ನುವ ಭಯ ಜನರಲ್ಲಿದೆ. ಹಾಗಾಗಿ ಈ ಕಾರ್ಯವನ್ನು ಯಾರೂ ತಪ್ಪಿಸಲಾರರು. ಒಂದೊಂದು ಕುಲದವರು ಒಮ್ಮೊಮ್ಮೆ ಒಂದು ಮೀಸಲನ್ನು ಅರ್ಪಿಸುತ್ತಾರೆ. ಇದಕ್ಕೆ ಆರಂಭದಲ್ಲಿ ಯಾರು ಬರಬೇಕು, ನಂತರ ಯಾರು ಬರಬೇಕು, ಕೊನೆಗೆ ಯಾರು ಬರಬೇಕು ಎನ್ನುವ ನಿಯಮವಿದೆ. ಆ ನಿಯಮದಂತೆ ಒಬ್ಬೊಬ್ಬರಾಗಿ ಬಂದು ಮೀಸಲನ್ನು ಒಪ್ಪಿಸಿ ಹೋಗುತ್ತಾರೆ. ಇಲ್ಲಿ ಆರಂಭದಲ್ಲಿ ಗೌಡ ಕುಲದವರು ಕೊನೆಯಲ್ಲಿ ಸಾವಂತಲ ಕುಲದವರು ಮೀಸಲನ್ನು ಒಪ್ಪಿಸುತ್ತಾರೆ. ಆದರೆ ಮೀಸಲನ್ನು ಒಪ್ಪಿಸುವ ಸಮಯಕ್ಕೆ ಎಲ್ಲ ಜನರೂ ಒಂದು ಕಡೆ ಸೇರುತ್ತಾರೆ.

ಉದಾಹರಣೆಗೆ ಮೀಸಲು ಒಪ್ಪಿಸುವ ಆಚರಣೆಯ ಸಾಂಕೇತಿಕತೆ ಸುಮಾರು ೪೦೦ ವರ್ಷಗಳಷ್ಟು ಹಿಂದಕ್ಕೆ ಹಾಲುಮತ ಸಂಸ್ಕೃತಿಯ ಅನನ್ಯತೆಯತ್ತ ನಮ್ಮನ್ನು ಕರೆದುಕೊಂಡು ಹೋಗುತ್ತದೆ. ಒಮ್ಮೆ ಬಿಜ್ಜಳರಾಜ ಹಾಲುಮತ ಸಮುದಾಯದವರನ್ನು ರಾಜ್ಯದಿಂದ ಹೊರಹಾಕುತ್ತಾನೆ. ಅಗ ಅವರೆಲ್ಲರೂ ಮುದ್ದೇಬಿಹಾಳ ತಾಲೂಕು ಸರೂರು ಗ್ರಾಮದ ಹತ್ತಿರವಿರುವ 'ತೂಗುಡ್ಡ' ಎನ್ನುವ ಪ್ರದೇಶದ ಸುತ್ತಮುತ್ತ ಹೋಗಿ ಜೀವನವನ್ನು ಆರಂಭಿಸುತ್ತಾರೆ. ಇಂತಹ ಅವಮಾನವನ್ನು ಸಹಿಸದ ಹಾಲುಮತದ ಸಾಂಸ್ಕೃತಿಕ ವೀರನಾದ ಮರುಳಮಂಕ 'ತೂಗುಡ್ಡ'ದ ಬಂಡೆಯ ಮೇಲೆ ಸೂಜಿಯನ್ನು ಹಿಮ್ಮುಖವಾಗಿ (ಚೂಪಾದ ಭಾಗ ಮೇಲ್ಮುಖವಾಗಿರುವಂತೆ) ನೇರವಾಗಿ ನಿಲ್ಲಿಸಿ ಅದರ ಮೇಲೆ ತಲೆಯೂರಿ ತಪಸ್ಸನ್ನು ಮಾಡುತ್ತಾನೆ.[೧೨] ಈ ಉಗ್ರವಾದ ತಪಸ್ಸನ್ನು ಬೆಂಬಲಿಸುವುದಕ್ಕೆ ಅಥವಾ ಯಶಸ್ವಿಗೊಳಿಸುವುದಕ್ಕೆ ಸುತ್ತ ನೆಲೆಸಿರುವ ಹಾಲುಮತಸ್ಥರೆಲ್ಲರೂ ಒಂದೇ ಬುಟ್ಟಿಯಲ್ಲಿ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ದವಸ ಧಾನ್ಯಗಳನ್ನು ಹಾಕಿಕೊಂಡು ಸಾಲುಸಾಲಾಗಿ ಬಂದು ಅರ್ಪಿಸಿ ಹೋಗುತ್ತಾರೆ. ಈ ಪರಿಕಲ್ಪನೆ ಬೀರಪ್ಪನ ಜಾತ್ರೆಯಲ್ಲಿ ಆಚರಣೆ ರೂಪವಾಗಿ ಬೆಳೆದುಬಂದಿದೆ. ಆರಂಭದಲ್ಲಿ ಹೇಳಿದಂತೆ ಈ ಆಚರಣೆಗೆ ಒಂದು ಮಹತ್ವವಿದೆ. ಪಾರಂಪರಿಕ ಹೋರಾಟದ ಪ್ರಜ್ಞೆಯ ನೆನಪಿನ ಆಯಾಮವಿದೆ. ತಮಗೆ ದತ್ತವಾದ ಸಾಂಸ್ಕೃತಿಕ ಇತಿಹಾಸದಲ್ಲಿ ರಾಜರಿಂದಾದ ವಂಚನೆಗಳ ನೆನಪಿನ ಕಥಾನಕ ಅಂಗಗಳು ಮತ್ತು ಅವರು ಆ ಅನ್ಯಾಯವನ್ನು ಸಮಷ್ಟಿ ರೀತಿಯಲ್ಲಿ ಪ್ರತಿರೋಧ ಮಾಡಿದ ನೆನಪುಗಳನ್ನು ನಿರ್ವಚಿಸುವುದಿದೆ. ಆ ನೆನಪನ್ನು ಸದಾ ಜೀವಂತಗೊಳಿಸಿಕೊಂಡಿರುವುದಕ್ಕಾಗಿಯೇ ಆಚರಣೆಯ ನೆಪದಲ್ಲಿ ಆಚರಿಸಿಕೊಂಡು ಬರುತ್ತದೆ. ಇಂತಹ ಮಹತ್ವದ ಐತಿಹಾಸಿಕ ಆಚರಣೆ ಬೇರೆಬೇರೆ ರೂಪವನ್ನು ಪಡೆಯುತ್ತದೆ.

ದಳವಾಯಿಗಳು ಮತ್ತು ಪೂಜಾರಿಗಳು ನಮಗೆ ಬರುವ ಆದಾಯದ ಭಾಗ ಅನ್ನುವಂತೆ ಸೃಷ್ಟಿ ಮಾಡುತ್ತಿದ್ದಾರೆ. ಆ ಆಚರಣೆ ಪರಂಪರೆಯಿಂದ ನಮಗಾಗಿ ಸೃಷ್ಟಿಯಾಗಿ ಬಂದಿರುವ ಹಕ್ಕು. ಅದನ್ನು ನಾವು ಪಡೆಯಬೇಕು ಅನ್ನುವ ಮನಸ್ಥಿತಿಯನ್ನು ಹೊಂದುತ್ತಿದ್ದಾರೆ. ಈ ಹಿಂದೆ ಇಂತಹ ಆಚರಣೆಗಳಿಂದ ಬಂದಂತಹ ಅಕ್ಕಿ, ಕಾಳು, ಬೆಲ್ಲ, ಹಣ್ಣು, ಹಣ ಇತ್ಯಾದಿ ವಸ್ತುಗಳನ್ನು ಜಾತ್ರೆಗೆ ಬಂದ ಭಕ್ತಾದಿಗಳಿಗೆ ಊಟಕ್ಕಾಗಿ ಬಳಸುತ್ತಿದ್ದರು. ಈಗ ಈ ಪ್ರಕ್ರಿಯೆ ನಿಂತುಹೋಗಿದೆ. ಮತ್ತೆ ಕೆಲವು ಕಡೆ ಗುಡಿಗೌಡ್ರುಗಳು ಬಂದಂತಹ ದವಸಧಾನ್ಯಗಳಿಂದ ಅರ್ಧ ಪಾಲನ್ನು ಪಡೆಯುತ್ತಿದ್ದಾರೆ.[೧೨] ಇದು ಒಟ್ಟಾರೆಯಾಗಿ ತಮಗಾಗಿ ಬರುವ ಆಸ್ತಿಯಂತೆ ಬಳಕೆ ಆಗುತ್ತಿದೆ.

ಈ ಪ್ರಕ್ರಿಯೆಗೆ ಸಂಬಂಧಿಸಿದಂತೆ ದಳವಾಯಿಯಪ್ಪ ಮತ್ತು ಪೂಜಾರಿಗಳನ್ನು ಕೇಳಿದಾಗ 'ಏನು ಮಾಡೋದು ಸ್ವಾಮಿ, ನಮಗೆ ಆದಾಯ ಸಿಗುವುದೇ ಈ ಸಂದರ್ಭದಲ್ಲಿ ಮಾತ್ರ. ಮತ್ತೆ ೧೨ ವರ್ಷ ಏನೂ ಆದಾಯವಿಲ್ಲದೇ ದೇವರ ಕಾರ್ಯವನ್ನು ಮಾಡಬೇಕು. ನೀವೇ ಹೇಳಿ, ಇಷ್ಟು ಕಾಳುಗಳನ್ನು ತಗೊಂಡು ನಾವು ಹ್ಯಾಂಗ ಜೀವನ ಮಾಡಬೇಕು' ಎಂದು ಹೇಳುತ್ತಾರೆ. ಇವರು ಹೇಳುವಂತೆ ಜಾತ್ರೆಯ ಸಂದರ್ಭವನ್ನು ಹೊರತುಪಡಿಸಿದರೆ ಮತ್ತಾವುದೇ ಸಂದರ್ಭಗಳಲ್ಲಿ ಇವರಿಗೆ ಆದಾಯ ಬರುವುದಿಲ್ಲ ಅಥವಾ ಜೀವನವಿಧಾನವನ್ನು ಸರಳವಾಗಿ ನಡೆಸುವಷ್ಟು ಆದಾಯ ಸಿಗುವುದೇ ಇಲ್ಲ. ಸ್ವಲ್ಪಮಟ್ಟಿಗೆ ಆದಾಯ ಬರುವುದು ಇಂತಹ ಸಂದರ್ಭಗಳಲ್ಲಿ ಮಾತ್ರ. ಆದರೆ ಗುಡಿ ಗೌಡ್ರುಗಳು ಇಲ್ಲಿ ಅರ್ಧಾಂಶವನ್ನು ಪಡೆಯುತ್ತಿರುವುದು ಒಳಿತಲ್ಲ. ಇಲ್ಲಿಗೆ ಮೀಸಲು ಕಾರ್ಯ ಮುಗಿಯುತ್ತದೆ.

೩. ಗೂಡೆ ಆಚರಣೆ

ಗೂಡೆ ಅಂದರೆ ಬುಟ್ಟಿ ಎಂದು ಅರ್ಥ. ಈ ಬುಟ್ಟಿಯಲ್ಲಿ ಬೀರದೇವರ ಮೂರ್ತಿಗಳನ್ನು ಅಥವಾ ಕಾಳುಗಳ ಇನ್ನೂ ಅನೇಕ ಧಾನ್ಯಗಳನ್ನು ತೆಗೆದುಕೊಂಡು ಹೋಗುತ್ತಾರೆ. ಗೂಡೆಯನ್ನು ಹೊತ್ತುಕೊಂಡು ಹೋಗುವ ಸಂದರ್ಭದಲ್ಲಿ ಗೂಡೆಯನ್ನು ಅಲಂಕಾರಗೊಳಿಸಿರುತ್ತಾರೆ. ಭಿನ್ನರೂಪದ ಅಲಂಕಾರಗಳಿದ್ದವು. ಕುರುಬ ಮನೆತನಕ್ಕೆ ಸೇರಿದ ಭಕ್ತಾದಿಗಳು ಗೂಡೆಯ ಸುತ್ತ ಬಿಳಿಯ ಬಟ್ಟೆಯನ್ನು ಕಟ್ಟಿರುತ್ತಾರೆ. ಪೂಜಾರಿಗಳು ಮತ್ತು ದಳವಾಯಿ ಮನೆತನಕ್ಕೆ ಸೇರಿದವರು ಕೆಂಪುವಸ್ತ್ರವನ್ನು ಕಟ್ಟಿರುತ್ತಾರೆ. ಗೂಡೆಯ ಮೇಲೆ ತೆಂಗಿನ ಮರದ ಹೊಂಬಾಳೆ ಹೂವನ್ನು ಇಟ್ಟಿರುತ್ತಾರೆ. ಇದು ಹಸುವಿನ ಸಂಕೇತ. ಗೂಡೆಯನ್ನು ಹೊರುವುದು ವಿವಾಹಿತ ಮಹಿಳೆಯರು. ವಿವಾಹಿತ ಮಹಿಳೆಯರು ಇರಲಾರದವರ ಮನೆಯಲ್ಲಿ ಪುರುಷರು ಹೊರುವುದು ವಿಶೇಷ. ಉದಾಹರಣೆಗೆ ಸಾತನೂರು ಬೀರಲಿಂಗೇಶ್ವರ ಜಾತ್ರೆಯಲ್ಲಿ ಗಂಡಸರೇ ಗೂಡೆ ಹೋರುತ್ತಾರೆ. ಗೂಡೆಯನ್ನು ಹೊತ್ತ ಪುರುಷರಿಗೆ ಮೈಯಲ್ಲಿ ದೇವರು ಬರುತ್ತದೆ. ಆದರೆ ಅವರು ಏನನ್ನೂ ಮಾತನಾಡಲಾರರು ಮತ್ತು ಪ್ರತಿಭಟಿಸಲಾರರು. ಸುಮ್ಮನೆ ಮೌನವಾಗಿ ಚೊಲಿ ಹೊಡೆಯುತ್ತಾರಷ್ಟೇ. ಅವರನ್ನು ನೆಲಕ್ಕೆ ಬೀಳದಂತೆ ಇಬ್ಬರು ಪುರುಷರು ಅಥವಾ ಇಬ್ಬರು ಮಹಿಳೆಯರಲ್ಲದೆ ಒಬ್ಬ ಪುರುಷ ಒಬ್ಬ ಮಹಿಳೆ ಸೇರಿ ಹಿಡಿದು ಕೊಂಡಿರುತ್ತಾರೆ. ಕೆಲವೊಬ್ಬರು ಹಿಡಿದುಕೊಂಡವರಿಗೆ ಬಗ್ಗದೆ ಜೋಲಿ ಹೊಡೆಯುತ್ತಿರುತ್ತಾರೆ.

ದಾರಿಯುದ್ದಕ್ಕೂ ಪುರುಷರು ಹುಲಿಮನೆ ಕುಣಿತವನ್ನು ಕುಣಿಯುತ್ತಲೇ ಮುನ್ನಡೆಯುತ್ತಿರುತ್ತಾರೆ. ಅಂದರೆ ಕಂಬಳಿಯನ್ನು ನೆಲಕ್ಕೆ ಹಾಕುತ್ತಾರೆ. ಅದರ ಮೇಲೆ ತುಪ್ಪ ಮತ್ತು ಬಾಳೆಹಣ್ಣು ಕಲಿಸಿದ ಪ್ರಸಾದವನ್ನು ಇಡುತ್ತಾರೆ. ಹಾಸಿದ ಕಂಬಳಿಯ ಸುತ್ತ ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ಜನರು ಹಸಿವಿಗಾಗಿ ಕಾತರಿಸುವ ಹುಲಿಯಂತೆ, ಆಹಾರವನ್ನು ಪಡೆಯುವುದಕ್ಕೆ ಹಂಬಲಿಸುತ್ತಿರುವ ಹುಲಿಯಂತೆ, ಹೋರಾಟ ಮಾಡುತ್ತಿರುವ ಹುಲಿಯಂತೆ ಅರ್ಭಟಿಸುತ್ತ ಕುಣಿಯುತ್ತಾರೆ. ಕುಣಿಯುವ ಪರಿವಾರದವರು ಕುಣಿಯುವವರನ್ನು ರಂಗೇರಿಸುವುದಕ್ಕೆ ಜೋರಾಗಿ ವಾದ್ಯಗಳನ್ನು ಬಡಿಯುತ್ತಿರುತ್ತಾರೆ. ಕುಣಿಯುತ್ತ ಕುಣಿಯುತ್ತ ಅದರಲ್ಲಿ ಒಬ್ಬ ಪ್ರಸಾದವನ್ನು ಎಂಜಲು ಮಾಡುತ್ತಾನೆ. ಅಲ್ಲಿಗೆ ಆ ಕುಣಿತ ಮುಕ್ತಾಯ ಆಗುತ್ತದೆ. ಕುಣಿತಗಾರ ಕಚ್ಚಿದ ಹಣ್ಣುತುಪ್ಪವನ್ನು ದೇವರ ಪ್ರಸಾದವೆಂದು ನಂಬಲಾಗುತ್ತದೆ. ನೆರೆದ ಭಕ್ತರು ಆ ಹಣ್ಣುತುಪ್ಪಕ್ಕೆ ನಮಸ್ಕಾರ ಮಾಡಿ ತೆಗೆದು ಕೊಳ್ಳುತ್ತಾರೆ.

ಹೀಗೆ ಹಲವು ಆಚರಣೆಗಳ ಮುಖಾಂತರ 'ಗೂಡೆ' ದೇವಸ್ಥಾನವನ್ನು ತಲುಪುತ್ತದೆ. ದೇವಸ್ಥಾನದ ಹತ್ತಿರ ಬಂದ ತಕ್ಷಣ ಲಕ್ಷ್ಮೀ ಹೊತ್ತ ಹೆಣ್ಣು ಮಗುವನ್ನು ಬಾಗಿಲದ ಹತ್ತಿರ ತಂದು ನಿಲ್ಲಿಸಲಾಗುತ್ತದೆ. ಆಗ ದೇವಸ್ಥಾನದಲ್ಲಿದ್ದ ಬೀರದೇವರ ಪೂಜಾರಿ ಪೂಜೆ ಮಾಡಿ ಒಳಗಡೆ ಕರೆದುಕೊಳ್ಳುತ್ತಾನೆ. ಆ ಮಗುವಿಗೆ ಆಯಾ ಕುಲದವರು ನಮಸ್ಕಾರ ಮಾಡುತ್ತಾರೆ. ಗೂಡೆ ಹೊತ್ತು ತಂದವರಲ್ಲಿ ಒಳಗಡೆ ಬಂದು ಮೀಸಲನ್ನು ಒಪ್ಪಿಸುತ್ತಾರೆ. ನಂತರ ಬೀರದೇವರ ದರ್ಶನ ಪಡೆದು ಪ್ರಸಾದ ಸ್ವೀಕರಿಸಿ ಹೊರನಡೆಯುತ್ತಾರೆ. ಈ ಪ್ರಕ್ರಿಯೆ ಎಲ್ಲ ಕುಲದವರು ಗೂಡೆ ಒಪ್ಪಿಸುವ ಸಂದರ್ಭವನ್ನು ಕಾಣಬಹುದು. ಇಲ್ಲಿಗೆ ಗೂಡೆ ಕಾರ್ಯಕ್ರಮ ಮುಗಿಯುತ್ತದೆ.

೪. ಗಾವು ಸಿಗಿಯುವುದು (ಹಲ್ಲುಮರಿ ಸಿಗಿಯುವುದು)

ಗಾವು ಸಿಗಿಯುವುದು ಅಂದರೆ ಕುರಿಯನ್ನು ತುಟಿಯಿಂದ ಗಂಟಲದವರೆಗೆ ಹಲ್ಲಿನಿಂದ, ಬೇರೆ ಬೇರೆ ಕಬ್ಬಿಣದ ವಸ್ತುಗಳಿಂದ ಸಿಗಿದು ರಕ್ತ ಹೀರುವುದು. ತೋಳ ಕುರಿ ಆಡನ್ನು ಕಚ್ಚಿ ತಿನ್ನುವ ಸಂಕೇತವಾಗಿದೆ. ಕುರುಬರಲ್ಲಿ ಅಷ್ಟೇ ಅಲ್ಲ, ಇನ್ನೂ ಕೆಲವು ಸಮುದಾಯದ ವರ್ಗಗಳಲ್ಲಿ ಇಂತ ಆಚರಣೆಗಳು ಕಂಡುಬರುತ್ತವೆ. ಪೋತರಾಜ, ಮ್ಯಾಸಬೇಡ ಸಮುದಾಯದಲ್ಲಿ ಕಂಡುಬರುತ್ತದೆ. ಪೋತರಾಜರು ಶಿವನ ಆರಾಧಕರು ಆಗಿರುವುದ ರಿಂದ ಇದು ಶೈವಸಂಪ್ರದಾಯದ ಆಚರಣೆಯಾಗಿಯೂ ಕಂಡುಬರುತ್ತದೆ.

ಉತ್ಸವದ ಮರುದಿನ ಗಾವು ಸಿಗಿಯುವ ಕಾರ್ಯಕ್ರಮವಿರುತ್ತದೆ. ಗಾವು ಸಿಗಿಯುವ ವಿಧಿಗಳು ಬೀರದೇವರ ಈರಗಾರರಿಂದಲೇ ಜರಗುತ್ತವೆ. ಅಂದು ದೇವರಿಗೆ ಹರಕೆ ಹೊತ್ತ ಕುರಿಗಾರ ಭಕ್ತರು ತಮ್ಮತಮ್ಮ ಕುರಿಗಳನ್ನೆಲ್ಲ ದೇವಸ್ಥಾನದ ಸುತ್ತ ಮೂರು ಸಾರಿ ಪ್ರದಕ್ಷಿಣೆ ಹಾಕಿಸುತ್ತಾರೆ. ಅಷ್ಟರಲ್ಲೇ ತಮಗೆ ಇಷ್ಟವಾದ ಕುರಿ ಹಿಡಿದುಕೊಂಡು ಈರಗಾರರು ತಮಗೆ ಸಾಧ್ಯವಾದಷ್ಟು ಕುರಿಗಳನ್ನು ತುಟಿಯ ಭಾಗದಿಂದ ಗಂಟಲದವರೆಗೆ ಹಲ್ಲಿನಿಂದ ಸಿಗಿಯಬೇಕು. ಹಿಂದೆ ಉಂಡಾಡ ಪದ್ಮಣ್ಣ ಕೊಂದು ರಾಕ್ಷಸಿ ರೂಪ ತಾಳಿದೆ. ತೋಳ ಕುರಿಯನ್ನು ಕಚ್ಚುವುದರ ಸಾಂಕೇತಿಕ ರೂಪವೇ ಈ ಗಾವು. ಯಾರ ಕುರಿ ಹಿಂದಿನಿಂದ ಹೆಚ್ಚು ಕುರಿಗಳನ್ನು ಸಿಗಿಯುತ್ತಾರೆಯೋ ಅಷ್ಟು

ಹಿಂಡು ಹೆಚ್ಚುತ್ತದೆಯೆಂಬ ಧಾರ್ಮಿಕ ನಂಬಿಕೆ ಕುರಿಗಾರರದು. ಆದ್ದರಿಂದ ಪ್ರತಿಯೊಬ್ಬ ಕುರಿಗಾರನು ತನ್ನ ಹೆಚ್ಚೆಚ್ಚು ಕುರಿಗಳನ್ನು ದೇವರು ಹಿಡಿದು ಸಿಗಿಯಲೆಂದು ಬೇಡಿಕೊಳ್ಳುತ್ತಿರುತ್ತಾರೆ.

ಉದಾಹರಣೆಗೆ ಹಾಸನ ಜಿಲ್ಲೆ ಭರಗೂರದಲ್ಲಿ ಹಲ್ಲುಮರಿ ಸಿಗಿಯುವುದು ನಾನು ನೋಡಿದ ಪ್ರಕಾರ ಮಧ್ಯಾಹ್ನದ ವೇಳೆಯಲ್ಲಿ. ಜಾತ್ರೆಗೆ ಬಂದಿರುವ ಎಲ್ಲ ಗುಡಿಕಟ್ಟುಗಳ ಈರಗಾರರೆಲ್ಲಾ ಸ್ನಾನ ಮಾಡಿ ಮಡಿಯಾಗಿ ದೇವಸ್ಥಾನದ ಬಳಿ ಸಾಲಾಗಿ ನಿಲ್ಲುತ್ತಾರೆ. ಆ ವೇಳೆಗೆ ಜಾತ್ರೆಗೆ ಸೇರಿದ ಸ್ಥಳೀಯ ಕುರಿಮಂದೆ ಇರುವ ಒಕ್ಕಲುಗಳೆಲ್ಲಾ ತಮ್ಮ ಕುರಿಮಂದೆಗಳನ್ನು ಗಾವು ಸಿಗಿಯುವ ದೇವಸ್ಥಾನದ ಬಳಿ ತಂದು ನಿಲ್ಲಿಸುತ್ತಾರೆ. ಪೂಜಾರರು ದೇವರಿಗೆ ಪೂಜೆ ಮಾಡಿ ತೀರ್ಥ ಜಲವನ್ನು ತಂದು ಈರಗಾರರಿಗೆಲ್ಲಾ ಹಾಕಿ ಭಂಡಾರ ಹಚ್ಚುತ್ತಾರೆ. ನಂತರ ಕುರಿಮಂದೆ ಬಳಿ ಹೋಗಿ ತೀರ್ಥ ಜಲವನ್ನು ಕುರಿಮಂದೆಗೆ ಎರಚುತ್ತಾರೆ. ಆ ಕುರಿಯವರು ಕುರಿಗಳನ್ನು ದೇವಸ್ಥಾನದ ಸುತ್ತ ಮೂರು ಸುತ್ತು ಸುತ್ತಿಸಲು ಹೊಡೆದುಕೊಂಡು ಬರುತ್ತಾರೆ. ಅಷ್ಟರಲ್ಲಿ ಈರಗಾರರ ಮೇಲೆ ದೇವರು ಮೈದುಂಬಿ ದೇವಸ್ಥಾನದ ಬಳಿ ಇರುವ ಟಗರುಗಳಿಗೆ ತಲೆಯನ್ನು ಗುದ್ದಿ ಓಡಿ ಬಂದು ಕುರಿಮಂದೆಗೆ ನುಗ್ಗುತ್ತಾರೆ. ಕುರಿಮಂದೆಗಳು ದೇವಸ್ಥಾನ ಸುತ್ತ ಮೂರು ಸುತ್ತು ಸುತ್ತುವುದರೊಳಗೆ ತಮಗೆ ಸಾಧ್ಯವಾದಷ್ಟು ಕುರಿಗಳನ್ನು ತಮ್ಮ ಹಲ್ಲುಗಳಿಂದ ಕುರಿಯ ಕೆಳತುಟಿ ಭಾಗದಿಂದ ಚರ್ಮ ಸುಲಿಯುತ್ತಾರೆ. ಆ ಕುರಿ ರಕ್ತ ಕಾರಿ ಒದ್ದಾಡಿ ಸಾಯುತ್ತದೆ. ಹೀಗೆ ಒಬ್ಬೊಬ್ಬ ಈರಗಾರ ಕುರಿಮಂದೆ ದೇವಸ್ಥಾನದ ಸುತ್ತ ಸುತ್ತುವುದರೊಳಗೆ ಐದಾರು ಕುರಿಗಳನ್ನು ಗಾವುಸಿಗಿಯುತ್ತಾನೆ. ಕೆಲವರು ಒಂದನ್ನೂ ಸಿಗಿಯುವುದಿಲ್ಲ. ಯಾರಿಗೆ ದೇವರು ಮೈದುಂಬಿರುತ್ತದೆಯೋ ಅವರೇ ಗಾವು ಸಿಗಿಯುವುದು. ಗಾವು ಸಿಗಿಯುವಾಗ ಕೆಲವು ಕುರಿಗಳು ಒದ್ದಾಡಿ ನುಣುಚಿಕೊಳ್ಳುವುದು ಉಂಟು. ಹೀಗೆ ತಪ್ಪಿಸಿಕೊಂಡ ಕುರಿಗಳನ್ನು ಮತ್ತೆ ಹಿಡಿಯುವಂತಿಲ್ಲ. ಒಟ್ಟಿನಲ್ಲಿ ಇದೊಂದು ರುದ್ರವಾದ ಭೀಕರ ಘಟನೆ. ಕ್ಷಣದಲ್ಲಿ ಆಗಿ ಹೋಗುತ್ತದೆ. ಯಾರ ಮಂದೆಯಲ್ಲಿ ಈರಗಾರರು ಗಾವು ಸಿಗಿದಿರುತ್ತಾರೋ ಆ ಕುರಿಮಂದೆ ಮುಂದಿನ ವರ್ಷಗಳಲ್ಲಿ ಬಹು ಹೆಚ್ಚುತ್ತವೆ ಎಂಬುದಾಗಿ ಅನುಭವಸ್ಥರು ಹೇಳುತ್ತಾರೆ.[೭೪] ಗಾವು ಸಿಗಿಯುವುದು ಜಾತ್ರೆ ನಡೆಯುವ ಸ್ಥಳದಲ್ಲಿ ನಡೆಯದೇ ದೂರದ ಮತ್ತೊಂದು ಹೊರಗಿನ ಗುಡಿಯಲ್ಲಿ ನಡೆಯುತ್ತದೆ.

ಹಾಗೆಯೇ ಅಸಂದಿ ಬೀರದೇವರಿಗೆ ಊರೊಳಗೆ ಜಾತ್ರೆಯಾದರೆ ಅಸಂದಿಗೆ ನಾಲ್ಕು ಕಿ.ಮೀ. ದೂರದ ಬೇಗೂರು ಹೊರಗಲ ಗುಡಿಯಲ್ಲಿ ಮತ್ತು ಅಸಂದಿಗೆ ಐದು ಕಿ.ಮೀ. ದೂರದ ಹಡಗಲಿ ಹೊರಗಲ ಗುಡಿಗಳ ಆವರಣದಲ್ಲಿ ಗಾವು ಸಿಗಿಯುತ್ತಾರೆ ಮತ್ತು ತಾಳಿಕಟ್ಟೆ ಹಿರಿಯಯ್ಯನ ತೋಪುಜಾತ್ರೆಯಲ್ಲಿ ಹಿರಿಯಯ್ಯನ ಹೊರಗಲ ಗುಡಿಯಲ್ಲಿ ಗಾವು ಸಿಗಿಯುವುದು ನಡೆಯುತ್ತದೆ. ಇದರಿಂದ ಮಾಂಸದ ಅಡುಗೆ ಮಾಡುತ್ತಾರೆ.[೭೫] ಜಾತ್ರೆಗೆ ಬಂದ ಎಲ್ಲಾ ಜನರಿಗೆ ಊಟಕ್ಕೆ ಹಾಕುತ್ತಾರೆ. ಇಲ್ಲಿಗೆ ಗಾವು ಸಿಗಿಯುವ ಕಾರ್ಯಕ್ರಮ ಮುಗಿಯುತ್ತದೆ.

೫. ಅಲಗು ಹಾಕಿಕೊಳ್ಳುವ ಆಚರಣೆ

ಇದು ಬೀರದೇವರ ಭಕ್ತರಲ್ಲಿ ಕಂಡುಬರುವ ಉಗ್ರವಾದ ಆಚರಣೆಯಾಗಿದೆ. ಬೀರದೇವರ ಪೂಜಾರಿಗಳು ಹೆಚ್ಚಾಗಿ ಈ ಆಚರಣೆಯನ್ನು ನೆರವೇರಿಸುತ್ತಾರೆ. ಒಂದು ಕಬ್ಬಿಣದ ಸಲಾಕೆಯನ್ನು ಪೂಜೆಯ ನಂತರ

ಮೈದುಂಬಿದಾಗ ಹೊಟ್ಟೆಗೆ ಚುಚ್ಚಿಕೊಳ್ಳುತ್ತಾರೆ. ಪೂಜಾರಿ ಮಡಿವಂತನಾಗಿದ್ದು, ಭಕ್ತಿಯಿಂದ ಮಾಡಿದರೆ ಮಾತ್ರ ಅಲಗು ಹಾಕಿಕೊಳ್ಳಲು ಸಾಧ್ಯವಾಗುತ್ತದೆ. ಕಬ್ಬಿಣದ ಅಲಗನ್ನು ಚುಚ್ಚಿಕೊಂಡಾಗ ಆ ಜಾಗಕ್ಕೆ ಭಕ್ತರು ಭಂಡಾರವನ್ನು ಉಗ್ಗುತ್ತಾರೆ. ಬೆಂಗಳೂರು ಭಾಗಗಳಲ್ಲಿ ತಲೆಗೆ ತೆಂಗಿನಕಾಯಿ ಒಡೆದುಕೊಳ್ಳುವ ಆಚರಣೆಯಿದೆ. ಅದೇ ರೀತಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕದ ಭಾಗಗಳಲ್ಲಿ ಅಲಗು ಹಾಕಿಕೊಳ್ಳುವ ಆಚರಣೆಯಿದೆ. ಬೀರದೇವರ ಪೂಜಾರಿ ವಿಶೇಷ ಪೂಜಾ ಸಂದರ್ಭಗಳಲ್ಲಿ ಹೊಟ್ಟೆಗೆ ಅಲಗು ಹಾಕಿಕೊಳ್ಳುತ್ತಾರೆ. ಕೆಲವೊಮ್ಮೆ ದಪ್ಪನೆಯ ಕಬ್ಬಿಣದ ಗುಂಡುಳ್ಳ ಸರಪಣಿಯಿಂದ ಬೆನ್ನಿಗೆ ಹೊಡೆದುಕೊಳ್ಳುತ್ತಾರೆ. ಅರಿಸೀಕೆರೆ ಹತ್ತಿರ ಭರಗೂರು ಗ್ರಾಮದಲ್ಲಿ ಬೀರದೇವರ ಜಾತ್ರೆಯಲ್ಲಿ ಭಕ್ತರು ಕೈಗೆ, ನಾಲಿಗೆಗೆ ಅಲಗು(ಬಾಯಿಬೀಗ) ಹಾಕಿಕೊಳ್ಳುವುದು ಕಂಡುಬರುತ್ತದೆ.

ಒಟ್ಟಾರೆ ಕುರುಬರ ಧಾರ್ಮಿಕ ಆಚರಣೆಗಳು ಶಾಂತ ಹಾಗೂ ಉಗ್ರವಾದವುಗಳಾಗಿವೆ. ಬೀರದೇವನ ಭಕ್ತರಲ್ಲಿ ಅಧಿಕವಾಗಿ ಉಗ್ರರೂಪದ ಆಚರಣೆಗಳು ಕಂಡುಬರುತ್ತವೆ. ಪ್ರತಿಯೊಂದು ಆಚರಣೆಗಳು ಇಂದಿಗೂ ತಮ್ಮದೇ ಆದ ಮಹತ್ವವನ್ನು ಉಳಿಸಿಕೊಂಡಿರುವುದು ಕಂಡುಬರುತ್ತದೆ.

೬. ಕೀಲಕಟ್ಟೆಯ ಆಚರಣೆ

ಇದು ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಚಿಂಚಲಿ ಕ್ಷೇತ್ರದಲ್ಲಿ ನಡೆಯುತ್ತದೆ. ಆಚರಣೆಯ ದೃಷ್ಟಿಯಿಂದ ಇದು ಬೀರಪ್ಪನ ಆಚರಣೆಯಂತಿದ್ದು ಇಲ್ಲಿ ಈರಗಾರಿಕೆಯೂ ನಡೆಯುತ್ತದೆ. ಚಿಂಚಲಿಯ ಹಾಲುಮತ ಶಕ್ತಿದೇವತೆಯಾದ ಮಾಯಕ್ಕನು ಕೀಲಾಸುರನೆಂಬ ರಾಕ್ಷಸನನ್ನು ಕೊಂದು ಭಕ್ತರನ್ನು ಕಾಪಾಡುತ್ತಾಳೆ. ಕೀಲಾಸುರನ ಕೊನೆಯ ಬೇಡಿಕೆಯಂತೆ ಚಿಂಚಲಿಯಲ್ಲಿ ಮೂರು ವರ್ಷಕ್ಕೊಮ್ಮೆ ಕೀಲಪಟ್ಟಿಯ ಹಬ್ಬ ಮೂರು ದಿನಗಳ ಕಾಲ ನೆರವೇರುತ್ತದೆ. ಇದು ಮಾಯಕ್ಕನ ಆದೇಶವೆಂದು ಭಕ್ತರು ಹೇಳುತ್ತಾರೆ. ಇದು ಕಾರಹುಣ್ಣಿಮೆಯ ದಿನದಂದು ನಡೆಯುತ್ತದೆ. ಮೊದಲನೆಯ ದಿನ, ಮಾಯಕ್ಕನ ಗುಡಿಯಿಂದ ಸಂಜೆಯ ವೇಳೆ ಧೂಪದಾರತಿಯವರು, ಡೊಳ್ಳಿನ ಮೇಳದವರು, ಈರಗಾರರು, ಮುಂತಾದವರೊಡನೆ ಭಕ್ತಸಮೂಹವೂ ಒಳಗಿನ ಕೀಲಕಟ್ಟೆಗೆ ಬಂದು ಸೇರುತ್ತಾರೆ. ಧೂಪದಾರತಿಯ ಮುಂದೆ ಈರಗಾರರು ಈರಾಡುತ್ತಾರೆ. ಈರಾಡುವ ಕಾರ್ಯ ಮುಗಿಯುತ್ತಿದಂತೆ ಕೀಲಕಟ್ಟೆಗೆ ಕುರಿಮರಿಯನ್ನು ಹರಿದು ಬಲಿ ಕೊಡಲಾಗುತ್ತದೆ. ನಂತರ ಆ ಸ್ಥಳವನ್ನು ಪೂಜಿಸಿ ಅಲ್ಲಿರುವ ಮಣ್ಣಿನ ದಿಬ್ಬಗಳನ್ನು ಅಗೆದು ಅಲ್ಲಿರುವ ಕಲ್ಲು ತುಂಬಿದ ಹರವಿಯನ್ನು ಹೊರತೆಗೆದು ಸ್ವಚ್ಛಗೊಳಿಸಲಾಗುತ್ತದೆ. ಇದರಲ್ಲಿ ಜೋಳ ನೀರು ಹಾಕಿ ಇಡುತ್ತಾರೆ. ಬೇರೆ ಒಲೆಯಲ್ಲಿ ಹೋಳಿಗೆ ತಯಾರಿಸಿ ನೈವೇದ್ಯವನ್ನು ತಯಾರಿಸುತ್ತಾರೆ. ಭಕ್ತರೆಲ್ಲರೂ ಪ್ರಸಾದ ತೆಗೆದುಕೊಳ್ಳುತ್ತಾರೆ. ಮರುದಿನ ಇದೇ ರೀತಿ ಮಡಕೆಯಲ್ಲಿ ಜೋಳದ ಅಂಬಲಿಯನ್ನು ತಯಾರಿಸಿ ಆಯಾ ಬಾಗಿನದಾರರಿಗೆ ಒಪ್ಪಿಸಿ, ನೈವೇದ್ಯ ಮಾಡಿ ಭಕ್ತರಿಗೆ ಹಂಚುತ್ತಾರೆ. ಇದೆಲ್ಲ ಆದ ಮೇಲೆ ಮಡಕೆಗಳನ್ನು ತೊಳೆದು ಕಲ್ಲುಗಳನ್ನು ತುಂಬಿ ನೆಲದಲ್ಲಿ ಹುಗಿಯುತ್ತಾರೆ. ಅವುಗಳ ಮೇಲೆ ಸಣ್ಣಸಣ್ಣ ದಿನ್ನೆಗಳನ್ನು ಮಾಡುತ್ತಾರೆ. ಮೂರನೆಯ ದಿನವೂ ಭಕ್ತ ಜನ ಸೇರಿ ಅಸುರರಿಗೆ ಕಾಯಿ ಹೊಡೆದು ಆರತಿ ಮಾಡಿ ನೈವೇದ್ಯವನ್ನು ಹಂಚುತ್ತಾರೆ. ಇದೊಂದು ರಾಕ್ಷಸರಿಗೆ ಗೌರವ ತೋರುವ ವಿಶಿಷ್ಟ ಆಚರಣೆಯಾಗಿದೆ.

೭. ಹೊನ್ನಾಟ

ಬೀರದೇವರ ಜಾತ್ರೆಯಲ್ಲಿ ಅನೇಕ ಆಚರಣೆಗಳು ದೇವರ ಸೇವಾರ್ಥವಾಗಿ ನಡೆಯುತ್ತವೆ. ಅವುಗಳಲ್ಲಿ ಅಗ್ನಿಸೇವೆ, ಪಲ್ಲಕ್ಕಿ ಸೇವೆ, ಭೃಂಗಿ ಸೇವೆ, ದಳವಾಯಿ ಸೇವೆ, ಕದಳಿ ಕಟ್ಟೋ ಸೇವೆ, ಹಾಲುಬಾನ ಸೇವೆ ಇತ್ಯಾದಿ ಸೇವೆಗಳು ನಡೆಯುತ್ತವೆ. ಅಂತವುಗಳಲ್ಲಿ ಹೊನ್ನಾಟವೂ ಒಂದು. ಹೊನ್ನಾಟವು ಬೀರಪ್ಪನ ಜಾತ್ರೆಯ ಕೊನೆಯ ದಿನ ನಡೆಯುತ್ತದೆ. ಹೊನ್ನಾಟವೆಂದರೆ ಬಂಗಾರದ ಆಟವೆಂದು ಅರ್ಥವಲ್ಲ. ಇದು ಜಾತ್ರೆಯ ದಿನ ನಡೆಯುವ ಒಂದು ಆಚರಣೆ. ಮಧ್ಯಕರ್ನಾಟಕದ ಬೀರದೇವರ ದೇವಸ್ಥಾನಗಳಲ್ಲಿ ಓಲಗಸೇವೆ ಮತ್ತು ಒಡ್ಡೋಲಗಸೇವೆ ಎಂಬ ಸೇವೆಗಳು ನಡೆಯುತ್ತವೆ. ಹೊನ್ನಾಟವು ಇವುಗಳಿಗಿಂತ ಭಿನ್ನವಾಗಿದ್ದು ದೇವರು ತಮ್ಮ ಭಕ್ತರ ಮನೆಗೆ ತೆರಳಿ ಭಕ್ತ ದೈವದ ಸಂಬಂಧ ಗಟ್ಟಿಗೊಳಿಸುತ್ತಾನೆ. ಜಾತ್ರೆಯ ಮೂರನೆಯ ದಿನ ಹೊನ್ನಾಟ ಶುರುವಾಗುತ್ತದೆ. ಬೀರಪ್ಪನ ಪಲ್ಲಕ್ಕಿಯನ್ನು ಹೊತ್ತುಕೊಂಡು ಜನರು ಆವೇಶಭರಿತರಾಗಿ ಕುಣಿಯುತ್ತ ಓಡಾಡುವರು. ಬೆಳಗಿನಿಂದ ಸಂಜೆಯವರೆಗೆ ಹೊನ್ನಾಟ ನಡೆಯುವುದು. ಬೀರಪ್ಪನು ಹೊನ್ನಾಟವಾಡುತ್ತ ಗ್ರಾಮದ ಪ್ರತಿಯೊಂದು ಭಕ್ತರ ಮನೆಗೆ ಹೋಗಿ ಉಡಿ ತುಂಬಿಸಿಕೊಳ್ಳುತ್ತಾನೆ. ಆಗ ಭಕ್ತರಿಗೆ ಭಂಡಾರ ಹಚ್ಚುತ್ತಾರೆ. ಹೊನ್ನಾಟವು ಜಾತ್ರೆಯ ಆಕರ್ಷಕ ಭಾಗವಾಗಿದ್ದು ಆ ವೈಭವವನ್ನು ನೋಡಲೆಂದೇ ಅಸಂಖ್ಯಾತ ಜನರು ಸೇರುತ್ತಾರೆ. ಊರ ದೈವದವರು ಮತ್ತು ಗ್ರಾಮದ ಎಲ್ಲ ಜಾತಿಯ ಜನರು ಹೊನ್ನಾಟದ ಸಂದರ್ಭದಲ್ಲಿ ದೇವರ ಜೊತೆಯಲ್ಲಿಯೇ ಇರುತ್ತಾರೆ. ಹೊನ್ನಾಟದ ಹಿಂದಿನ ತಾತ್ವಿಕತೆಯೆಂದರೆ ಬೀರಪ್ಪ ಪ್ರತಿಯೊಂದು ಭಕ್ತರ ಮನೆಗೆ ಬೇಟಿ ಕೊಟ್ಟು ಅವರ ಯೋಗಕ್ಷೇಮ ವಿಚಾರಿಸುತ್ತಾನೆ. ಅವರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಾನೆ. ಅದರಿಂದ ದೈವ ಭಕ್ತರ ಆತ್ಮೀಯ ಸಂಬಂಧ ಹೆಚ್ಚುತ್ತದೆ ಮತ್ತು ಅದು ಸಾಂಸ್ಕೃತಿಕ ನೆಲೆಯಲ್ಲಿ ಗಟ್ಟಿಯಾಗುತ್ತದೆ. ಇಂತಹ ಆಚರಣೆಗಳು ಗ್ರಾಮೀಣ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಲು ಸಹಕಾರಿಯಾಗಿವೆ. ಜಾತ್ರೆ ಸಂದರ್ಭದಲ್ಲಿ ಬೀರದೇವರು ಪೂಜಾರಿಯ ಮೈಮೇಲೆ ಬಂದು ಆ ವರ್ಷದ ಮಳೆ, ಬೆಳೆ, ಆಗುಹೋಗುಗಳ ಕುರಿತು ಭವಿಷ್ಯವಾಣಿ ನುಡಿಯುತ್ತಾನೆ. ಈ ಸಮಯದಲ್ಲಿ ದೈವದವರು ಊರಿನವರು ಭಕ್ತಿ ಶ್ರದ್ಧೆಯಿಂದ ಅವನ ಹೇಳಿಕೆಯನ್ನು ಕೇಳುತ್ತಾರೆ.

೮. ಹಾಲುಬಾನ ಸೇವೆ

ಬೀರಪ್ಪನ ಜಾತ್ರೆಗೆ ಎರಡು ದಿನ ಮುಂಚಿತವಾಗಿ ಅವರವರ ಊರುಗಳಲ್ಲಿ ಈ ಸೇವೆಯ ತಯಾರಿ ನಡೆಯುತ್ತದೆ. ಪಶುಪಾಲಕರಾದ ಹಾಲುಮತಸ್ಥ ಕುರುಬರು ಸ್ನಾನ ಮಾಡಿ ಮಡಿಯುಟ್ಟು, ಶ್ರದ್ಧಾಭಕ್ತಿಯಿಂದ ಬೀರಪ್ಪನನ್ನು ನೆನೆಯುತ್ತ ತಮ್ಮ ಸಾಕುಪ್ರಾಣಿಗಳಾದ ಕುರಿ, ಹಸು, ಆಡು, ಎಮ್ಮೆಗಳ ಹಾಲನ್ನು ಕರೆದು ಹೊಸ ಮಡಕೆಯಲ್ಲಿ ಹಾಲನ್ನು ಕಾಯಿಸುತ್ತಾರೆ. ಕರೆದ ಹಾಲನ್ನು ಮನೆಯಲ್ಲಿ ಪ್ರತ್ಯೇಕ ಒಲೆಗುಂಡುಗಳನ್ನು ಹೂಡಿ ಹಾಲು ಕಾಯಿಸುವುದು ಕಂಡುಬರುತ್ತದೆ. ನಂತರ ಅದಕ್ಕೆ ಹೆಪ್ಪು ಹಾಕುತ್ತಾರೆ. ಜಾತ್ರೆಗೆ ಈ ಮಡಕೆಯನ್ನು ತೆಗೆದುಕೊಂಡು ಹೋಗುತ್ತಾರೆ. ಜಾತ್ರೆಯ ದಿನ ಮೀಸಲಿಟ್ಟ ಅಕ್ಕಿಯನ್ನು ಐದಾರು ಸಲ ಸ್ವಚ್ಛವಾಗಿ ಮಡಿಯುಡಿಯಲ್ಲಿ ತೊಳೆದು ಅದನ್ನು ಮಡಕೆಗೆ ಹಾಕುತ್ತಾರೆ. ಹೆಪ್ಪುಗಟ್ಟಿದ ಹಾಲನ್ನು ಮಾತ್ರ

ಇದಕ್ಕೆ ಹಾಕಲಾಗುತ್ತದೆ. ಪ್ರತ್ಯೇಕ ಒಲೆಗುಂಡಗಳನ್ನು ಹೂಡಿ ದೇವಸ್ಥಾನದಿಂದ ಉರಿಯುವ ಹಣತೆಯನ್ನು ತಂದು ಬೆಂಕಿಯನ್ನು ಮಾಡಿ ಹಾಲುಬಾನವನ್ನು ತಯಾರಿಸುತ್ತಾರೆ. ಇದನ್ನು ತಯಾರಿಸುವವರು ಸ್ನಾನ ಮಾಡಿ ಮಡಿಯುಟ್ಟು, ತಮ್ಮ ಮೂಗುಬಾಯಿಗಳಿಗೆ ಬಿಳಿವಸ್ತ್ರವನ್ನು ಧರಿಸಿರುತ್ತಾರೆ. ತಯಾರಿಸುವವರ ಉಸಿರು ತಾಗಿ ಹಾಲುಬಾನವು ಮೈಲಿಗೆಯಾಗಬಾರದೆಂಬ ಉದ್ದೇಶದಿಂದ ಈ ಕ್ರಮವನ್ನು ಕೈಗೊಳ್ಳಲಾಗುತ್ತದೆ. ಹಾಲುಬಾನ ವನ್ನು ತಯಾರಿಸಿದ ಒಲೆಯ ಮೇಲೆ ಬೇರೆ ಅಡುಗೆಯನ್ನು ಮಾಡುವುದಿಲ್ಲ. ತಯಾರಿಸಿದ ಹಾಲುಬಾನವನ್ನು ದೇವಸ್ಥಾನಕ್ಕೆ ಶ್ರದ್ಧಾಭಕ್ತಿಯಿಂದ ತೆಗೆದುಕೊಂಡು ಹೋಗಿ ದೇವರಿಗೆ ಅರ್ಪಿಸಿ ಬರುತ್ತಾರೆ. ಈ ಪ್ರಸಾದವು ತಯಾರಿಸುವಾಗ ಕೆಟ್ಟರೆ ಬೇಡಿಕೊಂಡವರಿಗೆ ಕೇಡಾಗುವುದೆಂದೂ ಶುದ್ಧವಾಗಿದ್ದರೆ ಶುಭವಾಗುವುದೆಂಬ ನಂಬಿಕೆ ಭಕ್ತವರ್ಗದ್ದಾಗಿದೆ. ಇದನ್ನು ಇತರ ಜಾತಿ ಜನಾಂಗದವರೂ ಸಹ ಮಾಡುತ್ತಾರೆ. ಆದರೆ ಸೇವಾರ್ಪಣೆ ಮಾಡುವಾಗ ಹಾಲುಮತದವರ ಮುಖಾಂತರ ಮಾಡುವುದು ಗಮನಾರ್ಹವಾಗಿದೆ. ಇದು ಜಾತ್ರೆಯ ಸಂದರ್ಭದಲ್ಲಿ ಶುಕ್ರವಾರ ನಡೆಯುವ ಸೇವೆಯಾಗಿದೆ. ಈ ಸೇವೆಯು ನಾಗತಾಣ, ದಾವಣಗೆರೆ, ಕಡೂರು, ಬೀರೂರು, ಮುಖ್ಯವಾಗಿ ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲೂಕು ಮೆಡ್ಲೇರಿ ಗ್ರಾಮದಲ್ಲಿ ನೆಲೆ ನಿಂತಿರುವ ಬೀರಪ್ಪ (ಕರಿಯಪ್ಪ)ನಿಗೆ ಮಾಡುವ ಒಂದು ವಿಶಿಷ್ಟವಾದ ಮತ್ತು ಭಕ್ತಿ ಪರಾಕಾಷ್ಠತೆಯನ್ನು ಮೆರೆಯುವ ಸೇವೆಯಾಗಿದೆ. ಇಲ್ಲಿ ಪರಂಪರಾಗತವಾಗಿ ಬಂದ ಕೆಲವು ಸೇವಾಚರಣೆಗಳು ಇವೆ. ಅವುಗಳಲ್ಲಿ ೧. ಬಾಗಿಲು ಚಾಕರಿ ಸೇವೆ, ೨. ಹಾಲುಬಾನ ಸೇವೆ, ೩. ಕೀಲಕಟ್ಟೆ ಸೇವೆ, ೪. ಹಲಮರಿ ಸೇವೆ, ೫. ವಾಲಗ ಸೇವೆ ಹೀಗೆ ಈ ದೇವರಿಗೆ ಇನ್ನೂ ಪ್ರಮುಖವಾದ ಸೇವಾಚರಣೆಗಳು ಇವೆ.

೯. ಅಗ್ನಿಸೇವೆ

ಅಗ್ನಿಯನ್ನು ಪಶುಪಾಲಕರಾದ ಹಾಲುಮತ ಜನಾಂಗದ ಆದಿದೈವವೆಂದು ಹೇಳಬಹುದು. ಕುರಿ ವಾಹನನಾದ ಅಗ್ನಿಯು ಲೋಕಸಂಚಾರ ಮಾಡುವಾಗ ಹಾಲುಮತದವರ ರಕ್ಷಣೆ ಮಾಡಿದನೆಂಬ ನಂಬಿಕೆಯಿಂದ ಕುರುಬರ ಕುಲದೈವವಾದ ಬೀರಪ್ಪನೊಂದಿಗೆ ಅಗ್ನಿ(ಕೆಂಡ) ಹಾಯ್ದು ತಮ್ಮ ಪವಿತ್ರತೆಯನ್ನು ಹಾಗೂ ಮುಗ್ಧಭಕ್ತಿಯನ್ನು ಪ್ರಕಟಪಡಿಸುವ ಉದ್ದೇಶ ಈ ಆಚರಣೆಯ ಹಿಂದಿದೆ. ಬೀರಪ್ಪನು ಕೆಂಡವನ್ನು ಹಾಯುವಂತಹ ಪ್ರಾಚೀನ ದೈವವಾಗಿದ್ದು ಈ ಆಚರಣೆಯು ಅವನಷ್ಟೇ ವಯೋಮಾನ ಹೊಂದಿದೆ ಎಂದು ಹೇಳಬಹುದು.

ಕೆಂಡ ಹಾಯುವ ಸೇವೆಯು ತುಂಬ ನೈಜತೆಯಿಂದ ಕೂಡಿದ ಆಚರಣೆಯಾಗಿದೆ. ಈ ಸೇವೆಯು ಕೆಲವು ಸೀಮಿತ ಪ್ರದೇಶಗಳಲ್ಲಿ ಪ್ರತಿವರ್ಷ ನಡೆಯುವ ಬೀರಪ್ಪನ ಜಾತ್ರೆ ಹಾಗೂ ಉತ್ಸವಗಳಲ್ಲಿ ಆಚರಣೆಯಲ್ಲಿದೆ. ಚಿಕ್ಕಮಗಳೂರು, ಕಡೂರು, ಹುಲಬೆಂಕಿ, ಬೀರಲಿಂಗೇಶ್ವರ, ಶ್ರೀರಂಗಪಟ್ಟಣ ತಾಲೂಕು, ಚಳ್ಳಕೆರೆ, ಚನ್ನಗಿರಿ ತಾಲೂಕಿನ ಬೆಳಲಗೆರೆ, ಹಾವೇರಿ ಜಿಲ್ಲೆಯ ಭರಡಿ, ಹರಿಹರ ತಾಲೂಕಿನ ಹದಡಿ, ಕುಣೆಬೆಳಕೆರೆ ಹೀಗೆ ಹಲವು ಪ್ರದೇಶಗಳಲ್ಲಿ ನೆಲೆಸಿರುವ ಬೀರಪ್ಪನ ಭಕ್ತರು ಕಾರ್ತಿಕ ಮಾಸದಲ್ಲಿ ಅಥವಾ ಶ್ರಾವಣ ಮಾಸದಲ್ಲಿ ನಡೆಯುವ ಬೀರಪ್ಪನ ಉತ್ಸವಗಳಲ್ಲಿ ಅಗ್ನಿಯನ್ನು ಹಾಯುತ್ತಾರೆ. ಇಲ್ಲಿ ವಿವರಿಸಿರುವ ಅಗ್ನಿಸೇವೆಯು ಪ್ರಮುಖವಾಗಿದೆ.

ಉತ್ಸವದ ದಿನ ಬೆಳಗ್ಗೆ ಬೀರದೇವರು ಈರಗಾರ ಪೂಜಾರಿ ಮತ್ತು ಊರಿನ ಇತರ ದೈವಗಳೊಂದಿಗೆ ಹೊಳೆಪೂಜೆಗೆ ಹೊರಡುತ್ತದೆ. ಹೊಳೆಸ್ನಾನವಾದ ನಂತರ ಭಕ್ತರಿಂದ ಗಂಗಾಪೂಜೆಯೂ ನೆರವೇರುತ್ತದೆ. ಗಂಗೆಯ ಪವಿತ್ರ ಜಲವನ್ನು ಒಂದು ಕೊಡದಲ್ಲಿ ತೆಗೆದುಕೊಂಡು, ಪೂಜಿಸಿ ಅದನ್ನು ದೈವಗಳೊಂದಿಗೆ ಗ್ರಾಮಕ್ಕೆ ತರುತ್ತಾರೆ. ಊರಿನ ಬೀರದೇವರ ದೇವಸ್ಥಾನಗಳ ಎದುರು ಅಗಸಿಯಲ್ಲಿ ನಿಗಿನಿಗಿ ಕೆಂಡದ ಅಗ್ನಿಕುಂಡವನ್ನು ಚೌಕಾಕಾರ ಸುಮಾರು ೧೦ ಅಡಿ ಭುಜದ ಚೌಕಾಕಾರದಲ್ಲಿ ಭಕ್ತರು ನಿರ್ಮಿಸಿ ಸಿದ್ಧಗೊಳಿಸಿರುತ್ತಾರೆ. ಈ ಅಗ್ನಿಕುಂಡದ ಹತ್ತಿರವಿರುವ ಪೀಠದಲ್ಲಿ ಬೀರಪ್ಪ ಇಡೀ ದಿನ ವಿರಾಜಮಾನವಾಗಿ ಊರಿನ ಪ್ರತಿ ಮನೆಯ ಭಕ್ತ ಜನರಿಂದ ಪೂಜಿತನಾಗುತ್ತಾನೆ. ಅವನೊಂದಿಗೆ ಅಲಗು ಹಿಡಿದು ಈರಗಾರ, ಗಂಗಾದೇವಿ, ಡೊಳ್ಳುಮೇಳ, ಊರಿನ ಇತರೇ ದೈವಗಳೂ ಪೂಜೆಗೊಳ್ಳುತ್ತಾರೆ. ಆ ದಿನ ಸಂಧ್ಯಾಕಾಲದ ಅಮೃತಘಳಿಗೆಯಲ್ಲಿ ಅಗ್ನಿಕುಂಡವನ್ನು ಅಂತಿಮವಾಗಿ ಸಿದ್ಧಪಡಿಸಿ ಕುರುಬರ ಒಡೆಯರು ಅಥವಾ ಐನೋರು ಅಗ್ನಿಕುಂಡವನ್ನು ಪೂಜಿಸುತ್ತಾರೆ. ಪವಿತ್ರಜಲವನ್ನು ಅಗ್ನಿಕುಂಡದ ಸುತ್ತಲೂ ಸಿಂಪಡಿಸುತ್ತಾರೆ. ಬೀರದೇವರ ಸ್ಥಾವರಮೂರ್ತಿಯನ್ನು ಹೊತ್ತ ಪಲ್ಲಕ್ಕಿಯನ್ನು ಮುಟ್ಟಿ ನಮಸ್ಕರಿಸಿದ ವೀರಗಾರ, ಸುತ್ತೇಳು ದೈವಗಳಿಗೆ ಡೊಳ್ಳುಗಳಿಗೆ ನಮಸ್ಕರಿಸಿ, ಡೊಳ್ಳುಗಳ ವಾದ್ಯಕ್ಕೆ ತಕ್ಕಂತೆ ಈರಗಾರಿಕೆ ಮಾಡುತ್ತಾನೆ. ನಂತರ ಒಬ್ಬನೇ ಪೂರ್ವ ದಿಕ್ಕಿನಿಂದ ಅಗ್ನಿಕುಂಡವನ್ನು ಪ್ರವೇಶಿಸಿ ಪಶ್ಚಿಮದ ಅಂಚಿಗೆ ಬಂದು ಪುನಃ ಪೂರ್ವ ದಿಕ್ಕಿಗೆ ಬಂದು ಬೀರದೇವರ ಸ್ಥಾವರಮೂರ್ತಿಯಿರುವ ಪಲ್ಲಕ್ಕಿಯನ್ನು ಎಳೆದುಕೊಂಡು ಆಗ್ನೇಯ ದಿಕ್ಕಿನ ಮೂಲೆಯಿಂದ ಅಗ್ನಿಕುಂಡವನ್ನು ಪ್ರವೇಶಿಸಿ ಉತ್ತರ ದಿಕ್ಕಿನ ಅಂಚನ್ನು ತಲುಪುತ್ತಾನೆ. ಅವನ ಹಿಂದೆ ಪಲ್ಲಕ್ಕಿಯ ಜೊತೆ ಪೂಜಾರಿ, ಗಂಗೆ ಹೊತ್ತವನು, ಡೊಳ್ಳಿನವರು, ಊರಿನ ದುರ್ಗಾದೇವಿ, ಕಾಳಿ ಹಾಗೂ ಬೇಡಿಕೆ ಹೊತ್ತ ಭಕ್ತರೂ ಸಹ ಅಗ್ನಿ ತುಳಿಯುತ್ತ ಅವನನ್ನು ಅನುಸರಿಸುತ್ತಾರೆ. ಉತ್ತರ ದಿಕ್ಕಿನಿಂದ ಪ್ರವೇಶಿಸಿ ದಕ್ಷಿಣ ದಿಕ್ಕಿಗೆ ಬಂದು ಮತ್ತೊಂದು ಸಾರಿ ಅಗ್ನಿಕುಂಡವನ್ನು ಪ್ರವೇಶಿಸಿ ಹಿಂತಿರುಗುವ ಪ್ರಕ್ರಿಯೆ ಜರುಗುತ್ತದೆ. ಇದಾದ ನಂತರ ಈರಗಾರ ಬೀರದೇವರ ಪಲ್ಲಕ್ಕಿಯನ್ನು ದಕ್ಷಿಣದ ಅಂಚಿನಿಂದ ಪಶ್ಚಿಮಕ್ಕೆ ಕರೆತಂದು ಅಲ್ಲಿಂದ ಅಗ್ನಿಯನ್ನು ಪ್ರವೇಶಿಸಿ ಪೂರ್ವಕ್ಕೆ ಬಂದು, ಪೀಠದ ಕಟ್ಟೆಯನ್ನು ಸುತ್ತುವರೆದು ಪಶ್ಚಿಮಕ್ಕೆ ಮುಖ ಮಾಡಿ ನಿಂತುಕೊಳ್ಳುತ್ತಾನೆ. ಇಲ್ಲಿಗೆ ಅಗ್ನಿ ತುಳಿಯುವ ಆಚರಣೆಯು ಮುಕ್ತಾಯವಾಗುತ್ತದೆ. ಅಗ್ನಿಕುಂಡ ಹಾಯುವ ಸಮಯದಲ್ಲಿ ಭಕ್ತರು ಬೀರಪ್ಪನಿಗೆ ಜಯವಾಗಲಿ, ಏಳುಕೋಟಿ, ಏಳುಕೋಟಿ ಚಾಂಗಭಲೋ ಎಂಬ ಏಕಕಂಠದ ಜಯಘೋಷಗಳನ್ನು ಹಾಕುತ್ತಾರೆ. ಈ ಆಚರಣೆ ಮುಗಿದ ನಂತರ ಬೀರದೇವರು ಉಳಿದ ದೈವಗಳೊಂದಿಗೆ ಗ್ರಾಮದ ಮನೆಮನೆಗೂ ತೆರಳಿ ಭಕ್ತರಿಂದ ಪೂಜೆಗೊಂಡು ನಂತರ ಗುಡಿದುಂಬುತ್ತಾನೆ.

೧೦. ಪಂಚಾಮೃತ ಅಭಿಷೇಕ

ಕರ್ನಾಟಕದ ಕೆಲವು ಬೀರದೇವರ ದೇವಸ್ಥಾನಗಳಲ್ಲಿ ಬೀರಪ್ಪನಿಗೆ ಪಂಚಾಮೃತ ಅಭಿಷೇಕ ಸೇವೆಯನ್ನು ಮಾಡಲಾಗುತ್ತದೆ. ಬಾಳೆಹಣ್ಣು, ಬೆಲ್ಲ, ತೆಂಗಿನ ತುರಿ, ಖರ್ಜೂರ, ಕಲ್ಲುಸಕ್ಕರೆ, ಜೇನುತುಪ್ಪ, ಪಚ್ಚಕರ್ಪೂರಗಳ ಮಿಶ್ರಣವನ್ನು ಪಂಚಾಮೃತ ಎಂದು ಕರೆಯುತ್ತಾರೆ.

ಸಾಮಾನ್ಯವಾಗಿ ಮಧ್ಯ ಕರ್ನಾಟಕ ಮತ್ತು ಉತ್ತರ ಕರ್ನಾಟಕಗಳ ಬೀರಪ್ಪನ ಸಂಪ್ರದಾಯದಲ್ಲಿ ಬೀರದೇವರಿಗೆ ಅಭಿಷೇಕವು ಕಂಡುಬರುತ್ತದೆ. ಉಯ್ಯಾಲೆಯಲ್ಲಿ ಕುದುರೆಯೇರಿದ ಶಿಲ್ಪದಲ್ಲಿ ಕಂಗೊಳಿಸುವ ಮೂರ್ತಿಯನ್ನು ಪೂಜಾ ವೇಳೆಯಲ್ಲಿ ಮಡಿನೀರಿನಿಂದ ತೊಳೆದು ಶೃಂಗರಿಸಿ ಪೂಜೆ ಮಾಡುತ್ತಾರೆ. ಜಾತ್ರೆ, ಉತ್ಸವಗಳಂತಹ ವಿಶೇಷ ಸಂದರ್ಭದಲ್ಲಿ ಬೀರದೇವರು ಮತ್ತು ಹಾಲುಮತಸ್ಥ ದೈವಗಳು ಹೊಳೆಸ್ನಾನ ಮಾಡುವುದನ್ನು ನೋಡಬಹುದು. ಆದರೆ ಇತ್ತೀಚೆಗೆ ಬೀರದೇವರ ಗರ್ಭಗುಡಿಯಲ್ಲಿ ಲಿಂಗ ಪ್ರತಿಷ್ಠಾಪನೆಯಾಗಿರುವುದನ್ನು ಗಮನಿಸುತ್ತೇವೆ. ಮೂಲತಃ ಕುರುಬರು ಲಿಂಗಾರಾಧಕರೆಂದು ಡಾ. ಫ್ರಿಲಪ್ಕಿ ಹೇಳುತ್ತಾರೆ. ಇದಕ್ಕೆ ಸಾಕ್ಷಿಯಾಗಿ ಮಧ್ಯ ಕರ್ನಾಟಕದ ಹೊರಬೀರಪ್ಪನ ದೇವಸ್ಥಾನಗಳಲ್ಲಿ ಸಿಗುವ ಬೀರಪ್ಪನ ದುಂಡುಕಲ್ಲಿನ ವಿಗ್ರಹಗಳನ್ನು ನೋಡಬಹುದು. ಕಡೂರು, ಬೀರೂರು, ಸಾತನೂರು, ಕೊಡಿದೊಡ್ಡಿ, ಬೆಂಗಳೂರು, ಕಡೂರು ತಾಲೂಕಿನ ಖಂಡುಗದಹಳ್ಳಿಯ ಸೋಮೇಶ್ವರನು ಶೈವ ಪ್ರಭಾವದ ಬೀರಪ್ಪನಾಗಿದ್ದಾನೆ. ಇಂತಹ ಕಡೆಗಳಲ್ಲಿ ಮಾತ್ರ ಅಭಿಷೇಕದಂತಹ ವೈದಿಕ ಪೂಜಾವಿಧಿಗಳು ನಡೆಯುತ್ತವೆ.

ಮಂಡ್ಯ ಜಿಲ್ಲೆ ಕೊಡಿದೊಡ್ಡಿ, ಸಾತನೂರು ಕಡೆ ಬೀರಪ್ಪನನ್ನು ಶಿವ ಎಂದು ಕರೆಯಲಾಗುತ್ತದೆ. ಇಲ್ಲಿ ಲಿಂಗಾಯತರು, ಕುರುಬರು ಇಬ್ಬರೂ ಪೂಜೆ ಮಾಡುತ್ತಾರೆ. ಬೀರಪ್ಪನಿಗೆ ಅಭಿಷೇಕ ಮಾಡುವಾಗ ಸೀಗೆಕಾಯಿಯಿಂದ ದೇವರನ್ನು ಪೂರ್ಣವಾಗಿ ತೊಳೆದು ವಿಭೂತಿ ಧರಿಸಿ ಹೂ ಇಟ್ಟು ಗಂಧದ ಕಡ್ಡಿಯಿಂದ ಪೂಜೆ ಮಾಡುತ್ತಾರೆ. ನಂತರ ಲಿಂಗದ ಮೇಲೆ ಹಾಲು, ಮೊಸರು, ತುಪ್ಪ, ಅರಿಶಿನ, ಕುಂಕುಮ, ನಿಂಬೆರಸ, ಎಳನೀರು, ಬಿಳಿ ಸಕ್ಕರೆ ಹಾಗೂ ಜೇನುತುಪ್ಪ ಇವುಗಳಿಂದ ಬೇರೆಬೇರೆಯಾಗಿ ಹಂತಹಂತವಾಗಿ ಅಭಿಷೇಕ ಮಾಡಿಸುತ್ತಾರೆ. ಇದಾದ ನಂತರ ಪಂಚಾಮೃತವನ್ನು ಮಾಡಿ ದೇವರಿಗೆ ಪೂರ್ಣವಾಗಿ ಹೊದಿಸುತ್ತಾರೆ. ನಂತರ ಹೂ ಧರಿಸಿ ವಸ್ತ್ರ ಧರಿಸಿ ಮಂಗಳಾರತಿ ಮಾಡುವರು. ಭಕ್ತಾದಿಗಳಿಗೆ ತೀರ್ಥಪ್ರಸಾದವನ್ನು ಕೊಡುತ್ತಾರೆ. ಇದೆಲ್ಲ ಆದ ನಂತರ ದೇವರಿಗೆ ಅಭಿಷೇಕವನ್ನು ತೆಗೆದು ಪುಣ್ಯಜಲದಿಂದ ದೇವರನ್ನು ಸಂಪೂರ್ಣ ತೊಳೆದು ವಿಭೂತಿ, ಗಂಧವನ್ನು ಹಚ್ಚಿ ಹೂವಿನಿಂದ ಅಲಂಕಾರವನ್ನು ಮಾಡಿ ಅಭಿಷೇಕವನ್ನು ಮಾಡಿಸುವವರ ಹೆಸರಿನಲ್ಲಿ ಸಂಕಲ್ಪ ಮಾಡುತ್ತಾರೆ. ಸ್ವಾಮಿಯ ಸಹಸ್ರ ನಾಮಾವಳಿಗಳನ್ನು ಪಠಿಸುವುದು ಕಂಡುಬರುತ್ತದೆ.

೧೧. ಕದಳಿಕಟ್ಟೋ ಸೇವೆ

ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದಲ್ಲಿ ಕೆಲವು ಬೀರಪ್ಪನ ಗುಡಿಗಳಲ್ಲಿ ಮತ್ತು ಜಾತ್ರೆ ಸಂದರ್ಭದಲ್ಲಿ ಕದಳಿ ಕಟ್ಟೋ ಸೇವೆ ಮಾಡುತ್ತಾರೆ. ಮೊದಲು ಬೀರಪ್ಪನ ಸ್ಥಾವರಮೂರ್ತಿಗೆ ವಿಧಿವಿಧಾನವಾಗಿ ಪೂಜೆ ಸಲ್ಲುತ್ತದೆ. ಸ್ಥಾವರಮೂರ್ತಿಯ ಎದುರಿಗೆ ಎರಡು ದೊಡ್ಡ ಗಾತ್ರದ ಡೊಳ್ಳುಗಳನ್ನಿಟ್ಟು ಪೂಜೆ ಮಾಡಿ ಅವುಗಳನ್ನು ಇಬ್ಬರು ಸೊಂಟಕ್ಕೆ ಕಟ್ಟಿಕೊಳ್ಳುತ್ತಾರೆ. ಅವರನ್ನು ಗರ್ಭಗುಡಿಯಿಂದ ಹೊರಗೆ ಪೂಜಾರಿಯು ಕರ್ಪೂರದಾರತಿಯೊಂದಿಗೆ ಕರೆತಂದು ಓಲಗಕ್ಕೆ ಬಿಟ್ಟು ಸತ್ತಿಗೆಯನ್ನು ಪೂಜಿಸಿ ಹೋಗುತ್ತಾನೆ. ಇವೆರಡು ಡೊಳ್ಳುಗಳನ್ನು ಬಾರಿಸುವುದರೊಂದಿಗೆ ವಾದ್ಯಸೇವೆ ಆರಂಭಗೊಳ್ಳುತ್ತದೆ. ಇತರ ಚಿಕ್ಕದೊಡ್ಡ ಸುಮಾರು ಹತ್ತು ಡೊಳ್ಳುಗಳು ಇವುಗಳನ್ನು ಸೇರಿಕೊಳ್ಳುತ್ತವೆ. ಡೊಳ್ಳುಸೇವೆಯು ಒಂದು ಆವರ್ತ ನಿರಂತರವಾಗಿ

ನಡೆಯುತ್ತಿದ್ದರೆ ಒಳಗೆ ಬೀರಪ್ಪನ ಸನ್ನಿಧಿಯಲ್ಲಿ ಇಬ್ಬರು ಈರಗಾರರು ಈರಿಕೆಯ ಕಾಸೆಗಳನ್ನು ಧರಿಸಿ ಪೂಜೆಗೊಂಡು ಪೂಜಾರಿಯೊಂದಿಗೆ ಓಲಗಕ್ಕೆ ಬರುತ್ತಾರೆ. ಓಲಗಶಾಲೆಯಲ್ಲಿ ಸ್ಥಾವರಮೂರ್ತಿಗೆ ಅಭಿಮುಖವಾಗಿ ನಿಂತುಕೊಂಡು ಕುಣಿಯುತ್ತಾ ಓಲಗಸೇವೆಯನ್ನು ಆರಂಭಿಸುತ್ತಾರೆ. ಇವರ ಸಂಖ್ಯೆ ಕ್ರಮೇಣ ಹೆಚ್ಚುತ್ತ ಹೋಗಿ ಹನ್ನೆರಡು ಈರಗಾರರು ಸನ್ನಿಧಿಗೆ ಬರುತ್ತಾರೆ. ಕದಳಿ ಸೇವೆ ಅಥವಾ ಓಲಗಸೇವೆಯು ಮೂರು ಹಂತಗಳಲ್ಲಿ ನಡೆಯುತ್ತದೆ.

ಮೊದಲಿಗೆ ಡೊಳ್ಳು ಬಾರಿಸುವಿಕೆ ಒಂದು ಆವರ್ತಕಾಲ ನಡೆಯುತ್ತದೆ. ಬೀರದೇವರ ಸ್ಥಾವರಮೂರ್ತಿಗೆ ಮುಖಾಮುಖಿಯಾಗಿ ಡೊಳ್ಳಿನ ತಂಡ ನಿಲ್ಲುತ್ತದೆ. ಮೊದಲಿಗೆ ಸಾಲಾಗಿ ಒಬ್ಬರ ಹಿಂದೆ ಒಬ್ಬರು ನಿಂತು ಭಾರಿಸುತ್ತಾರೆ. ಈ ಬಾರಿಸುವಿಕೆಯಲ್ಲಿ ಬೀರಪ್ಪನಿಗೆ ನೀನು ಕೇಳಲು ಹೆಚ್ಚೋ, ನಾನು ಭಾರಿಸಲು ಹೆಚ್ಚೋ ಎಂಬ ಅವೇಶಭರಿತವಾದ ಡೊಳ್ಳಿನ ರಣವಾದ್ಯದ ಸವಾಲು ಕೇಳಿಸುತ್ತದೆ. ನಂತರ ಡೊಳ್ಳುಗಳು ವೃತ್ತಾಕಾರವಾಗಿ ನಿಂತುಕೊಂಡು ಕೇಂದ್ರದಲ್ಲಿ ತಾಳವಾದ್ಯಗಾರ ನಿಲ್ಲುತ್ತಾನೆ. ನಾದ ಹಿಡಿದ ನಂತರ ಕೋಟೆ ಗೋಡೆಗಳು, ಕಲ್ಲುಬಂಡೆಗಳು ಚೂರುಚೂರಾಗುವಂತೆ ಚರ್ಮದ ಡೊಳ್ಳುಗಳ ನಾದ ವಾತಾವರಣವನ್ನು ತುಂಬಿ, ಬೀರಪ್ಪನನ್ನು ನಿದ್ರಾವಸ್ಥೆಯಿಂದ ಎಬ್ಬಿಸುವುದು ಕಂಡುಬರುತ್ತದೆ. ಪ್ರತಿಯೊಂದು ಹಂತದ ಸೇವೆ ನಡೆಯುವಾಗ ಪೂಜಾರಿಯು ಮಂಡಲಕ್ಕೊಮ್ಮೆ ಬೀರಪ್ಪನಿಗೆ ಮಂಗಳಾರತಿಯನ್ನು ಮಾಡಿ ಹೊರಗೆ ಬಂದು ಈರಗಾರ, ಡೊಳ್ಳು, ಸತ್ತಿಗೆ ಮತ್ತು ಉರಿಯುವ ದೀವಟಿಗೆಗೆ ಆರತಿ ಎತ್ತುವುದು ಕಂಡುಬರುತ್ತದೆ. ಹೀಗೆ ಬೀರದೇವರು ಇಡೀ ರಾತ್ರಿ ನೂರೊಂದು ಸಲ ಪೂಜೆಗೊಳ್ಳುವುದು ಮತ್ತು ಒಂದು ಬಾರಿಗೆ ಒಂದು ಬಾಳೆಮರ ಕಡಿದು ದೇಗುಲದ ಕಂಬಗಳಿಗೆ ಕಟ್ಟುವುದು ಕಂಡುಬರುವ ಆಚರಣೆಯಾಗಿದೆ. ಜೊತೆಗೆ ಚಾಮರಸೇವೆ ನಿರಂತರವಾಗಿ ನಡೆದಿರುತ್ತದೆ.

ಎರಡನೆಯ ಘಟ್ಟದಲ್ಲಿ ಡೊಳ್ಳಿನ ನಾದಕ್ಕೆ ವೀರಗಾರರು ಎಲ್ಲರೂ ಬಂದು ಸೇರಿ ಕುಣಿತವನ್ನು ಆರಂಭಿಸುತ್ತಾರೆ. ದೇವರಿಗೆ ಎದುರಾಗಿ ಸಾಲಾಗಿ ನಿಂತ ವೀರಗಾರರು ಡೊಳ್ಳಿನ ನಾದಕ್ಕೆ ಎಡಗಾಲನ್ನು ಎತ್ತಿ ಎರಡು ಕೈಯಿಂದ ಈರಗಾರನ ಕಾಸೆಯನ್ನು ಚಿಮ್ಮಿ ಗತ್ತು ತೋರಿಸುತ್ತಾರೆ. ನಂತರ ಬಲಗಾಲೆತ್ತಿ ಅದೇ ರೀತಿ ಕಾಸೆಯನ್ನು ಕೊಡವಿ, ಬೀಸುತ್ತ ಗತ್ತು ಹಿಡಿಯುವುದು ಅದ್ಭುತ ರಮ್ಯ ದೃಶ್ಯದಂತೆ ಕಾಣುತ್ತದೆ. ಇದೇ ರೀತಿ ಕಾಲೆತ್ತಿ ಕುಣಿಯುವ ಪ್ರಕಾರವು ಒಂದು ಆವರ್ತ ನಡೆಯುವುದು ಕಂಡುಬರುತ್ತದೆ. ಎರಡನೆಯ ಪ್ರಕಾರದಲ್ಲಿ ಡೊಳ್ಳುಗಳ ವೀರನಾದಕ್ಕೆ ತಕ್ಕಂತೆ ವೀರಗಾರರು ಎರಡೂ ಕೈಗಳಲ್ಲಿರುವ ಕಾಸೆಯನ್ನು ಕೊಡುವುತ್ತ, ಬೀಸುತ್ತ ಎರಡೂ ಕಾಲುಗಳನ್ನು ಎತ್ತಿ ಎತ್ತಿ ಹಾಕುತ್ತ ತಮ್ಮ ಸುತ್ತ ತಾವೇ ವರ್ತುಲಾಕಾರವಾಗಿ ತಿರುಗುತ್ತಾರೆ. ಅಂದರೆ ಚಾಮರಸೇವೆಯಂತೆಯೇ ಕಾಸೆಗಳನ್ನು ಬೀಸಿ ಬೀರಪ್ಪನ ಸೇವೆ ಮಾಡುವ ಪ್ರಕ್ರಿಯೆ ಇಲ್ಲಿ ಗಮನಾರ್ಹವಾದುದು. ವೀರಗಾರರು ಮತ್ತು ಡೊಳ್ಳಿನ ಭಂಟರ ಮಧ್ಯೆ ಯಾರು ಮೊದಲು ನಿಲ್ಲಿಸುತ್ತಾರೆ ನೋಡೋಣ ಎಂಬ ಛಲ ಕಂಡುಬಂದು, ಈ ಕುಣಿತ ಡೊಳ್ಳಿನ ಏಟು ಗಂಟೆಗಟ್ಟಲೆ ನಡೆದು ಕೊನೆಗೆ ಹಿರಿಯರು ಮಧ್ಯೆ ಪ್ರವೇಶಿಸುವ ಸನ್ನಿವೇಶಗಳು ಜರುಗುತ್ತವೆ. ಈರಗಾರರ ಈರಿಕೆಯ ಅಲಗನ್ನು ಒಬ್ಬ ಈರಗಾರರನು ಸಾಂಕೇತಿಕವಾಗಿ ಹಿಡಿದುಕೊಂಡು ಅಲ್ಲಿ ನಿಂತಿರುವುದು ಕಂಡುಬರುತ್ತದೆ.

ಮೂರನೆಯ ಘಟ್ಟದಲ್ಲಿ ಈ ಎರಡೂ ತಂಡಕ್ಕೆ ವಿಶ್ರಾಂತಿ ಎಂದೇ ಹೇಳಬೇಕು. ಈಗ ಹಿರಿಯ ಹಾಡುಗಾರರು ಬೀರಪ್ಪನ ಸ್ಥಾವರಮೂರ್ತಿಗೆ ಎದುರಾಗಿ ನಿಂತು, ಡೊಳ್ಳಿನ ಹಾಡುಗಳನ್ನು ಮತ್ತು ಬೀರಪ್ಪನ ಪವಾಡದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಾರೆ. ಇವರ ಹಾಡುಗಳಲ್ಲಿ ಬೀರದೇವರ ಸ್ತುತಿಯು ಸ್ಥಾಯಿ ಭಾವದೊಂದಿಗೆ ಲೀನವಾಗಿರುವುದು ಕಂಡುಬರುತ್ತದೆ. 'ಬಂಗಾರದ ಪದಕಾವು ಬೆಳ್ಳಿಯ ಪದಕಾವು ತಂದೆವೋ ಕರಿಯಣ್ಣಗ....' ಎನ್ನುವಂತಹ ಸ್ತುತಿಯೊಂದಿಗೆ 'ಮಂದಮತಿ ಕುರುಬರು ನಾವು ನಂದೇಶ್ವರರು ನೀವು ನಮ್ಮ ಮೇಲೆ ಕೋಪ ಮಾಡುವ ಮನುಜಗೆ ಸದ್ಬುದಿ ಕೊಡೊ ತಂದೆ...' ಎಂಬ ಹಲವಾರು ಬೇಡಿಕೆ, ಹಾರೈಕೆಗಳು ಈ ಹಾಡುಗಳಲ್ಲಿ ಕಂಡುಬರುತ್ತವೆ.

ಈ ರೀತಿ ಬೀರಪ್ಪನ ಸನ್ನಿಧಿಯಲ್ಲಿ ಓಲಗಸೇವೆ ನಡೆಯುತ್ತಿದ್ದರೆ, ಊರಿನ ಭಕ್ತಾಧಿಗಳು ರಾತ್ರಿಯಿಡಿ ತಮ್ಮ ತಮ್ಮ ಮನೆಗಳಿಂದ ಹಬ್ಬದ ಅಡುಗೆ ಹಣ್ಣುಕಾಯಿ, ಕರ್ಪೂರದ ಆರತಿಗಳನ್ನು ತಂದು ದೇವರಿಗೆ ನೈವೇದ್ಯ ಮಾಡಿಸಿಕೊಂಡು ಹೋಗುತ್ತಾರೆ. ಹೀಗೆ ಮಾಡಿದರೆ ಅವರ ಮನೆಯಲ್ಲಿ ಶುಭಕಾರ್ಯ ಮತ್ತು ಶುಭಯೋಗಗಳು ಸಂಭವಿಸುವವೆಂಬ ನಂಬಿಕೆ ಇಲ್ಲಿಯ ಭಕ್ತರಲ್ಲಿದೆ. ಬೀರಪ್ಪನಿಗೆ ಪೂಜೆ ಮಾಡಿಸಲು ಮತ್ತು ಪ್ರಸಾದ ತೆಗೆದುಕೊಳ್ಳಲು ಗ್ರಾಮದ ಎಲ್ಲ ಜಾತಿಜನಾಂಗಗಳು ಜಾತಿ ಮತಭೇದವಿಲ್ಲದೆ ಭಾಗವಹಿಸುವುದು ಕಂಡುಬರುತ್ತದೆ. ಭಕ್ತಾದಿಗಳು ವೀರಗಾರರಿಗೆ ಡೊಳ್ಳುವಾದ್ಯದವವರಿಗೆ ಹಾಡುಗಾರರಿಗೆ ತಮ್ಮ ಖುಷಿಯ ಸಂಕೇತವಾಗಿ ೫೦ ರೂಪಾಯಿ, ೧೦೦ ರೂಪಾಯಿಗಳ ನೋಟುಗಳನ್ನು ಹಾರ ಮಾಡಿ ಹಾಕುವುದೂ ಉಂಟು.

ಸುಮಾರು ನಡುರಾತ್ರಿ ಕಳೆದು, ಮೂರು ಗಂಟೆಯ ಸಮಯಕ್ಕೆ ದೇವಸ್ಥಾನದ ಮುಖ್ಯ ಈರಗಾರರು ದೈವ ಆವಾಹನೆ ಮಾಡಿಕೊಳ್ಳುವ ದೈವೀಪುರುಷನೆಂಬ ನಂಬಿಕೆ ಭಕ್ತರಗಿದೆ. ಇವನು ದೇವಾಲಯದಲ್ಲಿ ಕಾಸೆವೇಷ ಧರಿಸಿ ದೇವರ ಸನ್ನಿಧಿಯಲ್ಲಿ ಪೂಜೆಗೊಂಡು ರಂಗಪ್ರವೇಶ ಮಾಡುತ್ತಾನೆ. ಈಗ ಒಟ್ಟು ಹನ್ನೆರಡು ಜನ ವೀರಗಾರರು ಈ ಸೇವೆಯಲ್ಲಿ ಭಾಗವಹಿಸುತ್ತಾರೆ. ಓಲಗಸೇವೆಗೆ ಈಗ ಪೂರ್ಣಾತಿ ರಂಗು ಬಂದು ಓಲಗಸೇವೆ ಕಳೆಕಟ್ಟುವುದು ವಿಶೇಷ. ಬೆಳಗಿನ ಎಂಟು ಅಥವಾ ಒಂಬತ್ತು ಗಂಟೆಗಳವರೆಗೆ ನಡೆಯುವ ಈ ಸೇವೆಯು ಅಂತಿಮ ಹಂತಕ್ಕೆ ಬಂದಾಗ ಬೀರಪ್ಪನ ಸತ್ತಿಗೆಯೊಂದಿಗೆ ಎಲ್ಲ ಈರಗಾರರು, ವಾದ್ಯದವರು ಮತ್ತು ಹಾಡುಗಾರರು ಮೆರವಣಿಗೆಯಲ್ಲಿ ಊರಿನ ಎಲ್ಲ ದೇವಾಲಯಗಳಿಗೆ ತೆರಳುತ್ತಾರೆ. ಪ್ರತಿ ದೇವಾಲಯದ ಮುಂದೆ ಹಾಕಿದ ಉತ್ಸವದ ಚಪ್ಪರದಲ್ಲಿ ದೇವರಿಗೆ ಎದುರಾಗಿ ನಿಂತು ಓಲಗಸೇವೆ ಸಲ್ಲಿಸುತ್ತಾರೆ. ನಂತರ ಮರಳಿ ಬೀರಪ್ಪನ ದೇವಸ್ಥಾನಕ್ಕೆ ಬಂದ ಓಲಗಸೇವೆಯು ಮುಖ್ಯ, ಪೂಜಾರಿ ಹಟ್ಟಿಗೌಡ, ಹಿರಿಯರ ಒಪ್ಪಿಗೆಯೊಂದಿಗೆ ಮುಕ್ತಾಯಗೊಳ್ಳುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಸೇವೆಯು ಜಾತಿ ಮತ ಭೇದವಿಲ್ಲದೇ ಊರಿನ ಎಲ್ಲ ದೇವರುಗಳ ಮುಂದೆ ಸಾಂಕೇತಿಕವಾಗಿ ನಡೆಯುತ್ತದೆ. ಅಂದರೆ ಹಾಲುಮತಸ್ಥ ಕುರುಬರು ಸರ್ವಜಾತಿ, ಮತಗಳೊಂದಿಗೆ ಧಾರ್ಮಿಕ ಸಹಬಾಳನ್ನು ಹೊಂದಿದವರು ಧಾರ್ಮಿಕ ಸಹನಾಶೀಲರು ಎಂಬುದು ಇದರಿಂದ ವ್ಯಕ್ತವಾಗುತ್ತದೆ.

೧೨. ಕಾಗೆ ಪರೇವು ಸೇವೆ

ಇದು ದಕ್ಷಿಣ ಕರ್ನಾಟಕದ ಹಾಲುಮತ ಜನಾಂಗದ ಏಳೂರು ಗುಡಿಕಟ್ಟುಗಳಲ್ಲಿ ಒಂದು ಗುಡಿಕಟ್ಟಾಗಿದೆ. ಹೊಯ್ಸಳರ ವೀರಬಲ್ಲಾಳ ಪ್ರಭುವಿನ ಕಾಲದಲ್ಲಿ ಉತ್ತರದ ಮುಸಲ್ಮಾನರ ದೌರ್ಜನ್ಯವನ್ನು ಸಹಿಸಲಾರದೆ ಹಾಲನ ಕುರುಬರೆಂಬ ಕುಲದ ಒಂದು ಮನೆತನ ವಿಜಾಪುರ ಜಿಲ್ಲೆಯ ತಾಳೀಕೋಟೆಯಿಂದ ವಲಸೆ ಬಂದು ತಾಳಿಕಟ್ಟೆ ಎಂಬ ಪುಟ್ಟಗ್ರಾಮವನ್ನು ಕಟ್ಟಿ ಅಲ್ಲಿ ನೆಲೆಸುತ್ತದೆ. ಅವರೇ ಕೆಂಚಪ್ಪ, ಮಾಳಿಗಪ್ಪ, ಡೊಂಕಪ್ಪ, ಚಿಕ್ಕಕೆಂಚಪ್ಪ ಮೊದಲಾದ ಏಳು ಜನ ಸಹೋದರರು ಮತ್ತು ಕೆಂಚ ಮರಿಯವ್ವ ಎಂಬ ಸಹೋದರಿಯರಾಗಿದ್ದಾರೆ. ಇವರು ವಲಸೆ ಬಂದು ಮೊದಲ ನೆಲೆ ಇಲ್ಲಿ ಕಂಡುಕೊಂಡಿದ್ದುದು ಜನಪದ ಕಾವ್ಯದಲ್ಲಿದೆ. ಇವರು ಹಾಲನ ಕುರುಬರು. ಕಾಲಾನಂತರ ಅನವೇರಿ ಎಂಬ ಊರಿನ ಸಾವಂತಕಾಲದ ಗಂಡಿಗೆ ತಂಗಿಯನ್ನು ಕೊಟ್ಟು ಮದುವೆ ಮಾಡುತ್ತಾರೆ. ತಾಳಿಕಟ್ಟೆಯು ಮಧ್ಯ ಕರ್ನಾಟಕದ ಹಾಲುಮತ ಜನಾಂಗದ ಪ್ರಾಚೀನ ನೆಲೆಯಾಗಿದೆ. ಇಲ್ಲಿ ಐತಿಹಾಸಿಕ ಶಾಸನಗಳು, ವೀರಗಲ್ಲುಗಳು ಮತ್ತು ಪ್ರಾಚೀನ ದೈವಗಳ ಪಳೆಯುಳಿಕೆಗಳು ಸಿಕ್ಕಿವೆ. ಏಳೂರು ದೇವರ ಕಾಳಗದ ಕೇಂದ್ರ ಸ್ಥಾನವೆಂದು ಇದನ್ನು ಕರೆಯಬಹುದು. ಇಲ್ಲಿ ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ತೋಪುಜಾತ್ರೆಯು ಅತ್ಯಂತ ಪ್ರಸಿದ್ಧವಾದುದು. ತಾಳಿಕಟ್ಟೆಯಲ್ಲಿ ಒಟ್ಟು ಎಂಟು ದೇವರ ಮೂಲಸ್ಥಾನಗಳು ಇದ್ದು ದಳವಾಯಿ ಆಚರಣೆ ಜಾರಿಯಲ್ಲಿದೆ. ಎಂಟು ಜನ ಈರಗಾರರು ಇದ್ದು ಬ್ಯಾಲನ ಕುಲದವರು ಮತ್ತು ಗೌಡನ ಕುಲದವರು ಆಯ್ಕೆಯಾಗುತ್ತಾರೆ. ದೀವಟಿಗೆ ಸೇವೆಯನ್ನು ಬಲ್ಲಾಳನ ಕುರುಬರು ಮಾಡುತ್ತಾರೆ. ಕಹಳೆ ಊದುವ ಕಾಯಕವನ್ನು ಬೇಲಪನ ಕುರುಬರು, ಬುದ್ಧಿವಂತಿಕೆಯನ್ನು ಬಾಲ್ಯನ ಕುರುಬರು. ಗುಡಿಗೌಡಿಕೆಯನ್ನು ಹಾಲನ ಕುರುಬರು ನಾಲ್ಕು ಜನರು ವಹಿಸಿಕೊಳ್ಳುತ್ತಾರೆ. ದಳವಾಯಿ ಮಾನೆ ಕುಲದವರು ವಹಿಸುತ್ತಾರೆ. ಇವರಲ್ಲಿ ೫೦-೧೦೦ ಜನ ಪೂಜಾರಿಗಳಿದ್ದಾರೆ. ವರ್ಷದಲ್ಲಿ ಐದು ಹಬ್ಬಗಳನ್ನು ಆಚರಿಸುತ್ತಾರೆ. "ಇಲ್ಲಿ ಆರು ನೂರು ವರ್ಷಗಳ ಒಂದು ಶಿಲಾಶಾಸನ ಸಿಕ್ಕಿದ್ದು ಅದು ಕುರುಬರ ಪ್ರಾಚೀನತೆ ಹಾಗೂ ವಿಜಯನಗರ ಕಾಲದ ಸಂಗತಿಗಳನ್ನು ವಿವರಿಸುತ್ತದೆ." ಇಲ್ಲಿನ ಎಲ್ಲ ಬೀರದೇವರುಗಳು ಕುದುರೆಯ ಮೇಲೆ ಕುಳಿತಿದ್ದು ದುಮ್ಮಿಯ ಬೀರದೇವರು ಆನೆಯ ಮೇಲೆ ಕುಳಿತಿದ್ದಾನೆ. ತಾಳಿಕಟ್ಟೆಯ ಬೀರದೇವರಿಗೆ ಉಯ್ಯಾಲೆ ಮಂಟಪವಿದೆ. ಪ್ರಾಚೀನ ಕಾಲದ ಉಯ್ಯಾಲೆ ಕಂಬಗಳು ಬೀರದೇವರನ್ನು ಸ್ವಾಗತಿಸುತ್ತವೆ. ಉಯ್ಯಾಲೆ ಗೌರವವಲ್ಲದೇ ಓಕುಳಿಯಾಡುವ ಗಂಡುಗಲಿ ತಾಳಿಕಟ್ಟೆ ಬೀರಪ್ಪ ಎಂಬ ಅಭಿದಾನಕ್ಕೆ ಇವನು ಭಾಜನನಾಗಿದ್ದಾನೆ.

ಇದು ತಾಳಿಕಟ್ಟೆಯಲ್ಲಿರುವ ಹಾಲನ ಕುರುಬರಲ್ಲಿನ ಒಂದು ಆಚರಣೆಯಾಗಿದೆ. ಇದನ್ನು ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ಬೀರದೇವರ ತೋಪುಜಾತ್ರೆಯ ಮರುದಿನ ಆಚರಿಸಲಾಗುತ್ತದೆ. ಅನ್ನದ ಅಡುಗೆ ತಯಾರಿಸಿ ಪೂಜೆಯಾದ ನಂತರ ಅದನ್ನು ಕಾಗೆಗಳಿಗೆ ಉಗ್ಗುತ್ತಾರೆ. ಕಾಗೆಗಳು ಅದನ್ನು ಆರಿಸಿಕೊಂಡು ತಿನ್ನುತ್ತವೆ. ಇದರ ಹಿಂದೆ ಒಂದು ಜನಪದ ಕತೆಯಿದೆ. ಇಲ್ಲಿನ ಮೂಲಪುರುಷರಾದ ಹಾಲುಮತದ ಏಳುಜನ ಅಣ್ಣತಮ್ಮಂದಿರು ತಾಳೀಕೋಟೆಯಿಂದ ಇಲ್ಲಿಗೆ ಬಂದವರು. ಇವರಿಗೆ ಕೆಂಚವ್ವ ಎಂಬ ಸುಂದರ ತಂಗಿ

ಇರುತ್ತಾಳೆ. ಇವಳನ್ನು ಮೋಹಿಸಿದ ಒಬ್ಬ ಸಾಮಂತ ಸುಲ್ತಾನ ಅವಳನ್ನು ಒಪ್ಪಿಸಲು ಕೋರಿ ಇವರನ್ನು ಬೆನ್ನಟ್ಟುತ್ತಾನೆ. ಇವರು ಅವನ ಸೈನ್ಯದಿಂದ ತಪ್ಪಿಸಿಕೊಂಡು ನದಿಯನ್ನು ದೈವದ ಪ್ರೇರಣೆಯಿಂದ ದಾಟಿ ಈಚೆ ಬಂದಾಗ ಆಚೆ ದಡದಲ್ಲಿದ್ದ ಸುಲ್ತಾನನು 'ಹೋದರೆ ಹೋಗಿರಿ, ನೀವೇನು ನನ್ನ ರಾಜ್ಯದ ಹದ್ದು, ಕಾಗೆಗಳನ್ನು ಕರೆದುಕೊಂಡು ಹೋಗ್ತೀರಾ ನಿಮ್ಮನ್ನು ವಿಚಾರಿಸಿಕೊಳ್ಳುತ್ತೇನೆ ಎನ್ನುತ್ತಾನೆ. ನದಿಯ ಈಚೆ ದಂಡೆಗಿದ್ದ ಈ ಕುರುಬ ಸಹೋದರರು ಮರುದಿನ ಹೊರಡುವ ಮುನ್ನ ತಮ್ಮ ಕಷ್ಟ ಪರಿಹರಿಸಿದ ನದಿಗೆ ಹಾಗೂ ಮನೆದೇವರು ಬೀರಪ್ಪನಿಗೆ ಎಡೆ ಮಾಡಿ ಪೂಜೆ ಮಾಡಿ ಆಕಾಶಕ್ಕೆ ಬಾನದ ಅನ್ನವನ್ನು ಎರಚುತ್ತಾರೆ. ನೂರಾರು ಕಾಗೆಗಳು ಬರುತ್ತವೆ. ಅವುಗಳೊಂದಿಗೆ ಇವರು ದಕ್ಷಿಣಕ್ಕೆ ಹೊರಟು ಬಂದು ತಾಳಿಕಟ್ಟೆಯಲ್ಲಿ ನೆಲೆಸಿದರು ಎಂಬ ನಂಬಿಕೆ ಇದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಆಚರಣೆಯು ಎಡೆ ಮಾಡಿ ಹಿರಿಯರನ್ನು ಸಂತೃಪ್ತಿಪಡಿಸುವುದರೊಂದಿಗೆ ತಳುಕು ಹಾಕಿಕೊಂಡಿದೆ.

೧೩. ಬಾಯಿಬೀಗ ಆಚರಣೆ

ಬಾಯಿಬೀಗದ ಆಚರಣೆಯು ಜಿಲ್ಲೆಯಾದ್ಯಂತ ಹಲವಾರು ಕಡೆ ಬೀರಪ್ಪನ ದೇವಾಲಯಗಳಲ್ಲಿ ಇಂದಿಗೂ ಪ್ರಸ್ತುತದಲ್ಲಿದೆ. ನಾನು ನೋಡಿದ ಪ್ರಕಾರ ಭರಗೂರು ಬೀರಲಿಂಗೇಶ್ವರ ಜಾತ್ರೆಯಲ್ಲಿ ಬಾಯಿಗೆ ಬೀಗ ಹಾಕುವ ಆಚರಣೆ ಕೂಡ ಪ್ರಸ್ತುತದಲ್ಲಿದೆ. ಕಾಯಿಲೆ, ಕಸಾಲೆ, ಕಷ್ಟಕಾರ್ಪಣ್ಯ ತಲೆದೋರಿ ದೇವರಿಗೆ ಹರಕೆ ಹೊತ್ತುಕೊಳ್ಳುವ ಪರಿಪಾಟ ಹೊಂದಿದ ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳು ಹರಕೆ, ತೀರಿಸಲು ಬಾಯಿಬೀಗವನ್ನು ಚುಚ್ಚಿಕೊಳ್ಳುತ್ತಾರೆ.

ಬಾಯಿಬೀಗ ಅಕ್ಕಸಾಲಿಗನಿಂದ ಮಾಡಿಸಿದ ಸಣ್ಣ ಬೆಳ್ಳಿಯ ಕಡ್ಡಿ. ಇದು ಚಚ್ಚೌಕವಾಗಿರುತ್ತದೆ. ಒಂದು ಕಡೆಯ ಮೊನೆಯ ತುಂಬಾ ಹರಿತವಾಗಿದ್ದು ಚೂಪಾಗಿರುತ್ತದೆ. ಮತ್ತೊಂದು ಕಡೆ ಒಂದು ತೂತಿರುವಂತೆ ಗುಂಡಾಗಿ ಮಡಿಚಿರುತ್ತದೆ. ತಾಮ್ರದ ಕಡ್ಡಿಯಿಂದಲೂ ಬಾಯಿಬೀಗವನ್ನು ಮಾಡಬಹುದು. ಬಾಯಿಬೀಗ ಹಾಕಿಸಿಕೊಳ್ಳುವವರ ಎರಡು ಕೆನ್ನೆಗಳನ್ನು ಹಾಯುವಂತೆ ತುಟಿಗೆ ಸ್ವಲ್ಪ ಮೇಲಿನ ಮೃದುವಾದ ಜಾಗದಲ್ಲಿ ಬಾಯಿಬೀಗದ ಚೂಪಾದ ತುದಿಯಿಂದ ಚುಚ್ಚಿ ತಳ್ಳಿ ಇನ್ನೊಂದು ಕಡೆಯ ತೂತಿಗೆ ಸೇರಿಸುವರು. ಮಕ್ಕಳಿಗಾದರೆ ಬಾಯಿಗೆ ಚುಚ್ಚುವುದಿಲ್ಲ. ಮಗುವಿಗೆ ಹೊಸ ಬಟ್ಟೆಯನ್ನು ತೊಡಿಸಿ ಬಟ್ಟೆಗೆ ಚುಚ್ಚುತ್ತಾರೆ. ಬಿಚ್ಚುವವರೆಗೂ ಇವರು ಮಾತನಾಡುವಂತಿಲ್ಲ. ಈ ಹರಕೆ ದೇವರಿಗೆ ಸಲ್ಲಿಸುವ ದೈಹಿಕ ಹಾಗೂ ಮಾನಸಿಕ ಶ್ರಮಸೇವೆಯದು. ಬಾಯಿಬೀಗ ಹಾಕಿಸಿಕೊಳ್ಳುವವರು, ಬೆಳಗಿನಿಂದಲೂ ಉಪವಾಸವಿರುತ್ತಾರೆ. ಸ್ನಾನ ಮಾಡಿ ಶುಚಿಯಾಗಿ ಮಡಿಬಟ್ಟೆ ಧರಿಸುತ್ತಾರೆ. ಕೈಯಲ್ಲಿ ಉರಿಯುತ್ತಿರುವ ಗಂಧದ ಕಡ್ಡಿಯನ್ನು ಹಿಡಿದಿರುತ್ತಾರೆ. ಸಾಲಾಗಿ ನಿಲ್ಲುವ ಬಾಯಿಬೀಗದವರ ದೃಶ್ಯ ವಿಶಿಷ್ಟವಾಗಿದ್ದು ಭಯಭಕ್ತಿಯನ್ನು ಮೂಡಿಸುತ್ತದೆ.

ಉಪವಾಸವಿದ್ದಾಗ ಅವರಿಗೆ ಪ್ರಜ್ಞೆ ತಪ್ಪುವ ಸಾಧ್ಯತೆ ಇರುತ್ತದೆ. ಉಪವಾಸವಿಲ್ಲದೆ ಹಾಲು, ಹಣ್ಣು, ಎಳನೀರನ್ನು ಕುಡಿಯಬಹುದು. ಆದರೆ ಊಟ ಮಾಡುವಂತಿಲ್ಲ. ಊಟ ಮಾಡಿ ಚುಚ್ಚಿಸಿಕೊಂಡರೆ ರಕ್ತಬರುವಂತೆ

ದೇವರು ಮಾಡುತ್ತಾನೆ ಎನ್ನುವ ನಂಬಿಕೆ ಮುಗ್ಧ ಜನರಲ್ಲಿ ಇದೆ. ಬೀಗ ಹಾಕುವ ಆಚರಣೆ ಒಂದು ಸಾಂಕೇತಿಕವಾದುದು. ಇದು ಸತ್ಯವನ್ನು ಮುಚ್ಚಿಡುವ ಮಾತನಾಡುವ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದನ್ನು ಈ ಆಚರಣೆ ಸಂಕೇತಿಸುತ್ತದೆ. ಸಮಾಜದಲ್ಲಿ ಪುರುಷರು ಮಹಿಳೆಯರ ಮೇಲೆ ಅನೇಕ ನಿರ್ಬಂಧಗಳನ್ನು ಹೇರಿರುವುದು ನಮಗೆ ತಿಳಿದ ವಿಷಯವಾಗಿದೆ. ಅದರಲ್ಲೂ ಹೆಣ್ಣಿಗೆ ಹೆಚ್ಚು ಮಾತನಾಡುವ ಸ್ವಾತಂತ್ರ್ಯ ಕೊಡದಿರುವುದು ಹೆಣ್ಣಿನ ವಾಕ್‌ಸ್ವಾತಂತ್ರ್ಯಕ್ಕೆ ಹಾಕಿರುವ ಕಡಿವಾಣ. ತನ್ನ ಮೇಲೆ ಹೇರಲ್ಪಟ್ಟ ಅಮಾನವೀಯ ಮನುವಿನ ಕಾನೂನುಗಳ ವಿರುದ್ಧ ದನಿ ಎತ್ತಿದ ಮಹಿಳೆಯರು ಮಹಾಸತಿಗಳಾಗಿರುವುದು ಉಂಟು. ಅಂತಹ ಮಹಾಸತಿಯರಿಗೆ ಸಾಂಕೇತಿಕವಾಗಿ ಬಾಯಿಬೀಗ ಹಾಕುವ ಆಚರಣೆ ಹುಟ್ಟಿಕೊಂಡಿರಬಹುದು.

ಭಾರತೀಯ ಸಂಸ್ಕೃತಿಯನ್ನು ಮಾತೃಪ್ರಧಾನ ಸಮಾಜ ಮಾಡಿ ಜಯ ಸಾಧಿಸಿದೆ. ಆರ್ಯ, ವೈದಿಕ, ಬ್ರಾಹ್ಮಣಶಾಹಿ ವ್ಯವಸ್ಥೆ ಮಹಿಳೆಗೆ ವಿಧಿಸಿದ ಶಿಕ್ಷೆಗೆ ಸಂಕೇತವಾಗಿ ಇಂದಿನ ಮಾತೃದೇವತೆಗಳು ಪಿತೃ ದೇವರಿಗೆ ಈ ಆಚರಣೆ ಸಲ್ಲುತ್ತಿರಬಹುದು.

೧೪. ಹಾಲರವಿ ಸೇವೆ

ಸಾತನೂರು ಬೀರಲಿಂಗೇಶ್ವರ ಜಾತ್ರೆಯಲ್ಲಿ ಈ ಆಚರಣೆ ಜಾರಿಯಲ್ಲಿ ಇದೆ. ಆಚರಣೆ ಬಾಯಿಬೀಗದ ದಿವಸ ನಡೆಯುತ್ತದೆ. ಹರಕೆ ಮಾಡಿಕೊಂಡಿರುವ ಭಕ್ತರು ಬಾಯಿಬೀಗದ ದಿವಸ ಕುರಿಯಿಂದ ಕರೆದ ಹಾಲನ್ನು ಯಾರಿಗೂ ಕೊಡದಂತೆ ಬಿಂದಿಗೆಯನ್ನು ಹುಣಿಸೆಹಣ್ಣಿನಿಂದ ತೊಳೆದು ಅಥವಾ ಹೊಸ ಬಿಂದಿಗೆಯನ್ನು ತರಸಿ ಆದಿನ ಹೊಸ ಬಟ್ಟೆಗಳನ್ನು ಧರಿಸಿಕೊಂಡು ಕರೆದಿದ್ದ ಹಾಲನ್ನು ಬಿಂದಿಗೆಯಲ್ಲಿಟ್ಟು ಕೊಂಡಿರುತ್ತಾರೆ. ಎಷ್ಟು ಜನ ಹರಕೆ ಮಾಡಿಕೊಂಡಿರುತ್ತಾರೋ ಅಷ್ಟು ಜನ ಭಕ್ತರು ಬಿಂದಿಗೆಗೆ ಹಾಲನ್ನು ಹಾಕಿ ಅದಕ್ಕೆ ಸ್ವಲ್ಪ ಸಕ್ಕರೆಯನ್ನು ಬೆರೆಸಿ ಅದಕ್ಕೆ ಬಣ್ಣದಲ್ಲಿ ಚಿತ್ತಾರವನ್ನು ಬಿಡಿಸಿ, ಅರಿಸಿನ ಕುಂಕುಮವನ್ನು ಹಚ್ಚಿ ಬಿಂದಿಗೆಯ ಕೊರಳಿಗೆ ಹೂವನ್ನು ಕಟ್ಟಿ ಎಲ್ಲವನ್ನು ಊರಿನ ಹೆಬ್ಬಾಗಿಲಿಗೆ ತಂದು ನಿಂತುಕೊಂಡಿರಬೇಕು. ಬಾಯಿಬೀಗ ಚುಚ್ಚಿಸಿದ ತಕ್ಷಣ ಡೊಳ್ಳಿನವರು ಹಾಲರವಿ ಹೊತ್ತಿರುವ ಸುಮಂಗಳೆಯರನ್ನು ಕರೆತರಲು ಬರುತ್ತಾರೆ.

ಡೊಳ್ಳಿನವರು, ನಗಾರಿಯವರು, ಮಡಿಯಿಂದ ಒಬ್ಬೊಬ್ಬರಾಗಿ ದೇವಸ್ಥಾನದ ಹತ್ತಿರ ಬಂದು ಮೂರು ಸುತ್ತು ಪ್ರದಕ್ಷಿಣೆ ಮಾಡಿ ಆ ಬಿಂದಿಗೆಯನ್ನು ದೇವಸ್ಥಾನದ ಮುಂದೆ ಇಟ್ಟಿರುತ್ತಾರೆ. ಬಾಯಿಬೀಗದವರು ಗುಡಿ ಸುತ್ತ ಪ್ರದಕ್ಷಿಣೆ ಹಾಕಿ ಬಂದು ಬಾಯಿಬೀಗವನ್ನು ಬಿಚ್ಚಿದ ನಂತರ ಹಾಲನ್ನು ಲೋಟದಲ್ಲಿ ಬಿಟ್ಟು ಪ್ರತಿಯೊಬ್ಬರಿಗೂ ಕೊಡುತ್ತಾರೆ. ಯಾವುದೇ ಜಾತಿಯವರಾಗಿರಲ್ಲಿ ಜಾತಿ ಭೇದವೆನ್ನದೆ, ಎಲ್ಲರಿಗೂ ಹಾಲು ಬಿಟ್ಟುಕೊಡಬೇಕು. ಹಾಲನ್ನು ಹಿಂದಕ್ಕೆ ತೆಗೆದುಕೊಂಡು ಹೋಗುವಂತಿಲ್ಲ. ಕೊಟ್ಟ ನಂತರ ನಿನ್ನ ಹರಕೆ ಒಪ್ಪಿತು ಎಂದು ಪೂಜೆ ಮಾಡಿಸಿ ಅಲ್ಲಿಂದ ಹೋಗಿ ಉಪವಾಸ ಬಿಡುತ್ತಾರೆ. ಅಲ್ಲಿಯವರೆಗೂ ಎಳನೀರನ್ನು ಕುಡಿಯದೆ, ಬಾಳೆಹಣ್ಣನ್ನು ತಿನ್ನದೆ ಅವರು ಉಪವಾಸವಿರಬೇಕು.

೧೫. ದೀವಟಿಗೆ ಸಲಾಮು

ದೀವಟಿಗೆ ಎಂದರೆ ದೇವರ ದೀಪ. ದೇವಸ್ಥಾನದಲ್ಲಿ ದೇವರಿಗೆ ಬೆಳಗುವ ಕಕ್ಕಡದೀಪವೆಂಬ ಹೆಸರೂ ಇದೆ. ಉತ್ಸವ, ಜಾತ್ರೆ ಮೆರವಣಿಗೆ ಸಂದರ್ಭಗಳಲ್ಲಿ ಇವುಗಳ ಬಳಕೆಯಿತ್ತು. ದೇವರ ಉತ್ಸವ, ಮೆರವಣಿಗೆಗಳಲ್ಲಿ ಇಂದಿನ ಹಾಗೆ ವಿದ್ಯುತ್ ದೀಪಗಳ ಬಲ್ಬ್ ಇಲ್ಲದ ಕಾಲದಲ್ಲಿ ಪಂಜಿನ ದೀಪದ ಮೊರೆ ಹೋಗಬೇಕಾದುದು ಅನಿವಾರ್ಯವಾಗಿತ್ತು. ಊರು ಬೀದಿಗಳಲ್ಲಿ ಮೆರವಣಿಗೆ ಸಾಗುವಾಗ ದೇವರ ದರ್ಶನ ಮಾಡಿಸಲು ಪಂಜುಗಳನ್ನು ಬಳಸಲಾಗುತ್ತದೆ. ಇದು ದೀವಟಿಗೆ ಸಲಾಮಿನ ಸ್ವರೂಪ. ಇಂದಿನ ಜಗಮಗಿಸುವ ದೀಪಗಳಿದ್ದರೂ ಇವು ಬಳಕೆಯಲ್ಲಿರುವುದು ವಿಶೇಷ. ಅದೇ ರೀತಿ ದೀವಟಿಗೆಯು ಎರಡು ಸಲಕರಣೆಗಳ ಒಂದು ಜೋಡು. ಒಂದು ಚಿಕ್ಕ ನಂದಿಕೋಲಿನಂತೆ ದೀವಟಿಗೆಯಿರುತ್ತದೆ. ಇದು ಒಂದೂವರೆ ಅಡಿಯಿಂದ ನಾಲ್ಕು ಅಡಿಯಷ್ಟು ಉದ್ದವಾಗಿ ಮತ್ತು ಒಂದು ಕಿಲೋದಿಂದ ಮೂರು ಕಿಲೋಗಳಷ್ಟು ಭಾರವಾಗಿರುತ್ತದೆ.[೧೬] ಒಂದು ಬದಿಗೆ ಕಳಸದಂತಿದ್ದರೆ ಇನ್ನೊಂದು ಬದಿಗೆ ಅಗಲವಾಗಿ ಟೊಳ್ಳಾಗಿರುತ್ತದೆ. ಬೆಳಕು ಮಾಡುವಾಗ ಕೆಳಭಾಗದ ಟೊಳ್ಳಿನಲ್ಲಿ ಪಂಜು ಉರಿಸುವ ಎಕ್ಕೆ ಕಟ್ಟಿಗೆಯ ತುಂಡನ್ನು ಸಿಕ್ಕಿಸುತ್ತಾರೆ. ಅದರ ಬದಿಯಲ್ಲಿ ಚಿಕ್ಕಸಲಾಕೆ ಜೋಡಿಸುವರು. ಅದಕ್ಕೆ ಮಡಿ ಬಟ್ಟೆಯ ತುಂಡುಗಳನ್ನು ಒಳ್ಳೆಣೆಯಲ್ಲಿ ಅದ್ದಿ ಸುತ್ತುತ್ತಾರೆ. ದೀವಟಿಗೆಗೆ ಎಣ್ಣೆ ಸುರಿಯಲು ಒಂದು ತಳದಲ್ಲಿ ದುಂಡಗಿರುವ ಗಿಂಡಿಯಿರುತ್ತದೆ. ಅದರ ತುದಿ ಚೂಪಾಗಿರುತ್ತದೆ. ಹಿತ್ತಾಳೆ ಅಥವಾ ಹಂಚಿನಿಂದ ಮಾಡಿದ ಈ ಕಾಯಕೋಲು ಎಣ್ಣೆ ಸುರಿಯಲು ಸಹಾಯಕವಾಗುವಂತೆ ತಯಾರಿಸಿರುತ್ತಾರೆ.

ಧಾರ್ಮಿಕ ವಿಧಿಗಳ ಸಂದರ್ಭಗಳಲ್ಲಿ ಮಂಗಳ ಕಾರ್ಯದಲ್ಲಿ ಈ ದೀವಟಿಗೆ ಸೇವೆ ಮಾಡುತ್ತಾರೆ. ಬೀರಲಿಂಗೇಶ್ವರನ ಜಾತ್ರೆಯಲ್ಲಿ ಗುಡಿಯ ಎದುರಿಗೆ ಅನೇಕ ಸಂಖ್ಯೆಯಲ್ಲಿ ದೀವಟಿಗೆ ಹಿಡಿದು ನಿಂತಿರುವ ಭಕ್ತರನ್ನು ಕಾಣಬಹುದಾಗಿದೆ. ಇದಕ್ಕೆ ಜನರು ಎಣ್ಣೆಯನ್ನು ಸುರಿಯುವುದು ಕಂಡುಬರುತ್ತದೆ.

೧೬. ಗಂಗಾಸ್ನಾನ ಹೋಳಿಪೂಜೆ

ಉತ್ತರ ಕರ್ನಾಟಕದಲ್ಲಿ ಪ್ರತಿವರ್ಷಕ್ಕೊಮ್ಮೆ ಬೀರದೇವರನ್ನು ಗಂಗಾಸ್ನಾನಕ್ಕೆಂದು ಹತ್ತಿರದ ನದಿಗಳಿಗೆ ತೆಗೆದುಕೊಂಡು ಹೋಗುವುದು ಕಂಡುಬರುತ್ತದೆ. ಬೀರದೇವರ ಮೂರ್ತಿ, ಪಲ್ಲಕ್ಕಿ ಹಾಗೂ ಛತ್ರಿಗಳನ್ನು ತೆಗೆದುಕೊಂಡು ಹೋಗುತ್ತಾರೆ. ಬೀರದೇವರ ಭಕ್ತರೆಲ್ಲ ಪವಿತ್ರ ನದಿ ಪ್ರವೇಶಕ್ಕೆ ತೆರಳುವರು. ಅಲ್ಲಿ ಮಡಿಯಿಂದ ನೈವೇದ್ಯ ತಯಾರಿಸುತ್ತಾರೆ. ನೈವೇದ್ಯದಲ್ಲಿ ಹೋಳಿಗೆ, ಕಡಬು, ಅಂಬಲಿ, ತಯಾರಿಸುತ್ತಾರೆ. ಬೀರದೇವರ ಮೂರ್ತಿ, ಪಲ್ಲಕ್ಕಿ ಛತ್ರಿಗಳನ್ನು ನದಿಯಲ್ಲಿ ತೊಳೆಯುತ್ತಾರೆ. ನಂತರ ದಡದಲ್ಲಿಟ್ಟು ಪೂಜೆ ಮಾಡುತ್ತಾರೆ. ಡೊಳ್ಳು ಬಾರಿಸುವುದು ಕಂಡುಬರುತ್ತದೆ. ನೈವೇದ್ಯವನ್ನು ಎಡೆ ಮಾಡುತ್ತಾರೆ. ನಂತರ ಮೆರವಣಿಗೆ ಮೂಲಕ ತಮ್ಮ ಸ್ಥಳಕ್ಕೆ ಬರುತ್ತಾರೆ. ಅಲ್ಲಿ ಎಲ್ಲರಿಗೂ ಊಟ ಮಾಡಿಸುತ್ತಾರೆ. ಈ ಆಚರಣೆ ಪ್ರತಿವರ್ಷ ತಪ್ಪದೆ ನಡೆದುಕೊಂಡು ಬರುತ್ತದೆ. ಬೆಳಗಾವಿ ಜಿಲ್ಲೆ ಅಲಕನೂರು, ಎಕ್ಸಂಭಾ, ಕಂಕಣವಾಡಿ, ಬಿಜಾಪುರ ಜಿಲ್ಲೆ, ಶಿರಾಡೋಣ, ನಾಗಠಾಣ, ಕೊಣ್ಣೂರು, ಝುಳಕಿ, ಮಲಘಾನ ಅದೇ ರೀತಿ ದಕ್ಷಿಣ ಕರ್ನಾಟಕದಲ್ಲಿಯೂ ಬೀರಪ್ಪನಿಗೆ ಹನ್ನೆರಡು ವರ್ಷಕ್ಕೊಮ್ಮೆ ತೋಪುಜಾತ್ರೆ ನಡೆಯುತ್ತದೆ. ಇಲ್ಲಿ ಹೋಳಿಪೂಜೆಯೊಂದಿಗೆ ದೇವರ

ಆರಾಧನೆ ಆರಂಭವಾಗುತ್ತದೆ. ಹೊಳೆಪೂಜೆ ಜಾತ್ರಾಮಹೋತ್ಸವದ ದಿನ ನಡೆಯುತ್ತದೆ. ಇದನ್ನು ಜಾತ್ರಾ ಮಹೋತ್ಸವದ ಪ್ರಥಮ ಮತ್ತು ಪ್ರಮುಖ ಆರಾಧನೆ ಎನ್ನಬಹುದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಹೊಳೆ ಪೂಜೆಯೆಂಬ ಪೂಜಾವಿಧಿಯು ಪ್ರಥಮವಾಗಿ ಆರಂಭವಾಗಿರುವುದು ಕುರುಬರ ಕುಲದೈವವೆನ್ನಿಸಿದ ಬೀರಪ್ಪನ ತೋಪುಜಾತ್ರೆಗಳಲ್ಲಿ ಒಟ್ಟಾರೆ ಬೀರದೇವರಗಳ ಪೂಜಾ ವಿಧಿವಿಧಾನಗಳಲ್ಲಿ ಹೊಳೆಪೂಜೆಗೆ ಅಗ್ರಸ್ಥಾನವಿದೆ.

ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ಬೀರಪ್ಪ ದೇವರ ಜಾತ್ರೆಯಲ್ಲಿ ಮಾತ್ರ ಹೊಳೆಸ್ನಾನಕ್ಕೆ ಹೋಗುವುದನ್ನು ಕಾಣುತ್ತೇವೆ. ಬೀರದೇವರ ಗುಡಿಕಟ್ಟಿಗೆ ಸೇರಿದ ಉಳಿದ ದೇವರುಗಳು ತಮ್ಮ ತಮ್ಮ ಪಲ್ಲಕ್ಕಿ, ಪೂಜಾ ಸಾಮಗ್ರಿಗಳು, ಪೂಜಾರಿ ಮತ್ತು ಭಕ್ತರೊಂದಿಗೆ ಹಿಂದಿನ ದಿನವೇ ಬೀರೇಶ್ವರ ದೇವಸ್ಥಾನಕ್ಕೆ ಬಂದು ಅಲ್ಲಿ ತಮ್ಮ ನಿಗದಿತ ಸ್ಥಾನದಲ್ಲಿ ವಿರಾಜಮಾನವಾಗಿರುತ್ತವೆ. ಮರುದಿನ ಬೆಳಗಿನ ಜಾವದ ಮುಹೂರ್ತದಲ್ಲಿ ಬೀರೇಶ್ವರನಿಗೆ ಪವಿತ್ರವಾದ ಸ್ನಾನವನ್ನು ಮಾಡಿಸುತ್ತಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನೋಡಿದ ಪ್ರಕಾರ ಬೀರೂರು ಬೆಂಕಿ ಬೀರಲಿಂಗೇಶ್ವರ, ದೇವಸ್ಥಾನದಲ್ಲಿ ಏಳು ಗುಡಿಕಟ್ಟೆಗಳು ಕೂಡುತ್ತವೆ. ನಂತರ ಎಲ್ಲ ದೈವಗಳನ್ನು ಒಂದೆಡೆ ಅವುಗಳ ಪೀಠಗಳಲ್ಲಿ ಸಾಲಾಗಿ ಕೂಡಿಸಲಾಗುತ್ತದೆ. ಮೊದಲು ಬೆಂಕಿ ಬೀರಲಿಂಗೇಶ್ವರ ದೇವರಿಗೆ ಪೂಜೆ ಸಲ್ಲಿಸುತ್ತಾರೆ. ಅದೇ ರೀತಿ ಜಾತ್ರೆಗೆ ಆಗಮಿಸಿದ ಎಲ್ಲ ದೈವಗಳಿಗೂ ಪೂಜೆಯಾಗುತ್ತದೆ. ಮಹಾಮಂಗಳಾರತಿಯ ನಂತರ ಅಲ್ಲಿಯೇ ತಯಾರಿಸಿದ ಪ್ರಸಾದವನ್ನು ಎಡೆಮಾಡಿ ಅಲ್ಲಿ ನೆರೆದ ಸಾವಿರಾರು ಭಕ್ತರಿಗೆ ಪ್ರಸಾದ ವಿನಿಯೋಗ ನಡೆಯುತ್ತದೆ.

ಬೀರೇಶ್ವರ ಹೊಳೆಪೂಜೆಯಲ್ಲಿ ನಾವು ಅನೇಕ ವೈಶಿಷ್ಟ್ಯಗಳನ್ನು ಕಾಣುತ್ತೇವೆ. ಪಶುಪಾಲನೆ ಮತ್ತು ಕೃಷಿಯನ್ನು ಪ್ರಮುಖ ವೃತ್ತಿಯಾಗಿ ಹೊಂದಿದ ಒಂದು ಜನ ಸಮೂಹ ಒಂದೆಡೆ ಸೇರಿ ಹಲವು ದೈವಗಳನ್ನು ಆರಾಧಿಸುವ ಮತ್ತು ಆ ಮೂಲಕ ತಮ್ಮ ಸಂಘಟನಾಶಕ್ತಿಯನ್ನು ಮೆರೆಯುವ ಪ್ರಕ್ರಿಯೆ ಯುದ್ಧ ಗೆದ್ದ ಪ್ರಕ್ರಿಯೆಯಾಗಿದೆ. ಇಲ್ಲಿ ನಡೆಯುವ ಹೊಳೆಪೂಜೆಯು ಎಲ್ಲ ಜಾತಿ, ಜನಾಂಗ, ಧರ್ಮಗಳ ಭಕ್ತಜನ ಸಮುದಾಯದ ಸಂಗಮವಾದಂತೆ, ಹಾಲುಮತ ಜನಾಂಗಕ್ಕೆ ಸೇರಿದ ವಿವಿಧ ದೇವತೆಗಳನ್ನು ಪೂಜಿಸುವ ಭಕ್ತರ ಮತ್ತು ದೈವಗಳ ಸಂಗಮವೂ ಹೌದು. ಬೀರೇಶ್ವರ ಜಾತ್ರೆಯಲ್ಲಿ ಬೆಳಗಿನ ಜಾವ ಬ್ರಾಹ್ಮಿ ಮುಹೂರ್ತದಲ್ಲಿ ನಡೆಯುವ ಗಂಗಾಪೂಜೆಯಲ್ಲಿ ಸುತ್ತಮುತ್ತಲಿನ ಹತ್ತಾರು ಗ್ರಾಮಗಳ ಎಲ್ಲ ಜಾತಿ ಜನಾಂಗ ಪಂಗಡಗಳ ಜನರು ಸೇರುತ್ತಾರೆ.

ಇನ್ನೊಂದು ವಿಶಿಷ್ಟತೆಯೆಂದರೆ ಪೂಜೆಯ ನಂತರದ ಪ್ರಸಾದ ವಿತರಣೆ ಇದೆ. ನಂತರ ಎಲ್ಲಾ ಏಳು ಗಡಿ ದೇವರುಗಳು ಬೀರೇಶ್ವರ ದೇವಸ್ಥಾನಕ್ಕೆ ಬರುತ್ತವೆ. ಎಲ್ಲ ದೇವರು ತಮ್ಮತಮ್ಮ ಭಕ್ತರೊಂದಿಗೆ ವಿವಿಧ ವಾದ್ಯಗಳೊಂದಿಗೆ, ಭಕ್ತರ ಪರಾಕುಗಳೊಂದಿಗೆ ಮೆರವಣಿಗೆಯಲ್ಲಿ ಬರುವ ದೃಶ್ಯವು ಅತ್ಯಂತ ಮನೋಹರವಾಗಿರುತ್ತದೆ. ಈ ಎಲ್ಲ ದೈವಗಳು ಬೀರೇಶ್ವರ ದೇವಸ್ಥಾನದಲ್ಲಿ ತಮ್ಮ ತಮ್ಮ ನಿಗದಿತ ಪೀಠಗಳಲ್ಲಿ ಆಸೀನವಾಗುತ್ತವೆ. ಜಾತ್ರೆ ನಡೆಯುವ ದಿನಗಳಲ್ಲಿ ವಿವಿಧ ಪೂಜೆ ಆಚರಣೆಗಳಲ್ಲಿ ಈ ಎಲ್ಲ ದೈವಗಳು

ಭಾಗವಹಿಸುತ್ತವೆ. ಇದು ಎಲ್ಲ ದೇವಾಲಯಗಳಲ್ಲಿ ಸರ್ವಜನ ಸರ್ವಮತಗಳ ಸಾಮರಸ್ಯವಾಗಿ ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಇದು ಕುರುಬ ಜನಾಂಗದ ಸರ್ವಮತ ಸಹಿಷ್ಣುತೆಗೆ ಜೀವಂತ ಸಾಕ್ಷಿಯಾದ ಆಚರಣೆಗಳಾಗಿವೆ. ಉದಾಹರಣೆ ಹೊಳೆಪೂಜೆಗೆ ಆಗಮಿಸುವ ಪ್ರಮುಖ ಗುಡಿಕಟ್ಟಿನ ದೇವರುಗಳು ಇಂತಿವೆ.

- ಬೆಂಕಿ ಬೀರಲಿಂಗೇಶ್ವರ, ಬೀರೂರು
- ಶ್ರೀ ಏಳೂರು ಬೀರಲಿಂಗೇಶ್ವರ, ಕಡೂರು
- ಅಂಬಳೆ ಬೀರಲಿಂಗೇಶ್ವರ, ಕಡೂರು
- ಆಸಂದಿ ಬೀರಲಿಂಗೇಶ್ವರ
- ಚೌಳಹಿರಿಯೂರು ಬೀರಲಿಂಗೇಶ್ವರ
- ಚಿಕ್ಕಬಾಸೂರ ಬೀರಲಿಂಗೇಶ್ವರ
- ಮುಗಳಿಕಟ್ಟೆ ಬೀರಲಿಂಗೇಶ್ವರ

ಬೀರೂರು, ಕಡೂರು ಹಾಗೂ ಎಲ್ಲ ಗುಡಿಕಟ್ಟಿನ ವ್ಯವಸ್ಥಾಪಕರು ಮತ್ತು ಎಲ್ಲ ಮನೆದೇವರುಗಳು ಆಗಮಿಸುವುದು ಗಮನಾರ್ಹವಾಗಿದೆ. ಹೊಳೆಪೂಜೆಯ ನಂತರ ಜಾತ್ರೆಯ ಇತರ ಧಾರ್ಮಿಕ ಆಚರಣೆಗಳಾದ ಹೊಸ್ತಿಲುಪೂಜೆ, ಮೀಸಲು ಅಳೆಯುವುದು, ದೀಪಾರಾಧನೆ, ಚೌಲೋಪನಯನ ಇನ್ನೂ ಮುಂತಾದ ಆಚರಣೆಗಳು ನಡೆಯುತ್ತವೆ.

೧೭. ಊರಾಡುವ ಆಚರಣೆ

ದೇವರು ಇರುವಲ್ಲಿಗೆ ಅಥವಾ ದೇವಾಲಯಕ್ಕೆ ಭಕ್ತರು ಬರುವುದು ಆತನ ದರ್ಶನ ಪಡೆಯುವುದು ಪದ್ಧತಿ. ಆದರೆ ಭಕ್ತರು ಇರುವಲ್ಲಿಗೆ, ಅವರ ಮನೆಗಳಿಗೆ ದೇವರು ಹೋಗುವುದು ಅಪರೂಪ. ಇಂಥ ಅಪರೂಪದ ಆಚರಣೆಯೊಂದು ಕುರುಬರಲ್ಲಿರುವುದು. ಕುರುಬರ ಬೀರದೇವರ ಪಲ್ಲಕ್ಕಿಗಳು ತಮ್ಮ ಭಕ್ತರು ಇರುವ ಊರುಗಳಿಗೆ ಊರಾಡುವುದಕ್ಕೆ ಹೋಗುವ ಪದ್ಧತಿಯು ಉತ್ತರ ಕರ್ನಾಟಕದ ವಿಶೇಷವಾಗಿದೆ. ಎಂಟು ವರ್ಷಕ್ಕೊಮ್ಮೆ, ಮೂರು ವರ್ಷಕ್ಕೊಮ್ಮೆ, ಇಲ್ಲವೇ ಐದು ವರ್ಷಗಳಿಗೊಮ್ಮೆ ಹೀಗೆ ಊರಾಡುವುದಕ್ಕೆ ಹೋಗುತ್ತವೆ. ದೀಪಾವಳಿ ಪಾಡ್ಯ, ಮಹಾನವಮಿ ಇಲ್ಲವೇ ಯುಗಾದಿ ಪಾಡ್ಯದ ನಂತರ ನಾಡಮೇಲೆ ಹೊರಡುವ ಬೀರದೇವರ ಪಲ್ಲಕ್ಕಿಗಳು ಮೂರು ನಾಲ್ಕು ತಿಂಗಳ ನಂತರ ತಮ್ಮ ಮೂಲ ಸ್ಥಾನಗಳಿಗೆ ಬಂದು ಸೇರುತ್ತವೆ.

ಭಕ್ತರ ಊರುಗಳಿಗೆ ಹೋಗುವ ದೇವರು ಆ ಊರಿನಲ್ಲಿರುವ ತನ್ನ ಭಕ್ತರ ಮನೆಯಲ್ಲಿ ಒಂದೊಂದು ದಿನ ವಾಸ ಮಾಡುವುದುಂಟು. ಆ ಮನೆಯಲ್ಲಿಯೇ ದೇವರ ಪಲ್ಲಕ್ಕಿಯೊಂದಿಗೆ ದೇವರೊಂದಿಗೆ ಬಂದ ಪೂಜಾರಿಗಳೂ ಉಳಿಯುತ್ತಾರೆ. ಹೀಗೆ ಉಳಿದ ಪೂಜಾರಿಗಳಿಗೆ ಭಕ್ತರು, ಕರಿಗಡುಬು, ಹೋಳಿಗೆ, ಸಜ್ಜಕ, ಗೋಧಿಯ ಹುಗ್ಗಿ ಮುಂತಾದ ಸಿಹಿ ಅಡುಗೆಯನ್ನು ಮಾಡಿ ಊಟ ಮಾಡಿಸಿ ತೃಪ್ತಿಪಡಿಸುತ್ತಾರೆ. ಮಾರನೆಯ

ದಿವಸ ಮುಂಜಾನೆ ದೇವರ ಪೂಜೆಯಾದ ನಂತರ ಪಲ್ಲಕ್ಕಿ ಹೊರಡುವ ಸಂದರ್ಭದಲ್ಲಿ ಭಕ್ತ ತನ್ನ ಶಕ್ತ್ಯಾನುಸಾರ ದೇವರಿಗೆ ಕಾಣಿಕೆಯನ್ನು ಕೊಡುತ್ತಾನೆ. ಹೀಗೆ ಕಾಣಿಕೆಯನ್ನು ಸ್ವೀಕರಿಸಿದ ಪೂಜಾರಿಗಳು ದೇವರ ಪಲ್ಲಕ್ಕಿಯನ್ನು ಭಕ್ತರ ಮನೆಯ ಎದುರುಗಡೆಗೆ ನಿಲ್ಲಿಸಿಕೊಂಡು ಹರಕೆಯನ್ನು ಕೊಡುವ ಹಾಡೊಂದನ್ನು ಹಾಡಿ ಭಕ್ತರನ್ನು ಹರಸುತ್ತಾರೆ. ಹರಕೆಯ ಹಾಡು ಹೀಗಿದೆ.

"ಸ್ವಾಮಿ ನಮ್ಮಯ ದೇವರ ಬಂದಾವ ಬನ್ನೀರೇ
ಗುರುವೆ ನಮ್ಮಯ ದೇವರ ಬಂದಾವ ಬನ್ನೀರೆ ||ಪಲ್ಲವಿ||

ಬಾವುಳ್ಳ ಭಕ್ತನ ಮನಿಯಲ್ಲಿ ರಾಯಭಾರಿಯ ಮರವೇನ
ರಾಯಭಾರಿಯ ಮರಕಪ್ಪ ರಾಜದ್ಹಕ್ಕಿಗಳು ಕೊಡ್ಯಾವ
ಪಕ್ಕನಿಲ್ಲದೆ ಪಾರಿಗೋಳ ಲೆಕ್ಕನಿಲ್ಲದ ನಿಣಿ ಹಿಂಡ
ಲೆಕ್ಕನಿಲ್ಲದೆ ನಿಣಿಹಿಂಡೆ ಕೊಡಿ ಹಾಲಹಣ್ಣಿವೆ ಮೇದಾವ
ಹಾಲಹಣ್ಣಿವೆ ಮೇದಾವಲ್ಲೋ ಭಕ್ತಗೆ ಹರಕಿಯ ಕೊಟ್ಟಾವೊ
ಆಳಮಕ್ಕಳ ಉಂಡಮನಿಯಾಗ ಹಾಲ ಕಾವಲ್ಯಾಗಿ ಹರಿಯಲಿ
ಪೂಜೇರಿ ಉಂಡ ಮನಿಯಾಗ ತುಪ್ಪದ ಕಾವಲ್ಯಾಗಿ ಹರಿಯಲಿ
ನನ್ನ ಗುರುವೆ ಉಂಡ ಮನಿಯಾಗ ಹೊನ್ನರಾಶಿಯ ಹೊಯ್ಯಲಿ
ಕರಿ ಕಂಬಳಿಯ ಧರಮಾರೋ ಭಕ್ತಗೆ ಹರಕಿಯ ಕೊಟ್ಟಾರೋ
...."[೧೭]

ಎಂದು ಭಕ್ತನಿಗೆ ಹರಕೆಯನ್ನು ಕೊಟ್ಟು ಹಾರೈಸುವ ಪದ್ಧತಿಯು ತುಂಬಾ ವಿಶಿಷ್ಟವಾದುದಾಗಿದೆ. "ಸೈನ್ಯಶಕ್ತಿಗಿಂ ಮಿಗಿಲತ್ತಿ ಸಂತರಾಶೀರ್ವಾದ ಅಪ್ರತಿಹತಂ" ಎಂಬ ನುಡಿಯಂತೆ ದೇವರ, ದೈವಭಕ್ತರ ಆಶೀರ್ವಾದವೇ ನಮ್ಮನ್ನು ಕಾಯುತ್ತದೆ. ನಮ್ಮ ಎಲ್ಲ ಅಭ್ಯುದಯಕ್ಕೂ ಕಾರಣವಾಗುತ್ತದೆ ಎಂದು ನಂಬಿರುವ ಕುರುಬರಿಗೆ ಈ ಹಾರೈಕೆಯು ಒಂದು ರೀತಿಯಲ್ಲಿ ಬದುಕಿಗೆ ಭರವಸೆಯನ್ನು ನೀಡುತ್ತದೆ. ಹೀಗೆ ದೇವರನ್ನು ತೆಗೆದುಕೊಂಡು ಭಕ್ತರ ಮನೆಗೆ ಹೋಗುವ ಪದ್ಧತಿಯು ದಕ್ಷಿಣ ಕರ್ನಾಟಕದಲ್ಲಿಯೂ ಪ್ರಚಲಿತದಲ್ಲಿರುವಂತೆ ತಿಳಿದುಬರುತ್ತದೆ. ಒಡೆಯರುಗಳು ಭಕ್ತರ ಕೋರಿಕೆಯ ಮೇರೆಗೆ ಬುಟ್ಟಿಯಲ್ಲಿ ಬೀರದೇವರನ್ನು ತೆಗೆದುಕೊಂಡು ಹೋಗುವುದುಂಟು. ಆಗ ಒಡೆಯರುಗಳು ಬೀರದೇವರ ಬುಟ್ಟಿಯನ್ನು ತಲೆಯ ಮೇಲೆ ಹೊತ್ತುಕೊಂಡು ಅದು ಎಷ್ಟು ದೂರವಾದರೂ ಸರಿಯೇ ನಡೆದುಕೊಂಡೇ ಊರನ್ನು ತಲುಪುವರು. ಈ ಪದ್ಧತಿ ಇಂದಿಗೂ ನಡೆದುಕೊಂಡು ಬಂದಿದೆ[೧೮] ಎಂಬುದನ್ನು ಗಮನಿಸಿದಾಗ ಬೀರದೇವರನ್ನು ಭಕ್ತರ ಮನೆಗೆ ಹರಕೆಯನ್ನು ತೀರಿಸಲು ಹೋಗುವ ಸಂಪ್ರದಾಯ ಕುರುಬರಿರುವ ಎಲ್ಲ ಪ್ರದೇಶದಲ್ಲಿಯೂ ಇರುವುದು ಇದರಿಂದ ಸ್ಪಷ್ಟವಾಗುತ್ತದೆ. ಹೀಗೆ ಊರಾಡುವ ಸಂದರ್ಭದಲ್ಲಿ ಭಕ್ತರ ಊರುಗಳು ಎಷ್ಟೇ ದೂರದಲ್ಲಿ ಇರಲಿ, ಪಲ್ಲಕ್ಕಿಯನ್ನು ಹೊತ್ತುಕೊಂಡು ಪೂಜಾರಿಗಳು ನಡೆದುಕೊಂಡೇ ಹೋಗುತ್ತಾರೆ.

ಒಟ್ಟಿನಲ್ಲಿ ಕುರುಬ ಜನಾಂಗದ ಆಚರಣೆ, ಸಂಪ್ರದಾಯಗಳು ಅದರಲ್ಲಿಯೂ ದೇವತಾರಾಧನೆ, ಹಬ್ಬ, ಉತ್ಸವ, ಜಾತ್ರೆ ಮುಂತಾದ ಸಂದರ್ಭಗಳಲ್ಲಿ ಆಚರಿಸಿಕೊಂಡು ಬಂದಿರುವ ಆಚರಣೆಗಳು ತುಂಬಾ ವಿಶಿಷ್ಟವಾದವುಗಳಾಗಿವೆ. ಆಚರಣೆ, ಸಂಪ್ರದಾಯಗಳನ್ನು ಯಥಾವತ್ತಾಗಿ ಕಾಪಾಡಿಕೊಂಡು ಬಂದಿರುವುದು ಈ ಜನಾಂಗದ ಮತ್ತೊಂದು ವೈಶಿಷ್ಟ್ಯವಾಗಿದೆ.

೧೮. ಪತ್ರಿಕೌಲು ಕೇಳುವುದು

ಕುರುಬರಿಗೆ ಬೀರದೇವರ ಪತ್ರಿಕೌಲಿನಲ್ಲಿಯೂ ಬಲವಾದ ನಂಬಿಕೆ ಇದೆ. ಈ ದೇವರ ವಾಣಿ ಎಂದಿಗೂ ಹುಸಿ ಹೋಗುವುದಿಲ್ಲವೆಂದು ಹೇಳುತ್ತಾರೆ. ಕುರುಬರು ತಾವು ಯಾವುದೇ ಕಾರ್ಯವನ್ನು ಮಾಡಬೇಕಾದರೆ ಮೊದಲು ಬೀರದೇವರ ಕೌಲನ್ನು ಕೇಳಿ ಅಲ್ಲಿ ದೇವರ ಅಪ್ಪಣೆ ಸಿಕ್ಕ ನಂತರವೇ ಮುಂದುವರಿಯುತ್ತಾರೆ. ಹೀಗಾಗಿ ಬೀರದೇವರ ದೇವಾಲಯದಲ್ಲಿ ಪ್ರತಿದಿನ ಬೆಳಗಿನ ಮತ್ತು ಸಾಯಂಕಾಲದ ಪೂಜಾ ಸಮಯದಲ್ಲಿ ಅನೇಕ ಜನರು ಕೌಲನ್ನು ಕೇಳಲು ಕಾಯುತ್ತಾರೆ. ಕೌಲು ಕೇಳುವುದು ಎಂದರೆ ಬೀರದೇವರ ಪೂಜೆಯಾದ ನಂತರ ಪೂಜಾರಿಯು ಬೀರದೇವರ ತಲೆಯ ಮೇಲೆ ಪತ್ರಿಯನ್ನು ಏರಿಸುತ್ತಾನೆ. ಆ ಪತ್ರಿಯು ಬೀರದೇವರ ಬಲಗಡೆಗೆ ಬಿದ್ದರೆ ಶುಭವೆಂದು ಭಕ್ತರು ಮನಸ್ಸಿನಲ್ಲಿ ಭಾವಿಸಿಕೊಂಡು ಕೆಲಸವು ಆಗುವುದೆಂದೂ ಭಾವಿಸುತ್ತಾರೆ. ಪತ್ರಿಯು ಎಡಗಡೆಗೆ ಬಿದ್ದರೆ ಅಶುಭವೆಂದು ತಾವು ಮನಸ್ಸಿನಲ್ಲಿ ಭಾವಿಸಿಕೊಂಡ ಕೆಲಸ ಆಗುವುದಿಲ್ಲವೆಂದು ತಿಳಿಯುತ್ತಾರೆ. ಕೌಲು ಕೇಳುವಾಗ ಆಕಸ್ಮಾತ್ ಶುಭ ಸೂಚನೆ ಬಾರದಿದ್ದರೆ ಮತ್ತೆ ಹರಕೆಯನ್ನು ಹೊತ್ತು ಕೇಳುತ್ತಾರೆ. ಅಂದರೆ ಭಕ್ತ ಭಾವಿಸಿದ ಕೆಲಸ ಆದರೆ ಇಂತಿಷ್ಟು ಕುರಿ, ಬಂಗಾರ, ಹಣ ಕೊಡುವುದಾಗಿ ಹರಕೆ ಹೊತ್ತುಕೊಳ್ಳುತ್ತಾರೆ. ಇದಕ್ಕೆ ಒಜ್ಜೆಹೊರುವುದೆಂದೂ(ಭಾರ ಹೊರುವುದು) ಎಂದು ಕರೆಯುತ್ತಾರೆ. ಈ ನಂಬಿಕೆ ಕುರುಬ ಜನಾಂಗದಲ್ಲಿ ಎಷ್ಟೊಂದು ಬಲವಾಗಿದೆಯೆಂದರೆ ತಾವು ಮಾಡುವ ಯಾವುದೇ ಕೆಲಸವಿರಲಿ ದೇವರ ಕೌಲು ಕೇಳಿಯೇ ಮುಂದುವರಿಯುತ್ತಾರೆ. ಅದು ತಮ್ಮ ಮನೆಗೆ ಹೆಣ್ಣನ್ನು ತರುವುದಾಗಿರಬಹುದು. ಕೊಡುವುದಾಗಿರಬಹುದು, ಹಣಕಾಸಿನ ವ್ಯವಹಾರವಾಗಿರಬಹುದು. ತಮಗೆ ಬಂದಿರುವ ರೋಗರುಜಿನಗಳು ಗುಣವಾಗುವುದನ್ನೂ ದೇವರ ಪತ್ರಿಕೌಲಿನಿಂದಲೇ ತಿಳಿದುಕೊಳ್ಳುತ್ತಾರೆ. ಇನ್ನು ಕೆಲವರು ತಮಗೆ ಹುಚ್ಚುನಾಯಿ ಕಚ್ಚಿದರೆ ಔಷಧಿ ತೆಗೆದುಕೊಳ್ಳಬೇಕೋ ಬೇಡವೋ ಎಂದು ದೇವರಿಗೆ ಕೌಲು ಕೇಳುವ ಸಂಪ್ರದಾಯವು ಕುರುಬರಲ್ಲಿ ಇದೆ. ಇದು ಅವರ ಶ್ರದ್ಧೆ ಮತ್ತು ಅಜ್ಞಾನದ ನಿದರ್ಶನವಾಗಿದೆ ಎಂದು ಹೇಳಬಹುದು.[೧೮]

ಈ ಕೌಲು ಕೇಳುವ ಪದ್ಧತಿಯು ದಕ್ಷಿಣ ಕರ್ನಾಟಕದ ಬೀರದೇವರ ದೇವಸ್ಥಾನಗಳಲ್ಲಿ ಆಚರಣೆಯಲ್ಲಿರುವುದು ಒಂದು ವಿಶೇಷ. ಆ ಭಾಗದಲ್ಲಿ ಇದನ್ನು "ಹೂವು ಕೇಳುವುದು" ಎಂದು ಕರೆಯುತ್ತಾರೆ. ಬೀರದೇವರ ಭಕ್ತವರ್ಗವೂ ಮೊದಲ ಪೂಜೆಯಾದ ನಂತರ ಹೂ ಕೇಳುವರು. ಹೂವು ಕೇಳುವುದೆಂದರೆ ಬೀರೇಶ್ವರನ ನೆತ್ತಿಯ ಮೇಲೆ ಒಡೇರಯ್ಯ ಅಥವಾ ತಮ್ಮಡಿಯು ಹೂವನ್ನು ಇಡುವನು. ಆ ಹೂವು ಲಿಂಗದ ಬಲಕ್ಕೆ ಬಿದ್ದರೆ ಶುಭವೆಂದೂ ಭಕ್ತನು ಮನದಲ್ಲೇ ಪ್ರಾರ್ಥಿಸಿದ ಕೆಲಸ ಆಗುವುದೆಂದೂ ಹೂವು ಲಿಂಗದ ಎಡಭಾಗದಲ್ಲಿ ಬಿದ್ದರೆ ಅಶುಭವೆಂದೂ ಭಕ್ತನು ಮನಸ್ಸಿನಲ್ಲಿ ಭಾವಿಸಿದ ಕೆಲಸ ಆಗುವುದಿಲ್ಲವೆಂದು ಅರ್ಥ[೧೯]

ಈ ವಿಚಾರವನ್ನು ಗಮನಿಸಿದಾಗ ಕೌಲು ಕೇಳುವ ಆಚರಣೆಯು ಕರ್ನಾಟಕದಾದ್ಯಂತ ಕುರುಬ ಜನಾಂಗ ಇರುವಲ್ಲಿ ಕಂಡುಬರುವ ಒಂದು ಆಚರಣೆಯಾಗಿದೆ ಎಂದು ಹೇಳಬಹುದು.

೧೯. ತೆಂಗಿನಕಾಯಿ ಪವಾಡ

ಬೀರಲಿಂಗೇಶ್ವರನಿಗೆ ತೆಂಗಿನಕಾಯಿ ಆಚರಣೆಯು ಒಂದಾಗಿದೆ. ಈ ಆಚರಣೆ ದೀಕ್ಷೆ ಪಡೆದ ವ್ಯಕ್ತಿಯಿಂದ ಆರಂಭವಾಗುತ್ತದೆ. ದೀಕ್ಷಾಬದ್ಧ ವ್ಯಕ್ತಿಗೆ ಶಿವನ ಆಯುಧವಾದ ತ್ರಿಶೂಲವನ್ನು ಕೈಗೆ ನೀಡಿ ೧೦೧ ಮಂತ್ರಗಳ ಪಠಣೆ ಮಾಡಿಸಿ ದೈವ ನೇಮದ ಪ್ರಕಾರ ಮುಂದೆ ದೀಕ್ಷಾವ್ಯಕ್ತಿ ಬಹಳ ನೇಮಗಳಿಂದ ಮಡಿ, ಉಪವಾಸ, ವ್ರತಾಚರಣೆಗಳಿಂದ ನಡೆದುಕೊಳ್ಳುತ್ತಾ ತಮ್ಮ ಪಾಲಿಗೆ ಬಂದ ಕುಲದೇವರುಗಳ ಉತ್ಸವಮೂರ್ತಿಗಳೊಂದಿಗೆ ಬಸವಣ್ಣ ಅಥವಾ ಎತ್ತು(ದೇವರ ಎತ್ತು)ಗಳ ಸಂಗಡ ಸ್ವಾಮಿ ಸೇವಾಕೈಂಕರ್ಯಗಳಲ್ಲಿ ತೆಂಗಿನಕಾಯಿ ಪವಾಡ ನಡೆಸಲಾಗುತ್ತದೆ. ಮೊದಲು ಬಸವನ ಎತ್ತಿನ ಶಿರದ ಮೇಲೆ ಬೀರಪ್ಪನ ಸ್ತೋತ್ರವನ್ನು ಪಠಿಸಿ ಕಾಯಿ ಒಡೆಯುತ್ತಾರೆ. ಈ ಬಸವನ ಎತ್ತಿನ ಪಾಲನೆ ಪೋಷಣೆ ಮಾಡುವವರು ಸಹ ದೀಕ್ಷೆಯನ್ನು ತೆಗೆದು ಕೊಂಡಿರುತ್ತಾರೆ. ಅವರ ತಲೆಯ ಮೇಲೆ ಸಹ ಕಾಯಿ ಪವಾಡ ನಡೆಸಲಾಗುತ್ತದೆ. ಜೊತೆಗೆ ಕುಲದೇವತೆಗಳು ಪೂಜಾರರು ಮತ್ತು ದೀಕ್ಷೆ ತೆಗೆದುಕೊಂಡಿರುವ ಕುಲದ ಯಾವುದೇ ವ್ಯಕ್ತಿ ಕಾಯಿ ಪವಾಡದಲ್ಲಿ ಭಾಗವಹಿಸುವುದಕ್ಕೆ ಅರ್ಹರಾಗಿರುತ್ತಾರೆ.

ಹೀಗೆ ಬಹಳ ಕಟ್ಟುನಿಟ್ಟಿನ ದೇವರ ಕಾರ್ಯಗಳನ್ನು ಮಾಡಿಕೊಂಡು ಹೋಗುತ್ತ ತಲೆಯ ಮೇಲೆ ತೆಂಗಿನಕಾಯಿ ಒಡೆಯುವ ಅತ್ಯದ್ಭುತ ಪವಾಡ ಜರುಗುತ್ತದೆ. ಇದಕ್ಕೆ ಇಂಬುಕೊಡುವಂತೆ ದೇವರ ಸ್ತೋತ್ರಗಳನ್ನು ಪಠಿಸುತ್ತಲೇ ಕಾಯಿ ಪವಾಡ ನಡೆಯುತ್ತದೆ. ಉದಾಹರಣೆಗೆ ಬೆಂಗಳೂರು ಬೀರಲಿಂಗೇಶ್ವರ, ಬೆಳಗಾವಿ ಜಿಲ್ಲೆಯ ಎಕ್ಸಂಭಾ ಬೀರಲಿಂಗೇಶ್ವರ ದೇವಾಲಯಗಳಲ್ಲಿ ಬೀರಪ್ಪನಿಗೆ ೧ ಕಿ.ಮೀ. ದೂರದಿಂದ ಲಕ್ಷಗಟ್ಟಲೆ ಕಾಯಿ ಎಸೆಯುತ್ತಾರೆ. ಇದು ಹೋಗಿ ದೇವರ ಗುಡಿಗೆ ಬಡಿಯುತ್ತವೆ. ಇಂತಹ ಆಶ್ಚರ್ಯಕರ ಅದ್ಭುತ ರೋಮಾಂಚನ ಸನ್ನಿವೇಶ ಇವುಗಳ ಅಡಿಪಾಯದಂತೆ ಪೌರಾಣಿಕ ಇತಿಹಾಸದಲ್ಲಿಯೂ ಸಹ ಬಹಳಷ್ಟು ಸಾಕ್ಷ್ಯಾಧಾರಗಳು ದೈವ ಮಹಿಮೆಗಳು ತಿಳಿದುಬರುತ್ತವೆ.

ತೆಂಗಿನಕಾಯಿ ಪವಾಡ ಪ್ರಭುವೆ
ಜಗಂಗಳನೆಲ್ಲ ವಿಸ್ಮಯಗೊಳಿಸುವೆ
ಚೂರು ಚೂರಾಗುವ ತೆಂಗಿನಕಾಯಿ
ನೂರಾರು ಕೊಟ್ಟರೂ ಎಟುಕದ ಕಾಯಿ
ಕುಲದೇವರುಗಳಿಗೆ ರಾಜನು ನೀನು
ಕುರುಬ ಕುಲಕ್ಕೆ ಅಮೃತವನುಣಿಸಿ ಕಾಯಿ
ಗುರು ಬೀರಣ್ಣ ನೋಡಸರುವ ಕಾಯಿ
ಹರಹರ ಎಂದು ನುತಿಸಿದೊಡನೆ ಕಾಯಿ

ಹೀಗೆ ಪೌರಾಣಿಕ ಕಥೆಗಳಲ್ಲೂ ತೆಂಗಿನಕಾಯಿ ಪವಾಡವನ್ನು ತಿಳಿಯಬಹುದು. ಉದಾಹರಣೆಗೆ ಕೋಲಾರದ ಕುರುಬರ ಪೇಟೆಯಲ್ಲಿ ನಡೆಯುವ ದೊಡ್ಡ ದೇವರ ಜಾತ್ರೆ ತೆಂಗಿನಕಾಯಿಯ ಪವಾಡ ಜಾತ್ರೆಯ ಸಂದರ್ಭದಲ್ಲಿ ಸಿದ್ಧೇಶ್ವರ ಮತ್ತು ಬೀರಪ್ಪ ದೈವಗಳನ್ನು ಒಂದೇ ಸ್ಥಳದಲ್ಲಿ ಕೆರೆಯ ದಡೆಯಲ್ಲಿ ಪೂಜಿಸುತ್ತಾರೆ. ಇಲ್ಲಿ ಕೂಡ ತೆಂಗಿನಕಾಯಿ ಪವಾಡ ಆಚರಣೆ ನಡೆಯುತ್ತದೆ.

೨೦. ದೀಪದ ಆಚರಣೆ

ಬೀರದೇವರಿಗೆ ದೀಪ ಕೊಡುವುದು ಎಂಬ ಆಚರಣೆಯ ಕಾರ್ಯ ನಡೆಯುತ್ತದೆ. ಇದನ್ನು ತಂಬಿಟ್ಟು ದೀಪ ಮತ್ತು ಬೆಲ್ಲದ ದೀಪ ಎಂಬ ಎರಡು ವಿಧಗಳಲ್ಲಿ ಮಾಡುತ್ತಾರೆ. ಈ ಕಾರ್ಯವನ್ನು ಬಹಳ ಶ್ರದ್ಧೆಭಕ್ತಿ ನೇಮನಿಷ್ಠೆಗಳಿಂದ ತಮ್ಮ ಮನೆಮಠಗಳನ್ನು ಸ್ವಚ್ಛಗೊಳಿಸಿ ಯಾವುದೇ ಅಶುಭ ಕಾರ್ಯಗಳು ಆಗದಂತಹ ಸಂದರ್ಭದಲ್ಲಿ ಉತ್ತಮ ಸಮಯ ನೋಡಿಕೊಂಡು ಈ ಉತ್ಸವ ಹಬ್ಬವನ್ನು ಆಚರಿಸಲಾಗುತ್ತದೆ.

ಇದಕ್ಕೆ ಸಂಬಂಧಿಸಿದ ಪ್ರತಿಯೊಂದು ಕುಟುಂಬಗಳಿಂದಲೂ ಒಂದೊಂದು ದೀಪವನ್ನು ಹಚ್ಚಿಕೊಂಡು ಮನೆಯಿಂದಲೇ ಗುಡಿಗೆ ತರುತ್ತಾರೆ. ಮನೆಯಿಂದ ಗುಡಿಗೆ ತಲುಪುವವರೆಗೂ ಯಾವುದೇ ಕಾರಣಕ್ಕೂ ದೀಪ ಆರುವಂತಿಲ್ಲ. ಉರಿದು ಬೆಳಗುತ್ತಿರಬೇಕು. ಗುಡಿಯ ದೇವರ ಮುಂದೆ ತಮ್ಮ ಕುಟುಂಬದ ಪ್ರತಿಯೊಬ್ಬ ವಿವಾಹಿತ ಸ್ತ್ರೀ ಪುರುಷರು ದೇವರಿಗೆ ದೀಪವನ್ನು ಆರತಿ ಮಾಡಿ ಬೆಳಗಿ ತಮ್ಮ ತಲೆಯ ಮೇಲೆ ದೀಪವನ್ನು ತೆಗೆದುಕೊಂಡು ನಿಂತಲ್ಲಿಯೇ ದೇವರಿಗೆ ಪ್ರದಕ್ಷಿಣೆಯಂತೆ ತಿರುಗಿ ದೇವರಿಗೆ ನಮಸ್ಕರಿಸುತ್ತಾರೆ.

ಆ ಸಂದರ್ಭದಲ್ಲಿ ಕುಟುಂಬದ ಯಾವುದೇ ಸದಸ್ಯ ಈ ಕರ್ತವ್ಯದಿಂದ ದೂರ ಉಳಿದಿದ್ದರೆ, ತಪ್ಪಿಸಿ ಕೊಂಡಿದ್ದರೆ, ಆ ವೇಳೆಗೆ ದೀಪವನ್ನು ತೆಗೆದುಕೊಳ್ಳದಿದ್ದರೆ ಆ ಕುಟುಂಬದಲ್ಲಿ ಅಥವಾ ಅವರಿಗೆ ಅಪಘಾತ, ಸಾವು ನೋವುಗಳಿಂದ, ರೋಗರುಜಿನಗಳಿಂದ, ಭೀಕರವಾದ ಸಮಸ್ಯೆಗಳಿಂದ ನರಳುತ್ತಾರೆಂಬ ನಂಬಿಕೆ ಮತ್ತು ಅದೇ ರೀತಿಯಾಗಿರುವ ಬಹಳಷ್ಟು ಸಾಕ್ಷ್ಯಾಧಾರಗಳು ತಿಳಿದುಬರುತ್ತದೆ.

ಈ ದೀಪವನ್ನು ಮೂರು ದಿನಕ್ಕೆ ಮುಂಚೆ ಸಿದ್ಧಪಡಿಸಿ ತುಪ್ಪವನ್ನು ಸುರಿದು ಬೆಲ್ಲದ ಅಚ್ಚು ಮತ್ತು ಅಕ್ಕಿ ಹಿಟ್ಟಿನಿಂದ ತಯಾರಿಸಿದ ತಂಬಿಟ್ಟಿನ ದೀಪವನ್ನು ಮಾಡುತ್ತಾರೆ. ಈ ಸಮುದಾಯಗಳ ಕಾರ್ಯಗಳು ಭಂಡಾರ ಪೆಟ್ಟಿಗೆ ಮತ್ತು ದೇವರ ಎತ್ತುಗಳೊಂದಿಗೆ ನಡೆದು ಶುಭ ದೈವಕಾರ್ಯದ ಪತ್ರಿಕೆ ಹಂಚಲು ಹೊರಡುತ್ತಾರೆ. ಹಬ್ಬ, ಪರಿಷೆ, ಸೇವಾದಿಕಾರ್ಯಗಳ ಅಂತ್ಯದಲ್ಲಿ ಎಲ್ಲರೂ ಸೇರಿ ದೇವ ಸನ್ನಿಧಿ ಮೂರು ಪ್ರದಕ್ಷಿಣೆ ಹಾಕಿ ನೇರ ತಮ್ಮ ಮನೆಗಳನ್ನು ತಲುಪದೇ ತಮ್ಮ ಕೂಟಗಳ ಹೆಣ್ಣು ದೇವರುಗಳಿಗೆ ಹೋಗಿ ಅಲ್ಲಿ ಅನ್ನಪ್ರಸಾದವನ್ನು ಮಾಡಿ ಅಲ್ಲಿ ಸರ್ವರೂ ಪ್ರಸಾದವನ್ನು ಸ್ವೀಕರಿಸಿ ದೀಪ ನೀಡುವ ಶುಭಕಾರ್ಯ ನಡೆಯುತ್ತದೆ.

೨೧. ಧ್ವಜಾರೋಹಣ ಆಚರಣೆ

ಬೀರಲಿಂಗೇಶ್ವರ ಜಾತ್ರೆ ನಿಗದಿಯಾದ ವಾರದ ಮೊದಲು ಬರುವ ವಾರದಂದು ಊರಗುಡಿಯ ಎದುರು ಒಂದು ಧ್ವಜ ಹಾರಿಸಲಾಗುತ್ತದೆ. ಈ ಧ್ವಜವು ಮೊದಲು ಕೋರಿಧ್ವಜವಾಗಿರುತ್ತಿತ್ತು. ಕೋರಿಧ್ವಜವನ್ನು

ನುಣುಪಾದ ಉಣ್ಣೆಯಿಂದ ತಯಾರಿಸಲಾದ ಕಂಬಳಿಯಿಂದ ತಯಾರಿಸಲಾಗುತ್ತದೆ. ಬದಲಾದ ಸಮಾಜದಲ್ಲಿ ಕೇಸರಿಧ್ವಜವಾಗಿ ಪರಿವರ್ತನೆಗೊಂಡಿದೆ. ಒಂದು ವಾರ ಮೊದಲು ಧ್ವಜ ಹಾರಿಸುವ ಉದ್ದೇಶವೆಂದರೆ ಬೀರ ಬೀರಪ್ಪ ರಾಜನು ಮುಂದಿನ ವಾರ ಇಲ್ಲಿಗೆ ಬರುತ್ತಾನೆ ಎಂಬ ಸೂಚನೆ. ಹಿಂದೆ ಒಂದು ಗ್ರಾಮಕ್ಕೆ ಬರುವ ಅರಸನ ಸೂಚನೆಯನ್ನು ಧ್ವಜ ಹಾರಿಸುವುದರ ಮೂಲಕ ಸೂಚಿಸಲಾಗುತ್ತಿತ್ತು. ಇನ್ನು ಕೆಲವು ದೇಶದಲ್ಲಿ ಧ್ವಜ ಹೊತ್ತ ರಾಜಸೂಚಕ ಕುದುರೆಯನ್ನೂ ಕಟ್ಟುತ್ತಿದ್ದರು. ಬೀರದೇವರ ಗುಡಿಯ ಮುಂದೆ ಧ್ವಜ ಹಾರುತ್ತಿದ್ದಂತೆ ಕಂಬಳಿ ನೇಯುವಂತಿಲ್ಲ. ಕೃಷಿ ಕೆಲಸಕಾರ್ಯಗಳಲ್ಲಿ ತೊಡಗುವಂತಿಲ್ಲ. ಮದುವೆ ಮುಂತಾದ ಕಾರ್ಯಗಳನ್ನು ಮಾಡುವಂತಿಲ್ಲ. ಇಂದು ಈ ಧ್ವಜವು ಒಂದು ದಿನದ ಮೊದಲು ಹಾರಿಸುವ ರೂಢಿ ಆರಂಭವಾಗಿದೆ. ಜಾತ್ರೆಯ ಮಧ್ಯಾಹ್ನ ಹೊತ್ತಿಗೆ ಊರವರು ದೇವರ ನೈವೇದ್ಯ ಇಲ್ಲವೇ ಗೂಡೆ(ದೊಡ್ಡಬುಟ್ಟಿ)ಗಳೊಂದಿಗೆ ಊರ ಮಂದಿರಕ್ಕೆ ಬರುತ್ತಾರೆ. ಅಲ್ಲಿರುವ ದೇವರ ಒಕ್ಕಲುಗಳಾದ ಚಾಜುದಾರರು, ಪೂಜಾರಿ, ದಳವಾಯಿ, ಈರಗಾರರು, ಗೌಡ, ಮುಖ್ಯಸ್ಥರೊಂದಿಗೆ 'ಭೇಟಿ' ಅಥವಾ 'ಕೂಕು ಭೇಟಿ' ಎಂದು ಹಳೆ ಮೈಸೂರು ಭಾಗದಲ್ಲಿ ರೂಢಿಯಲ್ಲಿದೆ. ಅಲ್ಲಿಂದ ಬೀರಪ್ಪನ ಉತ್ಸವಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿ ಡೊಳ್ಳು ವಾದ್ಯಮೇಳಗಳೊಂದಿಗೆ ಮೆರವಣಿಗೆಯಲ್ಲಿ ತರುತ್ತಾರೆ. ಜಾತ್ರೆಯ ಸಮಯದಲ್ಲಿ ಭಕ್ತರು ಅಗ್ಗಿಯನ್ನು ಹಾಯುವ ವಿಶೇಷ ಧಾರ್ಮಿಕ ವಿಧಿಯಿರುತ್ತದೆ. ಬ್ರಹ್ಮ-ಬೀರಪ್ಪ, ಅಗ್ನಿ ಸ್ವರೂಪದ ದೇವತೆಗಳು. ಆದ್ದರಿಂದ ಅಗ್ಗಿ ಹಾಯುವುದು ಅಗ್ನಿಪೂಜೆಯ ಸಂಕೇತ.

ಈ ಪ್ರಸ್ತುತ ಅಧ್ಯಯನಕ್ಕೆ ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕು, ಬೀರೂರು, ಹಿರೇನಲ್ಲೂರು, ಗ್ರಾಮದ ಬೀರಲಿಂಗೇಶ್ವರನ ತೋಪುಜಾತ್ರೆಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ. ಬೀರಲಿಂಗೇಶ್ವರನ ಧ್ವಜಾರೋಹಣ ಮಾಡುವುದರ ಮುಖಾಂತರ ತೋಪುಜಾತ್ರೆ ಆರಂಭವಾಗುವುದು. ಅದರಂತೆ ಬೀರಲಿಂಗೇಶ್ವರನ ತೋಪುಜಾತ್ರೆ, ಬೆಂಕಿ ಬೀರಲಿಂಗೇಶ್ವರ ಬೀರೂರು ಜಾತ್ರೆಯು ಧ್ವಜಾರೋಹಣದ ಮುಖಾಂತರ ಆರಂಭ ವಾಗುತ್ತದೆ. ಆ ಕಾರ್ಯಕ್ರಮಕ್ಕೆ ದೇವಸ್ಥಾನದ ಆಡಳಿತಕ್ಕೆ ಸಂಬಂಧಿಸಿದ ಗುಡಿಗೌಡ್ರು, ಪೂಜಾರಿಗಳು, ಈರಗಾರರು, ಕೋಲ್ಕಾರರು, ಹರಿವಾಣದವರು, ಗುಡಿಕಟ್ಟಿನವರು ಮತ್ತು ಗ್ರಾಮದ ಹಿರಿಯರು ಭಾಗಿಯಾಗಿದ್ದರು. ಇವರು ಕಡ್ಡಾಯವಾಗಿ ಈ ಆಚರಣೆಯಲ್ಲಿ ಇರಲೇಬೇಕು. ಇವರೆಲ್ಲರ ಸಮ್ಮುಖದಲ್ಲಿ ಬೀರಲಿಂಗೇಶ್ವರನನ್ನು ಪೂಜೆ ಅಪ್ಪಣೆ ಪಡೆದು ಗರ್ಭಗುಡಿಯ ಬಾಗಿಲಕ್ಕೆ ವಿರುದ್ಧವಾಗಿ ಧ್ವಜ್ಜವನ್ನು ನೆಟ್ಟಿರುತ್ತಾರೆ. ಧ್ವಜ ಕೆಂಪು ಬಣ್ಣದಿಂದ ಕೂಡಿರುತ್ತದೆ. ಸುಮಾರು ನಲವತ್ತು ಅಡಿ ಎತ್ತರದ ಬಿದಿರು ಕಂಬಕ್ಕೆ ಕಟ್ಟಿರುತ್ತಾರೆ. ಈ ಕಾರ್ಯಕ್ರಮ ಮುಗಿಯುತ್ತಿದ್ದಂತೆ ಸಮುದಾಯದ ಬಾಂಧವರೆಲ್ಲ ಒಂದು ಕಡೆ ಸೇರಿ ಜಾತ್ರೆಯಲ್ಲಿ ಭಾಗವಹಿಸುವ ವಿವಿಧ ಗ್ರಾಮದ ದೇವರುಗಳನ್ನು ಕರೆತರುವುದಕ್ಕೆ ಗುಂಪುಗುಂಪುಗಳಾಗಿ ಹೊರಡುತ್ತಾರೆ. ಪ್ರತಿಯೊಂದು ದೇವರಮೂರ್ತಿಗಳನ್ನು ಜಾತ್ರೆ ನಡೆಸುವ ಗ್ರಾಮದ ದೈವಸ್ಥರ ಸಮ್ಮುಖದಲ್ಲಿ ಕಳಿಸಿಕೊಡುವ ಪದ್ಧತಿ ಇಲ್ಲಿದೆ. ಇದಕ್ಕೆ ಹಲವಾರು ಕಾರಣಗಳು ಇವೆ. ಆ ದೇವರಿಗೆ ಯಾವುದೇ ತರಹದ ಭಂಗ ಉಂಟಾದರೆ, ಮೂರ್ತಿಯ ಆಭರಣಗಳು ಹೆಚ್ಚು ಕಡಿಮೆ ಆದರೆ, ಆ ಎಲ್ಲಾ ಕಾರಣಗಳಿಗೆ ದೈವಸ್ಥರೇ ಕಾರಣರಾಗಿರುತ್ತಾರೆ. ಆ ಎಲ್ಲ ಜವಾಬ್ದಾರಿಯನ್ನು ಒಪ್ಪಿಸುವುದರೊಂದಿಗೆ ಆ ಗ್ರಾಮದ ಪೂಜಾರಿಗಳ ಬಳಗದೊಂದಿಗೆ ದೇವರನ್ನು ಕಳಿಸಿ

ಕೊಡಲಾಗುತ್ತದೆ. ಸಂಪ್ರದಾಯದಂತೆ ಗ್ರಾಮದೊಳಗಡೆ ನಿಯಮದಂತೆ ಶ್ರೀ ಬೀರಲಿಂಗೇಶ್ವರನ ದೇವಸ್ಥಾನಕ್ಕೆ ಮೊದಲು ರೇವಣಸಿದ್ಧೇಶ್ವರನ ಪಲ್ಲಕ್ಕಿ ಆಗಮನವಾಗುತ್ತದೆ. ಆದರೆ ಆ ರೇವಣಸಿದ್ಧ ಸುಮ್ಮನೆ, ನೇರವಾಗಿ ಅಥವಾ ಸದ್ದುಗದ್ದಲವಿಲ್ಲದೆ ಏಕಾಂಗಿಯಾಗಿ ಗ್ರಾಮವನ್ನು ಪ್ರವೇಶಿಸಲಾರ. ಆತನು ಮೊದಲು ಬರುವುದು ಆ ಗ್ರಾಮದ ಹೊರಗಡೆ ಇರುವ ಗಂಗೆಬಾವಿ ಅಥವಾ ಹೊಳೆಯ ಹತ್ತಿರ ಬಂದು ತಂಗಿದ ನಂತರ. 'ನಾನು ಈಗ ನಿಮ್ಮ ಊರ ಹೊಳೆಯ ಹತ್ತಿರ ಬಂದು ತಂಗಿದ್ದೇನೆ. ನೀವು ಬಂದು ನನ್ನನ್ನು ಒಳಗಡೆ ಕರೆದುಕೊಂಡು ಹೋಗಿ' ಎನ್ನುವ ಸಾಂಕೇತಿಕ ರೂಪದಂತೆ ಧ್ವಜವನ್ನು ಕಳುಹಿಸಿಕೊಡಲಾಗುತ್ತದೆ. ಆ ಧ್ವಜವನ್ನು ಹೊತ್ತು ತಂದವರು ಊರ ಅಗಸಿ ಬಾಗಿಲಲ್ಲಿ ಬಂದು ನಿಲ್ಲುತ್ತಾರೆ. ಈ ಸುದ್ದಿಯನ್ನು ಕೋಲ್ಕಾರನು ಬೀರದೇವರ ಆಡಳಿತ ಮಂಡಳಿಗೆ ತಿಳಿಸುತ್ತಾನೆ. ಆಗ ಗ್ರಾಮದ ಬೀರದೇವರ ಪೂಜಾರಿಗಳು, ಗುಡಿಗೌಡ್ರು, ಈರಗಾರರು, ದಳವಾಯಿಗಳು, ಕೋಲ್ಕಾರರು ಮತ್ತು ಮಡಿವಾಳರು ಒಟ್ಟುಗೂಡಿ ವಾದ್ಯಪರಿಕರದೊಂದಿಗೆ ಬಂದು ಪೂಜೆ ಮಾಡಿ ನಮಸ್ಕರಿಸುತ್ತಾರೆ. ನಮಸ್ಕಾರದ ವಿಧಾನಗಳು ಆಯಾ ವ್ಯಕ್ತಿಗಳಿಗೆ ಭಿನ್ನವಾಗಿರುತ್ತದೆ. ಅಂದರೆ ಗ್ರಾಮದ ಹಿರಿಯರು ಉದ್ದಕ್ಕೆ ಮಲಗಿಕೊಂಡು ಅರ್ಪಣೆಯನ್ನು ಸಲ್ಲಿಸಿದರೆ, ಮಡಿವಾಳ ಪಂಜಿನ ಸೇವೆಯ ನಮಸ್ಕಾರಗಳನ್ನು ಅರ್ಪಿಸುತ್ತಾನೆ. ಈರಗಾರರು ಅಲಗಸೇವೆಯ ನಮಸ್ಕಾರಗಳನ್ನು ಅರ್ಪಿಸುತ್ತಾರೆ. ಆನಂತರ ಧ್ವಜವನ್ನು ಗೌರವಪೂರ್ವಕವಾಗಿ ಅಲ್ಲಿಯೇ ಹಾರಿಸಲಾಗುತ್ತದೆ. ಈ ಧ್ವಜವು ಸಹ ಕೆಂಪು ವರ್ಣದಿಂದ ಕೂಡಿದ್ದು ಸುಮಾರು ೪೦ ಅಡಿ ಎತ್ತರವಿರುತ್ತದೆ. ಇಲ್ಲಿಗೆ ಧ್ವಜಾರೋಹಣ ಆಚರಣೆ ಮುಕ್ತಾಯವಾಗುತ್ತದೆ.

೨೨. ಖೇಲು ಹೊರುವುದು

ಇದು ಕರ್ನಾಟಕದ ಕೆಲವು ಬೀರದೇವರ ದೇವಾಲಯದಲ್ಲಿ ಕಂಡುಬರುವ ಆಚರಣೆಯಾಗಿದೆ. ಖೇಲು ಹೊರುವುದು ಎಂದರೆ ತಯಾರಿಸಿದ ಬುಟ್ಟಿಯಲ್ಲಿ ದೇವರನ್ನಿಟ್ಟು ಅದನ್ನು ಹೊಳೆಪೂಜೆಗೆ ತೆಗೆದುಕೊಂಡು ಹೋಗುವುದು ಎಂದು ಅರ್ಥ. ಹಾಗಾಗಿ ಬೀರಪ್ಪನನ್ನು ಇದರಲ್ಲಿಟ್ಟು ತೆಗೆದುಕೊಂಡು ಹೋಗುವುದು ಕಂಡುಬರುತ್ತದೆ.

ಬೀರದೇವರ ಜೀವಂತ ರೂಪವಾದ ದಳವಾಯಿಯು ತೀರಿಕೊಂಡರೆ ಅವನ ಶವಸಂಸ್ಕಾರದ ನಂತರ ಬೀರದೇವರಿಗೆ ಹೊಳೆಸ್ನಾನ ಮಾಡಿಸುವುದಕ್ಕೆ ಪುಣ್ಯಸ್ನಾನ ಎಂದು ಕರೆಯುತ್ತಾರೆ. ಇದೊಂದು ಹಾಲುಮತ ಕುರುಬರಲ್ಲಿ ಅದರಲ್ಲೂ ಬೀರಪ್ಪನ ಒಕ್ಕಲುಗಳಲ್ಲಿ ಕಂಡುಬರುವ ವಿಶಿಷ್ಟ ಆಚರಣೆಯಾಗಿದೆ. ಒಂದು ಗುಡಿಕಟ್ಟಿನ ಬೀರದೇವರ ದಳವಾಯಿ, ಈರಗಾರರು ಪಟ್ಟದಲ್ಲಿ ಯಾರೇ ತೀರಿಕೊಂಡರೂ ಅವರ ಶವಸಂಸ್ಕಾರದ ನಂತರ ಬೀರದೇವರು ಹೊಳೆಸ್ನಾನ ಮಾಡುವುದು ಕಂಡುಬರುತ್ತದೆ. ಮೊದಲು ಬೀರದೇವರು ಅಥವಾ ಮನೆದೇವರನ್ನು ಬಿದುರಿನ ಬುಟ್ಟಿಯಲ್ಲಿಟ್ಟು ಅದನ್ನು ಕೆಂಪು ಮಡಿವಸ್ತ್ರದಿಂದ ಕಟ್ಟುತ್ತಾರೆ. ಒಂದೊಂದು ದೇವರಗಳನ್ನು ಒಂದೊಂದು ಬುಟ್ಟಿಯಲ್ಲಿಟ್ಟು ನಂತರ ಕೆಂಪು ಮಡಿ ಬಟ್ಟೆಯಿಂದ ಬುಟ್ಟಿಗಳನ್ನು ಕಟ್ಟುತ್ತಾರೆ. ಇವುಗಳನ್ನು ಒಡೆಯರು, ಪೂಜಾರರು ಅಥವಾ ಒಕ್ಕಲುಗಳು ಹೊತ್ತುಕೊಂಡು ಹೊಳೆಸ್ನಾನಕ್ಕೆ ಒಯ್ಯುತ್ತಾರೆ. ಇದಕ್ಕೆ ಖೇಲು ಹೊರುವುದು ಎಂದು ಕರೆಯಲಾಗುತ್ತದೆ.

ಹೊಳೆಯಲ್ಲಿ ದೇವರಿಗೆ ಸ್ನಾನ ಮಾಡಿಸಿಕೊಂಡು ಬರುವಾಗ ಹೊಳೆಯಲ್ಲಿನ ಒಂದು ಲಿಂಗರೂಪಿ ದುಂಡುಕಲ್ಲನ್ನು ಜೊತೆಗೆ ತೆಗೆದುಕೊಂಡು ಬಂದು ಅದನ್ನು ತೀರಿಹೋದ ದಳವಾಯಪ್ಪನ ನೆನಪಿಗಾಗಿ ಮಂಟಪ ಅಥವಾ ದಳವಾಯಿ ಗುಡಿಯಲ್ಲಿಟ್ಟು ಪೂಜೆ ಮಾಡಲಾಗುತ್ತದೆ.

೨೩. ಭಂಡಾರ ಚೀಟಿ ಕಟ್ಟಳೆ

ಬೀರಪ್ಪನ ಈ ಪವಿತ್ರ ಭಂಡಾರವನ್ನು ತಯಾರಿಸುವ ರೀತಿಯು ವಿಶಿಷ್ಟವಾದದ್ದು. ಭಂಡಾರ ತಯಾರಿಕೆಗೆ ಬೇಕಾಗುವ ಅರಿಶಿಣದ ಕೊಂಬುಗಳನ್ನು ತಂದು ಬೀರೇಶ್ವರ ದೇವಸ್ಥಾನದಲ್ಲಿ ಅದನ್ನು ನುಣ್ಣಗಾಗುವಂತೆ ಪುಡಿಮಾಡಿ ದೇವರ ಮುಂದಿಟ್ಟು ಪೂಜೆ ಮಾಡುತ್ತಾರೆ. ನಂತರ ಅದನ್ನು ಚಿಕ್ಕಚಿಕ್ಕ ಪೊಟ್ಟಣಗಳಲ್ಲಿ ಕಟ್ಟಿ ಒಕ್ಕಲು ಭಕ್ತರ ಮನೆಗಳಿಗೆ ತೆಗೆದುಕೊಂಡು ಹೋಗುತ್ತಾರೆ. ಬೀರಪ್ಪನ ಜಾತ್ರೆಯಲ್ಲಿ ಭಂಡಾರ ಚೀಟಿ ಕಳುಹಿಸಿದರೆ ಒಕ್ಕಲುಗಳು ಮೀಸಲು ಕಾಣಿಕೆಯನ್ನು ಜಾತ್ರೆಗೆ ತಂದು ದೇವರಿಗೆ ಒಪ್ಪಿಸಬೇಕು ಎಂಬ ನಿಯಮವಿದೆ.

ಬೀರೂರಿನ ಬೆಂಕಿ ಬೀರಪ್ಪನ ಜಾತ್ರೆಯಲ್ಲಿ ಪೂಜಾರಿಯವರು ಅದನ್ನು ತೆಗೆದುಕೊಂಡು ಒಕ್ಕಲು ಮನೆಗಳಿಗೆ ತಲುಪಿಸುತ್ತಾರೆ. ಈ ಭಂಡಾರ ಚೀಟಿಯನ್ನು ಗುರುಸ್ಥಾನದಲ್ಲಿರುವ ದಳವಾಯಿಗೆ, ಜಾತ್ರೆಯ ನಿಶ್ಚಿತ ಅವಧಿಯ ಮೊದಲು ತೆಗೆದುಕೊಂಡು ಭಕ್ತರ ಮನೆಗಳಿಗೆ ಹೋಗುವುದು. ಇದನ್ನು ಬೀರೇಶ್ವರ ಜಾತ್ರೆಯ ಆದೇಶವೆಂಬಂತೆ ಭಕ್ತರ ಮನೆಗೆ ತೆಗೆದುಕೊಂಡು ಹೋದ ಚೀಟಿಯನ್ನು ದೇವರ ಜಗುಲಿಯ ಮೇಲಿಟ್ಟು ಪೂಜೆ ಮಾಡುತ್ತಾರೆ. ಚಿಕ್ಕಮಗಳೂರು ಜಿಲ್ಲೆಯ ಬೀರೂರಿನ ಬೀರಪ್ಪನನ್ನು ಹುಲಬೆಂಕಿ ಬೀರಲಿಂಗೇಶ್ವರ ಎಂದು ಕರೆಯುವುದನ್ನು ಈಗಲೂ ಗಮನಿಸಬಹುದು. ಬೀರಪ್ಪನ ಒಕ್ಕಲುಗಳಲ್ಲಿ ಬೀರಪ್ಪನ ಭಂಡಾರವೆಂದರೆ ಭಕ್ತಿಭಾವ ಉಕ್ಕಿ ಹರಿಯುತ್ತದೆ. ಪ್ರಾಚೀನ ಸಿದ್ಧಪರಂಪರೆಯ ದೈವವಾಗಿರುವ ಬೀರಪ್ಪ ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಕಂಡುಬರುವ ವೀರದೇವರಾಗಿದ್ದಾನೆ. "ಭಂಡಾರವೆಂದರೆ ಬೀರಪ್ಪ ಬೀರಪ್ಪನೆಂದರೆ ಭಂಡಾರ" ಎಂಬುದು ಧಾರ್ಮಿಕ ರಂಗದಲ್ಲಿ ಪ್ರಚಲಿತದಲ್ಲಿರುವ ಮಾತು. ಬೀರಪ್ಪನಷ್ಟೇ ಶಕ್ತಿಶಾಲಿ ಅವನ ಭಂಡಾರ ಎಂಬ ನಂಬಿಕೆ ಜನವರ್ಗದ್ದಾಗಿದೆ.

೨೪. ಅಂಬಲಿ ಕೊಡುವ ಸೇವೆ

ಅಂಬಲಿಯು ಹಾಲುಮತ ಜನಾಂಗವು ಸೇವಿಸುವ ಒಂದು ಆಹಾರ ಪದಾರ್ಥವಾಗಿದೆ. ಅಂಬಲಿ ಅಂದರೆ ರಾಗಿ ಅಥವಾ ಜೋಳದ ನುಚ್ಚನ್ನು ಬೇಯಿಸಿ ತಯಾರಿಸಿದ ಆಹಾರವಾಗಿದೆ. ಇದರೊಂದಿಗೆ ಕುರಿಗಾರರು ಕುರಿ, ಮೇಕೆಗಳ ಹಾಲು ಸೇರಿಸಿ ತುಪ್ಪನ್ನು ಬೆರೆಸಿ ಊಟ ಮಾಡುತ್ತಾರೆ. ಕಟ್ಟಂಬಲಿ ಎಂದರೆ ಸ್ವಲ್ಪ ತೆಳ್ಳಗಾದ ನುಚ್ಚಿನ ಅಂಬಲಿ ಎಂದು ಅರ್ಥೈಸಬಹುದು. ಇದನ್ನು ಬೀರದೇವರಿಗೆ ನೈವೇದ್ಯವಾಗಿ ಮತ್ತು ಪ್ರಸಾದವಾಗಿ ಹಿಡಿಯುತ್ತಾರೆ. ಬೀರದೇವರಿಗೆ ಅಚ್ಚುಮೆಚ್ಚಿನ ನೈವೇದ್ಯವೆಂದರೆ ಅಂಬಲಿ ಎನ್ನಬಹುದು. ಉತ್ತರ ಕರ್ನಾಟಕದ ಕುರುಬರು ಅಂಬಲಿಯನ್ನು ಹೆಚ್ಚು ಸೇವಿಸುತ್ತಾರೆ. ಕರ್ನಾಟಕದಲ್ಲಿ ಇವರನ್ನು ಅಂಬಲಿ ಕುರುಬರೆಂದೇ ಗುರುತಿಸಲ್ಪಟ್ಟಿದೆ. ಈ ಹೆಸರಿನ ಕುರುಬರು ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಇವರು ಹೆಚ್ಚಾಗಿ ಚಿತ್ರದುರ್ಗ ಜಿಲ್ಲೆಯ ತಾಳಿಕಟ್ಟೆ ಗ್ರಾಮದಲ್ಲಿ ಕಂಡುಬರುತ್ತಾರೆ. ಇದು ಹಾಲಿನ ಕುರುಬರಿಗೆ ಇನ್ನೊಂದು

ಹೆಸರಾಗಿದೆ. ಬೀರಪ್ಪನಿಗೆ ಅಂಬಲಿ ಸೇವೆಯು ಬೆಳಗಾವಿ ಜಿಲ್ಲೆಯಲ್ಲಿಯೂ ಕೂಡ ಪ್ರಚಲಿತದಲ್ಲಿದೆ. ದೇವರ ಉತ್ಸವದ ಮೊದಲ ದಿನ ಮುತ್ತೈದೆಯವರು ಖಾಲಿ ಕೊಡಗಳನ್ನು ಹೊತ್ತು ಹೋಗುತ್ತಾರೆ. ದೇವರ ಸ್ನಾನ ಮಾಡಿದ ನಂತರ ಅಲ್ಲಿ ತಯಾರಿಸಿದ ಜೋಳದ ಅಂಬಲಿಯನ್ನು ಹನ್ನೊಂದು ಕೊಡಗಳಲ್ಲಿ ತುಂಬಿ ಮುತ್ತೈದೆಯರು ಮೆರವಣಿಗೆಯಲ್ಲಿ ದೇವರೊಂದಿಗೆ ಹೊತ್ತು ತರುತ್ತಾರೆ. ದೇವಸ್ಥಾನಕ್ಕೆ ಬಂದು ಅಂಬಲಿಯನ್ನು ದೇವರಿಗೆ ಎಡೆಮಾಡಿ ನಂತರ ಉತ್ಸವಕ್ಕೆ ಬಂದ ಭಕ್ತಸಮೂಹಕ್ಕೆ ಪ್ರಸಾದದ ರೂಪದಲ್ಲಿ ಬಡಿಸುತ್ತಾರೆ.

೨೫. ಬಡಿಗೆ ಆಚರಣೆ

ಪ್ರತಿ ಮೂರುವರ್ಷಕ್ಕೊಮ್ಮೆ ನಡೆಯುವ ಜಾತ್ರೆಯಲ್ಲಿ ಈ ಬಡಿಗೆ ಆಚರಣೆ ಜಾರಿಯಲ್ಲಿದೆ. ಅಡವಿಯಿಂದ ತಂದ ಬಡಿಗೆಗಳನ್ನು ಭಕ್ತರು ಮಡಿ ಮಾಡಿ ಭಂಡಾರ ಹಚ್ಚಿ ಪೂಜಿಸುತ್ತಾರೆ. ನಂತರ ಬಡಿಗೆ ಕಟ್ಟುಗಳನ್ನು ಪೂಜಾರಿ ಮನೆಗೆ ತರುತ್ತಾರೆ. ಅಲ್ಲಿಯೂ ಸಾಂಪ್ರದಾಯಿಕ ಪೂಜೆ ನಡೆಯುತ್ತದೆ. ನಂತರ ಪ್ರತಿಯೊಬ್ಬರ ಕೈಯಲ್ಲಿ ಬಡಿಗೆ ಹಿಡಿದುಕೊಂಡು ಬೀರಪ್ಪನ ಗುಡಿಗಳ ಮುಂದೆ ರಸ್ತೆಯಲ್ಲಿ ಹೊಡೆದಾಡುತ್ತಾ ಹೋಗುತ್ತಾರೆ. ಇದು ನೋಡುಗರಲ್ಲಿ ರೋಮಾಂಚನವನ್ನು ಉಂಟುಮಾಡುತ್ತದೆ. ಮತ್ತೆ ಎಲ್ಲಾ ಬಡಿಗೆಗಳನ್ನು ಸ್ವಚ್ಛಗೊಳಿಸಿ ಮನೆಗೆ ಒಯ್ದು ಪೂಜಿಸುತ್ತಾರೆ. ಪರಸ್ಪರ ಬಡಿಗೆಯಿಂದ ಹೊಡೆದಾಡಿದರೂ, ನೋವಾದರೂ ಭಕ್ತರು ಅಂದು ನೋವಾಗಲಿ ಎಂದು ಹೇಳುತ್ತಾರೆ. ರಕ್ತ ಬಂದರೆ ಭಂಡಾರ ಹಚ್ಚಿ ಮೆರೆಯುತ್ತಾರೆ. ಈ ಹೊಡೆದಾಡುವ ದೃಶ್ಯ ನೋಡಲು ಅನೇಕ ಜನರು ಸೇರಿರುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇದು ಯಾವುದೋ ಯುದ್ಧವನ್ನು ಮತ್ತು ಯುದ್ಧದ ವಿಜಯವನ್ನು ಸಂಕೇತಿಸುತ್ತದೆ. ಮೂಲತಃ ಕುರುಬರು ವೀರಪರಂಪರೆಗೆ ಸೇರಿದವರಾಗಿದ್ದಾರೆ. ಸೈನ್ಯ ಕಟ್ಟಿ, ರಾಜ್ಯ ಸಂಪಾದಿಸಿ, ಆಡಳಿತ ನಡೆಸಿದ ಹಿರಿಮೆ ಇವರದಾಗಿದೆ. ಅದರ ಸಂಕೇತವಾಗಿ ಇದು ಅಣಕುಯುದ್ಧ ಮತ್ತು ಅದರ ವಿಜಯೋತ್ಸವವನ್ನು ಪ್ರತಿನಿಧಿಸುತ್ತದೆ. ಆಯುಧಗಳನ್ನು ಪೂಜಿಸುವುದು ಹೊಳೆಯಲ್ಲಿ ತೊಳೆದು ಮತ್ತೆ ಅವುಗಳಿಗೆ ವಿಧಿವಿಧಾನವಾಗಿ ಪೂಜಿಸುವುದು ಈ ಕಾರ್ಯಕ್ರಮ ಗಳು ವಿಜಯವನ್ನು ಪ್ರತಿರೂಪೀಕರಿಸುವ ಆಚರಣೆಗಳಾಗಿವೆ. ಈರಗಾರ ಹಬ್ಬ ಈರಗುಡಿ ಹಬ್ಬ ಇದು ಬೀರಪ್ಪನ ವೀರಪರಂಪರೆಯ ದ್ಯೋತಕವಾಗಿದೆ.

೨೬. ಹುಗ್ಗಿ ಹುಟ್ಟಿನ ಪವಾಡ

ಬಾಗಲಕೋಟೆ ಜಿಲ್ಲೆ ಗೋವಿಂದಕೊಪ್ಪ ಎಂಬ ಗ್ರಾಮದಲ್ಲಿ ವರ್ಷಕ್ಕೆ ಒಂದು ಸಾರಿ ಜಾತ್ರೆ ನಡೆಯುತ್ತದೆ. ಈ ಜಾತ್ರೆಯಲ್ಲಿ ಈ ಪವಾಡ ವಿಶೇಷವಾಗಿ ಕಂಡುಬರುತ್ತದೆ. ಇಲ್ಲಿಯ ಜನ ಹುಗ್ಗಿಯನ್ನು ತಯಾರಿಸುವಾಗ ಕೈಯನ್ನು ಹುಟ್ಟು ಮಾಡಿ ಕುದಿಯುವ ಹುಗ್ಗಿಯಲ್ಲಿ ಕೈ ಹಾಕಿ ಅದನ್ನು ತಿರುವುವುದು ಕಂಡುಬರುತ್ತದೆ. ಇದನ್ನು ಪ್ರಸಾದವೆಂದು ಸ್ವೀಕರಿಸುವವರು, ಇಷ್ಟೇ ಅಲ್ಲದೇ ಕೆಲವರ ಮೈಯಲ್ಲಿ ಬೀರದೇವರು ಬಂದು ಆವೇಶಗೊಂಡು ಕುದಿಯುವ ಹುಗ್ಗಿಯ ಪಾತ್ರೆಯಲ್ಲಿ ಕೈಯಲ್ಲಿ ತೆಂಗಿನಕಾಯಿ ಹಿಡಿದುಕೊಂಡು ಕೈಯನ್ನು ಅದ್ದಿ ಅದರಲ್ಲಿ ತಿರುವಿಬಿಡುವ ಪವಾಡ ಸುಮಾರು ಇಪ್ಪತ್ತು ವರ್ಷಗಳಿಂದ ಬಾಗಲಕೋಟೆ ಜಿಲ್ಲೆಯಲ್ಲಿ ನಡೆಯುತ್ತ ಬಂದಿದೆ. ಹುಗ್ಗಿಯಿಂದ ಕೈಯನ್ನು ತೆಗೆದಾಗ ದೇವರ ಭಂಡಾರ ಹಾಕಿ ತೆಳುವಾದ ಬಟ್ಟೆಯಿಂದ

ಕೈಯನ್ನು ಕಟ್ಟುತ್ತಾರೆ. ನಂತರ ಸ್ವಲ್ಪ ಸಮಯದಲ್ಲಿ ಕೈಯನ್ನು ನೋಡಿದರೆ ಯಾವುದೇ ಗಾಯವಾಗಿರುವುದಿಲ್ಲ. ಇಲ್ಲಿಯ ಜನರು ಇದನ್ನು ಪವಾಡ ಎಂದು ನಂಬಿದ್ದಾರೆ. ಇಂದಿನ ಆಧುನಿಕರು ಇದು ಮೂಢನಂಬಿಕೆ ಎಂದು ಹೇಳಿದರೂ ಇದು ಆಯಾ ಪ್ರದೇಶದ ಜನರ ಅಥವಾ ಭಕ್ತರ ನಂಬಿಕೆಯನ್ನು ಅವಲಂಬಿಸಿದೆ.

೨೭. ಗುಗ್ಗರಿ ಆಚರಣೆ

ಈ ಆಚರಣೆ ಬಾಗಲಕೋಟೆ ಜಿಲ್ಲೆಯಲ್ಲಿ ಕಂಡುಬರುತ್ತದೆ. ಗೋವಿಂದಕೊಪ್ಪ ಬೀರಪ್ಪನಿಗೆ ಗುಗ್ಗರಿ ಆಚರಣೆ ಪ್ರಮುಖವಾಗಿದೆ. ವರ್ಷಕ್ಕೆ ನಾಲ್ಕು ಬಾರಿ ಉತ್ಸವ ಜರಗುತ್ತದೆ. ದೀಪಾವಳಿ, ಯುಗಾದಿ, ಶಿವರಾತ್ರಿ, ಶ್ರಾವಣದ ಕಡೆ ಸೋಮವಾರದಂದು ನಡೆಯುತ್ತದೆ. ಈ ಉತ್ಸವದಲ್ಲಿ ನಡೆಯುವ ಗುಗ್ಗರಿ ಮತ್ತು ಹುಗ್ಗಿ ಕೈ ಹುಟ್ಟು ಪವಾಡಗಳು ವಿಶೇಷತೆಯನ್ನು ಪಡೆದಿವೆ. ಹಾಲುಮತ ದೈವಗಳ ಜಾತ್ರೆಯಲ್ಲಿ ನಡೆಯುವ ಸಂಪ್ರದಾಯ ಇದಾಗಿದೆ. ಜಾತ್ರೆಯ ಹಿಂದಿನ ದಿನ ಊರಿನ ಐದು ಮನೆಗಳಿಂದ ಐದು ತೆರನಾದ ಅಕ್ಕಡಿಕಾಳು ದ್ವಿದಳ ಧಾನ್ಯಗಳನ್ನು ಸಂಗ್ರಹಿಸುತ್ತಾರೆ. ಪ್ರಮುಖ ದ್ವಿದಳ ಧಾನ್ಯಗಳೆಂದರೆ ಜೋಳ, ಗೋಧಿ, ಮಡಕೆ, ಅಲಸಂದಿ, ಹೆಸರು, ವಿವಿಧ ತರಹದ ಕಾಳುಗಳನ್ನು ಕುದಿಸಿ ಉಪ್ಪು ಅರಿಸಿನ ಹಚ್ಚಿ ಗುಗ್ಗರಿ ತಯಾರಿಸುತ್ತಾರೆ. ಅದನ್ನು ಮೊದಲು ದೇವರಿಗೆ ಅರ್ಪಿಸುತ್ತಾರೆ. ನಂತರ ಊರ ಪದ್ಧತಿಯ ಪ್ರಕಾರ ಭಂಡಾರ ಕೊಟ್ಟು ಆಹ್ವಾನಕ್ಕೆ ಆಗಮಿಸಿದ ಭಕ್ತರಿಗೆ, ಆಳುಮಕ್ಕಳಿಗೆ, ಡೊಳ್ಳು ಕಲಾವಿದರಿಗೆ ಗುಗ್ಗರಿ ಪ್ರಸಾದವನ್ನು ಹಂಚುತ್ತಾರೆ. ರಾತ್ರಿಯಲ್ಲಿ ಡೊಳ್ಳಿನ ಹಾಡಿಕೆ, ಓಲಗ ನಡೆಯುತ್ತದೆ. ಈ ಆಚರಣೆಗೆ ಧಾರ್ಮಿಕವಾದ ಗೌರವವಿದೆ.

೨೮. ವಾಲಗ(ಓಲಗ)ಸೇವೆ

ಓಲಗ ಎಂದರೆ ಆಸ್ಥಾನ, ರಾಜಸಭೆ ನಡೆಯುವ ಸ್ಥಳ ಎಂಬ ಅರ್ಥವೂ ಇದೆ. ಬೀರಪ್ಪನ ಓಲಗಸೇವೆ ಎಂದರೆ ಬೀರಪ್ಪನ ಸನ್ನಿಧಿಯಲ್ಲಿ ಸಲ್ಲುವ ಸೇವೆ ಎಂಬ ಅರ್ಥವು ಹೆಚ್ಚು ಸೂಕ್ತವಾದದ್ದಾಗಿದೆ. ಧಾರ್ಮಿಕ ಪರಂಪರೆಯಲ್ಲಿ ಬೀರಪ್ಪನು ಸಾಮ್ರಾಟನಾಗಿದ್ದಾನೆ. ಈ ವಿಚಾರ ಅವನ ಆಚರಣೆಗಳನ್ನು ಗಮನಿಸಿದಾಗ ತಿಳಿದುಬರುತ್ತದೆ. ಅವನ ಆಸ್ಥಾನದಲ್ಲಿ ಪೂಜಾರಿಗಳು, ಸತ್ತಿಗೆ ಭಂಟರು, ದೀವಟಿಗೆ ಸೇವೆಯವರು, ಈರಗಾರರು, ಕೋಲುಕಾರರು, ಒಂದೊತ್ತಿನವರು, ಸಾವಿರದವರು, ವಾಲಗದವರು, ಡೊಳ್ಳು ಬಾರಿಸುವ ಭಟರು, ಮೊದಲಾದ ಭಕ್ತವೃಂದವರಿಗೆ ಒಡೆಯನಾಗಿ ಬೀರಪ್ಪನ ಜೀವಂತರೂಪವಾಗಿ ದಳವಾಯಿಯೂ ಇರುತ್ತಾನೆ. ಇದೊಂದು ಧಾರ್ಮಿಕ ಮಹಾಸಾಮ್ರಾಜ್ಯವಾಗಿದ್ದು ಅದರ ಚಕ್ರವರ್ತಿ ಬೀರದೇವರಾಗಿರುವುದು ಕುರುಬರ ಧಾರ್ಮಿಕ ಪರಂಪರೆಯ ವಿಶೇಷ ಎನ್ನಬಹುದು.

ಓಲಗಸೇವೆಯು ಬೀರದೇವರ ಒಂದು ಸೇವಾಚರಣೆಯಾಗಿದೆ. ಕರ್ನಾಟಕದಾದ್ಯಂತ ಪ್ರಮುಖವಾಗಿ ಕಂಡುಬರುವ ಬೀರದೇವರ ದೇವಾಲಯಗಳಲ್ಲಿ ಓಲಗಸೇವೆ ನಡೆಯುವುದು ವಾಡಿಕೆಯಾಗಿದೆ. ಈ ಸೇವಾಚರಣೆಯು ಅತ್ಯಂತ ಶ್ರದ್ಧೆಯಿಂದ ಕೂಡಿದೆ. ವೈಶಿಷ್ಟ್ಯಪೂರ್ಣವಾದ ಆಚರಣೆಯೆಂಬ ಹೆಗ್ಗಳಿಕೆಗೆ ಪಾತ್ರವಾದ ಓಲಗಸೇವೆಯು ದಾವಣಗೆರೆ ಜಿಲ್ಲೆಯಲ್ಲಿ ಕಂಡುಬರುತ್ತದೆ.

ಬೀರದೇವರ ದೇವಾಲಯಗಳ ಹೊರಾವರಣವನ್ನು ಓಲಗಶಾಲೆಯೆಂದೇ ಪರಿಗಣಿಸಿ, ಅದನ್ನು ವಿಧಿ ವಿಧಾನವಾಗಿ ಶೃಂಗರಿಸಲಾಗುತ್ತದೆ. ಆವರಣದ ಎಂಟು ದಿಕ್ಕುಗಳಿಗೆ ಪೂಜಿಸಿ ಒಂಬತ್ತು ತೆಂಗಿನ ಕಾಯಿಗಳನ್ನು ಕಟ್ಟಿ, ಅಲ್ಲಲ್ಲಿ ತೆಂಗಿನ ಕಾಯಿಗಳು ಮತ್ತು ಬಾಳೆಹಣ್ಣುಗಳ ಗೊನೆಗಳನ್ನು ಆವರಣದ ಬಾಗಿಲಿಗೆ ನೇತು ಹಾಕುತ್ತಾರೆ. ಎಲ್ಲ ಕಂಬಗಳಿಗೆ ತೆಂಗು, ಬಾಳೆ, ಅಡಿಕೆ, ಗರಿಗಳಿಂದ ಮತ್ತು ಅಡಿಕೆ ಹೊಂಬಾಳೆಗಳಿಂದ ಅಲಂಕರಿಸಿರುತ್ತಾರೆ. ಅರಿಸಿನದಿಂದ ರಂಗೋಲಿ ಹಾಕಿ ಮಡಿವಸ್ತ್ರಗಳನ್ನು ಕಟ್ಟಿ ಶೃಂಗರಿಸುತ್ತಾರೆ. ಗರ್ಭಗುಡಿ ಯಲ್ಲಿರುವ ಬೀರದೇವರ ಸ್ಥಾವರಮೂರ್ತಿಗೆ ಅಭಿಮುಖವಾಗಿ ಓಲಗದಲ್ಲಿ ಅವನ ಸತ್ತಿಗೆಯನ್ನು ನಿಲ್ಲಿಸ ಲಾಗುತ್ತದೆ. ಅದರ ಪಕ್ಕದಲ್ಲಿ ನಿರಂತರವಾಗಿ ಬೀರಪ್ಪನ ದೀವಟಿಗೆಯು ಉರಿಯುತ್ತಿರುತ್ತದೆ. ನಿಲ್ಲಿಸಿದ ಸತ್ತಿಗಗೆ ಚಾಮರಸೇವೆಯವರು ಚಾಮರ ಹಾಕುತ್ತ ಸೇವೆ ಸಲ್ಲಿಸುವುದು ಕಂಡುಬರುತ್ತದೆ. ಓಲಗಶಾಲೆಯಲ್ಲಿ ನಿಲ್ಲಿಸಿದ ಸತ್ತಿಗೆಯು ಸ್ಥಾವರಮೂರ್ತಿಯ ಪ್ರತಿನಿಧಿಯಾಗಿದ್ದು ಭಕ್ತರಿಂದ ದೇವರಿಗೆ ಸಲ್ಲುವ ಭಕ್ತಿಶ್ರದ್ಧೆಗಳು ಅದಕ್ಕೆ ಸಲ್ಲುತ್ತದೆ.

ಮೊದಲು ಬೀರಪ್ಪನ ಸ್ಥಾವರಮೂರ್ತಿಗೆ ಪೂಜೆ ಸಲ್ಲುತ್ತದೆ. ಸ್ಥಾವರಮೂರ್ತಿಯ ಎದುರಿಗೆ ಎರಡು ದೊಡ್ಡಗಾತ್ರದ ಡೊಳ್ಳುಗಳನ್ನಿಟ್ಟು ಪೂಜೆ ಮಾಡಿ ಅವುಗಳನ್ನು ಇಬ್ಬರು ಸೊಂಟಕ್ಕೆ ಕಟ್ಟಿಕೊಳ್ಳುತ್ತಾರೆ. ಅವರನ್ನು ಗರ್ಭಗುಡಿಯಿಂದ ಹೊರಗೆ ಪೂಜಾರಿಯು ಕರ್ಪೂರದಾರತಿಯೊಂದಿಗೆ ಕರೆತಂದು ಓಲಗಶಾಲೆಗೆ ಬಿಟ್ಟು ಸತ್ತಿಗೆಯನ್ನು ಪೂಜಿಸಿ ಹೋಗುತ್ತಾನೆ. ಇವೆರಡು ಡೊಳ್ಳುಗಳನ್ನು ಬಾರಿಸುವುದರೊಂದಿಗೆ ವಾದ್ಯಸೇವೆ ಆರಂಭಗೊಳ್ಳುತ್ತದೆ. ಇತರ ಚಿಕ್ಕ ದೊಡ್ಡ ಸುಮಾರು ಹತ್ತು ಡೊಳ್ಳುಗಳು ಇವುಗಳನ್ನು ಸೇರಿಕೊಳ್ಳುತ್ತವೆ. ಡೊಳ್ಳುಸೇವೆಯು ಒಂದು ಆವರ್ತ ನಿರಂತರವಾಗಿ ನಡೆಯುತ್ತಿದ್ದರೆ ಒಳಗೆ ಬೀರಪ್ಪನ ಸನ್ನಿಧಿಯಲ್ಲಿ ಇಬ್ಬರು ಈರಗಾರರು ಈರಿಕೆಯ ಕಾಸೆಗಳನ್ನು ಧರಿಸಿ, ಪೂಜೆಗೊಂಡು ಪೂಜಾರಿಯೊಂದಿಗೆ ಓಲಗಕ್ಕೆ ಬರುತ್ತಾರೆ. ಬೀರಪ್ಪನ ಮೂರ್ತಿಗೆ ಅಭಿಮುಖವಾಗಿ ನಿಂತುಕೊಂಡು ಕುಣಿಯುತ್ತಾ ಓಲಗಸೇವೆಯನ್ನು ಆರಂಭಿಸುತ್ತಾರೆ. ಇವರ ಸಂಖ್ಯೆ ಕ್ರಮೇಣ ಹೆಚ್ಚುತ್ತಾ ಹೋಗಿ ಎಲ್ಲ ಹನ್ನೆರಡು ಈರಗಾರರು ಸನ್ನಿಧಿಗೆ ಬರುತ್ತಾರೆ.

ಓಲಗಸೇವೆಯು ಮೂರು ಹಂತಗಳಲ್ಲಿ ನಡೆಯುತ್ತದೆ

೧. ಮೊದಲಿಗೆ ಡೊಳ್ಳು ಬಾರಿಸುವಿಕೆ ಒಂದು ಆವರ್ತ ಕಾಲ ನಡೆಯುತ್ತದೆ. ಬೀರೇಶ್ವರ ದೇವರ ಮೂರ್ತಿಗೆ ಮುಖಾಮುಖಿಯಾಗಿ ಡೊಳ್ಳಿನ ತಂಡ ನಿಲ್ಲುತ್ತದೆ. ಮೊದಲಿಗೆ ಸಾಲಾಗಿ ಒಬ್ಬರ ಹಿಂದೆ ಒಬ್ಬರು ನಿಂತು ಬಾರಿಸುತ್ತಾರೆ. ಈ ಬಾರಿಸುವಿಕೆಯಲ್ಲಿ ಬೀರಪ್ಪನಿಗೆ ನೀನು ಕೇಳಲು ಹೆಚ್ಚೋ, ನಾನು ಭಾರಿಸಲು ಹೆಚ್ಚೋ ಎಂಬ ಆವೇಶಭರಿತವಾದ ಡೊಳ್ಳಿನ ರಣವಾದ್ಯದ ಸವಾಲು ಕೇಳಿಸುತ್ತದೆ. ನಂತರ ಡೊಳ್ಳುಗಳು ವೃತ್ತಾಕಾರವಾಗಿ ನಿಂತುಕೊಂಡು ಕೇಂದ್ರದಲ್ಲಿ ತಾಳವಾದ್ಯದವನು ನಿಲ್ಲುತ್ತಾನೆ. ನಾದ ಹಿಡಿದ ನಂತರ ಕೋಟೆ ಗೋಡೆಗಳು ಕಲ್ಲುಬಂಡೆಗಳು ಚೂರುಚೂರಾಗುವಂತೆ ಚರ್ಮದ ಡೊಳ್ಳುಗಳ ನಾದ ವಾತಾವರಣವನ್ನು ತುಂಬಿ ಬೀರಪ್ಪನನ್ನು ನಿದ್ರಾವಸ್ಥೆಯಿಂದಲೇ ಎಬ್ಬಿಸುವುದು ಕಂಡುಬರುತ್ತದೆ. ಪ್ರತಿಯೊಂದು ಹಂತದ ಸೇವೆ ನಡೆಯುವಾಗ ಪೂಜಾರಿಯು ಮಂಡಲಕ್ಕೊಮ್ಮೆ ಬೀರಪ್ಪನಿಗೆ ಮಂಗಳಾರತಿಯನ್ನು ಮಾಡಿ, ಹೊರಗೆ ಬಂದು

ಈರಗಾರ, ಡೊಳ್ಳು ಸತ್ತಿಗೆ ಮತ್ತು ಉರಿಯುವ ದೀವಟಿಗೆಗೆ ಆರತಿ ಎತ್ತುವುದು ಕಂಡುಬರುತ್ತದೆ. ಹೀಗೆ ಬೀರದೇವರು ಇಡೀ ರಾತ್ರಿ ನೂರೊಂದು ಸಲ ಪೂಜೆಗೊಳ್ಳುವುದು ಮತ್ತು ಒಂದು ಬಾರಿಗೆ ಒಂದು ಕದಳಿ(ಬಾಳೆ)ಮರ ಕಡಿದು ದೇಗುಲದ ಕಂಬಗಳಿಗೆ ಕಟ್ಟುವುದು ಕಂಡುಬರುವ ಆಚರಣೆಯಾಗಿದೆ. ಜೊತೆಗೆ ಚಾಮರಸೇವೆ ನಿರಂತರವಾಗಿ ನಡೆಯುತ್ತದೆ.

೨. ಎರಡನೆಯ ಘಟ್ಟದಲ್ಲಿ ಡೊಳ್ಳಿನ ನಾದಕ್ಕೆ ವೀರಗಾರರು ಬಂದು ಸೇರಿ ಕುಣಿತವನ್ನು ಆರಂಭಿಸುತ್ತಾರೆ. ದೇವರಿಗೆ ವಿಮ್ರರಾಗಿ ಸಾಲಾಗಿ ನಿಂತ ವೀರಗಾರರು ಡೊಳ್ಳಿನ ನಾದಕ್ಕೆ ಎಡಗಾಲನ್ನು ಎತ್ತಿ ಎರಡು ಕೈಯಿಂದ ಈರಗಾರನ ಕಾಸೆಯನ್ನು ಚಿಮ್ಮಿ ಗತ್ತು ತೋರಿಸುತ್ತಾರೆ. ನಂತರ ಬಲಗಾಲೆತ್ತಿ ಅದೇ ರೀತಿ ಕಾಸೆಯನ್ನು ಕೊಡವಿ, ಬೀಸುತ್ತ ಗತ್ತು ಹಿಡಿಯುವುದು ಅದ್ಭುತ ದೃಶ್ಯದಂತೆ ಕಾಣುತ್ತದೆ. ಇದೇ ರೀತಿ ಕಾಲೆತ್ತಿ ಕುಣಿಯುವ ಪ್ರಕಾರವು ಒಂದು ಆವರ್ತ ನಡೆಯುವುದು ಕಂಡುಬರುತ್ತದೆ. ಎರಡನೆಯ ಪ್ರಕಾರದಲ್ಲಿ ಡೊಳ್ಳುಗಳ ವೀರನಾದಕ್ಕೆ ತಕ್ಕಂತೆ ವೀರಗಾರರು ಎರಡೂ ಕೈಯಲ್ಲಿರುವ ಕಾಸೆಯನ್ನು ಕೊಡುವುತ್ತ ಬೀಸುತ್ತ ಎರಡೂ ಕಾಲುಗಳನ್ನು ಎತ್ತಿ ಎತ್ತಿ ಹಾಕುತ್ತ ತಮ್ಮ ಸುತ್ತ ತಾವೇ ವರ್ತುಳಾಕಾರವಾಗಿ ತಿರುಗುತ್ತಾರೆ. ಅಂದರೆ ಚಾಮರ ಸೇವೆಯಂತೆಯ ಕಾಸೆಗಳನ್ನು ಬೀಸಿ ಬೀರಪ್ಪನ ಸೇವೆ ಮಾಡುವ ಪ್ರಕ್ರಿಯೆ ಇಲ್ಲಿ ಗಮನಾರ್ಹವಾದದು. ವೀರಗಾರರು ಮತ್ತು ಡೊಳ್ಳಿನ ಭಂಟರ ಮಧ್ಯೆ ಯಾರು ಮೊದಲು ನಿಲ್ಲಿಸುತ್ತಾರೆ ನೋಡೋಣ ಎಂಬ ಛಲ ಕಂಡುಬಂದು ಈ ಕುಣಿತ, ಡೊಳ್ಳಿನ ಏಟು ಗಂಟೆಗಟ್ಟಲೇ ನಡೆದು ಕೊನೆಗೆ ಹಿರಿಯರು ಮಧ್ಯೆ ಪ್ರವೇಶಿಸುವ ಸನ್ನಿವೇಶಗಳು ಜರುಗುತ್ತವೆ. ಈರಗಾರರ ಈರಿಕೆಯ ಅಲಗನ್ನು ಒಬ್ಬ ಈರಗಾರನು ಸಾಂಕೇತಿಕವಾಗಿ ಹಿಡಿದುಕೊಂಡು ಅಲ್ಲಿ ನಿಂತಿರುವುದು ಕಂಡುಬರುತ್ತದೆ.

೩. ಮೂರನೆಯ ಘಟ್ಟದಲ್ಲಿ ಈ ಎರಡೂ ತಂಡಕ್ಕೆ ವಿಶ್ರಾಂತಿ ಎಂದೇ ಹೇಳಬೇಕು. ಈಗ ಹಿರಿಯ ಹಾಡುಗಾರರು ಬೀರಪ್ಪನ ಸ್ಥಾವರಮೂರ್ತಿಗೆ ಎದುರಾಗಿ ನಿಂತು ಡೊಳ್ಳಿನ ಹಾಡುಗಳನ್ನು ಮತ್ತು ಬೀರಪ್ಪನ ಪವಾಡದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಾರೆ. ಇವರ ಹಾಡುಗಳಲ್ಲಿ ಬೀರದೇವರ ಸ್ತುತಿಯು ಸ್ಥಾಯಿ ಭಾವದೊಂದಿಗೆ ಲೀನವಾಗಿರುವುದು ಕಂಡುಬರುತ್ತದೆ. "ಬಂಗಾರದ ಪದಕಾವು ಬೆಳ್ಳಿಯ ಪದಕಾವು ತಂದೆವೋ ಕರಿಯಣ್ಣಾಗ..." ಎನ್ನುವಂತಹ ಸ್ತುತಿಯೊಂದಿಗೆ "ಮಂದಮತಿ ಕುರುಬರು ನಾವು ನಂದೇಶ್ವರರು ನೀವು ನಮ್ಮ ಮೇಲೆ ಕೋಪ ಮಾಡುವ ಮನುಜಗೆ ಸದ್ಬುದ್ಧಿ ಕೊಡೋ ತಂದೆ" ಎಂಬ ಹಲವಾರು ಬೇಡಿಕೆ, ಹಾರೈಕೆಗಳು ಈ ಹಾಡುಗಳಲ್ಲಿ ಕಂಡುಬರುತ್ತವೆ.

ಈ ರೀತಿ ಬೀರಪ್ಪನ ಸನ್ನಿಧಿಯಲ್ಲಿ ಓಲಗಸೇವೆ ನಡೆಯುತ್ತಿದ್ದರೆ ಊರಿನ ಭಕ್ತಾದಿಗಳು ರಾತ್ರಿಯಿಡೀ ತಮ್ಮತಮ್ಮ ಮನೆಗಳಿಂದ ಹಬ್ಬದ ಅಡುಗೆ, ಹಣ್ಣುಕಾಯಿ ಕರ್ಪೂರಗಳನ್ನು ತಂದು ದೇವರಿಗೆ ನೈವೇದ್ಯ ಮಾಡಿಸಿಕೊಂಡು ಹೋಗುತ್ತಾರೆ. ಮದುವೆ ಮನೆಯವರು ಅತ್ತಿಮರದ ರೆಂಬೆ, ಆಲದ ಮರದ ಕೊಂಬೆ ದೇವರನ್ನು ಬೀರಪ್ಪನ ಸನ್ನಿಧಿಯಲ್ಲಿ ಪೂಜಿಸಿಕೊಂಡು ಆರತಿಯೊಂದಿಗೆ ತಮ್ಮ ಮನೆಗಳಿಗೆ ತೆಗೆದುಕೊಂಡು ಹೋಗುತ್ತಾರೆ. ಹೀಗೆ ಒಯ್ದರೆ ಅವರ ಮನೆಯಲ್ಲಿ ಶುಭಕಾರ್ಯ ಮತ್ತು ಶುಭಯೋಗಗಳು ಸಂಭವಿಸುವವೆಂಬ

ನಂಬಿಕೆ ಇಲ್ಲಿಯ ಭಕ್ತರಲ್ಲಿದೆ. ಬೀರಪ್ಪನಿಗೆ ಪೂಜೆ ಮಾಡಿಸಲು ಮತ್ತು ಪ್ರಸಾದ ತೆಗೆದುಕೊಳ್ಳಲು ಗ್ರಾಮದ ಎಲ್ಲ ಜನರು ಜಾತಿ ಮತ ಭೇದವಿಲ್ಲದೆ ಭಾಗವಹಿಸುವುದು ಕಂಡುಬರುತ್ತದೆ. ಭಕ್ತಾದಿಗಳು ವೀರಗಾರರಿಗೆ ಡೊಳ್ಳುವಾದ್ಯದವರಿಗೆ, ಹಾಡುಗಾರರಿಗೆ ತಮ್ಮ ಖುಷಿಯ ಸಂಕೇತವಾಗಿ ೫೦ ರೂ. ಅಥವಾ ೧೦೦ ರೂಪಾಯಿಗಳ ನೋಟಿನ ಹಾರವನ್ನು ಮಾಡಿ ಕೊರಳಿಗೆ ಹಾಕುವುದು ಈ ಸಂದರ್ಭದಲ್ಲಿ ಕಂಡುಬರುತ್ತದೆ.

ನಡುರಾತ್ರಿ ಮೂರು ಗಂಟೆಯ ಸಮಯಕ್ಕೆ ದೇವಾಲಯದ ಮುಖ್ಯ ಈರಗಾರರು ದೇವಾಲಯದಲ್ಲಿ ಕಾಸೆವೇಷ ಧರಿಸಿ, ದೇವರ ಸನ್ನಿಧಿಯಲ್ಲಿ ಪೂಜೆಗೊಂಡು ರಂಗಪ್ರವೇಶ ಮಾಡುತ್ತಾರೆ. ಒಟ್ಟು ಹನ್ನೆರಡು ಜನ ವೀರಗಾರರು ಈ ಸೇವೆಯಲ್ಲಿ ಭಾಗವಹಿಸುತ್ತಾರೆ. ಓಲಗಸೇವೆಗೆ ಪೂರ್ಣಾತಿ ರಂಗು ಬಂದು ಓಲಗಸೇವೆ ಕಳೆಕಟ್ಟುವುದು ವಿಶೇಷ. ಬೆಳಗಿನ ಎಂಟು ಅಥವಾ ಒಂಬತ್ತು ಗಂಟೆಗಳವರೆಗೆ ನಡೆಯುವ ಈ ಸೇವೆಯು ಅಂತಿಮ ಹಂತಕ್ಕೆ ಬಂದಾಗ ಬೀರಪ್ಪನ ಸತ್ತಿಗೆಯೊಂದಿಗೆ ಎಲ್ಲ ಈರಗಾರರು, ವಾದ್ಯದವರು ಮತ್ತು ಹಾಡುಗಾರರು ಮೆರವಣಿಗೆಯಲ್ಲಿ ಊರಿನ ಎಲ್ಲ ದೇವಾಲಯಗಳಿಗೆ ತೆರಳುತ್ತಾರೆ. ಪ್ರತಿ ದೇವಾಲಯದ ಮುಂದೆ ಹಾಕಿದ ಉತ್ಸವದ ಚಪ್ಪರದಲ್ಲಿ ದೇವರಿಗೆ ಎದುರಾಗಿ ನಿಂತು ಓಲಗಸೇವೆ ಸಲ್ಲಿಸುತ್ತಾರೆ. ನಂತರ ಮರಳಿ ಬೀರಪ್ಪನ ದೇವಸ್ಥಾನಕ್ಕೆ ಬಂದು ಓಲಗಸೇವೆಯು ಮುಖ್ಯ ಪೂಜಾರಿ ಹಿರಿಯರ ಒಪ್ಪಿಗೆಯೊಂದಿಗೆ ಈ ಆಚರಣೆಯು ಮುಕ್ತಾಯಗೊಳ್ಳುತ್ತದೆ.

೨೮. ಜಲಪವಾಡ ಆಚರಣೆ

ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲೂಕಿನಲ್ಲಿ ಮೆಡ್ಲೇರಿ ಗ್ರಾಮದಲ್ಲಿ ಈ ಆಚರಣೆ ಕಂಡುಬರುತ್ತದೆ. ಬೀರಪ್ಪನ ಮೂರ್ತಿಗೆ ಶೃಂಗಾರ ಮಾಡಿ ದೊಡ್ಡ ಪಲ್ಲಕ್ಕಿಯಲ್ಲಿ ಕೂಡಿಸುತ್ತಾರೆ. ಪಲ್ಲಕ್ಕಿಯನ್ನು ವಿವಿಧ ಹೂವು, ಬಣ್ಣದ ಗೊಂಡೆ ಮತ್ತು ಅಡಿಕೆಗಳಿಂದ ಶೃಂಗರಿಸಿರುತ್ತಾರೆ. ಬೀರದೇವರ ಉತ್ಸವಮೂರ್ತಿಯ ಪೀಠದಲ್ಲಿ ಒಟ್ಟು ಐದು ಬೀರದೇವರುಗಳು ಆಸೀನರಾಗಿರುವುದನ್ನು ನೋಡಬಹುದು. ದೇವರಿಗೆ ಹೂ ಮತ್ತು ರುದ್ರಾಕ್ಷಿ ಸರಗಳಿಂದ ಅಲಂಕರಿಸಿರುತ್ತಾರೆ. ನಂತರ ಪಲ್ಲಕ್ಕಿ ಏರಿದ ಬೀರದೇವರುಗಳಿಗೆ ದೀವಟಿಗೆ ಸೇವೆ, ಚಾಮರಸೇವೆ, ಡೊಳ್ಳುವಾದ್ಯದೊಂದಿಗೆ ಕೆರೆಯ ಹತ್ತಿರ ಕರೆದುಕೊಂಡು ಬರುತ್ತಾರೆ. ಬೀರದೇವರನ್ನು ಪೂಜೆ ಮಾಡಿ ಬೀರಪ್ಪನ ದೈವ ದಂಡವನ್ನು ಕೈಯಲ್ಲಿ ಧರಿಸಿದೊಡನೆ ಸ್ಥಾವರಮೂರ್ತಿಯ ಶಕ್ತಿ ಅವನ ದೇಹದಲ್ಲಿ ಬರುತ್ತದೆ. ಅವನನ್ನು ಕರೆದುಕೊಂಡು ಬೀರದೇವರ ಬಾವಿಯತ್ತ ಬರುತ್ತದೆ. ಈಜು ಗೊತ್ತಿರದ ದೈವೀಪುರುಷನು ದೇವರ ದಂಡದೊಂದಿಗೆ ಬಾವಿಗೆ ಜಿಗಿಯುತ್ತಾನೆ. ನೀರಿನಲ್ಲಿ ಬಿದ್ದೊಡನೆ ಎರಡೂ ಪಾದಗಳನ್ನು ಜೋಡಿಸಿ, ಎರಡೂ ಕೈಗಳಿಂದ ದೇವರ ದಂಡದ ಎರಡು ತುದಿಗಳನ್ನು ಹಿಡಿದು ನೀರಿನ ಪಾತಳಿಯ ಮೇಲೆ ಎದೆ ಮೇಲೆ ಮಾಡಿ ಮಲಗುತ್ತಾನೆ. ಬಾಳೆ ಎಲೆಯನ್ನು ನೀರಿನ ಪಾತಳಿಯ ಮೇಲೆ ಹಾಸಿದಂತೆ ಅವನ ದೇಹ ನೀರಿನ ಮೇಲೆ ತೇಲುವುದು ಕಂಡುಬರುತ್ತದೆ. ಸೇರಿದ ಎಲ್ಲಾ ಭಕ್ತರು ಬೀರಪ್ಪ ದೇವರಿಗೆ ಜೈಕಾರ ಹಾಕುತ್ತಾರೆ.

ಇದೇ ರೀತಿ ಹತ್ತು ನಿಮಿಷ, ಅರ್ಧಗಂಟೆ, ಒಂದು ತಾಸು ಮತ್ತು ಇಡೀ ದಿನ ನೀರಿನ ಮೇಲೆ ತೇಲಿದ ದಾಖಲೆಗಳನ್ನು ಸಮಾಜದ ಹಿರಿಯರು ಪವಾಡವೆಂದು ಹೇಳುತ್ತಾರೆ. ನಂತರ ಈಜು ಗೊತ್ತಿರುವ ಒಬ್ಬ

ಪೂಜಾರಿಯು ನೀರಿಗೆ ಜಾರಿ ದೈವೀಪುರುಷನ ಎರಡೂ ಪಾದಗಳನ್ನು ನೂಕುತ್ತ ಇಡೀ ದೇಹವನ್ನು ದಂಡೆಗೆ ನೂಕಿಕೊಂಡು ಬರುತ್ತಾನೆ. ಉಳಿದವರು ಸ್ವಾಮಿಯನ್ನು ಎತ್ತಿ ಸಮಾಧಿ ಸ್ಥಿತಿಯಲ್ಲಿ ಕೂಡಿಸುತ್ತಾರೆ.

೨೯. ಮುಳ್ಳುಗದ್ದುಗೆ ಆಚರಣೆ

ಬೀರದೇವರ ಜಲಪವಾಡ ಮುಗಿದ ನಂತರ ಮುಳ್ಳುಗದ್ದುಗೆ ಆಚರಣೆ ಆರಂಭವಾಗುತ್ತದೆ. ನಂತರ ಸಮಾಧಿ ಸ್ಥಿತಿಯಲ್ಲಿದ್ದ ದೈವೀಪುರುಷನು ಸಿದ್ಧಪಡಿಸಿದ ಮುಳ್ಳುಗದ್ದುಗೆಯ ಹತ್ತಿರ ಬರುತ್ತಾನೆ. ಇದೊಂದು ವಿಶಿಷ್ಟ ರಚನೆಯ ಪಲ್ಲಕ್ಕಿಯಾಗಿದೆ. ಇದು ಸಿಂಹಾಸನಾಕಾರದ ಪೀಠವಾಗಿದ್ದು ನಾಲ್ಕು ಜನರು ಹೊರಲು ಅನುಕೂಲವಾಗುವಂತೆ ವಿನ್ಯಾಸಗೊಳಿಸಲಾಗಿರುತ್ತದೆ. ಪೀಠಸ್ಥವಾಗುವ ಭಾಗವನ್ನು ವಿನ್ಯಾಸಗೊಳಿಸಲಾಗಿರುತ್ತದೆ. ಪೀಠಸ್ಥವಾಗುವ ಭಾಗದಲ್ಲಿ ಜಾಲಿ ಮುಳ್ಳುಗಳು ಇರುವ ಟೊಂಗೆಗಳನ್ನು ನೀಟಾಗಿ ಕತ್ತರಿಸಿ ಜೋಡಿಸಿ, ಮುಳ್ಳುಸಿಂಹಾಸನವನ್ನು ಮಾಡಿರುತ್ತಾರೆ. ಮುಳ್ಳಿನ ದಪ್ಪ ಎರಡು ಅಡಿಯಷ್ಟು ಎತ್ತರವಿರುತ್ತದೆ. ಚೂಪಾದ ಮುಳ್ಳುಗಳು ಮೇಲ್ಭಾಗದಲ್ಲಿ ಬಾಯ್ದೆರೆದು ನಿಂತಿರುವುದನ್ನು ಗಮನಿಸಬಹುದು. ಹಿಂದೆ ಒರಗಿಕೊಳ್ಳಲು ಮೆತ್ತನೆಯ ದಿಂಬುಗಳನ್ನು ಇಡಲಾಗುತ್ತದೆ. ಪೀಠವನ್ನು ಪೂಜಿಸಿದ ನಂತರ ಎರಡರಿಂದ ಮೂರು ಅಡಿ ಎತ್ತರವಿರುವ ಚೂಪಾದ ಮುಳ್ಳಿನ ಆಸನವನ್ನು ದೈವೀಪುರುಷನು ಲೀಲಾಜಾಲವಾಗಿ ಏರಿ ಕುಳಿತುಕೊಳ್ಳುತ್ತಾನೆ. ಜಯಕಾರದೊಂದಿಗೆ ಭಕ್ತರು ಹೂವಿನ ಮಳೆಗರೆಯುತ್ತಾರೆ. ವಾದ್ಯಗಳು ಮೊಳಗುತ್ತವೆ. ನಾಲ್ಕು ಜನರು ಹೊತ್ತಿರುವ ಮುಳ್ಳುಪಲ್ಲಕ್ಕಿಯು ಮೆರವಣಿಗೆಯಲ್ಲಿ ಹೊರಡುತ್ತದೆ. ನಂತರ ಮುಳ್ಳುಗದ್ದುಗೆ ಬೀರಪ್ಪನ ದೊಡ್ಡಪಲ್ಲಕ್ಕಿಯಲ್ಲಿ ಸ್ಥಾವರಮೂರ್ತಿ ಗ್ರಾಮದ ದೈವಗಳೊಂದಿಗೆ ಭಕ್ತರ ಮನೆಗೆ ತೆರಳಿ ಮರಳಿ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡುತ್ತಾರೆ.

೩೦. ಕಟ್ಲೆ ಹಿಡಿಯುವುದು

ಕಟ್ಟಳೆ ಎಂಬ ಶಬ್ದವು ಆಡುಮಾತಿನಲ್ಲಿ ಕಟ್ಲೆ ಎಂದಾಗಿದೆ. ಇದಕ್ಕೆ ಬೀರದೇವರ ವ್ರತ ಹಿಡಿಯುವುದು ಎಂದು ಕರೆಯುತ್ತಾರೆ. ವ್ರತಗಳಲ್ಲಿ ತಮ್ಮದೇ ಆದ ನೀತಿ ನಿಯಮಗಳು ಇರುತ್ತವೆ. ಇವುಗಳನ್ನು ತಮ್ಮ ರೋಗ, ಕಷ್ಟಗಳು ಪರಿಹಾರವಾಗುವವರೆಗೆ ಪಾಲಿಸಬೇಕಾಗುತ್ತದೆ. ಅವುಗಳೆಂದರೆ

- ವ್ರತ ಮಾಡುವವರು ಬೆಳಗಿನ ಜಾವ ನಾಲ್ಕು ಗಂಟೆಗೆ ಏಳಬೇಕು. ಇದರಿಂದ ಶುದ್ಧವಾದ ಆಮ್ಲಜನಕ ದೊರೆಯುತ್ತದೆ.
- ಬ್ರಹ್ಮಚರ್ಯ ವ್ರತವನ್ನು ಪಾಲಿಸಬೇಕು. ಇದರಿಂದ ವೀರ್ಯವೃದ್ಧಿಯಾಗಿ ಆರೋಗ್ಯ ವೃದ್ಧಿಯಾಗುತ್ತದೆ.
- ತಣ್ಣೀರಿನಿಂದ ಸ್ನಾನ ಮಾಡಬೇಕು. ಇದರಿಂದ ದೇಹಾರೋಗ್ಯ, ಮಾನಸಿಕ ನೆಮದಿ ಸಿಗುತ್ತದೆ.
- ದೇವರ ಪೂಜೆಯಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು. ಇದರಿಂದ ಆತ್ಮವಿಶ್ವಾಸ ಏಕಾಗ್ರತೆ ಹೆಚ್ಚುವುದು.

- ಹೊತ್ತು ಹೊತ್ತಿಗೆ ಕಂತೆಭಿಕ್ಷೆಯ ಅಡುಗೆಯನ್ನು ಪ್ರಸಾದವೆಂದು ಸ್ವೀಕರಿಸಬೇಕು. ಇದರಿಂದ ಸಮತೋಲನ ಆಹಾರ ದೊರೆತು ಆರೋಗ್ಯ ಹೆಚ್ಚುವುದು.
- ಮೌನವ್ರತ ಆಚರಿಸಬೇಕು. ಮನಸ್ಸು ಪರಿಶುದ್ಧವಾಗಿ ಏಕಾಗ್ರತೆ ಮತ್ತು ನೆನಪಿನ ಶಕ್ತಿಯು ಹೆಚ್ಚುವುದು.

ಹೀಗೆ ಕಟ್ಟಳೆಯನ್ನು ಅನುಸರಿಸುವುದರಿಂದ ಮಾನಸಿಕ ದೈಹಿಕ ಆರೋಗ್ಯ ವೃದ್ಧಿಯಾಗುತ್ತದೆ. ಈ ಆಚರಣೆಯಿಂದ ದಳವಾಯಿ ಪೂಜಾರಿಗೆ ಒಳ್ಳೆಯದು.

೩.೧. ಬಿಲ್ಲಾಸುರನ ತಲೆ ಆಚರಣೆ

ಈ ಆಚರಣೆ ದಾವಣಗೆರೆ ಜಿಲ್ಲೆ ಹರಿಹರ ತಾಲೂಕಿನ ಜಿಗಳಿ ಗುಡಿಕಟ್ಟಿನ ಬೀರದೇವರುಗಳ ಆಚರಣೆಗಳಲ್ಲಿ ಕಂಡುಬರುತ್ತದೆ. ಜಿಗಳಿ ಬೀರದೇವರು, ಬಾನುವಳ್ಳಿ ಬೀರಪ್ಪ, ಮುಗುಳಗೆರಿ ಬೀರಪ್ಪ, ಬನ್ನಿಕೋಡು ಬೀರಪ್ಪ, ಕುಂಬಳೂರು ಬೀರಪ್ಪ, ಕುಣಿಬೆಳೆಕೆರೆ ಬೀರಪ್ಪ, ಬೆಳ್ಳೂಡಿ ಬೀರಪ್ಪ, ಮಲೆಬೆನ್ನೂರು ಬೀರಪ್ಪ, ಸಲಿಗನಹಳ್ಳಿ ಬೀರಪ್ಪ, ಈ ಎಲ್ಲಾ ಬೀರದೇವರುಗಳು ಊರೊಳಗಿನ ಬೀರದೇವರ ಗುಡಿಗಳಲ್ಲಿ ತೂಗುಮಂಚದ ಮೇಲೆ ಇರುವ ಕುದುರೆ, ಆನೆ, ಒಂಟೆಗಳ ಮೇಲೆ ಸವಾರಿ ಮಾಡುತ್ತಿರುವ ಭಂಗಿಯಲ್ಲಿರುವುದು ಕಂಡುಬರುತ್ತದೆ. ಕೆಲವು ಸದರಿನಲ್ಲಿ ಐದು ಬೀರದೇವರು, ಇನ್ನೂ ಕೆಲವು ಸದರುಗಳಲ್ಲಿ ಏಳು, ಒಂಬತ್ತು ಮತ್ತು ಹತ್ತು ಬೀರದೇವರುಗಳು ಇರುವುದು ಕಂಡುಬರುತ್ತದೆ. ಮಲೆಬೆನ್ನೂರು ಮತ್ತು ಕುಣಿಬೆಳೆಕೆರೆ ಬೀರದೇವರ ಸದರಿನಲ್ಲಿ ಒಬ್ಬ ರಾಕ್ಷಸನ ರುಂಡವಿರುವುದು ಕಂಡುಬರುತ್ತದೆ. ಇದನ್ನು ಬಿಲ್ಲಾಸುರನೆಂಬ ರಾಕ್ಷಸನ ರುಂಡವೆಂದು ಕರೆಯುತ್ತಾರೆ. ಬೀರಪ್ಪನು ಲೋಕಕಂಟಕನಾಗಿದ್ದ ಬಿಲ್ಲಾಸುರನೆಂಬ ರಾಕ್ಷಸನನ್ನು ಕೊಂದು ಜನರ ಉದ್ಧಾರ ಮಾಡಿದ್ದರ ನೆನಪಿಗಾಗಿ ಈ ರುಂಡವನ್ನು ಬಿಲ್ಲಾಸುರನ ಅಪೇಕ್ಷೆಯಂತೆ ಬೀರಪ್ಪನ ಸದರಿನ ಮೇಲೆ ಕೆಳಭಾಗ ದಲ್ಲಿಟ್ಟು ಪೂಜಿಸಲಾಗುತ್ತದೆ.

ಬಿಲ್ಲಾಸುರನನ್ನು ಕೊಲ್ಲಲು ಬೀರಪ್ಪನು ಸೊಂಟಕ್ಕೆ ಕಾಶಿ, ತಲೆಗೆ ಪೇಟ, ನಡುವಿಗೆ ನಡುಕಟ್ಟು, ಹಣೆಗೆ ಭಂಡಾರ ಧರಿಸಿ, ಪೇಟದಲ್ಲಿ ಬಿಳಿ ಹದ್ದಿನ ಗರಿ ಸಿಕ್ಕಿಸಿಕೊಂಡು ಹೋರಾಟ ಮಾಡಿದ್ದನಂತೆ. ಇದೇ ವೇಷವನ್ನು ಇಂದು ಧರಿಸುವುದನ್ನು ಕಾಣಬಹುದು.

೩.೨. ಕಾಳುಪೂಜೆ

ಬೀರಪ್ಪನ ತೋಪಿನ ಜಾತ್ರೆಯಲ್ಲಿ ಈ ಆಚರಣೆ ನಡೆಯುತ್ತದೆ. ಬೀರದೇವರ ಎಲ್ಲ ಪಲ್ಲಕ್ಕಿಗಳು ಊರ ಹೊರಗಿನ ಬೀರದೇವರ ಗುಡಿಗೆ ಹೋಗುವ ಮುನ್ನ ಕಾಳುಪೂಜೆಯನ್ನು ಮಾಡಲಾಗುತ್ತದೆ. ಎಲ್ಲ ದೇವರ ಪಲ್ಲಕ್ಕಿಗಳು ಊರೊಳಗಿನ ಒಂದು ದೇವಸ್ಥಾನದಲ್ಲಿ ಸೇರುತ್ತವೆ. ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಗುಡಿ ಗೌಡರು ಆಂಜನೇಯನನ್ನು ಪೂಜಿಸಿ ಪ್ರಸಾದ ಸ್ವೀಕರಿಸುತ್ತಾರೆ. ಹೊರಗಡೆ ತಂಗಿದ್ದ ಪಲ್ಲಕ್ಕಿಗಳನ್ನು ಅವರವರ ಪೂಜಾರಿಗಳು ಪೂಜಿಸುತ್ತಾರೆ. ದಳವಾಯಿ, ಈರಗಾರರು ಸನ್ನಿಧಿಯಲ್ಲಿರುತ್ತಾರೆ. ದೇವಾಲಯದ ಒಳಗೆ

ಪ್ರವೇಶಿಸಿದ ಯಜಮಾನ ಗುಡಿಗೌಡರು ಅಲ್ಲಿರುವ ಸುಮಾರು ಎರಡು ಕ್ವಿಂಟಲ್ ಉಪ್ಪುಗಡಲೆ ಮತ್ತು ಕೊಬ್ಬರಿಯನ್ನು ಸೇರಿಸಿ ಮಿಶ್ರ ಮಾಡಿದ ಕಾಳಿನ ರಾಶಿಯನ್ನು ಪೂಜಾರಿಯಿಂದ ಪೂಜೆ ಮಾಡಿಸುತ್ತಾರೆ. ಈ ಕಾಳನ್ನು ಎಲ್ಲ ಗುಡಿಗೌಡರುಗಳಿಗೆ ಪ್ರಸಾದವಾಗಿ ವಿತರಿಸಲಾಗುತ್ತದೆ. ನಂತರ ಭಕ್ತರಿಗೆ ಹಂಚಲಾಗುತ್ತದೆ. ಈ ಕಾಳಿನ ಪ್ರಸಾದವು ಅತ್ಯಂತ ಪವಿತ್ರವೆಂದೂ ಅದು ಸಿಕ್ಕುವುದು ಪುಣ್ಯವೆಂದು ಭಕ್ತರು ಹೇಳುತ್ತಾರೆ.

೩೩. ಕಟ್ಟುದೋಣಿ ಸೇವೆ

ಹನ್ನೆರಡು ವರ್ಷಕ್ಕೊಮ್ಮೆ ಬೀರಪ್ಪನ ತೋಪುಜಾತ್ರೆಗಳು ಜರಗುತ್ತವೆ. ಜಾತ್ರೆ ನಡೆಯುವುದು ಮುಖ್ಯ ಬೀರದೇವರ ದೇವಸ್ಥಾನದಲ್ಲಿ ಬೀರದೇವರ ಜೊತೆಗೆ ಮೈಲಾರಲಿಂಗ ದೈವ ಇದ್ದರೆ ಜಾತ್ರೆಯಲ್ಲಿ ವಗ್ಗಯ್ಯಗಳ ಕಟ್ಟುದೋಣಿ ಸೇವೆಯನ್ನು ನಡೆಸಲಾಗುತ್ತದೆ. ವಗ್ಗಯ್ಯರನ್ನು ಕರೆಯಿಸಿ ಬಾಳೆಹಣ್ಣು, ಹಾಲು, ತುಪ್ಪ, ಮೊದಲಾದವುಗಳಿಂದ ಹಣ್ಣುತುಪ್ಪವೆಂಬ ಪ್ರಸಾದವನ್ನು ತಯಾರಿಸುತ್ತಾರೆ. ದೊಡ್ಡ ಕಂಬಳಿ ಗದ್ದುಗೆಯನ್ನು ಹಾಸಿ ಅದರ ಮೇಲೆ ಎಲ್ಲ ದೋಣಿಗಳನ್ನು ಸಾಲಾಗಿ ಇಡುತ್ತಾರೆ. ಅವುಗಳಿಗೆ ಹಾಲು ತುಪ್ಪವನ್ನು ಹಾಕಲಾಗುತ್ತದೆ. ಗೊರವರ ವೇಷಧಾರಣೆ ಮಾಡಿದ ವಗ್ಗಯ್ಯನವರು ವಿಧಿವಿಧಾನದಂತೆ ಪೂಜೆ ಮಾಡಿ ದೋಣಿಗಳ ಸುತ್ತಲೂ ನರ್ತಿಸುತ್ತಾರೆ. ನರ್ತಿಸುತ್ತ ಹಾಗೆ ಮಂಡಿಯೂರಿ ಬಾಗಿ ಗದ್ದುಗೆಯ ಮೇಲೆ ಹಾಕಿದ ನೈವೇದ್ಯದ ರಸಾಯನವನ್ನು ಸೇವಿಸುತ್ತಾರೆ. ಇದನ್ನು ಕಟ್ಟುದೋಣಿ ಸೇವೆ ಎಂದು ಕರೆಯಲಾಗುತ್ತದೆ.

೩೪. ಕತ್ತಿ ಪವಾಡ

ಇದು ಬೀರಪ್ಪನ ಆಚರಣೆಯಾಗಿದೆ. ಬೀರದೇವರ ಪೂಜಾರಿಯು ಜೋಡಿ ಕತ್ತಿಯನ್ನು ಹಿಡಿದು, ತಮಟೆ ವಾದ್ಯದ ನಾದಕ್ಕೆ ಕುಣಿಯುತ್ತಾನೆ. ಕುಣಿದು ಶಿವಶಿವನೆಂದು ಹೇಳುತ್ತಾ ನಾಲ್ಕು ದಿಕ್ಕಿಗೆ ಖಡ್ಗ ತೋರಿ ಶಾಂತಿ ಮಾಡುವನು. ಇದಾದ ಮೇಲೆ ಭಕ್ತಾದಿಗಳಿಗೆ ತೀರ್ಥ, ಗಂಧ, ಹೂವು, ಪ್ರಸಾದ ಕೊಡುವನು. ಎಲ್ಲಾ ಬೀರದೇವರ ಹೆಸರು ಹೇಳುತ್ತಾ ಉಘೆ.. ಉಘೆ... ಎಂದು ಘೋಷಿಸುವರು.

೩೫. ಟಗರುಗಲ್ಲು ಪವಾಡ

ಪ್ರಾಚೀನ ಬೀರದೇವರ ದೇವಸ್ಥಾನದ ಮುಂಬಾಗಿಲಿನ ಪ್ರವೇಶದ್ವಾರದ ಆಚೀಚೆ ಎರಡು ಕಲ್ಲುಗಳನ್ನು ನಿಲ್ಲಿಸಿರುತ್ತಾರೆ. ಇವುಗಳಿಗೆ ದೇವರ ಕಲ್ಲುಗಳು ಇಲ್ಲವೆ ಟಗರುಗಲ್ಲುಗಳು ಎಂದು ಕರೆಯುತ್ತಾರೆ. ನೆಲಮಟ್ಟದಿಂದ ಸುಮಾರು ನಾಲ್ಕು ಅಡಿ ಎತ್ತರವಿರುವ ಈ ಕರಿಕಲ್ಲುಗಳು ಬೀರಪ್ಪನ ಜಾತ್ರೆಯಲ್ಲಿ ನಡೆಯುವ ಗಾವು ಸಿಗಿಯುವ ಆಚರಣೆ ಮಾಡಲು ವೀರಗಾರರ ಪವಾಡಕ್ಕೆ ಸಾಕ್ಷಿಯಾಗುತ್ತದೆ.

ಗಾವು ಸಿಗಿಯುವ ಆಚರಣೆಗೆ ಮೊದಲು ಭಂಡಾರವನ್ನು ಕಲ್ಲುಗಳಿಗೆ ಹಚ್ಚಿ, ಅಡಿಕೆ ಹೊಂಬಾಳೆ, ಹೂವು ಮುಡಿಸಿ ಸಿಂಗರಿಸುತ್ತಾರೆ. ಪೂಜಾರಿಗಳು ಈ ಕಲ್ಲುಗಳಿಗೆ ಅರಿಸಿನ, ಕುಂಕುಮ ಹೂವುಗಳನ್ನು ಇಟ್ಟು ನಂದಾದೀಪಗಳನ್ನು ಹಚ್ಚುತ್ತಾರೆ. ಟಗರುಗಲ್ಲುಗಳ ಮುಂದೆ ಬಾಳೆ ಎಲೆಯಲ್ಲಿ ಅಕ್ಕಿ ನಿಧಿಯನ್ನು ಹಾಕಿ ಕಳಸ ಹೂಡಿ ಶಾಸ್ತ್ರೋಕ್ತ ಪೂಜೆ ನಡೆಯುತ್ತದೆ. ಈ ಸಂದರ್ಭದಲ್ಲಿ ಜಾತ್ರೆಗೆ ಬಂದ ಎಲ್ಲ ಬೀರದೇವರುಗಳು

ಪಲ್ಲಕ್ಕಿಯಲ್ಲಿ ಕುಳಿತು ಉಪಸ್ಥಿತವಿರುತ್ತವೆ. ದಳವಾಯಿಗಳು ಮುಳ್ಳು ಪಲ್ಲಕ್ಕಿಯನ್ನು ಏರಿ ದಳವಾಯಿ ದಂಡವನ್ನು ಹಿಡಿದು ನಿಂತಿರುತ್ತಾರೆ. ಕೋಲ್ಕಾರರು ದೀವಟಿಗೆ ಹಿಡಿದು, ದೇವರಿಗೆ ಹಸಿರು ಛತ್ರಿ ಹಿಡಿದು ಸೇವಾ ಸನ್ನದ್ಧರಾಗಿರುತ್ತಾರೆ. ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಬೀರದೇವರ ವೀರಗದ್ದುಗೆನಿಸಿದ ಮುಳ್ಳು ಪಲ್ಲಕ್ಕಿಯು ಇಲ್ಲಿ ಉಪಸ್ಥಿತವಿರುತ್ತದೆ. ಕುರೆಗೌಡರು ಕುರಿ ಹಿಂಡಿನಿಂದ ಎರಡು ಹಿಂಡುವ ಕುರಿಗಳನ್ನು ತಂದು ಟಗರುಗಲ್ಲಗಳ ಮುಂದೆ ನಿಲ್ಲಿಸಿ ಅವುಗಳಿಗೆ ಭಂಡಾರ ಹಚ್ಚಿ, ಹೂವಿನ ಹಾರ ಹಾಕಿ ಪೂಜೆ ಮಾಡುತ್ತಾರೆ. ಅವುಗಳ ಕೆಚ್ಚಲಿಗೆ ಕೈಹಾಕಿ ಅನತಿ ದೂರದಿಂದಲೇ ಟಗರುಗಲ್ಲುಗಳ ಮೇಲೆ ಮತ್ತು ಕಳಸಗಳ ಹತ್ತಿರ ಹಾಲನ್ನು ಕರೆದು ಅಭಿಷೇಕ ಮಾಡುವುದು ಹಾಲುಮತ ಜನಾಂಗದ ಸಮೃದ್ಧಿಯ ಸಂಕೇತವಾಗಿದೆ.

ಎಲ್ಲ ಗುಡಿಕಟ್ಟೆಗಳ ಈರಗಾರರು ಸ್ನಾನ ಮಾಡಿ ಬರಿಮೈಯಲ್ಲಿ ಬಿಗಿಯಾದ ಪಂಚೆಯನ್ನು ಮಾತ್ರ ಬಿಟ್ಟು ಸಾಲಾಗಿ ನಿಂತು ಆರತಿಯಾದ ನಂತರ ಭಂಡಾರವನ್ನು ಧರಿಸಿ, ದಳವಾಯಿ ಮತ್ತು ಬೀರಪ್ಪನ ಸ್ಥಾವರ ಮೂರ್ತಿ, ಮುಳ್ಳುಪಲ್ಲಕ್ಕಿಗಳ ಮುಂದೆ ಸುತ್ತೇಳು ದೇವರ ನೆನೆದು ಈರಗಾರಿಕೆ ಮಾಡುತ್ತಾರೆ. ದೇವರು ಮೈದುಂಬಿದ ದಳವಾಯಿಗಳು ಸಾವಿರದವರ ಭುಜಗಳ ಮೇಲೆ ಪಟ್ಟವೇರಿ ಕುಣಿಯಲು ಆರಂಭಿಸುತ್ತಾರೆ. ಇತ್ತ ಈರಗಾರರು ಮೈತುಂಬ ಭಂಡಾರ ಹಚ್ಚಿಕೊಂಡು ಬೀರದೇವರ ಪವಾಡಗಳನ್ನು ಹೊಗಳುತ್ತ ಆವೇಶ ಹೊಂದಿ ದೇವರನ್ನು ಮೈದುಂಬಿಕೊಂಡು ಜೋರಾಗಿ ಓಡುತ್ತ ಬಂದು ಟಗರುಗಲ್ಲುಗಳಿಗೆ ತಮ್ಮ ತಲೆಯನ್ನು ಗುದ್ದುತ್ತಾರೆ. ದೇವರು ಮೈದುಂಬಿದಾಗ ಮಾತ್ರ ಈ ಪವಾಡ ನಡೆಯುತ್ತದೆ ಎಂಬ ನಂಬಿಕೆ ಭಕ್ತರಲ್ಲಿದೆ. ಹೀಗೆ ಟಗರುಗಲ್ಲಿಗೆ ತಲೆಯನ್ನು ಗಟ್ಟಿಸಿದ ಈರಗಾರನು ಗಾವು ಸಿಗಿಯಲು ಸಿದ್ಧನಾದಂತೆ ಎಂಬುದು ಆಚರಣೆಯ ನಂಬಿಕೆಯಾಗಿದೆ. ಇದಕ್ಕೆ ಟಗರುಗಲ್ಲು ಪವಾಡ ಎಂಬ ಹೆಸರು ಬಂದಿದೆ. ಇತ್ತೀಚೆಗೆ ನಿರ್ಮಿಸಿದ ದೇವಸ್ಥಾನಗಳ ದ್ವಾರಗಳಲ್ಲಿ ಈ ಕಲ್ಲುಗಳನ್ನು ನೆಟ್ಟಿರುವುದಿಲ್ಲ. ಗಾವು ಸಿಗಿಯುವುದು ಆಧುನಿಕ ಕಾಲದ ಹಾಲುಮತಸ್ಥರ ದೃಷ್ಟಿಯಿಂದ ಪ್ರಾಣಿಹಿಂಸೆ ಎನ್ನಿಸಿ ಕ್ರಮೇಣ ಕಡಿಮೆಯಾಗುತ್ತ ಮರೆಯಾಗುತ್ತಿರುವುದು ಇದಕ್ಕೆ ಕಾರಣ ಎನ್ನಬಹುದು. ಈ ಕಲ್ಲುಗಳನ್ನು ಚಿಕ್ಕಮಗಳೂರು ಜಿಲ್ಲೆಯ ಮುಗುಳಿಯ ಮೂಲ ಬೀರದೇವರ ದೇವಸ್ಥಾನದಲ್ಲಿ ಕಾಣುತ್ತೇವೆ.

೩.೬. ಕರಿಕಟ್ಟುವುದು

ಬೀರಪ್ಪನಿಗೆ ಕರಿಕಟ್ಟುವ ಆಚರಣೆ ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತದೆ. ಹಾಲುಮತ ಧರ್ಮದಲ್ಲಿ ಈ ಆಚರಣೆ ಪ್ರಾಚೀನ ಕಾಲದಿಂದಲೂ ಕಂಡುಬಂದಿದೆ. ಬೀರಪ್ಪನ ಜಾತ್ರೆಗಳಲ್ಲಿ ಕರಿಕಟ್ಟುವ ಆಚರಣೆಯೂ ಕೂಡ ಒಂದು ವಿಶಿಷ್ಟವಾದ ಆಚರಣೆಯಾಗಿದೆ.

ಹೀಗೆ ಜಾತ್ರೆಯು ಪ್ರಾರಂಭವಾಗುತ್ತಿದ್ದಂತೆಯೇ ದೇವರ ಜಗುಲಿಯ ಮೇಲೆ ಕರಿದ ಪದಾರ್ಥಗಳಾದ ಕರಚಿಕಾಯಿ, ತೊರಗ, ಹಪ್ಪಳ ಇನ್ನೂ ಬಗೆಬಗೆಯ ಭೋಜನದ ಪದಾರ್ಥಗಳನ್ನು ಕಟ್ಟುವುದಾಗಿದೆ. ನಂತರ ಕರಿ ಹರಿಯುವುದು. ಜಾತ್ರೆಯ ಕೊನೆಯ ದಿನದಂದು ಕಟ್ಟಿದಂತಹ ಕರಿಯನ್ನು ಹರಿಯುವುದು ಒಂದು ವಿಶಿಷ್ಟ ಸಂಪ್ರದಾಯವಾಗಿದೆ. ನಂತರ ಈ ಆಹಾರ ಪದಾರ್ಥಗಳನ್ನೆಲ್ಲಾ ಜಾತ್ರೆಗೆ ಬಂದಂತಹ ಡೊಳ್ಳಿನ ಮೇಳದವರಿಗೆ ಮತ್ತು ಭಕ್ತರಿಗೆ ಪ್ರಸಾದರೂಪವಾಗಿ ಕೊಡುತ್ತಾರೆ. ಇದು ಹೆಚ್ಚಾಗಿ ಬೀರಪ್ಪನ ದೇವಸ್ಥಾನದಲ್ಲಿ ಕಂಡುಬರುತ್ತದೆ.

೩.೭. ಭಂಡಾರದ ಮಹಿಮೆ ಆಚರಣೆ

ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಭಂಡಾರದ ಆಚರಣೆ ಮುಖ್ಯವಾಗಿದೆ. ಜಾತ್ರೆ, ಹಬ್ಬ, ಉತ್ಸವಗಳಲ್ಲಿ ಭಂಡಾರವು ಬೀರಪ್ಪನಿಗೆ ಅರ್ಪಿಸುತ್ತಾರೆ. ಭಂಡಾರಗಳಲ್ಲಿ ಔಷಧೀಯ ಗುಣವಿರುವುದನ್ನು ನಮ್ಮ ಪೂರ್ವಜರು ಬಹಳ ಹಿಂದೆಯೇ ಪತ್ತೆ ಹಚ್ಚಿ ಇವುಗಳಿಗೆ ದೈವದ ಸ್ವರೂಪ ನೀಡಿ ಪೂಜಿಸುತ್ತಾ ಬಂದಿದ್ದಾರೆ. ಭಂಡಾರಗಳ ಪ್ರತೀಕವೇ ಬೀರಪ್ಪ, ಮೈಲಾರ, ಖಂಡೋಬಾ, ಅಮೋಘಸಿದ್ಧ, ಮಾಳಿಂಗರಾಯ ಹೀಗೆ ಅನೇಕ ಪುರುಷ ದೈವಗಳನ್ನು ಹುಟ್ಟು ಹಾಕಿದರು. ಇವು ಹಾಲುಮತದವರಿಗೆ ಪವಿತ್ರವಾದ ರಕ್ಷಣೆಯ ಕವಚಗಳಾಗಿವೆ.

ಇಂತಹ ಜ್ಞಾನವನ್ನು ಉಳಿಸಿ ಬೆಳೆಸಲೆಂದೇ ಭಂಡಾರಕ್ಕೆ ಸಂಬಂಧಿಸಿದಂತ ಆಚರಣೆಗಳನ್ನು ಸೃಷ್ಟಿಸಿದರು. ಭಂಡಾರ ದೈವಾರಾಧಾನೆಗಳಿಗೆ ಬಳಕೆಯಾಗುತ್ತದೆ. ಜಾತ್ರೆಗೆ ಬಂದ ಜನರಿಗೆ ಭಂಡಾರವನ್ನು ಉಗ್ಗುತ್ತಾರೆ. ಈ ಭಂಡಾರದಲ್ಲಿ ರೋಗನಿರೋಧಕ ಶಕ್ತಿಯಿದೆ. ಜನರಿಗೆ ಯಾವುದೇ ರೀತಿ ರೋಗಗಳು ಬರಬಾರದು ಇದು ಕ್ರೀಮಿ ಕೀಟಾಣುಗಳಿಂದ ರಕ್ಷಿಸುತ್ತದೆ. ಬೀರಪ್ಪನ ಜಾತ್ರೆಯಲ್ಲಿ ಭಂಡಾರದ ಪಾತ್ರ ಬಹಳ ಮಹತ್ವವಾಗಿದೆ.

೩.೮. ಈರೂಟ

ಈರೂಟವನ್ನು 'ಹರಕೆಯ ಊಟ' ಎಂದು ಕರೆಯಬಹುದು. ಬೀರನ ಸೈನಿಕರಿಗಾಗಿ ಈ ಊಟವನ್ನು ಬಡಿಸುತ್ತಾರೆ. ಹರಕೆಯಂತೆ ಕೆಲವು ಗೌಡರು ಹಿರಿಯರು ದೇವರಿಗೆ ಕುರಿಗಳನ್ನು ಹರಕೆಯ ರೂಪದಲ್ಲಿ ನೀಡುತ್ತಾರೆ. ಅಥವಾ ಕುರಿಮಂದೆಗಳು ಇರುವ ಕುರಿಗೌಡರು ತಾವು ಯಾವುದೋ ಕಾರಣಕ್ಕಾಗಿ ಹರಕೆ ಮಾಡಿ ಕೊಂಡಿದ್ದು ತಮ್ಮ ಹರಕ್ಕೆ ಫಲಿಸಿದ್ದರಿಂದ ಜಾತ್ರೆಯಲ್ಲಿ ಮಂದೆಗಿಷ್ಟು ಕುರಿಗಳೆಂದು ಈರೂಟಕ್ಕೆ ನೀಡುತ್ತಾರೆ. ಗುಡಿಯವರು ಅಂದು ಮಾಂಸದ ಅಡಿಗೆ ಮಾಡಿ ಊರಿಗೆ ಊಟ ಹಾಕುತ್ತಾರೆ. ಅನೇಕ ಕಡೆಗೆ ಲಿಂಗಾಯತ ಗೌಡರು ಅದರಲ್ಲಿಯೂ ಆದಿಬಣಜಿಗ ಗೌಡರು ದೇವರಿಗೆ ತಪ್ಪದೆ ಕುರಿಬಲಿ ಮತ್ತು ಅದಕ್ಕೆ ಬೇಕಾಗುವ ಮಸಾಲೆ ಇನ್ನಿತರ ಧಾನ್ಯಗಳನ್ನು ಕೊಟ್ಟು ಅಡುಗೆಯಾದ ನಂತರ ದೇವರಿಗೆ ನೈವೇದ್ಯ ನೀಡುತ್ತಾರೆ. ಆ ನಂತರ ಗೌಡರು, ಬುದ್ಧಿವಂತ ಬಳಗಸ್ಥರು ಮುಂದೆ ನಿಂತು ಪಂಕ್ತಿಗೆ ಊಟ ಬಡಿಸುತ್ತಾರೆ. ಭೀಮಾನದಿ ತೀರದ ಬಹುತೇಕ ಗ್ರಾಮಗಳಲ್ಲಿ ಬಣಜಿಗ ಗೌಡರು ದೇವರಿಗೆ ಕುರಿಬಲಿಯ ಎಲ್ಲ ವೆಚ್ಚವನ್ನು ಭರಿಸುತ್ತಾರೆ. ಕೆಲವು ಬಣಜಿಗ ಗೌಡರು ಮಾಂಸದೂಟ ಮಾಡುವುದಿಲ್ಲ. ಇದು ಆ ಭಾಗದಲ್ಲಿರುವ ವೀರಶೈವ ಪಂಥದ ಪ್ರಭಾವ. ಇದರಿಂದ ಉತ್ತರ ಕರ್ನಾಟಕದ ಬಹುತೇಕ ಗ್ರಾಮಗಳಲ್ಲಿ ಬೀರದೇವರ ಮಂದಿಗಳಲ್ಲಿ ಕುರಿಬಲಿಗಳು ನಿಂತಿವೆ.

ಭಕ್ತರು ತಂತಮ್ಮ ಮನೆ, ಹೊಲ, ತೋಟ, ಗುಡಿಸಲು, ದಡ್ಡಿಗಳಲ್ಲಿ ಕುರಿ ಮಾಂಸದ ಅಡುಗೆ ಮಾಡಿ ಪ್ರಸಾದದ ರೂಪದಲ್ಲಿ ಸ್ವೀಕರಿಸುತ್ತಾರೆ. ಆದರೆ ದಕ್ಷಿಣದ ಎಲ್ಲ ಸ್ಥಳಗಳಲ್ಲಿ ಮಹಾರಾಷ್ಟ್ರ ಮತ್ತು ಆಂಧ್ರಗಳಲ್ಲಿ ಬೀರಪ್ಪನಿಗೆ ಕುರಿ ಬಲಿ ಇದೆ. ಮಧ್ಯಾಹ್ನದ ವೇಳೆಗೆ ಈರೂಟ ಮುಗಿಯುತ್ತದೆ. ನಂತರ ಮಹಾಮಂಗಳಾರತಿ ಮಾಡುತ್ತಾರೆ. ಬೀಳ್ಕೊಡುಗೆಯ ಕಾರ್ಯಕ್ರಮ ಮಹಾಮಂಗಳಾರತಿಯಾದ ನಂತರ ಜಾತ್ರೆಗೆ ಬಂದಂಥ ಎಲ್ಲ ದೇವರುಗಳಿಗೆ ಕ್ರಮವಾಗಿ ನಜರು ಒಪ್ಪಿಸಿ (ನಜರು-ಕಾಣಿಕೆ) ಒಂದೊಂದೇ ದೇವರನ್ನು ಹೊರಡಿಸಿಕೊಂಡು ಬಂದು ಅದರ ಸುತ್ತು ಪ್ರದಕ್ಷಿಣೆ ಹಾಕಿ ಬಹು ಆತ್ಮೀಯವಾಗಿ ಬೀಳ್ಕೊಡುತ್ತದೆ. ಹೀಗೆ ವಿಶೇಷವಾಗಿ

ದೇವರುಗಳನ್ನು ಬೀಳ್ಕೊಟ್ಟಂತಹ ಜಾತ್ರೆಗೆ ಬಂದ ಒಕ್ಕಲುಗಳೂ ಒಬ್ಬೊಬ್ಬರಾಗಿ ತಮ್ಮತಮ್ಮ ಊರಿಗೆ ಹಿಂದಿರುಗುತ್ತಾರೆ. ಇದು ಜಾತ್ರೆಯ ಕೊನೆಯ ದಿನದ ಕಾರ್ಯಕ್ರಮ ಎಂದು ಕೆಲವು ಜನರು ಹೇಳುತ್ತಾರೆ.

೩೯. ಉಯ್ಯಾಲೆ

ಬೀರಪ್ಪ ದೇವರ ಉತ್ಸವ ಉಯ್ಯಾಲೆ ಕಾರ್ಯಕ್ರಮ. ಬೆಳಗ್ಗೆ ಪೂಜೆಯ ನಂತರ ದೇವರನ್ನು ಹೂವು ಆಭರಣಗಳಿಂದ ಅಲಂಕರಿಸುತ್ತಾರೆ. ಅಲಂಕಾರಗೊಂಡ ದೇವರು ಜಾತ್ರೆಯ ಇತರ ದೇವರುಗಳೊಡನೆ ದಳವಾಯಿ, ಈರಗಾರ, ಪೂಜಾರರು, ಎಲ್ಲರೂ ಮಂಗಳವಾದ್ಯಗಳದೊಂದಿಗೆ ಉತ್ಸವ ಮುನ್ನಡೆಯುತ್ತದೆ. ಹೀಗೆ ಉತ್ಸವ ಹೊರಟಾಗ ಡೊಳ್ಳು, ವೀರಗಾಸೆ ಇತ್ಯಾದಿ ಜಾನಪದ ಕಲಾಮೇಳಗಳಿಂದ ವರ್ಣರಂಜಿತವಾದ ಕಾರ್ಯಕ್ರಮವನ್ನು ಆಚರಿಸುತ್ತಾರೆ. ಈ ಕಾರ್ಯ ಬೆಳಗಿನ ಜಾವ ಮುಗಿದ ನಂತರ ಮಧ್ಯಾಹ್ನ ಉಯ್ಯಾಲೆ ಕಾರ್ಯ ಪ್ರಾರಂಭವಾಗುತ್ತದೆ.

ಎಲ್ಲ ಬೀರದೇವರುಗಳಿಗೂ ಉಯ್ಯಾಲೆ ಕಾರ್ಯಕ್ರಮವಿರುವುದಿಲ್ಲ. ಉಯ್ಯಾಲೆ ಮಂಚ ದೇವರಿಗೆ ಇರುವ ಗೌರವ ಪದವಿ ಎಂಬುದಾಗಿ ಏಳೂರು ದೇವರ ಕಾಳಗದಿಂದ ತಿಳಿದುಬರುತ್ತದೆ.[೨೨] ಉಯ್ಯಾಲೆ ಕಂಬಗಳಿಗೆ ತೂಗು ಸರಪಳಿ ಹಾಕಿ ಉಯ್ಯಾಲೆ ಮಂಟಪ ಸಿದ್ಧಪಡಿಸುತ್ತಾರೆ. ಅಲಂಕಾರ ಮಾಡಿ ಜಾತ್ರೆಯಲ್ಲಿ ದೇವರನ್ನು ಉಯ್ಯಾಲೆ ಮೇಲೆ ಕೂರಿಸುತ್ತಾರೆ. ನಿರ್ದಿಷ್ಟ ವಂಶದವರು ಉಯ್ಯಾಲೆ ಮಂಚ ಪೂಜಿಸುತ್ತಾರೆ. ಉದಾಹರಣೆಗೆ ತಾಳಿಕಟ್ಟೆಯಲ್ಲಿ ನುಲೇನೂರು ರಂಗಾಪುರದವರು ಉಯ್ಯಾಲೆ ಮಂಚವನ್ನು ಪೂಜಿಸುತ್ತಾರೆ. ಹೀಗೆ ಪೂಜೆಯಾದ ನಂತರ ದೇವರನ್ನು ನಾಲ್ಕು ಬಾರಿ ತೂಗುತ್ತಾರೆ. ಹೀಗೆ ತೂಗಿದ ನಂತರ ದೇವರನ್ನು ಮೂಲಸ್ಥಾನಕ್ಕೆ ತೆಗೆದುಕೊಂಡು ಹೋಗುತ್ತಾರೆ. ಆ ನಂತರ ಜಾತ್ರೆಗೆ ಬಂದ ಎಲ್ಲ ಒಕ್ಕಲುಗಳು, ಭಕ್ತರು ಬಹು ಸಂತೋಷ ಸಡಗರದಿಂದ ಉಯ್ಯಾಲೆ ಆಡುತ್ತಾರೆ. ಈ ಉಯ್ಯಾಲೆ ಮಂಚವನ್ನು ತಿಂಗಳ ಪೂಜೆಯ ದಿನ ತೆಗೆಯುತ್ತಾರೆ.

ಎಲ್ಲ ಜನರಿಗಾಗಿ ದೇವಸ್ಥಾನದ ಬಳಿ ಸಿಹಿ ಅಡುಗೆ ಊಟದ ಕಾರ್ಯವಿರುತ್ತದೆ. ಸಿಹಿ ಅಡುಗೆ ಮಾಡಿ ದೇವರಿಗೆ ನೈವೇದ್ಯ ಮಾಡಿಸಿ ನಂತರ ಎಲ್ಲರಿಗೂ ಊಟದ ವ್ಯವಸ್ಥೆ ಇರುತ್ತದೆ. ಇದು ದೇವಸ್ಥಾನದ ವತಿಯಿಂದ ನಡೆಯುವ ಕಾರ್ಯಕ್ರಮವಾಗಿರುತ್ತದೆ. ಅದೇ ರೀತಿ ಬೀರೂರಿನ ಬೆಂಕಿ ಬೀರಲಿಂಗೇಶ್ವರನಿಗೆ ಹೂವಿನ ಉಯ್ಯಾಲೋತ್ಸವ ನಡೆಯುತ್ತದೆ. ಇದು ಬೀರದೇವರ ಜಾತ್ರೆಯಲ್ಲಿ ಕಂಡುಬರುತ್ತದೆ. ಈ ಉಯ್ಯಾಲೆ ಒಂದು ದೈವದ ಹಿರಿತನ ಮತ್ತು ಘನತೆಯ ಸಂಕೇತವಾಗಿದ್ದು ಉಯ್ಯಾಲೆ ಮಂಚ ಮತ್ತು ಅದರ ಮೇಲೆ ಅಲಂಕೃತ ದೇವರ ಉಯ್ಯಾಲೋತ್ಸವವು ಮುಖ್ಯ ದೇವರಿಗೆ ಮಾತ್ರ ಸಲ್ಲುವಂತಹದು ಎಂದು ಅಲ್ಲಿಯ ಜನರು ಹೇಳುತ್ತಾರೆ. ಅನೇಕ ಕಾರ್ಯಕ್ರಮಗಳನ್ನು ಮಾಡಿ ಬೀರೇಶ್ವರನ ಉತ್ಸವ ಮತ್ತು ಹೂವಿನ ಉಯ್ಯಾಲೋತ್ಸವವನ್ನು ನಡೆಸಲಾಗುತ್ತದೆ. ಆ ದಿನ ಬೆಳಗಿನ ಪೂಜೆಯ ನಂತರ ದೇವರನ್ನು ಹೂವು ಆಭರಣಗಳಿಂದ ಅಲಂಕರಿಸುತ್ತಾರೆ. ಉಯ್ಯಾಲೆ ಮಂಟಪದಲ್ಲಿ ತೂಗು ಸರಪಳಿ ಹಾಕಿ ಉಯ್ಯಾಲೆ ಮಂಚವನ್ನು ಸಿದ್ಧಪಡಿಸಲಾಗುತ್ತದೆ. ಅಲಂಕೃತ ಬೀರೇಶ್ವರನನ್ನು ಉಯ್ಯಾಲೆಯ ಮೇಲೆ ಕೂಡಿಸುತ್ತಾರೆ ಮತ್ತು ವಿಧಿ

ವಿಧಾನಗಳಿಂದ ಪೂಜೆ ಮಾಡುತ್ತಾರೆ. ನಂತರ ಪುರೋಹಿತರಾದ ಒಡೆಯರು ನಾಲ್ಕು ಬಾರಿ ಉಯ್ಯಾಲೆಯನ್ನು ತೂಗುತ್ತಾರೆ. ಉತ್ಸವ ಆರಂಭವಾಗುತ್ತದೆ. ಒಕ್ಕಲು ಭಕ್ತರು ಕುಟುಂಬಸಮೇತರಾಗಿ ಬಂದು ಪೂಜೆ ಮಾಡಿಸಿ ಕೊಂಡು ನಂತರ ಉಯ್ಯಾಲೆಯನ್ನು ತೂಗುತ್ತಾರೆ. ಇದನ್ನು ಹೆಣ್ಣು, ಗಂಡು ಮಕ್ಕಳು ಬೇದಭಾವವಿಲ್ಲದೇ ನೆರವೇರಿಸುವುದು ಕಂಡುಬರುತ್ತದೆ.

೪೦. ಓಕುಳಿ

ಬೀರಪ್ಪನಿಗೆ ಓಕುಳಿ ಕಾರ್ಯವು ಮುಖ್ಯವಾಗಿದೆ. ಜಾತ್ರೆಯ ಆರಂಭಕ್ಕೆ ಮೊದಲೇ ಓಕುಳಿ ಗುಂಡಿಯ ಮಣ್ಣನ್ನು ತೆಗೆದು ಬಯಲು ಮಾಡುತ್ತಾರೆ. ಓಕುಳಿಯ ದಿನ ಬೆಳಗ್ಗೆ ಬಂದ ಎಲ್ಲಾ ಚೌಟಿನವರೂ ಕೊಡ ನೀರು ತಂದು ಓಕುಳಿ ಗುಂಡಿಗೆ ಹಾಕುತ್ತಾರೆ. ಕೆಲವು ಕಡೆ ದೇವಸ್ಥಾನದವರೇ ನೀರು ತುಂಬಿಸುತ್ತಾರೆ. ಓಕುಳಿ ಗುಂಡಿಗೆ ನೀರು ತುಂಬಿದ ಮೇಲೆ ಅದಕ್ಕೆ ಸುಣ್ಣ ಅರಸಿನವನ್ನು ಕಲಸಿ ಬಣ್ಣದ ನೀರು ಮಾಡುತ್ತಾರೆ. ಓಕುಳಿ ಸಿದ್ಧಗೊಂಡ ನಂತರ ಪೂಜಾರರು ಓಕುಳಿ ಗುಂಡಿಯನ್ನು ಪೂಜಿಸಿ ಸ್ವಲ್ಪ ಓಕುಳಿಯನ್ನು ತೆಗೆದುಕೊಂಡು ದೇವರುಗಳಿಗೆ ಚಿಮುಕಿಸುತ್ತಾರೆ. ಹೀಗೆ ದೇವರಿಗೆ ಓಕುಳಿ ಹಾಕಿದ ನಂತರ ಜಾತ್ರೆಗೆ ಬಂದ ಒಕ್ಕಲುಗಳು ನೆಂಟರಿಷ್ಟರು ಭಕ್ತರು, ಸಣ್ಣವರು ದೊಡ್ಡವರು ಎನ್ನದೆ ಪರಸ್ಪರ ಓಕುಳಿ ಎರಚುತ್ತಾರೆ. ಇದು ಕಾಮನ ಹಬ್ಬದಲ್ಲಿ ಓಕುಳಿ ಆಡುವಂತಿರುತ್ತದೆ. ಓಕುಳಿ ಆಡುವುದು ಮಧ್ಯಾಹ್ನದ ವೇಳೆಗೆ ಮುಗಿಯುತ್ತದೆ. ಓಕುಳಿ ಕೆಲವು ಕಡೆ ಇಲ್ಲ. ಒಟ್ಟಿನಲ್ಲಿ ಓಕುಳಿ ಆಡಿದ ನಂತರ ಮಧ್ಯಾಹ್ನದ ವೇಳೆಗೆ ಓಕುಳಿ ಆಚರಣೆ ಮುಗಿಯುತ್ತದೆ. ನಂತರ ಬೀರದೇವರಿಗೆ ಪೂಜೆ ಸಲ್ಲಿಸುತ್ತಾರೆ. ಆ ಮೇಲೆ ಓಕುಳಿ ಮುಕ್ತಾಯವಾಗುತ್ತದೆ.

೪೧. ತಿಂಗಳುಪೂಜೆ ಕಾರ್ಯ

ಬೀರಲಿಂಗೇಶ್ವರ ಜಾತ್ರೆಯಾದ ೨೯ನೇ ದಿನ ತಿಂಗಳಪೂಜೆ ಕಾರ್ಯಕ್ರಮ ಮಾಡುತ್ತಾರೆ. ತಿಂಗಳ ಪೂಜೆ ಜಾತ್ರೆಗೆ ಬಂದಂತೆ ಎಲ್ಲ ಒಕ್ಕಲುಗಳು ಬರುವುದಿಲ್ಲ. ಹಿರಿಯರು, ಗೌಡ, ಬುದ್ಧಿವಂತರು ಮತ್ತು ಆಸಕ್ತಿ ಇದ್ದ ಭಕ್ತರು ಬರುತ್ತಾರೆ. ಅಂದು ಮೀಸಲ ಪ್ರಸಾದ, ಫಲಾಹಾರ ಮಾಡಿ ಪೆಟ್ಟಿಗೆಯಲ್ಲಿ ಪ್ರಸಾದವನ್ನು ಮೂಲಸ್ಥಾನಕ್ಕೆ ತೆಗೆದುಕೊಂಡು ಹೋಗಿ ದೇವರಿಗೆ ತಳಿಗೆ ಮಾಡಿ ಪೂಜೆ ಪುನಸ್ಕಾರ ನಡೆಸಿ ಹದ್ದು ಕಾಗೆಗಳಿಗೆ ಅನ್ನ ಹಾಕುತ್ತಾರೆ. ನಂತರ ಅಲ್ಲಿಂದ ಊರ ಒಳಗಿನ ಗುಡಿಗೆ ಬಂದು ಅಲ್ಲಿ ದೇವರಿಗೆ ಎಡೆ ಮಾಡಿ ಜಾತ್ರೆಯ ಆದಾಯ ಖರ್ಚುಗಳ ಲೆಕ್ಕ ಒಪ್ಪಿಸುತ್ತಾರೆ. ತಿಂಗಳಪೂಜೆಗೆ ಬಂದ ಸಮಸ್ತರಿಗೆ ಅನ್ನಸಂತರ್ಪಣೆ ಮಾಡುತ್ತಾರೆ. ಜಾತ್ರೆಯಲ್ಲಿ ಎಲ್ಲ ಧಾರ್ಮಿಕ ಕಾರ್ಯಕ್ರಮಗಳು ಇಲ್ಲಿಗೆ ಮುಗಿಯುತ್ತವೆ.

ನಂಬಿಕೆಗಳು

ಸಮಾಜ ಜೀವಿಯಾದ ಮಾನವನ ಬದುಕಿನಲ್ಲಿ ಹಲವಾರು ನಂಬಿಕೆ, ಸಂಪ್ರದಾಯ, ಆಚರಣಾತ್ಮಕ ಸಂಬಂಧಗಳು ಮೇಳೈಸಿಕೊಂಡು ಬಂದಿವೆ. ಮಾನವನ ಜೀವನದಲ್ಲಿ ನಂಬಿಕೆಯ ಪ್ರಾಬಲ್ಯ ಅನನ್ಯವಾದದ್ದು. ನಂಬಿಕೆ, ಸಂಪ್ರದಾಯ, ಆಚರಣೆಗಳು ಇವುಗಳೆಲ್ಲಾ ಒಂದಕ್ಕೊಂದು ಪರಸ್ಪರ ಸಂಬಂಧವುಳ್ಳವುಗಳು. ಸಂಸ್ಕೃತಿ ಎಂಬುದರ ವಿಶಾಲ ತೆಕ್ಕೆಯೊಳಗೆ ಇಷ್ಟೆಲ್ಲಾ ಅಡಕವಾಗಿರುತ್ತದೆ. ದೈವಸಂಸ್ಕೃತಿಯಲ್ಲಿ ನಂಬಿಕೆಯ ಪ್ರಪಂಚ

ಅತ್ಯಂತ ವಿಸ್ತಾರವಾದದ್ದು. ಬಹುಪಾಲು ನಂಬಿಕೆಗಳಿಗೆ ವೈಚಾರಿಕ ತಳಹದಿ ಇರುವುದಿಲ್ಲವಾದರೂ ಒಂದು ಮಾನಸಿಕ ಕ್ರಿಯೆಯಾಗಿ ಭಾವ ಮತ್ತು ಇಚ್ಛೆಯ ಸಂಗತಿಗಳನ್ನು ಪ್ರಧಾನವಾಗಿ ಕಾಣಬಹುದು.

ದೈವದ ಪರಿಕಲ್ಪನೆ ಮತ್ತು ಅಸ್ತಿತ್ವವು ಮೂಲಭೂತವಾಗಿ ನಂಬಿಕೆಯಿಂದ ಬಂದಿರುವುದಾಗಿದೆ. ಹಾಗಾಗಿ ದೈವದ ಮೂಲ ನಂಬಿಕೆ. ದೈವದ ಬಗೆಗೆ ನಂಬಿಕೆ ಇಲ್ಲದಿದ್ದಲ್ಲಿ ದೈವದ ಅಸ್ತಿತ್ವವೇ ಇರುವುದಿಲ್ಲ. ಹಾಗಾಗಿ ದೈವತ್ವವನ್ನು ಕುರಿತಂತೆ ನಂಬಿಕೆಯು ಅತಿ ಮಹತ್ವದ್ದಾಗಿದೆ. ನಂಬಿಕೆ, ಆಚರಣೆಗಳು ಮನುಷ್ಯನ ದಿನನಿತ್ಯದ ಬದುಕಿನ ಎರಡು ಮುಖಗಳು. ನಂಬಿಕೆ ಮಾತಿನ ಮೂಲಕ ವ್ಯಕ್ತಿಗೆ ಸ್ಫೂರ್ತಿ ನೀಡಿದರೆ, ಆಚರಣೆಗಳು ಕ್ರಿಯೆಯ ಮೂಲಕ ವಿಶಿಷ್ಟ ಸ್ಥಾನವನ್ನು ಪಡೆದುಕೊಳ್ಳುತ್ತವೆ.[೨೩] ಹೀಗೆ ರೂಪಿತವಾದ ಕೃತಿಯನ್ನು ಗಮನಿಸಿದಾಗ ನಂಬಿಕೆ, ಆಚರಣೆಗಳ ಪ್ರಾಮುಖ್ಯತೆಯನ್ನು ಅರಿಯಬಹುದು.

ಜನಸಾಮಾನ್ಯರು ನಿಸರ್ಗದತ್ತವಾಗಿ ತಮಗೆ ಬಂದಿರುವ ಕೊಡುಗೆಯನ್ನು ದೈವದ ಕೊಡುಗೆ ಎಂದು ಭಾವಿಸಿ ಅವುಗಳಿಗೆ ಸಂಬಂಧಿಸಿದ ದೈವಗಳನ್ನು ಸೃಷ್ಟಿಸಿಕೊಂಡು ಅವುಗಳನ್ನು ವಾಸ್ತವವಾಗಿ ಪೂಜಿಸುತ್ತಾ ಬಂದಿದ್ದಾರೆ. ಕಾಲ ಮತ್ತು ಸಂದರ್ಭಕ್ಕನುಸಾರವಾಗಿ ಕೆಲವು ದೈವಗಳ ಪ್ರಭಾವ ಮರೆಯಾಗಬಹುದು. ಕೆಲವು ದೈವಗಳ ಪ್ರಭಾವ ಹೆಚ್ಚಾಗಬಹುದು. ಇದು ಬಹುಮುಖ್ಯವಾಗಿ ಆ ದೈವದ ಬಗೆಗಿನ ನಂಬಿಕೆಯನ್ನಾಧರಿಸುತ್ತದೆ. ವರ್ತಮಾನದಲ್ಲೂ ಜನರು ತಮ್ಮ ಪ್ರತಿಯೊಂದು ಕ್ರಿಯೆಗಳನ್ನು ಮಾಡುವಾಗಲೂ ದೈವವನ್ನು ನಂಬಿ ಅದರ ಮೇಲೆ ಭಾರ ಹಾಕಿ ನಡೆಯುವುದುಂಟು. ಹಾಗಾಗಿ ದೈವಸಂಸ್ಕೃತಿಯಲ್ಲಿ ನಂಬಿಕೆಗಳು ಜನರ ಮಾನಸಿಕ ರೋಗ ಚಿಕಿತ್ಸಕಗಳಾಗಿ ಕೆಲಸ ಮಾಡುತ್ತವೆ. ಇಂತಹ ಸಂದರ್ಭದಲ್ಲಿ ಡಾ. ಹಾ.ಮಾ. ನಾಯಕರ "ಮನುಷ್ಯ ಕಾಲದ ನಡುವೆ ಸಿಕ್ಕು ಬಾಳುತ್ತಾನೆ. ದೇಶದ ನಡುವೆ ಸಿಕ್ಕು ಬಾಳುತ್ತಾನೆ"[೨೪] ಎನ್ನುವ ಮಾತು ನೆನಪಿಗೆ ತಂದು ಕೊಳ್ಳಬಹುದು.

ಜನರ ನಂಬಿಕೆಗಳು ಅಲಿಖಿತ ಹೃದಯಾಂತರ್ಗತ ಕರಾರು ಪತ್ರಗಳಿದ್ದ ಹಾಗೆ. ಜನರಲ್ಲಿ ಈ ನಂಬಿಕೆಗಳು ಮೊದಲಿನಿಂದಲೂ ಸಾಗುತ್ತಾ ಬಂದಿದ್ದು ಮುನ್ನೂರ ಮೂವತ್ತು ಕೋಟಿ ದೇವತೆಗಳು ಆಗಿರುವುವು ಎನ್ನುವ ಮಾತನ್ನು ಕಾಣುತ್ತೇವೆ. ಸರ್ವ ವಸ್ತುಗಳಲ್ಲಿಯೂ ಪರಮಾತ್ಮನನ್ನು ಕಾಣುವ ಪ್ರವೃತ್ತಿ ಅವರಲ್ಲಿ ಬೆಳೆದು ಬಂದಿತು. ವಿಶೇಷಪೂಜೆ, ಹರಕೆ ಸಂದರ್ಭದಲ್ಲಿ ಕುರಿಬಲಿ, ತಲೆಮಂಡೆ ಸೇವೆ, ದೈವದ ಹಬ್ಬವನ್ನು ಮತ್ತು ಜಾತ್ರೆಯನ್ನು ಊರಿಗೆ ಊರೇ ಸಂಭ್ರಮದಿಂದ ಆಚರಿಸುತ್ತಾರೆ. ವರ್ಷದ ಎಲ್ಲಾ ಕಾಲದಲ್ಲೂ ಕೆಲಸ ಕಾರ್ಯಗಳಲ್ಲಿ ಕಾಲ ಕಳೆಯುವುದರಿಂದ ಇಂತಹ ದೈವಸಂಬಂಧಿ ಕಾರ್ಯಗಳು ಅವರಿಗೆ ಸುಖ ನೀಡುತ್ತವೆ.

ನಂಬಿಕೆಗಳ ವಿಚಾರದಲ್ಲಿ ಗಮನಿಸಬಹುದಾದ ಇನ್ನೊಂದು ಸಂಗತಿಯೆಂದರೆ ಅವು ಹುಟ್ಟುತ್ತಲೇ ಯಾವುದೋ ಒಂದು ಅನುಭವದ ಹಿನ್ನೆಲೆಯಲ್ಲಿ ಮೂಡಿ ಬಂದ ಜ್ಞಾನವೇ ಹೇಳಿಕೆಯ ರೂಪ ಪಡೆದುಕೊಂಡು ಪರಂಪರೆಯಲ್ಲಿ ನಂಬಿಕೆಯಾಗಿ ರೂಪಗೊಳ್ಳುತ್ತದೆ. ಸಾಮಾನ್ಯವಾಗಿ ಮನುಷ್ಯ ಯಾವ ವಿಷಯದ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಾನೋ ಅಂತಹ ವಿಷಯದ ಬಗೆಗೆ ಆತಂಕವೂ ಹೆಚ್ಚಾಗುತ್ತದೆ. ಇಂತಹ ಆತಂಕದ

ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ನಂಬಿಕೆಗಳು ರೂಪಗೊಂಡಿರುತ್ತವೆ. ಮಾನವನು ವಿಕಾಸಗೊಂಡಂತೆ ಆತನ ಜೀವನದಲ್ಲಿ ನಂಬಿಕೆಗಳು ಕೂಡ ನಿತ್ಯ ಕರ್ಮದಲ್ಲಿ ಬಳಸುವಷ್ಟರ ಮಟ್ಟಿಗೆ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ.

ನಂಬಿಕೆ ಒಂದು ಮಾನಸಿಕ ಸ್ಥಿತಿ. ಪರಂಪರಾಗತವಾಗಿ ಸ್ವೀಕೃತವಾದ ಒಂದು ಭಾವರೂಪ. ಪುನಾರಾವರ್ತಿತ ಹಾಗೂ ಸಾಂಪ್ರದಾಯಿಕ ಅಭಿಪ್ರಾಯೋಕ್ತಿ. ವಸ್ತುಸ್ಥಿತಿಯೊಡನೆ ಅಸಂಬದ್ಧವೂ, ಅವೈಜ್ಞಾನಿಕವಾದ ಸಂಬಂಧವಾದ ಹೇಳಿಕೆ.[೨೫] ಇದನ್ನು ಗಮನಿಸಿದಾಗ ಶುಭ-ಅಶುಭ, ಫಲ-ವಿಫಲ, ಭಯ-ಅಭಯಗಳ ಕುರಿತು ಪ್ರಕಟಪಡಿಸುವ ಕ್ರಿಯೆಯೇ ನಂಬಿಕೆ ಎಂದೆನಿಸುತ್ತದೆ. ನಂಬಿಕೆಗಳು ಸಾಮಾನ್ಯವಾಗಿ ಅವ್ಯಕ್ತವಾಗದ ಅಗತ್ಯತೆಯಿಂದ ರೂಪುಗೊಳ್ಳುತ್ತವೆ. ಅಗತ್ಯದ ತೀವ್ರತೆಯನ್ನುಸರಿಸಿ ನಂಬಿಕೆಯಿಂದ ದೊರೆಯುವ ತೃಪ್ತಿ ಭಾವನೆಯ ತೀವ್ರತೆ ತೀರ್ಮಾನವಾಗುತ್ತದೆ. ಮನಸ್ಸಿನ ಮೇಲೆ ಹೆಚ್ಚು ಪರಿಣಾಮ ಬೀರುತ್ತವೆ. ಜನಸಾಮಾನ್ಯರು ಹೆಚ್ಚಾಗಿ ನಂಬಿಕೆಗಳ ಮೂಲ ಸತ್ಯಾಸತ್ಯತೆಯನ್ನು ಪರೀಕ್ಷಿಸಲು ಹೋಗುವುದಿಲ್ಲ. ಬದಲಾಗಿ ಅವು ತಮ್ಮ ನಿತ್ಯದ ಬದುಕಿಗೆ ಅನುಕೂಲವಾಗುವ ರೀತಿಯಲ್ಲಿದ್ದರೆ ಅವುಗಳಿಗೆ ಹೆಚ್ಚು ಮೊರೆ ಹೋಗುತ್ತಾರೆ.

ಜನರ ನಂಬಿಕೆಯು ಸಾಂಪ್ರದಾಯಿಕವಾಗಿ ಅಂಗೀಕೃತವಾದ ಒಂದು ಪರಿಕಲ್ಪನೆ. ಸಾಮಾನ್ಯವಾಗಿ ಅದು ಕಾರಣ ಮತ್ತು ಪರಿಣಾಮದ ಸಂಬಂಧವನ್ನು ವರ್ತಮಾನ ಕಾಲ, ಭೂತಕಾಲ ಮತ್ತು ಭವಿಷ್ಯತ್ ಕಾಲಗಳ ಸಂಗತಿಗಳನ್ನು ಒಳಗೊಂಡಿರುತ್ತದೆ. ಪ್ರಾಚೀನ ಮಾನವನ ಪರಿಮಿತ ತಿಳುವಳಿಕೆಯು ಜನಪದ ನಂಬಿಕೆಗಳಿಗೆ ಮೂಲವಾಗಿದೆ. ಇವು ಮನುಷ್ಯನ ಮನಸ್ಸಿನ ಪರಿಸ್ಥಿತಿಗೆ ಸಂಬಂಧಿಸಿದ್ದರಿಂದ ಅವು ಸಾರ್ವತ್ರಿಕವಾಗಿವೆ. ವೆಯ್‌ತ್ಯಾಂಡ, ಡಿ ಡ್ಯಾಂಡ್ ಅವರು ಜನರ ನಂಬಿಕೆಯ ಧೋರಣೆ ಮತ್ತು ವಿಶ್ವಾಸಕ್ಕೆ ಸಂಬಂಧಿಸಿದ್ದು ಎಂದು ಅಭಿಪ್ರಾಯಪಡುತ್ತಾರೆ. ಹಾಗಾಗಿ ನಂಬಿಕೆಯನ್ನು ಪರಂಪರೆಯುದ್ದಕ್ಕೂ ಚಲನಶೀಲ ಪ್ರಕ್ರಿಯೆಯಲ್ಲಿರುತ್ತದೆ ಎಂಬುದು ಮನದಟ್ಟಾಗುತ್ತದೆ.

- ಭಕ್ತರು ದೈವವನ್ನು ನಿಷ್ಠೆ ಮತ್ತು ಭಕ್ತಿಭಾವದಿಂದ ಪೂಜಿಸಿ ತಮ್ಮ ಕಷ್ಟಕಾರ್ಪಣ್ಯಗಳನ್ನು ಪರಿಹರಿಸುವಂತೆ ಬೇಡಿಕೊಂಡರೆ ಖಂಡಿತ ಫಲ ಸಿಗುತ್ತದೆ ಎನ್ನುವ ನಂಬಿಕೆಯಿದೆ.
- ದನಕರು ಕುರಿಗಳು ಮರಿ ಹಾಕಿದರೆ ಮೊದಲಿಗೆ ಕರೆದ ಹಾಲಿನಿಂದ ತುಪ್ಪವನ್ನು ತಯಾರಿಸಿ ಬೀರಪ್ಪನಿಗೆ ದೀಪ ಹಚ್ಚಿದರೆ ದನಕರುಗಳಿಗೆ ಮಾತ್ರವಲ್ಲ ಮನೆಯವರಿಗೂ ಕ್ಷೇಮ.
- ಬೀರದೇವರಿಗೆ ಬೇಡಿಕೊಂಡು ಮುಡಿ ಕೊಟ್ಟರೆ ನಮ್ಮ ಮಕ್ಕಳಿಗೆ ಕುಟುಂಬಕ್ಕೆ ಒಳ್ಳೆಯದಾಗುತ್ತದೆ.
- ದೇವರಿಗೆ ಉರುಳು ಸೇವೆ ಮಾಡಿದರೆ ದೇವರು ನಮ್ಮ ಕಷ್ಟವನ್ನು ಪರಿಹರಿಸುತ್ತಾನೆ.

ಹೀಗೆ ನಂಬಿಕೆಗಳು ಮಾನವನ ಜೀವನದಲ್ಲಿ ಅಸಾಧಾರಣವಾದ ಪಾತ್ರವನ್ನು ವಹಿಸುತ್ತವೆ. ನಂಬಿಕೆಗಳಿಲ್ಲದೆ ಮನುಷ್ಯ ಜೀವಿಸಲಾರ ಎಂಬುವಷ್ಟರ ಮಟ್ಟಿಗೆ ಜೀವನ ರೂಪಿಸಿಕೊಂಡಿರುತ್ತಾನೆ. ಜೀವನಕ್ಕೆ ಉಸಿರಾಟ ಎಷ್ಟು ಅವಶ್ಯಕವೋ ಅಷ್ಟೇ ಅವಶ್ಯಕವಾದ ಪಾತ್ರವನ್ನು ನಂಬಿಕೆ ನಿರ್ವಹಿಸುತ್ತಿರುತ್ತದೆ ಎಂಬ ಮಾತು ಸ್ಪಷ್ಟವಾಗಿದೆ.[೨೬]

ದೈವಸಂಸ್ಕೃತಿಯ ಸಂದರ್ಭದಲ್ಲಿ ನಂಬಿಕೆಗಳು ಜೀವಂತ ಪಳೆಯುಳಿಕೆಗಳಾಗಿ ಕಂಡುಬರುತ್ತವೆ. ಅವುಗಳು ವಂಶಪಾರಂಪರಿಕವಾಗಿ ಹರಿದುಬರುವ ಚಲನಶೀಲತೆಯ ಗುಣವನ್ನು ಪಡೆದುಕೊಂಡಿವೆ. ಹೆನ್ರಿ ವೈಟ್ ಹೈಡ್ ಅವರು ಸ್ಟ್ಯಾಂಡರ್ಡ್ ಡಿಕ್ಷನರಿ ಆಫ್ ಫೋಕ್‌ಲೋರ್‌ನಲ್ಲಿ ನಂಬಿಕೆಯನ್ನು ಕುರಿತು Traditionally accepted concept offeen of a cause and effect reletionship past, present or future accepted a result of repeated and collective abseravation as perhaps finally of faith. ಎಂದು ಹೇಳುವಲ್ಲಿ ಪರಂಪರಾಗತವಾಗಿ ಶ್ರದ್ಧೆಯಿಂದ ಬಂದ ನಂಬಿಕೆಗಳು ಸಾರ್ವತ್ರಿಕ ಮುದ್ರೆಯನ್ನು ಧರಿಸಿಕೊಂಡಿವೆ. ಇವು ನಿತ್ಯವೂ ಕಾಣಿಸಿಕೊಂಡು ಕಾಲದ ಫಲಿತಾಂಶ ನೀಡುವ ಕಲ್ಪನೆಗಳಾಗಿವೆ ಎಂಬ ಅರ್ಥ ನೀಡುತ್ತಾರೆ.[೨೭] ಮಾನವ ಬೇಟೆ, ಪಶುಪಾಲನೆ, ಕೃಷಿ ಹಂತಗಳನ್ನು ದಾಟಿ ಕೈಗಾರಿಕಾ ಕ್ಷೇತ್ರಗಳಿಗೆ ಕಾಲಿಟ್ಟ ಆಧುನಿಕ ಸಂದರ್ಭದಲ್ಲಿಯೂ ನಂಬಿಕೆಗಳಿಗೆ ಹೆಚ್ಚು ಒತ್ತು ಕೊಡುತ್ತಿರುವುದು ಕಂಡುಬರುತ್ತದೆ. ನಾವು ಇಂದು ವೈಜ್ಞಾನಿಕವಾಗಿ ಎಷ್ಟೇ ಅಭಿವೃದ್ಧಿ ಹೊಂದಿದ್ದರೂ ಉಪಗ್ರಹ ಉಡಾವಣೆಗೆ ಜೋತಿಷ್ಯವನ್ನು ಕೇಳಿ ಉಡಾಯಿಸಿದರೆ ಒಳಿತಾಗುತ್ತದೆ ಎಂದು ನಂಬುತ್ತೇವೆ. ಕಂಪ್ಯೂಟರ್, ಕಬ್ಬಿಣದಂತಹ ಎಲ್ಲ ಯಂತ್ರಗಳಿಗೆ ಪ್ರತಿ ಅಮಾವಾಸ್ಯೆ, ಹುಣ್ಣಿಮೆ, ಹಬ್ಬಗಳಂತಹ ಸಂದರ್ಭದಲ್ಲಿ ಪೂಜೆ ಸಲ್ಲಿಸುತ್ತೇವೆ. ಇದೆಲ್ಲವೂ ವಿಪರ್ಯಾಸವೇ ಸರಿ. ಇದರಿಂದ ನಂಬಿಕೆಗಳು ಮಾನವನ ಜೀವನದಲ್ಲಿ ರಕ್ತಗತವಾಗಿ ಮನಸ್ಸಿನಲ್ಲಿ ಬೇರೂರಿರುವ ಸಂಗತಿಗಳಾಗಿವೆ ಎನ್ನುವುದು ಸ್ಪಷ್ಟವಾಗುತ್ತಿದೆ. ಈ ಕೆಳಗಿನಂತೆ ಹರಕೆಗಳು ಮತ್ತು ನಂಬಿಕೆಗಳನ್ನು ತಿಳಿಯಬಹುದು.

ಹರಕೆಗಳು

ಮಾನವ ಆರಾಧನಾ ಸ್ವರೂಪ ಬೆಳೆದಂತೆಲ್ಲ ಅವಶ್ಯಕವಾದ ಶಕ್ತಿಗೆ ಧಾರ್ಮಿಕ ವ್ಯವಸ್ಥೆಯ ರೂಪ ನೀಡಿದ. ಅದರ ಮೂಲಕ ತನ್ನ ಸಮಸ್ಯೆಗಳ ನಿವಾರಣೆಗೆ ಹಾಗೂ ನೀಡಿಕೆಗಳ ಪೂರೈಕೆಗೆ ಹರಕೆಗಳನ್ನು ಸೃಷ್ಟಿಸಿಕೊಂಡನು. ಈ ಹರಕೆಯು ಒಂದು ರೀತಿಯಲ್ಲಿ ಭಕ್ತ ಮತ್ತು ದೈವದ ನಡುವೆ ನಡೆಯುವ ಒಂದು ಆಂತರಿಕ ಒಡಂಬಡಿಕೆ ಎಂಬ ಅಭಿಪ್ರಾಯವಿದೆ. ಜನಪದರಲ್ಲಿ ಹರಕೆಗಳು ಸ್ವಲ್ಪ ಹೆಚ್ಚು ಕಡಿಮೆ ಸರ್ವೇಸಾಮಾನ್ಯ ಸ್ವರೂಪ ಪಡೆದಿರುವುದು ಕಂಡುಬರುತ್ತದೆ. ಕುರುಬರು ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳಲು ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ತಮ್ಮ ಆರಾಧ್ಯ ದೈವಗಳಿಗೆ ಹರಕೆಗಳನ್ನು ಹೊರುತ್ತಾರೆ. ಬೀರದೇವರಿಗೆ ಮೊದಲಾದ ದೇವರಿಗೆ ಹರಕೆ ಹೊರುವುದು ಕಂಡುಬರುತ್ತದೆ. ಅಂಥ ಹರಕೆಗಳು ಈ ರೀತಿಯಾಗಿವೆ.

೧. ಮೀಸಲು ತುಪ್ಪದ ಹರಕೆ

ಮನೆಯಲ್ಲಿ ಕುರಿಯ ಹಾಲಿನಿಂದ ಬೆಣ್ಣೆ ತೆಗೆದು ತುಪ್ಪ ಕಾಯಿಸುತ್ತಾರೆ. ಆ ತುಪ್ಪವನ್ನು ನೆಲದ ಮೇಲಿಡದೆ ನೆಲುವಿನ ಮೇಲೆ ಇಡುತ್ತಾರೆ. ಅದನ್ನು ಯಾರೂ ಮುಟ್ಟುವಂತಿಲ್ಲ. ವಿಶೇಷ ಸಂದರ್ಭಗಳಲ್ಲಿ ಈ ಮೀಸಲು ತುಪ್ಪದಿಂದ ದೀಪ ಹಚ್ಚುತ್ತಾರೆ. ಬೀರಲಿಂಗೇಶ್ವರನಿಗೆ ಮೀಸಲು ತುಪ್ಪದ ಹರಕೆ ಸಲ್ಲಿಸುತ್ತಾರೆ.

೨. ಉಡುಗೊರೆಯ ಹರಕೆ

ದೇವರ ಅಂಗಾಂಗಗಳು, ಕೈಯಲ್ಲಿ ಆಯುಧಗಳು ಅಥವಾ ಇತರ ವಸ್ತುಗಳನ್ನು ಉಡುಗೊರೆಯಾಗಿ ಕೊಡುವ ಹರಕೆ ಸೇರುತ್ತಾರೆ. ದೇವರ ಅಂಗಾಂಗಗಳಿಗೆ ಸಂಬಂಧಿಸಿದ ಮುಖ, ಹಸ್ತ, ಕಣ್ಣು, ಮೀಸೆ ಅಲ್ಲದೇ ಲಿಂಗ, ಚವರ, ಪಲ್ಲಕಿ, ಕುದುರೆ, ಗಂಟೆ, ಕೊಡ, ಕಳಸ ಮೊದಲಾದ ವಸ್ತುಗಳನ್ನು ಬಂಗಾರ, ಬೆಳ್ಳಿ ಹಾಗೂ ಪಂಚಲೋಹಗಳಿಂದ ಮಾಡಿಸಿ ಹರಕೆ ತೀರಿಸುತ್ತಾರೆ[೨೨] ಬೀರದೇವರಿಗೆ ಹರಕೆ ಹೊರುವ ಪದ್ಧತಿ ಇದೆ.

೩. ಕುರಿಮರಿ ಹರಕೆ

ಇದು ಹರಕೆ ಸಲ್ಲಿಸುವ ಒಂದು ವಿಧಾನವಾಗಿದೆ. ಹರಕೆ ಮಾಡಿಕೊಂಡು ಭಕ್ತರು ತಮ್ಮ ಪುಟ್ಟಪುಟ್ಟ ಕುರಿಮರಿಗಳನ್ನು ಉತ್ಸವ ಹೊರಟ ಪಲ್ಲಕ್ಕಿಯ ಮೇಲಿಂದ ಆಚೆ ಬೀಳುವಂತೆ ಎಸೆಯುತ್ತಾರೆ. ತಮ್ಮ ಕುರಿ ಹಿಂಡುಗಳು ಸಮೃದ್ಧವಾಗಿ ಬೆಳೆಯಲ್ಲಿ ರೋಗ ರುಜಿನಗಳು ತಮ್ಮ ಬದುಕುಗಳಿಗೆ ಬರದಿರಲಿ ಎಂಬ ಹಾರೈಕೆಗಳು ಈ ಹರಕೆಯ ಹಿಂದಿರುವ ಉದ್ದೇಶಗಳಾಗಿವೆ. ಈ ಹರಕೆಯ ಕುರಿತು ಈಗ ಕುರಿಮರಿಗಳ ಬದಲಾಗಿ ಉಣ್ಣೆಯ ಉಂಡೆಗಳನ್ನು ಎಸೆದು ತಮ್ಮ ಹರಕೆಯನ್ನು ತೀರಿಸಿಕೊಳ್ಳುವುದು ಕಂಡುಬರುತ್ತದೆ.

೪. ಗಿಣ್ಣದ ಹಾಲಿನ ಹರಕೆ

ಇದು ಹಾಲುಮತ ದೈವಗಳಿಗೆ ಸಲ್ಲಿಸುವ ಹರಕೆಗಳಲ್ಲಿ ಒಂದಾಗಿದೆ. ಹಾಲುಮತದವರ ಮನೆಯಲ್ಲಿ ಹಸು, ಕುರಿ, ಮೇಕೆಗಳು ಮರಿ ಹಾಕಿದರೆ ಕುರುಬರು ಮಡಿಸ್ನಾನ ಮಾಡಿ ಶುದ್ಧವಾದ ಗಿಂಡಿಯಲ್ಲಿ ಹಾಲು ಕರೆಯುತ್ತಾರೆ. ಮೊದಲು ಹಾಲನ್ನು ಬೀರದೇವರಿಗೆ, ಕರಿಯಪ್ಪನಿಗೆ, ಒಯ್ದು ಒಪ್ಪಿಸಿ ಪೂಜೆ ಮಾಡುತ್ತಾರೆ. ಪೂಜೆಯಿಂದ ತಂದ ಭಂಡಾರವನ್ನು ದನಗಳು ಅಥವಾ ಕುರಿಗಳ ಕೊಂಬಿಗೆ, ಹಣೆಗೆ ಹಚ್ಚಿ ಹೂವು ಮುಡಿಸಿ ದೇವರ ಆಶೀರ್ವಾದವನ್ನು ಪಡೆಯುತ್ತಾರೆ. ಇದು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದ ಆಚರಣೆಯಾಗಿದೆ. ಇದನ್ನು ಈಗ ಎಲ್ಲ ಜನಾಂಗದವರು ಅನುಸರಿಸುತ್ತಾರೆ.

೫. ಮುಡುಪಿನ ಹರಕೆ

ಮುಡುಪು ಎಂದರೆ ದೇವರ ಹೆಸರಿನಿಂದ ಹಣ ಸಂಗ್ರಹಿಸಿ ಅದನ್ನು ದೇವರ ಹುಂಡಿಗೆ ಹಾಕುವುದು ಎಂದರ್ಥವಾಗುತ್ತದೆ. ತಮ್ಮ ಸಮಸ್ಯೆ ನಿವಾರಣೆಯಾಗಲೆಂದು ಬೇಡಿಕೊಂಡ ದೇವರ ಹೆಸರಿನಲ್ಲಿ ಹಣವನ್ನು ಒಂದು ವಸ್ತ್ರದ ಗಂಟಿನಲ್ಲಿ ಕಟ್ಟಿಡುತ್ತಾರೆ. ಪ್ರತಿವಾರವೂ ಇಂತಿಷ್ಟೆಂದು ಮುಡುಪು ಹಾಕುತ್ತಾರೆ. ಆ ದೇವರ ಜಾತ್ರೆ ಅಥವಾ ವಿಶೇಷ ದಿನದಂದು ಹಣವನ್ನು ದೇವರಿಗೆ ಅರ್ಪಿಸುವ ಸಂಪ್ರದಾಯವಿರುವುದು ಕಂಡುಬರುತ್ತದೆ. ಮುಡುಪನ್ನು ಕಟ್ಟಿಡುವುದು ರವಿವಾರ, ಶುಕ್ರವಾರ, ಮಂಗಳವಾರ ದಿನದಂದು ಸಾಮಾನ್ಯವಾಗಿ ಕಂಡುಬರುತ್ತದೆ.

೬. ಉರುಳುಸೇವೆಯ ಹರಕೆ

ತಮ್ಮ ಸಮಸ್ಯೆಗಳು ಬಗೆಹರಿಯಲೆಂದು ಅಥವಾ ಬೇಡಿಕೆಗಳು ನೆರವೇರಲೆಂದು ಸ್ತ್ರೀಪುರುಷರು ಉರುಳುಸೇವೆಯ ಹರಕೆ ಹೊರುತ್ತಾರೆ. ನದಿಯಲ್ಲಿ ಸ್ನಾನ ಮಾಡಿ ಒದ್ದೆ ಮೈಯಲ್ಲಿ ಗುಡಿಯ ಸುತ್ತಲೂ

ಉರುಳುಸೇವೆ ಮಾಡುತ್ತಾರೆ. ಕೆಲವೆಡೆ ನದಿಯಲ್ಲಿ ಸ್ನಾನ ಮಾಡಿ ಕೈಯಲ್ಲಿ ಒಂದು ಚಿಕ್ಕ ಕೋಲನ್ನು ಹಿಡಿದು ಉದ್ದವಾಗಿ ಮಲಗುತ್ತ ದಾರಿಯುದ್ದಕ್ಕೂ ಅಥವಾ ದೇವಸ್ಥಾನದ ಸುತ್ತಲೂ ದೀರ್ಘ ನಮಸ್ಕಾರ ಹಾಕುವ ಹರಕೆಯನ್ನು ಸಲ್ಲಿಸುತ್ತಾರೆ. ಹಿರಿಯರು, ಸಂಬಂಧಿಕರು ಇವರಿಗೆ ಹೊಸ ವಸ್ತ್ರಗಳನ್ನು ನೀಡುವ ಪದ್ಧತಿ ಇದೆ. ಈ ಪದ್ಧತಿಯು ಬೀರಪ್ಪನ ಭಕ್ತರಲ್ಲಿ ಕಾಣಬಹುದಾಗಿದೆ.

೭. ಇಡಿಗಾಯಿ ಹರಕೆ

ಕೆಲವರು ದೇವರಿಗೆ ಇಡಿಗಾಯಿ ಒಡೆಯುವ ಹರಕೆ ಹೊರುತ್ತಾರೆ. ಈ ಇಡಿಗಾಯಿಗಳ ಸಂಖ್ಯೆ ವ್ಯಕ್ತಿಯಿಂದ ವ್ಯಕ್ತಿಗೆ, ಸ್ಥಳದಿಂದ ಸ್ಥಳಕ್ಕೆ ಹಾಗೂ ದೇವರಿಂದ ದೇವರಿಗೆ ವ್ಯತ್ಯಾಸವಿರುವುದು ಕಂಡುಬರುತ್ತದೆ. ಕೆಲವು ವ್ಯಕ್ತಿಗಳು ೧, ೧೧, ೫೧, ೧೦೧, ೫೦೧ ಇಡಿಗಾಯಿಯನ್ನು ಹರಕೆ ರೂಪದಲ್ಲಿ ಸಲ್ಲಿಸುತ್ತಾರೆ. ಬೆಂಗಳೂರಿನ ಬೀರದೇವರ ದೇವಾಲಯದಲ್ಲಿ ತೆಂಗಿನ ಕಾಯಿಯನ್ನು ತಲೆಗೆ ಒಡೆದುಕೊಳ್ಳುವ ಹರಕೆ ಸಲ್ಲಿಸುತ್ತಾರೆ. ಇಡಿಗಾಯಿ ಹರಕೆ ಪ್ರತಿಯೊಬ್ಬ ದೇವರಲ್ಲೂ ಕಂಡುಬರುತ್ತದೆ.

೮. ತಲೆಗೂದಲು(ಚೌಲೋಪನಯನ) ತೆಗೆಸುವುದು

'ಚೌಲ' ಎಂದರೆ ತಲೆಕೂದಲು ಎಂಬ ಅರ್ಥವಿದೆ. ಚೌಲ ಎಂಬುದು ಆಡುಭಾಷೆಯಲ್ಲಿ ಚವುಳ, ಜವುಳ, ಜೌಳ ಎಂಬ ಉಚ್ಚಾರವನ್ನು ಪಡೆದುಕೊಂಡಿದೆ. ಗ್ರಾಮೀಣ ಭಾಷೆಯಲ್ಲಿ ಈ ಆಚರಣೆಗೆ ಜವುಳ ತೆಗೆಸುವುದು ಎಂದು ಕರೆಯುತ್ತಾರೆ. ಕೂದಲಿಗೆ ಜಟಾ, ಜಢ, ಜಡೆ, ಜಾವುಳ ಮುಂತಾದ ಹೆಸರುಗಳು ಇವೆ. ಜಾವಳಿ ಎಂದರೆ ಒಂದು ವಿಶಿಷ್ಟ ಜಾತಿಯ ಕುರಿ ಎಂದು ಮರಾಠಿ ಅರ್ಥಕೋಶ ಹೇಳುತ್ತದೆ. ಈ ಕುರಿಯು ಹೊಂದಿದ ಉದ್ದ ಕೂದಲುಳ್ಳ ಉಣ್ಣೆಯಿಂದ ಜವುಳ ಎಂಬ ಹೆಸರು ಕೂದಲಿಗೆ ಬಂದಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಪ್ರಾಚೀನ ಕಾಲದಿಂದಲೂ ಉಪಜೀವನಕ್ಕೆ ಸಹಾಯಕವಾದವುಗಳನ್ನೆಲ್ಲ ದೈವೀಭಾವದಿಂದ ಪೂಜಿಸುವ ರೂಢಿಯು ಕುರುಬ, ಗೌಳಿ, ಜನಾಂಗದಲ್ಲಿ ನಡೆದುಬಂದಿದೆ.

ಅದೇ ರೀತಿ ಉಣ್ಣೆ(ಕೂದಲು)ಯನ್ನು ಉತ್ಪನ್ನ ಎಂದು ಪರಿಗಣಿಸಿದ ಮೊದಲ ಜನಾಂಗ ಹಟ್ಟಿಕಾರ ಕುರುಬರಾಗಿದ್ದಾರೆ. ಪಶುಪಾಲನೆಯ ವೃತ್ತಿಯಿಂದ ಅಲೆಮಾರಿಗಳಾಗಿದ್ದ ಹಾಲುಮತ ಹಟ್ಟಿಕಾರರು ಒಂದೆಡೆ ನೆಲೆಸಿ ಕುರಿ ಸಾಕಾಣಿಕೆಯೊಂದಿಗೆ ಉಣ್ಣೆ ನೇಕಾರಿಕೆಯನ್ನು ಆರಂಭಿಸಿದರು. ಉಣ್ಣೆ ನೇಕಾರಿಕೆ ಉದ್ಯಮವು ಪ್ರಪಂಚದ ಮಾನವ ಕುಲ ಹಟ್ಟಿಕಾರರು ಅನ್ವೇಷಿಸಿದ ಮೊದಲ ಉದ್ಯಮವಾಗಿದೆ. ಮಾನ ಮುಚ್ಚುವ ಉಣ್ಣೆಬಟ್ಟೆ, ಹಾಸಿ ಹೊದೆಯಲು ಬೇಕಾಗುವ ಕಂಬಳಿಗಳನ್ನು ನೇಯುತ್ತ, ಅದನ್ನು ಮಾರುತ್ತ ವ್ಯಾಪಾರವನ್ನು ಆರಂಭಿಸಿದ್ದರು. ಕುರಿ ಉಣ್ಣೆಯು ಪಶುಪಾಲನೆಯ ಉತ್ಪನ್ನವೆನ್ನಿಸಿ ಅದಕ್ಕೆ ಮೌಲ್ಯ ದೊರೆತ ಕಾಲವನ್ನು ಸುಮಾರು ಕ್ರಿ.ಪೂ. ೧೦೦೦ ಅಂದರೆ ಇಂದಿಗೆ ೩೦೦೦ ವರ್ಷಗಳಷ್ಟು ಹಿಂದೆ ಎಂದು ಶಂ.ಬಾ. ಜೋಶಿಯವರು ಗುರುತಿಸುತ್ತಾರೆ. ಅವರೇ ಮುಂದುವರೆದು ಮಾನವನ ಉದ್ಯೋಗದ ಪ್ರಥಮ ಘಟ್ಟವಾದ ಪಶುಪಾಲನೆಯ ಜೊತೆಗೆ ನೇಕಾರಿಕೆ ಮತ್ತು ವ್ಯಾಪಾರವನ್ನು ಹುಟ್ಟು ಹಾಕಿದವರು ಮತ್ತು ಕೃಷಿಯನ್ನು ಆರಂಭಿಸಿದವರು ಹಟ್ಟಿಕಾರ ಹಾಲುಮತ ಕುರುಬರಾಗಿದ್ದಾರೆ ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಇಲ್ಲಿ ಗಮನಿಸಬೇಕಾದ

ಸಂಗತಿಯೆಂದರೆ ಉಣ್ಣೆ ಎಂಬ ಕುರಿಕೂದಲು ಸಂಪಾದನೆಯ ಮೌಲ್ಯ ಪಡೆದು ಉತ್ಪನ್ನವೆಂಬ ಗೌರವಕ್ಕೆ ಪಾತ್ರವಾಗುತ್ತದೆ. ಈ ಸಂಪಾದನೆಯನ್ನು ದೇವರಿಗೆ ಅರ್ಪಿಸುವ ಸಂಪ್ರದಾಯವನ್ನು ಹಾಲುಮತಸ್ಥರೇ ಮೊದಲು ಮಾಡಿದ್ದಕ್ಕೆ ಅನೇಕ ಸಾಕ್ಷಿಗಳಿವೆ. ತಮ್ಮ ಕುಲದೈವವಾದ ಬೀರಪ್ಪನಿಗೆ ಮತ್ತು ಕುಲಗುರು ರೇವಣಸಿದ್ಧರಿಗೆ ಮೀಸಲು ಕುರಿಮರಿಗಳನ್ನು ಬಿಟ್ಟು ಅವುಗಳ ದೇಹದ ಉಣ್ಣೆ ನೇಯುವಷ್ಟು ಉದ್ದವಾದಾಗ ಅಥವಾ ಈ ದೈವಗಳ ಜಾತ್ರೆಯ ಮುಂದೆ ವಿಧಿವಿಧಾನದಲ್ಲಿ ಕತ್ತರಿಸಿ ಕಂಬಳಿ ನೇಯ್ದು ದೇವರಿಗೆ ಅರ್ಪಿಸುವ ಸಂಪ್ರದಾಯವು ಹಾಲುಮತ ಕುರುಬರಲ್ಲಿ ಪ್ರಾಚೀನ ಕಾಲದಿಂದಲೂ ಬೆಳೆದುಬಂದಿದೆ. ಧಾರ್ಮಿಕವಾಗಿ ಇದಕ್ಕೆ ಕಂಥೆ ಕಂಬಳಿ ಸೇವೆ ಎಂಬ ಹೆಸರು ಬಂದಿದೆ. ಮಧ್ಯಕಾಲದಿಂದ ಇತ್ತೀಚೆಗೆ ಈ ಸೇವೆಯ ಅನುಕರಣೆಯಾಗಿ ಉಳಿದ ಜನಾಂಗದವರು ತಮ್ಮ ತಲೆಗೂದಲನ್ನು ಕೊಡುವ ಸಂಪ್ರದಾಯವು ಆರಂಭವಾಯಿತೆಂದು ಹೇಳಬಹುದು. ಈ ಪರಿವರ್ತನೆಯ ಕಾಲವನ್ನು ಸುಮಾರು ಕ್ರಿ.ಶ. ೧೨೦೦ರಿಂದ ಈಚೆಗೆ ಎಂದು ನಾವು ಊಹಿಸಬಹುದಾಗಿದೆ. ಏಕೆಂದರೆ ವಿಷ್ಣುವಿನ ದಶಾವತಾರಗಳಲ್ಲಿ, ಅಮರಸಿಂಹನ ಕೋಶದಲ್ಲಾಗಲಿ ದಾಖಲಿಲ್ಲದ ತಿರುಪತಿ ತಿಮ್ಮಪ್ಪನು ಇತ್ತೀಚೆಗೆ ಅಂದರೆ ೧೨ನೇ ಶತಮಾನದಿಂದ ಈಚೆಗೆ ವಿಷ್ಣುವಿನ ಸ್ಥಾನವನ್ನು ಆಕ್ರಮಿಸಿಕೊಂಡು ಭಕ್ತರಿಂದ ಮುಡಿಸೇವೆ ಪಡೆಯುತ್ತಿದ್ದಾನೆ. ಶಂ.ಬಾ. ಜೋಶಿ ಆಧುನಿಕ ಕಾಲದಲ್ಲಿ ಕುರಿಸಾಕಾಣಿಕೆಯನ್ನು ತೊರೆದು ವ್ಯಾಪರ, ನೌಕರಿ, ಕೃಷಿಯನ್ನು ಅವಲಂಬಿಸಿದ ಕುರುಬ ಜನಾಂಗದವರೂ ಸಹ ಇಂದು ದೇವರಿಗೆ ತಲೆಕೂದಲು ಮುಡಿ ಕೊಡುವ ಸಂಪ್ರದಾಯವನ್ನು ಪಾಲಿಸುತ್ತಿದ್ದಾರೆ.

ಉದಾಹರಣೆಗೆ ಅನೇಕ ಬೀರಲಿಂಗೇಶ್ವರ ಜಾತ್ರೆಯಲ್ಲಿ ಜವಳ ತೆಗೆಯುತ್ತಾರೆ. ತಿಪಟೂರು ತಾಲೂಕು ಆಲೂರು, ಮಂಡ್ಯ ಜಿಲ್ಲೆ, ಸಾತನೂರು, ಕೊಡಿದೊಡ್ಡಿ ಇಲ್ಲಿ ಅನೇಕ ಕುಟುಂಬಗಳಲ್ಲಿ ಜನಸಿದ ಗಂಡು ಅಥವಾ ಹೆಣ್ಣುಮಕ್ಕಳು ತೋಪು ಜಾತ್ರೆ ೧೨ ವರ್ಷಕ್ಕೊಮ್ಮೆ ನಡೆಯುವ ಜಾತ್ರೆಯಲ್ಲಿ ಮುಡಿ ಕೊಡುವು ಆಚರಣೆಯಾಗಿದೆ ಹೊರತು ಕೂದಲು ಕತ್ತರಿಸುವಂತಿಲ್ಲ. ಜಾತ್ರೆ ನಡೆಯುವವರೆಗೆ ಉದ್ದ ಕೇಶಗಳನ್ನು ಹಾಗೆಯೇ ಬಿಟ್ಟುಕೊಂಡಿದ್ದು ಜಾತ್ರೆಯಲ್ಲಿ ದೇವರಿಗೆ ಮುಡಿ ಕೊಟ್ಟು, ನಂತರ ಕೂದಲನ್ನು ತೆಗೆಸಲಾಗುತ್ತದೆ. ಚೌಲೋಪನಯನ ಅಥವಾ ಮುಡಿ ಕೊಡುವವರಲ್ಲಿ ಕುರುಬ ಜನಾಂಗದವರು ಪ್ರಮುಖರಾಗಿದ್ದಾರೆ. ತಾವು ಹರಕೆ ಹೊತ್ತು, ಹರಕೆಯು ಈಡೇರಿದ ನಂತರ ಜಾತ್ರೆಯಲ್ಲಿ ದೇವರಿಗೆ ಮುಡಿಕೊಡುವುದನ್ನು ಕಾಣುತ್ತೇವೆ.

ಕಲೆಗಳು

ಕರ್ನಾಟಕದಲ್ಲಿ ಬೀರಪ್ಪನಿಗೆ ಸಂಬಂಧಿಸಿದ ಕಲೆಗಳು ಸಾಮಾಜಿಕವಾಗಿ ಮಾತ್ರವಲ್ಲದೆ ಸಾಂಸ್ಕೃತಿಕ ವಾಗಿಯೂ ಶ್ರೀಮಂತವಾಗಿದೆ. ಅನಾದಿಕಾಲದಿಂದ ಹರಿದುಬಂದಿರುವ ಸಮಸ್ತ ಜೀವನ ವಿಧಾನದ ಅನುಭವ ಸಾರವಾದ ಜಾನಪದ ಕಲೆಗಳು ಜೀವಂತಿಕೆಯಿಂದ ಕೂಡಿರುತ್ತವೆ. ಪ್ರಾದೇಶಿಕವಾದ ವಿಶಿಷ್ಟವಾದ ಮತ್ತು ಸಮೃದ್ಧವಾದ ಕಲೆಗಳನ್ನು ಸಮುದಾಯವೊಂದು ಜತನದಿಂದ ಕಾಪಾಡಿಕೊಂಡು ಬರುತ್ತದೆ. ಹಾಗೆ ಡೊಳ್ಳುಕುಣಿತ, ದಟ್ಟಿಕುಣಿತ, ಗೊರವರ ಕುಣಿತ, ದಳವಾಯಿ ಅಥವಾ ಬಿಂಗಯ್ಯ ಕುಣಿತ, ಚೌಡಿಕೆ, ವೀರಗಾರರ ಕುಣಿತ, ಪಂಜುದೀವಟಿಗೆ ಸಲಾಮು, ಟಗರುಕಾಳಗ, ಟಗರುಜೋಗಿ ಇಂದಿಗೂ ಜೀವಂತವಾಗಿವೆ. ಆರಾಧನೆ ಮತ್ತು

ಆಚರಣೆಗಳೇ ಕಲೆಗಳಾಗಿ ವಿಕಸನ ಹೊಂದಿ ಪೂರ್ಣಸ್ವರೂಪದ ಕಲೆಗಳಾದದ್ದು ಒಂದು ಬಗೆಯಾದರೆ, ಧರ್ಮ ಮತ್ತು ಪಂಥ ಪ್ರಸಾರಕ್ಕಾಗಿ ಹುಟ್ಟಿದ ಕಲೆಗಳು ನಂತರ ಧರ್ಮ ಮೀರಿ ಸಾರ್ವಜನಿಕ ಕಲೆಗಳಾದುದು ಇನ್ನೊಂದು ಬಗೆ. ಕಲೆಯೇ ವೃತ್ತಿಯಾಗಿ ನಂತರ ಅದೊಂದು ಪರಂಪರೆಯಾಗಿ ಬೆಳೆಯುವ ಕಲೆಗಳು ಸಮುದಾಯದ ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕವಾಗಿರುತ್ತದೆ.

೧. ಡೊಳ್ಳುಕುಣಿತ

ಡೊಳ್ಳು ಎಂದರೆ ಗ್ರಾಮೀಣರಲ್ಲಿ ಹೊಟ್ಟೆ ಎಂದರ್ಥ. ಹೊಟ್ಟೆ ಮೇಲೆ ಹೊತ್ತು ಬಾರಿಸುವ ವಾದ್ಯವೇ ಡೊಳ್ಳು ಎಂಬ ಚರ್ಮವಾದ್ಯ. ಈ ವಾದ್ಯ ಹುಟ್ಟಿದ್ದಕ್ಕೆ ಪೌರಾಣಿಕ ಹಿನ್ನೆಲೆಯಿದೆ. ಇದೊಂದು ಕುರುಬ ಸಮುದಾಯದ ಉತ್ಕೃಷ್ಟ ಕಲೆ. ಬೀರಪ್ಪನಿಗೆ ಪ್ರಿಯವಾದ ವಾದ್ಯ. ಭಕ್ತಿ ಮತ್ತು ಆರಾಧನೆ ಭಾರತೀಯ ಸಂಸ್ಕೃತಿಯ ಧಾರ್ಮಿಕ ಜೀವಾಳ. ಭಕ್ತಿಯ ಭಾವಪರವಶತೆಯಲ್ಲಿ ಭಕ್ತ ಮತ್ತು ದೇವರು ಎಂಬ ಪ್ರತ್ಯೇಕತೆ ದೂರಸರಿದು ಅದ್ವೈತ ಭಾವನೆ ಮೂಡುತ್ತದೆ. ಈ ಹಾಡುಗಳಲ್ಲಿ ಕಂಡುಬರುವ ಮುಖ್ಯದೈವ ಮತ್ತು ಹಾಡುವ ಭಕ್ತರ ಆತ್ಮೀಯತೆ ಆರಾಧನಾ ಮನೋಭಾವದಿಂದ ಹಾಡುವವರನ್ನು ಆಳುಮಕ್ಕಳು ಎಂದು ಕರೆಯಲಾಗುವುದು. ಡೊಳ್ಳು ಬೀರಪ್ಪನ ಹಾಗೂ ಕುರುಬರ ವಾದ್ಯ. ಹಿಂದೆ ಡೊಳ್ಳಾಸುರನೆಂಬ ರಾಕ್ಷಸನು ಶಿವನನ್ನು ಕುರಿತು ತಪಸ್ಸು ಮಾಡಲು ಶಿವನು ಪ್ರತ್ಯಕ್ಷವಾಗಿ ಏನು ವರಬೇಕು ಬೇಡು ಎನ್ನುತ್ತಾನೆ. ಅದಕ್ಕೆ ಆ ರಾಕ್ಷಸ, ಶಿವನನ್ನೇ ತಾನು ನುಂಗುವಂತೆ ವರ ಬೇಡಿದನು. ಶಿವನು ತಥಾಸ್ತು ಎಂದು ಹೇಳಿ ನನಗೆ ಯಾವಾಗ ಹೊರಗೆ ಬಿಡುವೆ ಎಂದು ಮರುಪ್ರಶ್ನೆ ಹಾಕುತ್ತಾನೆ. ಆಗ ರಾಕ್ಷಸ ಪಂಚರಾತ್ರಿ ಕೂಡಿದಾಗ ಎಂದು ಉತ್ತರಿಸುತ್ತಾನೆ. ಪಂಚರಾತ್ರಿಗಳು ಕೂಡಿದಾಗಲೂ ಶಿವನನ್ನು ಹೊರಗೆ ಬಿಡಲಿಲ್ಲ. ಶಿವನಿಲ್ಲದೆ ಕೈಲಾಸ ತಲ್ಲಣಿಸಿತು. ಆಗ ವಿಷ್ಣು ಡೊಳ್ಳಾಸುರನನ್ನು ಕೊಂದು ಶಿವನಿಗೆ ಬಿಡುಗಡೆ ನೀಡುತ್ತಾನೆ.

ಶಿವನು ಯೋಗನಿದ್ರೆಯಲ್ಲಿರುವಾಗ ವಿಷ್ಣುವು ಶಿವನನ್ನು ಎಚ್ಚರಿಸುತ್ತಾನೆ. ಸತ್ತ ರಾಕ್ಷಸನ ಹೊಟ್ಟೆ ಎಲುಬಿನಿಂದ ಡೊಳ್ಳು ಕೊಳವೆ ಮಾಡಿ ಅದರ ಎರಡೂ ಬದಿಗೆ ಚರ್ಮ ಹೊದಿಸಿ ರಾಕ್ಷಸನ ಕರುಳಿನಿಂದ ಬಿಗಿದು ಡೊಳ್ಳು ಸಿದ್ಧಪಡಿಸಿದನು. ಅಲ್ಲದೇ ರಾಕ್ಷಸನ ಕೋರೆಹಲ್ಲಿನಿಂದ ಡೊಳ್ಳನ್ನು ಬಾರಿಸಿದಾಗ ಯೋಗ ನಿದ್ರೆಯಲ್ಲಿದ್ದ ಶಿವನು ಎಚ್ಚರವಾಗುತ್ತಾನೆ.

ಜನಪದ ಕಲೆಗಳಲ್ಲಿಯೇ ಗಂಡುಕಲೆ ಎಂದು ಪ್ರಸಿದ್ಧವಾದುದು ಡೊಳ್ಳುಕುಣಿತ. ಪುರುಷರಿಗೆ ಮೀಸಲಾಗಿದ್ದ ಕಲೆ. ಇತ್ತೀಚೆಗೆ ಸ್ತ್ರೀಯರಲ್ಲೂ ಈ ಕಲೆಯು ಅನಾವರಣಗೊಳ್ಳುತ್ತಿದೆ. ಸದೃಢ ಮೈಕಟ್ಟು ಮತ್ತು ಶಕ್ತಿಯುಳ್ಳ ಕಲಾವಿದರು ಮಾತ್ರ ಸಮರ್ಥವಾಗಿ ಪ್ರದರ್ಶಿಸಬಲ್ಲರು. ಉತ್ತರ ಕರ್ನಾಟಕದ ಬಹುಭಾಗ ದಕ್ಷಿಣ ಕರ್ನಾಟಕದ ಬಹುಭಾಗದಲ್ಲಿ ಹಬ್ಬ ಹರಿದಿನಗಳಲ್ಲಿ ಜಾತ್ರೆ, ಉತ್ಸವಗಳಲ್ಲಿ ದೇವರ ಪೂಜಾಸಂದರ್ಭಗಳಲ್ಲಿ ಡೊಳ್ಳನ್ನು ಬಾರಿಸುತ್ತಾರೆ.

ಕುರುಬ ಸಮುದಾಯದ ಧಾರ್ಮಿಕ ಮುಖಂಡನಿಗೆ ಡೊಳ್ಳು ಕಟ್ಟುವ ಮೊದಲು ಹಕ್ಕಿರುತ್ತದೆ. ಕಾಲಲ್ಲಿ ಗೆಜ್ಜೆ ಹಾಗೂ ವಿಸ್ತೃತದ ಉಡುಪಿನಲ್ಲಿರುವ ಈತ ಸೊಂಟಕ್ಕೆ ಕಂಬಳಿ ಸುತ್ತಿ ಹಗ್ಗದಿಂದ ಡೊಳ್ಳನ್ನು ತನ್ನ

ಸಹಚರರಿಂದ ಕಟ್ಟಿಸಿಕೊಳ್ಳುತ್ತಾನೆ. ನಂತರ ಕಲಾವಿದರು ಸೊಂಟಕ್ಕೆ ಕಂಬಳಿ ಸುತ್ತಿ ಡೊಳ್ಳನ್ನು ಬಿಗಿಸಿಕೊಳ್ಳುತ್ತಾರೆ. ಈರಗಾರ ದೇವರ ಮುಂದೆ ಮೂರು ಬಾರಿ ಡೊಳ್ಳು ಬಾರಿಸಿ ನಂತರ ಜೋರಾಗಿ ಬಡಿಯಲು ಆರಂಭ ಮಾಡುತ್ತಲೇ ಇತರರೂ ಜೋರಿನಿಂದ ಡೊಳ್ಳು ಬಡಿಯುತ್ತಾರೆ. ಬಲಗೈ ಬಡಿತ ಬ್ರಹ್ಮದೊಡ್ಡಾಂವ ಎಂಬ ಸದ್ದು ಮಾಡಿದರೆ ಎಡಗೈ ಪೆಟ್ಟು ಡಾಂವ್ ಎಂಬ ನಾದ ಹುಟ್ಟಿಸುತ್ತದೆ.

ಡೊಳ್ಳು ಕುಣಿತದಲ್ಲಿ ಹಲವು ಪ್ರಕಾರಗಳಿವೆ. ಕುಳಿತು ಬಾರಿಸುವುದು, ಲಾಗ ಹಾಕುವುದು, ಹಾರಿ ಬಾರಿಸುವುದು, ಮಂಡಿ ಬಡಿತ, ಮರೆಗಾಲು ಬಡಿತ, ಗಾಡಿಚಕ್ರದ ಬಡಿತ, ಅಲ್ಲದೇ ಸಹಾಸ ಬಡಿತದ ಪ್ರದರ್ಶನ ಸಹ ನೀಡುತ್ತಾರೆ. ಈ ಸಂದರ್ಭದಲ್ಲಿ ಹಾಡುವ ಹಾಡುಗಳಿಗೆ ಡೊಳ್ಳಿನ ಹಾಡುಗಳೆಂದು ಕರೆಯುವರು. ಪುರಾತನ ಕಾಲದಿಂದಲೂ ದೈವ ಆರಾಧನೆಯಾಗಿ ಬಂದಿರುವ ಈ ಕಲೆಯನ್ನು ಬೇರೆ ಸಂದರ್ಭಗಳಲ್ಲಿ ಬಾರಿಸಬಾರದೆಂಬ ನಂಬಿಕೆ ಈ ಜನರಲ್ಲಿದೆ. ಹೀಗಾಗಿ ಕುರುಬರ ಆರಾಧ್ಯದೈವವಾದ ಬೀರಲಿಂಗೇಶ್ವರ ದೇವರಿಗೆ ಡೊಳ್ಳು ಬಾರಿಸುವುದು ರೂಢಿಗತವಾಗಿ ಬಂದಿರುತ್ತದೆ.

೨. ಈರಗಾರರ ಕುಣಿತ

ಬೀರದೇವರ ಪರಿವಾರದಲ್ಲಿ ಈರಗಾರರು ಪ್ರಮುಖರು. ಇವರು ದಳವಾಯಿಯಂತೆ ದೀಕ್ಷೆ ಪಡೆದು ದೇವರ ಹೆಸರಿನಲ್ಲಿ ಹರಕೆ ಮಾಡಿಕೊಳ್ಳಬೇಕು. ಇವರು ಧಾರ್ಮಿಕ ಸೇವಾನಿರತ ವ್ಯಕ್ತಿಗಳು. ದೇವರ ವಾರದ ದಿನಗಳಲ್ಲಿ ಹಬ್ಬಗಳಲ್ಲಿ, ದಳವಾಯಿಗೆ ಮೈದುಂಬುವ ಸಮಯದಲ್ಲಿ ಈರಿಕೆ ಮಾಡಿಕೊಳ್ಳುತ್ತಾರೆ. ಇವರಲ್ಲಿ ಎರಡು ಬಗೆಯ ಈರಗಾರರಿದ್ದಾರೆ. ಗ್ರಾಮದೇವತೆಗಳ ಈರಗಾರರು ಮತ್ತು ಗಂಡುದೇವರುಗಳ ಈರಗಾರರು.

ಈರಗಾರರ ಹಿನ್ನೆಲೆಯಲ್ಲಿ ಅಡಗಿರುವುದು ಹಿಂಸಾ ಆರಾಧನಾ ಪದ್ಧತಿ. ರಾತ್ರಿಯಿಂದ ಬೆಳಗಿನವರೆಗೆ ಮೆರವಣಿಗೆ ಮುಗಿದ ಬಳಿಕ 'ಧೂಳುಮರಿ' ಸಿಗಿಯಲೆಂದೇ ನಿಯುಕ್ತರಾದವರು. ಇವರು ಬೀರಲಿಂಗೇಶ್ವರನ ಆರಾಧಕರು. ಬೀರೇಶ್ವರನ ಒಕ್ಕಲಾಗಿದ್ದು ಏಳೆಂಟು ಜನರಿರುತ್ತಾರೆ. ಇವರು ಪ್ರಧಾನವಾಗಿ ಎರಡು ಹಿಂಸಾ ಮಾರ್ಗಗಳನ್ನು ಅನುಸರಿಸುತ್ತಾರೆ. ೧. ಸ್ವಹಿಂಸೆ ೨. ಪ್ರಾಣಿ ಹಿಂಸೆ. ಸ್ವಹಿಂಸೆಯಲ್ಲಿ ಇವರು ದೇವರನ್ನು ಸಂತೃಪ್ತಿಗೊಳಿಸಲು ಒಳಿತನ್ನು ಪಡೆಯಲು ಇವರು ನಾಲ್ಕು ಕಬ್ಬಿಣದ ಸಲಾಕೆಯಿಂದ ಅಥವಾ ಕತ್ತಿಗಳಿಂದ ಕೈಮೇಲೆ ಎತ್ತಿ ಜೋರಾಗಿ ಮೈಗೆ ಹೊಕ್ಕುಳಿಗೆ ಹೊಡೆದುಕೊಳ್ಳುತ್ತಾರೆ. ಇವರ ವೇಷಭೂಷಣ ಆಧುನಿಕತೆಗೆ ಹೊಂದಿಕೊಂಡಂತೆ ಕಂಡುಬರುತ್ತದೆ.

ಬಲಿ ಆರಾಧನೆ ಪದ್ಧತಿ ಬೆಳೆದುಬಂದಿರುವ ಬಗೆಯು ಕುತೂಹಲಕಾರಿಯಾದುದು. ತಮ್ಮ ಕುರಿಮಂದೆಯಲ್ಲಿ ಕಾಲು, ಬಾಯಿ, ರೋಗ ಕಾಣಿಸಿಕೊಂಡರೆ ಇಲ್ಲವೇ ತಮ್ಮ ಕಷ್ಟ ಪರಿಹರಿಸಿದರೆ ಕುರಿಮರಿಯನ್ನು ದೇವರಿಗೆ ಬಿಡುವುದಾಗಿ ಹರಕೆ ಹೊರುತ್ತಾರೆ. ಅದರಂತೆ ಕುರಿಗಳಿಗೆ ಕಾಯಿಲೆ ವಾಸಿಯಾದರೆ ತಮ್ಮ ಬಯಕೆ ಈಡೇರಿದರೆ ಕುರಿಯನ್ನು ದೇವರಿಗೆ ಬಿಡುತ್ತಾರೆ. ಹೀಗೆ ದೇವರಿಗೆ ಬಿಟ್ಟ ಕುರಿಯ ಕತ್ತಿಗೆ ಬಾಯಿಹಾಕಿ ರಕ್ತಹೀರುವುದನ್ನು ಗಾವು ಸಿಗಿಯುವುದು ಎನ್ನುತ್ತಾರೆ. ಸ್ವಹಿಂಸೆಯಲ್ಲಿ ಮೈಯಲ್ಲಿ ರಕ್ತ ಬಂದರೆ ದೇವರ ಬಗ್ಗೆ ನಿಷ್ಠೆ ಕಡಿಮೆಯಾಗಿದೆ

ಎಂದು ತಿಳಿಯುತ್ತಾರೆ. ಇವರು ಇರುವವರೆಗೂ ಪಟ್ಟಕ್ಕೆ ಯಾವುದೇ ಭಂಗ ಬರದಂತೆ ಬದುಕಬೇಕಾದ ನಿರ್ಬಂಧವು ಪ್ರಮುಖವಾದುದು.

೩. ದಟ್ಟಿಕುಣಿತ

ದಟ್ಟಿ ಎಂದರೆ ಚಿಕ್ಕ ಸೀರೆ ಎಂದರ್ಥ. ಕುಣಿತದಲ್ಲಿ ಪಾಲ್ಗೊಳ್ಳುವ ಪುರುಷರು ಉದ್ದನೆಯ ಪೈಜಾಮ ತೊಟ್ಟು ಅದರ ಮೇಲೆ ಸೊಂಟದಿಂದ ಮೊಣಕಾಲಿನವರೆಗೆ ನೆರಿಗೆ ಮಾಡಿದ ಕೆಂಪು ಅಥವಾ ಹಸಿರು ಬಣ್ಣದ ಈ ಚಿಕ್ಕ ಸೀರೆಯನ್ನು ತೊಡುತ್ತಾರೆ. ಇದು ನೋಡಲು ಆಕರ್ಷಕವಾಗಿದ್ದು ಅದೇ ಬಣ್ಣದ ಕೆಂಪು ನಿಲುವಂಗಿ, ಮೈಸೂರು ಪೇಟಾ, ಅದಕ್ಕೆ ಸಿಕ್ಕಿಸಿದ ನವಿಲುಗರಿ, ಕುತ್ತಿಗೆಯಿಂದ ಕೆಳಗೆ ಇಳಿಬಿಟ್ಟ ಕೆಂಪಂಚಿನ ದೊಡ್ಡ ದೋತ್ರ, ಮುಖ, ಹಣೆಯ ಮೇಲೆ ಭಂಡಾರ, ಕೊರಳಿನಲ್ಲಿ ಮುತ್ತಿನ ಹಾರ ಸೊಂಟದ ಪಟ್ಟಿ, ಕಾಲಿನ ಗೆಜ್ಜೆಗಳು, ಕುಣಿತದ ಕಲಾವಿದನಿಗೆ ವಿಶೇಷ ಮೆರುಗನ್ನು ತಂದುಕೊಡುತ್ತದೆ. ಈ ಕುಣಿತದಲ್ಲಿ ನಾಲ್ಕೈದು ಜನರಿಂದ ಆರಂಭವಾಗಿ ಇಪ್ಪತ್ತೈದರಿಂದ ಮೂವತ್ತು ಜನರವರೆಗೆ ಪಾಲ್ಗೊಳ್ಳುತ್ತಾರೆ. ಇದಕ್ಕೆ ಪೌರಾಣಿಕ ಆಯಾಮವಿದ್ದು ಸೀರೆಯ ಪ್ರತೀಕವಾಗಿ ಉಳಿದಿದ್ದರೂ ಕೂಡ ಅದರ ಮೆರುಗು ನೀಡುತ್ತದೆ.

ಕೊರಳಿನಿಂದ ಎಡಬಲಬದಿಗೆ ಬರುವ ಹಾಗೆ ದಡಿದೋತರವನ್ನು ಸಿಕ್ಕಿಸಿಕೊಂಡು ಎರಡು ಕೈಗಳಲ್ಲಿ ಕೆಂಪು ವಸ್ತ್ರಗಳನ್ನು ಹಿಡಿಯಲು ತಯಾರಾಗುತ್ತಾರೆ. ಈ ವಸ್ತ್ರಗಳನ್ನು ತಂಡದ ಹಿರಿಯ ಕುಣಿಯುವವರಿಗೆ ಕೊಟ್ಟು ಪ್ರತಿಯೊಬ್ಬರ ಹಣೆಗೆ ಭಂಡಾರ ಹಚ್ಚುತ್ತಾನೆ. ಅವನು ತಿರುಗಿ ಆ ಹಿರಿಯನಿಗೆ ನಮಸ್ಕರಿಸುತ್ತಾನೆ. ಕೈಪೆಟ್ಟು, ತಾಳ, ಸನಾದಿ, ಕೊಳಲು ವಾದಕರಿಗೆ ಕುಣಿತದವರಂತೆ ವೇಷಭೂಷಣವಿದ್ದು ಕರವಸ್ತ್ರ ಮಾತ್ರ ಇರುವುದಿಲ್ಲ. ಪ್ರದರ್ಶನಕ್ಕೆ ಹೊರಡುವ ಮೊದಲು ಒಂದು ನಿಮಿಷ ಆದಿಗತ್ತು ಬಾರಿಸಿ ಸಾಲಾಗಿ ಹೊರಡುತ್ತಾರೆ. ಇದು ಬೀರದೇವರ ಗುಡಿ ಹಾಗೂ ಜಾತ್ರೆ ಉತ್ಸವ ಸಂದರ್ಭಗಳಲ್ಲಿ ಕೆಲವೊಂದು ಕಡೆ ನಡೆಯುತ್ತದೆ. ಇದಲ್ಲದೆ ಬಿಂಗಯ್ಯ ಅಥವಾ ದಳವಾಯಿ ಕುಣಿತ, ಟಗರ ಜೋಗಿ ಕುಣಿತ, ಟಗರಕಾಳಗ, ನಂದಿಧ್ವಜ ಕುಣಿತ, ಪೂಜಾಕುಣಿತ, ವೀರಗಾಸೆ ಕುಣಿತಗಳೂ ಪ್ರದರ್ಶನ ಮಾಡುತ್ತಿದ್ದ ಸಾಂಪ್ರದಾಯಿಕವಾದ ಉತ್ಕೃಷ್ಟ ವೆನಿಸುವ ಕಲೆಗಳಾಗಿದ್ದವು. ಇಂತಹ ಅನೇಕ ಜನಪದ ಕಲೆಗಳು ಕುರುಬರ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಅಭಿವ್ಯಕ್ತಗೊಳಿಸುತ್ತಿದ್ದವು. ಜನರಲ್ಲಿ ಮನೋರಂಜನೆಯ ಉದ್ದೇಶ ಅಲ್ಪವಾಗಿದ್ದು ದೈವಾರಾಧನೆಯ ಸ್ವರೂಪಕ್ಕೆ ಹೆಚ್ಚು ಮಹತ್ವವಿರುತ್ತಿದ್ದುದು ಕಂಡುಬರುತ್ತದೆ. ಆದರೆ ಆಧುನಿಕತೆಯ ಪ್ರವೇಶದ ಜೊತೆಗೆ ಬಂದ ವಿಶಿಷ್ಟ ಎಲೆಕ್ಟ್ರಾನಿಕ್ ಮಾಧ್ಯಮಗಳು ಇವುಗಳ ಅಸ್ತಿತ್ವವನ್ನು ಅಲುಗಾಡಿಸುತ್ತಿವೆ. ಆದರೆ ಸಾಂಸ್ಕೃತಿಕ ಅಭಿವ್ಯಕ್ತಿಯಾದ ಇವುಗಳ ಸತ್ವ ಮಾತ್ರ ಇಂದಿಗೂ ಜೀವಂತವಾಗಿ ಉಳಿದಿರುವುದು ಜನಪದ ಬದುಕಿನ ದ್ಯೋತಕವಾಗಿದೆ.

೪. ಬುಡ್ಡರ ಕುಣಿತ

ಬರಗೂರು ಬೀರಲಿಂಗೇಶ್ವರ ಜಾತ್ರೆಯಲ್ಲಿ ಬುಡ್ಡರ ಕುಣಿತ ವಿಶೇಷವಾಗಿ ಕಂಡುಬರುತ್ತದೆ. ತೋಪು ಜಾತ್ರೆಯಲ್ಲಿ ತಾಳಕ್ಕೆ ತಕ್ಕಂತೆ ಈ ನೃತ್ಯದ ಓಘವನ್ನು ಗುರುತಿಸುತ್ತೇವೆ. ಈ ನೃತ್ಯವು ಜಾತ್ರೆಯ ವಿಶೇಷ ಸಂದರ್ಭದಲ್ಲಿ ಪ್ರದರ್ಶಿಸಲಾಗುತ್ತದೆ.

ಎಲ್ಲ ನೃತ್ಯಗಾರರು ಸ್ನಾನ ಮಾಡಿ ಮಡಿಯುಟ್ಟು ವಿಭೂತಿ ಧರಿಸಿ ದೇವರಿಗೆ ಪೂಜೆ ಸಲ್ಲಿಸಿ ಕುಣಿಯಲು ಆರಂಭಿಸುತ್ತಾರೆ. ಕೆಂಪು ಬಟ್ಟೆ ಧರಿಸುವುದು ಕಂಡುಬರುತ್ತದೆ. ಆವೇಶಗೊಂಡು ವೃತ್ತಾಕಾರವಾಗಿ ಸುತ್ತುತ್ತ ನೆಲದ ಮೇಲೆ ಕೈಯನ್ನು ಊರುತ್ತಾ ನೆಲದ ಮೇಲೆ ಮುಂಗಾಲುಗಳ ಮೇಲೆ ಬರುತ್ತಾ ಕೈಬೀಸುತ್ತಾ ಕುಣಿಯುತ್ತಾರೆ. ಜೋರಾಗಿ ಹಾಡು ಹೇಳುತ್ತಾರೇ ಹ್ಹಾ... ಆಹಾ... ಸೋ.... ಸೋ... ಎಂದು ಶಬ್ದವನ್ನು ಹೊರಡಿಸುತ್ತ ನೃತ್ಯ ಮಾಡುವುದು ಕಂಡುಬರುತ್ತದೆ. ನೃತ್ಯ ಮುಗಿದ ನಂತರ ಬೀರಪ್ಪನ ತೋಪಿನಲ್ಲಿ ಇಟ್ಟು ನಂತರ ಪೂಜೆಯ ಪ್ರಸಾದವನ್ನು ಸ್ವೀಕರಿಸುತ್ತಾರೆ. ಬೀರೇಶ್ವರ ಜಾತ್ರೆಯಲ್ಲಿ ಇದು ವಿಶೇಷವಾದ ಕುಣಿತವಾಗಿದೆ. ನಂತರ ಬೀರದೇವರನ್ನು ಊರ ಒಳಗೆ ತಂದು ಗುಡಿಯಲ್ಲಿ ಕೂಡಿಸಿ ದೇವರಿಗೆ ಪ್ರಸಾದ ಕಾರ್ಯ ನಡೆಯುತ್ತದೆ.

೫. ಸದರ ಕಲೆ

ಸದರ ಕಲೆಯು ಅಪ್ಪಟ ಜನಪದ ಕಲೆಯಾಗಿದೆ. ಕುರುಬರ ದೇವರುಗಳು ಅಲಂಕಾರಗೊಳ್ಳುವ ಗದ್ದಿಗೆಗೊಳ್ಳುವ ವಿಶಿಷ್ಟವಾದ ಸಂದರ್ಭಕ್ಕೆ ಸದರು ಎಂದು ಕರೆಯುತ್ತಾರೆ. ಇದನ್ನು ಇನ್ನೂ ಕೆಲವು ಪ್ರದೇಶಗಳಲ್ಲಿ ಮುಖಪೂಜೆ ಎಂದು ಕರೆಯಲಾಗುತ್ತದೆ. ಇದು ಆರಂಭವಾದದ್ದು ಬೀರದೇವರ ಸಂಪ್ರದಾಯದಲ್ಲಿ ಎಂಬುದು ಗಮನಾರ್ಹ ಸಂಗತಿಯಾಗಿದೆ. ಸದರ ಎಂಬ ಪದದ ಅರ್ಥವನ್ನು ದರ್ಬಾರ್ ಎಂದೂ ಅರ್ಥೈಯಿಸುತ್ತದೆ.

ಮೂಲತಃ ಹಾಲುಮತಸ್ಥರು ವೀರಪರಂಪರೆಯವರು. ಹಲವು ರಾಜ್ಯ, ಸಾಮ್ರಾಜ್ಯಗಳನ್ನು ಕಟ್ಟಿ ಆಡಳಿತ ನಡೆಸಿದವರು. ಕುರುಬರ ಡೊಳ್ಳಿನ ಹಾಡುಗಳಲ್ಲಿ ಈ ವಿಚಾರ ಪ್ರಸ್ತಾಪವಾಗಿದೆ.

ನಮ್ಮವರಯ್ಯ ನಮ್ಮವರೋ
ಹಾಲಮತಕೆ ಹುಟ್ಟಿ ಬಂದವರೋ
ನಾಡ ಒಳಗ ನಾಮಾಂಕಿತ್ಗೊಂಡು
ನಾಡ ಆಳಿದವರು ನಮ್ಮವರೋ
ಎದುರಿಗೆ ಬಂದ ವೈರಿ ಮೆಟ್ಟಿ
ಸದರ ಏರಿದವರು ನಮ್ಮವರೋ

ಹೀಗೆ ವೀರರ ವಂಶವಾದ ಹಾಲುಮತವು ಪ್ರಾಚೀನ ಪೂರ್ವಕಾಲದಿಂದಲೂ ರಾಜ್ಯಾಡಳಿತದಲ್ಲಿ ಪ್ರಮುಖ ಪಾತ್ರ ವಹಿಸಿದ್ದುದನ್ನು ನಾವು ಇತಿಹಾಸದಿಂದಲೂ ನೋಡಬಹುದು ಮತ್ತು ಜನಪದರ ಹಾಡುಗಳಲ್ಲಿಯೂ ಕಾಣಬಹುದು.

ಕುರುಬರು ತಮ್ಮ ದೇವರನ್ನು ಸದರ ಮಾಡುವ ಧಾರ್ಮಿಕ ಸಂಪ್ರದಾಯ ಅಸ್ತಿತ್ವದಲ್ಲಿರುವಂತೆಯೇ ಅದು ಒಂದು ಜನಪದ ವಿಶಿಷ್ಟ ಕಲೆಯಾಗಿ ಉಳಿದು ಬೆಳೆದು ಬಂದಿರುವುದು ಗಮನಾರ್ಹವಾದ ವಿಷಯವಾಗಿದೆ. ದೇವರ ಸದರ ಮಾಡುವ ಮತ್ತು ಪೂಜೆ ಕಟ್ಟುವ ಆಚರಣೆಯ ವಿಧಾನ ಜನಪದ ಹಾಲುಮತ ಮಹಾಕಾವ್ಯದಲ್ಲಿ ಹಾಗೂ ಡೊಳ್ಳಿನ ಹಾಡುಗಳಲ್ಲಿ ಉಲ್ಲೇಖಗೊಂಡಿರುವ ಸಂಗತಿ ಮಹತ್ವಪೂರ್ಣವಾದುದು.

ಕರ್ನಾಟಕದ ಬೆಳಗಾವಿ, ಬಿಜಾಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ಕುರುಬರ ಬೀರದೇವರನ್ನು ಪ್ರತಿ ಹಬ್ಬ ಹುಣ್ಣಿಮೆಗೆ ಸ್ನಾನ ಮಾಡಿಸಿ ವಸ್ತ್ರಾಭರಣ ತೊಡಿಸಿ ಶೃಂಗಾರ ಮಾಡುತ್ತಾರೆ. ನಂತರ ಸದರುಕಟ್ಟೆ ಗದ್ದುಗೆಯ ಮೇಲೆ ಕೂಡಿಸುತ್ತಾರೆ. ಇದಕ್ಕೆ ಸದರ ಮಾಡುವುದು ಎನ್ನುತ್ತಾರೆ. ರಾತ್ರಿಯಿಡೀ ಡೊಳ್ಳಿನ ವಾಲಗ ಸೇವೆ ನಡೆಯುತ್ತದೆ. ಸದರ ಎಂಬ ಪದವು ಸದನ ಎಂಬ ಪದದಿಂದ ನಿಷ್ಪತ್ತಿಯಾಗಿದೆಯೆಂದು ತಿಳಿಯಬಹುದು. ಬೀರದೇವರು ದೇವ ಚಕ್ರವರ್ತಿಯಾಗಿದ್ದಾನೆ. ಈ ದೇವ ಚಕ್ರವರ್ತಿಯು ಸದನದಲ್ಲಿ ಆಸೀನನಾಗಿದ್ದಾನೆ ಎಂಬ ಅರ್ಥವನ್ನು ಇದು ಸ್ಮರಿಸುತ್ತದೆ.

ಸದರ ಏರಿ ನಮ್ಮ ಬೀರಪ್ಪ ಕುಂತಾನ
ನೋಡಲು ಬನ್ನಿರಿ ಜನರೆಲ್ಲ
ನೀವು ಬೇಡ ಬನ್ನಿರಿ ಭಾಗ್ಯವ |

ಸದರ ಮಾಡುವ ಸಂದರ್ಭದಲ್ಲಿ ಕುರುಬರು ಬೀರಪ್ಪನ ಕುರಿತು ಇಂತಹ ಹಾಡುಗಳನ್ನು ಹೇಳುತ್ತಾರೆ. ತಮ್ಮ ದೇವರನ್ನು ಅವನ ಪವಾಡವನ್ನು ಹೊಗಳುತ್ತಾರೆ. ಸದರ ಮಾಡುವುದರಲ್ಲಿ ಹಲವು ಪ್ರಕಾರಗಳಿವೆ. ಮೂಲ ಗದ್ದಿಗೆ ಸ್ಥಾಯಿಕ ಸದರು ಎಂದು ಸದರು ಮಾಡುವಾಗ ದೇವರನ್ನು ಅವುಗಳ ಮೂಲ ಗದ್ದುಗೆಯ ಮೇಲೆ ಕೂಡಿಸಿ ಅವುಗಳಿಗೆ ವಸ್ತ್ರ, ಒಡವೆ, ಹೂವಿನ ಹಾರ, ಬಂಗಾರ, ಆಯುಧಗಳನ್ನು ಯಥಾವತ್ತಾಗಿ ಶೃಂಗರಿಸಿ ಪ್ರದರ್ಶನಕ್ಕೆ ಇಡುತ್ತಾರೆ. ಪಲ್ಲಕ್ಕಿ ಉತ್ಸವಮೂರ್ತಿ ಸದರ ಮಾಡುವಾಗ ದೇವ ದೇವತೆಯನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಶೃಂಗರಿಸಿ ಮೆರವಣಿಗೆಯನ್ನು ಮಾಡಲಾಗುತ್ತದೆ. ಒಟ್ಟಾರೆ ದೇವರನ್ನು ಶೃಂಗರಿಸುವ ಶೃಂಗರಿಸುತ್ತಲೇ ತಮ್ಮ ದೇವರನ್ನು ಹಾಡಿ ಹೊಗಳುವ ಈ ಕಲೆ ಭಾರತದ ಇನ್ನಾವ ಜನಾಂಗದಲ್ಲಿಯೂ ಕಂಡುಬರುವುದಿಲ್ಲ.

೬. ವೀರಗಾಸೆ ಕುಣಿತ

ಈ ಪ್ರಕಾರದ ಕುಣಿತವು ನಾನು ಮೈಸೂರಿನ ಕೆಲವು ಪ್ರಾಂತಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಕಂಡುಕೊಂಡಿದ್ದೇನೆ. ಮದ್ದೂರು, ಮಳವಳ್ಳಿ, ಮಂಡ್ಯ ಜಿಲ್ಲೆಯ ಸಾತನೂರು, ಆಲೂರು ಸುತ್ತಮುತ್ತಲೂ ಹಳ್ಳಿಗಳಲ್ಲಿ ಈ ಆಚರಣೆ ಕಂಡುಬರುತ್ತದೆ. ಬೀರದೇವರ ಜಾತ್ರೆಗಳಲ್ಲಿ ಅರ್ಚಕರು ವೀರಗಾಸೆಯನ್ನು ಧರಿಸುತ್ತಾರೆ. ಕೆಂಪು ಇಜಾರ, ಕೆಂಪು ನಿಲುವಂಗಿ, ಕೊರಳಲ್ಲಿ ಲಿಂಗಸರ, ಚಿಲಗು, ನಾಗಾಭರಣ ಧರಿಸಿ, ಬಿಳಿಚೌಲಿಯನ್ನು ಕಟ್ಟಿ, ಸೊಂಟ ನಡುವಿನ ಪಟ್ಟಿ ಬ್ರಹ್ಮ ಕಪಾಲಗಳನ್ನು ಕಟ್ಟಿ, ಹಸಿರು ಹಳದಿ ಬಟ್ಟೆಗಳಿಂದ ಶೃಂಗರಿಸಿಕೊಳ್ಳುತ್ತಾರೆ. ಕಾಲಿಗೆ ಜಂಗು ಕಟ್ಟುತ್ತಾರೆ. ಈ ರೀತಿ ರುದ್ರಗಾಸೆ ವ್ಯಕ್ತಿ ರೂಪುಗೊಳ್ಳುತ್ತಾನೆ. ದೇವರ ಪೂಜಾ ನೆರವೇರಿಸಿ ಅವನ ಕೈಯಲ್ಲಿ ಹಲಗೆ ದೇವರನ್ನು ಕೊಡುತ್ತಾರೆ. ನಂತರ ವ್ಯಕ್ತಿ ರಂಗದಲ್ಲಿ ರುದ್ರನರ್ತನ ಮಾಡುತ್ತಾನೆ. ಇದನ್ನೇ ಬೀರದೇವರ ರುದ್ರಗಾಸೆ ಕುಣಿತ, ವೀರಗಾಸೆ ಕುಣಿತ ಎನ್ನುತ್ತಾರೆ.

ಬೀರಪ್ಪನ ದೇವಸ್ಥಾನಗಳಲ್ಲಿ ಪೂಜೆ ನೆರವೇರಿಸುವ ಪೂಜಾರಿಗಳು ಲಿಂಗ ಕಟ್ಟಿಕೊಂಡು ಜಾತ್ರೆ, ಹಬ್ಬಹರಿದಿನಗಳಲ್ಲಿ ಆಚರಿಸುತ್ತಾರೆ. ವೀರಗಾಸೆಯನ್ನು ಕಟ್ಟಿಕೊಂಡ ಜನರು ತಮಟೆ ಹಲಗೆ ನಗಾರಿಯ

ನಾದಕ್ಕೆ ಹೆಜ್ಜೆ ಹಾಕುತ್ತಾ ಕುಣಿಯುತ್ತಾರೆ. ತಮಟೆಯ ಸದ್ದಿಗೆ ಆವೇಶಿತರಾದ ಅರ್ಚಕರನ್ನು ಶಾಂತಗೊಳಿಸಲು ವೀರಭದ್ರನನ್ನು ಹೊಗಳುವ ಒಡಪುಗಳನ್ನು ಹೇಳುತ್ತಾರೆ. ಶಿವಸ್ವರೂಪಿಯಾದ ವೀರಭದ್ರನನ್ನು ಶಾಂತಗೊಳಿಸಲು ಹೀಗೆ ಮಾಡುತ್ತಾರೆ. ವೀರಗಾಸೆ ಕಟ್ಟಿದ ವೀರಮಕ್ಕಳು ಹಲವಾರು ವೀರ ಸನ್ನಿವೇಶದ ಒಡಪುಗಳನ್ನು ಹೇಳುತ್ತಾರೆ. ಇಲ್ಲಿಯ ಪೂಜಾರಿಗಳು ಹಲವು ಮಡಿ ಮೈಲಿಗೆಯನ್ನು ಆಚರಿಸುತ್ತಾರೆ. ಮದ್ಯ ಮಾಂಸ ದುರ್ವ್ಯಸನಗಳಿಂದ ದೂರವಿರುತ್ತಾರೆ. ಇಲ್ಲಿನ ಪೂಜಾರಿಗಳು ಭಕ್ತರಿಗೆ ದೈವಸ್ವರೂಪಿಗಳು ಎನಿಸಿದ್ದಾರೆ. ಪೂಜಾರಿಗಳು ಲಿಂಗಧಾರಣೆ ಮಾಡುತ್ತಿದ್ದು ದಿನಕ್ಕೆ ಮೂರು ಬಾರಿ ಇಷ್ಟಲಿಂಗ ಪೂಜೆಯನ್ನು ಮಾಡಿಕೊಳ್ಳುತ್ತಾರೆ. ಭಕ್ತರು ಪೂಜಾರಿಗಳನ್ನು ಭಕ್ತಿಗೌರವದಿಂದ ಕಾಣುತ್ತಾರೆ.

೭. ಹುಲಿಮನೆ ಕುಣಿತ

ಕರ್ನಾಟಕದ ಕೆಲವೊಂದು ಭಾಗಗಳಲ್ಲಿ ಈ ಹುಲಿಮನೆ ಕುಣಿತ ಆಚರಣೆಯು ನೋಡಿದಂತೆ ದಾವಣಗೆರೆ, ಮಂಡ್ಯ, ಚಿಕ್ಕಮಗಳೂರು, ಕಡೂರು, ಬೀರೂರು, ಇನ್ನೂ ಮುಂತಾದ ಕಡೆಗಳಲ್ಲಿ ಕಂಡುಬರುತ್ತದೆ. ವಿಶೇಷವಾಗಿ ಬೀರಪ್ಪನ ತೋಪಿನ ಜಾತ್ರೆಯಲ್ಲಿ ಬೀರದೇವರಿಗೆ ಮೀಸಲುಗೂಡೆ ಅರ್ಪಿಸುವ ಆಚರಣೆ ಇರುತ್ತದೆ. ಕುಂಭ ಹೊತ್ತ ಮಹಿಳೆಯರು ಮತ್ತು ಮೀಸಲುಗೂಡೆ ಹೊತ್ತ ಮಹಿಳೆಯರು ವಾದ್ಯವೃಂದದವರೊಂದಿಗೆ ಬೀರದೇವರ ದೇವಾಲಯಕ್ಕೆ ಬರುತ್ತಾರೆ. ಬರುವ ಸಂದರ್ಭದಲ್ಲಿ ಗಂಡಸರು ಹುಲಿಮನೆ ಕುಣಿತವನ್ನು ಕುಣಿಯುತ್ತಾ ಬರುತ್ತಾರೆ. ಕಂಬಳಿಯನ್ನು ನೆಲಕ್ಕೆ ಹಾಸಿ ಅದರ ಮೇಲೆ ತುಪ್ಪ ಬಾಳೆಹಣ್ಣು ಕಲಸಿದ ಪಾತ್ರೆಯನ್ನು ಇಡುತ್ತಾರೆ. ಹಾಸಿದ ಕಂಬಳಿಯ ಸುತ್ತ ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ಜನರು ಹಸಿವೆಗಾಗಿ ಕಾತರಿಸುವ ಹುಲಿಗಳಂತೆ ಕುಣಿಯುತ್ತಾರೆ. ಈ ಕುಣಿತದಲ್ಲಿ ಹೋರಾಟ ಮಾಡುತ್ತಿರುವ ಹುಲಿಯಂತೆ ಅರ್ಭಟಿಸುವಂತೆ ಕುಣಿಯುವುದು ಕಂಡುಬರುತ್ತದೆ. ಕುಣಿಯುತ್ತ ಕುಣಿಯುತ್ತ ಅದರಲ್ಲಿ ಒಬ್ಬ ಪ್ರಸಾದವನ್ನು ಎಂಜಲು ಮಾಡುತ್ತಾನೆ. ಆ ಎಂಜಲು ಮಾಡಿದ ಪ್ರಸಾದವನ್ನು ದೇವರ ಪ್ರಸಾದವೆಂದು ಭಕ್ತರು ಸ್ವೀಕರಿಸುತ್ತಾರೆ. ಇಲ್ಲಿಗೆ ಈ ಕುಣಿತ ಮುಕ್ತಾಯವಾಗುತ್ತದೆ.

೮. ಮುಳ್ಳುಪಲ್ಲಕ್ಕಿ ಕುಣಿತ

ಇದೇ ಕುಣಿತವನ್ನು ಕೆಲವು ಜಿಲ್ಲೆಗಳಲ್ಲಿ ಗಾಳಿಪಲ್ಲಕ್ಕಿ, ವೀರಪಲ್ಲಕ್ಕಿ ಎಂದು ಕರೆಯುವುದುಂಟು. ಇಲ್ಲಿ ಮುಖ್ಯವಾಗಿ ಕಂಡುಬರುವಂತೆ ಮಂದಿರಗಳಲ್ಲಿ ಬೀರಪ್ಪ ದೇವರ ಎರಡು ಪಲ್ಲಕ್ಕಿಗಳು ಕಂಡುಬರುತ್ತವೆ. ಒಂದು ಬೀರದೇವರ ಉತ್ಸವದಲ್ಲಿ ಭಾಗಿಯಾಗುವ ಮುಖ್ಯಮೂರ್ತಿ ಪಟ್ಟಕ್ಕೆ ಕೂಡುವ ಪಲ್ಲಕ್ಕಿ, ಇನ್ನೊಂದು ಬೀರದೇವರ ಪ್ರತಿರೂಪವಾದ ದಳವಾಯಿಮೂರ್ತಿಯನ್ನು ಇರಿಸಿದ ವೀರಪಲ್ಲಕ್ಕಿ. ಈ ವೀರಪಲ್ಲಕ್ಕಿ ಬೀರದೇವರ ವೀರತ್ವದ ಶಕ್ತಿಯ ಸಂಕೇತವೆಂದು ಹೇಳುತ್ತಾರೆ. ಇಲ್ಲಿ ಹನ್ನೆರಡು ವರ್ಷಕ್ಕೊಮ್ಮೆ ನೆರವೇರುವ ಜಾತ್ರೆಯನ್ನು ಭಯ ಭಕ್ತಿ ಶ್ರದ್ಧೆಯಿಂದ ಆಚರಿಸುತ್ತಾರೆ. ದಳವಾಯಿ ಮೈದುಂಬುವ ಪೂರ್ವ ಮುಳ್ಳುಪಲ್ಲಕ್ಕಿಯನ್ನು ಏರಿ ಮೈದುಂಬುವ ವಾಡಿಕೆ ಇದೆ. ಮುಳ್ಳುಪಲ್ಲಕ್ಕಿಯನ್ನು ಹೊತ್ತವರ ಮೈಯನ್ನು ದೈವ ತುಂಬಿಕೊಳ್ಳುತ್ತದೆ. ಕುಣಿತ ಜೋರಾಗುತ್ತದೆ. ಗಾಳಿಯ ವೇಗದಲ್ಲಿ ರಭಸವಾಗಿ ಓಡತೊಡಗುತ್ತದೆ. ಅದಕ್ಕೆ ಇದನ್ನು

ಗಾಳಿಪಲ್ಲಕ್ಕಿಯೆಂದು ಕರೆಯುತ್ತಾರೆ. ಜಾತ್ರೆಯಲ್ಲಿ ಸೇರಿದ ಭಕ್ತರಿಗೆ ಆಶೀರ್ವದಿಸುತ್ತದೆ. ಬೀರಪ್ಪನ ವೀರತ್ವ, ಪೌರುಷತ್ವ, ಶಕ್ತಿಯ ಸಂಕೇತವಾದ ಈ ಕುಣಿತ ಶಿವನ ಶಕ್ತಿಯ ಸ್ವರೂಪದಂತೆ ಭಾಸವಾಗಿ ಭಕ್ತರಿಗೆ ತೋರುತ್ತದೆ.

೯. ಕದಳಿ ಕುಣಿತ

ಇದೊಂದು ಬೀರದೇವರ ಸೇವಾಕಾರ್ಯವೂ ಮತ್ತು ಸಾಂಸ್ಕೃತಿಕ ಕಲೆಯೂ ಆಗಿದೆ. ಕದಳಿ ಕುಣಿತವನ್ನು ಬೀರೂರು ಬೆಂಕಿಬೀರಲಿಂಗೇಶ್ವರ ಮತ್ತು ಕಡೂರು ತಾಲೂಕು ಯಳ್ಳಂಬಳಸೆ ಗ್ರಾಮದ ಬೀರದೇವರ ಸನ್ನಿಧಿಯಲ್ಲಿ ನಡೆಯುತ್ತದೆ. ಮೊದಲಿಗೆ ಡೊಳ್ಳು ಬಾರಿಸುವುದು ನಡೆಯುತ್ತದೆ. ಬೀರಪ್ಪನಿಗೆ ಪ್ರತಿಯೊಂದು ಹಂತದಲ್ಲಿ ಸೇವೆಯನ್ನು ಸಲ್ಲಿಸುತ್ತಾರೆ. ಪೂಜಾರಿಯ ಮಂಡಲಕ್ಕೊಮ್ಮೆ ಬೀರಪ್ಪನಿಗೆ ಮಂಗಳಾರತಿಯನ್ನು ಮಾಡಿ ಹೊರಗೆ ಬಂದು ಈರಗಾರ ಡೊಳ್ಳು ಸತ್ತಿಗೆ ಮತ್ತು ಉರಿಯುವ ದೀವಟಿಗೆಗೆ ಆರತಿ ಎತ್ತುವುದು ಕಂಡುಬರುತ್ತದೆ. ಹೀಗೆ ಬೀರದೇವರು ಇಡೀ ರಾತ್ರಿ ನೂರೊಂದು ಸಲ ಪೂಜೆಗೊಳ್ಳುವುದು ಮತ್ತು ಒಂದು ಬಾರಿಗೆ ಒಂದು ಕದಳಿ(ಬಾಳೆ) ಮರ ಕಡಿದು ದೇಗುಲದ ಕಂಭಗಳಿಗೆ ಕಟ್ಟುವುದು ಕಂಡುಬರುವ ಆಚರಣೆಯಾಗಿದೆ. ಜೊತೆಗೆ ಚಾಮರಸೇವೆ ನಿರಂತರವಾಗಿ ನಡೆಯುತ್ತದೆ.

ಸುಮಾರು ನಡುರಾತ್ರಿ ಕಳೆದ ಮೂರು ಗಂಟೆಯ ಸಮಯಕ್ಕೆ ದೇವಸ್ಥಾನದ ಮುಖ್ಯ ಈರಗಾರರನು ದೇವಾಲಯದಲ್ಲಿ ಕಾಸೆವೇಷ ಧರಿಸಿ ದೇವರ ಸ್ನನಿಧಿಯಲ್ಲಿ ಪೂಜೆಗೊಂಡು ರಂಗಪ್ರವೇಶ ಮಾಡುತ್ತಾನೆ. ಈಗ ಒಟ್ಟು ಹನ್ನೆರಡು ಜನ ವೀರಗಾರರು ಈ ಸೇವೆಯಲ್ಲಿ ಭಾಗವಹಿಸುತ್ತಾರೆ. ಕದಳಿ ಕುಣಿತಕ್ಕೆ ಈಗ ಪೂರ್ಣಾತಿ ರಂಗು ಬಂದು ಕುಣಿತ ಕಳೆಕಟ್ಟುವುದು ವಿಶೇಷ. ಬೆಳಗಿನ ಎಂಟು ಅಥವಾ ಒಂಬತ್ತು ಗಂಟೆಗಳವರೆಗೆ ನಡೆಯುವ ಈ ಕುಣಿತವು ಅಂತಿಮ ಹಂತಕ್ಕೆ ಬಂದಾಗ ಬೀರಪ್ಪನ ಸತ್ತಿಗೆಯೊಂದಿಗೆ ಎಲ್ಲ ಈರಗಾರರು ವಾದ್ಯದವರು ಮತ್ತು ಹಾಡುಗಾರರು ಮೆರವಣಿಗೆಯಲ್ಲಿ ಊರಿನ ಎಲ್ಲ ದೇವಾಲಯಗಳಿಗೆ ತೆರಳುತ್ತಾರೆ. ಪ್ರತಿ ದೇವಾಲಯದ ಮುಂದೆ ಹಾಕಿದ ಉತ್ಸವದ ಚಪ್ಪರದಲ್ಲಿ ದೇವರಿಗೆ ಕದಳಿ ಕುಣಿತದ ಸೇವೆ ಸಲ್ಲಿಸುತ್ತಾರೆ.

೧೦. ದಳವಾಯಿ ಕುಣಿತ

ಕುರುಬ ಜನಾಂಗದ ಕುಲದೈವ ಬೀರಪ್ಪನ ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ತೋಪುಜಾತ್ರೆಯಲ್ಲಿ ಹಾಗೂ ಕಾರ್ತಿಕ ಮಾಸದಲ್ಲಿ ನಡೆಯುವ ಬೀರಪ್ಪನ ಹಬ್ಬದಂದು ಅಥವಾ ವಿಜಯದಶಮಿಯ ದಿನ ಬೀರಪ್ಪ ಬನ್ನಿ ಮುಡಿಯುವಂತಹ ವಿಶಿಷ್ಟ ಸಂದರ್ಭಗಳಲ್ಲಿ ಜರುಗುವ ಆಚರಣೆಯಲ್ಲಿ ದಳವಾಯಿ ಕುಣಿತವನ್ನು ನೋಡುತ್ತೇವೆ. ಈರಗಾರರು "ಸುಕ ಸುಕೋಂ, ಶಿವ ಶಿವೋ ಸುವ್ವೋsss" ಎಂದು ಹೇಳಿದಾಕ್ಷಣ ದಳವಾಯಿ ಕುಣಿತ ಆರಂಭವಾಗುತ್ತದೆ. ವೃತ್ತಾಕಾರವಾಗಿ ಚಲಿಸುತ್ತಾರೆ. ಒಟ್ಟಾರೆ ಕುಣಿತದ ಲಯ ವೀರನ ಕುದುರೆಯೊಂದರ ಹಿಂಗಾಲು ಮುಂಗಾಲುಗಳ ನಾಗಾಲೋಟದಂತೆ ಭಾಸವಾಗುತ್ತದೆ. ದಳವಾಯಿ ಕುದುರೆಯೇರಿ ಕಣ್ಣುಮುಚ್ಚಿ ಕುಳಿತ ಬೀರದೇವರಂತೆ ಕಂಗೊಳಿಸುತ್ತಾನೆ. ಇವನ ತಲೆಯ ಮೇಲೆ, ಕೆಂಪು, ಹಸಿರು, ದೇವರ ಛತ್ರಿಯು ತಲೆ ಮೇಲೆ ತಿರುಗಿಸುತ್ತಾರೆ. ಈ ಛತ್ರಿಯನ್ನು ಒಬ್ಬ ವ್ಯಕ್ತಿ ತಿರುಗಿಸುತ್ತಾ ದಳವಾಯಿಯನ್ನು ಅನುಸರಿಸುತ್ತಾನೆ.

ಛತ್ರಿ ತಿರುಗುವುದು ಜೋರಾದಂತೆ ವಾದ್ಯಗಳು, ಕರಡೆ, ವಾಲಗ ಡೊಳ್ಳುಗಳು ಬಾರಿಸುವುದು ಜೋರಾಗುತ್ತದೆ. ಬಾರಿಸುವಾಗ ದಳವಾಯಿ ಕುಣಿತಕ್ಕೊಂದು ವೀರತ್ವದ ರಂಗೇರುತ್ತದೆ.

೧೧. ದೀಪದ ಕುಣಿತ

ಬೆಳಗಾವಿ ಜಿಲ್ಲೆಯಲ್ಲಿ ಈ ಕುಣಿತವು ಹೆಸರುವಾಸಿಯಾಗಿದೆ. ಈ ಕುಣಿತ ಒಂದು ಕಲಾತ್ಮಕ ಹಂತದಲ್ಲಿ ದೀಪದ ನೃತ್ಯವನ್ನು ಅಭಿನಯಿಸಲಾಗುತ್ತದೆ. ದಟ್ಟಿ ಕುಣಿತದಲ್ಲಿ ತಲೆಯ ಮೇಲೆ ಸಮ ಉದ್ದವಾದ ದೀಪ ಹೊತ್ತು ಕೆಲವು ತಂಡದವರು ಸಾಲಾಗಿ ನರ್ತಿಸುತ್ತಾರೆ. ಇತ್ತೀಚಿನ ಇಪ್ಪತ್ತು ವರ್ಷಗಳಲ್ಲಿ ಈ ದೀಪನೃತ್ಯವು ದಟ್ಟಿ ನೃತ್ಯದಷ್ಟೇ ಆಕರ್ಷಕ ಕಲೆಯಾಗಿ ಬೆಳೆಯುತ್ತಿದೆ. ದೀಪದ ಕುಣಿತವು ದಟ್ಟಿಕುಣಿತದ ಒಂದು ಅಂಗವಾಗಿದೆ. ದಟ್ಟಿ ಕುಣಿತದ ಮುಕ್ತಾಯ ಅಥವಾ ಮಂಗಲದ ವೇಳೆಯಲ್ಲಿ ದಟ್ಟಿ ವೇಷ ಭೂಷಣಗಳಿದ್ದು ಬರಿದೆಲೆಯ ಮೇಲೆ ಉರಿಯುತ್ತಿರುವ ಸಮೆಯನ್ನು ಇಟ್ಟುಕೊಂಡು ಕುಣಿತವನ್ನು ಮಾಡುತ್ತಾರೆ. ದಟ್ಟಿಕುಣಿತದ ವೀರ, ರೌದ್ರ, ರಸಗಳಲ್ಲಿ ಕುಣಿತದವರು ಪರಾಕ್ರಮ ತೋರಿಸುವ ಕೈಪೆಟ್ಟು ಈ ವಾದ್ಯ ದೀಪ ಕುಣಿತಕ್ಕೂ ಪ್ರಮುಖ ವಾದ್ಯವಾಗಿದೆ. ಈ ಕುಣಿತಕ್ಕೆ ಪಕ್ಕವಾದ್ಯಗಳೆಂದರೆ ಕೈ ತಾಳಗಳು, ಸನಾದಿ ಮತ್ತು ಕೊಳಲು. ಇತ್ತೀಚೆಗೆ ಚರ್ಮವಾದ್ಯಗಳಾದ ತಬಲ ಉಪಯೋಗಿಸುವುದು ಕಂಡುಬಂದಿದೆ. ಮಂಗಳಮಯ ಕುಣಿತವಾಗಿರುವ ದೀಪದ ಕುಣಿತದಲ್ಲೂ ವಾದ್ಯಮೇಳದವರು ಉತ್ತರ ಕರ್ನಾಟಕ ಭಾಗದವರು ಮುಂದಾಗುತ್ತಾರೆ. ಉರಿಯುವ ಸಮ ಹೊತ್ತು ೫, ೭, ೯, ೧೧ ಹೀಗೆ ಕಲಾವಿದರು ಎರಡು ಕೈಗಳಲ್ಲಿ ಕೆಂಪು ವಸ್ತ್ರ ಬೀಸುತ್ತ ಕುಣಿತದ ಅಭಿನಯ ತೋರುತ್ತ ಪ್ರೇಕ್ಷಕರಿಗೆ ಎದುರಾಗುತ್ತಾರೆ. ಕೈಪೆಟ್ಟಿನ ಸಂಗೀತವನ್ನು ಪ್ರದರ್ಶಿಸಲಾಗುತ್ತದೆ.

ಕಡಽ ಕಡಽ ಕಡಽ ಕಡಽ ಕಡಽ ಕಡಽ ಕಡಽ

ದಾದಿಮ್ ದಾದಿಮ್ ದಾದಿಮ್ ದಾದಿಮ್ ದಾದಿಮ್

ಹೀಗೆ ನುಡಿಸುತ್ತಿರುತ್ತಾರೆ. ಇದೇ ರೀತಿ ವಾದ್ಯಗಳನ್ನು ನುಡಿಸುತ್ತಾರೆ. ಸಾಲಕುಣಿತ, ಮಂಡಿಕುಣಿತ, ನವಿಲುಕುಣಿತಗಳನ್ನು ಕುಣಿದು ದೀಪದತ್ತ ಸಮೆಯವನ್ನು ತಲೆಯಲ್ಲಿಯ ಸರಿಸುತ್ತಾ ಎರಡೂ ಕಾಲುಗಳಲ್ಲಿ ತೂಕದಿಂದ ಮುಂಗೈ ನೆಲಕ್ಕೂರಿ ಸಮಯವನ್ನು ಹಿಂದೆ ತಲೆಗೆ ಸರಿಸಿ ಕೈಗಳನ್ನು ಹಿಂದೆ ಕಟ್ಟಿರುತ್ತಾರೆ. ಅಷ್ಟರಲ್ಲಿ ಅವರೆದರು ನೋಟುಗಳನ್ನು ಇಡುತ್ತಾರೆ. ಕುಣಿತದವರ ನಾಲಗೆಗಳಿಂದ ತಮ್ಮೆದುರು ಇರುವ ನೋಟುಗಳನ್ನು ತೆಗೆದುಕೊಳ್ಳುತ್ತಾರೆ. ಈ ದೃಶ್ಯವು ಬಹು ಆಕರ್ಷಣೀಯವಾಗಿ ಕಂಡುಬರುತ್ತದೆ. ಕಲಾವಿದರ ಕೈಗಳಿಗೆ ಪಣತಿ ದೀಪಗಳನ್ನು ನೀಡುತ್ತಾರೆ. ಕೈಗಳನ್ನು ಆಚೆ ಈಚೆ ಮಾಡುತ್ತ ಕುಣಿಯುತ್ತಾರೆ. ಹೀಗೆ ಕುಣಿದು ಸಾಲಾಗಿ ನಿಂತು ದೀಪಗಳನ್ನೆಲ್ಲ ನೆಲಕ್ಕೆ ಇಟ್ಟು ಕೈಮುಗಿದು ಕುಣಿತವನ್ನು ಕೊನೆಗೊಳಿಸುತ್ತಾರೆ.

೧೨. ಭಿಂಗಯ್ಯನ ಕುಣಿತ

ಇದೊಂದು ಸಾಂಪ್ರದಾಯಿಕ ಕುಣಿತವಾಗಿದೆ. ಇದನ್ನು ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕು, ಖಂಡುಗದಹಳ್ಳಿಯಲ್ಲಿ ನೆಲೆಸಿರುವ ಕುರುಬರ ಮನೆದೇವರಾದ ಸೋಮೇಶ್ವರನಿಗೆ ಮಾಡುತ್ತಾರೆ. ಇವನು ಬೀರಪ್ಪನ ಒಂದು ರೂಪ. ಈ ಆಚರಣೆಯಲ್ಲಿ ಭಿಂಗಯ್ಯನ ಕುಣಿತಕ್ಕೆ ಒಂದು ಪೌರಾಣಿಕ ಕಥೆ ಬರುತ್ತದೆ.

ಸೋಮೇಶ್ವರ ಬೀರಪ್ಪನೊಂದಿಗೆ ದುಷ್ಟಸಂಹಾರಕ್ಕೆ ಪಾರ್ವತಿಯು ಶಕ್ತಿ ಅವತಾರವನ್ನು ತಾಳುತ್ತಾಳೆ. ಯುದ್ಧದ ನಂತರ ಅವಳ ರೌದ್ರಾವತಾರವನ್ನು ಶಾಂತಗೊಳಿಸಲು ಶ್ರೀಕೃಷ್ಣನ ಆದೇಶದಂತೆ ಸೋಮೇಶ್ವರನು ಭೃಂಗಿ ಅವತಾರವನ್ನು ತಾಳಿ ಕುಣಿದು ಅವಳನ್ನು ಶಾಂತಗೊಳಿಸುತ್ತಾನೆ. ಸೋಮಲಿಂಗನು ಭೃಂಗಿ ಅವತಾರ ತಾಳುವುದರ ಉದ್ದೇಶ ಶಕ್ತಿ ದೇವತೆಯ ಆವೇಶವನ್ನು ಇಳಿಸುವುದಾದ್ದರಿಂದ ಅದಕ್ಕೆ ತಕ್ಕಂತೆ ಈ ನೃತ್ಯದ ಓಘವನ್ನು ಗುರುತಿಸುತ್ತೇವೆ. ಇಲ್ಲಿ ಕಾಣುವ ಇನ್ನೊಂದು ವಿಶೇಷವೆಂದರೆ ಈ ನೃತ್ಯವನ್ನು ಭಿಂಗಯ್ಯನವರು ನಡೆಸುತ್ತಾರೆ. ನಂತರ ಪೂಜೆಯ ಪ್ರಸಾದವನ್ನು ಸ್ವೀಕರಿಸುತ್ತಾರೆ. ಸ್ಥಾವರಮೂರ್ತಿಯ ಮುಂದೆ ಈ ನೃತ್ಯವನ್ನು ಪ್ರದರ್ಶಿಸ ಲಾಗುತ್ತದೆ. ಕುತೂಹಲವೆಂದರೆ ಸೋಮೇಶ್ವರನು ಉತ್ಸವಮೂರ್ತಿಯ ರೂಪದಲ್ಲಿ ಪಲ್ಲಕ್ಕಿಯನ್ನೇರಿ ಭೃಂಗಿಗಳ ಜೊತೆ ಸೇರಿ ಕುಣಿಯುತ್ತಾನೆ ಮತ್ತು ಪ್ರದಕ್ಷಿಣೆ ಹಾಕುತ್ತಾನೆ.

ಭೃಂಗಿ ಪಟ್ಟಗಟ್ಟಿಸಿಕೊಂಡಿರುವ ಎಲ್ಲ ಭಿಂಗಯ್ಯನವರು ಸ್ನಾನ ಮಾಡಿ ಮಡಿಯುಟ್ಟು ಜೋಳಿಗೆ ಧರಿಸಿ ಕೈಯಲ್ಲಿ ಚಾಟಿ ಹಿಡಿದುಕೊಳ್ಳುತ್ತಾರೆ. ದೇವಸ್ಥಾನದ ಮುಂದೆ ಕಂಬಳಿ ಅಥವಾ ಇತರ ಗದ್ದುಗೆಯ ಮೇಲೆ ಬಾಳೆ ಹಣ್ಣಿನ ರಸಾಯನ ಮಾಡಿ ಇಟ್ಟುಕೊಂಡು ಸುತ್ತಲೂ ಚಾಟಿ ಬೀಸುತ್ತ ಕುಣಿಯುವುದು ಕಂಡುಬರುತ್ತದೆ. ಆವೇಶಗೊಂಡು ವೃತ್ತಾಕಾರವಾಗಿ ಸುತ್ತುತ್ತ ನೆಲದ ಮೇಲೆ ಮುಂಗಾಲುಗಳ ಮೇಲೆ ಕೂಡುತ್ತ ಕುಪ್ಪಳಿಸುತ್ತಾ ನೆಗೆಯುತ್ತ ನೃತ್ಯ ಮಾಡುತ್ತಾರೆ. ಜೋರಾಗಿ ಹಾ ಆಹಾ ಎಂದು ಶಬ್ದವನ್ನು ಹೊರಡಿಸುತ್ತ ನೃತ್ಯ ಮಾಡುವುದು ಕಂಡುಬರುತ್ತದೆ. ಈ ನೃತ್ಯದ ಉದ್ದಕ್ಕೂ ಚಾಟಿಗಳ ಛಟ್ ಛಟ್... ಶಬ್ದಗಳು ಕೇಳಿಸುತ್ತವೆ. ನಡುವೆ ಭಕ್ತರಿಗೆ ಚಾಟಿಯಿಂದ ನವಿರಾಗಿ ಹೊಡೆದು ಆಶೀರ್ವಾದವನ್ನು ಮಾಡುತ್ತಾರೆ. ನೃತ್ಯ ಮುಗಿದ ನಂತರ ಪೂಜೆಯ ಪ್ರಸಾದವನ್ನು ಸ್ವೀಕರಿಸುತ್ತಾರೆ. ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ಸೋಮೇಶ್ವರ ಬೀರಪ್ಪನ ಜಾತ್ರೆಯಲ್ಲಿ ದೇವರು ಉಯ್ಯಾಲೆಯಾಡುವಾಗ ದೇವರ ಮುಂದೆ ಭಿಂಗಯ್ಯ ನೃತ್ಯ ಮಾಡುತ್ತ ಭಕ್ತಿಯೇ ಮೈದುಂಬಿದವರಾಗಿ ಭಿಂಗಯ್ಯನವರು ಭಾವಪರವಶರಾಗುವುದು ಕಂಡುಬರುತ್ತದೆ. ಒಂದು ದೊಡ್ಡ ಹಾಸಿಗೆ ಮೇಲೆ ಮಂಡಕ್ಕಿ, ಬಾಳೆ ಹಣ್ಣಿನ ರಾಶಿ ಸುರಿಯುತ್ತಾರೆ. ಅದರಲ್ಲಿ ಸ್ವಲ್ಪ ಭಾಗವನ್ನು ದೇವರ ಮುಂದೆ ಇಟ್ಟು ಪ್ರಸಾದ ಮಾಡಿ, ಪೂಜೆಯ ನಂತರ ಅದನ್ನು ಭಿಂಗಯ್ಯಗಳಿಗೆ ಹಂಚುತ್ತಾರೆ. ಈ ಸಮಾರಂಭಕ್ಕೆ ಕವಣೆ ಕಟ್ಟುವುದು ಎಂದು ಹೆಸರು. ಜಾತ್ರೆಯಲ್ಲಿ ಓಡಾಡುತ್ತಾ ಚಾಟಿಯಿಂದ ಭಕ್ತರಿಗೆ ಆಶೀರ್ವಾದ ಮಾಡುತ್ತ ಗುಂಪುಗುಂಪಾಗಿ ಕುಣಿಯುತ್ತ ಹೆಜ್ಜೆ ಹಾಕುವುದು ಕಂಡುಬರುತ್ತದೆ. ಸೂಕ್ಷ್ಮವಾಗಿ ಭೃಂಗಿ ನೃತ್ಯವನ್ನು ಗಮನಿಸಿದರೆ ಇದು ಕುದುರೆಯು ನೆಗೆದು ಕುಪ್ಪಳಿಸುತ್ತ ಹೆಜ್ಜೆ ಹಾಕುವ ತಾಳಕ್ಕೆ ಅನುಗುಣವಾಗಿ ನರ್ತಿಸುವಂತೆ ಕಂಡುಬರುತ್ತದೆ.

ಇಷ್ಟೇ ಅಲ್ಲದೇ ಬಿಂಗಿ, ಭಿಂಗಿ, ಭೃಂಗಿ ಎಂಬ ಪದದ ಬೆನ್ನು ಹತ್ತಿ ಕರ್ನಾಟಕದ ಹಲವು ಆಚರಣೆ ಮತ್ತು ಸಂಪ್ರದಾಯಗಳನ್ನು ಪರಿಶೀಲಿಸುತ್ತ ಹೋದಂತೆ ನಮಗೆ ಗೋಚರಿಸುವುದು ಉತ್ತರಕನ್ನಡ ಜಿಲ್ಲೆಯ ಬಿಂಗಿಪದ ಎನ್ನುವ ಕಲಾಸಂಪ್ರದಾಯ. ಈ ಕಲಾಸಂಪ್ರದಾಯವು ಮಲೆನಾಡಿನಲ್ಲಿ ಅಂಟಿಗೆ ಪಂಟಿಗೆ, ದೀಪ ನೀಡುವುದು, ಹಬ್ಬ ಹಾಡುವುದು ಎಂಬ ಬೇರೆಬೇರೆ ಹೆಸರುಗಳಿಂದ ಪ್ರಚಲಿತವಿದೆ. ಈ ಕಲೆ ಬಲೀಂದ್ರನ ಆರಾಧನೆಗಾಗಿಯೇ ರೂಪಗೊಂಡಿದೆ ಎಂಬ ನಂಬಿಕೆ ಇಲ್ಲಿಯ ಪ್ರಾದೇಶಿಕ ಜನಪರದ್ದಾಗಿದೆ. ಬಲೀಂದ್ರನು

ದೀಪಾವಳಿಗೆ ಮರುದಿನ ತನ್ನ ರಾಜ್ಯ ಸಿರಿಯನ್ನು ನೋಡಲಿಕ್ಕೆ ಬರುತ್ತಾನೆ. ಆಗ ನಾವು ನಮ್ಮ ನೋವು ನುಂಗಿ ದೀಪ ಬೆಳಗಿಸಿ ಅವನನ್ನು ಸ್ತುತಿಸಿದರೆ ನಾಡು ಸುಭಿಕ್ಷವಾಗುವುದೆಂಬ ನಂಬಿಕೆ ಅಲ್ಲಿಯ ಜನರದ್ದಾಗಿದೆ. ದೀಪಾವಳಿಯ ಮುನ್ನಾ ರಾತ್ರಿ ರೈತರ ಮಕ್ಕಳು ಭಿಂಗಿ ದೀವಿಗೆಯನ್ನು ಹಿಡಿದು, ಮನೆಮನೆಗಳಿಗೆ ಬಿಂಗಿ ಪದ ಹಾಡಲು ಹೋಗುವ ಸಂಪ್ರದಾಯವಿದೆ. ಆಗ ಮನೆಮನೆಗಳಲ್ಲಿ ಬಲೀಂದ್ರನ ಸ್ತುತಿಪದವನ್ನು ಹಾಡಲಾಗುತ್ತದೆ.

ಬಲ್ಲಾಳ ಬಲ್ಲಿಯೆಂದ್ರನೋ ರಾಜೀಕೆ ಸಿರಿವಂತನೋಂ
ಎಲ್ಲಾರಾ ಸಲುವಂತನು
ಇಂದ್ರಾಲೋಕಾದಿಂದಾ ಬಲ್ಲಾಳ ಬರುವಾಗ
ಕಲ್ಲಾಮಳೆಗಳು ಸುರಿದಾವು ಈ ಊರಾ
ಹುಲ್ಲಾಗೆಡ್ಡಲ್ಲಾ ಚಿಗರ‍್ಯಾವು |

ಹೀಗೆ ಬಲೀಂದ್ರ ಹಾಡು ಹಾಡುತ್ತಾ, ಹಾಡು ಮುಗಿದ ಮೇಲೆ ಮತ್ತೆ ಬೇರೆಬೇರೆ ಹಾಡಿನ್ನು ಹಾಡುತ್ತಾರೆ. ಉದಾಹರಣೆಗೆ ಅಣಿಪಿಣಿ ಜಾಳಿಗೋ. ಹೀಗೆ ಬೇರೆ ಹಾಡಿನ ಗಂಟು ಬಿಚ್ಚಿ ತಮ್ಮ ಹಾಡಿನ ಮೋಡಿಯಿಂದ ಮನೆಮನೆಯ ಮಂದಿಯನ್ನು ಮೆಚ್ಚಿಸಿ ಬೆಳಕು ನೀಡಿ ಕಾಣಿಕೆ ಪಡೆದು ಬಿಂಗಿ ದೀವಿಗೆಗೆ ಎಣ್ಣೆ ಎರೆಸಿಕೊಂಡು ಬಿಂಗಿಯ ಬೆಳಕಿನ ದೀಪವನ್ನು ಹೊತ್ತು ಮುಂದಿನ ಮನೆಗೆ ಹೋಗುತ್ತಾರೆ.

ಮೇಲಿನ ಸಂಪ್ರದಾಯವನ್ನು ಸೂಕ್ಷ್ಮವಾಗಿ ಗಮನಸಿದಾಗ ಕಂಡುಬರುವುದೇನೆಂದರೆ ಇದು ಮೂಲತಃ ರೈತರ ಮಕ್ಕಳ ಆಚರಣೆ ಎಂಬುದು ಈ ಸಂಪ್ರದಾಯ ವರ್ಷದ ಕೆಲವು ದಿನಗಳಲ್ಲಿ ಮಾತ್ರ ಅಂದರೆ ಸುಗ್ಗಿ ದಿನಗಳಲ್ಲಿ ಮಾತ್ರ ನಡೆಯುತ್ತದೆ. ಇದಲ್ಲದೆ ಇದು ಇಂದ್ರನ ಆರಾಧನೆಯಾಗಿದ್ದು ಶೈವ ಸಂಪ್ರದಾಯಕ್ಕೂ ಬಿಂಗಿ ಕಲಾ ಪ್ರಕಾರಕ್ಕೂ ಯಾವುದೇ ಧಾರ್ಮಿಕ ಸಂಬಂಧಗಳಿಲ್ಲದಿರುವುದು ಇಲ್ಲಿ ಪ್ರಮುಖ ಅಂಶವಾಗಿದೆ. ಈ ಕಲಾಪ್ರಕಾರವನ್ನು ಹೊರತುಪಡಿಸಿದರೆ ಭಿಂಗಿ ಭಿಂಗಯ್ಯ ಮುಂತಾದ ಹೆಸರಿನ ಯಾವ ಆಚರಣೆ, ಸಂಪ್ರದಾಯಗಳು ಕರ್ನಾಟಕದಲ್ಲಿ ಕಂಡುಬರುವುದಿಲ್ಲ. ಚಿಕ್ಕಮಗಳೂರು ಜಿಲ್ಲೆ ಅರೆಮಲೆನಾಡು ಎಂದು ಪರಿಗಣಿಸಿರುವ ಕಡೂರು ತಾಲೂಕಿನ ಅನೇಕ ಗ್ರಾಮಗಳಲ್ಲಿ ವಾಸವಾಗಿರುವ ಕುರುಬ ಜನಾಂಗದ ಅಸಂಖ್ಯಾತ ಸಂಗಮ ಕುಲದ ಮನೆತನಗಳಲ್ಲಿ ಕಂಡುಬರುವ ಭಿಂಗಯ್ಯ ಸಂಪ್ರದಾಯ ವಿಶಿಷ್ಟವೂ ವಿಭಿನ್ನವೂ ಆಗಿದ್ದು ಸಾಂಸ್ಕೃತಿಕ ಪರಂಪರೆಯ ಜೀವಂತ ಕೊಂಡಿಯಾಗಿದೆ. ಕುರುಬ ಜನಾಂಗದ ಒಕ್ಕಲು ದೈವ ಸೋಮೇಶ್ವರ ದೇವರಿಂದ ಪಟ್ಟಗಟ್ಟಿಸಿಕೊಂಡು ಅವನ ಜಂಗಮರೂಪಿ ಗುರುವಾಗಿ ಭಿಂಗಯ್ಯ ಪೂಜನೀಯನಾಗಿದ್ದಾನೆ.

ಕರ್ನಾಟಕದಲ್ಲಿ ಸೋಮೇಶ್ವರ ದೈವಕ್ಕೆ ಹಲವಾರು ದೇವಸ್ಥಾನಗಳಿದ್ದರೂ ಭಿಂಗಯ್ಯ ಆಚರಣೆ, ನೃತ್ಯ ಕಲೆ ಖಂಡುಗದಹಳ್ಳಿಯ ಶ್ರೀ ಸೋಮೇಶ್ವರ ದೇವಸ್ಥಾನದಲ್ಲಿ ಮತ್ತು ಒಕ್ಕಲು ಮನೆಗಳಲ್ಲಿ ಮಾತ್ರ ಕಂಡುಬರುತ್ತದೆ.

ಪಟ್ಟಗಳ ಆಯ್ಕೆ ಮತ್ತು ದೀಕ್ಷೆ

ಧರ್ಮ ಸಾಮ್ರಾಜ್ಯಕ್ಕೆ ಬೀರದೇವರ ಚಕ್ರವರ್ತಿ ದಳವಾಯಪ್ಪನೆ ಸೇನಾಧಿಪತಿ. ಈರಗಾರರೇ ಸೈನಿಕರು. ಕುರುಬ ಜನಾಂಗದ ಆರಾಧ್ಯದೈವ ಬೀರದೇವರು. ಬೀರದೇವರಿಗೆ ದಳವಾಯಿ, ಈರಗಾರ, ಪೂಜಾರಿ ಎಂಬ ಧಾರ್ಮಿಕ ಸೇವಾಪಟ್ಟಗಳಿವೆ.

ದಳವಾಯಿ ಎಂದರೆ ರಣರಂಗದಲ್ಲಿ ಸೈನ್ಯವನ್ನು ಮುನ್ನಡೆಸುವವನು. ಸೈನ್ಯದ ಮುಖಂಡ ಸೇನಾಧಿಪತಿ ಎಂಬ ಅರ್ಥಗಳಿವೆ. ಆದರೆ ಇಲ್ಲಿ ದಳವಾಯಿ ಬೀರದೇವರ ಜೀವಂತ ಪ್ರತಿನಿಧಿ ಎನ್ನಬಹುದು. ದಳವಾಯಿ ಪಟ್ಟವನ್ನು ಕೆಲವರು ಮಹಾಭಾರತದ ಭೀಷ್ಮಾಚಾರ್ಯರ ಪಾತ್ರಕ್ಕೆ ಹೋಲಿಸುತ್ತಾರೆ.

ಆಯಾ ಬೀರದೇವರುಗಳಿಗೆ ಪ್ರತಿ ೧೨ ವರ್ಷಗಳಿಗೊಮ್ಮೆ ನಡೆಯುವ ತೋಪುಜಾತ್ರೆಗಳಲ್ಲಿ ದಳವಾಯಿ ಈರಗಾರ, ಪೂಜಾರಿಕೆ ಪಟ್ಟಗಳ ಆಯ್ಕೆ ಮತ್ತು ದೀಕ್ಷೆ ನಡೆಯುವುದು ಒಂದು ಜಾತ್ರೆಗೂ ಮತ್ತೊಂದು ಜಾತ್ರೆಗೂ ಮಧ್ಯ ಯಾವುದೇ ಧಾರ್ಮಿಕ ಸೇವಾಪಟ್ಟ ದೀಕ್ಷೆ ನಡೆಯುವುದಿಲ್ಲ. ಆಯಾ ಬೀರದೇವರುಗಳ ಗುಡಿಕಟ್ಟಿನ ನಿರ್ದಿಷ್ಟ ಕುಲ ಅಥವಾ ಗೋತ್ರಗಳಲ್ಲೇ ದಳವಾಯಿ, ಈರಗಾರ, ಪೂಜಾರಿಕೆ ಪಟ್ಟಗಳಿಗೆ ದೇವರಿಂದ ಆಯ್ಕೆಯಾಗುತ್ತದೆ. ಕೆಲವು ಕಾರಣಗಳಿಂದ ಪಟ್ಟಗಟ್ಟದೆ ಆಯಾ ಪಟ್ಟಗಳಿಗೆ ಜಾತ್ರೆಗೆ ಮಧ್ಯ ಕಾಲಾವಧಿಯಲ್ಲಿ ಆಯ್ಕೆ ಮತ್ತು ದೀಕ್ಷೆ ನೀಡುವಂತಿಲ್ಲ. ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಬೀರದೇವರ ತೋಪುಜಾತ್ರೆಯಲ್ಲಿ ಹೊಳೆಪೂಜೆಯ ಕಾರ್ಯಕ್ರಮದ ನಂತರ ರೇವಣಸಿದ್ಧೇಶ್ವರ ಅಥವಾ ಸಿದ್ಧರಾಮೇಶ್ವರ ಅಥವಾ ಬೀರದೇವರ ಪಲ್ಲಕ್ಕಿಯನ್ನು ಪಟ್ಟದ ವ್ಯಕ್ತಿಗಳ ಆಯ್ಕೆಗಾಗಿ ಹೊರಡಿಸುತ್ತಾರೆ. ಈ ದೇವರ ಪಲ್ಲಕ್ಕಿ ತನಗೆ ಇಷ್ಟವಾದ ವ್ಯಕ್ತಿಯನ್ನು(ಅವಿವಾಹಿತ) ಚೌಟಿಗೆ ಹೋಗುತ್ತದೆ. ತನಗೆ ಬೇಕಾದವನನ್ನು ಪಲ್ಲಕ್ಕಿ ಕೊಂಬಿನಿಂದ ಮುಟ್ಟಿ ಕುರುಹು ಮಾಡುತ್ತದೆ. ಕೆಲವು ಕಡೆ ಆತನನ್ನು ನೀರಿಗೆ ತಳ್ಳುತ್ತದೆ. ಒಟ್ಟಿನಲ್ಲಿ ಇದನ್ನು ಶಾಸ್ತ್ರೋಕ್ತವಾಗಿ ನಡೆಸುತ್ತಾರೆ.

ಪಟ್ಟದ ಆಯ್ಕೆ

ಬೀರಪ್ಪನನ್ನು ದಿನನಿತ್ಯ ಪೂಜೆ ಮಾಡುವುದಕ್ಕೆ ಪೂಜಾರಿಯನ್ನು ಮತ್ತು ದಳವಾಯಿಯನ್ನು ಬೀರಪ್ಪನ ಹೆಸರಿನಲ್ಲಿ ಆಯ್ಕೆ ಮಾಡುವುದಕ್ಕೆ ಪಟ್ಟದ ಆಯ್ಕೆ ಎಂದು ಕರೆಯುತ್ತಾರೆ.

ಆಯ್ಕೆಯ ನಿಯಮಗಳು

೧. ಆಯ್ಕೆ ಪೂಜಾರಿ ಕುಲದವರ ಮನೆತನದಲ್ಲಿ ನಡೆಯಬೇಕು.

೨. ಪೂಜೆಗೆ ಬಿಡುವವರು ಚಿಕ್ಕ ಗಂಡುಮಗು ಅಥವಾ ಅವಿವಾಹಿತ ಗಂಡುಮಗುವನ್ನು ಮಾತ್ರ ಕಳುಹಿಸಬೇಕು.

೩. ಅದೇ ಗ್ರಾಮದವರಾಗಿರಬೇಕು.

೪. ಆಯ್ಕೆ ಮಾಡುವವರು ಆಯ್ಕೆ ಮಾಡುವುದಕ್ಕೆ ಬರುವ ಪಲ್ಲಕ್ಕಿ ಬೇರೆ ಊರಿನದ್ದಾಗಿರಬೇಕು. ಪಲ್ಲಕ್ಕಿ ಹೊತ್ತವರು ಬೇರೆ ಊರಿನವರಾಗಿರಬೇಕು.

ಆಯ್ಕೆಯ ವಿಧಾನ

ಪಟ್ಟದ ಮರಿಯನ್ನು ಆರಿಸುವುದಕ್ಕೆ ಜಾತ್ರೆಗೆ ಬಂದ ಬೇರೆ ಬೀರಲಿಂಗನಿಗೆ ಜವಾಬ್ದಾರಿ ಹೊರಿಸುತ್ತಾರೆ. ಇದಕ್ಕೆ ಒಂದು ನಿಯಮವಿದೆ. ಒಂದು ಊರಿನಲ್ಲಿ ಮತ್ತೊಂದು ಊರಿನವರು ಆಯ್ಕೆ ಮಾಡಬೇಕು. ಹೀರೇನಲ್ಲೂರಿನಲ್ಲಿ ಗರ್ಜಿ ಗ್ರಾಮದ ಬೀರಪ್ಪನಿಗೆ ಮರಿ ಆಯ್ಕೆ ನಡೆಯುತ್ತದೆ. ಈ ಆಯ್ಕೆ ಪ್ರತಿವರ್ಷ ನಡೆಯುವುದು. ಪಲ್ಲಕ್ಕಿಯ ನಂಬಿಕೆಯಿಂದಲೇ ಆಗಿರುವುದರಿಂದ ಆಯಾ ಗ್ರಾಮದ ಪಲ್ಲಕ್ಕಿಯನ್ನು ಆಯಾ ಗ್ರಾಮದವರು ಹೊತ್ತುಕೊಳ್ಳಬೇಕು. ಹಾಗೆ ಹೊತ್ತುಕೊಂಡವರು ಅದೇ ಊರಿನವರಾಗುವುದರಿಂದ ತಮಗೆ ಬೇಕಾದವರನ್ನು ಅಥವಾ ಬೇಡವಾದವರನ್ನು ಆಯ್ಕೆ ಮಾಡಬಹುದು. ಆ ಆಯ್ಕೆಯನ್ನು ಮನೆಯವರು ಒಪ್ಪದಿರಬಹುದು ಎನ್ನುವ ಕಾರಣಗಳಿಂದ ಒಂದು ಊರಿನವರು ಮತ್ತೊಂದು ಊರಿನಲ್ಲಿ ಈ ಜವಾಬ್ದಾರಿಯನ್ನು ಹೊತ್ತು ಕೊಳ್ಳುತ್ತಾರೆ.

ಬೀರಪ್ಪನ ಪಲ್ಲಕಿಯನ್ನು ಹೊತ್ತವರು ಯಾರ ಮನೆ ಮುಂದೆ ಹೋಗಿ ನಿಲ್ಲುತ್ತಾರೆ ಅವರ ಮನೆಯ ಮಗುವನ್ನು ಪೂಜೆ ಅಥವಾ ಸೇವೆಗಾಗಿ ಕೊಡಬೇಕು ಎನ್ನುವುದು ಪಾರಂಪರಿಕ ನಿಯಮ. ಇದರಂತೆ ಪಲ್ಲಕ್ಕಿ ಹೊತ್ತವರು ಯಾರ ಮನೆಯ ಬಾಗಿಲ ಮುಂದೆ ನಿಲ್ಲುತ್ತಾರೋ ಆ ಮನೆಯವರು ಒಂದು ಮಗುವನ್ನು ಪಲ್ಲಕ್ಕಿ ಹತ್ತಿರ ಕಳುಹಿಸುತ್ತಾರೆ. ಆ ಮಗು ಬರುತ್ತಿದ್ದಂತೆ ಪಲ್ಲಕ್ಕಿ ಹೊತ್ತವರು ಆ ಮಗುವಿನ ಮೇಲೆ ಭಂಡಾರ ಎಸೆಯುತ್ತಾರೆ. ಇದು ಇವತ್ತು ನೀನು ನಮ್ಮ ಕುಲಕ್ಕೆ ಸೇರಿದವನು. ಈ ಭಂಡಾರವೇ ನಮ್ಮ ಸಂಕೇತ. ನಿನಗೆ ನಾವು ಭಂಡಾರ ಹಾಕಿದ್ದೇವೆ. ನಮ್ಮ ಕುಲಕ್ಕೆ ಸೇರಿದವನು ಎನ್ನುವ ಮಾತಿನ ರೂಪದಂತೆ ಕಾಣಿಸುತ್ತದೆ. ಭಂಡಾರ ಹಾಕಿಸಿಕೊಂಡ ಮಗು ಪಲ್ಲಕ್ಕಿ ಹೊತ್ತವರ ಕಾಲಿಗೆ ಬಿದ್ದು ಆಶೀರ್ವಾದ ತೆಗೆದು ಕೊಳ್ಳುತ್ತಾನೆ. ಬೀರಪ್ಪನ ಪಲ್ಲಕ್ಕಿಯ ಜೊತೆಗೆ ಬೀರಪ್ಪನ ದೇವಾಲಯಕ್ಕೆ ಬಂದು ಕುಳಿತುಕೊಳ್ಳುತ್ತಾನೆ. ಅನಂತರ ದಳವಾಯಿಯಪ್ಪನನ್ನು ಆಯ್ಕೆ ಮಾಡುವ ಕಾರ್ಯ ಆರಂಭವಾಗುತ್ತದೆ. ಈತನನ್ನು ಹಿಡಿಯುವುದಕ್ಕೆ ಬೀರಪ್ಪನ ಮೂರ್ತಿಯ ಪಲ್ಲಕ್ಕಿ ಹೋಗುವುದಿಲ್ಲ. ಬೀರಪ್ಪನ ಮುಳ್ಳುಪಲ್ಲಕ್ಕಿ ಹೊರಡುತ್ತದೆ. ಆಯ್ಕೆಯ ವಿಧಾನ ಮಾತ್ರ ಎರಡೂ ಒಂದೇ.

ಪೂಜಾರಿ ಮತ್ತು ದಳವಾಯಿ ಕಾರ್ಯಕ್ಕೆ ಪಟ್ಟದ ಮರಿಗಳು ಸಿಕ್ಕ ನಂತರ ಅವರಿಗೆ ಪಟ್ಟಕಟ್ಟುವ ಕಾರ್ಯ ಆರಂಭವಾಗುತ್ತದೆ. ಅವರನ್ನು ಹೊಳೆಯ ಹತ್ತಿರ ಊರ ಹೊರಗಡೆ ಇರುವ ಬಾವಿಯ ಬಳಿ ಕರೆದೊಯ್ದು ಗಂಗೆಪೂಜೆ ಮಾಡಿ ಅವರಿಬ್ಬರಿಗೆ ಸ್ನಾನ ಮಾಡಿಸಿ ತಲೆ ಬೋಳಿಸಲಾಗುತ್ತದೆ. ನೆರೆದ ಜನರು ಮತ್ತು ಅವರ ತಂದೆ ತಾಯಿಗಳು, ಬಂಧುಬಳಗದವರೆಲ್ಲ ಕಾಲಿಗೆ ಬಿದ್ದು ಆಶೀರ್ವಾದ ತೆಗೆದುಕೊಳ್ಳುತ್ತಾರೆ. ಬೀರಪ್ಪನ ದೇವಾಲಯಕ್ಕೆ ಕರೆತಂದು ಬೀರಪ್ಪನನ್ನು ಪೂಜೆ ಮಾಡಿ ಪ್ರಸಾದವನ್ನು ಕೊಡಲಾಗುತ್ತದೆ. ಅಲ್ಲಿಂದ ಅವರು ಬೀರಪ್ಪನ ಸೇವೆಯಲ್ಲಿ ನಿರತರಾಗುತ್ತಾರೆ.

ಆರನೆಯ ದಿನ ಕೆಂಡಾರ್ಚನೆ ಮತ್ತು ಕಾಟಬೀರಸೇವೆ ಎನ್ನುವ ಎರಡು ಆಚರಣೆಗಳು ನಡೆಯುತ್ತವೆ. ಜಾತ್ರೆಗೆ ಬಂದ ಭಕ್ತಾದಿಗಳಿಗೆ ಉತ್ಸಾಹಭರಿತವಾದ ಆಚರಣೆಗಳಾಗಿವೆ. ಈ ಆಚರಣೆಗಳು ಮುಖ್ಯವಾದವು

ಅಂದರೆ ಜಾತ್ರೆ ಮುಗಿದಂತೆ. ಊರ ಹೊರಗಡೆ ಇರುವ ಬೀರಪ್ಪನ ದೇವಾಲಯದ ಆವರಣದಲ್ಲಿ ಈ ಆಚರಣೆಗಳು ನಡೆಯುತ್ತವೆ. ಆ ಸ್ಥಳವನ್ನು ಬೀರಪ್ಪನ ಮೂಲಸ್ಥಳವೆಂದು ಕರೆಯಲಾಗುತ್ತದೆ. ಜಾತ್ರೆಗೆ ಆಗಮಿಸಿದ ಎಲ್ಲ ಪಲ್ಲಕ್ಕಿಗಳು ಈ ಸಂದರ್ಭದಲ್ಲಿ ದೇವಾಲಯಕ್ಕೆ ಹೊರಡುತ್ತವೆ. ಹೊರಗಡೆ ಇರುವ ದೇವಾಲಯಕ್ಕೆ ಹೊರಡುವ ಮುಂಚೆ ವಿಶಿಷ್ಟ ಆಚರಣೆ ನಡೆಯುತ್ತದೆ. ಅಂದರೆ ತಂಗಿದ್ದ ದೇವಾಲಯದಿಂದ ಹೊರಗಡೆ ಹೊರಟ ಪಲ್ಲಕ್ಕಿಗಳಾಂಜನೇಯ ದೇವಾಲಯದಲ್ಲಿ ಬಂದು ನಿಲ್ಲುತ್ತವೆ. ಅವುಗಳ ಜೊತೆಗೆ ಈರಗಾರರು, ದಳವಾಯಿಪ್ಪಗಳು ಮತ್ತು ಪೂಜಾರಿಗಳು ಬರುತ್ತಾರೆ. ಗುಡಿಗೌಡ್ರುಗಳು ಜೊತೆಗಿರುತ್ತಾರೆ. ಒಳಗಡೆ ಪ್ರವೇಶಿಸಿದ ಗುಡಿಗೌಡ್ರುಗಳು ಅಂಜನೇಯನನ್ನು ಪೂಜಿಸಿ ಪ್ರಸಾದ ಸ್ವೀಕರಿಸುವರು. ಹೊರಗಡೆ ತಂಗಿದ್ದ ಪಲ್ಲಕ್ಕಿಗಳನ್ನು ಅವರವರ ಪೂಜಾರಿಗಳು ಪೂಜೆ ಮಾಡುವುದಕ್ಕೆ ಆರಂಭಿಸುವರು. ಪೂಜೆ ಅರ್ಪಣೆ ಮಾಡುವುದಕ್ಕಾಗಿ ಮತ್ತು ನೆರೆದ ಭಕ್ತಾದಿಗಳಿಗೆ ಪ್ರಸಾದ ಕೊಡುವುದಕ್ಕೆ ಗುಡಿಗೌಡ್ರುಗಳು ದೇವಾಲಯದ ಒಳಗಡೆ ಸುಮಾರು ಎರಡೂವರೆ ಕ್ವಿಂಟಾಲಿನಷ್ಟು ಉಪ್ಪುಗಡಲೆ ಕೊಬ್ಬರಿಯನ್ನು ರಾಶಿ ಹಾಕಿಕೊಂಡು ಕಲಸುವರು. ಆ ರಾಶಿಗೆ ಬೀರಪ್ಪನ ಪೂಜಾರಿ ಪೂಜೆ ಮಾಡುವರು. ಹಿರೇನಲ್ಲರೂ ಗ್ರಾಮದ ಬೀರದೇವರ ಕಮಿಟಿಯ ಯಜಮಾನ ಎಲ್ಲಾ ಗುಡಿಗೌಡ್ರುಗಳಿಗೆ ಕಾಳುಗಳನ್ನು ಕೊಡುವನು. ಸ್ವೀಕರಿಸಿದ ಗುಡಿಗೌಡ್ರುಗಳು ನಮಸ್ಕಾರ ಮಾಡುವರು. ಉಳಿದ ಕಾಳುಗಳನ್ನು ಊರಿನ ಯುವಕರು ಬುಟ್ಟಿಯಲ್ಲಿ ಹಾಕಿಕೊಂಡು ನೆರೆದ ಭಕ್ತಾದಿಗಳಿಗೆ ಕೊಡುವರು. ಭಕ್ತರು ಪೂಜನೀಯ ಭಾವನೆಯಿಂದ ಸ್ವೀಕರಿಸುವರು. ಆ ಕಾಳು ಸಿಗುವುದರಿಂದ ಪುಣ್ಯ ಪಡೆಯಲೇಬೇಕು ಎನ್ನುವ ಹಂಬಲ ಭಕ್ತಾದಿಗಳಲ್ಲಿ ಇರುತ್ತದೆ.

ಕಾಳುಪೂಜೆ ಮುಗಿಯುತ್ತಿದ್ದಂತೆ ಈರಗಾರರು ದಳವಾಯಿಯಪ್ಪರನ್ನು ಮೈದುಂಬಿಸುವ ಆಚರಣೆ ನಡೆಯುತ್ತದೆ. ದಳವಾಯಿಪ್ಪಗಳು ತಮ್ಮ ವೇಷವನ್ನು ಧರಿಸಿ ಬೀರದೇವರ ಪಲ್ಲಕ್ಕಿ ಪಕ್ಕದಲ್ಲಿ ನಿಂತಿರುತ್ತಾರೆ. ಅವರನ್ನು ಹುರಿದುಂಬಿಸುವುದಕ್ಕಾಗಿ ಈರಗಾರರು ಅಲಗ ಹಾಕಿಕೊಳ್ಳುತ್ತಾರೆ. ಅಂದರೆ ಸುಮಾರು ಆರೇಳು ಜನ ಈರಗಾರರು ದಳವಾಯಿಗಳು ಎದುರುಗಡೆ ನಿಂತು ಒಟ್ಟಿಗೆ ಉಘೇ ಉಘೇ ಎಂದು ಕೂಗುತ್ತ ಅಲಗ ಹಾಕಿಕೊಳ್ಳುತ್ತಿರುತ್ತಾರೆ. ನೆರೆದ ಭಕ್ತರೆಲ್ಲ ಉಘೇ... ಉಘೇ.. ಎಂದು ಕೂಗುತ್ತಿರುತ್ತಾರೆ. ಅಲಗ ಹಾಕಿಕೊಳ್ಳುವ ವಿಧಾನವನ್ನು ನೋಡುತ್ತಾ ದಳವಾಯಿಗಳು ಮೈದುಂಬಿ ಮೇಲಕ್ಕೆ ಹಾರುತ್ತಾರೆ. ಹಾರಿದವರನ್ನು ಅವರ ಭಕ್ತಾದಿಗಳು ಹಿಡಿದು ಕುಣಿಯುತ್ತಾರೆ. ಈ ಕುಣಿತ ಸುಮಾರು ಎರಡು ಗಂಟೆಗಳ ಕಾಲ ನಡೆಯುತ್ತದೆ. ಈ ಆಚರಣೆಯನ್ನು ಮುಗಿಸಿಕೊಂಡು ಎಲ್ಲಾ ದೇವರುಗಳು ಹೊರಗಡೆ ಇರುವ ಬೀರಪ್ಪನ ದೇವಾಲಯದತ್ತ ಹೋಗುತ್ತವೆ.

ಬೀರಪ್ಪ ದೇವಾಲಯದ ಹತ್ತಿರ ಬಂದ ದೇವರುಗಳು ದೇವಾಲಯ ಸುತ್ತ ನರ್ತನ ಮಾಡುತ್ತವೆ. ದಳವಾಯಿಗಳ ನರ್ತನೆ ಪ್ರೇಕ್ಷಕರನ್ನು ರೋಮಾಂಚನಗೊಳಿಸುತ್ತದೆ. ದೇವಾಲಯದ ಅಂಗಳದಲ್ಲಿರುವ ಲಿಂಗದ ಪೂಜೆಯನ್ನು ಮಾಡುತ್ತಾರೆ. ಪೂಜೆಯ ನಂತರ ಮೂರು ಜನ ಒಡೆಯರು ಒಟ್ಟಿಗೆ ತಮ್ಮ ಬಲ ಪಾದಗಳನ್ನು ದೀಕ್ಷಾವ್ಯಕ್ತಿಯ ತಲೆಯ ಮೇಲಿಟ್ಟು ಅಕ್ಷತೆ ಹಾಕುತ್ತಾರೆ. ಕ್ರಮವಾಗಿ ಕಿವಿಯಲ್ಲಿ ಗೌಪ್ಯಮಂತ್ರ ಉಪದೇಶಿಸುತ್ತಾರೆ.

ಹೀಗೆ ಒಡೆಯರ ಮೂಲಕ ದೀಕ್ಷೆಯಾದ ನಂತರ ಬೀರದೇವರನ್ನು ಪೂಜಿಸಿ ಅಪ್ಪಣೆ ಪಡೆದು ತೀರ್ಥೋದಕವನ್ನು ಪಂಚಕಳಶವನ್ನು ಮಧ್ಯೆ ಇರುವ ದಳವಾಯಿಗೆ ಹಾಕುತ್ತಾರೆ. ಈರಗಾರರು ಈರಿಕೆ ಮಾಡಿಕೊಳ್ಳುತ್ತಾರೆ. ವಾದ್ಯಗಳು ಮೊಳಗುತ್ತವೆ. ನೋಡುನೋಡುತ್ತಿದ್ದಂತೆ ದಳವಾಯಿ ಮೈದುಂಬಿ ಪಂಚಕಳಸ ಮಧ್ಯದಿಂದ ಹೊರಕ್ಕೆ ಜಿಗಿಯುತ್ತಾನೆ. ಆ ವೇಳೆಗೆ ಸಿದ್ಧರಾಗಿ ನಿಂತ ನಾಲ್ವರು ಆತನನ್ನು ತೋಳುಗೈಗಳ ಮೇಲೆ ಹೊತ್ತುಕೊಳ್ಳುತ್ತಾರೆ. ದಳವಾಯಿ ತಲೆ ಮೇಲೆ ದೇವರ ಛತ್ರಿ ಹಿಡಿಯುತ್ತಾರೆ. ಆಗ ವಿವಿಧ ದೇವತಾಕಾರ್ಯಗಳು ಅಪ್ಪಣೆ, ಕುರುಹುಗಳು ನಡೆಯುತ್ತವೆ. ಈ ಎಲ್ಲಾ ದೇವತಾಕಾರ್ಯಗಳು ಮುಗಿದ ನಂತರ ದಳವಾಯಿ ಇಳಿಸಲು ದಳವಾಯಿಯ ಮುಂದೆ ಮುಳ್ಳುಪಲ್ಲಕ್ಕಿ ತರುತ್ತಾರೆ. ಪಲ್ಲಕ್ಕಿ ಹತ್ತಿರ ತರುತ್ತಿದ್ದಂತೆಯೇ ದಳವಾಯಿಯು ಪಲ್ಲಕ್ಕಿಗೆ ಜಿಗಿಯಲು ತೊಡಗುತ್ತಾನೆ. ತಕ್ಷಣವೇ ಭಕ್ತರು ಪಲ್ಲಕ್ಕಿಯನ್ನು ಹಿಂತೆಗೆದುಕೊಂಡು ದಳವಾಯಿಯನ್ನು ತೋಳುಗೈ ಮೇಲೆ ಹಿಡಿದು ನಂತರ ಕಂಬಳಿ ಗದ್ದಿಗೆಯ ಮೇಲೆ ಕುಳ್ಳರಿಸಿ, ಗಾಳಿ ಬೀಸುತ್ತಾರೆ. ಆಗ ದೇವರು ಮೈ ಬಿಡುತ್ತದೆ.

೧. ದಳವಾಯಿ ಪಟ್ಟದೀಕ್ಷೆ

ದಳವಾಯಿ ಪಟ್ಟದೀಕ್ಷೆಯನ್ನು ನೀರಿನ ಬಳಿಯಲ್ಲಿ ಅಥವಾ ದೇವಸ್ಥಾನದ ಬಳಿಯಲ್ಲಿ ನೀಡುತ್ತಾರೆ. ಕರಿಯ ಕಂಬಳಿಯ ಗದ್ದಿಗೆ ಹಾಕಿ, ಪೂರ್ವದಿಕ್ಕಿಗೆ ಅಭಿಮುಖವಾಗಿ ಸಿದ್ಧರಾಮೇಶ್ವರ ಅಥವಾ ರೇವಣಸಿದ್ಧೇಶ್ವರ ದೇವರ ಪಲ್ಲಕ್ಕಿಯನ್ನು ಇಡುತ್ತಾರೆ. ಅದರ ಮುಂದೆ ಚೌಕಾಕಾರದಲ್ಲಿ ನಾಲ್ಕು ಮೂಲೆಗೆ ನಾಲ್ಕು ಗೊನೆ, ಬಾಳೆ ಎಲೆ ಇಟ್ಟು ಕಾಯಿ, ಎಲೆ, ಹೊಂಬಾಳೆಯಿಂದ ಕಳಶವನ್ನು ಹೂಡುತ್ತಾರೆ. ದೇವರ ಪಲ್ಲಕ್ಕಿಗೆ ಅಭಿಮುಖವಾಗಿ ಚೌಕದೊಳಗೆ ಮತ್ತೊಂದು ದೊಡ್ಡ ಕಳಶ ಸಿದ್ಧಪಡಿಸುತ್ತಾರೆ. ಈ ಐದು ಕಳಸಗಳಿಗೆ ಹಸಿದಾರದಿಂದ ಶಸ್ತ್ರ ಹಾಕಿ ನಂತರ ಅದೇ ನೂಲಿನಿಂದ ದೇವರಿಗೂ ಸೂಸ್ತ್ರ(ಶಸ್ತ್ರ) ಹಾಕಿ ದೊಡ್ಡ ಕಳಶಕ್ಕೆ ತಂದು ನಿಲ್ಲಿಸುತ್ತಾರೆ. ಹೀಗೆ ಗುರುಕಳಶ ಸಿದ್ಧಗೊಂಡ ನಂತರ ಪಟ್ಟದೀಕ್ಷೆ ಪಡೆಯುವ ಅವಿವಾಹಿತ ತಲೆ ಬೋಳಿಸಿಕೊಂಡು ಸ್ನಾನ ಮಾಡಿ, ಹೊಸ ಬಟ್ಟೆ ತೊಟ್ಟು ವಿಭೂತಿ ಧರಿಸಿ ಪಟ್ಟದೀಕ್ಷೆ ನೀಡುವ ಒಡೆಯರಿಗೆ ಕಾಣಿಕೆಗಳನ್ನು ನೀಡಿ ನಂತರ ಪಂಚಕಳಶಗಳ ಮಧ್ಯೆ ದೊಡ್ಡ ಕಳಸದ ಮುಂದೆ ಕೂರಿಸುತ್ತಾರೆ. ಆತನು ಕೈಗಳನ್ನು ದೊಡ್ಡ ಕಳಸದ ಮೇಲಿಡುತ್ತಾನೆ. ಅಂಗನೂಲಿನಿಂದ ದೇವರಿಗೂ ದೀಕ್ಷಾವ್ಯಕ್ತಿಗೂ ಶಸ್ತ್ರ ಹಾಕಿ ಸಂಬಂಧ ಕಲ್ಪಿಸುತ್ತಾರೆ. ನಂತರ ಒಡೆಯರು ಹಾಲು, ತುಪ್ಪ, ಗೋಮೂತ್ರ ಇತ್ಯಾದಿ ಪವಿತ್ರಜಲವನ್ನು ದೇವರ ಕಡೆಯಿಂದ ಅಂಗನೂಲಿನ ಮೂಲಕ ದೀಕ್ಷಾವ್ಯಕ್ತಿಗೆ ಮುಟ್ಟಿಸಿದ ನಂತರ ವಿವಿಧ ಪೂಜೆಗಳನ್ನು ಮಾಡಿ ನಂತರ ಮೂರು ಜನ ಒಡೆಯರು ಒಟ್ಟಿಗೆ ತಮ್ಮ ಬಲ ಪಾದಗಳನ್ನು ದೀಕ್ಷಾವ್ಯಕ್ತಿಯ ತಲೆಯ ಮೇಲಿಟ್ಟು ಅಕ್ಷತೆ ಹಾಕುತ್ತಾರೆ. ಕ್ರಮವಾಗಿ ಕಿವಿಯಲ್ಲಿ ಗೌಪ್ಯಮಂತ್ರ ಉಪದೇಶಿಸುತ್ತಾರೆ. ಹೀಗೆ ಒಡೆಯರ ಮೂಲಕ ದೀಕ್ಷೆಯಾದ ನಂತರ ಬೀರದೇವರನ್ನು ಪೂಜಿಸಿ ಅಪ್ಪಣೆ ಪಡೆದು ತೀರ್ಥೋದಕವನ್ನು ಪಂಚಕಳಶವನ್ನು ಮಧ್ಯೆ ಇರುವ ದಳವಾಯಿಗೆ ಹಾಕುತ್ತಾರೆ. ಈರಗಾರರು ಈರಿಕೆ ಮಾಡಿಕೊಳ್ಳುತ್ತಾರೆ. ವಾದ್ಯಗಳು ಮೊಳಗುತ್ತವೆ. ನೋಡುನೋಡುತ್ತಿದ್ದಂತೆ ದಳವಾಯಿ ಮೈದುಂಬಿ ಪಂಚಕಳಶದ ಮಧ್ಯದಿಂದ ಹೊರಕ್ಕೆ ಜಿಗಿಯುತ್ತಾನೆ. ಆ

ವೇಳೆಗೆ ಸಿದ್ಧರಾಗಿ ನಿಂತ ನಾಲ್ವರು ಆತನನ್ನು ತೋಳುಗೈ ಮೇಲೆ ಹೊತ್ತುಕೊಳ್ಳುತ್ತಾರೆ. ದಳವಾಯಿ ತಲೆ ಮೇಲೆ ದೇವರ ಛತ್ರಿ ಹಿಡಿಯುತ್ತಾರೆ. ಆಗ ವಿವಿಧ ದೇವತಾಕಾರ್ಯಗಳು, ಅಪ್ಪಣೆ, ಕುರುಹುಗಳು ನಡೆಯುತ್ತವೆ. ಈ ಎಲ್ಲಾ ದೇವತಾಕಾರ್ಯಗಳು ಮುಗಿದ ನಂತರ ದಳವಾಯಿ ಇಳಿಸಲು ದಳವಾಯಿಯ ಮುಂದೆ ಮುಳ್ಳು ಪಲ್ಲಕ್ಕಿ ತರುತ್ತಾರೆ. ಪಲ್ಲಕ್ಕಿ ಹತ್ತಿರ ತರುತ್ತಿದ್ದಂತೆಯೇ ದಳವಾಯಿಯು ಪಲ್ಲಕ್ಕಿಗೆ ಜಿಗಿಯಲು ತೊಡಗುತ್ತಾನೆ. ತಕ್ಷಣವೇ ಭಕ್ತರು ಪಲ್ಲಕ್ಕಿಯನ್ನು ಹಿಂತೆಗೆದುಕೊಂಡು ದಳವಾಯಿಯನ್ನು ತೋಳುಗೈ ಮೇಲೆ ಹಿಡಿದು ನಂತರ ಕಂಬಳಿ ಗದ್ದಿಗೆಯ ಮೇಲೆ ಕುಳ್ಳಿರಿಸಿ ಗಾಳಿ ಬೀಸುತ್ತಾರೆ. ಆಗ ದೇವರು ಮೈ ಬಿಡುತ್ತದೆ.

೨. ಈರಗಾರರ ಪಟ್ಟದೀಕ್ಷೆ

ಈರಗಾರ ಎಂಬುದು ವೀರಗಾರ ಪದದ ತತ್ಸಮ ರೂಪ. ವೀರಗಾರ ಎಂದರೆ ಬೀರಪ್ಪ ಪ್ರದರ್ಶಿಸುವವನು ಎಂಬ ಅರ್ಥವಿದೆ. ಉದಾತ್ತ ಧೈಯಗಳಾಗಿ ಹೋರಾಡುವವನನ್ನು ವೀರಗಾರನೆಂದೇ ಕರೆಯುತ್ತಾರೆ. ಇಲ್ಲಿ ಬೀರದೇವರಾಗಿ ದಳವಾಯಿಗಾಗಿ ದೇವರ ಹೆಸರಿನಲ್ಲಿ ಈರಿಕೆ ಮಾಡಿಕೊಳ್ಳುವವರನ್ನು ಈರಗಾರರೆಂದು ಕರೆಯುತ್ತಾರೆ. ಇವರು ಧಾರ್ಮಿಕ ಸೇವಾನಿರತ ವ್ಯಕ್ತಿಗಳು. ದೇವರ ವಾರದ ದಿನಗಳಲ್ಲಿ ಹಬ್ಬಗಳಲ್ಲಿ ಮತ್ತು ದಳವಾಯಪ್ಪನಿಗೆ ಮೈದುಂಬಿಸುವ ಸಮಯದಲ್ಲಿ ಇವರು ಈರಿಕೆ ಮಾಡಿಕೊಳ್ಳುತ್ತಾರೆ. ಈರಿಕೆ ಸೇವೆ ಇಲ್ಲದೇ ದಳವಾಯಿ ಮೈದುಂಬುವುದಿಲ್ಲ. ಯಾವುದೇ ಅಚಾತುರ್ಯ ಸಂಭವಿಸದಂತೆ ಬಾಳು ನಡೆಸಿ ಪಟ್ಟ ಇದ್ದಂತೆಯೇ ಮಡಿದರೆ, ಮೊದಲು ಪಂಚಕಳಸ ಹೂಡಿ ಆತನ ಪಟ್ಟ ಇಳಿಸುತ್ತಾರೆ. ನಂತರ ಚೌಕಾಕಾರದ ಗುಂಡಿಯಲ್ಲಿ ಪೂಜಾಭಂಗಿಯಲ್ಲಿ ಕೂರಿಸಿ ಕ್ರಿಯಾವಿಧಾನ ಮುಗಿದ ನಂತರ ಸಮಾಧಿ ಮಾಡುತ್ತಾರೆ. ಇದನ್ನು ಊರ ಹೊರಗಲ ಗುಡಿಯ ಬಳಿಯಲ್ಲೇ ಮಾಡುತ್ತಾರೆ. ನಂತರ ಕಲ್ಲುಗಳಿಂದ ಈರಗಾರರ ಗುಡಿ ಕಟ್ಟುತ್ತಾರೆ. ಇದರಲ್ಲಿ ದೀಪ ಇಡುತ್ತಾರೆ. ದೇವರನ್ನು ತೀರ್ಥಕ್ಷೇತ್ರಗಳಿಗೆ ಕೊಂಡೊಯ್ದು ಶುದ್ಧೋದಕ ಸ್ನಾನ ಮಾಡಿಸಿ ಅಲ್ಲಿಂದ ಬರುವಾಗ ಸತ್ತ ಈರಗಾರನ ಸ್ಮಾರಕವಾಗಿ ಗುಂಡುಕಲ್ಲೊಂದನ್ನು ತಂದು ಊರ ಹೊರಗಲ ಗುಡಿಯಲ್ಲಿ ಇಡುತ್ತಾರೆ.

ಆಯಾ ಬೀರದೇವರಿಗೆ ೧೨ ವರ್ಷಗಳಿಗೊಮ್ಮೆ ನಡೆಯುವ ತೋಪುಜಾತ್ರೆ ದಳವಾಯಪ್ಪನ ಆಯ್ಕೆಯಂತೆ ನಿರ್ದಿಷ್ಟ ಕುಲದ ದೇವರಿಂದ ಈರಗಾರರ ಆಯ್ಕೆಯಾಗುತ್ತದೆ. ಒಂದು ಬೀರದೇವರಿಗೆ ಒಬ್ಬ ದಳವಾಯಿ ಎಂದರೆ ಮೂರು ಅಥವಾ ಐದು ಜನ ಈರಗಾರರು ಇರುತ್ತಾರೆ. ಬೀರದೇವರ ತೋಪುಜಾತ್ರೆಯಲ್ಲಿ ದಳವಾಯಪ್ಪನ ಆಯ್ಕೆಯ ನಂತರ ಈರಗಾರರ ಆಯ್ಕೆಯು ದೇವರಿಂದಲೇ ಆಗುತ್ತದೆ. ಸ್ನಾನ ಮಾಡಿ ಬಂದ ನಂತರ ಪಟ್ಟದೀಕ್ಷೆ ಒಡೆಯರುಗಳಿಂದ ಆಗುತ್ತದೆ.

ಈರಗಾರರ ದೀಕ್ಷೆವಿಧಾನವು ದಳವಾಯಿ ದೀಕ್ಷಾವಿಧಾನದಂತೆ. ಆದರೆ ಕೆಲವು ಬದಲಾವಣೆಗಳು ಇವೆ. ದೀಕ್ಷೆಗೆ ದೇವರ ಪಲ್ಲಕ್ಕಿ ಇಡುವುದಿಲ್ಲ. ನಾಲ್ಕು ಮೂಲೆಗೆ ನಾಲ್ಕು ಗೊನೆ ಬಾಳೆ ಎಲೆ ಹಾಕಿ ಅವುಗಳ ಮೇಲೆ ಅಕ್ಕಿ, ನಿಧಿ ಹಾಕಿ ನಾಲ್ಕು ನೀರು ತುಂಬಿದ ಕುಂಬಗಳನ್ನು ಅವುಗಳ ಮೇಲಿಟ್ಟು ಕಾಯಿ, ಎಲೆ, ಹೊಂಬಾಳೆಯಿಂದ

ಕಳಶಗಳನ್ನು ಸಿದ್ಧಪಡಿಸುತ್ತಾರೆ. ಪೂರ್ವದಿಕ್ಕಿಗೆ ಮತ್ತೊಂದು ದೊಡ್ಡ ಕಳಸ ಹೊಡುತ್ತಾರೆ. ಈ ಐದು ಕಳಸಗಳಿಗೆ ಕಂಕಣ ಕಟ್ಟಿ ಅಂಗನೂಲಿನಿಂದ ಸೂತ್ರ ಹಾಕುತ್ತಾರೆ. ನಂತರ ಈರಗಾರ ದೀಕ್ಷೆ ಪಡೆಯುವವನು ಸ್ನಾನ ಮಾಡಿ, ಹೊಸ ಬಟ್ಟೆ ಧರಿಸಿ, ವಿಭೂತಿ, ಭಂಡಾರ ಹಚ್ಚಿಕೊಂಡು ದೀಕ್ಷೆ ನೀಡುವ ಒಡೆಯರಿಗೆ ಕಾಣಿಕೆ ನೀಡುತ್ತಾನೆ. ನಂತರ ಪಂಚಕಳಶಗಳ ಮಧ್ಯೆ ಕೂರುತ್ತಾನೆ. ಈತನಿಗೂ ದೊಡ್ಡ ಕಳಶಕ್ಕೂ ಸೂತ್ರ ಕಟ್ಟುತ್ತಾರೆ. ನಂತರ ಒಡೆಯರು ಗರಿಕೆ ಪತ್ರೆಯಿಂದ ಹಾಲು, ತುಪ್ಪ, ಗೋಮೂತ್ರವನ್ನು ಈತನಿಗೂ ದೊಡ್ಡ ಕಳಶಕ್ಕೂ ಹಾಕುತ್ತಾರೆ. ನಂತರ ಮೂರು ಜನ ಒಡೆಯರು ಒಟ್ಟಿಗೆ ತಮ್ಮ ಬಲಪಾದವನ್ನು ಈತನ ತಲೆಯ ಮೇಲಿಟ್ಟು ಅಕ್ಷತೆ ಹಾಕುತ್ತಾರೆ. ನಂತರ ಕಿವಿಯಲ್ಲಿ ಗೋಪ್ಯವಾಗಿ ಮಂತ್ರ ಬೋಧಿಸುತ್ತಾರೆ.

ಈರಗಾರ ಧಾರ್ಮಿಕವಾಗಿ ನಡೆಯಬೇಕಾದ ವಿಧಿ-ವಿಧಾನಗಳನ್ನು ತಿಳಿಸುತ್ತಾರೆ. ಪಂಚಕಳಶದಿಂದ ಹೊರಬಂದ ಈರಗಾರ ದೇವರ ಮುಂದೆ 'ಸುಕಸುಕೋ ಶಿವ ಶಿವೋ' ಎಂದು ದೇವರ ಸ್ಮರಣೆ ಮಾಡುತ್ತಾ ತನ್ನ ಹೊಕ್ಕಳಿಗೆ ಚೂಪಾದ ಕತ್ತಿಯಿಂದ ಚುಚ್ಚಿಕೊಳ್ಳುತ್ತಾ ನಾಲ್ಕು ದಿಕ್ಕಿಗೂ ನಾಲ್ಕು ಸಾರಿ ದೀವಟಿಗೆ ಸಲಾಮು ಮಾಡುತ್ತಾನೆ. ಹೀಗೆ ಮಾಡಿಕೊಳ್ಳುವಾಗ ರಕ್ತ ಬಂದರೆ ಪೂಜಾರರು ಭಂಡಾರ ಹಾಕುತ್ತಾರೆ. ಅದರಿಂದಲೇ ಗುಣವಾಗುತ್ತದೆ. ಹೀಗೆ ಒಬ್ಬರ ನಂತರ ಮತ್ತೊಬ್ಬರು ಒಟ್ಟು ಮೂರು ಅಥವಾ ಐದು ಜನ ಈರಗಾರರ ಪಟ್ಟ ದೀಕ್ಷೆ ನಡೆಯುತ್ತದೆ.

ಈರಗಾರರು ದೇವರ ಸೇವಾವ್ಯಕ್ತಿಗಳಾದುದರಿಂದ ಕೆಲವು ಸಾಮಾಜಿಕ ನಿರ್ಬಂಧಗಳಿವೆ. ನಾಯಿ ಕಚ್ಚಾಡುವಲ್ಲಿ, ನಾಲ್ವರು ಗುದ್ದಾಡುವಲ್ಲಿ ಹೋಗುವಂತಿಲ್ಲ. ಪ್ರತಿವಾರದ ದಿನ ಸ್ನಾನ ಮಾಡಿ ದೇವಸ್ಥಾನಕ್ಕೆ ಹೋಗಿ ತಮ್ಮ ಈರಿಕೆ ಸೇವೆ ಮಾಡಿ ಬರಬೇಕು. ಸಾಧ್ಯವಿದ್ದಷ್ಟು ನೀತಿ ನಿಯಮದಿಂದ ಬದುಕಬೇಕು. ಇವರು ವಿವಾಹವಾಗಬಹುದು. ಬೀರದೇವರು ಹೊರ ಹೊರಟಾಗ ದಳವಾಯಪ್ಪನೊಡನೆ ಇವರು ಹೋಗಲೇಬೇಕು. ತೋಪುಜಾತ್ರೆಯಲ್ಲಿ ದೇವರು ಅಪ್ಪಣೆ ಕೊಟ್ಟರೆ ಗಾವು ಸಿಗಿಯಬೇಕು. ನೀತಿ ನೇಮದಿಂದ ಬಾಳಿ ತಮ್ಮ ಜೀವನಪರ್ಯಂತ ಪಟ್ಟ ಉಳಿಸಿಕೊಳ್ಳಬೇಕು. ಯಾವುದೇ ಕಾರಣದಿಂದ ಪಟ್ಟಗೆಟ್ಟರೆ ಒಡೆಯರಿಂದ ದಂಡ ಕಟ್ಟಿ ನೋಸಲು ಪಡೆಯಬೇಕು. ನಂತರ ಯಾವುದೇ ಧಾರ್ಮಿಕ ಕೆಲಸ ಕಾರ್ಯಗಳಲ್ಲಿ ಭಾಗವಹಿಸುವಂತಿಲ್ಲ. ಸ್ನಾನ ಮಾಡಿ ದೇವರ ಪೂಜೆಗೆ ಬರುವಾಗ ಈರಗಾರರು ಒಂದು ಪಂಚೆಯನ್ನು ಸೊಂಟಕ್ಕೆ ಸುತ್ತಿಕೊಂಡು ಕೈಯಲ್ಲಿ ಈರಿಕೆ ಕತ್ತಿಯನ್ನು ಹಿಡಿದುಕೊಂಡು ಬರೀ ಕೈಯಲ್ಲಿ ಇರುತ್ತಾರೆ. ಇತರೆ ಯಾವ ವೇಷಭೂಷಣಗಳು ಇವರಿಗೆ ಇರುವುದಿಲ್ಲ.

ದೇವರ ಸೇವೆಗಾಗಿ ತಮ್ಮ ಬಾಳನ್ನು ದಳವಾಯಿಯಂತೆ ಇವರೂ ಮುಡುಪಾಗಿಟ್ಟಿರುವುದರಿಂದ ಆಯಾ ಬೀರದೇವರ ಒಕ್ಕಲುಗಳು ಪ್ರತಿವರ್ಷ ನಿರ್ದಿಷ್ಟ ಪ್ರಮಾಣದ ಧನ ಧಾನ್ಯ ಕಾಣಿಕೆ ನೀಡುತ್ತಾರೆ ಮತ್ತು ದೇವಸ್ಥಾನದಿಂದಲೂ ಕಾಣಿಕೆ ಸಲ್ಲುತ್ತದೆ.

೩. ಪೂಜಾರಿಗಳ ಪಟ್ಟ

ಹೆಚ್ಚಾಗಿ ಪೂಜಾರಿಗಳು ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತಾರೆ. ಪೂಜಾರರನ್ನು ಆಯಾ ಗುಡಿಕಟ್ಟಿನ ಬೀರದೇವರ ಆಯ್ಕೆ ಮಾಡುತ್ತಾರೆ. ದಳವಾಯಿ ಹಾಗೂ ಈರಗಾರರನ್ನು ಆಯ್ಕೆ ಮಾಡುವಂತೆ ಒಂದು ಗುಡಿಕಟ್ಟಿಗೆ ಸೇರಿದ ಕುರುಬರ ಇಂತಹುದೇ ಕುಲದಲ್ಲಿ ಪೂಜಾರಿಗಳ ಆಯ್ಕೆ ನಡೆಯಬೇಕೆಂಬ ಗುಡಿಕಟ್ಟು ನಿಯಮವಿರುತ್ತದೆ. ಗುಡಿಕಟ್ಟಿನ ಗಾತ್ರಕ್ಕೆ ತಕ್ಕಂತೆ ಐದು, ಹತ್ತು, ಹದಿನೈದು ಜನ ಪೂಜಾರರನ್ನು ಬೀರದೇವರು ಆಯ್ಕೆ ಮಾಡಿದಾಗ ಇವರಿಗೆ ಪೂಜಾರಿಕೆ ಪಟ್ಟವನ್ನು ಒಡೆಯರು ನೀಡಿ ದೀಕ್ಷೆಯನ್ನು ಕೊಟ್ಟು ಮಂತ್ರ ಬೋಧನೆಯನ್ನು ಮಾಡುತ್ತಾರೆ.

ಪೂಜಾರರು ಬೀರದೇವರ ಸ್ಥಾವರಮೂರ್ತಿಯನ್ನು ಪೂಜಿಸುತ್ತಾರೆ. ಬೀರದೇವರ ಗರ್ಭಗುಡಿಯಲ್ಲಿ ಇವರಿಗೆ ಮಾತ್ರ ಪ್ರವೇಶವಿರುತ್ತದೆ. ಇವರು ಸದಾ ಬೀರದೇವರ ಪಲ್ಲಕ್ಕಿಯ ಜೊತೆಗಿದ್ದು ಉತ್ಸವಮೂರ್ತಿಯನ್ನು ನೋಡಿಕೊಳ್ಳುತ್ತಾರೆ. ಇವರದೂ ಸಹ ವಾರ, ಒಂದೊತ್ತು ಮಾಡುವ ನಿಷ್ಠೆಯ ಮತ್ತು ನೀತಿ ನಿಯಮಗಳನ್ನು ಪಾಲಿಸುವ ಶುದ್ಧ ನಿಯಮವಾಗಿರುತ್ತದೆ. ಉತ್ತರ ಕರ್ನಾಟಕದ ಬೀರಪ್ಪನ ಪೂಜಾರಿಗಳಿಗೆ ದೇವರಸಿ, ರಾಯರು ಮತ್ತು ಕಂಟೀಕಾರ ಎಂಬ ಹೆಸರುಗಳಿಂದ ಕರೆಯಲಾಗುತ್ತದೆ. ಮಧ್ಯ ಕರ್ನಾಟಕದ ಬೀರಪ್ಪನ ಪೂಜಾರಿಗೆ ಪ್ರಧಾನರು, ಪೂಜಾರಪ್ಪ, ಮೊದಲಾದ ಹೆಸರುಗಳಿಂದ ಕರೆದರೆ, ಮೈಸೂರು ಪ್ರಾಂತ್ಯದ ಕಡೆಗೆ ಬೀರಪ್ಪನ ಪೂಜಾರಿಗಳಿಗೆ ತಮ್ಮಡಿಗಳು ಎಂದು ಕರೆಯುವುದು ಕಂಡುಬರುತ್ತದೆ.

೪. ಭಿಂಗಯ್ಯನ ಪಟ್ಟದೀಕ್ಷೆ

ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕಿನ ಖಂಡುಗದಹಳ್ಳಿಯಲ್ಲಿ ನೆಲೆಸಿದ ಸೋಮೇಶ್ವರ ಸ್ವಾಮಿಯ ಗುರುರೂಪಿ ಅವತಾರವೆನ್ನಿಸಿದ ಭೃಂಗಿ ಅಥವಾ ಭಿಂಗಯ್ಯನ ಪಟ್ಟವು ಇದಾಗಿದೆ. ಈ ಪ್ರದೇಶದ ಸುಮಾರು ನಲವತ್ತು ಗ್ರಾಮಗಳಲ್ಲಿ ನೆಲೆಸಿದ ಸೋಮೇಶ್ವರನ ಭಕ್ತರಾದ ಕುರುಬ ಜನಾಂಗದ ಸಂಗಮ ವಂಶಸ್ಥರು ಭಿಂಗಯ್ಯನನ್ನು ಜೀವಂತ ಸೋಮೇಶ್ವರ ಎಂದು ತಿಳಿದಿದ್ದಾರೆ. ಸೋಮೇಶ್ವರನು ಬೀರಪ್ಪನ ರೂಪವೆಂದು ಈ ಭಕ್ತರು ಪರಿಗಣಿಸಿದ್ದುದು ತಿಳಿದುಬರುತ್ತದೆ. ಏಕೆಂದರೆ ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ಸೋಮೇಶ್ವರನ ಜಾತ್ರೆಯು ಬೀರಪ್ಪನ ತೋಪುಜಾತ್ರೆಯ ರೀತಿಯಲ್ಲಿಯೇ ಆಚರಿಸುತ್ತಿರುವುದು ಮತ್ತು ಎಲ್ಲ ಆಚರಣೆಗಳ ಉಸ್ತುವಾರಿಯನ್ನು ಕುರುಬ ಜನಾಂಗದವರು ವಹಿಸಿಕೊಳ್ಳುತ್ತಿರುವುದು ಇದಕ್ಕೆ ಕಾರಣವಾಗಿದೆ. ಈ ಒಕ್ಕಲು ಮನೆತಗಳಲ್ಲಿ ಇರುವ ಭಿಂಗಯ್ಯನ ದೀಕ್ಷೆ ಹಾಗೂ ಆಚರಣೆಗಳು ಇಡೀ ಭಾರತ ದೇಶದ ಕುರುಬ ಸಮಾಜದಲ್ಲಿ ಎಲ್ಲೂ ಕಂಡುಬರುವ ವೈಶಿಷ್ಟ್ಯಪೂರ್ಣ ಆಚರಣೆಯಾಗಿ ಕಂಡುಬಂದಿದೆ.

ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ಸೋಮೇಶ್ವರನ ಜಾತ್ರೆಯಲ್ಲಿ ಭಿಂಗಯ್ಯನ ದೀಕ್ಷಾ ಪಟ್ಟಗಟ್ಟುವಿಕೆ ಕಾರ್ಯಕ್ರಮ ನಡೆಯುತ್ತದೆ. ಉದಾಹರಣೆಗೆ ಭಿಂಗಯ್ಯನ ದೀಕ್ಷೆ ತೆಗೆದುಕೊಳ್ಳಲು ಕುರುಬರ ಸಂಗಮ ಕುಲಕ್ಕೆ ಸೇರಿದ ಕೆದಿಗೇರೆ ಎಂಬ ಗ್ರಾಮದಲ್ಲಿ ಸುಮಾರು ೬೬ ಮನೆತನಗಳು ಅರ್ಹವಾಗಿವೆ. ಭಿಂಗಯ್ಯನು

ಸೋಮೇಶ್ವರನ ಒಕ್ಕಲುಗಳು ಅಂದರೆ ಹಾಲುಮತಸ್ಥ ಕುರುಬ ಜನಾಂಗದ ಸಂಗಮ ವಂಶದ ಒಕ್ಕಲು ಮನೆತನಗಳಲ್ಲಿ ನಡೆಯುವ ಜನನ, ಗೃಹಪ್ರವೇಶ, ಮದುವೆ ಇತ್ಯಾದಿ ಎಲ್ಲ ಧಾರ್ಮಿಕ ಆಚರಣೆಗಳನ್ನು ಹಾಗೂ ಮರಣ ಸಂದರ್ಭಗಳಲ್ಲಿ ಸೂತಕ ನಿವಾರಣೆಯನ್ನು ನಡೆಸಿಕೊಡುತ್ತಾನೆ.

ಸೂತಕದ ಸಂದರ್ಭಗಳಲ್ಲಿ ಒಕ್ಕಲು ಮನೆತನಗಳಿಂದ ಭಿಂಗಯ್ಯನಿಗೆ ಕರೆ ಹೋಗುತ್ತದೆ. ಭಿಂಗಯ್ಯ ಸ್ನಾನ ಮಾಡಿ ಮಡಿಬಟ್ಟೆ ತೊಟ್ಟು ತನ್ನ ಪಟ್ಟದ ಪವಿತ್ರ ವಸ್ತುಗಳನ್ನು ಧರಿಸಿ ಅಂದರೆ ಜೋಳಿಗೆ, ಬೆತ್ತ, ಚಾಟಿಗಳನ್ನು ಧರಿಸಿ ಒಕ್ಕಲು ಮನೆಗೆ ಬರುತ್ತಾನೆ. ಈ ಸಂದರ್ಭದಲ್ಲಿ ಪಾದರಕ್ಷೆಗಳನ್ನು ಧರಿಸದೆ ಬರಿ ಪಾದಗಳಿಂದ ಸೋಮೇಶ್ವರನ ಧ್ಯಾನ ಮಾಡುತ್ತಾ ಆಗಮಿಸುವುದು ವಿಶೇಷವಾಗಿದೆ.

ಅದೇ ರೀತಿ ಭಿಂಗಯ್ಯನ ಪಟ್ಟದೀಕ್ಷೆಯನ್ನು ಒಂದು ಶಿಸ್ತುಬದ್ಧ ಕ್ರಮದಲ್ಲಿ ನಡೆಯುತ್ತದೆ. ಇದು ವರ್ಷದಲ್ಲಿ, ವಾರದಲ್ಲಿ, ನಡೆಯುವ ಕಾರ್ಯಕ್ರಮವಲ್ಲ. 'ಭಿಂಗಯ್ಯ ದೀಕ್ಷೆ' ತೊಡುವ ಬಾಲಕರು ಇದಕ್ಕಾಗಿ ವರ್ಷಗಟ್ಟಲೆ ಕಾಯುತ್ತಾರೆ. ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ತೋಪುಜಾತ್ರೆಯಲ್ಲಿ ಬೀರಪ್ಪ ಸೋಮೇಶ್ವರ ಜಾತ್ರೆಯಲ್ಲಿ ಭಿಂಗಯ್ಯನ ದೀಕ್ಷೆಯನ್ನು ಕೊಡಲಾಗುತ್ತದೆ. ಈ ಕಾರ್ಯಕ್ರಮಕ್ಕೆ ದೀಕ್ಷೆ ನೀಡುವುದು ಅಥವಾ ಪಟ್ಟಗಟ್ಟುವುದು ಎಂದೂ ಕರೆಯುತ್ತಾರೆ.

ಹಾಲುಮತದ ಸಂಗಮ ಕುಲದ ಎಲ್ಲರೂ ಭಿಂಗಯ್ಯನ ದೀಕ್ಷೆಯನ್ನು ತೆಗೆದುಕೊಳ್ಳುವ ಹಾಗಿಲ್ಲ. ಭಿಂಗಯ್ಯನಾಗಲು ಅಂದರೆ ಭಿಂಗಯ್ಯನ ದೀಕ್ಷೆಯನ್ನು ಧರಿಸಲು ಬಯಸುವ ವ್ಯಕ್ತಿಗೆ ಇರಬೇಕಾದ ಅರ್ಹತೆ, ಹಕ್ಕುಗಳನ್ನು ಹೀಗೆ ನೋಡಬಹುದು.

೧. ದೀಕ್ಷೆ ಪಡೆಯ ಬಯಸುವ ವ್ಯಕ್ತಿ ಸೋಮೇಶ್ವರ ದೇವರ ಒಕ್ಕಲು ಕುಟುಂಬ ಮೂಲವನ್ನು ಹೊಂದಿರಬೇಕು. ಒಕ್ಕಲು ಕುಟುಂಬ ಅಥವಾ ಒಕ್ಕಲು ಮನೆತನವೆಂದರೆ ಆ ದೇವರನ್ನು ಆರಾಧ್ಯದೈವವಾಗಿ ಹೊಂದಿದ ಮನೆತನ ಎಂದರ್ಥ. ಒಂದೇ ದೇವರಿಗೆ ನಡೆದುಕೊಳ್ಳುವ ಹಲವಾರು ಜಾತಿ, ಧರ್ಮ, ಜನಾಂಗದ ಮನೆತನಗಳು ಈ ವ್ಯಾಖ್ಯಾನದ ವ್ಯಾಪ್ತಿಗೆ ಸೇರುತ್ತವೆ. ಇಲ್ಲಿ ಜಾತಿ, ಧರ್ಮ ಮತ್ತು ಪಂಗಡಗಳು ಗೌಣವಾಗಿವೆಯೆಂಬುದು ವಿಶೇಷ. ಗುಡಿಕಟ್ಟು ಪದವು ಸಹ ಇದೇ ವ್ಯಾಪ್ತಿಗೆ ಸೇರುತ್ತದೆ. ಒಂದು ದೇವಸ್ಥಾನ(ಗುಡಿ)ದ ವ್ಯಾಪ್ತಿಗೆ ಬರುವ ಎಲ್ಲ ಜನಾಂಗಗಳ ಮನೆತನಗಳು ಎಂದು ವ್ಯಾಖ್ಯಾನಿಸಬಹುದು.

೨. ವ್ಯಕ್ತಿಯು ಕುರುಬ ಜನಾಂಗದ ಸಂಗಮ ಕುಲಕ್ಕೆ ಸೇರಿದವನಾಗಿರಬೇಕು. ಸಂಗಮ ಕುಲದ ಇವರು 'ಕೆದಿಗೇರೆ' ಎಂಬ ಗ್ರಾಮಕ್ಕೆ ಸೇರಿದವರಿರಬೇಕು. ಅಂದರೆ ಭಿಂಗಯ್ಯನ ದೀಕ್ಷೆ ಪಡೆಯುವ ಹಕ್ಕು ಕೆದಿಗೇರೆ ಊರಿನ ಕುರುಬ ಜನಾಂಗದ ಸಂಗಮ ಕುಲ(ಸಂಗೇಗೊಲ)ದ ಮಗನಿಗೆ ಮಾತ್ರವಿರುತ್ತದೆ. ಇದೇ ದೇವರ ಒಕ್ಕಲುಗಳಾದರೂ ಬೇರೆ ಊರಿನ ಕುರುಬ ಜನಾಂಗದ ಸಂಗಮ(ಸಂಗೇಗೊಲ) ಕುಲದ ವ್ಯಕ್ತಿಗಳಿಗೆ ಭಿಂಗಯ್ಯನ ದೀಕ್ಷೆಯನ್ನು ಕೊಡಲಾಗುವುದಿಲ್ಲ. ಆ ಪಟ್ಟಕ್ಕೆ ಕೆದಿಗೇರೆ ಗ್ರಾಮದವರು ಮಾತ್ರ ಅರ್ಹರೆಂಬ ಆಚರಣೆ ಇಲ್ಲಿಯವರೆಗೂ ನಡೆದುಕೊಂಡು ಬಂದಿದೆ.

ಕೆದಿಗೇರೆ ಗ್ರಾಮದ ಸಂಗಮ(ಸಂಗೇಗೊಲ) ಕುಲದ ಮಕ್ಕಳಿಗೆ ಮಾತ್ರ ಭೃಂಗಿಯಾಗುವ ಆಶೀರ್ವಾದವನ್ನು ಸೋಮೇಶ್ವರ ಗುರು ದಯಪಾಲಿಸಿದ್ದಾನೆಂದು ಈ ಮನೆತನಗಳ ಹಿರಿಯರು ಹೇಳುವ ಹೆಮ್ಮೆಯ ಮಾತಾಗಿದೆ.

೪. ಹೆಣ್ಣುಮಕ್ಕಳಿಗೆ ದೀಕ್ಷೆಯನ್ನು ಕೊಡಲಾಗುವುದಿಲ್ಲ. ಇದು ಗಂಡುಮಕ್ಕಳು ಮಾತ್ರ ಹೊರಬಹುದಾದ ಹೊರೆಯಾಗಿದ್ದು ಇಲ್ಲಿ ಹೆಣ್ಣುಮಕ್ಕಳಿಗೆ ಸ್ಥಾನವಿಲ್ಲ. ಹಾಗೆಂದು ಮಹಿಳೆಯರಿಗೆ ಇಲ್ಲಿ ಅಗೌರವವಿಲ್ಲ. ಸಂಗಮಕುಲದ ಮನೆಯ ಹೆಣ್ಣುಮಕ್ಕಳಿಗೆ ಇರುವ ಹಕ್ಕು ಸ್ವಾತಂತ್ರ್ಯ ಅಸಾಧಾರಣ ಮತ್ತು ಅನನ್ಯವಾದುದು. ಭಿಂಗಯ್ಯನ ಕೃಪಾಶೀರ್ವಾದಕ್ಕೆ ಮೊದಲು ಪಾತ್ರರಾಗುವವರು ಆ ಮನೆತನದ ಹೆಣ್ಣುಮಕ್ಕಳು ಮಾತ್ರ ಎಂಬ ಮಾತು ಭಕ್ತವಲಯದಲ್ಲಿ ಕೇಳಿಬರುತ್ತದೆ.

೫. ಎಂಟು ವರ್ಷದ ಮೇಲ್ಪಟ್ಟ ಗಂಡುಮಕ್ಕಳೆಲ್ಲರೂ ಈ ದೀಕ್ಷೆ ಪಡೆಯಲು ಅರ್ಹರಾಗಿರುತ್ತಾರೆ. ಎರಡು ಜಾತ್ರೆಗಳು ನಡೆಯುವ ಮಧ್ಯದ ಅವಧಿಯಲ್ಲಿ ಜನಿಸಿದ ಮಕ್ಕಳಿಗೆ ಎಂಟು ವರ್ಷ ತುಂಬಿದೊಡನೆ ಮುಂಬರುವ ಸೋಮೇಶ್ವರ ಜಾತ್ರೆಯಲ್ಲಿ ಭಿಂಗಯ್ಯನ ಪಟ್ಟವನ್ನು ಕಟ್ಟಲಾಗುತ್ತದೆ. ಹುಟ್ಟಿದ ಮಕ್ಕಳಿಗೆ ಭಿಂಗಯ್ಯನ ದೀಕ್ಷೆಯನ್ನು ಕೊಡುವವರೆಗೆ ಕೇಶಮುಂಡನೆ (ಕೂದಲು ತೆಗೆಸುವುದು / ಜವುಳ ತೆಗೆಸುವುದು ನಿಷಿದ್ಧ) ಮಾಡುವುದಿಲ್ಲ. ಅಷ್ಟೇ ಅಲ್ಲದೆ ಅವನ ವಿವಾಹ ಕಾರ್ಯವನ್ನೂ ಮಾಡುವುದಿಲ್ಲ ಎಂಬುದು ವಿಶೇಷವಾಗಿದೆ.

೬. ದೀಕ್ಷೆ ತೆಗೆದುಕೊಳ್ಳುವ ಹುಡುಗ, ಕೋರುಡುಗ ಅಪ್ಪಟ ಬ್ರಹ್ಮಚಾರಿಯಾಗಿರಬೇಕು ಎಂಬುದು ವಿಶೇಷವಾಗಿದೆ.

ದೀಕ್ಷಾ ಸ್ವೀಕಾರ(ಪಟ್ಟಗಟ್ಟುವುದು)

ಭಿಂಗಯ್ಯನ ಪಟ್ಟದ ದೀಕ್ಷಾ ಸ್ವೀಕಾರದ ಧಾರ್ಮಿಕ ಆಚರಣೆಗಳನ್ನು ಬೀರಪ್ಪನ ಸೋಮೇಶ್ವರನ ದೇವಸ್ಥಾನದಲ್ಲಿ ದೈವಸನ್ನಿಧಿಯಲ್ಲಿ ನೆರವೇರಿಸಲಾಗುತ್ತದೆ. ಬೀರಪ್ಪ ಸೋಮೇಶ್ವರ ದೇವರ ಮುಂದಿರುವ ರಾಜಗೋಪುರವನ್ನು ಸಾರಿಸಿ ಶುದ್ಧಗೊಳಿಸಿ ಮಂಟಪದಲ್ಲಿ ಕರಿಕಂಬಳಿ ಗದ್ದುಗೆಯನ್ನು ಸಿದ್ಧ ಮಾಡುತ್ತಾರೆ. ಕಂಬಳಿ ಗದ್ದುಗೆಯ ನಾಲ್ಕು ಮೂಲೆಗಳಲ್ಲಿ ನಾಲ್ಕು ಬಾಳೆ ಎಲೆ ಇಟ್ಟು, ಬಾಳೆ ಎಲೆಯ ಮೇಲೆ ಅಕ್ಕಿ ನೀಡಿ ಹಾಕುತ್ತಾರೆ. ಇದರ ಮೇಲೆ ನಾಲ್ಕು ಕಳಸಗಳನ್ನು ಹೂಡುತ್ತಾರೆ. ಗದ್ದುಗೆಯ ಮಧ್ಯದಲ್ಲಿ ಇನ್ನೊಂದು ಕಳಸವನ್ನು ಹೂಡುತ್ತಾರೆ. ಇದಕ್ಕೆ ಗುರುಕಳಸ ಎಂದು ಕರೆಯುತ್ತಾರೆ. ಹೀಗೆ ಪಂಚಕಳಸ ಪ್ರತಿಷ್ಠಾಪನೆಯನ್ನು ಮಾಡಿ ಅವುಗಳಿಗೆ ಕಂಕಣವನ್ನು ಕಟ್ಟಲಾಗುತ್ತದೆ. ನಂತರ ಹಸಿದಾರ ಅಥವಾ ಅಂಗನೂಲಿನಿಂದ ಸುರಿಗೆಯನ್ನು ನಿರ್ಮಿಸುತ್ತಾರೆ. ಇದಕ್ಕೆ ಸುರಿಗೆ ಸುತ್ತುವುದು ಅಥವಾ ಸೂಸ್ತ್ರ ಹಾಕುವುದು ಎಂದು ಕರೆಯುತ್ತಾರೆ.

ಭಿಂಗಯ್ಯನ ದೀಕ್ಷೆ ಪಡೆಯುವ ಬಾಲಕರು ಕಟ್ಟುನಿಟ್ಟಾದ ನಿಷ್ಠೆಯಿಂದ ಕೆಳಗಿನ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಿ ಮಂಟಪದಲ್ಲಿ ದೇವರಿಗೆ ಅಭಿಮುಖವಾಗಿ ಬಂದು ಕುಳಿತುಕೊಳ್ಳುತ್ತಾರೆ.

೧. ಒಂದು ದಿನ ನಿರಾಹಾರಿಯಾಗಿ ಉಪವಾಸ ವ್ರತವನ್ನು ಕಡ್ಡಾಯವಾಗಿ ಪಾಲಿಸಬೇಕು.

೨. ದೀಕ್ಷೆ ಪಡೆಯುವ ಮುನ್ನ ತಲೆಯನ್ನು ಬೋಳಿಸಿಕೊಂಡು ತೊಟ್ಟ ಬಟ್ಟೆಗಳನ್ನು, ಉಡುದಾರ ಸಮೇತ ಕಳಚಿ ಹಾಕಿ ಸ್ನಾನ ಮಾಡಿ ಭಿಂಗಯ್ಯನ ಹೊಸ ಉಡುಗೆ ತೊಟ್ಟು ದೇವರಿಗೆ ಅಭಿಮುಖವಾಗಿ ಕುಳಿತುಕೊಳ್ಳುತ್ತಾನೆ.

ಗಮನಿಸಬೇಕಾದ ಅಂಶವೆಂದರೆ ಇಲ್ಲಿ ಹಳೆ ಉಡುಗೆ ತೊಡುಗೆ ಬಿಚ್ಚಿ ಬೀಸಾಕುವ ಅವನ ಕ್ರಿಯೆ ಹಳೆಯ ಜನ್ಮ / ಪೂರ್ವಾಶ್ರಮವನ್ನು ತ್ಯಜಿಸುವ ಸಂಕೇತವಾಗಿದೆ. ಹೊಸ ಭಿಂಗಯ್ಯನ ಉಡುಗೆ ಮತ್ತು ಪರಿಕರಗಳನ್ನು ಧರಿಸುವುದೆಂದರೆ ಹಳೆಯ ತಂದೆ ತಾಯಿ ಸ್ಥಾನಿಕ ಕುಟುಂಬಸಂಸ್ಥೆಯಿಂದ ಹೊಸ ಧಾರ್ಮಿಕ ಸಂಸ್ಥೆಗೆ ಅಡಿಯಿಡುವುದರ ಸಂಕೇತವಾಗಿದೆ. ಅಂದರೆ ನಿರ್ದಿಷ್ಟ ತಂದೆ ತಾಯಿಯರ ಮಗನಾಗಿದ್ದವನು ಒಂದು ಧಾರ್ಮಿಕ ಪರಂಪರೆಯಲ್ಲಿ ಸಾರ್ವಜನಿಕರ ಸೊತ್ತಾಗುವ / ಗುರುವಾಗುವ ಮೊದಲ ಹಂತವಾಗಿದೆ.

೩. ಭಿಂಗಯ್ಯನ ಹೊಸ ಧಾರ್ಮಿಕ ಬದುಕಿನ ಪರಿಕರಗಳೆಂದರೆ ಹೊಸ ಪಂಚೆ, ಅಂಗಿ, ವಿಭೂತಿ, ಭಂಡಾರ, ಜಾಗಟೆ, ಜೋಳಿಗೆ, ಬೆತ್ತ ಮತ್ತು ಚಾವಟಿ(ಚಾಟಿ)ಗಳಾಗಿವೆ.

೪. ಹೊಸ ವೇಷ ಧರಿಸಿದ ಭಿಂಗಯ್ಯನಿಗೆ ಹಸಿರು ದಾರದ ಕಂಕಣ ಕಟ್ಟುತ್ತಾರೆ ಮತ್ತು ವಿಭೂತಿಧಾರಣೆ ಮಾಡುತ್ತಾರೆ. ಇದಕ್ಕೆ ಬಸವಧಾರಣೆ ಮಾಡುವುದು ಎಂದೂ ಕರೆಯಲಾಗುತ್ತದೆ.

ಬಸವಧಾರಣೆ ಎಂಬ ಪದವು ತಿಳಿಸುವಂತೆ ಒಂದು ಪಂಥವನ್ನು ತ್ಯಜಿಸಿ ಇನ್ನೊಂದು ಪಂಥವನ್ನು ಧರಿಸುವುದಾಗಿದೆ. ಇಲ್ಲಿ ಹಳೆಯ ಧಾರ್ಮಿಕ ಪದ್ಧತಿಯಿಂದ ಹೊಸ ಧಾರ್ಮಿಕ ಪದ್ಧತಿಯಾದ ಶರಣಶೈವ ಪಂಥವನ್ನು ಆಹ್ವಾನಿಸಿಕೊಂಡ ಸಂಕೇತವನ್ನು ನಾವು ಗಮನಿಸುತ್ತೇವೆ. ಅಂದರೆ ಶರಣರ ನೇಮ, ನಿಷ್ಠೆಗಳ ಕಟ್ಟುಪಾಡಿಗೆ ಅವರು ಒಳಪಡುವ ವಿದ್ಯಮಾನವಾಗಿದೆ.

೫. ದೇವರಿಗೆ ಅಭಿಮುಖವಾಗಿ ಕುಳಿತ ಭಿಂಗಯ್ಯನ ಪಟ್ಟಗಟ್ಟುವ ವ್ಯಕ್ತಿಗೆ ಪವಿತ್ರ ತೀರ್ಥ ಜಲ ಪ್ರೋಕ್ಷಿಸಿ, ನಂತರ ಹಾಲು ತುಪ್ಪ, ಗೋಮ ಇತ್ಯಾದಿ ಪವಿತ್ರ ದ್ರವ್ಯಗಳನ್ನು ಸೂಸ್ತ್ರದಾರದ ಮುಖಾಂತರ ಅವರ ಹಸ್ತಗಳಿಗೆ ವರ್ಗಾಯಿಸುತ್ತಾರೆ. ಇದು ಸೋಮೇಶ್ವರನ ಬೀರಪ್ಪ ದೈವೀಶಕ್ತಿ ಭಿಂಗಯ್ಯನಿಗೆ ಹರಿದು ಬರುವ ಸಂಕೇತವಾಗಿದೆ. ನಂತರ ಅಕ್ಷತೆ ಹಾಕಿ ಕಳಸ ಮತ್ತು ದೈವಗಳಿಗೆ ಪೂಜೆ ಮಾಡುತ್ತಾರೆ. ಮಂಗಳ ವಾದ್ಯಗಳ ಮೊಳಗುತ್ತವೆ.

೬. ದೇವಸ್ಥಾನದ ಮುಖ್ಯ ಅರ್ಚಕರು ಐನೋರು ಒಬ್ಬೊಬ್ಬ ಭಿಂಗಯ್ಯನ ಕಿವಿಯಲ್ಲಿ ಪ್ರತ್ಯೇಕವಾಗಿ ಗೋಪ್ಯಮಂತ್ರವನ್ನು ಬೋಧಿಸುತ್ತಾರೆ. ಇಲ್ಲಿಗೆ ದೀಕ್ಷಾವಿಧಿಯು ಪರಿಪೂರ್ಣವಾದಂತೆ.

೭. ಪಟ್ಟಕಟ್ಟುವ ಆಚರಣೆಯ ಈ ಹಂತದಲ್ಲಿ ಅವರಿಗೆ ಭಿಂಗಯ್ಯನಾಗಿ ಪಾಲಿಸಬೇಕಾದ ಕಠಿಣವಾದ ನೀತಿ ನಿಯಮಗಳ ಪಾಠವನ್ನು ಮಾಡಲಾಗುತ್ತದೆ.

೮. ಅಂತಿಮವಾಗಿ ಅವರಿಗೆ ಹೊಸ ಜೋಳಿಗೆ ತೊಡಿಸಿ, ಕೈಯಲ್ಲಿ ಚಾವಟಿ ಕೊಟ್ಟು ಅಲ್ಲಿ ನೆರೆದ ಭಕ್ತರಲ್ಲಿ ಪ್ರಥಮ ಭಿಕ್ಷಾ ಕಾರ್ಯಕ್ರಮಕ್ಕೆ ಕಳಿಸಲಾಗುವುದು. ಭಕ್ತಾದಿಗಳು ಇವರಿಗೆ ಭಿಕ್ಷೆ ನೀಡಿ ಇವರಿಂದ

ಆಶೀರ್ವಾದ(ಸಣ್ಣ ಪ್ರಮಾಣದ ಚಾಟಿ ಏಟು) ಪಡೆಯುತ್ತಾರೆ. ಈ ಪ್ರಕ್ರಿಯೆ ಸಾಂಕೇತಿಕವಾಗಿದ್ದು ದೀಕ್ಷೆ ತೆಗೆದುಕೊಂಡ ವ್ಯಕ್ತಿ ಸಾರ್ವಜನಿಕರ ಒಂದು ಧಾರ್ಮಿಕ ಪರಂಪರೆಗೆ ಸೇರ್ಪಡೆಯಾದುದನ್ನು ತಿಳಿಸುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಭಿಂಗಯ್ಯನದು ಭಿಕ್ಷುಕ ವೃತ್ತಿಯಲ್ಲ. ಆದರೂ ತಾನು ಗುರು ಪಟ್ಟ ಧರಿಸಿದಾಗ ನಿರಂಹಂಕಾರಿ. ಒಂದು ಧಾರ್ಮಿಕ ಸಂಪ್ರದಾಯಕ್ಕೆ ಒಳಪಟ್ಟ ಜಂಗಮರೂಪಿ ಎಂಬುದನ್ನು ಈ ಸಾಂಕೇತಿಕ ಕ್ರಿಯೆಯ ಮೂಲಕ ಅಭಿವ್ಯಕ್ತಿಸಲಾಗಿದೆ.

೯. ಮೀಸಲು ಧಾನ್ಯಗಳೆಂದರೆ ಪಂಚ ಧಾನ್ಯಗಳು ಮತ್ತು ಪಂಚ ದ್ರವ್ಯಗಳು. ಇದಕ್ಕೆ ಇಡುವ ಖರ್ಚು, ಸುರಗಿ ಸೂಡುವ ಹಸಿದಾರದಿಂದ ಅಂದರೆ ಅಂಗನೂಲಿನಿಂದ ಚೌಕಾಕಾರವಾಗಿ ಸೂಸ್ತ್ರ ಸೂತ್ರ ಹಾಕುವುದು. ಖರ್ಚುಗಳನ್ನು ತೆಲುಗುಗೌಡರ ಸಮಾಜದವರು ನೋಡಿಕೊಳ್ಳುತ್ತಾರೆ. ದೀಕ್ಷೆ ಪಡೆದು ಭಿಂಗಯ್ಯನಾಗುವ ಎಲ್ಲ ಬಾಲಕರಿಗೆ ಬಟ್ಟೆ, ಜೋಳಿಗೆ ಮೊದಲಾದವುಗಳ ಖರ್ಚುಗಳನ್ನು ಕುರುಬ ಸಮಾಜದ ಧಾರೆಕುಲದ ಭಕ್ತರು ವಹಿಸುವುದು ವಿಶೇಷವಾಗಿದೆ.

ಇವರು ತೆಲುಗುಗೌಡರು ಇವರು ಯಾರು, ಯಾವಾಗ, ಎಲ್ಲಿಂದ ಬಂದರೆಂಬ ಕುರಿತು ವಿವರವಾದ ಅಧ್ಯಯನದ ಅಗತ್ಯವಿದೆ. ಪೌರಾಣಿಕ ಕಥೆಯ ಪ್ರಕಾರ ತೆಲುಗುಗೌಡ, ಮುತ್ತಿನ ಶೆಟ್ಟಿ, ಮುತ್ತಿನ ವ್ಯಾಪಾರಿಗಳು ವ್ಯಾಪಾರ ನಿಮಿತ್ತ ಬಂದರೆಂಬುದು ಖಚಿತ. ನಂತರ ಕೃಷಿಯನ್ನು ಉದ್ಯೋಗವಾಗಿ ಆರಿಸಿಕೊಂಡು ಈ ಪ್ರದೇಶದಲ್ಲಿ ನೆಲೆನಿಂತಿದ್ದಾರೆ.

ತೆಲುಗುಗೌಡರೆಂಬುದು ಒಂದು ಜಾತಿಯ ಹೆಸರಾಗಿದ್ದು ಇದು ಬಹುಶಃ ಪ್ರಾಂತೀಯ ಭಾವದಿಂದ ಸ್ಫುರಿಸಿದ್ದಾಗಿದೆ. ಏಕೆಂದರೆ ತೆಲುಗು ಜನಾಂಗಕ್ಕೂ ವಿಜಯನಗರ ಮತ್ತು ವಿಜಯನಗರವನ್ನು ಆಳಿದ ರಾಜಮನೆತನಗಳಿಗೂ ನಿಕಟವಾದ ಸಂಬಂಧವಿರುವ ವಿಚಾರ ಐತಿಹಾಸಿಕವಾದುದು. ಇದಲ್ಲದೆ ಇತಿಹಾಸ ಸಂಶೋಧಕರ ಪ್ರಕಾರ ಪಂಚ ಪೀಠಾಧೀಶ್ವರರಾದ ಆರಾಧ್ಯರ ಮೂಲ ಆಂಧ್ರಪ್ರದೇಶ. ಇಂದಿಗೂ ಅವರ ಮನೆಮಾತು ತೆಲುಗು. ದ್ವೈತ ಸಿದ್ಧಾಂತವಾದಿಗಳೂ, ಆಚಾರ್ಯ ಮಾರ್ಗಿಗಳೂ ಆದ ಇವರು ಆಂಧ್ರದಿಂದ ಸುಮಾರು ಹದಿನಾರು ಅಥವಾ ಹದಿನೇಳನೇ ಶತಮಾನದಲ್ಲಿ ಕರ್ನಾಟಕಕ್ಕೆ ಪ್ರವೇಶಿಸಿದರೆಂದು ಡಾ. ಎಂ.ಎಂ. ಕಲಬುರ್ಗಿಯವರು ಖಚಿತಪಡಿಸಿದ್ದಾರೆ (ಡಾ. ಎಂ.ಎಂ. ಕಲಬುರ್ಗಿ, ಕರ್ನಾಟಕದ ಶರಣರ ಮೇಲೆ ಆಂಧ್ರದ ಆರಾಧ್ಯರ ಸವಾರಿ, ಪ್ರಜಾವಾಣಿ, ೨೦೧೦). ಪೌರಾಣಿಕ ಕಥೆಯನ್ನು ಬದಿಗಿಟ್ಟು ಐತಿಹಾಸಿಕ ವಿಚಾರಗಳನ್ನು ಕೈಗೆತ್ತಿಕೊಂಡು ವಿಮರ್ಶಿಸಿದರೆ ತೆಲುಗುಗೌಡರು ಹಾಲುಮತ ಕುರುಬರೊಂದಿಗೆ ಅವಿನಾಭಾವ ಧಾರ್ಮಿಕ ಸಂಬಂಧವನ್ನು ಹೊಂದಿದ್ದಾರೆ. ಇವರೂ ಸಹ ಸಂಗೇಗೊಲ ಸಂಗಮದ ಕುರುಬ ಸಮಾಜದಂತೆ ವಿಜಯನಗರದ ಅರಸರ ಊಳಿಗದಲ್ಲಿದ್ದು ನಂತರ ಇಲ್ಲಿಗೆ ಬಂದು ವ್ಯಾಪಾರ, ಕೃಷಿಯಲ್ಲಿ ನಿರತರಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಭಿಂಗಯ್ಯನ ಪಟ್ಟಗಟ್ಟುವಿಕೆ

ದಳವಾಯಿ ಎಂಬುದು ಕುರುಬ ಸಮಾಜದ ಆರಾಧ್ಯ ದೈವವಾದ ಶ್ರಿ ಬೀರೇಶ್ವರ ದೈವತದ ಮಾನುಷ ರೂಪ. ದಳವಾಯಿಯನ್ನು ಕುರುಬ ಜನಾಂಗದ ಜೀವಂತ ಬೀರದೇವರು ಎಂದು ಕರೆಯಲಾಗುತ್ತದೆ. ದಳವಾಯಿಯಾಗುವ ಕೋರುಡುಗನ ಆಯ್ಕೆ ಪಟ್ಟಗಟ್ಟುವ ಪ್ರಕ್ರಿಯೆ ಮತ್ತು ಈ ಕಾರ್ಯಕ್ರಮದ ಮೊದಲ ಮತ್ತು ನಂತರ ನಡೆಯುವ ಆಚರಣೆಗಳನ್ನು ಗಮನಿಸಿದರೆ ಇವೆರಡೂ ಅಂದರೆ ಭಿಂಗಯ್ಯ ಮತ್ತು ದಳವಾಯಿ ದೀಕ್ಷೆ ಆಚರಣೆಗಳಲ್ಲಿ ಹಾಗೂ ಸಾಂಪ್ರದಾಯಿಕ ನಡೆಗಳಲ್ಲಿ ಅನೇಕ ಸಾದೃಶ್ಯಗಳು ಮತ್ತು ಹಲವು ಪ್ರಾಸಂಗಿಕ ವೈರುಧ್ಯಗಳು ಕಂಡುಬರುತ್ತವೆ.

ದಳವಾಯಿ ಮತ್ತು ಭಿಂಗಯ್ಯ ಇಬ್ಬರಿಗೂ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಆಯಾ ಒಕ್ಕಲು ದೈವಗಳ ಜಾತ್ರೆಯಲ್ಲಿ ಮಾತ್ರ ಪಟ್ಟಗಟ್ಟಲಾಗುತ್ತದೆ. ಎರಡು ಜಾತ್ರೆಗಳ ನಡುವಿನ ಅವಧಿಯಲ್ಲಿ ಈ ದೀಕ್ಷಾ ಕಾರ್ಯಕ್ರಮವನ್ನು ಇಟ್ಟುಕೊಳ್ಳುವುದಿಲ್ಲ. ಇತ್ತೀಚೆಗೆ ಈ ಮನಸ್ಥಿತಿಯಲ್ಲಿ ಕೆಲವು ಬದಲಾವಣೆಗಳಾಗಿದ್ದು ಪಟ್ಟದ ದಳವಾಯಿ ತೀರಿಕೊಂಡರೆ ದಳವಾಯಿ ನಮ್ಮ ಗುಡಿಕಟ್ಟಿಗೆ ಬೇಕೇ ಬೇಕು ಎಂಬ ಬೇಡಿಕೆ ಬಂದರೆ ದಳವಾಯಿ ಪಟ್ಟಗಟ್ಟಲು ಜಾತ್ರೆಯೊಂದನ್ನು ಆಚರಿಸಲಾಗುತ್ತದೆ. ಇದಕ್ಕೆ ಗೌಡರ, ಬುದ್ಧಿವಂತರ ಭಕ್ತಾದಿಗಳ ಒಪ್ಪಿಗೆ ಬೇಕು. ಇದಕ್ಕೆ ಪಟ್ಟದ ಪರವು ಎಂದೂ ಕರೆಯಲಾಗುತ್ತದೆ.

ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಜಾತ್ರೆಯಲ್ಲಿ ಗಂಗಾಪೂಜೆ ಮತ್ತು ಮೀಸಲು ಅಳಿಸುವ ಆಚರಣೆಗಳ ನಂತರ ಅಂದರೆ ಮರುದಿನ ಈ ಧಾರ್ಮಿಕ ಸೇವಾ ಪಟ್ಟದ ದೀಕ್ಷಾ ಕಾರ್ಯಕ್ರಮ ನಡೆಯುತ್ತದೆ.

ಎರಡೂ ಸಂದರ್ಭಗಳಲ್ಲಿ ದೀಕ್ಷೆ ಪಡೆಯುವ ವ್ಯಕ್ತಿ ಉಪವಾಸ ವ್ರತ ಕೈಗೊಂಡು ಕೇಶಮುಂಡನೆ ಮಾಡಿಸಿಕೊಂಡು ಪವಿತ್ರ ಸ್ನಾನ ಮಾಡಿ ಉಡದಾರ ಸಹಿತ ಹೊಸ ಬಟ್ಟೆ ಧರಿಸಿ ದೀಕ್ಷೆ ತೆಗೆದುಕೊಳ್ಳುತ್ತಾನೆ. ಇದು ಹಳೆ ಹುಟ್ಟು ತ್ಯಜಿಸಿ ಹೊಸ ಹುಟ್ಟು ಪಡೆಯುವುದರ ಸಂಕೇತ. ಬಟ್ಟೆಗಳ ಬಣ್ಣ ಮತ್ತು ಆಯಾ ದೀಕ್ಷೆಗೆ ತಕ್ಕಂತೆ ಬೇರೆ ಬೇರೆಯಾಗಿರುವುದು ಕಂಡುಬರುತ್ತದೆ.

೪. ದಳವಾಯಿ ಪಟ್ಟಗಟ್ಟುವ ಸಂದರ್ಭದಲ್ಲಿ ಗೋಪ್ಯಮಂತ್ರವನ್ನು ಬೋಧಿಸಿದ ನಂತರ ದಳವಾಯಿಯು ದಳವಾಯಿ ತಾಳಿ ಧರಿಸಿದೊಡನೆ ಮೈದುಂಬಿಕೊಂಡು ಭಕ್ತರ ಕಷ್ಟಗಳಿಗೆ ಹೇಳಿಕೆಗಳನ್ನು ಹೇಳುತ್ತಾನೆ. ಆದರೆ, ಭಿಂಗಯ್ಯನು ದೀಕ್ಷೆ ಪಡೆದ ನಂತರ ಜೋಳಿಗೆ ಧರಿಸಿ ಭಿಕ್ಷಾಟನೆಗೆ ಮೊದಲುಗೊಳ್ಳುತ್ತಾನೆ. ಅಂದರೆ ಈ ಪ್ರಥಮ ಭಿಕ್ಷಾಟನೆ ಕೇವಲ ಸಾಂಕೇತಿಕ ಮಾತ್ರ. ಭಿಂಗಯ್ಯ ಯಾವತ್ತೂ ಭಿಕ್ಷೆ ಬೇಡುವುದಿಲ್ಲ. ಇದು ವೈರಾಗ್ಯದ ಸಂಕೇತ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ದಳವಾಯಿ ದೈವತ್ವದ ಪಟ್ಟಕ್ಕೇರಿದರೆ, ಭಿಂಗಯ್ಯ ಗುರು ವಿರಕ್ತವಿನ ಪಟ್ಟಕ್ಕೇರುವುದಾಗಿದೆ.

ಇಬ್ಬರೂ ದೈವೀಪುರುಷರು ದಳವಾಯಿ ಮತ್ತು ಭಿಂಗಯ್ಯ ತಮ್ಮ ದೀಕ್ಷಾಪವಿತ್ರ ವಸ್ತು ಪರಿಕರಗಳನ್ನು ಧರಿಸಿದಾಗ ಮಾತ್ರ ಆ ಪದವಿಗೇರುವುದು ಕಂಡುಬರುತ್ತದೆ. ಅಂದರೆ ದಳವಾಯಿಯು ದಳವಾಯಿ ತಾಳಿ ಧರಿಸಿದಾಗ ಮೈದುಂಬುತ್ತಾನೆ. ಭಿಂಗಯ್ಯ ಜೋಳಿಗೆ ಧರಿಸಿದಾಗ ಪವಿತ್ರ ಗುರುವಾಗುತ್ತಾನೆ.

ದಳವಾಯಿ ಎಂದರೆ ವೀರಪುರುಷ. ನಮಗೆ ಮಹಾಭಾರತದ ಮಹಾಪುರುಷರಲ್ಲಿ ಒಬ್ಬನಾದ ಭೀಷ್ಮಾಚಾರ್ಯರ ನೆನಪು ಶಸ್ತ್ರಾಸ್ತ್ರಧರಿಸಿದಾತ. ಭಿಂಗಯ್ಯ ಜಂಗಮ ರೂಪಿ ಗುರು, ಜೋಳಿಗೆ ಧರಿಸಿದಾತ. ಆದರೆ ಈ ಜೋಳಿಗೆ ಭಿಕ್ಷುಕ ಜೋಳಿಗೆಯಾಗಿರದೆ ಅಲ್ಲಿ ಪವಿತ್ರ ಗುರು ರೂಪದ ದೈವಿಕ ವಸ್ತುಗಳಿರುವುದು ಗಮನಾರ್ಹ.

ದಳವಾಯಿ ಭಕ್ತರ ಬೇಡಿಕೆಗಳಿಗೆ ಸ್ಪಂದಿಸಿ ಕುರುಹು ತೋರುವುದರ ಮೂಲಕ ಪರಿಹಾರ ಸೂಚಿಸುತ್ತಾನೆ. ಇವನು ದೈವಸ್ವರೂಪಿ ಎಂಬ ನಂಬಿಕೆ ಭಕ್ತರಲ್ಲಿದೆ. ಭಿಂಗಯ್ಯ ಧಾರ್ಮಿಕ ವಿಧಿವಿಧಾನಗಳನ್ನು ತೆಗೆದುಕೊಡುವ ಗುರುರೂಪಿ ಜೀವಂತ ಗುರು ಸೋಮಲಿಂಗ ಸೋಮಬೀರಪ್ಪ

ಒಬ್ಬ ಬೀರದೇವರು ಪ್ರಾದೇಶಿಕ ವ್ಯಾಪ್ತಿಗೆ ಒಬ್ಬ ದಳವಾಯಿಯನ್ನು ಮಾತ್ರ ಪಟ್ಟಗಟ್ಟುತ್ತಾರೆ. ಆದರೆ ಕೆಲವು ಗ್ರಾಮಗಳಲ್ಲಿ ಹಾಲುಮತ ಕುರುಬ ಜನಾಂಗ(ಸಂಗಮಕುಲ)ದ ಭಿಂಗಯ್ಯನ ಮನೆತನದಲ್ಲಿ ಜನಿಸಿದ ಎಲ್ಲ ಗಂಡುಮಕ್ಕಳಿಗೂ ಕಡ್ಡಾಯವಾಗಿ ಭಿಂಗಯ್ಯ ಪಟ್ಟಗಟ್ಟುವ ಸಂಪ್ರದಾಯ ಕಂಡುಬರುತ್ತದೆ.

ಹೀಗೆ ಕುರುಬ ಜನಾಂಗದ ದೈವೀಪುರುಷರ ದೀಕ್ಷಾಕ್ರಮ ನಂತರ ಆಚರಣೆಗಳಲ್ಲಿ ಹಲವು ಸಾಂಸ್ಕೃತಿಕ, ಧಾರ್ಮಿಕ ಪರಂಪರೆಯ ಮೂಲನೆಲೆ ಮತ್ತು ನಂಬಿಕೆಗಳು ಒಂದೇ ಆಗಿವೆ. ಮೂಲತಃ ವೀರ ದೇವತೆಗಳ ಸಂಪ್ರದಾಯಗಳು ಕಂಡುಬರುತ್ತವೆ.

ಈರಗಾರರು(ಇಂದಿನ ಪುರವಂತರ ವೇಷಭೂಷಣ)

ಈರಗಾರರು ವೀರಯೋಧರಂತೆ ವೇಷಭೂಷಣ ಧರಿಸುತ್ತಾರೆ. ಕೆಲವು ಕಡೆಗೆ ಬೀರದೇವನ ಜೊತೆಗೆ ಅವನ ದಳಪತಿ ಸೇನಾಪತಿ ಇಲ್ಲವೇ ದಳವಾಯಿಯನ್ನು ಪೂಜಿಸುತ್ತಾರೆ. ಬೀರಪ್ಪನ ಪರಂಪರೆಯಲ್ಲಿ ಬೀರಪ್ಪ ದೈವನಾಗಿದ್ದು ಮಾನವರೂಪಿ ದಳವಾಯಿಗಳು ಜೀವಂತ ಪ್ರತಿನಿಧಿಗಳೆಂದು ಭಾವಿಸಲಾಗುತ್ತದೆ. ೧೨ ವರ್ಷಗಳಿಗೊಮ್ಮೆ ಬೀರದೇವರ ಜಾತ್ರೆಯ ಸಮಯದಲ್ಲಿ ಯೋಗ್ಯ ಪೂಜಾರಿ, ದಳವಾಯಿ ಮತ್ತು ಈರಗಾರರನ್ನು ಆಯ್ಕೆ ಮಾಡಿ ಸಾಂಪ್ರದಾಯಿಕವಾಗಿ ಪಟ್ಟಕಟ್ಟುತ್ತಾರೆ. ಆಯ್ಕೆಯ ಸಮಯದಲ್ಲಿ ದೇವರು ಮೈಯಲ್ಲಿ ಮೈದುಂಬಿ ಬಂದು ತನ್ನ ಸೇವೆಗೆ ಯೋಗ್ಯರಾದವನ್ನು ಮೈಮುಟ್ಟಿ ಸೂಚಿಸುತ್ತದೆ. ಗೊತ್ತಾದ ಪೂಜಾರಿ ಅಥವಾ ದಳವಾಯಿ ಇವರಿಗೆ ಪಂಚಕಳಸ ಹೂಡಿ ಸುರಗಿ ಸುತ್ತಿ ರೇವಣಸಿದ್ಧರಿಗೆ ಸಂಬಂಧ ಕಲ್ಪಿಸಿ ಮಂತ್ರೋಚ್ಚಾರಣೆಯೊಂದಿಗೆ ದೀಕ್ಷೆ ನೀಡುತ್ತಾರೆ.

ಬೀರದೇವರಿಗೆ ಪಲ್ಲಕ್ಕಿ ಇರುವಂತೆ ದಳವಾಯಿಗೆ ಆ ಸೌಲಭ್ಯವಿರುವುದಿಲ್ಲ. ದಳವಾಯಿಗೆ ದೇವರ ಮೈದುಂಬುತ್ತದೆ. ಆಗ ಅವನನ್ನು ಇಬ್ಬರು ಭಕ್ತರು ಬರಿಗಾಲಿನಿಂದ ಹೆಗಲ ಮೇಲೆ ಹೊತ್ತುಕೊಳ್ಳುತ್ತಾರೆ.

ಅವರನ್ನು ದಳವಾಯಿಯ ಕುದುರೆ ಎಂದು ಭಾವಿಸಲಾಗುತ್ತದೆ. ದಳವಾಯಿಗೆ ಅನುಚರರಾಗಿ ಈರಗಾರರು ಇರುತ್ತಾರೆ. ಈರಗಾರರೇ ಬೀರಪ್ಪನ ಸೈನಿಕರು. ಇವರು ದೇವರ ಪೂಜೆಗೂ ಮುನ್ನ ಮಡಿಯಿಂದ ಬಂದು ಸುಕ ಸುಕೋ... ಶಿವ ಶಿವೋ... ಎನ್ನುವತ್ತ ನಾಭಿಯ ಹತ್ತಿರ ಕಬ್ಬಿಣದ ಚೂಪಾದ ಆಯುಧದಿಂದ ಚುಚ್ಚಿಕೊಳ್ಳುತ್ತಾರೆ. ಬೀರದೇವರ ಜಾತ್ರೆಗಳಲ್ಲಿ ಚಿಕ್ಕ ಚಿಕ್ಕ ಆಯುಧ, ಕಬ್ಬಿಣ್ಣದ ಮೊನಚನ್ನು ಹೊಕ್ಕಳು ಭಾಗಕ್ಕೆ ಚುಚ್ಚಿಕೊಳ್ಳುತ್ತಾರೆ. ನಾರಾಯಣನ ನಾಭಿ ಕಮಲದಲ್ಲಿ ಬ್ರಹ್ಮ ಹುಟ್ಟಿಬಂದ ಅಣಕು ಇದು. ಪ್ರತಿಯೊಂದು ಬೀರದೇವರ ಗುಡಿಗೆ ಪ್ರತ್ಯೇಕವಾಗಿ ನೇಮಕಗೊಂಡ ಈರಗಾರರು ಇರುತ್ತಾರೆ. ಅವರು ಸೇರುವಿಕೆಯ ಸಂಖ್ಯಾನುಸಾರ ಆ ಮಂದಿರದ ಪ್ರಾಚೀನತೆ ಮತ್ತು ಭವ್ಯತೆಯ ಮೆರಗು ನೀಡುತ್ತದೆ.

ಬೀರದೇವರ ಪಲ್ಲಕ್ಕಿಯ ಜೊತೆಗೆ ಇಬ್ಬರು ಭಕ್ತರು ಹೆಗಲ ಮೇಲೆ ದಳವಾಯಿ ಸವಾರಿ ಮಾಡುತ್ತಾನೆ. ಸವಾರಿ ಮಾಡುತ್ತಿದ್ದಂತೆ ಅವನು ತಾತ್ಪೂರ್ತಿಕ ಮಾತು ನಿಲ್ಲಿಸುತ್ತಾನೆ. ಭಕ್ತರು ಅಪ್ಪಣೆ ಕೇಳಿದಾಗ ಸನ್ನೆಯ ಮೂಲಕ ಪ್ರತಿಕ್ರಿಯಿಸುತ್ತಾನೆ. ಮುಂದೆ ಸಾಗುವ ದಾರಿ ತೋರಿಸುವಾಗ ತನ್ನನ್ನು ಹೊತ್ತುಕೊಂಡಿರುವ ವ್ಯಕ್ತಿಗಳ ಮುಂಡಾಸು ಹಿಡಿದು ಎಡಕ್ಕೆ ಇಲ್ಲವೇ ಬಲಕ್ಕೆ ತಿರುಗಿಸಿ ಕುರುಹು ನೀಡುವ ದೈವಿಶಕ್ತಿ ದಳವಾಯಿಗಿದೆ. ದಳವಾಯಿಕೆ ಹಿಡಿಯುವ ದಳವಾಯಿಯ ಆಯ್ಕೆ ಮಾಡುವಾಗ ಬೀರದೇವರ ಪಲ್ಲಕ್ಕಿ ತನ್ನ ವ್ಯಾಪ್ತಿಗೆ ಸೇರಿದ ಕುಟುಂಬದವರು ಆಸರೆ ಹಾಕಿರುವ ಸ್ಥಳಕ್ಕೆ ಬಂದು ಅಲ್ಲಿಯು ತನಗೆ ಬೇಕಿರುವ ವ್ಯಕ್ತಿಯನ್ನು ಮುಟ್ಟಿ ಆಯ್ಕೆ ಮಾಡುತ್ತದೆ. ದೇವರ ಪೂಜಾರಿಯು ದೇವರು ಮುಟ್ಟಿದ ವ್ಯಕ್ತಿಯ ಹಣೆಗೆ ಭಂಡಾರ ಹಚ್ಚಿ ತೀರ್ಥ ಹಾಕುತ್ತಾನೆ. ಅಂತಹ ವ್ಯಕ್ತಿ ಪಟ್ಟ ಕಟ್ಟಿಸಿಕೊಳ್ಳಲು ಸಿದ್ಧನಾಗಲು ತಿಳಿಸಲಾಗುತ್ತದೆ. ದೇವರ ದಳವಾಯಿಯ ಪಟ್ಟ ಪಡೆಯುವುದು ದೇವರ ಪವಿತ್ರವಾದ ಆಶೀರ್ವಾದವಿದ್ದಂತೆ. ದಳವಾಯಿಗೆ ಪಟ್ಟ ಕಟ್ಟುತ್ತಿದ್ದಂತೆ ಆ ವ್ಯಕ್ತಿ ಚರ್ಮದ ವಸ್ತುಗಳನ್ನು ಬಳಸುವಂತಿಲ್ಲ. ಕಾಲಿಗೆ ಚರ್ಮದ ಚಪ್ಪಲಿ ಧರಿಸುವಂತಿಲ್ಲ. ಚರ್ಮದ ಬಾರಕೋಲು ಮುಟ್ಟುವಂತಿಲ್ಲ. ಯಾವುದೇ ವಾಹನ ಬಸ್ಸು, ಲಾರಿ, ಸೈಕಲ್‌ಗಳಲ್ಲಿ ಪ್ರಯಾಣಿಸುವಂತಿಲ್ಲ. ಶಾಸ್ತ್ರ, ಸಂಸ್ಕಾರ ವಿಲ್ಲದೇ ಊಟ ಮಾಡುವಂತಿಲ್ಲ. ಚಪ್ಪಲಿಯಿಂದ ಯಾರಿಗೂ ಹೊಡೆಯುವಂತಿಲ್ಲ. ಯಾರಿಗೂ ಬೈಯುವಂತಿಲ್ಲ, ಕೆಟ್ಟ ಕೆಟ್ಟ ಸ್ಥಳಗಳಿಗೆ ಹೋಗುವಂತಿಲ್ಲ. ಹೀಗೆ ಅನೇಕ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಒಂದು ವೇಳೆ ನಿಯಮ ಉಲ್ಲಂಘಿಸಿದರೆ ದಳವಾಯಿ ಪಟ್ಟ ರದ್ದಾಗುತ್ತದೆ.

ದಳವಾಯಿಗೆ ಪ್ರತಿಯೊಂದು ಧರ್ಮದ ಊಟ, ಶುಭ ಸಮಾರಂಭಗಳಲ್ಲಿ ರೈತರು ಬೆಳೆದ ಯಾವುದೇ ಬೆಳೆಯ ಸ್ವಲ್ಪ ಭಾಗವನ್ನು ಎಡೆಯ ರೂಪದಲ್ಲಿ ದಳವಾಯಿಗೆ ಸಲ್ಲಿಸುವ ಪರಂಪರಾಗತ ರೂಢಿ ಪದ್ಧತಿಗಳು ಬೀರದೇವರ ಪರಂಪರೆಯಲ್ಲಿವೆ. ಈಗ ಕೆಲವು ಗ್ರಾಮಗಳಲ್ಲಿ ದಳವಾಯಿಗಳು ನಾನಾ ಕಾರಣಗಳಿಂದ ಬೇರೆ ಬೇರೆ ಸ್ಥಳಗಳಲ್ಲಿ ವಾಸವಾಗಿದ್ದಾರೆ. ಅವರ ಅನುಪಸ್ಥಿತಿಯಲ್ಲಿ ಬೀರದೇವರ ಜಾತ್ರೆಗಳು ನಡೆಯುತ್ತಿವೆ. ಆದರೂ ಪ್ರಸಿದ್ಧ ಬೀರದೇವರ ಮಂದಿರ ಜಾತ್ರೆಗಳಲ್ಲಿ ಅವರ ಉಪಸ್ಥಿತಿ ಇದ್ದೇ ಇರುತ್ತದೆ.

ಪ್ರತಿಯೊಬ್ಬ ಅರಸನಿಗೆ ತನ್ನದೇ ಆದ ವಿಶ್ವಾಸಿಕ ಯೋಧರ ಗರುಡ ರಕ್ಷಣಾ ಪಡೆಯಿರುತ್ತದೆ. ಬೀರಪ್ಪ ಮೂಲದಲ್ಲಿ ಒಬ್ಬ ಅರಸ. ಆದ್ದರಿಂದ ಅವನ ಸೈನಿಕರೇ ಅವನ ಪರಂಪರೆಯಲ್ಲಿ ಈರಗಾರರು, ವೀರಗಾರರು,

ಇಲ್ಲವೇ ಪುರವಂತರ ರೂಪದಲ್ಲಿದ್ದಾರೆ. ಬೀರಪ್ಪನ ವೀರಭದ್ರೀಕರಣದ ಸಮಯದಲ್ಲಿ ಈ ಈರಗಾರರು ಪುರವಂತರಾಗಿ ಪರಿವರ್ತಿತರಾಗಿದ್ದಾರೆ. ಈರಗಾರ ಇಲ್ಲವೇ ಪುರವಂತರು ಅಸ್ತ್ರಶಸ್ತ್ರಗಳನ್ನು ಹೊಂದಿರುತ್ತಾರೆ. ಖಡ್ಗ, ಗುರಾಣಿ, ಢಾಲು ಧರಿಸಿರುತ್ತಾರೆ. ಪೇಟ ಸುತ್ತಿ ಕೊರಳಲ್ಲಿ ರುದ್ರಾಕ್ಷಿ ಮತ್ತು ಹೊಳಪುಳ್ಳ ಚಂದ್ರಾಯುಧ ಧರಿಸುತ್ತಾರೆ. ಇವರು ಧರಿಸುವ ಚಂದ್ರಾಯುಧವು ವೈರಿಗಳನ್ನು ಕೊಲ್ಲಲು ಉಪಯೋಗಿಸುವಂತಹುದಲ್ಲ. ತಮ್ಮ ಅರಸನು ಯುದ್ಧದಲ್ಲಿ ವೀರಮರಣ ಹೊಂದಿದರೆ, ಇಲ್ಲವೇ ಈ ಗರುಡರು ವೈರಿಗಳಿಂದ ಬಂಧನಕ್ಕೆ ಒಳಗಾದರೆ ತಮ್ಮಲ್ಲಿ ಅಡಗಿರುವ ಎಲ್ಲ ಗುಟ್ಟು ಬಯಲಾಗಬಾರದೆಂಬ ಉದ್ದೇಶದಿಂದ ಚಂದ್ರಾಯುಧದಿಂದ ತಮ್ಮ ರುಂಡವನ್ನು ಕೊಯ್ದುಕೊಂಡು ಪ್ರಾಣ ಬಿಡುವಷ್ಟು ವಿಶ್ವಾಸಿಕರಾಗಿರುತ್ತಾರೆ. ಇದು ಇಂದಿನ ಸೈನೈಡ್ ಮಾತ್ರೆ ಹೊಂದಿದ ತಾಯಿತವಿದ್ದಂತೆ. ಅಂತಹ ಗರುಡರೇ ಇಂದಿನ ಈರಗಾರರು ಇಲ್ಲವೇ ಪುರವಂತರು. ಧಾರ್ಮಿಕ ಭೇದದಿಂದ ಇಂದು ಈರಗಾರರು ಬೇರೆ ಮತ್ತು ಪುರವಂತರು ಬೇರೆ ಎಂಬ ಭಾವನೆ ಜನರಲ್ಲಿದೆ. ಹಿಂದಿನ ಕುರುಬರ ಈರಗಾರರೇ ಇಂದಿನ ವೀರಭದ್ರನ ಪುರವಂತರು. ಈ ಭೇದದಿಂದ ಬೀರದೇವರಿಗಾಗಿರುವ ಈರಗಾರರ ಸಂಖ್ಯೆ ಹಂತಹಂತವಾಗಿ ಕುಸಿಯಲು ಕಾರಣ ಎಂದು ಹೇಳಬಹುದು.

ಒಟ್ಟು ಬೀರದೇವರಿಗೆ ಸಂಬಂಧಿಸಿದ ಆಚರಣೆಗಳು, ಸಂಪ್ರದಾಯಗಳು, ಹರಕೆ ಮತ್ತು ನಂಬಿಕೆಗಳು, ಕಲೆಗಳು ಇವುಗಳನ್ನು ಕುರಿತಂತೆ ಈ ಅಧ್ಯಯನದಲ್ಲಿ ವಿವಿಧ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಕಲೆ ಹಾಕಲಾಗಿದೆ.

ಕೊನೆ ಟಿಪ್ಪಣಿಗಳು

೧. ದೇವೇಂದ್ರಕುಮಾರ ಹಕಾರಿ, ಜಾನಪದ ಸಾಹಿತ್ಯದಲ್ಲಿ ದರ್ಶನ -೧೦, ೧೯೮೯, ಪು. ೧೭

೨. ಲಿಂಗಯ್ಯ ಡಿ., ಜಾನಪದ ಶೋಧನ, ೨೦೦೦, ಪು. ೫೭

೩. ಜೀನಹಳ್ಳಿ ಸಿದ್ಧಲಿಂಗಪ್ಪ, ಮಲೆನಾಡು ಜಾನಪದ, ೧೯೮೩, ಪು. ೨೦

೪. ಶಿವಕುಮಾರ ಸ್ವಾಮಿ ಸಿ.ಎಸ್., (ಸಂ) ಕರ್ನಾಟಕ ಜಾತ್ರೆಗಳು, ೧೯೯೮, ಪು. ೫೭

೫. ಸಿದ್ಧಲಿಂಗಯ್ಯ, ಕರ್ನಾಟಕ ಗ್ರಾಮದೇವತೆಗಳು, ೧೯೯೭, ಪು. ೭೨

೬. ಚಂದ್ರಕಾಂತ ಬಿಜ್ಜರಗಿ, ಕುರುಬರ ಹೆಜ್ಜೆಗಳು, ೨೦೦೬ ಪು. ೫೭

೭. ಬಸವಣ್ಣನವರ ವಚನ ಸಂಪುಟ-೧, ಪು. ೧೩೮

೮. ಚಂದ್ರಕಾಂತ ಬಿಜ್ಜರಗಿ, ಕುರುಬರ ಹೆಜ್ಜೆಗಳು, ೨೦೦೬, ಪು. ೬೨

೯. ಶ್ರೀ ರೇವಣ್ಣಸಿದ್ಧೇಶ್ವರ ಮತ್ತು ಬೀರೇಶ್ವರ, ಒಡೆಯರ್ ಡಿ. ಹೆಗ್ಗಡೆ, ೨೦೦೫

೧೦. ಮಲ್ಲನಗೌಡ ಫ., ಅತ್ತಿಕೊಳ್ಳ, ಹಾಲುಮತರ ಚರಿತ್ರೆ, ೧೯೪೯, ಪು. ೨೫

೧೧. ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ, ಹಾಲುಮತ ಪುರಾಣವು, ೧೯೯೨, ಪು. ೩೯

೧೨. ಕಲಬುರ್ಗಿ ಎಂ.ಎಂ., ಭಾನುಮತಿ ವೈ.ಸಿ., (ಸಂ) ಸಿದ್ಧಮಂಕ ಚರಿತೆ, ೨೦೦೪, ಪು. ೨೪

೧೩. ಒಡೆಯರ್ ಡಿ. ಹೆಗ್ಗಡೆ, ಕವಲು ದಾರಿಯಲ್ಲಿ ಕರ್ನಾಟಕ ಕುರುಬ ಜನಾಂಗ, ೨೦೦೩, ಪು. ೨೪

೧೪. ಮಾಹಿತಿ ನೀಡಿದವರು : ಕರಿಯಪ್ಪ ದಳವಾಯಿ, ಬರಗೂರು

೧೫. ಚಂದ್ರಪ್ಪ ಅಜ್ಜಂಪುರ ಹೆಚ್., ಕುರುಬರ ಕುರುಹುಗಳು, ೨೦೧೧, ಪು. ೧೩೯

೧೬. ಮಾಹಿತಿ ನೀಡಿದವರು : ಯೋಗೇಶ ದಳವಾಯಿ, ಬೀರೂರು

೧೭. ಶ್ರೀರಾಮ ಇಟ್ಟಣ್ಣವರ, ಕುರುಬರ ಜಾನಪದ ಡೊಳ್ಳಿನ ಹಾಡು, ಪು. ೭೯

೧೮. ಒಡೆಯರ್ ಡಿ. ಹೆಗ್ಗಡೆ, ಶ್ರೀ ರೇವಣಸಿದ್ಧೇಶ್ವರರು ಶ್ರೀ ಬೀರೇಶ್ವರರು, ೨೦೦೫, ಪು. ೬೭

೧೯. ಹಾಲುಕೆನೆ ಬಾಗೇನಾಡಿನ ಅಲಕನೂರಿನ ಕರಿಸಿದ್ಧ, (ಲೇ) ವಿ.ಎಸ್. ಮಾಳಿ, ಪು. ೧೦೦

೨೦. ಒಡೆಯರ್ ಡಿ. ಹೆಗ್ಗಡೆ, ಹಾಲುಮತ ಕುರುಬ ಜನಾಂಗದ ಇತಿಹಾಸ, ೨೦೦೫, ಪು. ೭೦

೨೧. ಮಾಹಿತಿ ನೀಡಿದವರು : ಶಂಕರಪ್ಪ ಒಡೆಯರ್, ಹೊಸಕೆರೆ

೨೨. ಚಂದ್ರಪ್ಪ ಅಜ್ಜಂಪುರ ಹೆಚ್., ಕುರುಬರ ಕುರುಹುಗಳು, ೨೦೧೧, ಪು. ೧೩೭

೨೩. ಜೀನಹಳ್ಳಿ ಸಿದ್ದಲಿಂಗಪ್ಪ, ಮಲೆನಾಡು ಜಾನಪದ, ೧೯೮೩, ಪು. ೨೦

೨೪. ನಾಯಕ ಹಾ.ಮಾ., ಜಾನಪದ ಸ್ವರೂಪ, ಪು. ೫೫

೨೫. ರಾಗೌ ಮತ್ತು ವಸಂತಕುಮಾರ್ ಎಂ.ಸಿ., ಜಾನಪದ ನಂಬಿಕೆಗಳು, ಪು. ೮

೨೬. ದಾಸೇಗೌಡ ಜಿ.ವಿ., ಜಾನಪದ ನಂಬಿಕೆಗಳು, ೧೯೭೩, ಪು. ೧೦

೨೭. Mareya Leach, Standard Disetanary of Folklore Mythology and Legend, P.146

೨೮. ಮಾಹಿತಿ ನೀಡಿದವರು : ಮಂಜುನಾಥ ಪೂಜಾರಿಯವರು, ಬೀರೂರು

ಅಧ್ಯಾಯ - ೬

ಸಮಾರೋಪ

೧. ಅಧ್ಯಯನದ ಫಲಿತಗಳು

೨. ಅಧ್ಯಯನದ ಹೊಸ ಸಾಧ್ಯತೆಗಳು

ಅಧ್ಯಾಯ ಆರು

ಸಮಾರೋಪ

ಬೀರಪ್ಪನ ಸಂಪ್ರದಾಯ ಸಾಂಸ್ಕೃತಿಕ ಅಧ್ಯಯನ ಎಂಬ ಶೀರ್ಷಿಕೆಯ ಈ ಅಧ್ಯಯನವು ಬೀರಪ್ಪನಿಗೆ ಸಂಬಂಧಿಸಿದ ಸಂಪ್ರದಾಯಗಳ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಮತ್ತು ವರ್ತಮಾನದ ಹಿನ್ನೆಲೆಯನ್ನು ನಿರ್ವಚನೆಗೆ ಒಳಪಡಿಸಿದೆ. ಶಿಷ್ಟ ಹಾಗೂ ಮೌಖಿಕ ಪಠ್ಯಗಳ ಜೊತೆಗೆ ಕ್ಷೇತ್ರಗಳ ಮಾಹಿತಿ, ವಕ್ತೃಗಳು ನೀಡಿದ ಮಾಹಿತಿ, ಜಾತ್ರೆ-ಉತ್ಸವ, ಆಚರಣೆ-ಸಂಪ್ರದಾಯ, ನಂಬಿಕೆ, ಕಲೆ, ದೇವಾಲಯಗಳು ಮತ್ತು ಅವುಗಳ ಭೌಗೋಳಿಕ ಪರಿಸರ ಮುಂತಾದ ಆಕರಗಳನ್ನು ಆಧರಿಸಿ ಈ ಮಹಾಪ್ರಬಂಧವು ರಚನೆಗೊಂಡಿದೆ. ಬೀರಪ್ಪನ ಸಂಪ್ರದಾಯಗಳನ್ನು ಅರ್ಥಮಾಡಿಕೊಳ್ಳುವುದು, ವಿಶ್ಲೇಷಣೆಗೆ ಒಳಪಡಿಸಿ ಚರಿತ್ರೆಯನ್ನು ಕಟ್ಟಿಕೊಳ್ಳುವುದು ಹಾಗೂ ಅವುಗಳಲ್ಲಿ ಅಡಕವಾಗಿರುವ ಪಾರಂಪರಿಕ ಜ್ಞಾನ ಮತ್ತು ಮೌಢ್ಯತೆಗಳನ್ನು ಗುರುತಿಸಿ ಬೆಳಕಿಗೆ ತರಬಹುದಾದ ಅಂಶಗಳನ್ನು ತಿಳಿಸುವುದು ಈ ಸಂಶೋಧನೆಯ ಮುಖ್ಯ ಉದ್ದೇಶವಾಗಿದೆ. ಅಲ್ಲದೆ ಬೀರಪ್ಪನ ಆಚರಣೆ ಮತ್ತು ಸಂಪ್ರದಾಯಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಬೀರಪ್ಪನ ಆಚರಣೆಗಳಲ್ಲಿ ಪ್ರಮುಖವಾಗಿ ಕಂಡುಬರುವುದು ಎರಡು ಬಗೆಯವು, ಮೊದಲನೆಯದಾಗಿ ಉಗ್ರ ಆಚರಣೆಗಳು. ಎರಡನೆಯದಾಗಿ ಸೌಮ್ಯ ಆಚರಣೆಗಳು. ಪವಾಡಗಳು, ಹಲ್ಲುಮರಿ ಸಿಗಿಯುವುದು, ಅಲಗು ಹಾಕಿಕೊಳ್ಳುವುದು, ಕೆಂಡ ಹಾಯುವುದು, ಬಾಯಿಗೆ ಬೀಗ ಹಾಕಿಕೊಳ್ಳುವುದು, ಇನ್ನು ಮುಂತಾದ ಉಗ್ರ ಆಚರಣೆಗಳಿವೆ. ಜನಪದ ದೈವಗಳು ಸಾಮಾನ್ಯವಾಗಿ ಕ್ಷುದ್ರ ದೇವತೆಗಳಾಗಿದ್ದು, ಶಿಷ್ಟ ಸಂಪ್ರದಾಯಕ್ಕಿಂತ ಇವುಗಳ ಆಚರಣೆಗಳು ಭಿನ್ನವಾಗಿರುತ್ತವೆ. ದೇವರನ್ನು ತೃಪ್ತಿಪಡಿಸುವುದಗೋಸ್ಕರ ತನ್ನನ್ನೇ ತಾನು ಹಿಂಸಿಸಿಕೊಂಡು ಅದರ ಮೂಲಕ ದೈವದ ಆಶೀರ್ವಾದವನ್ನು ಹೊಂದುವ ಭರವಸೆಗಾಗಿ ಈ ಆಚರಣೆಗಳಿಗೆ ಒತ್ತು ನೀಡಲಾಗಿದೆ. ಈ ರೀತಿಯ ಆಚರಣೆಗಳು ಜನಪದರಲ್ಲಿ ಸರ್ವೇಸಾಮಾನ್ಯವಾಗಿ ಕಂಡುಬರುತ್ತವೆ. ಇಂತಹ ಸಂಪ್ರದಾಯ,

ಆಚರಣೆಗಳು ತಲೆತಲಾಂತರದಿಂದ ಬೆಳೆದು ಬಂದಿವೆ. ಬೀರಪ್ಪನ ಆಚರಣೆಗಳಲ್ಲಿರುವ ಉಗ್ರತೆಯನ್ನು ಗಮನಿಸಿದಾಗ ಒಂದು ಭೂಪ್ರದೇಶಕ್ಕೆ ಸಂಬಂಧಿಸಿದಂತೆ ಈ ಆಚರಣೆಗಳು ಕಂಡುಬರುತ್ತವೆ. ಕರ್ನಾಟಕದ ದಕ್ಷಿಣ ಮತ್ತು ಉತ್ತರ ಪ್ರದೇಶಗಳಲ್ಲಿ ಕೂಡ ಉಗ್ರ ಆಚರಣೆಗಳು ಜೀವಂತವಾಗಿವೆ. ನಾಗರಿಕತೆಯ ಪ್ರಭಾವಕೊಳ್ಳಗಾಗಿ ಒಂದುಕಡೆ ನೆಲೆ ನಿಂತವರು ತಮ್ಮ ಸಣ್ಣಪುಟ್ಟ ಸಮಸ್ಯೆಗಳಿಗೂ ದೈವವೇ ಕಾರಣವೆಂದು ತಿಳಿದು ಆ ದೈವವನ್ನು ತೃಪ್ತಿಪಡಿಸಿದರೆ ಆಗ ಆ ದೈವ ತಮ್ಮನ್ನು ಕಾಪಾಡುವುದೆಂಬ ನಂಬಿಕೆ ಇಟ್ಟುಕೊಂಡು ಇಂತಹ ಆಚರಣೆಗಳನ್ನು ಆರಂಭಿಸಿದರು. ಈ ನಂಬಿಕೆ ಈಗಲೂ ರೂಢಿಯಲ್ಲಿದೆ. ಉದಾಹರಣೆಗೆ ಹಲ್ಲಿನಿಂದ ಜೀವಂತ ಕುರಿಯನ್ನು ಸಿಗಿಯುವುದು. ಅಲಗ ಹಾಕಿಕೊಳ್ಳುವುದು. ಇವು ಸಹ ಉಗ್ರ ಆಚರಣೆಗಳೆ. ಆದರೆ ಅದಕ್ಕಿಂತ ಶ್ರೇಷ್ಠವಾದ ಮಾನವ ತನ್ನನ್ನು ತಾನು ಹಿಂಸಿಸಿಕೊಂಡರೆ ದೇವರು ಬೇಗ ಒಲಿಯುವನೆಂಬ ಭಾವನೆ ವಿಶ್ವಾಸವಾಗಿ ಪರಿಗಣಿಸಲ್ಪಡುತ್ತದೆ. ಹೀಗಾಗಿ ಆ ರೀತಿಯ ಆಚರಣೆಗಳು ಪರಂಪರೆಯಿಂದಲೂ ಮುಂದುವರಿದು ಕೊಂಡು ಬರುತ್ತಿವೆ.

ಬೀರಪ್ಪನ ಸಂಪ್ರದಾಯ, ಆಚರಣೆಗಳಿಗಾಗಿ ತಮ್ಮನ್ನು ತಾವು ಹಿಂಸಿಸಿಕೊಂಡು ದೇವರನ್ನು ತೃಪ್ತಿಪಡಿಸುತ್ತಿರುವೆ ಎನ್ನುವ ನಂಬಿಕೆಯುಳ್ಳ ಜನಾಂಗಗಳ ದೈಹಿಕ ಮತ್ತು ಮಾನಸಿಕ ಸ್ಥಿತಿಯ ಬಗ್ಗೆ ಎಲ್ಲಿಯೂ ಉಲ್ಲೇಖವಾಗಿಲ್ಲ. ಆ ಜನರು ಒಂದು ರೀತಿಯ ಮೌಢ್ಯಕ್ಕೊಳಗಾಗಿ ಈ ರೀತಿ ಆಚರಣೆಗಳನ್ನು ಮುಂದುವರಿಸಿರುವರೋ ಎಂಬ ಅನುಮಾನ ಎಲ್ಲರನ್ನು ಸಹಜವಾಗಿ ಕಾಡುತ್ತದೆ. ಆದರೆ ಎಲ್ಲ ಆಚರಣೆಗಳು ಮೌಢ್ಯತೆಯಿಂದ ಕೂಡಿಲ್ಲ. ಇಲ್ಲಿನ ಕೆಲವು ಆಚರಣೆಗಳು ವೈಜ್ಞಾನಿಕತೆಯಿಂದ ಕೂಡಿವೆ. ಅಲ್ಲದೆ ಇಲ್ಲಿನ ಆಚರಣೆಗಳಲ್ಲಿ ಪವಾಡ ಮಾಡಿದ ವ್ಯಕ್ತಿಯ ಹಾಗೂ ಅವನ ಕುಟುಂಬದ ಸ್ಥಿತಿಗತಿಗಳೇನು ಎಂಬುದರ ಬಗ್ಗೆ ಯಾರೂ ಯೋಚಿಸುವುದಿಲ್ಲ. ಸ್ವತಃ ಅವರೇ ದೇವರಿಗಾಗಿಯೇ ಈ ದೇಹವಿದೆ ಎಂಬ ಭಾವನೆಯನ್ನು ಹೊಂದಿದ್ದಾರೆಂದು ತಿಳಿದುಕೊಳ್ಳುತ್ತಾರೆ. ಜೊತೆಗೆ ಇವರು ಮಾಡುವ ಕ್ರಿಯೆಗಳು ಜನಸಾಮಾನ್ಯರಲ್ಲಿ ಪವಾಡಗಳು ಎಂದು ಬಿಂಬಿತವಾಗಿರುವುದರಿಂದ ಭಗವಂತನ ಶಕ್ತಿಯನ್ನು ತೋರುವುದರ ಪ್ರತೀಕವಾಗಿ ಈ ಆಚರಣೆಗಳನ್ನು ನಡೆಸಬೇಕಾದ ಅನಿವಾರ್ಯತೆಯಿದೆ ಎನ್ನುವ ಮನಸ್ಥಿತಿ ಹೊಂದಿದ್ದಾರೆ. ಆದರೆ ಬದಲಾಗುತ್ತಿರುವ ಸಮಾಜದಲ್ಲಿ ಈ ಆಚರಣೆಗಳ ಪ್ರಸ್ತುತತೆಯ ಬಗ್ಗೆ ಚಿಂತಿಸುವ ಅನಿವಾರ್ಯತೆಯಿದೆ. ಈ ದೃಷ್ಟಿಕೋನದಿಂದ ಹುಟ್ಟಿನಿಂದ ಸಾವಿನವರೆಗೆ ಒಂದು ಸಮುದಾಯದವನ್ನು ಅಂದರೆ ಬೀರಪ್ಪನನ್ನು ಆರಾಧಿಸುವ ಸಮುದಾಯವನ್ನು ನಿಯಂತ್ರಿಸುವ ಹಲವಾರು ನಂಬಿಕೆಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಬೀರಪ್ಪನಿಗೆ ಸಂಬಂಧಿಸಿದ ಅಥವಾ ಆತನ ಆರಾಧನೆಯ ಹೆಸರಿನಲ್ಲಿ ಪ್ರದರ್ಶನಗೊಳ್ಳುತ್ತಿರುವ ಕಲೆಗಳು ಒಂದೆಡೆ ಸಾಮೂಹಿಕ ಮನರಂಜನೆಯ ಸಾಧನಗಳಾಗಿರುವಂತೆ ಮತ್ತೊಂದೆಡೆ ಮನುಷ್ಯನ ಬದುಕಿನ ಭಾವಾನುಭವ ಹಾಗೂ ಧಾರ್ಮಿಕ ಪರಿಸರದೊಂದಿಗೆ ಬೆಳೆದು ಬಂದಿರುವ ಡೊಳ್ಳು ಕುಣಿತ, ದಟ್ಟಿ ಕುಣಿತ, ಸದರ ಮಾಡುವುದು, ವೀರಗಾರರ ಕುಣಿತ, ಮುಂತಾದವು ಆಚಾರ-ವಿಚಾರ ಸಂಪ್ರದಾಯ ಪರಂಪರೆಗಳನ್ನು ಪ್ರತ್ಯಕ್ಷೀಕರಿಸುವ ಮೂಲಕ ಜನಜೀವನದೊಂದಿಗೆ ಬಿಡಿಸಲಾಗದ ನಂಟನ್ನು ಸ್ಥಾಪಿಸಿಕೊಂಡಿವೆ. ಹಾಗೆಯೇ ಈ ಜನರು ಹೇಗೆ ಬೀರಪ್ಪನನ್ನು ಸೃಷ್ಟಿಸಿಕೊಂಡಿದ್ದಾರೆ ಎಂಬುದನ್ನು ವಿವರಿಸಲಾಗಿದೆ.

ಬೀರಪ್ಪನ ಸಂಪ್ರದಾಯ ಆಚರಣೆಗಳ ಹಾಗೂ ಐತಿಹ್ಯಗಳು, ಕಾವ್ಯಗಳು, ಪುರಾಣಗಳು, ಕಥೆಗಳ ಸಂಗ್ರಹಗಳು ಪ್ರಕಟಗೊಂಡಿವೆ. ಆದರೆ ಇವುಗಳನ್ನು ಕುರಿತು ವ್ಯವಸ್ಥಿತವಾದ ಮತ್ತು ಸಮಗ್ರವಾದ ವಿಶ್ಲೇಷಣೆಯ ಅಧ್ಯಯನಗಳು ನಡೆದಿರುವುದು ಕಡಿಮೆ. ಈ ಕೊರತೆಯನ್ನು ಮನಗಂಡು ಅಧ್ಯಯನ ನಡೆಸಿ ಸೂಕ್ತ ರೀತಿಯಲ್ಲಿ ಮುಂದಿನ ಜನಾಂಗಕ್ಕೆ ತಲುಪಿಸುವ ಕಾರ್ಯ ಮಾಡಲಾಗಿದೆ.

ಅಧ್ಯಯನದ ಅನುಕೂಲಕ್ಕಾಗಿ ಪ್ರಸ್ತುತ ಮಹಾಪ್ರಬಂಧವನ್ನು ಆರು ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡು ನಿರೂಪಿಸಲಾಗಿದೆ. ಆ ಮೂಲಕ ಬೀರಪ್ಪನ ಸಾಂಸ್ಕೃತಿಕ ಅಸ್ಮಿತೆಯ ವಿವಿಧ ಮುಖಗಳನ್ನು ಪರಿಚಯಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ಮಹತ್ವ, ವಿಧಾನ ಮತ್ತು ವ್ಯಾಪ್ತಿಯನ್ನು ಕುರಿತು ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಬೀರಪ್ಪನನ್ನು ಕುರಿತಾದ ಆಕರಗಳನ್ನು ಚರ್ಚಿಸಲಾಗಿದೆ. ಅಧ್ಯಯನದ ವೈಧಾನಿಕತೆಗಾಗಿ, ಲಿಖಿತ ಆಕರಗಳು, ಮೌಖಿಕ ಆಕರಗಳು ಮತ್ತು ದಾಖಲು ಆಕರಗಳು ಎಂದು ವಿಂಗಡಿಸಿ ಕೊಂಡು ಕಾವ್ಯ, ಪುರಾಣ, ಶಾಸನ, ಸಂಪ್ರದಾಯ, ಆಚರಣೆ, ನಂಬಿಕೆ ಮುಂತಾದ ಆಕರಗಳನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಬೀರಪ್ಪನ ಇತ್ತಿವೃತ್ತ ವಿಚಾರವನ್ನು ಚರ್ಚಿಸಲಾಗಿದೆ. ಅಂದರೆ ಆತನ ಪೂರ್ವಜರ ಹಿನ್ನೆಲೆ, ಜನನ, ತಂದೆ-ತಾಯಿ, ಬಾಲಲೀಲೆ, ಮದುವೆ, ಶಿಷ್ಯಪರಂಪರೆ, ಗುರುಶಿಷ್ಯರ ಸಂಬಂಧ, ದೇಶ ಪರ್ಯಟನೆ, ಪವಾಡಗಳು, ಬೀರಪ್ಪ-ವೀರಭದ್ರನಾಗಿ-ವಿರೂಪಾಕ್ಷನಾಗಿ ರೂಪಾಂತರಗೊಂಡಿರುವ ಕಥನಗಳನ್ನು ಚಾರಿತ್ರಿಕವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಬೀರಪ್ಪನ ಕ್ಷೇತ್ರಗಳನ್ನು ಮುಖ್ಯವಾಗಿಟ್ಟುಕೊಂಡು ಪ್ರಮುಖ ಕ್ಷೇತ್ರಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿ ವಿವರವಾಗಿ ವಿಶ್ಲೇಷಣೆ ಮಾಡಲಾಗಿದೆ. ಬಿಜಾಪುರ, ಬಾಗಲಕೋಟೆ, ಬೆಳಗಾವಿ, ಕೊಪ್ಪಳ, ಹಾವೇರಿ, ಗದಗ, ದಾವಣಗೆರೆ, ಚಿಕ್ಕಮಗಳೂರು, ಬೆಂಗಳೂರು, ಮೈಸೂರು, ಮಂಡ್ಯ, ಹಾಸನ, ಚಿತ್ರದುರ್ಗ, ತುಮಕೂರು, ಇನ್ನು ಮುಂತಾದ ಜಿಲ್ಲೆಗಳಲ್ಲಿ ಬೀರಪ್ಪನ ಸಾಂಸ್ಕೃತಿಕ ನೆಲೆಗಳನ್ನು ಹಾಗೂ ದೇವಾಲಯಗಳ ಶೈಲಿಗಳನ್ನು, ಆ ನೆಲೆಮೂಲ ಕಥನಗಳನ್ನು, ದೈವಮೂಲ ಕಥನಗಳನ್ನು, ಮೂರ್ತಿ ಶಿಲ್ಪಗಳ ಶೈಲಿಗಳನ್ನು ಪರಿಚಯಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಆಚರಣೆ, ಉತ್ಸವ, ಜಾತ್ರೆ, ಸಂಪ್ರದಾಯ, ಧಾರ್ಮಿಕ ಆಚರಣೆಗಳು, ಬೀರದೇವರ ಆಚರಣೆಗಳು, ಹರಕೆಗಳು ಮತ್ತು ನಂಬಿಕೆಗಳು, ಕಲೆಗಳು, ಬೀರಪ್ಪನ ವಕ್ತಾರರ ಪಟ್ಟದ ಆಯ್ಕೆ ಮತ್ತು ದೀಕ್ಷೆ ಎಂಬ ವಿವಿಧ ಪಾರಂಪರಿಕ ಆಚರಣೆ ಮತ್ತು ಸಂಪ್ರದಾಯಗಳನ್ನು ವಿವಿಧ ಸಾಂಸ್ಕೃತಿಕ ಆಯಾಮಗಳಿಂದ ಚರ್ಚಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಬೀರಪ್ಪನ ಸಂಪ್ರದಾಯ ಸಾಂಸ್ಕೃತಿಕ ಅಧ್ಯಯನ ಎಂಬ ಶೀರ್ಷಿಕೆಯಿಂದ ಮೂಡಿ ಬಂದಿರುವ ಅಧ್ಯಯನದ ಫಲಿತಗಳನ್ನು ಹಾಗೂ ಈ ಕ್ಷೇತ್ರದಲ್ಲಿ ಅಧ್ಯಯನ ಮಾಡಬಹುದಾದ ಕ್ಷೇತ್ರಗಳ ವಿವರಗಳನ್ನು ಸಂಕ್ಷಿಪ್ತವಾಗಿ ಕೊಡಲಾಗಿದೆ. ಪ್ರಬಂಧಕ್ಕೆ ಪೂರಕವಾಗಿ ಮತ್ತು ಅಧ್ಯಯನದಲ್ಲಿ ಚರ್ಚಿಸಲಾದ ಮಹತ್ವದ ದಾಖಲೆಗಳನ್ನು ಅನುಬಂಧಗಳಲ್ಲಿ ನೀಡಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಬೀರಪ್ಪನ ಸಮಗ್ರ ಜೀವನದ ಪ್ರಮುಖ ವಿವರಗಳನ್ನು ವಿಶ್ಲೇಷಿಸಲಾಗಿದೆ. ಒಟ್ಟಿನಲ್ಲಿ ಬೀರಪ್ಪನ ಇತ್ತಿವೃತ್ತ ವಿಚಾರದಿಂದ ಹಿಡಿದು ಇಂದಿಗೂ ಜನವರ್ಗದ ಧಾರ್ಮಿಕ ಶಕ್ತಿಗಳಾಗಿ ಆರಾಧಾನೆಗೊಳ್ಳುತ್ತಿರುವ ಹಾಲುಮತ ಸಾಂಸ್ಕೃತಿಕ ವೀರರ, ಧಾರ್ಮಿಕ ಪುರುಷರ ಜೊತೆಗೆ ಹಾಲುಮತ ಪುರಾಣಗಳ ಪಾತ್ರಗಳನ್ನು ಸೈದ್ಧಾಂತಿಕವಾಗಿ ವಿಶ್ಲೇಷಿಸುವ ಉದ್ದೇಶದಿಂದ ಸಿದ್ಧಗೊಂಡ ಮಹಾಪ್ರಬಂಧ ಇದಾಗಿದೆ. ಅಂದರೆ ಆಚರಣೆ ಸಂಪ್ರದಾಯಗಳನ್ನು ವಸ್ತುನಿಷ್ಠವಾಗಿ ಅಧ್ಯಯನಕ್ಕೆ ಒಳಪಡಿಸುವ ಮಹತ್ವಕಾಂಕ್ಷೆಯಿಂದ ಪ್ರಸ್ತುತ ಮಹಾಪ್ರಬಂಧವನ್ನು ಸಿದ್ಧಗೊಳಿಸಲಾಗಿದೆ. ಬೀರಪ್ಪನ ಸಾಂಸ್ಕೃತಿಕ ಚರಿತ್ರೆಯನ್ನು ಚಾರಿತ್ರಿಕ ಹಿನ್ನೆಲೆಯಿಂದ ಅರಿಯುವುದಕ್ಕೆ ಪ್ರಸ್ತುತ ಅಧ್ಯಯನವು ಸಹಾಯ ಆಗಬಹುದು ಎನ್ನುವ ಆಶಯ ಈ ಅಧ್ಯಯನಕ್ಕಿದೆ.

ಅಧ್ಯಯನದ ಫಲಿತಗಳು

೧. ಬೀರಪ್ಪನನ್ನು ಭಾರತದಲ್ಲಿ ಹಲವು ಸಮುದಾಯಗಳು ಹಲವು ನಾಮಗಳಿಂದ ಆರಾಧನೆ ಮಾಡುತ್ತಿವೆ. ಆದರೆ ಕರ್ನಾಟಕದಲ್ಲಿ ಸಿಗುವಷ್ಟು ಭಿನ್ನ ನಾಮಗಳು, ಸೃಷ್ಟಿ ಮೂಲ ಕಥನಗಳು, ಚಾರಿತ್ರಿಕ ಕಥನಗಳು ಮತ್ತು ಸಂಸ್ಕೃತೀಕರಣಗೊಂಡ ಕಥನಗಳು ಬೇರೆ ಯಾವುದೇ ರಾಜ್ಯದಲ್ಲಿ ಸಿಗುವುದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಇದಕ್ಕೆ ಸಲವಾರು ಕಾರಣಗಳಿವೆ. ಅಂತಹ ಕಾರಣಗಳಲ್ಲಿ ಪ್ರಮುಖ ಕಾರಣಗಳೆಂದರೆ, ಬೀರಪ್ಪ ಮೂಲ ನೆಲೆ ಕರ್ನಾಟಕ(ಸಿರಡೋಣ)ದಲ್ಲಿರುವುದು. ಶಿವನೆಂದು ಆರಾಧನೆ ಮಾಡುತ್ತಿರುವುದು. ಈತನನ್ನು ಕುಲದೈವವನ್ನಾಗಿ ಮಾಡಿಕೊಂಡು ಆರಾಧನೆ ಮಾಡುತ್ತಿದ್ದ ಪ್ರಾಚೀನ ಕಾಲದ ಸಮುದಾಯ ವೃತ್ತಿ ಆಧಾರಿತವಾಗಿ ಛಿದ್ರಗೊಂಡು ವಿಭಿನ್ನವಾದ ಅಸ್ತಿತ್ವವನ್ನು ಕಟ್ಟಿಕೊಂಡಿರುವುದು. ಕುರಿ, ಮೇಕೆ, ಎಮ್ಮೆ ಮತ್ತು ಗೋವುಗಳ ಸಾಕಾಣಿಕೆ ಹಾಗೂ ಕೃಷಿ (ಉದಾಹರಣೆಗೆ ಒಕ್ಕಲಿಗರು ಆರಾಧಿಸುವ ಭೈರವ) ಸಮುದಾಯಗಳಾಗಿ ರೂಪಾಂತರಗೊಂಡವು. ಆ ವೇಳೆಗಾಗಲೇ ಆರಾಧನೆ ಮಾಡುತ್ತಿದ್ದ ಬೀರಪ್ಪನನ್ನು ತಮ್ಮ ಕುಲಮೂಲ ಮತ್ತು ವೃತ್ತಿಮೂಲ ಕಥನಗಳಿಗೆ, ಅನುಗುಣವಾಗಿ ರೂಪಾಂತರಿಸಿಕೊಂಡರು (ಉದಾಹರಣೆಗೆ ಲಿಂಗಾಯತರು ಆರಾಧನೆ ಮಾಡುತ್ತಿರುವ ವೀರಭದ್ರ) ಆಗ ಈ ಕಥನಗಳಿಗೆ ಅನುಗುಣವಾಗಿ ಆಚರಣೆ ಮತ್ತು ಸಂಪ್ರದಾಯಗಳು ರೂಪಾಂತರಗೊಂಡವು. ಭಿನ್ನ ಪಠ್ಯಗಳಾಗಿ ಅಭಿವ್ಯಕ್ತಿಗೊಂಡವು ಅಥವಾ ಮೂಲ ಆಚರಣೆಗಳೊಂದಿಗೆ ಸಂಬಂಧವನ್ನು ಇಟ್ಟುಕೊಂಡು ಭಿನ್ನ ನೆಲೆಯಲ್ಲಿ ವಿಸ್ತರಣೆಯಾದವು. ಹಾಗಾಗಿಯೇ ವೃತ್ತಿ ಆಧಾರಿತ ಆಚರಣೆ ಮತ್ತು ಸಂಪ್ರದಾಯಗಳು ಅಥವಾ ಚರಿತ್ರೆ, ಕುಲ ಆಧಾರಿತ ಆಚರಣೆ ಮತ್ತು ಸಂಪ್ರದಾಯಗಳು ಅಥವಾ ಚರಿತ್ರೆಯನ್ನು ಕಾಣುತ್ತೇವೆ.

ಇವುಗಳಲ್ಲಿ ಹಾಲುಮತ ಸಮುದಾಯದ ಆಚರಣೆ ಮತ್ತು ಸಂಪ್ರದಾಯಗಳು ಮೂಲ ಎಂದು ಹೇಳಬಹುದು.

೨. ಹಾಲುಮತ ಸಮುದಾಯದಲ್ಲಿ ಬೀರಪ್ಪನ ಆಚರಣೆ ಮತ್ತು ಸಂಪ್ರದಾಯಗಳು ಆತನ ಪರಿವಾರ ದೈವಗಳೊಂದಿಗೆ ಬೆರೆತುಗೊಂಡು ಜೀವಂತವಾಗುತ್ತಿವೆ. ಕರ್ನಾಟಕದಲ್ಲೂ ಇವುಗಳ ಪ್ರಾದೇಶಿಕ ಭಿನ್ನತೆ ಗಳನ್ನು ಕಾಣಬಹುದು. ಕರ್ನಾಟಕ ಮಹಾರಾಷ್ಟ್ರ ಗಡಿನಾಡು ಪ್ರದೇಶದಲ್ಲಿ ಗುರು-ಶಿಷ್ಯ ಪರಂಪರೆಯಲ್ಲಿ ಜೀವಂತಗೊಳ್ಳುತ್ತಿವೆ. ಅಂದರೆ ಬೀರಪ್ಪನ ಸಾಕುಮಗ ಅಥವಾ ಶಿಷ್ಯನಾದ ಹುಲಿಜಂತಿ ಮಾಳಿಂಗರಾಯ, ಮಾಳಿಂಗರಾಯನ ಸಾಕುಮಗ ಅಥವಾ ಶಿಷ್ಯ ಬಿಜ್ಜರಗಿ ಬುಳ್ಳಪ್ಪ (ಈತ ಬೀರಪ್ಪ/ ಕರಿದೇವರ ಶಿಷ್ಯನು ಹೌದು) ಬೀರಪ್ಪನ ಅಕ್ಕ ಮಾಯವ್ವ, ಬೀರಪ್ಪನ ಶಿಷ್ಯನಾದ ವಿಠೋಭಾ, ಇಟ್ಟಪ್ಪ, ವಿಠಲ ಕೆಲವು ಕಥನಗಳಲ್ಲಿ ಬೀರಪ್ಪನ ತಮ್ಮನೆಂದು ಹೇಳಲಾಗಿದೆ. ಹೀಗೆ ಹಾಲುಮತದ ಮುಂತಾದ ದೈವಗಳೊಂದಿಗೆ ಸಂಯುಕ್ತಗೊಂಡು ಜೀವಂತಗೊಳ್ಳುತ್ತಿವೆ. ದಕ್ಷಿಣ ಕರ್ನಾಟಕದಲ್ಲಿ ವಿಶೇಷವಾಗಿ ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ತುಮಕೂರು ಜಿಲ್ಲೆಗಳ ಪ್ರದೇಶಗಳಲ್ಲಿ ಗುಡಿಕಟ್ಟು ದೈವಗಳು ಎನ್ನುವ ವ್ಯವಸ್ಥೆಯಲ್ಲಿ ಬೀರಪ್ಪನ ಆಚರಣೆ ಮತ್ತು ಸಂಪ್ರದಾಯಗಳು ಜೀವಂತಿಕೆ ಪಡೆದುಕೊಳ್ಳುತ್ತಿವೆ.

೩. ಬೀರಪ್ಪನ ಆಚರಣೆ ಮತ್ತು ಸಂಪ್ರದಾಯಗಳು 'ಅಮ್ಮ' ದೈವಗಳೊಂದಿಗೆ ಹೆಚ್ಚಾಗಿ ಸಾಂಸ್ಕೃತಿಕ ಸಂಬಂಧಗಳನ್ನಿಟ್ಟುಕೊಂಡಿವೆ. ಅಂದರೆ ಯಲ್ಲಮ್ಮ, ಮಾಯಮ್ಮ, ಓರಂಗಲ್ಲಮ್ಮ ಇತ್ಯಾದಿ ದೈವಗಳು ಸಂಬಂಧ ಪಡೆದುಕೊಂಡು ಜೀವಂತಗೊಳ್ಳುತ್ತಿರುವುದು ಹೆಚ್ಚು. ಕೆಲವು ಆಚರಣೆಗಳು ನಡೆಯುವ ಸಂದರ್ಭಗಳಲ್ಲಿ ಆ ಆಚರಣೆಗಳ ನಾಯಕತ್ವ ವಹಿಸಿಕೊಳ್ಳುತ್ತಿರುವುದು ವಿಶೇಷ. ಉದಾಹರಣೆಗಾಗಿ ತೋಪುಜಾತ್ರೆಗೆ ಗ್ರಾಮದೊಳಗೆ ಆಗಮಿಸುವ ಗುರು ರೇವಣಸಿದ್ಧನನ್ನು ಗ್ರಾಮದೊಳಗಡೆ ಕರೆತರುವಾಗ ನಡೆಯುವ ಆಚರಣೆಯ ನಾಯಕತ್ವವನ್ನು ಈ ಅಮ್ಮ ದೈವಗಳು ವಹಿಸಿಕೊಳ್ಳುತ್ತವೆ. ಉಗ್ರವಾದ (ಹರಿಮರಿ ಸೇವೆ ಹಲ್ಲುಮರಿ ಸೇವೆ) ಆಚರಣೆಗಳಲ್ಲಿ ಈ ಅಮ್ಮ ದೈವಗಳ ಪಾತ್ರ ಹೆಚ್ಚಾಗಿರುವುದನ್ನು ಕಾಣಬಹುದು. ಅಲ್ಲದೇ ಅಕ್ಕ-ತಮ್ಮ (ಮಾಯವ್ವ-ಬೀರಪ್ಪ), ಅಣ್ಣ-ತಮ್ಮ, ಗುರು-ಶಿಷ್ಯ ಮುಂತಾದ ಪರಿಕಲ್ಪನೆಗಳ ಮುಖಾಂತರ ಸಾಂಸ್ಕೃತಿಕವೀರ ಮತ್ತು ದೈವಗಳನ್ನು ಮಾನವೀಕರಣಕ್ಕೆ ಒಳಪಡಿಸಿ ಇತಿಹಾಸ ಸೃಷ್ಟಿಸುವ ಸಂಗತಿಗಳನ್ನು ಕಾಣಬಹುದು. ಈ ಪ್ರಕ್ರಿಯೆಯಲ್ಲಿ ಆಚರಣೆ ಮತ್ತು ಸಂಪ್ರದಾಯ ಗಳೂ ಸಹ ಭಾಗಿಯಾಗಿವೆ ಅಥವಾ ಮುಂಚೂಣಿಯಲ್ಲಿದ್ದುಕೊಂಡು ಕಾರ್ಯ ನಿರ್ವಹಿಸುತ್ತಿವೆ.

೪. ಈ ದೈವದ ಆಚರಣೆ ಮತ್ತು ಸಂಪ್ರದಾಯಗಳನ್ನು ಆ ದೈವದ ಪರಿವಾರಕರಾದ ಪೂಜಾರಿ, ಈರಗಾರ, ಗುರಿಕಾರ, ದಳವಾಯಿ, ಕೊಲ್ಕಾರ ಮುಂತಾದವರ ನಾಯಕತ್ವದಲ್ಲಿ ನಡೆಯುವುದು ಹೆಚ್ಚು. ಈ ಪಾರಂಪರಿಕ ಪದ್ಧತಿ ದಕ್ಷಿಣ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತದಲ್ಲಿದೆ. ಈ ಪರಿಕಲ್ಪನೆ ಉತ್ತರ ಕರ್ನಾಟಕದಲ್ಲಿ ಕಾಣಿಸದಿರುವುದು ಕುತೂಹಲವೆನಿಸುತ್ತದೆ.

೫. ಬೀರಪ್ಪನಿಗೆ ಸಂಬಂಧಿಸಿದ ಉಗ್ರ ಆಚರಣೆಗಳು ಅಂದರೆ ಹಲ್ಲುಮರಿ ಸೇವೆ, ಕಾಚಿಬೀರ ಸೇವೆ, ಹರಿಮರಿ ಸೇವೆಯಂತಹ ಆಚರಣೆಗಳು ಬೀರಪ್ಪನ ಹಳೆ ದೇವಾಲಯಗಳಲ್ಲಿ ಅಥವಾ ಗ್ರಾಮದ ಹೊರಗಡೆ ಇರುವ ಬೀರದೇವರುಗಳಲ್ಲಿ ಅಂದರೆ ಹಿರೇಬೀರಪ್ಪ, ಹೊರಬೀರಪ್ಪ, ಹಿರೇದೇವರು, ದೊಡ್ಡದೇವರು ಎಂದು ಕರೆಯುವ ದೇವಾಲಯಗಳ ಆವರಣಗಳಲ್ಲಿ ನಡೆಯುವುದೇ ಹೆಚ್ಚು. ಈ ದೇವಾಲಯಗಳನ್ನು ಪ್ರಾಚೀನವೆಂದು ಕರೆಯುವ ಪರಂಪರೆ ಹಾಲುಮತಸ್ಥರಲ್ಲಿದೆ. ಹಾಗಾಗಿ ಈ ಆಚರಣೆಗಳನ್ನು ಸಹ ಪ್ರಾಚೀನ ಆಚರಣೆಗಳೆಂದು ಕರೆಯಬಹುದು. ಈ ವಾದವೇ ಅಂತಿಮ ಅಲ್ಲ. ಈ ಪರಿಕಲ್ಪನೆಯ ವಿಸ್ತೃತವಾದ ಅಧ್ಯಯನ ಆಗಬೇಕಾಗಿದೆ. ಆದರೆ ಪ್ರಸ್ತುತ ಅಧ್ಯಯನದಿಂದ ಸಾಕಷ್ಟು ಆಕರಗಳು ಸಿಕ್ಕಿವೆ.

೬. ಆಚರಣೆ ಮತ್ತು ಸಂಪ್ರದಾಯಗಳು ಇಲ್ಲದೇ ಯಾವುದೇ ಸಾಂಸ್ಕೃತಿಕವೀರರ ಚಾರಿತ್ರಿಕ ಕಥನಗಳು ಜೀವಂತವಾಗಿರಲು ಸಾಧ್ಯವಿಲ್ಲ. ಬೀರಪ್ಪನ ಚಾರಿತ್ರಿಕ ಕಥನಗಳು ಇದಕ್ಕೆ ಹೊರತಾಗಿಲ್ಲ. ಜನರಲ್ಲಿ ಒಳಿತು ಮತ್ತು ಕೆಡಕಿನ ಭಯ ಮತ್ತು ಭಕ್ತಿಯ ಹಿನ್ನೆಲೆಯಲ್ಲಿ ಆಚರಣೆಗೊಳ್ಳುತ್ತಿವೆ. ಉದಾಹರಣೆಗೆ ನಾವು ತೋಪುಜಾತ್ರೆಗೆ ಹೋಗದಿದ್ದರೆ ಅಥವಾ ತೋಪುಜಾತ್ರೆಯಲ್ಲಿ 'ಮೀಸಲು ಸೇವೆ' ಮಾಡದಿದ್ದರೆ ಆ ದೇವರು ನಮ್ಮ ದನ-ಕರುಗಳನ್ನು, ನಮ್ಮ ಮಕ್ಕಳ ಆರೋಗ್ಯವನ್ನು ಹಾಳು ಮಾಡುತ್ತಾನೆ. 'ಹಲ್ಲುಮರಿ' ಅಥವಾ 'ತೋಳದ ಕಲ್ಲುಗಳ' ಆಚರಣೆಗಾಗಿ 'ಕುರಿ ಬಲಿ' ಕೊಟ್ಟರೆ ನಮ್ಮ ಕುರಿಗಳಿಗೆ ತೋಳದ ಕಾಟ ತಪ್ಪುತ್ತದೆ ಎನ್ನುವ ನಂಬಿಕೆಗಳಿವೆ. ಇಂತಹ ನಂಬಿಕೆಗಳಿಂದಲೇ ಬೀರಪ್ಪನ ಆಚರಣೆ ಮತ್ತು ಸಂಪ್ರದಾಯಗಳು ಪ್ರಚಲಿತದಲ್ಲಿವೆ.

೭. ಪ್ರಸ್ತುತ ಅಧ್ಯಯನವು ಕೇವಲ ಬೀರಪ್ಪನ ಆಚರಣೆ ಮತ್ತು ಸಂಪ್ರದಾಯಗಳಿಗೆ ಸೀಮಿತವಾದುದಲ್ಲ. ಈ ದೈವದ ಆಚರಣೆಗಳ ವೈಶಿಷ್ಟ್ಯತೆಯನ್ನು ಗುರುತಿಸುವುದಕ್ಕಾಗಿಯೇ ಬೀರದೇವರುಗಳ ವಲಸೆ ಮೂಲ, ನೆಲೆ ಮೂಲ, ಚಾರಿತ್ರಿಕ ಕಥನಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಆಚರಣೆ ಮೂಲ ಮತ್ತು ವಲಸೆಯನ್ನು ಗುರುತಿಸುವುದು ಇವರ ಮುಖ್ಯವಾದ ಉದ್ದೇಶ. ಬೀರಪ್ಪನನ್ನು ಆರಾಧನೆ ಮಾಡುವ ಕುಲಗಳು ಕುರುಬ ಸಮುದಾಯ ಅಥವಾ ಇತರ ಸಮುದಾಯಗಳು ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕದತ್ತ ವಲಸೆ ಹೋದ ಸಾಕಷ್ಟು ವಿವರಗಳು ಅಥವಾ ಕಥನಗಳು ಸಿಗುತ್ತವೆ. ಉದಾಹರಣೆಗೆ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ರಾಮಗಿರಿ, ತಾಳಿಕಟ್ಟೆ, ಹೊಸದುರ್ಗ ತಾಲೂಕಿನ ಕಡ್ಲೆಕಂಸಾಗರ, ಶ್ರೀರಾಂಪುರ, ಚಳ್ಳಕೆರೆ ತಾಲೂಕಿನ ದೊಡ್ಡೇರಿ, ಹರತಿಕೋಟೆ ಗ್ರಾಮಗಳನ್ನು ಉದಾಹರಣೆಯಾಗಿ ಕೊಡಬಹುದು. ಹಾಗಾಗಿ ಬೀರಪ್ಪನ ಕೆಲವು ಆಚರಣೆ ಮತ್ತು ಸಂಪ್ರದಾಯಗಳು ಸಹ ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕದತ್ತ ವಲಸೆ ಹೋಗಿವೆ ಎನ್ನಬಹುದು. ವಿಶೇಷವಾಗಿ ವಿಜಯನಗರ ಸಾಮ್ರಾಜ್ಯ ಪತನವಾದ ನಂತರ ಹೆಚ್ಚಾಗಿ ವಲಸೆ ಹೋಗಿವೆ. ಅಲ್ಲದೆ ಈಗಲೂ ತನ್ನ ಮೂಲ ಪ್ರದೇಶಗಳ ಆಚರಣೆಗಳೊಂದಿಗೆ ಸಂಬಂಧ ಉಳಿಸಿಕೊಂಡ ಆಚರಣೆಗಳು ಅಪೂರ್ವವಾಗಿ ಸಿಗುತ್ತವೆ.

ಉದಾಹರಣೆಗೆ ಹರತಿಕೋಟೆ ಗ್ರಾಮದ ಬೀರಲಿಂಗೇಶ್ವರ ಜಾತ್ರೆಯ ಆಚರಣೆಯನ್ನು ನೋಡಬಹುದು. ಇಲ್ಲಿ ಜಾತ್ರೆ ಆರಂಭ ಮಾಡುವ ಮುಂಚೆ ಹಂಪಿಯ ವಿರೂಪಾಕ್ಷ (ಈ ದೈವದ ಮೂಲ ಹೆಸರು ಬೀರಪ್ಪನೆಂದು ಹೇಳಲಾಗುತ್ತಿದೆ) ದೈವದ ಹತ್ತಿರ ಪೂಜೆ ಮಾಡಿ ತಮ್ಮೂರ ಬೀರದೇವರ ಜಾತ್ರೆ ಮಾಡುವುದರ ಬಗ್ಗೆ ಒಪ್ಪಿಗೆ ಪಡೆದುಕೊಂಡು, ದೇವಾಲಯದ ಮುಂಭಾಗದಲ್ಲಿ ಹರಿಯುವ ತುಂಗಭದ್ರ ನದಿಯಲ್ಲಿ ಗಂಗೆಪೂಜೆ ಮಾಡಿ ಅಲ್ಲಿನ ಒಂದಿಷ್ಟು ನೀರನ್ನು ಹರತಿಕೋಟೆಗೆ ತಂದು ಬೀರದೇವರನ್ನು ಆ ನೀರಿನಿಂದ ಪೂಜಿಸಿ ಜಾತ್ರೆಯನ್ನು ಆರಂಭಿಸುತ್ತಾರೆ. ಇದು ಬೀರದೇವರ ಮೂಲ ಮತ್ತು ವಲಸೆಯನ್ನು ಹೇಳುತ್ತದೆ. ಇಂತಹ ವಲಸೆ ಮೂಲ ಆಚರಣೆಗಳು ಕೇವಲ ಬೀರಪ್ಪನಲ್ಲಿ ಮಾತ್ರ ಕಾಣುವುದಿಲ್ಲ. ಹಾಲುಮತದ ಹಲವು ದೈವಗಳಲ್ಲಿ ಕಂಡುಬರುತ್ತವೆ.

೮. ಬೀರಪ್ಪನ ಆಚರಣೆ ಮತ್ತು ಸಂಪ್ರದಾಯಗಳು ಹಾಲುಮತ ಸಮುದಾಯದಲ್ಲಿ ಹೆಚ್ಚಾಗಿವೆ. ಕೆಲವು ಗ್ರಾಮಗಳಲ್ಲಿ ಹಾಲುಮತ ಸಮುದಾಯದೊಂದಿಗೆ ಲಿಂಗಾಯತ ಮತ್ತು ವೀರಭದ್ರ ಹಾಗೂ ಇತರೆ ಸಮುದಾಯಗಳ ದೈವಗಳೊಂದಿಗೆ ಸಮೀಕರಣಗೊಂಡು ಸೌಹಾರ್ದಯುತವಾಗಿ ಆಚರಣೆಗೆ ಒಳಪಡುತ್ತಿವೆ. ಉದಾಹರಣೆ ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕು ಆಸಂದಿ ಗ್ರಾಮದ ಬೀರಪ್ಪನನ್ನು ವೀರಭದ್ರನ ಅವತಾರವೆಂದು ಹೇಳುವ ಚಾರಿತ್ರಿಕ ಸ್ಥಳೀಯ ಕಥನಗಳು ಸಿಗುತ್ತವೆ. ನಂಜನಗೂಡು ತಾಲೂಕು ಕಳಲೆ ಗ್ರಾಮದ ವೀರಪ್ಪ : ಕತ್ರಿ ವೀರಪ್ಪ : ವೀರಭದ್ರ ದೇವಾಲಯದ ಸ್ಥಳದಲ್ಲೇ ಕುರುಬಕುಲ ಹುಟ್ಟಿತ್ತೆಂದು ಕಳಲೆ ಗ್ರಾಮದ ಸುತ್ತಮುತ್ತಲಿನ ಕುರುಬರು ಹೇಳುತ್ತಾರೆ. ಕಳಲೆ ಗ್ರಾಮದ ಬೀರದೇವರ ಗುಡಿಕಟ್ಟು ವ್ಯವಸ್ಥೆಯಲ್ಲಿ ಈ ವೀರಪ್ಪನೂ ಸೇರಿಕೊಂಡಿದ್ದಾನೆ. ತೋಪುಜಾತ್ರೆ ಮತ್ತು ಬೀರದೇವರ, ಹಾಲುಮತದ ದೈವದ ಆಚರಣೆಗಳಲ್ಲಿ ಈ ವೀರಪ್ಪ ದೈವವೂ ಕಡ್ಡಾಯವಾಗಿ ಭಾಗಿಯಾಗಲೇಬೇಕು ಎನ್ನುವ ಪಾರಂಪರಿಕ ಅಲಿಖಿತ ನಿಯಮವಿದೆ. ಈ ವೀರಪ್ಪ ಬೀರದೇವರ ಜಾತ್ರೆಗೆ ಬರದಿದ್ದರೆ ಬೀರಪ್ಪನ ಜಾತ್ರೆಯೇ ನಡೆಯುವುದಿಲ್ಲವೆಂದು ಗ್ರಾಮಸ್ಥರು ತಿಳಿಸುತ್ತಾರೆ. ಇದು ಈ ಎರಡು ದೈವಗಳನ್ನು ಆರಾಧಿಸುವ ಸಂಬಂಧಗಳನ್ನು ತಿಳಿಸುತ್ತದೆ. ಇಂತಹ ಬೀರಪ್ಪ ಮತ್ತು ವೀರಭದ್ರನ ಆಚರಣಾತ್ಮಕ ಸಂಬಂಧಗಳು ಕರ್ನಾಟಕದ ವಿವಿಧೆಡೆ ಕಂಡುಬರುತ್ತವೆ. ಈ ಆಚರಣೆಗಳು ಈ ಎರಡು ಸಮುದಾಯಗಳ ಚಾರಿತ್ರಿಕ ಹಿನ್ನೆಲೆಯನ್ನು ತಿಳಿಸುತ್ತವೆ. ಇಂತಹ ಆಚರಣೆಗಳನ್ನು ಸಂಗ್ರಹಿಸಿ ಅಧ್ಯಯನ ಮಾಡುವ ಜರೂರತೆ ಇದೆ. ಆಗ ಈ ಎರಡು ದೈವಗಳ ಅಥವಾ ಸಮುದಾಯಗಳ ಸಾಂಸ್ಕೃತಿಕ ಚರಿತ್ರೆಯನ್ನು ಗುರುತಿಸುವುದಕ್ಕೆ ಹಾಗೂ ಸಮುದಾಯಗಳ, ದೈವಗಳ ರೂಪಾಂತರಗಳನ್ನು ಅಥವಾ ಸಾಂಸ್ಕೃತೀಕರಣವನ್ನು ಗುರುತಿಸುವುದಕ್ಕೆ ಸಾಧ್ಯ. ಅಂತಹ ಆಲೋಚನಾ ವಿಧಾನಗಳನ್ನು ಅಥವಾ ಚಾರಿತ್ರಿಕ ಪರಿಕಲ್ಪನೆಗಳನ್ನು ಬೀರದೇವರ ಆಚರಣೆ ಮತ್ತು ಸಂಪ್ರದಾಯಗಳು ಒದಗಿಸಿಕೊಡುತ್ತವೆ. ಪ್ರಸ್ತುತ ಅಧ್ಯಯನದಲ್ಲೂ ಸಹ ಆ ಬಗೆಯ ದೃಷ್ಟಿಕೋನವುಳ್ಳ ಕೆಲವು ಆಚರಣೆಗಳನ್ನು ಸೈದ್ಧಾಂತಿಕವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೯. ಬೀರದೇವರ ಕೆಲವು ಆಚರಣೆಗಳು ಹಾಲುಮತ ಸಮುದಾಯದಲ್ಲಿ ನಡೆದ ಘಟನೆಗಳನ್ನು ಅನಾವರಣ ಮಾಡುತ್ತವೆ. ವಿಶೇಷವಾಗಿ ಧಾರ್ಮಿಕ ಸಂಘರ್ಷಗಳ ವಿವರಗಳನ್ನು ಅಭಿವ್ಯಕ್ತಿ ಪಡಿಸುತ್ತಿವೆ. ಉದಾಹರಣೆಗೆ ತೋಪುಜಾತ್ರೆಯಲ್ಲಿ ಗೂಡೆಸೇವೆ ಅಥವಾ ಮೀಸಲು ಆಚರಣೆ ೧೨ನೇ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ಕುಲ ಸಂಘರ್ಷವನ್ನು ತಿಳಿಸುತ್ತವೆ. ಹಾವೇರಿ ಜಿಲ್ಲೆ ಮೆಡ್ಲೇರಿ ಬೀರಪ್ಪನ ಜಾತ್ರೆಯಲ್ಲಿ ನಡೆಯುವ ಕುರವತ್ತಿ ಬಸವಣ್ಣ ಮತ್ತು ಬೀರಪ್ಪನಿಗೆ ನೀರಿಗಾಗಿ ಯುದ್ಧ ನಡೆಯಿತೆಂದು ಹೇಳುವ ಅಥವಾ ಯುದ್ಧ ಮಾಡುವ ಸಾಂಕೇತಿಕ ಆಚರಣೆಯನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. ಈ ಆಚರಣೆ ತುಂಗಭದ್ರ ನದಿಯಲ್ಲಿ ನಡೆಯುತ್ತದೆ. ಇದು ಕುರುವತ್ತಿ ಬಸವಣ್ಣ ಅಂದರೆ ಲಿಂಗಾಯತ (ದನಗಾರಿಕೆ) ಬೀರಪ್ಪ ಅಂದರೆ ಕುರುಬರ (ಕುರಿಗಾರಿಕೆ) ಈ ಎರಡು ಸಮುದಾಯಗಳ ಸಂಘರ್ಷವಾಗಿದೆ. ಇಂತಹ ಅನೇಕ ಚಾರಿತ್ರಿಕ ಘಟನೆಗಳನ್ನು ಬೀರದೇವರ ಆಚರಣೆ ಮತ್ತು ಸಂಪ್ರದಾಯಗಳು ತಿಳಿಸುತ್ತವೆ.

೧೦. ಹಾಲುಮತ ಪುರಾಣಗಳು, ಕಾವ್ಯಗಳು, ಹಾಡುಗಳು, ಶಾಸನಗಳು, ಹಾಲುಮತ ಸಾಂಸ್ಕೃತಿಕ ವೀರರ ಜೀವನ ಚರಿತ್ರೆಯನ್ನು ಪುನರ್‌ಮನನ ಮಾಡಲು ಜನ್ಮತಾಳಿದವು. ಇವುಗಳಲ್ಲಿ ಆಚರಣೆ ಎನ್ನುವ ಪರಿಭಾಷೆಯನ್ನು ವಿಶಾಲವಾದ ಅರ್ಥದಲ್ಲಿ ಬಳಸಲಾಗಿದೆ. ಅಂದರೆ ಆಚರಣೆ ಎನ್ನುವುದು ಪಾರಂಪರಿಕ ಸಂಪ್ರದಾಯ ಎನ್ನುವ ಅರ್ಥದಲ್ಲಿ ಬಳಕೆಯಾಗಿದೆ. ಇಲ್ಲಿವರೆಗೂ ಆಚರಣೆಗಳ ಸಂಗ್ರಹ ಮತ್ತು ಅಧ್ಯಯನ ಸಮಗ್ರವಾಗಿ ಆಗಿಲ್ಲ. ಬೀರಪ್ಪ, ಮಾಳಪ್ಪ, ಅಮೋಘಸಿದ್ಧ, ಇಟ್ಟಪ್ಪ ಮುಂತಾದ ಸಾಂಸ್ಕೃತಿಕ ವೀರರ ಮಹಾಕಾವ್ಯಗಳು ಕ್ಷೇತ್ರದಲ್ಲಿ ಜೀವಂತವಾಗಿವೆ. ಅವುಗಳನ್ನು ಸಂಗ್ರಹಿಸಬೇಕಾದ ಅಗತ್ಯವಿದೆ. ಆದ್ದರಿಂದ ಬೀರಪ್ಪನ ಬಗ್ಗೆ ಇರುವ ಆಚರಣೆ ಮತ್ತು ಸಂಪ್ರದಾಯಗಳನ್ನು ಹಾಗೂ ಇತರ ಆಕರಗಳ ವಿವರವಾದ ಮಾಹಿತಿಯನ್ನು ಕಲೆಹಾಕಿ ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ.

೧೧. ಬೀರಪ್ಪನಿಗೆ ಸಂಬಂಧಪಟ್ಟಂತೆ ಅನೇಕ ಶಾಸನಗಳು ಸಿಗುತ್ತವೆ. ಬಾಗಲಕೋಟೆ ಜಿಲ್ಲೆ ಕೊಣ್ಣೂರು, ಸವದತ್ತಿ ತಾಲೂಕಿನ ಸೊಗಲ ಬೀರಪ್ಪನಿಗೆ ಸಂಬಂಧಿಸಿದ ಪ್ರಾಚೀನ ಶಾಸನಗಳು. ೧೦೬೧ ಶಾಸನ ಜಮಖಂಡಿ ತಾಲೂಕಿನ ಕೊಣ್ಣೂರು ಕರಿಸಿದ್ದೇಶ್ವರ ಮಂದಿರದಲ್ಲಿದೆ. ಬೀರಲಿಂಗಕ್ಕೆ ಹೊಲ, ಬಾವಿ, ಕಳೆ ಕೊಟ್ಟರು ಎನ್ನುವ ಉಲ್ಲೇಖವಿದೆ. ಇಂತಹ ಶಾಸನಗಳು ಬೀರಪ್ಪನ ಚರಿತ್ರೆಯನ್ನು ಮತ್ತು ಆಚರಣೆಗಳ ಚರಿತ್ರೆಯನ್ನು ಅರಿಯುವುದಕ್ಕೆ ಸಹಾಯಕವಾಗುತ್ತವೆ. ಏಕೆಂದರೆ ಬೀರಪ್ಪನಿಗೆ ಸಂಬಂಧಿಸಿದ ಆಚರಣೆ ಮತ್ತು ಸಂಪ್ರದಾಯಗಳು ಆ ದೈವದಷ್ಟೇ ಪ್ರಾಚೀನ. ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ತಾಳಕಟ್ಟೆ ಗ್ರಾಮದ ಹಳ್ಳದ ಜಂಗಮ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಶಿಲ್ಪವನ್ನೊಳಗೊಂಡ ಒಂದು ಶಾಸನವಿದೆ. ಕ್ರಿ.ಶ. ೧೧೮೫ರ ಮಂಡ್ಯ ಜಿಲ್ಲೆ ರಾಯಶೆಟ್ಟಿ ಗ್ರಾಮ, ೧೩೬೯ರ ಬಾಳೆಹೊನ್ನೂರು ಬೀರಪ್ಪನ ಶಾಸನ, ೧೫೫೫ರ ಮಳವಳ್ಳಿ ಶಾಸನ, ೧೦೮೭ರ ಶಿಗ್ಗಾವಿ ತಾಲೂಕು ಹೊಟ್ಟೂರು ಗ್ರಾಮದಲ್ಲಿರುವ ಶಾಸನ ೧೫೧೪ರ ವಾರಂಗಲನ ತಗರಪುರ ಶಾಸನ, ಕ್ರಿ.ಶ. ೧೧೮೬ ಅರಸೀಕೆರೆ ತಾಲೂಕು ಕುರುವಂಕ ಶಾಸನ ಹೀಗೆ ಇನ್ನು ಅನೇಕ ಶಾಸನಗಳಲ್ಲಿ ಬೀರಲಿಂಗೇಶ್ವರ

ಬಗ್ಗೆ ದಾಖಲೆಗಳು ಸಿಗುತ್ತವೆ. ಈ ಅಧ್ಯಯನದಲ್ಲಿ ಶಾಸನಗಳ ಪಠ್ಯಗಳನ್ನು ಸಹ ಸಮಗ್ರವಾಗಿ ದಾಖಲಿಸಲಾಗಿದೆ.

೧೨. ಅಧ್ಯಯನಕ್ಕಾಗಿ ಕರ್ನಾಟಕದಲ್ಲಿ ಬೀರಪ್ಪನ ಕೆಲವು ಕ್ಷೇತ್ರಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಆ ಮುಖಾಂತರ ಬೀರಪ್ಪನ ಚರಿತ್ರೆಯನ್ನು ಭಿನ್ನ ಆಯಾಮಗಳನ್ನು ಗುರುತಿಸಲಾಗಿದೆ. ಅಲಕನೂರು, ಏಕ್ಸಂಭಾ, ಕೊಣ್ಣೂರು, ನಾಗಠಾಣ, ಶಿರಾಡೋಣ, ದಾವಣಗೆರೆ, ಭಾನುವಳ್ಳಿ, ಚಿಗಳಿ, ಹಿರೇನಲ್ಲೂರು, ಅಂಬಳಿ, ಕಡೂರು, ಬೀರೂರು, ಬೆಂಗಳೂರು, ಸಾತನೂರು, ಮಂಡ್ಯ, ಅಲೂರು, ಬರಗೂರು ಇನ್ನು ಮುಂತಾದ ಊರುಗಳ ದೇವಾಲಯಗಳ ಭೌಗೋಳಿಕ ಪರಿಸರವನ್ನು ಪರಿಚಯಿಸಲಾಗಿದೆ. ಏಕೆಂದರೆ ಅಲ್ಲಿನ ಭೌಗೋಳಿಕತೆ ಆಯಾ ದೈವದ ಆಚರಣೆಗಳ ಮೇಲೆ ಪ್ರಭಾವ ಬೀರಿರುತ್ತದೆ. ಹಾಗಾಗಿ ಭೌಗೋಳಿಕತೆ ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ಸಂಪ್ರದಾಯಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧೩. ದಕ್ಷಿಣ ಕರ್ನಾಟಕದ ಬೀರದೇವರ ದೇವಾಲಯಗಳು, ಉತ್ತರ ಕರ್ನಾಟಕದ ಬೀರದೇವರ ದೇವಾಲಯಗಳಿಗಿಂತ ಭಿನ್ನವಾದ ಶೈಲಿಯಲ್ಲಿವೆ. ದೇವಾಲಯಗಳು ನಿರ್ಮಾಣಗೊಂಡಿರುವ ಪ್ರದೇಶ ಮತ್ತು ಕಾಲಗಳೂ ಸಹ ವಿಶಿಷ್ಟವಾದ ಚಾರಿತ್ರಿಕ ಕಥನಗಳನ್ನು ಹೇಳುತ್ತವೆ. ಇವುಗಳಲ್ಲಿ ವಲಸೆ ಮೂಲ ಕಥನಗಳು ಗಮನಸೆಳೆಯುತ್ತವೆ. ಅಂತಹ ದೇವಾಲಯಗಳಲ್ಲಿ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ರಾಮಗಿರಿ ಹೊಬಳಿಯ ತಾಳಿಕಟ್ಟೆ ಗ್ರಾಮವು ಒಂದು ಎಂದು ಗುರುತಿಸಲಾಗಿದೆ. ಹೀಗೆ ದೇವಾಲಯದ ವಾಸ್ತು ರಚನೆ ಪರಿವರ್ತನೆಗೆ ಇರಬಹುದಾದ ಕಾರಣಗಳನ್ನು ಶೋಧಿಸಲಾಗಿದೆ.

೧೪. ದಕ್ಷಿಣ ಕರ್ನಾಟಕದ ಭಾಗದ ದೇವಾಲಯಗಳಿಗೆ ಒಂದು ವ್ಯವಸ್ಥಿತವಾದ ಪಾರಂಪರಿಕ ಆಡಳಿತ ವ್ಯವಸ್ಥೆಯಿದೆ. ಆಯಾ ದೇವಾಲಯಕ್ಕೆ ಇಂತಿಷ್ಟು ಹಳ್ಳಿಗಳು, ಮನೆತನಗಳು, ದೈವಗಳು ಸೇರಿವೆ. ಆ ದೇವಾಲಯಗಳ ಹಕ್ಕುಗಳು, ಆಚರಣೆ, ಉತ್ಸವಗಳ ಆಡಳಿತಕ್ಕೆ ಒಳಪಟ್ಟ ಹಳ್ಳಿಗಳಿಗೆ ಮಾತ್ರ ಸೀಮಿತ ವಾಗಿರುತ್ತದೆ. ಇದನ್ನು ಕುಲ ಆರಾಧನೆಯ ಧ್ರುವೀಕರಣವೆಂದು ಕರೆಯಬಹುದು. ಉತ್ತರ ಕರ್ನಾಟಕದಲ್ಲಿ ಈ ವ್ಯವಸ್ಥೆ ಯಾವತ್ತೋ ಕಣ್ಮರೆಯಾದಂತಿದೆ. ಜೊತೆಗೆ ಆಚರಣೆ ಮತ್ತು ಸಂಪ್ರದಾಯಗಳು ಸಹ ವ್ಯವಸ್ಥಿತವಾಗಿ ನಡೆಯುತ್ತಿವೆ ಹಾಗೂ ಆಚರಣೆ ಮಾಡುವ ವರ್ಗಗಳಿಗೂ ಸೌಲಭ್ಯಗಳನ್ನು ಕಲ್ಪಿಸ ಲಾಗುತ್ತಿದೆ.

೧೫. ಬೀರಪ್ಪನ ಆಚರಣೆಗಳು ಹಲ್ಲುಮರಿ ಸಿಗಿಯುವುದು, ಅಲಗ ಹಾಕಿಕೊಳ್ಳುವುದು, ಕೆಂಡಾರ್ಚಣೆ, ಬಾಯಿಬೀಗ ಆಚರಣೆ, ಮೀಸಲು ಒಪ್ಪಿಸುವುದು, ಗೂಡೆ ಆಚರಣೆ, ಹೊಸ್ನಾಟ, ತೆಂಗಿನಕಾಯಿ ಪವಾಡ ಇನ್ನು ಮುಂತಾದ ಆಚರಣೆಗಳಲ್ಲಿ ಜನರು ಭಾವನಾತ್ಮಕವಾಗಿ ತೊಡಗಿಸಿಕೊಳ್ಳುವ ವಿಧಾನಗಳು ಹೆಚ್ಚಾಗಿವೆ. ಜೊತೆಗೆ ಇವುಗಳನ್ನು ಹಾಲುಮತ ಸಮುದಾಯ ಪಾರಂಪರಿಕ ಅಸ್ಮಿತೆಗಳು ಎನ್ನುವ ರೀತಿಯಲ್ಲಿ ಕಾಪಾಡಿಕೊಂಡು ಬರುತ್ತಿವೆ.

೧೬. ಬೀರೇಶ್ವರನು ನರಸಿಂಹನನ್ನು ಸಂಹರಿಸಿರುವುದರ ಸಾಂಕೇತಿಕತೆಯನ್ನು ಸೂಚಿಸುವಂತೆ ಆಚರಣೆಯೊಂದು ಈಗಲೂ ಕುರುಬರಲ್ಲಿ ಅಲ್ಲಲ್ಲಿ ಉಳಿದುಕೊಂಡು ಬಂದಿದೆ. ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ಬೀರದೇವರ ತೋಪಿನ ಜಾತ್ರೆ ಜರಗುತ್ತದೆ. ಈ ಜಾತ್ರೆಗಳಲ್ಲಿ ಈರಗಾರರು ಎಂಬ ಬೀರಪ್ಪನ ಭಕ್ತರು ಹಲ್ಮರಿ ಸಿಗಿಯುವ ಅಂದರೆ ಹಲ್ಲಿನಿಂದ ಕುರಿಯನ್ನು ಸೀಳಿ ಹಾಕುವ ರೌದ್ರವಾದ ಆಚರಣೆಗಳು ಈಗಲೂ ಅಸ್ತಿತ್ವದಲ್ಲಿವೆ. ಈ ಆಚರಣೆ ಹಾಲುಮತದ ಕುಲ ಸೃಷ್ಟಿಯೊಂದಿಗೆ ತಳಕು ಹಾಕಿಕೊಂಡಿದೆ.

೧೭. ಕರ್ನಾಟಕದಲ್ಲಿ ಬೀರಪ್ಪನಿಗೆ ಸಂಬಂಧಿಸಿದ ಕಲೆಗಳು ಸಾಮಾಜಿಕವಾಗಿ ಮಾತ್ರವಲ್ಲದೆ ಸಾಂಸ್ಕೃತಿಕ ವಾಗಿಯೂ ಶ್ರೀಮಂತವಾಗಿವೆ. ಅನಾದಿಕಾಲದಿಂದ ಹರಿದುಬಂದಿರುವ ಸಮಸ್ತ ಜೀವನ ವಿಧಾನದ ಅನುಭವಸಾರವಾದ ಜನಪದ ಕಲೆಗಳು ಈ ಸಮುದಾಯಗಳ ಜೀವಂತಿಕೆಗೆ ಸಾಕ್ಷಿಯಾಗಿವೆ. ಪ್ರಾದೇಶಿಕ ವಾದ ವಿಶಿಷ್ಟವಾದ ಮತ್ತು ಸಮೃದ್ಧವಾದ ಕಲೆಗಳನ್ನು ಸಮುದಾಯವೊಂದು ಜತನದಿಂದ ಕಾಪಾಡಿಕೊಂಡು ಬರುತ್ತದೆ. ಹಾಗೆ ಡೊಳ್ಳುಕುಣಿತ, ದಟ್ಟಿಕುಣಿತ, ದಳವಾಯಿ ಕುಣಿತ, ಭಿಂಗಯ್ಯ ಕುಣಿತ, ವೀರಗಾರರ ಕುಣಿತ ಮುಂತಾದ ಆಚರಣೆಗಳು ಇಂದಿಗೂ ಜೀವಂತವಾಗಿವೆ. ಇಂತಹ ಕಲೆಗಳನ್ನು ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಂಡು ವಿವರವಾಗಿ ವಿಶ್ಲೇಷಣೆ ಮಾಡಲಾಗಿದೆ. ಏಕೆಂದರೆ ಇವು ಕೇವಲ ಮನೋರಂಜನೆಯ ಕಲೆಗಳಲ್ಲ ಆಚರಣೆಗಳು. ಹಾಗಾಗಿಯೇ, ದೈವಗಳ ಹೆಸರಿನಲ್ಲಿ ಜೀವಂತ ವಾಗಿವೆ ಎಂದರೆ ಅತಿಶಯೋಕ್ತಿಯಾಗಲಾರದು. ವಿಶೇಷವೆಂದರೆ ಪ್ರತಿಯೊಂದು ಬೀರದೇವರ ದೇವಸ್ಥಾನ ಗಳಲ್ಲಿ ಡೊಳ್ಳುಗಳಿವೆ. ಇವುಗಳನ್ನು ಇಡುವುದಕ್ಕಾಗಿಯೆ ಪ್ರತ್ಯೇಕ ಕೋಣೆಗಳನ್ನು ನಿರ್ಮಿಸಲಾಗಿದೆ. ಇದು ಬೀರಪ್ಪನಿಗೂ ಮತ್ತು ಡೊಳ್ಳು ಆಚರಣೆಗೂ ಇರುವ ಸಂಬಂಧವನ್ನು ತಿಳಿಸುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಕ್ಷೇತ್ರಕಾರ್ಯ ಮಾಡಿ ಇಂತಹ ಹಲವು ಮಾಹಿತಿ ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸ ಲಾಗಿದೆ.

ಒಟ್ಟಿನಲ್ಲಿ ಬೀರಪ್ಪನ ಸಂಪ್ರದಾಯಗಳನ್ನು ಕುರಿತು ಕಾವ್ಯ, ಪುರಾಣ, ಶಾಸನ, ಆಚರಣೆ, ನಂಬಿಕೆ, ಸಂಪ್ರದಾಯಗಳ ಹಿನ್ನೆಲೆಯಲ್ಲೆ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ಬೀರಪ್ಪನ ಸಂಪ್ರದಾಯಗಳನ್ನು ಕರ್ನಾಟಕದಲ್ಲಿ ಪುರಾಣ ಪ್ರಜ್ಞೆಯಿಂದ ಪರಿಶೋಧಿಸುವುದಕ್ಕಿಂತ ಜನಪದ ಪ್ರಜ್ಞೆಯಿಂದ ಗಮನಿಸಲಾಗಿದೆ. ಇದು ಬೀರಪ್ಪನ ಚಾರಿತ್ರಿಕ ಮತ್ತು ತೌಲನಿಕ ಅಧ್ಯಯನಕ್ಕೆ ಸಹಾಯಕವಾಗುತ್ತದೆ ಎನ್ನುವ ಭರವಸೆ ಈ ಅಧ್ಯಾಯನಕ್ಕಾಗಿದೆ.

ಬೀರಪ್ಪನ ಸಾಂಪ್ರದಾಯದ ಬಗ್ಗೆ ಇನ್ನು ಮುಂದೆ ಕೈಗೊಳ್ಳಬಹುದು. ಅಧ್ಯಯನದ ಸಾಧ್ಯತೆಗಳನ್ನು ಹೀಗೆ ಹೇಳಬಹುದು.

ಅಧ್ಯಯನಗಳ ಹೊಸ ಸಾಧ್ಯತೆಗಳು

೧. ಬೀರಪ್ಪ ದಕ್ಷಿಣ ಭಾರತದಲ್ಲಿ ಹೆಚ್ಚು ಜನಪ್ರಿಯವಾಗಿರುವ ದೈವ, ಸಾಂಸ್ಕೃತಿಕ ವೀರ. ಪ್ರಸ್ತುತ ಅಧ್ಯಯನವು ಕರ್ನಾಟಕದ ಆಯ್ದ ಬೀರದೇವರ ಅಧ್ಯಯನವಾಗಿದೆ. ಹಾಗಾಗಿ ದಕ್ಷಿಣ ಭಾರತದ ಅಧ್ಯಯನಗಳನ್ನು ಆಯ್ಕೆ ಮಾಡಿಕೊಂಡು ವಿಶ್ಲೇಷಣೆ ಮಾಡಲಾಗಿಲ್ಲ. ಅಲ್ಲದೆ ಕರ್ನಾಟಕದ ಕೆಲವು ದೇವಾಲಯಗಳಿಗೆ ಮಾತ್ರ ಸೀಮಿತವಾಗಿದೆ. ಇನ್ನುಳಿದ ಬೀರದೇವರ ದೇವಾಲಯಗಳ ಮಾಹಿತಿಯನ್ನು ಸಂಗ್ರಹಿಸಿ ತೌಲನಿಕ ಅಧ್ಯಯನ ಆಗಬೇಕು.

೨. ಬೀರಪ್ಪನ ಆಚಾರ-ವಿಚಾರ, ದಾಖಲೆಗಳ ಬಗ್ಗೆ ಆಡಿಯೋ ವಿಡಿಯೋ ಮೂಲಕ ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಿ ಆಚರಣೆ ಮಾಡುವವರ ಮಾನಸಿಕ ಮತ್ತು ದೈಹಿಕ ಸ್ಥಿತಿಗತಿಯನ್ನು ಕುರಿತು ಅಧ್ಯಯನ ಮಾಡಬಹುದು.

೩. ಬೀರಪ್ಪನ ಹಾಡು, ಕಥೆ, ಜನಪದ ಗೀತೆಗಳಲ್ಲಿ ಉಲ್ಲೇಖಿತವಾದ ಸ್ಥಳನಾಮಗಳ ಚಾರಿತ್ರಿಕ ಅಧ್ಯಯನ ಮಾಡಬಹುದು. ಇದರಿಂದ ಬೀರಪ್ಪನ ಪ್ರಾದೇಶಿಕ ಹಾಗೂ ಭಿನ್ನ ಚಾರಿತ್ರಿಕ ಅಂಶಗಳನ್ನು ಗುರುತಿಸ ಬಹುದು. ಪ್ರಸ್ತುತ ಅಧ್ಯಯನದಲ್ಲಿ ಈ ಬಗೆಯ ಹಲವು ಅಂಶಗಳನ್ನು ಗುರುತಿಸಿದೆ. ಆದರೂ ಇನ್ನೂ ವಿಸ್ತೃತವಾದ ಅಧ್ಯಯನ ಮಾಡಬಹುದಾದ ಸಾಧ್ಯತೆಗಳಿವೆ.

೪. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ ಒಟ್ಟು ಬೀರಪ್ಪನ ನೆಲೆಗಳ ಬಗ್ಗೆ ವ್ಯಾಪಕವಾದ ಅಧ್ಯಯನ ಆಗಬೇಕು.

೫. ಬೀರಪ್ಪನಿಗೆ ಸಂಬಂಧಿಸಿದ ಜನಪದ ಹಾಡುಗಳು, ಕಥೆಗಳು, ಡೊಳ್ಳಿನ ಹಾಡುಗಳು, ದಾಖಲೆಗಳನ್ನು ಸಂಗ್ರಹಿಸಿ ಪ್ರಕಟಿಸಬೇಕು. ಸಾಂಸ್ಕೃತಿಕ ವೀರರನ್ನು ಕುರಿತು ರಚನೆಯಾದ ಪುರಾಣಗಳನ್ನು, ನಾಟಕಗಳನ್ನು, ಮತ್ತು ಸಮುದಾಯದ ಲಿಖಿತ ಪುರಾಣಗಳನ್ನು ಅಧ್ಯಯನ ಮಾಡಬೇಕು. ಪ್ರಮುಖವಾಗಿ ಈ ಅಧ್ಯಯನ ಗಳಲ್ಲಿ ಕಾಲಾಂತರದಲ್ಲಿ ಆಗುತ್ತಿರುವ ವಸ್ತು ರೂಪಾಂತರಗಳನ್ನು ಸಹ ಗಮನದಲ್ಲಿಟ್ಟು ಕೊಳ್ಳಬೇಕು.

೬. ಕರ್ನಾಟಕದಲ್ಲಿರುವ ಬೀರಪ್ಪನ ಜಾತ್ರೆಗಳ ಪಟ್ಟಿ ಮಾಡುತ್ತ ಹೋದರೆ ಅದು ಬೆಳೆಯುತಾ ಹೋಗುತ್ತದೆ. ಈ ಎಲ್ಲಾ ಜಾತ್ರೆಗಳ ವಿಸ್ತಾರವಾದ ಮತ್ತು ಪ್ರಾದೇಶಿಕ ಸಮುದಾಯದ ಭಿನ್ನತೆಗಳ ತೌಲನಿಕ ಅಧ್ಯಯನ ಆಗಬೇಕು.

೭. ಬೀರಪ್ಪನಿಗೆ ಸಂಬಂಧಿಸಿದ ಆಡಿಯೋ, ವಿಡಿಯೋ, ಸಿಡಿ, ಕ್ಯಾಸೆಟ್‌ಗಳನ್ನು ಹೊರ ತರಬೇಕು. ಆಗ ಪಾರಂಪರಿಕ ವಸ್ತು ನಿಷ್ಟತೆಗೆ ಆದ್ಯತೆ ಕೊಟ್ಟಂತಾಗುತ್ತದೆ.

ಇನ್ನು ಮುಂತಾದ ದೃಷ್ಟಿಕೋನಗಳಲ್ಲಿ ಬೀರಪ್ಪನ ಆಚರಣೆ ಮತ್ತು ಸಂಪ್ರದಾಯಗಳನ್ನು ಅಧ್ಯಯನ ಮಾಡುವುದಕ್ಕೆ ಅವಕಾಶ ಇದೆ. ಅಂತಹ ಅವಕಾಶಗಳಲ್ಲಿ ಆಸಕ್ತರು ಅಧ್ಯಯನ ಮಾಡಬಹುದು ಎಂಬ ಉದ್ದೇಶದಿಂದ ಕೆಲವು ಪರಿಹಾರೋಪಾಯಗಳನ್ನು ಇಲ್ಲಿ ಕೊಡಲಾಗಿದೆ. ಒಟ್ಟಿನಲ್ಲಿ ಈ ಮಹಾಪ್ರಬಂಧದ ಮೂಲಕ ದೇಶೀ ದೈವವಾದ ಬೀರಪ್ಪನನ್ನು ಸಾಂಸ್ಕೃತಿಕ ದೃಷ್ಟಿಕೋನದಿಂದ ಅಧ್ಯಯನ ಮಾಡಲಾಗಿದೆ.

ಅನುಬಂಧಗಳು

- ಪರಾಮರ್ಶನ ಗ್ರಂಥ ಸೂಚಿ
- ವಕ್ತೃಗಳ ವಿವರ
- ಕರ್ನಾಟಕದ ಕೆಲವು ಬೀರಲಿಂಗೇಶ್ವರ ದೇವಸ್ಥಾನಗಳ ಸೂಚಿ
- ಬೀರಪ್ಪನ ಶಾಸನದ ಪಠ್ಯಗಳು
- ಛಾಯಾಚಿತ್ರಗಳು

೧. ಪರಾಮರ್ಶನ ಗ್ರಂಥಸೂಚಿ

ಅಮೋಘಸಿದ್ದೇಶ್ವರ ಚರಿತ್ರೆ, ಚಂದ್ರಕಾಂತ ಪ್ರಮಿರಾವ್ ಬಿರಾದಾರ, ೧೯೮೨, ಆಳಂದ ತಾ. ಕಲಬುರ್ಗಿ ಜಿಲ್ಲೆ.

ಅರವತ್ತು ವರ್ಷಗಳ ಕುರುಬರ ರಟ್ಟಿಮತಶಾಸ್ತ್ರ, ಗ್ರಂಥಕರ್ತರು ಜ್ಯೋತಿರ್ವಿದ್ಯಾವಿಭೂಷಣ, ಸಾಹಿತ್ಯ ರತ್ನವೇ ಬಸವಯ್ಯ ಶಾಸ್ತ್ರಿಗಳು ಹಿರೇಮಠ, ಗದಗ ಪ್ರಕಾಶಕರು, ಗದಗ, ೧೯೯೩.

ಅಲೆಮಾರಿ ಕುರುಬರು, ಎರೆಯಪ್ಪ ಡಿ. ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಬೆಂಗಳೂರು, ೨೦೦೮.

ಆಧುನಿಕ ಕುರುಬ ಸಮಾಜದ ಪ್ರಾತಃ ಸ್ಮರಣೀಯರು, (ಲೇ) ಒಡೆಯರ ಡಿ. ಹೆಗ್ಗಡೆ, ಅಖಿಲಾ ಏಜೆನ್ಸಿಸ್, ಅಂಜನಾದ್ರಿ, ರೇಣುಕಾಚಾರ್ಯ ದೇವಸ್ಥಾನ ರಸ್ತೆ, ಮೈಸೂರು, ೨೦೦೫

ಉತ್ತರ ಕರ್ನಾಟಕದ ಗೊಂಡ ಅರ್ಥಾತ್ ಕುರುಬ, ತೋಂಟಾಪುರ ಎನ್.ಬಿ. ಕರ್ನಾಟಕ ರಾಜ್ಯ ಗೊಂಡ ಸಂಘ, ಬೆಂಗಳೂರು, ೧೯೯೫

ಉತ್ತರ ಕರ್ನಾಟಕ ಜಾನಪದ ಗೀತ ಮೇಳಗಳು ಒಂದು ಸಾಂಸ್ಕೃತಿಕ ಅಧ್ಯಯನ ವೀರೇಶ ಬಡಿಗೇರ ವಿಮೋಚನಾ ಪ್ರಕಾಶನ, ಬೆಳಗಾವಿ

ಎಡೆಗಳು ಹೇಳುವ ಕಂನಾಡ ಕತೆ, ಶಂ.ಬಾ. ಜೋಶಿ, ಶಂಬಾ ವಿಚಾರ ವೇದಿಕೆ, ಬೆಂಗಳೂರು, ೨೦೦೫

ಏಳೂರು ದೇವರ ಕಾಳಗ (ಸಂ) ರಾಜಪ್ಪ ದಳವಾಯಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೪

ಕನ್ನಡ ಜನಪದ ನಂಬಿಕೆಗಳು, ಡಾ. ಮಂಜುನಾಥ ಬೇವಿನಕಟ್ಟಿ, ಜ್ಯೋತಿ ಪ್ರಕಾಶನ, ಮೈಸೂರು, ೨೦೦೭

ಕನ್ನಡ ಜನಪದ ಮಹಾಕಾವ್ಯಗಳು ಮತ್ತು ಪ್ರತಿ ಸಂಸ್ಕೃತಿ, ಡಾ. ಎಂ. ಮುತ್ತಯ್ಯ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮

ಕರ್ನಾಟಕದ ಕುರುಬರು, ಡಾ. ಶಿವಾನಂದ ಗುಬ್ಬಣ್ಣನವರ ಅಕ್ಷಯ ಪ್ರಕಾಶನ, ಧಾರವಾಡ, ೧೯೯೩

ಕರ್ನಾಟಕದ ಜನಪದ ಆಚರಣೆಗಳು, ಡಾ. ಸ.ಚಿ. ರಮೇಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

ಕರ್ನಾಟಕ ಜನಪದ ಕಲೆಗಳ ಕೋಶ, ಡಾ. ಹಿ.ಚಿ. ಬೋರಲಿಂಗಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

ಕರ್ನಾಟಕ ಜಾತ್ರೆಗಳು, ಶಿವಕುಮಾರ ಸ್ವಾಮಿ, ಸಿ.ಎಸ್. ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ ಬಿ.ಆರ್. ಪ್ರಾಜೆಕ್ಟ್, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೮

ಕರ್ನಾಟಕ ಬುಡಕಟ್ಟುಗಳ ಸಂಪುಟ ೧, (ಪ್ರ.ಸಂ) ಡಾ. ಎಚ್.ಜೆ. ಲಕ್ಕಪ್ಪಗೌಡ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಕರ್ನಾಟಕದ ಜಾತ್ರೆಗಳು, ಹಂಪ ನಾಗರಾಜಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು

ಕರ್ನಾಟಕ ಸಂಸ್ಕೃತಿ ಪರಂಪರೆ ಭಾಗ ೧, ಎಸ್.ಎಸ್. ಹಿರೇಮಠ ಸಮತಾ ಪ್ರಕಾಶನ, ಹರಪನಹಳ್ಳಿ, ೧೯೯೨

ಕರ್ನಾಟಕ ಗ್ರಾಮದೇವತೆಗಳು, ಡಾ. ಹಿ.ಚಿ. ಬೋರಲಿಂಗಯ್ಯ, ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ, ಶಂಬಾಜೋಶಿ ಸಮಾಜ ಪುಸ್ತಕಾಲಯ, ಧಾರವಾಡ, ೧೯೬೭

ಕರಾವಳಿಯ ಸಿರಿಯೊಡಲು, ಡಾ. ಶ್ರೀಪಾದ ಭಟ, ಪ್ರಕಾಶಕರು, ಚೇತನ ಬುಕ್‌ಹೌಸ್, ಮೈಸೂರು, ೨೦೦೨

ಕಾಡುಕುರುಬ ಮತ್ತು ಜೇನುಕುರುಬ ಸಂಸ್ಕೃತಿ ಉಪಸಂಸ್ಕೃತಿ ಅಧ್ಯಯನ ಮಾಲೆ, ಎ.ಸಿ. ಲಲಿತ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ತೀ.ನಂ. ಶಂಕರನಾರಾಯಣ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೨

ಕಾಡುಗೊಲ್ಲರ ಬುಡಕಟ್ಟು ವೀರರು, ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಸಿ.ವಿ.ಜಿ. ಪ್ರಕಾಶನ, ಬೆಂಗಳೂರು, ೨೦೦೫

ಕಾಯಕಯೋಗಿ ದಿ. ಮೈಲಾರಪ್ಪ ಮ. ಮೆಣಸಗಿ ಅವರ ಸಂಸ್ಮರಣ ಗ್ರಂಥ (ಪ್ರ.ಸಂ) ಡಾ. ನಿಂಗಣ್ಣ ಸಣ್ಣಕ್ಕಿ ಪ್ರೊ. ಎ.ಬಿ. ಹಿರೇಮಠ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೨

ಕುರುಬರ ಕುರುಹುಗಳು, ಹೆಚ್.ಚಂದ್ರಪ್ಪ, ಅಜ್ಜಂಪುರ ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೦

ಕುರುಬರ ಕುಲಗುರು ರೇವಣಸಿದ್ಧ, ಚಂದ್ರಕಾಂತ ಬಿಜ್ಜರಗಿ. ಶೈಲಚಂದ್ರ ಪ್ರಕಾಶನ, ವಿಜಾಪುರ, ೨೦೦೯

ಕುರುಬರ ಗುರು ಒಡೆಯರು, ಎಫ್.ಟಿ. ಹಳ್ಳಿಕೇರಿ, (ಸಂ) ವಿಕಾಸ ಪ್ರಕಾಶನ ಶೋಧನ, ಶಿಕ್ಷಕರ ಬಡಾವಣೆ ಎಂ.ಪಿ. ಪ್ರಕಾಶನಗರ, ಹೊಸಪೇಟೆ, ೨೦೦೮

ಕುರುಬರು ನಾವು ಕುರಬರು, (ಲೇ) ಮರಿಯಪ್ಪ, ಗಣೇಶ್ ಪ್ರಿಂಟರ್ಸ್, ಹಾಸನ, ೨೦೧೦

ಕುರುಬರ ಕೈಪಿಡಿ, ಲಿಂಗಪ್ಪ ಎಂ.ಎಸ್. ಇಂದಿರಾ ಪ್ರೆಸ್, ಬೆಂಗಳೂರು, ೧೯೧೭

ಕುರುಬರ ಚರಿತ್ರೆ (ಲೇ) ವಿ.ಆರ್. ಹನುಮಂತಯ್ಯ, ಪ್ರತಿಭಾ ಪ್ರಕಾಶನ ಎಚ್.ಐ.ಜಿ. ೨೨ ಮೈಸೂರು, ೧೯೯೬

ಕುರುಬ ಜನಾಂಗದ ರಾಜಕೀಯ ನಾಯಕರು (ಲೇ) ಪ್ರೊ. ಒಡೆಯರ ಡಿ. ಹೆಗ್ಗಡೆ, ಮೈಸೂರು, ೨೦೦೫

ಕುರುಬ ಜನಪದ (ಸಂ) ಪ್ರೊ. ಚೆನ್ನಪ್ಪ ಕಟ್ಟಿ, ಪ್ರೊ. ಆರ್.ಎಸ್. ವಾಡೇದ ಕನಕ ಜಯಂತ್ಯುತ್ಸವ ಸಮಿತಿ ಸಿಂದಗಿ, ವಿಜಾಪುರ, ೨೦೦೬

ಕುರುಬರ ಗುರು ಒಡೆಯರು, (ಸಂ) ಡಾ. ಎಫ್.ಟಿ. ಹಳ್ಳಿಕೇರಿ, ವಿಕಾಸ ಪ್ರಕಾಶನ, ಶೋಧನ ಶಿಕ್ಷಕರ ಬಡಾವಣೆ, ಎಂ.ಪಿ.ಪ್ರಕಾಶನಗರ, ಹೊಸಪೇಟೆ, ೨೦೦೭

ಕುರುಬರ ಗುರು ಒಡೆಯರು ಸಾಂಸ್ಕೃತಿಕ ಅಧ್ಯಯನ, ಬಿ.ಜಿ. ಬಿರಾದರ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೧೦

ಕುರುಬರ ರಟ್ಟಮತಶಾಸ್ತ್ರ ಡಾ. ಎಸ್.ಎಫ್.. ಜಕಬಾಳ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪

ಕುರುಬರ ಹೆಜ್ಜೆಗಳು ಒಂದು ಅದ್ಯಯನ, ಚಂದ್ರಕಾಂತ ಬಿಜ್ಜರಗಿ ಶೈಲಚಂದ್ರ ಪ್ರಕಾಶನ, ದರ್ಗ ಬಿಜಾಪುರ, ೨೦೦೬

ಕುರುಬರ ದರ್ಪಣ, ಚಂದ್ರಕಾಂತ ಬಿಜ್ಜರಗಿ, ಶೈಲಚಂದ್ರ ಪ್ರಕಾಶನ, ವಿಜಾಪುರ, ೨೦೦೪

ಕೃಷ್ಣಗೊಲ್ಲರ ಕಥನ ಕಾವ್ಯಗಳು (ಸಂ) ಡಾ. ಕೆ.ಎಂ. ಮೈತ್ರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ಕೆರೆಯ ಪದ್ಮರಸ ಮತ್ತು ಆತನ ವಂಶಜರು ಒಂದು ಅಧ್ಯಯನ, ಡಾ. ಎಫ್.ಟಿ. ಹಳ್ಳಿಕೇರಿ, ವಿಕಾಶ ಪ್ರಕಾಶನ, ಕಮಲಾಪುರ, ಹೊಸಪೇಟೆ ತಾ., ೧೯೯೬

ಕೊಂತಿಪೂಜೆ ಒಂದು ಅಧ್ಯಯನ (ಅನು) ಕ್ಯಾತನಹಳ್ಳಿ ರಾಮಣ್ಣ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೫

ಕೊಪ್ಪಳ ಜಿಲ್ಲೆಯ ಜಾತ್ರೆಗಳು, ಗ್ರಾಮ ಸಂಸ್ಕೃತಿ ಮಾಲೆ ೫, ಪ್ರೊ. ಎಸ್.ಎಸ್. ಹಿರೇಮಠ, ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦

ಕೊಣ್ಣೂರು ಕರಿಸಿದ್ದೇಶ್ವರ ದೇವಸ್ಥಾನ, ಶ್ರೀರಾಮ ಇಟ್ಟಣ್ಣವರ ನಾಗರಪ್ಪ ಕರಿಯಪ್ಪ ಪೂಜಾರಿ ಪ್ರಕಾಶನ, ಕೊಣ್ಣೂರು, ೧೯೯೫

ಗಡಿನಾಡ ಬೀರೇದೇವರುಗಳ ಪವಾಡ, ಎಂ.ದೇವಾರ್ಜುನ, ನವಜ್ಯೋತಿ ಪ್ರಕಾಶನ, ಹೊಸಕೋಟೆ, ೨೦೧೦

ಗ್ರಾಮ ಮತ್ತು ಶಿಷ್ಟ ದೇವತೆಗಳು, ಡಾ. ಎಸ್. ಲಕ್ಷ್ಮೀದೇವಿ, ಚಿತ್ಕಲಾ ಪ್ರಕಾಶನ, ಕುಪ್ಪಂ, ೨೦೦೭

ಗಿರಿಜನ ಸಿರಿ, ಡಾ. ಡಿ.ಬಿ.ನಾಯಕ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ, ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೩.

ಗೊರವರ ಸಂಸ್ಕೃತಿ ಬಹುಸಂಸ್ಕೃತಿ ಅಧ್ಯಯನ ಮಾಲೆ, ಡಾ. ಚಕ್ಕೆರೆ ಶಿವಶಂಕರ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

ಗೊಲ್ಲಾಳಯ್ಯನ ಪುರಾಣ, ಶಾಂತವೀರಯ್ಯ, ಹಿ.ಚಿ. ಮೋಹನ ಪ್ರಿಂಟರ್ಸ್, ಬೆಂಗಳೂರು, ೧೯೭೨

ಗೊಂಡರ ಸಂಸ್ಕೃತಿ ಡಾ. ಸೈಯದ್ ಜಮೀರುಲ್ಲಾ, ಷರೀಫ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

ಗೊಂಡರ ರಾಮಾಯಣ, ಬೋರಲಿಂಗಯ್ಯ ಹಿ.ಚಿ., ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

ಜನಪದ ಹಾಲುಮತ ಮಹಾಕಾವ್ಯ (ಸಂ) ಡಾ. ವೀರಣ್ಣದಂಡೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦

ಜನಪದ ಕಾವಡಿ, ಹಬ್ಬಗಳು ಸಾಂಸ್ಕೃತಿಕ ಅಧ್ಯಯನ ಡಾ. ವೈ. ಚಂದ್ರಬಾಬು ಮುಳಬಾಗಿಲು, ಪ್ರಕಾಶಕರು ಅಂಜಲಿ ಮುಳಬಾಗಿಲು ಕೋಲಾರ ಜಿಲ್ಲೆ, ೨೦೧೦

ಜನಪ್ರಿಯ ಕನಕ ಸಂಪುಟ, (ಸಂ) ದೇ. ಜವರೇಗೌಡ, ಎಲ್.ಎಸ್. ಶೇಷಗಿರಿರಾವ್ ದೇವೇಂದ್ರಕುಮಾರ ಹಕಾರಿ, ಎಚ್.ಜೆ. ಲಕ್ಕಪ್ಪಗೌಡ (ಪ್ರ) ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ತೃತೀಯ ಆವೃತ್ತಿ, ೧೯೯೧

ಜಾತ್ರೆ ಮತ್ತು ಇತರ ಸಂಶೋಧನಾತ್ಮಕ ಪ್ರಬಂಧಗಳು, (ಸಂ) ಚಂದ್ರಶೇಖರ ದಾಮ್ಲೆ, ೧೯೯೦

ಜಾನಪದ ಪ್ರಚಾರ, ನಿಂಗಣ್ಣ ಸಣ್ಣಕ್ಕಿ ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೭

ಜಾನಪದ ಸಾಮಾಜಿಕ ಕಥನ ಗೀತೆಗಳಲ್ಲಿ ದುಃಖಾಂತ ನಿರೂಪಣೆ, ಡಾ. ದೇವೇಂದ್ರಕುಮಾರ ಹಕಾರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫

ಜಾನಪದ ಸಾಹಿತ್ಯ ದರ್ಶನ ಭಾಗ೧೫ ಪುರಾಣ ಐತಿಹ್ಯ ಪವಾಡ ದಂತಕತೆ (ಪ್ರ.ಸಂ) ಡಾ. ಎಸ್.ಎಂ. ವೃಷಭೇಂದ್ರಸ್ವಾಮಿ, ಸಂಪಾದಕರು ಡಾ. ಸೋಮಶೇಖರ ಇಮ್ರಾಪೂರ, ಜಾನಪದ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪

ಜಾನಪದ ಸಾಹಿತ್ಯ ದರ್ಶನ ಭಾಗ ೯, ದೇವೇಂದ್ರಕುಮಾರ ಹಕಾರಿ (ಸಂ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೯

ಜಾನಪದ ಸಾಹಿತ್ಯ ದರ್ಶನ, ಭಾಗ ೧೩ (ಸಂ) ಎಂ.ಬಿ. ಕೋಟ್ರಶೆಟ್ಟಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪

ಡೊಳ್ಳಿನ ಹಾಡುಗಳ ಸಮೀಕ್ಷೆ, ಜ್ಯೋತಿ ಹೊಸೂರ, ಕಾಲಗತಿ ಪ್ರಕಾಶನ, ರಾಯಬಾಗ, ಬೆಳಗಾವಿ, ೨೦೦೩

ಡೊಳ್ಳಿನ ಹಾಡು, ಬಸವರಾಜ ನೆಲ್ಲಿಸರ (ಸಂ) ಯಕ್ಷ ಪ್ರಕಾಶನ, ಮೈಸೂರು, ೧೯೭೮

ತಗರ ಪವಾಡ, ಎಂ.ಎಂ. ಕಲಬುರ್ಗಿ, ಸಿ.ಕೆ. ಪರಶುರಾಮಯ್ಯ, ಎಫ್.ಟಿ. ಹಳ್ಳಿಕೇರಿ ಸಂ. ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪

ತಿರುಪತಿ, ತಿರುಮಲೆ ದೇವರು, ಪ್ರೊ. ಎಸ್.ಕೆ. ರಾಮಚಂದ್ರರಾಯ, ಪ್ರ. ೧೯೮೦

ತುಮಕೂರು ಜಿಲ್ಲೆ ಜಾನಪದೀಯ ಅಧ್ಯಯನ ಡಾ. ಚಿಕ್ಕಣ್ಣ ಯಣ್ಣೆಕಟ್ಟೆ, ಗಡಿನಾಡ ಜಾನಪದ ಸಂಪರ್ಕ ಕೇಂದ್ರ ಕಾಳಿದಾಸನಗರ, ಸಿರಾ, ೨೦೦೧

ತುಳುವ ಜಾನಪದ ಕೆಲವು ನೋಟಗಳು, ಡಾ. ಅಮೃತ ಸೋಮೇಶ್ವರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

ತೇಜೋಮಯ ಹಾಲುಮತ ಪುರಾಣ, ಎಸ್.ಬಿ. ತೋಂಟಾಪುರ ಶಿವಪದ್ಮಾ ಪ್ರಕಾಶನ, ಗಾಂಧಿನಗರ, ಬೆಂಗಳೂರು, ೧೯೯೨

ದಕ್ಷಿಣದ ದೇಶೀದೇವರು, ಖಂಡೋಬಾ ಮೂಲ. ರಾ.ಚಿಂ. ಢೇರೆ (ಅನು) ರಾಮಕೃಷ್ಣ ಮರಾಠೆ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೩.

ದಾರ್ಶನಿಕ ಕವಿ, ಕನಕದಾಸರು, ಚಂದ್ರಕಾಂತ ಬಿಜ್ಜರಗಿ ಪ್ರ. ೨೦೧೦.

ದೇವರ ಬಂದಾವ ಬನ್ನಿರೇ ಭಾಗ೨, ಶಿವಾನಂದ ಗುಬ್ಬಣ್ಣನವರ (ಸಂ) ಒಕ್ಕಲ ಮಕ್ಕಳ ಪ್ರಕಾಶನ, ಯಳವತ್ತಿ, ೧೯೮೦

ನಡಿಯಪ್ಪ ನಮ್ಮ ನಾಡಿಗೆ, ಡೊಳ್ಳಿನ ಪದಗಳು (ಸಂಗ್ರಹಕಾರ) ಕೆ. ವಿರೂಪಾಕ್ಷಗೌಡ, ಮೇಟಿ ಕೊಟ್ರಪ್ಪ ಯುವಕರ ಸಂಘ, ಹಗರಿಬೊಮ್ಮನಹಳ್ಳಿ, ೧೯೮೧

ನೇಗಿನಹಾಳರ ಪ್ರಬಂಧಗಳು, ನೇಗಿನಹಾಳ ಎಂ.ಬಿ., ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

ಪಗರಣ ಮತ್ತು ಇತರ ಸಂಪ್ರಬಂಧಗಳು, ಡಾ. ಎಂ. ಚಿದಾನಂದಮೂರ್ತಿ, ಪುಸ್ತಕ ಚಿಲುಮೆ, ೧೮೬೦ ರತನಸಿಂಗ್, ಮೋತಿಮೋಹಲ್ಲಾ, ಮೈಸೂರು, ೧೯೮೪

ಪುರಾಣ, ಡಾ. ಕೆ.ಎಲ್. ಗೋಪಾಲಕೃಷ್ಣಯ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೮

ಬಿಜಾಪುರ ಜಿಲ್ಲೆಯ ಜಾತ್ರೆಗಳು, ಚಪ್ಪರ್ ಬಂದ, ಆರ್. ಯಾಸ್ಮಿನ್ ಪ್ರಕಾಶನ, ಬಿಜಾಪುರ, ೨೦೦೬.

ಬೀರದೇವರ ಅವತಾರಗಳು, ಚಂದ್ರಕಾಂತ ಬಿಜ್ಜರಗಿ, ಶೈಲಚಂದ್ರ ಪ್ರಕಾಶನ, ಬಿಜಾಪುರ, ೨೦೧೧.

ಬೀರದೇವರ ಸಂಪ್ರದಾಯ ಮತ್ತು ಆಚರಣೆ, ದೊಡ್ಡಣ್ಣ ಗದ್ದನಕೇರಿ, ಚಿತ್ತವಾಡ್ಗಿ, ಬಾಗಲಕೋಟೆ, ೨೦೦೩.

ಬೀರಪ್ಪ, ಹಳೆಮನೆ ರಾಜಶೇಖರ, ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ, ಗುಲಬರ್ಗಾ ವಿಭಾಗ, ತಿಂಥಣಿ, ೨೦೦೮

ಬೀರಪ್ಪದೇವನ ಉಪಾಸಕರ ಮಾದರಿಗಳು ಮತ್ತು ಕ್ಷೇತ್ರಗಳು, ಜ್ಯೋತಿ ಹೊಸೂರು, ಬೆಳಗಾವಿ, ೨೦೦೭.

ಬೀರಲಿಂಗದೇವರ ಪ್ರಶ್ನೋತ್ತರ ಪುರಾಣ, ಕಾಶಿಲಿಂಗ ಮಹಾರಾಜರು, ವಿಜೇತ ಪ್ರಕಾಶನ, ಗದಗ, ೨೦೧೧

ಬೀರೇಶ್ವರನ ಚರಿತ್ರೆ, ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ, ಬಂಕಾಪುರ, ೧೯೫೮.

ಬೀರೇಶ್ವರ ಗೀತಾರಾಧನೆ, ಬೋನಾ ಬಸವರಾಜ, ವಿಜೇತ ಪ್ರಕಾಶನ, ಗದಗ, ೨೦೦೭

ಬೀರೇಶ್ವರ ಮಾಳಿಂಗರಾಯರ ಡೊಳ್ಳಿನ ಪದಗಳು, ಶಿವಲಿಂಗ ಕುಂಬಾರ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೬.

ಭಿಂಗಯ್ಯ, ಹಾಲುಮತ ಸಂಗಮ ಕುಲಗುರು, ಡಾ. ಲಿಂಗದಹಳ್ಳಿ ಹಾಲಪ್ಪ, ಹಾಲುಮತ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಎಂ.ಪಿ.ಪ್ರಕಾಶ ನಗರ, ಹೊಸಪೇಟೆ, ೨೦೧೨

ಭಗವಾನ ಬೀರೇಶ್ವರರು, ಬೋಗಿ ಬಸವರಾಜ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪

ಭಾರತದ ಕುರುಬರು ರಾಜಪರಂಪರೆ ಬುಡಕಟ್ಟು ಸಮಾಜೋ ಸಾಂಸ್ಕೃತಿಕ ಅಧ್ಯಯನ ಬಿ.ಕೆ. ರವಿ, ಅಂಕಿತ ಪುಸ್ತಕ, ಬೆಂಗಳೂರು, ೨೦೦೫

ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ ಡಾ. ಹಿರೇಮಠ ಆರ್.ಸಿ. ಡಾ. ಸುಂಕಾಪುರ, ಎಂ.ಎಸ್. (ಸಂ) ಕನ್ನಡ ಅಧ್ಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೪.

ಮಂಜಪ್ಪ ಬುಡಕಟ್ಟು ಮಹಾಕಾವ್ಯ ಮಾಲೆ, (ಸಂ) ಚಲುವರಾಜು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೭

ಮಂಡ್ಯ ಜಿಲ್ಲೆಯ ಜಾತ್ರೆಗಳು, ಗ್ರಾಮ ಸಂಸ್ಕೃತಿ ಮಾಲೆ-೬, ಡಾ. ಜಿ.ವಿ. ದಾಸೇಗೌಡ, ಕರ್ನಾಟಕ ಸರ್ಕಾರ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦

ಮಹಿಮಾಂತಕ ಮಹಾಲಿಂಗರಾಯರ ಹಾಲುಮತ ಪುರಾಣ ಅಡಿವೆಪ್ಪ ಮಾಳಪ್ಪ ಸೋಮುತ್ತೆ ಒಡೆಯರು, ೧೯೯೩

ಮಾರ್ಗ ೪, (ಸಂ) ಡಾ. ಎಂ.ಎಂ. ಕಲಬುರ್ಗಿ ಸ್ವಪ್ನ ಬುಕ್‌ಹೌಸ್, ಬೆಂಗಳೂರು, ೨೦೦೪

ಮಾಚಿಯ ಕಥನ ಗೀತೆಗಳು, ಡಾ. ಎಲ್.ಆರ್. ಹೆಗ್ಗಡೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೨

ಮೇಷ ವಿಜಯ, ಎಂ. ಕರಿಯಪ್ಪ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧

ಮೈಲಾರಲಿಂಗ ಖಂಡೋಬಾ ಒಂದು ಸಾಂಸ್ಕೃತಿಕ ಅಧ್ಯಯನ, ಎಂ.ಬಿ. ನೇಗಿನಹಾಳ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ೧೯೭೦

ಮೈಲಾರಲಿಂಗ ಕಾವ್ಯ, ಚಕ್ಕೆರೆ ಶಿವಶಂಕರ, ಕರ್ನಾಟಕ ಜಾನಪದ ಟ್ರಸ್ಟ್, ಬೆಂಗಳೂರು, ೧೯೮೭

ರಸ್ತಾಪುರ ಭೀಮಕವಿ ವಿರಚಿತ ಶ್ರೀ ರೇವಣಸಿದ್ದೇಶ್ವರ ಲೀಲಾ ಸಂಯುಕ್ತ ಹಾಲ್ಮತೋತತೇಜಕ ಪುರಾಣ ಭಾಗವತ್ತನೆಯ (ಸಂ) ಶಶಿಕಲಾ ಪ್ರಕಾಶನ, ಬೆಂಗಳೂರು, ೧೯೮೩

ರಸ್ತಾಪುರ ಭೀಮಕವಿಯ ಹಾಲುಮತ್ತೋತ್ತೇಜಕ ಪುರಾಣ, ಎಫ್.ಟಿ. ಹಳ್ಳಿಕೇರಿ (ಸಂ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

ರಸ್ತಾಪುರ ಭೀಮಕವಿ ವಿರಚಿತ ಹಾಲಮತ್ತೋತ್ತೇಜಕ ಪುರಾಣ (ಅನು) ಎನ್.ಬಿ. ತೋಂಟಾಪುರ, ೧೯೧೬

ರಾಘವಾಂಕ ವಿರಚಿತ ಸಿದ್ಧರಾಮ ಚಾರಿತ್ರ (ಸಂಗ್ರಹ) ಡಾ. ನರಸಿಂಹಾಚಾರ್ಯ ಎಲ್. (ಸಂ) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೩

ರಾಮಾಯಣ ಭಾರತ ಪುರಾಣ ಪ್ರಶ್ನಾವಳಿ, ಚಂದ್ರಕಾಂತ ಬಿಜ್ಜರಗಿ ಶೈಲಚಂದ್ರ ಪ್ರಕಾಶನ, ಬಿಜಾಪುರ, ೨೦೦೮

ರೇವಣ ಸಾಂಗತ್ಯ, ಟಿ.ಎ. ಮಾಣಿಕ್ಯ ಶೆಟ್ರು, (ಸಂ) ಕರ್ನಾಟಕ ಬುಕ್ ಡಿಪೋ, ಏಜೆಂಟ್ ಬಳ್ಳಾರಿ, ೧೯೧೦

ರೇವಣಸಿದ್ಧರು ಒಂದು ಅಧ್ಯಯನ, ಶಕುಂತಲಾ ಗೋಪಶೆಟ್ಟಿ ಅಪೂರ್ವ ಪ್ರಕಾಶನ, ರಾಯಚೂರು, ೨೦೦೬

ವಚನಕಾರ ಶಿವಯೋಗಿ ಸಿದ್ಧರಾಮ (ಲೇ.) ಒಡೆಯರ್ ಡಿ. ಹೆಗ್ಗಡೆ, ಅಂಜನಾದ್ರಿ ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಮೈಸೂರು, ಪ್ರ. ಚೇತನ ಬುಕ್‌ಹೌಸ್

ವಿಜಯನಗರ ಸಾಮ್ರಾಜ್ಯದ ಹಕ್ಕಬುಕ್ಕರು (ಲೇ.) ಒಡೆಯರ್ ಡಿ. ಹೆಗ್ಗಡೆ ಅಖಿಲಾ ಏಜೆನ್ಸಿಸ್ ಅಂಜನಾದ್ರಿ ರೇಣುಕಾಚಾರ್ಯ ದೇವಸ್ಥಾನ ರಸ್ತೆ, ಮೈಸೂರು, ೨೦೦೫

ಶಂಕರ ದಾಸಿಮಯ್ಯ ಪುರಾಣ, ಡಾ. ಅನ್ನಪೂರ್ಣ ಜಾಲವಾದಿ ಎಂ. ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ೧೯೯೯

ಶರಣ ಕುರುಬ ಗೊಲ್ಲಾಳ, ಷಣ್ಮುಖಪ್ಪ, ಕನಕ ಗುರುಪೀಠ ಕಾಗಿನೆಲೆ, ೨೦೦೮

ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕ್ರಿ.ಶ. ೪೫೦, ಕ್ರಿ.ಶ. ೧೧೫೦ ಡಾ. ಎಂ. ಚಿದಾನಂದಮೂರ್ತಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೭೯

ಶಾಸನಗಳಲ್ಲಿ ಶಿವಶರಣರು, ಎಂ.ಎಂ. ಕಲಬುರ್ಗಿ, ಸಿರಿಗನ್ನಡ ಪ್ರಕಾಶನ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೦

ಶಾಂತಮುತ್ತಯ್ಯ ಮತ್ತು ಸಿದ್ಧರ ಪವಾಡಗಳು, ಉಮೇಶ, ಹೊಸ್ಕೋರಿ ಪ್ರ. ಸಿದ್ದಯ್ಯ ಶರಭಯ್ಯ ಗುರುವಿನ, ಹಾಲುಮತ ಗುರು ಪೀಠಾಧಿಪತಿಗಳು, ಸರೂರು, ೨೦೦೮

ಶಂಬಾ ಕೃತಿ ಸಂಪುಟ ೨, ಕಂನಡ ಕಂನುಡಿ (ಸಂ) ಮಲ್ಲೇಪುರಂ ಜಿ. ವೆಂಕಟೇಶ, ಕನ್ನಡ ಪುಸ್ತಕ ಪ್ರಾಧಿಕಾರ, ೧೯೯೯

ಶಿವಮೊಗ್ಗ ಜಿಲ್ಲೆಯ ಜಾತ್ರೆಗಳು, ಡಾ. ತಿಮ್ಮಪ್ಪ ಎ.ಕೆ. ವಿಶ್ವಬಂಧು ಪ್ರಕಾಶನ, ಶಿವಮೊಗ್ಗ, ೨೦೦೭

ಶಿವಯೋಗಿ ಸಿದ್ದರಾಮ ವಚನ ನಿರ್ವಚನ, ಹಿರೇಮಠ ಎಸ್.ಎಂ. ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೭

ಶಿವಲಿಂಗ ಕವಿಯ ಅಮುಗಿದೇವಯ್ಯಗಳ ಸಾಂಗತ್ಯ (ಸಂ) ಡಾ. ಎಚ್. ತಿಪ್ಪೇರುದ್ರಸ್ವಾಮಿ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲಾ ರಾಮಾನುಜ ರಸ್ತೆ ಮೈಸೂರು, ೧೯೬೫

ಶ್ರೀ ಗುರು ನಿರ್ವಾಣ ಸಿದ್ಧರು, ಅಜ್ಜಂಪುರ, ಜಿ.ಸೂರಿಶ್ರೀ ಗುರು ನಿಕೇತನ ಪ್ರಕಾಶನ, ಕಡೂರು, ೧೯೮೪

ಶ್ರೀ ರೇವಣಸಿದ್ಧೇಶ್ವರ ಮತ್ತು ಶ್ರೀ ಬೀರೇಶ್ವರರು, ಒಡೆಯರ್ ಡಿ ಹೆಗ್ಗಡೆ, ಅಖಿಲಾ ಏಜೆನ್ಸಿಸ್, ಮೈಸೂರು, ೨೦೦೫

ಶ್ರೀ ಸಿದ್ಧಬೀರೇಶ್ವರ ಅರ್ಥಾತ್ ಶ್ರೀ ಕರಿಸಿದ್ಧೇಶ್ವರ ಪುರಾಣ ಅಣ್ಣಪ್ಪ ವಾಸುದೇವರಾಯ, ವಿಧ್ಯಾನಿಧಿ ಪ್ರಕಾಶನ, ಗದಗ, ೧೯೭೧

ಶ್ರೀ ಬೀರಲಿಂಗದೇವರ ಪ್ರಶ್ನೋತ್ತರ ಪುರಾಣ ಶ್ರೀಕಾಶಿಲಿಂಗ ಮಹಾರಾಜರು ವಿಜೇತ ಪ್ರಕಾಶನ, ಗದಗ, ೨೦೧೧

ಶ್ರೀ ಮಹಾಲಿಂಗರಾಯರ ಹಾಲುಮತ ಹೊಂಬೆಳಕು ದರ್ಶನ ಮಹಾಕಾವ್ಯ ಶ್ರೀ ಅಡಿವೆಪ್ಪ ಮಹಾರಾಯರು, ಶ್ರೀ ಮಹಾಲಿಂಗರಾಯರ ಸದ್ಭಕ್ತಮಂಡಳಿ, ೨೦೦೯

ಶ್ರೀ ರೇವಣ್ಣಸಿದ್ದೇಶ್ವರ ಲೀಲಾ ಸಂಯುಕ್ತ ಹಾಲ್ಮತೋತ್ತೇಜಕ ಪುರಾಣ ರಸ್ತಾಪುರ ಭೀಮಕವಿ ಅಂಬಿಕಾ ಪ್ರಿಂಟರ್ಸ್, ಬೆಂಗಳೂರು, ೧೯೧೬

ಶ್ರೀ ವಿಠಲ : ಒಂದು ಮಹಾಸಮನ್ವಯ ಚಂದ್ರಕಾಂತ ಪೋಕಳೆ (ಸಂ) ಮೂಲ ಮರಾಠಿ ರಾ.ಚಿಂ ಢೇರಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨

ಸಮಗ್ರ ಜನಪದ ಸಂಪುಟ (ಸಂ) ಪ್ರೊ. ವೀರೇಂದ್ರ ಸಿಂಪಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

ಸಮಾಜ ಸಂಸ್ಕೃತಿ ಸಂಘರ್ಷ (ಸಂ) ಎಸ್.ಎಸ್. ಹೀರೇಮಠ, ಸಿವಿಜಿ ಪಬ್ಲಿಕೇಶನ್ಸ್, ಬೆಂಗಳೂರು, ೨೦೦೫

ಸಾಹಿತ್ಯ ಕಥನ ವಿಮರ್ಶಾ ಲೇಖನಗಳ ಸಂಕಲನ, ಡಾ. ಡಿ.ಆರ್. ನಾಗರಾಜ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೨೦೦೬

ಸಿದ್ಧಮಂಕ ಚರಿತೆ ಎಂ.ಎಂ. ಕಲಬುರ್ಗಿ, ವೈ.ಸಿ. ಭಾನುಮತಿ (ಸಂ) ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ, ೨೦೦೪

ಸಿದ್ಧಪ್ಪ ಮೇಟಿ ಅವರು ಹಾಡಿದ ಜನಪದ ಹಾಲುಮತ ಮಹಾಕಾವ್ಯ, ವೀರಣ್ಣದಂಡೆ (ಸಂ) ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦

ಸಿದ್ಧಸಾಹಿತ್ಯ, ಕೃಷ್ಣಮೂರ್ತಿ ಮ.ಸು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

ಸುಕ್ಷೇತ್ರ ಹುಲಜಂತಿ ಶ್ರೀ ಮಹಿಮಾಂತಕ ಮಹಾಲಿಂಗರಾಯರ ಹಾಲುಮತ ಪುರಾಣ ಅಡಿವೆಪ್ಪ ಮಾಳಪ್ಪ ಸೋಮತ್ತೆ ಒಡೆಯರು, ೧೯೯೩

ಸುಧಾರ್ಣವ ಡಾ.ಬಿ.ವಿ. ಮಲ್ಲಾಪುರ, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀನಾಗನೂರು ರುದ್ರಾಕ್ಷಿಮಠ, ಬೆಳಗಾವಿ, ೧೯೯೮

ಸುವರ್ಣ ಜನಪದ ಲೇಖನಗಳು, ವೀರಣ್ಣದಂಡೆ, ಶ್ರೀಪಾದ ಶೆಟ್ಟಿ, ೨೦೦೬

ಸುವರ್ಣ ಜನಪದ ಕಾವ್ಯ, ಎಸ್.ಜಿ. ಸಿದ್ಧರಾಮಯ್ಯ ಕೆ.ಆರ್. ಸಂಧ್ಯಾರೆಡ್ಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

ಸಂಪೂರ್ಣ ಹಾಲುಮತ ಪುರಾಣ ಭಾಗ ೧, ಶ್ರೀ ಲಕ್ಷ್ಮಣ ಪಟಾತ ಪಂಚಾಕ್ಷರಿ ಪ್ರಕಾಶನ ಮಮದಾಪೂರ, ೨೦೧೧

ಸಂಸ್ಕೃತಿ-ವಿಕೃತಿ, ಎಂ.ಎಂ. ಕಲಬುರ್ಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

ಸಂಕ್ಷಿಪ್ತ ವಿವರಣಾತ್ಮಕ ಕನ್ನಡ ಜಾನಪದ ಗ್ರಂಥಸೂಚಿ (ಸಂ) ಡಾ. ಎಚ್.ಎಂ. ಮಹೇಶ್ವರಯ್ಯ, ೨೦೦೪

ಸಂಸ್ಕೃತಿ ಸಂಕಥನ, ಡಾ. ವೀರೇಶ ಬಡಿಗೇರ, ಮಯ ಪ್ರಕಾಶನ, ಕಮಲಾಪುರ, ೨೦೦೯

ಸಾಂಸ್ಕೃತಿಕ ಅಧ್ಯಯನ, ರಹಮತ್ ತರಿಕೇರಿ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨ನೇ ಮುದ್ರಮ, ೨೦೦೮

ಸಾಂಸ್ಕೃತಿಕ ವೀರಭದ್ರಸ್ವಾಮಿ, ಪ್ರೊ. ಎಂ.ಜಿ. ನಾಗರಾಜ್, ಪ್ರ. ೧೯೯೯

ಹಾಲತೊರೆ (ಸಂ) ಎಂ. ಕರಿಯಪ್ಪ, ಪ್ರಕಾಶಕರು, ದಾವಣಗೆರೆ, ೨೦೦೩

ಹಾಲುಕೆನೆ, ಶ್ರೀರಾಮ ಇಟ್ಟಣ್ಣವರ, ಬಿ.ಡಿ. ವಸ್ತ್ರದ ಚನ್ನಪ್ಪ ಕಟ್ಟಿ (ಸಂ) ಶ್ರೀ ಕಾಳಿದಾಸ ಶಿಕ್ಷಣ ಸ್ಥೆ ಬಿಜಾಪುರ, ೨೦೦೨

ಹಾಲುಮತ ಅಧ್ಯಯನ ೧, ಡಾ. ಎಫ್.ಟಿ. ಹಳ್ಳಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

ಹಾಲುಮತ ಅಧ್ಯಯನಗಳು, ಎಂ.ಎಂ. ಕಲಬುರ್ಗಿ ಅವರ ಸಂಶೋಧನೆ ಲೇಖನಗಳು, ವಿಕಾಸ ಪ್ರಕಾಶನ, ಹೊಸಪೇಟೆ, ೨೦೧೦

ಹಾಲುಮತ ಅನರ್ಘ್ಯ ರತ್ನಗಳು, ಚಂದ್ರಕಾಂತ ಬಿಜ್ಜರಗಿ, ಪ್ರ. ೨೦೧೧

ಹಾಲುಮತ ಕುರುಬ ಜನಾಂಗದ ಇತಿಹಾಸ (ಲೇ) ಒಡೆಯರ ಡಿ. ಹೆಗ್ಗಡೆ, ಅಖಿಲಾ ಏಜೆನ್ಸಿಸ್, ಮೈಸೂರು, ೨೦೦೫

ಹಾಲುಮತದ ಗುರುಶಿಷ್ಯರು, ಶ.ಶಿ. ಕುಂಬಾರ, ವಿಜೇತ ಪ್ರಕಾಶನ, ಗದಗ, ೨೦೦೭

ಹಾಲುಮತದ ಚರಿತ್ರೆ, ಯಲ್ಲನಗೌಡ, ಫ. ಅತ್ತಿಕೊಳ್ಳ, ಧಾರವಾಡ, ೧೯೪೯

ಹಾಲುಮತ ಚರಿತ್ರೆ (ಸಂ) ಡಾ. ವಾಯ್. ಕೆ. ಗುಂಡಕರ್ಜಗಿ, ವಿಜೇತ ಪ್ರಕಾಶನ, ಗದಗ, ೨೦೦೫

ಹಾಲಮತದ ಹುಟ್ಟು, ಬೋನಾ ಬಸವರಾಜ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೦

ಹಾಲುಮತಸ್ಥರು, ಬ.ಪ. ನಾಯ್ಕರ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೩

ಹಾಲುಮತ ದರ್ಶನ, ಶಂಬಾಜೋಶಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೯

ಹಾಲುಮತ ಪುರಾಣ ಅಥವಾ ಮುದ್ದುಲಿಂಗೇಶ್ವರ ಚರಿತ್ರೆ ಅಂಬಾಸುತ ವಿ., ವಿದ್ಯಾನಿಧಿ ಪ್ರಕಾಶನ, ಗದಗ

ಹಾಲುಮತ ಪುರಾಣ, ಬಸವಣ್ಣೆವ್ವ ನೀಲಪ್ಪ ಹಳವಳ್ಳಿ, ವಿದ್ಯಾನಿಧಿ ಪ್ರಕಾಶ, ಗದಗ, ೧೯೯೯.

ಹಾಲಮತದ ಪುರಾಣವು, ಚನ್ನಬಸವ ಕವಿ, ದಾವಣಗೆರೆ, ೧೯೫೪

ಹಾಲುಮತದ ಪುರಾಣ, ಮೂಲ ಕವಿ ರಸ್ತಾಪುರ, ಭೀಮಕವಿ ಡಾ. ನಿಂಗಣ್ಣ ಸಣ್ಣಕ್ಕಿ, ವಿಜೇತ ಪ್ರಕಾಶನ, ಗದಗ, ೨೦೦೮

ಹಾಲುಮತ ಪುರಾಣಗಳ ಭಿನ್ನಾಭಿಪ್ರಾಯಗಳು, ಶಂಕರ ಶಿ. ಕಂಬಾರ, ವಿಜೇತ ಪ್ರಕಾಶನ, ಗದಗ, ೨೦೦೭

ಹಾಲ್ಮತೋತ್ತೇಜಕ ಪುರಾಣ, ಭೀಮಕವಿ ಶಂಕದಾಳೆ, ರಸ್ತಾಪುರ, ೧೯೧೨

ಹಾಲ್ಮತೋತ್ತೇಜಕ ಪುರಾಣ, ಪ್ರೊ. ಬಿ.ಎಚ್. ಮಾದರ ಕವಿ ಚಕ್ರವರ್ತಿ, ರನ್ನ ಪ್ರಕಾಶನ, ಮಹಾಲಿಂಗಪುರ, ೨೦೦೧

ಹಾಲಮತದ ಪ್ರಶ್ನೋತ್ತರ ಮಾಲೆ, ಶಂಕರ, ಶಿ. ಕಂಬಾರ ಬಸವ ಪ್ರಕಾಶನ ಕಬ್ಬೂರ, ೨೦೦೪

ಹಾಲುಮತದ ಬುಡಕಟ್ಟುಗಳ ಪರಿಚಯ, ಮೈತ್ರಿ ಕೆಂ.ಎಂ., ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

ಹಾಲುಮತ ಮಹಾಸಭೆ ಭಾಷಣಗಳು ಮತ್ತು ವರದಿಗಳು, ಹಳ್ಳಿಕೇರಿ ಎಫ್.ಟಿ. (ಸಂ), ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೯

ಹಾಲುಮತದ ರೇವಣಸಿದ್ದರ ಹಾಡುಗಳು ಹಾಗೂ ಬೀರೇಶ್ವರ ಹಾಡುಗಳು, ಶಂ.ಶಿ. ಕುಂಬಾರ, ವಿಜೇತ ಪ್ರಕಾಶನ, ಗದಗ, ೨೦೦೯

ಹಾಲುಮತದ ಶರಣರ ಚರಿತ್ರೆ ಹಾಗೂ ವಚನಗಳು, ಶಂಕರ ಶಿ. ಕಂಬಾರ, ವಿಜೇತ ಪ್ರಕಾಶನ, ಗದಗ, ೨೦೦೮

ಹಾಲುಮತ ಶ್ರೀ ಬೀರಲಿಂಗೇಶ್ವರ ಮಹಾಪುರಾಣ, ಸದಾಶಿವ ಅಪ್ಪಣ್ಣ ಜುಮ್ಮಣ್ಣವರ, ಬೀರಲಿಂಗೇಶ್ವರ ಡೊಳ್ಳಿನ ಸಂಘ, ಇಂಡಿ, ವಿಜಾಪುರ ಜಿಲ್ಲೆ, ೨೦೦೯.

ಹಾಲುಮತ ಸಮಾಜ, ಪೊಲೀಸ್ ಪಾಟೀಲ, ಜೀವದಯಾ ಸಂಘ, ಹುಬ್ಬಳ್ಳಿ, ೧೯೩೬

ಹಾಲಮತ ವ್ಯಾಸಂಗ - ೨, (ಸಂ) ಎಫ್.ಟಿ. ಹಳ್ಳಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

ಹಾಲುಮತ ವ್ಯಾಸಂಗ - ೩, ಎಫ್.ಟಿ. ಹಳ್ಳಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯

ಹಾಲಮತ ವ್ಯಾಸಂಗ - ೪ (ಸಂ) ಎಫ್.ಟಿ. ಹಳ್ಳಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩

ಹುಲಕುಂದ ಭೀಮಕವಿಯ ಸಾಹಿತ್ಯ, ಡಾ. ಚೆನ್ನಕ್ಕ ಪಾವಟೆ, ಕನ್ನಡ ಸಾಹಿತ್ಯ ಪರಿಷತ್ತು, ೨೦೦೭

ಹೇಳಿಕೆ ಮಾಡ್ಯಾರು ಒಡೆಯರು (ಸಂ) ಡಾ. ಎಂ. ಪಡಶೆಟ್ಟಿ, ನೆಲೆ ಪ್ರಕಾಶನ, ಸಿಂದಗಿ, ೧೯೯೩

ವಕ್ತೃಗಳ ವಿವರ

ಕ್ರ.ಸಂ.	ಹೆಸರು	ವಯಸ್ಸು	ಜಾತಿ	ವೃತ್ತಿ	ಗ್ರಾಮ	ತಾಲೂಕು	ಜಿಲ್ಲೆ
೧.	ನಾಗಪ್ಪ ಶಿಂಗಾಡಿ ಕಂಠಿಕಾರ	೬೦	ಕುರುಬ	ಗುರುತನ	ಅಲಕನೂರು	ರಾಯಬಾಗ	ಬೆಳಗಾವಿ
೨.	ನಾಗಪ್ಪ ಒಡೆಯರ	೫೮	ಒಡೆಯರು	ಗುರುತನ	ಅಲಕನೂರು	ರಾಯಬಾಗ	ಬೆಳಗಾವಿ
೩.	ಕೆಂಚಪ್ಪ ಶಿವರಾಯ ಪೂಜಾರಿ	೬೮	ಒಡೆಯರು	ಗುರುತನ	ಎಕ್ಸಂಭಾ	ಚಿಕ್ಕೋಡಿ	ಬೆಳಗಾವಿ
೪.	ಕರಿಯಪ್ಪ ಚೌಗಲಿ	೭೦	ಕುರುಬ	ಕೃಷಿ	ಹಾರೂಗೇರಿ	ರಾಯಬಾಗ	ಬೆಳಗಾವಿ
೫.	ಬಸವರಾಜ ಕುದರಿ	೫೫	ಒಡೆಯರು	ಇಂಜನೇರ	ಕಂಕಣವಾಡಿ	ರಾಯಬಾಗ	ಬೆಳಗಾವಿ
೬.	ಮಾರುತಿ ಘಂಟಿ	೬೪	ಕುರುಬ	ಪೂಜಾರಿ	ಕಂಕಣವಾಡಿ	ರಾಯಬಾಗ	ಬೆಳಗಾವಿ
೭.	ಲಿಂಗಪ್ಪ ಕೆಂಚಪ್ಪ ಪೂಜಾರಿ	೬೦	ಕುರುಬ	ಪ್ರಾ. ಶಿಕ್ಷಕರು	ಅಲಕನೂರು	ಚಿಕ್ಕೋಡಿ	ಬೆಳಗಾವಿ
೮.	ಲಕ್ಷ್ಮಣರಾವ್ ಚಿಂಗಳೆ	೫೫	ಒಡೆಯರು	ಕೃಷಿ	ಎಕ್ಸಂಭಾ	ಚಿಕ್ಕೋಡಿ	ಬೆಳಗಾವಿ
೯.	ಸತ್ಯಪ್ಪನವರು	೭೨	ಲಿಂಗಾಯತರು	ಗುರುತನ	ಹಳ್ಳೂರ	ಗೋಕಾಕ	ಬೆಳಗಾವಿ
೧೦.	ಕರಿಯಪ್ಪ ರೇವಪ್ಪ ಪೂಜಾರಿ	೫೯	ಕುರುಬ	ಪೂಜಾರಿ	ಕೊಣ್ಣೂರು	ಜಮಖಂಡಿ	ಬಿಜಾಪುರ
೧೧.	ರಾಮಗೊಂಡ ಕೌಲಗಿ	೬೪	ಒಡೆಯರು	ಗುರುತನ	ನಾಗಠಾಣ	ಬಿಜಾಪುರ	ಬಿಜಾಪುರ

ಕ್ರ.ಸಂ.	ಹೆಸರು	ವಯಸ್ಸು	ಜಾತಿ	ವೃತ್ತಿ	ಗ್ರಾಮ	ತಾಲೂಕು	ಜಿಲ್ಲೆ
೧೨.	ಕೆಂಚಪ್ಪ ಪೂಜಾರಿ	೫೮	ಕುರುಬ	ಗುರುತನ	ನಾಗಠಾಣ	ಬಿಜಾಪುರ	ಬಿಜಾಪುರ
೧೩.	ನಾಗಪ್ಪ ಬೀರಪ್ಪ ದಳವಾಯಿ	೭೦	ಕುರುಬ	ಪೂಜಾರಿ	ಮಲಘಾಣ	ಬ.ಬಾಗೇವಾಡಿ	ಬಿಜಾಪುರ
೧೪.	ಸಿದ್ದಪ್ಪ ಪೂಜಾರಿ	೮೦	ಕುರುಬ	ಕೃಷಿ	ಬೆಳ್ಳೊಳ್ಳಿ	ಇಂಡಿ	ಬಿಜಾಪುರ
೧೫.	ರಾಚಪ್ಪ ಪೂಜಾರಿ	೫೭	ಕುರುಬ	ಶಿಕ್ಷಕರು	ಝಳಕಿ	ಇಂಡಿ	ಬಿಜಾಪುರ
೧೬.	ರಾಮಚಂದಪ್ಪ ಕಂಬಳಿ	೬೫	ಒಡೆಯರು	ಗುರುತನ	ಹಿರೇರೂಗಿ	ಇಂಡಿ	ಬಿಜಾಪುರ
೧೭.	ಬೀರಪ್ಪ ವಿ. ಪೂಜಾರಿ	೬೮	ಕುರುಬ	ಪೂಜಾರಿಕೆ	ಸಿರಾಡೋನ	ಇಂಡಿ	ಬಿಜಾಪುರ
೧೮.	ಕೆಂಚಪ್ಪ ಸಿ. ಒಡೆಯರು	೫೯	ಒಡೆಯರು	ಗುರುತನ	ಸಿರಾಡೋನ	ಇಂಡಿ	ಬಿಜಾಪುರ
೧೯.	ಈರಪ್ಪ ಕೆಂಚಪ್ಪ ಪೂಜಾರಿ	೭೨	ಒಡೆಯರು	ಶಿಕ್ಷಕರು	ಹೊಳೆಹಂಗರಗಿ	ಬಿಜಾಪುರ	ಬಿಜಾಪುರ
೨೦.	ಕಲಪ್ಪ ವಿ. ಒಡೆಯರು	೬೬	ಕುರುಬ	ಕೃಷಿ	ಮಲಘಾಣ	ಬ.ಬಾಗೇವಾಡಿ	ಬಿಜಾಪುರ
೨೧.	ಶರಣಪ್ಪ ಮಾಳಪ್ಪ ಪೂಜಾರಿ	೭೧	ಕುರುಬ	ವ್ಯವಸಾಯ	ಝಳಕಿ	ಇಂಡಿ	ಬಿಜಾಪುರ
೨೨.	ಭೀಮ್ಮಪ್ಪ ಸತ್ಯಪ್ಪ ಒಡೆಯರು	೬೪	ಒಡೆಯರು	ಶಿಕ್ಷಕರು	ಮಲಘಾಣ	ಬ.ಬಾಗೇವಾಡಿ	ಬಿಜಾಪುರ
೨೩.	ಶಾಂತಪ್ಪ ಭಿಮಪ್ಪ ಪೂಜಾರಿ	೬೫	ಕುರುಬ	ಪೂಜಾರಿಕೆ	ಸಿರಾಡೋಣ	ಇಂಡಿ	ಬಿಜಾಪುರ

ಕ್ರ.ಸಂ.	ಹೆಸರು	ವಯಸ್ಸು	ಜಾತಿ	ವೃತ್ತಿ	ಗ್ರಾಮ	ತಾಲೂಕು	ಜಿಲ್ಲೆ
೨೪.	ಮಾಳಪ್ಪ ಸಿದ್ದಲಿಂಗಪ್ಪ ಒಡೆಯರು	೬೯	ಕುರುಬ	ಪೂಜಾರಿ	ಸಿರಾಡೋಣ	ಇಂಡಿ	ಬಿಜಾಪುರ
೨೫.	ಜಕ್ಕಪ್ಪ ತಾಯಪ್ಪ ಕಾತ್ರೆ	೬೯	ಕುರುಬ	ಪೂಜಾರಿಕೆ	ಸಿರಾಡೋಣ	ಇಂಡಿ	ಬಿಜಾಪುರ
೨೬.	ಬೀರಪ್ಪ ಯಂಕಣ್ಣಾ ಪೂಜಾರಿ	೫೪	ಕುರುಬ	ಪೂಜಾರಿಕೆ	ಸಿರಾಡೋಣ	ಇಂಡಿ	ಬಿಜಾಪುರ
೨೭.	ವೈ.ಎಸ್. ಬೆಳುಂಡಗಿ	೬೮	ಕುರುಬ	ಶಿಕ್ಷಕರು	ಸಿರಾಡೋಣ	ಇಂಡಿ	ಬಿಜಾಪುರ
೨೮.	ಯಲ್ಲಪ್ಪ ಶಂಕ್ರಪ್ಪ ಗರಸಗಿ	೬೯	ಕುರುಬ	ಗ್ರಾ.ಪಂ. ಸದಸ್ಯರು	ಮಲಘಾಣ	ಬ. ಬಾಗೆವಾಡಿ	ಬಿಜಾಪುರ
೨೯.	ನಾಗಪ್ಪ ಭೀರಪ್ಪ ದಳವಾಯಿ	೫೮	ಕುರುಬ	ಪೂಜಾರಿ	ಬೊಳ್ಳೊಳ್ಳಿ	ಇಂಡಿ	ಬಿಜಾಪುರ
೩೦.	ಲಕ್ಷ್ಮಣ ನಾಗೂರು	೬೬	ಒಡೆಯರು	ಗುರುತನ	ಮುತ್ತಗಿ	ಬ. ಬಾಗೇವಾಡಿ	ಬಿಜಾಪುರ
೩೧.	ಜಟ್ಟೆಪ್ಪ ಹ. ಪೂಜಾರಿ	೬೯	ಕುರುಬ	ಪೂಜಾರಿ	ಶಿರಾಡೋನ	ಇಂಡಿ	ಬಿಜಾಪುರ
೩೨.	ಎನ್.ಎಸ್. ಪೂಜಾರಿ	೭೧	ಕುರುಬ	ಪೂಜಾರಿ	ಬೊಳ್ಳೊಳ್ಳಿ	ಇಂಡಿ	ಬಿಜಾಪುರ
೩೩.	ಮಾದೇವಪ್ಪ ಪೂಜಾರಿ	೪೯	ಒಡೆಯರು	ಗುರುತನ	ತಳಗಿಹಾಳ	ಬಾಗಲಕೋಟೆ	ಬಾಗಲಕೋಟೆ
೩೪.	ಕೊಟ್ರೇಶಪ್ಪ ಪೂಜಾರಿ	೫೮	ಒಡೆಯರು	ಗುರುತನ	ಮುರನಾಳ	ಬಾಗಲಕೋಟೆ	ಬಾಗಲಕೋಟೆ
೩೫.	ಸಿದ್ದಪ್ಪ ಒಡೆಯರು	೭೩	ಕುರುಬ	ಪೂಜಾರಿ	ಮುರನಾಳ	ಬಾಗಲಕೋಟೆ	ಬಾಗಲಕೋಟೆ

ಕ್ರ.ಸಂ.	ಹೆಸರು	ವಯಸ್ಸು	ಜಾತಿ	ವೃತ್ತಿ	ಗ್ರಾಮ	ತಾಲೂಕು	ಜಿಲ್ಲೆ
೩೬.	ಕರಿಯಪ್ಪ ಪೂಜಾರಿ	೫೪	ಒಡೆಯರು	ಗುರುತನ	ದಾವಣಗೆರೆ	ದಾವಣಗೆರೆ	ದಾವಣಗೆರೆ
೩೭.	ಕಲಪ್ಪ		ಲಿಂಗಾಯತ	ಪೂಜಾರಿ	ದಾವಣಗೆರೆ	ದಾವಣಗೆರೆ	ದಾವಣಗೆರೆ
೩೭.	ಸಿದ್ದಪ್ಪ ದಳವಾಯಿ	೬೮	ವೀರಶೈವರು	ಶಿಕ್ಷಕರು	ಚಿಗಟೇರಿ	ಹರಪ್ಪನಹಳ್ಳಿ	ದಾವಣಗೆರೆ
೩೮.	ಚನ್ನಬಸಪ್ಪ ಸಿದ್ದಪ್ಪ ಪೂಜಾರಿ	೬೩	ಕುರುಬ	ಪೂಜಾರಿಕೆ	ದಾವಣಗೆರೆ	ದಾವಣಗೆರೆ	ದಾವಣಗೆರೆ
೩೯.	ಶಾಂತಯ್ಯ ಮೇಲಿನಮಠ	೬೮	ಲಿಂಗಾಯತರು	ಶಿಕ್ಷಕರು	ಬಾಗೂರು	ಹೊಸದುರ್ಗ	ಚಿತ್ರದುರ್ಗ
೪೦.	ಕೆಂಚಪ್ಪ ಗುಮ್ಮಪ್ಪ ಒಡೆಯರು	೫೫	ಒಡೆಯರು	ಕೃಷಿ	ಕುಪ್ಪೂರು	ತಿಪಟೂರು	ತುಮಕೂರು
೪೧.	ಸಿದ್ದನಗೌಡ ಪಾಟೀಲ	೭೫	ಲಿಂಗಾಯತರು	ಗುರುತನ	ಆಲೂರು	ತಿಪಟೂರು	ತುಮಕೂರು
೪೨.	ಗಂಗಾಧರ ಒಡೆಯರು	೭೦	ಒಡೆಯರು	ಗುರುತನ	ಅನುವನಹಳ್ಳಿ	ತರೀಕೆರೆ	ಚಿಕ್ಕಮಗಳೂರು
೪೩.	ಕೆಂಚಪ್ಪ ದಳವಾಯಿ	೭೧	ಒಡೆಯರು	ವಕೀಲರು	ಆಸಂದಿ	ಕಡೂರು	ಚಿಕ್ಕಮಗಳೂರು
೪೪.	ಸೀತಾರಾಮ ಪೂಜಾರಿ	೭೪	ಕುರುಬ	ಕೃಷಿ	ಆಸಂದಿ	ಕಡೂರು	ಚಿಕ್ಕಮಗಳೂರು
೪೫.	ಈಶ್ವರಪ್ಪ ಎತಿಮ್ಮ	೩೮	ಒಡೆಯರು	ಶಿಕ್ಷಕರು	ಮುಗಳಿಕಟ್ಟೆ	ಕಡೂರು	ಚಿಕ್ಕಮಗಳೂರು
೪೬.	ಶಂಕರಪ್ಪ ಪೂಜಾರಿ	೭೦	ಒಡೆಯರು	ಗುರುತನ	ಬೀರೂರು	ಕಡೂರು	ಚಿಕ್ಕಮಗಳೂರು

ಕ್ರ.ಸಂ.	ಹೆಸರು	ವಯಸ್ಸು	ಜಾತಿ	ವೃತ್ತಿ	ಗ್ರಾಮ	ತಾಲೂಕು	ಜಿಲ್ಲೆ
೪೭.	ಕೆಂಚಪ್ಪ ಪೂಜಾರಿ	೬೫	ಒಡೆಯರು	ಗುರುತನ	ಬೀರೂರು	ಕಡೂರು	ಚಿಕ್ಕಮಗಳೂರು
೪೮.	ಯೋಗೀಶ ದಳವಾಯಿ	೫೦	ಒಡೆಯರು	ಪೂಜಾರಿಕೆ	ಬೀರೂರು	ಕಡೂರು	ಚಿಕ್ಕಮಗಳೂರು
೪೯.	ಸಿದ್ಧಯ್ಯ ಸಿ. ಒಡೆಯರು	೬೦	ಒಡೆಯರು	ಗುರುತನ	ಬರಗೂರು	ಹೊಳೆನರಸಿಪುರ	ಹಾಸನ
೫೦.	ರೇವಣ್ಣಸಿದ್ಧಯ್ಯ ಒಡೆಯರು	೬೪	ಒಡೆಯರು	ಗುರುತನ	ಆದೀಹಳ್ಳಿ	ಅರಸಿಕೆರೆ	ಹಾಸನ
೫೧.	ಮಾಳಪ್ಪ ಪೂಜಾರಿ	೫೦	ಕುರುಬ	ಶಿಕ್ಷಕರು	ಸಂಪಿಗೆಹಳ್ಳಿ	ಬೆಂಗಳೂರು	ಬೆಂಗಳೂರು
೫೨.	ರವಿ ಪೂಜಾರಿ	೫೪	ಒಡೆಯರು	ಗುರುತನ	ಸಂಪಿಗೆಹಳ್ಳಿ	ಬೆಂಗಳೂರು	ಬೆಂಗಳೂರು
೫೩.	ರಾಮ ಹೆಗ್ಗಡೆ	೬೫	ಒಕ್ಕಲಿಗರು	ಕೃಷಿ	ಕೋಡಿದೊಡ್ಡಿ	ಮಂಡ್ಯ	ಮಂಡ್ಯ
೫೪.	ಮಧುಕುಮಾರ	೪೦	ಗೌಡರು	ಗುರುತನ	ಆಲೂರು	ಮದ್ದೂರು	ಮಂಡ್ಯ
೫೫.	ನಿಂಗಪ್ಪ ಸಿದ್ದಪ್ಪ ಒಡೆಯರು	೫೯	ಒಡೆಯರು	ಗುರುತನ	ಸಾತನೂರು	ಮಂಡ್ಯ	ಮಂಡ್ಯ
೫೬.	ಮಾಳಪ್ಪ ಅಪ್ಪಣ ಕಾವಳೆ	೭೧	ಒಡೆಯರು	ಗುರುತನ	ಕೆರೆಗೋಡ	ಮಂಡ್ಯ	ಮಂಡ್ಯ
೫೭.	ಬೀರಪ್ಪ ಮಾ. ಗವಡೆ	೬೪	ಕುರುಬ	ಗುರುತನ	ಉಮ್ಮಡಹಳ್ಳಿ	ಮಳವಳ್ಳಿ	ಮಂಡ್ಯ
೫೮.	ಪ್ರೇಮಕುಮಾರ	೬೭	ಕುರುಬ	ಯಜಮಾನಿಕೆ	ಕೋಡಿದೊಡ್ಡಿ	ಮಂಡ್ಯ	ಮಂಡ್ಯ

ಕ್ರ.ಸಂ.	ಹೆಸರು	ವಯಸ್ಸು	ಜಾತಿ	ವೃತ್ತಿ	ಗ್ರಾಮ	ತಾಲೂಕು	ಜಿಲ್ಲೆ
೫೯.	ರೇಣಕಪ್ಪ	೭೨	ಒಡೆಯರು	ಶಿಕ್ಷಕರು	ಹೊಸಕೆರೆ	ಮಂಡ್ಯ	ಮಂಡ್ಯ
೬೦.	ರಾಜಶೇಖರ	೬೨	ಕುರುಬ	ಗುರುತನ	ಹೊಸೂರುದೊಡ್ಡಿ	ಮಂಡ್ಯ	ಮಂಡ್ಯ
೬೧.	ರೇವಣ್ಣ ಪೂಜಾರಿ	೭೧	ಒಡೆಯರು	ಪೂಜಾರಿಕೆ	ಹೆಬ್ಬೂರು	ಸಾತನೂರು	ಮಂಡ್ಯ
೬೨.	ಲಿಂಗಪ್ಪ ಕೆ.	೫೫	ಒಕ್ಕಲಿಗರು	ಕೃಷಿ	ಶೆಟ್ಟಿಹಳ್ಳಿ	ಚನ್ನಪಟ್ಟಣ	ರಾಮನಗರ
೬೩.	ಮಂಜುನಾಥ ಸ್ವಾಮಿ ಕರೀಗೌಡರು	೭೩	ಕುರುಬ	ಗುರುತನ	ದೊಡ್ಡಕೊಪ್ಪಲು	ಕೆ.ಆರ್.ನಗರ	ಮೈಸೂರು
೬೪.	ರಾಜೇಗೌಡ	೬೨	ಕುರುಬ	ಪೂಜಾರಿಕೆ	ದೊಡ್ಡಕೊಪ್ಪಲು	ಕೆ.ಆರ್.ನಗರ	ಮೈಸೂರು
೬೫.	ರಮೇಶ ಕಡಕೋಳ	೬೩	ಒಡೆಯರು	ಗುರುತನ	ಕಡಕೊಳ	ಮೈಸೂರು	ಮೈಸೂರು
೬೬.	ಚನ್ನಬಸಪ್ಪ ಒಡೆಯರು	೩೫	ಒಡೆಯರು	ಶಿಕ್ಷಕರು	ಮೆಲುಕೋಟೆ	ಪಾಂಡವಪುರ	ಮೈಸೂರು
೬೭.	ಮಾಲಪ್ಪ ಮಾಳಪ್ಪ ಪೂಜಾರಿ	೪೮	ಕುರುಬ	ಪೂಜಾರಿಕೆ	ಕಡಕೊಳ	ನಂಜನಗೂಡು	ಮೈಸೂರು
೬೮.	ಬೀರಪ್ಪ ಗ. ಹೆಗಡೆ	೫೩	ಒಡೆಯರು	ಗುರುತನ	ಹೆಮ್ಮರಗ್ರಾಮ	ನಂಜನಗೂಡು	ಮೈಸೂರು

ಕರ್ನಾಟಕ ರಾಜ್ಯದಲ್ಲಿರುವ ಕೆಲವು ಬೀರಲಿಂಗೇಶ್ವರ ದೇವಸ್ಥಾನಗಳ ಸೂಚಿ

೧. ಶ್ರೀ ಬೀರಲಿಂಗೇಶ್ವರ(ಕರಿಸಿದ್ಧ) ದೇವಸ್ಥಾನ, ಅಲಕನೂರು ಗ್ರಾಮ, ರಾಯಬಾಗ ತಾ. ಬೆಳಗಾವಿ ಜಿಲ್ಲೆ.

೨. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಎಕ್ಸಂಭಾ ಗ್ರಾಮ, ಚಿಕ್ಕೋಡಿ ತಾ. ಬೆಳಗಾವಿ ಜಿಲ್ಲೆ.

೩. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ರಾಯಬಾಗ ಗ್ರಾಮ, ರಾಯಬಾಗ ತಾ. ಬೆಳಗಾವಿ ಜಿಲ್ಲೆ.

೪. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಹಾರೂಗೇರಿ ಗ್ರಾಮ, ರಾಯಬಾಗ ತಾ. ಬೆಳಗಾವಿ ಜಿಲ್ಲೆ.

೫. ಶ್ರೀ ಬೀರಲಿಂಗೇಶ್ವರ(ಹಾಲುಸಿದ್ದೇಶ್ವರ) ದೇವಸ್ಥಾನ, ಕಂಕಣವಾಡಿ, ರಾಯಬಾಗ ತಾ. ಬೆಳಗಾವಿ ಜಿಲ್ಲೆ.

೬. ಶ್ರೀ ಬೀರೇಶ್ವರ ದೇವಸ್ಥಾನ, ಚಿಕ್ಕೊಪ್ಪ ಎಸ್ ಗ್ರಾಮ, ರಾಮದುರ್ಗ ತಾ. ಬೆಳಗಾವಿ ಜಿಲ್ಲೆ.

೭. ಶ್ರೀ ಬೀರೇಶ್ವರ ದೇವಸ್ಥಾನ, ಎರೆಕೆತ್ತೂರು, ರಾಮದುರ್ಗ ತಾ. ಬೆಳಗಾವಿ ಜಿಲ್ಲೆ.

೮. ಶ್ರೀ ಬೀರೇಶ್ವರ ದೇವಸ್ಥಾನ, ಶಲವಾಳಿ, ರಾಮದುರ್ಗ ತಾ. ಬೆಳಗಾವಿ ಜಿಲ್ಲೆ.

೯. ಶ್ರೀ ಬೀರೇಶ್ವರ ದೇವಸ್ಥಾನ, ರಾಮದುರ್ಗ, ರಾಮದುರ್ಗ ತಾ. ಬೆಳಗಾವಿ ಜಿಲ್ಲೆ.

೧೦. ಶ್ರೀ ಬೀರಲಿಂಗೇಶ್ವರ ದೇವಸ್ಥಾನ ಹುಕ್ಕೇರಿ ತಾ. ಬೆಳಗಾವಿ ಜಿಲ್ಲೆ.

೧೧. ಶ್ರೀ ಕರಿಸಿದ್ದೇಶ್ವರ ದೇವಸ್ಥಾನ, ಕೊಣ್ಣೂರು, ಜಮಖಂಡಿ ತಾ. ಬಾಗಲಕೋಟೆ ಜಿಲ್ಲೆ.

೧೨. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ನಾಗಠಾಣ ಗ್ರಾಮ, ಇಂಡಿ ತಾ. ಬಿಜಾಪುರ ಜಿಲ್ಲೆ.

೧೩. ಶ್ರೀ ಬೀರೇಶ್ವರ ದೇವಸ್ಥಾನ, ಮಲಘಾಣ ಗ್ರಾಮ, ಬಸವನಬಾಗೇವಾಡಿ ತಾ. ಬಿಜಾಪುರ ಜಿಲ್ಲೆ.

೧೪. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಬಳ್ಳೊಳ್ಳಿ ಗ್ರಾಮ, ಇಂಡಿ ತಾ. ಬಿಜಾಪುರ ಜಿಲ್ಲೆ.

೧೫. ಶ್ರೀ ಬೀರೇಶ್ವರ ದೇವಸ್ಥಾನ, ಝುಳಕಿ ಗ್ರಾಮ, ಇಂಡಿ ತಾ. ಬಿಜಾಪುರ ಜಿಲ್ಲೆ.

೧೬. ಶ್ರೀ ಬೀರೇಶ್ವರ ದೇವಸ್ಥಾನ, ಹಿರೇರೂಗಿ, ಇಂಡಿ ತಾ. ಬಿಜಾಪುರ ಜಿಲ್ಲೆ.

೧೭. ಶ್ರೀ ಬೀರೇಶ್ವರ ದೇವಸ್ಥಾನ, ಸುತಗುಂಡಿ ಗ್ರಾಮ, ಬಿಜಾಪುರ ತಾ. ಬಿಜಾಪುರ ಜಿಲ್ಲೆ

೧೮. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಶಿರಾಡೋಣ, ಇಂಡಿ ತಾಲೂಕು, ಬಿಜಾಪುರ ಜಿಲ್ಲೆ.

೧೯. ಶ್ರೀ ಬೀರೇಶ್ವರ ದೇವಸ್ಥಾನ, ತಳಗಿಹಾಳ ಗ್ರಾಮ, ಬಾಗಲಕೋಟೆ ತಾಲೂಕು, ಜಿಲ್ಲೆ.

೨೦. ಶ್ರೀ ಬೀರೇಶ್ವರ ದೇವಸ್ಥಾನ, ಶಿರಗುಪ್ಪಿ ಗ್ರಾಮ, ಬಾಗಲಕೋಟೆ ತಾಲೂಕು, ಜಿಲ್ಲೆ

೨೧. ಶ್ರೀ ಬೀರೇಶ್ವರ ದೇವಸ್ಥಾನ, ಮುರನಾಳ ಗ್ರಾಮ, ಬಾಗಲಕೋಟೆ ಜಿಲ್ಲೆ.

೨೨. ಶ್ರೀ ಬೀರೇಶ್ವರ ದೇವಸ್ಥಾನ, ಹಿರೇ ಸಿಂಧೋಗಿ, ಕೊಪ್ಪಳ ಜಿಲ್ಲೆ.

೨೩. ಶ್ರೀ ಬೀರೇಶ್ವರ ದೇವಸ್ಥಾನ, ಯಲಬುರ್ಗ ತಾಲೂಕು, ಕೊಪ್ಪಳ ಜಿಲ್ಲೆ

೨೪. ಶ್ರೀ ಬೀರೇಶ್ವರ ದೇವಸ್ಥಾನ, ದಾವಣಗೆರೆ, ದಾವಣಗೆರೆ ಜಿಲ್ಲೆ.

೨೫. ಶ್ರೀ ಬೀರೇಶ್ವರ ದೇವಸ್ಥಾನ, ಆನೆಕೊಂಡ ಗ್ರಾಮ, ದಾವಣಗೆರೆ ಜಿಲ್ಲೆ.

೨೬. ಶ್ರೀ ಬೀರೇಶ್ವರ ದೇವಸ್ಥಾನ, ಬೆಣ್ಣೆಹಳ್ಳಿ ಗ್ರಾಮ, ಹರಪ್ಪನಹಳ್ಳಿ ತಾಲೂಕು, ದಾವಣಗೆರೆ ಜಿಲ್ಲೆ.

೨೭. ಶ್ರೀ ಬೀರೇಶ್ವರ ದೇವಸ್ಥಾನ, ಕೊಡದಗುಡ್ಡ, ಜಗಳೂರು ತಾಲೂಕು, ದಾವಣಗೆರೆ ಜಿಲ್ಲೆ.

೨೮. ಶ್ರೀ ಬೀರೇಶ್ವರ ದೇವಸ್ಥಾನ, ಹಲಕನಾಳ ಗ್ರಾಮ, ಚನ್ನಗಿರಿ ತಾಲೂಕು, ದಾವಣಗೆರೆ ಜಿಲ್ಲೆ.

೨೯. ಶ್ರೀ ಬೀರೇಶ್ವರ ದೇವಸ್ಥಾನ, ಚಿಗಟೇರಿ ಗ್ರಾಮ, ಹರಪ್ಪನಹಳ್ಳಿ ತಾಲೂಕು, ದಾವಣಗೆರೆ ಜಿಲ್ಲೆ.

೩೦. ಶ್ರೀ ಬೀರಲಿಂಗೇಶ್ವರ ಸ್ವಾಮಿ, ಹಿ.ಟಿ. ರಸ್ತೆ, ದಾವಣಗೆರೆ ಜಿಲ್ಲೆ.

೩೧. ಶ್ರೀ ಬೀರೇಶ್ವರ ದೇವಸ್ಥಾನ, ಕಾಗಿನೆಲೆ, ಹಾವೇರಿ ಜಿಲ್ಲೆ.

೩೨. ಶ್ರೀ ಬೀರೇಶ್ವರ ದೇವಸ್ಥಾನ, ಮೆಡ್ಲೇರಿ ಗ್ರಾಮ, ರಾಣಿಬೆನ್ನೂರು ತಾಲೂಕು, ಹಾವೇರಿ ಜಿಲ್ಲೆ.

೩೩. ಶ್ರೀ ಬೀರೇಶ್ವರ ದೇವಸ್ಥಾನ, ದೊಡ್ಡೇರಿ ಗ್ರಾಮ, ಹಾವೇರಿ ತಾಲೂಕು, ಹಾವೇರಿ ಜಿಲ್ಲೆ.

೩೩. ಶ್ರೀ ಬೀರೇಶ್ವರ ದೇವಸ್ಥಾನ, ಸಂಗೇನಹಳ್ಳಿ, ಗುಬ್ಬಿ ತಾಲೂಕು, ತುಮಕೂರು ಜಿಲ್ಲೆ.

೩೪. ಶ್ರೀ ಬೀರೇಶ್ವರ ದೇವಸ್ಥಾನ, ಕುಪ್ಪೂರು, ಶೆಟ್ಟಿಹಳ್ಳಿ, ತಿಪಟೂರು ತಾಲೂಕು, ತುಮಕೂರು ಜಿಲ್ಲೆ.

೩೫. ಶ್ರೀ ಬೀರೇಶ್ವರ ದೇವಸ್ಥಾನ, ಆಲೂರು ಗ್ರಾಮ, ತಿಪಟೂರು ತಾಲೂಕು, ತುಮಕೂರು ಜಿಲ್ಲೆ.

೩೬. ಶ್ರೀ ಬೀರೇಶ್ವರ ದೇವಸ್ಥಾನ, ಭಾನುವಳ್ಳಿ ಗ್ರಾಮ, ಹರಿಹರ ತಾ. ಮಲೇಬೆನ್ನೂರು ಹೋಬಳಿ.

೩೭. ಶ್ರೀ ಬೀರಲಿಂಗೇಶ್ವರ ದೇವಸ್ಥಾನ ಜಿಗಳಿ ಗ್ರಾಮ, ಹರಿಹರ ತಾ.

೩೮. ಶ್ರೀ ಬೀರಲಿಂಗೇಶ್ವರ ದೇವಾಲಯ, ರಾಣಿಬೆನ್ನೂರು, ಹಾವೇರಿ ಜಿಲ್ಲೆ.

೩೯. ಶ್ರೀ ಹೊರಬೀರಪ್ಪ ದೇವಾಲಯ ಹಿರೆಬಿದರಿ, ರಾಣಿಬೆನ್ನೂರು ತಾ. ಹಾವೇರಿ ಜಿಲ್ಲೆ.

೪೦. ಶ್ರೀ ಬೀರೇಶ್ವರ ದೇವಸ್ಥಾನ, ಹಿರೇಕೊಪ್ಪ ಗ್ರಾಮ, ನರಗುಂದ ತಾಲೂಕು, ಗದಗ ಜಿಲ್ಲೆ.

೪೧. ಶ್ರೀ ಬೀರೇಶ್ವರ ದೇವಸ್ಥಾನ, ಹದಲಿ ಗ್ರಾಮ, ನರಗುಂದ ತಾಲೂಕು, ಗದಗ ಜಿಲ್ಲೆ

೪೨. ಶ್ರೀ ಬೀರೇಶ್ವರ ದೇವಸ್ಥಾನ, ಕೊಣ್ಣೂರು ಗ್ರಾಮ, ನರಗುಂದ ತಾಲೂಕು, ಗದಗ ಜಿಲ್ಲೆ.

೪೩. ಶ್ರೀ ಬೀರೇಶ್ವರ ದೇವಸ್ಥಾನ, ಲಖಮಾಪುರ ಗ್ರಾಮ, ನರಗುಂದ ತಾಲೂಕು, ಗದಗ ಜಿಲ್ಲೆ.

೪೪. ಶ್ರೀ ಬೀರೇಶ್ವರ ದೇವಸ್ಥಾನ, ಚಿಕ್ಕ ನರಗುಂದ ಗ್ರಾಮ, ನರಗುಂದ ತಾಲೂಕು, ಗದಗ ಜಿಲ್ಲೆ.

೪೫. ಶ್ರೀ ಬೀರೇಶ್ವರ ದೇವಸ್ಥಾನ, ಬೆನಕೊಪ್ಪ ಗ್ರಾಮ, ನರಗುಂದ ತಾಲೂಕು, ಗದಗ ಜಿಲ್ಲೆ.

೪೬. ಶ್ರೀ ಬೀರೇಶ್ವರ ದೇವಸ್ಥಾನ, ಸಂಕವಾಳ ಗ್ರಾಮ, ನರಗುಂದ ತಾಲೂಕು, ಗದಗ ಜಿಲ್ಲೆ.

೪೭. ಶ್ರೀ ಬೀರೇಶ್ವರ ದೇವಸ್ಥಾನ, ದಂಡಾಪುರ ಗ್ರಾಮ, ನರಗುಂದ ತಾಲೂಕು, ಗದಗ ಜಿಲ್ಲೆ.

೪೮. ಶ್ರೀ ಬೀರೇಶ್ವರ ದೇವಸ್ಥಾನ, ಬನಹಟ್ಟಿ ಗ್ರಾಮ, ನರಗುಂದ ತಾಲೂಕು, ಗದಗ ಜಿಲ್ಲೆ.

೪೯. ಶ್ರೀ ಬೀರೇಶ್ವರ ದೇವಸ್ಥಾನ, ಶಿರೋಳ ಗ್ರಾಮ, ನರಗುಂದ ತಾಲೂಕು, ಗದಗ ಜಿಲ್ಲೆ.

೫೦. ಶ್ರೀ ಬೀರೇಶ್ವರ ದೇವಸ್ಥಾನ, ಡೋಣಿಗ್ರಾಮ, ಮುಂಡರಗಿ ತಾಲೂಕು, ಗದಗ ಜಿಲ್ಲೆ.

೫೧. ಶ್ರೀ ಬೀರೇಶ್ವರ ದೇವಸ್ಥಾನ, ಆಲೂರು ಗ್ರಾಮ, ಮದ್ದೂರು ತಾಲೂಕು, ಮಂಡ್ಯ ಜಿಲ್ಲೆ.

೫೨. ಶ್ರೀ ಚಿಕ್ಕಬೀರೇಶ್ವರ ಕೆಂಡಯ್ಯಸ್ವಾಮಿ ದೇವಸ್ಥಾನ, ಹೊಸಗೆರೆ, ಮದ್ದೂರು ತಾ, ಮಂಡ್ಯ ಜಿಲ್ಲೆ.

೫೩. ಶ್ರೀ ಬೀರೇಶ್ವರ ದೇವಸ್ಥಾನ, ಮರಳಿಗ ಗ್ರಾಮ, ಮದ್ದೂರು ತಾಲೂಕು, ಮಂಡ್ಯ ಜಿಲ್ಲೆ.

೫೪. ಶ್ರೀ ಬೀರೇಶ್ವರ ದೇವಸ್ಥಾನ, ಕೆರಗೋಡು ಗ್ರಾಮ, ಮಂಡ್ಯ ಜಿಲ್ಲೆ.

೫೫. ಶ್ರೀ ಬೀರೇಶ್ವರ ಹಳೆ ದೇವಸ್ಥಾನ, ಸಾತನೂರು ಗ್ರಾಮ, ಮಂಡ್ಯ ಜಿಲ್ಲೆ.

೫೬. ಶ್ರೀ ಬೀರೇಶ್ವರ ದೇವಸ್ಥಾನ, ಚೆಂದಳ್ಳಿ ಗ್ರಾಮ, ಮಳವಳ್ಳಿ ತಾಲೂಕು, ಮಂಡ್ಯ ಜಿಲ್ಲೆ.

೫೮. ಶ್ರೀ ಬೀರೇಶ್ವರ ದೇವಸ್ಥಾನ, ಉರ್ಮಾರು ಕಲಸಗೆರೆ, ಮಂಡ್ಯ ಜಿಲ್ಲೆ.

೫೯. ಶ್ರೀ ಬೀರೇಶ್ವರ ದೇವಸ್ಥಾನ, ಕಿರುಗಾವಲು ಗ್ರಾಮ, ಮಳವಳ್ಳಿ ತಾಲೂಕು, ಮಂಡ್ಯ ಜಿಲ್ಲೆ.

೬೦. ಶ್ರೀ ಬೀರೇಶ್ವರ ದೇವಸ್ಥಾನ, ಕೊತ್ತತ್ತಿ ಕೊಡಿಯಾಲ ಗ್ರಾಮ, ಶ್ರೀ ರಂಗಪಟ್ಟಣ ತಾಲೂಕು, ಮಂಡ್ಯ ಜಿಲ್ಲೆ.

೬೧. ಶ್ರೀ ಬೀರೇಶ್ವರ ದೇವಸ್ಥಾನ, ಬೆಟ್ಟದಹಳ್ಳಿ ಗ್ರಾಮ, ಪಾಂಡವಪುರ ತಾಲೂಕು, ಮಂಡ್ಯ ಜಿಲ್ಲೆ

೬೨. ಶ್ರೀ ಬೀರೇಶ್ವರ ದೇವಸ್ಥಾನ, ಮೇಲುಕೋಟೆ ಗ್ರಾಮ, ಮಂಡ್ಯ ಜಿಲ್ಲೆ.

೬೩. ಶ್ರೀ ಬೀರೇಶ್ವರ ದೇವಸ್ಥಾನ, ಅಲ್ಲಾಪಟ್ಟಣ ಗ್ರಾಮ, ಶ್ರೀರಂಗಪಟ್ಟಣ ತಾಲೂಕು, ಮಂಡ್ಯ ಜಿಲ್ಲೆ.

೬೫. ಶ್ರೀ ಬೀರೇಶ್ವರ ದೇವಸ್ಥಾನ, ಕೋಡಿದೊಡ್ಡಿ ಗ್ರಾಮ, ಮಂಡ್ಯ ಜಿಲ್ಲೆ.

೬೬. ಶ್ರೀ ಬೀರೇಶ್ವರ ದೇವಸ್ಥಾನ, ಉಮ್ಮಡಹಳ್ಳಿ ಗ್ರಾಮ, ಮಂಡ್ಯ ಜಿಲ್ಲೆ.

೬೭. ಶ್ರೀ ದೊಡ್ಡ ಶ್ರೀ ಬೀರೇಶ್ವರ ದೇವಸ್ಥಾನ, ಶೆಟ್ಟಿಹಳ್ಳಿ ಹೊಸರು ದೊಡ್ಡಿ, ಚನ್ನಪಟ್ಟಣ ತಾ. ರಾಮನಗರ ಜಿಲ್ಲೆ.

೬೮. ಶ್ರೀ ಬೀರೇಶ್ವರ ದೇವಸ್ಥಾನ, ಅಣ್ಣೂರು, ಚನ್ನರಾಯಪಟ್ಟಣ ತಾಲೂಕು, ರಾಮನಗರ ಜಿಲ್ಲೆ.

೬೯. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಮಂಚನಬೆಲೆ, ರಾಮನಗರ ಜಿಲ್ಲೆ.

೭೦. ಶ್ರೀ ಕಾಳಿ ಬೀರೇಶ್ವರ ದೇವಸ್ಥಾನ, ತಾಂಡವಪುರ, ನಂಜನಗೂಡು ತಾಲೂಕು, ಮೈಸೂರು ಜಿಲ್ಲೆ.

೭೧. ಶ್ರೀ ಕಡಕೊಳದ ಬೀರಪ್ಪ, ನಂಜನಗೂಡು ತಾಲೂಕು, ಮೈಸೂರು ಜಿಲ್ಲೆ.

೭೨. ಶ್ರೀ ಕೋಟೆ ಬೀರಪ್ಪ, ಕೆ.ಆರ್. ನಗರ ತಾಲೂಕು, ಮೈಸೂರು ಜಿಲ್ಲೆ.

೭೩. ಶ್ರೀ ಅಲ್ಯದ ಬೀರಪ್ಪ, ಕೆ.ಆರ್. ನಗರ ತಾಲೂಕು, ಮೈಸೂರು ಜಿಲ್ಲೆ.

೭೪. ಶ್ರೀ ಬೀರೇಶ್ವರ ದೇವಸ್ಥಾನ, ದೊಡ್ಡಕೊಪ್ಪಲು ಗ್ರಾಮ, ಕೆ.ಆರ್. ನಗರ ತಾ, ಮೈಸೂರು ಜಿಲ್ಲೆ.

೭೫. ಶ್ರೀ ಬೀರೇಶ್ವರ ದೇವಸ್ಥಾನ, ಹೆಮ್ಮರ ಗ್ರಾಮ, ನಂಜನಗೂಡು ತಾಲೂಕು, ಮೈಸೂರು ಜಿಲ್ಲೆ.

೭೬. ಸಂಪಿಗೆಹಳ್ಳಿ ಶ್ರೀ ಬೀರೇಶ್ವರ, ಸಂಪಗಿ ರಾಮನಗರ, ಬೆಂಗಳೂರು ಜಿಲ್ಲೆ.

೭೭. ಶ್ರೀ ಬೀರೇಶ್ವರ ದೇವಸ್ಥಾನ, ಬೆನಸನ್ ಟೌನ್, ಬೆಂಗಳೂರು ನಗರ, ಬೆಂಗಳೂರು ಜಿಲ್ಲೆ.

೭೮. ಸಂಪಿಗೆ ಬೀರೇಶ್ವರ, ಮಲ್ಯ ಅಸ್ಪತ್ರೆ ಹತ್ತಿರ, ಬೆಂಗಳೂರು ಜಿಲ್ಲೆ.

೭೯. ಬಾಪುಜಿನಗರ ಬೀರೇಶ್ವರ, ಬೆಂಗಳೂರು ನಗರ

೮೦. ಶ್ರೀ ಬೀರಲಿಂಗೇಶ್ವರ ಸ್ವಾಮಿ, ಮಾಗಡಿ, ಬೆಂಗಳೂರು ಜಿಲ್ಲೆ.

೮೧. ಶ್ರೀ ಮುಗಳೂರು ಬೀರಲಿಂಗೇಶ್ವರ ಸ್ವಾಮಿ, ಬೊಮ್ಮಸಂದ್ರ, ಬೆಂಗಳೂರು

೮೨. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಉತ್ತರ ಕರ್ನಾಟಕ, ರಾಯಚೂರು ಜಿಲ್ಲೆ.

೮೩. ಶ್ರೀ ಬೀರಲಿಂಗೇಶ್ವರ ಸ್ವಾಮಿ, ಕಸಗಲ್ಲು ಗ್ರಾಮ, ಹುಬ್ಬಳ್ಳಿ, ಸುಲ್ತಾನಪುರ ರಸ್ತೆ, ಹುಬ್ಬಳ್ಳಿ ತಾ. ಧಾರವಾಡ ಜಿಲ್ಲೆ.

೮೪. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಮಣದನಹಳ್ಳಿ ಹೊಳೆ ನರಸಿಂಹಪುರ ತಾಲೂಕು, ಹಾಸನ ಜಿಲ್ಲೆ.

೮೫. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಇನ್ನೊಂದು ಪಂಗಡಕ್ಕೆ ಸೇರಿದ ಮಣಗನಹಳ್ಳಿ ಹೊಳೆನರಸಿಂಹಪುರ ತಾಲೂಕು, ಹಾಸನ ಜಿಲ್ಲೆ.

೮೬. ಶ್ರೀ ಬೀರಲಿಂಗೇಶ್ವರ ದೇವಸ್ಥಾನ ಪೇಟೆ, ಅರಕಲಗೂಡು ತಾಲೂಕು, ಹಾಸನ ಜಿಲ್ಲೆ.

೮೭. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಸಾಲಗೊಪ್ಪಲು ಗ್ರಾಮ, ಅರಕಲಗೂಡು ತಾ, ಹಾಸನ ಜಿಲ್ಲೆ.

೮೮. ಶ್ರೀ ಬೀರಲಿಂಗೇಶ್ವರ ಗದ್ದಿಗೆ ಹೆಂಟಿಗೆರೆ ಕೊಪ್ಪಲು, ಅಕಲಗೊಡು ತಾಲೂಕು, ಹಾಸನ ಜಿಲ್ಲೆ.

೮೯. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಎಂ. ಹೊನ್ನೇನಹಳ್ಳಿ, ಚನ್ನರಾಯಪಟ್ಟಣ ತಾ, ಹಾಸನ ಜಿಲ್ಲೆ

೯೦. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ನೇರಳೆ ಮಲ್ಲಪ್ಪನಹಳ್ಳಿ, ಹೊಳೆನರಸೀರಪುರ ತಾ, ಹಾಸನ ಜಿಲ್ಲೆ.

೯೧. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಜಾವಗಲ್, ಅರಸಿಕೇರೆ ತಾಲೂಕು, ಹಾಸನ ಜಿಲ್ಲೆ.

೯೨. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ದೊಡ್ಡಕೊಡಿಹಳ್ಳಿ, ಬೇಲೂರು ತಾಲೂಕು, ಹಾಸನ ಜಿಲ್ಲೆ.

೯೩. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಸಾಣೇನಹಳ್ಳಿ, ಬೇಲೂರು, ಹಾಸನ ಜಿಲ್ಲೆ.

೯೪. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಚಿಲ್ಲನಾಯಕನಹಳ್ಳಿ, ಬೇಲೂರು ತಾಲೂಕು, ಹಾಸನ ಜಿಲ್ಲೆ.

೯೫. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಶಿವೇನಹಳ್ಳಿ, ಬೇಲೂರು ತಾಲೂಕು, ಹಾಸನ ಜಿಲ್ಲೆ.

೯೬. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಗೋಣಿಸೋಮನಹಳ್ಳಿ, ಬೇಲೂರು ತಾಲೂಕು, ಹಾಸನ ಜಿಲ್ಲೆ.

೯೭. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಶಿವಾಲದಹಳ್ಳಿ, ಬೇಲೂರು ತಾಲೂಕು, ಹಾಸನ ಜಿಲ್ಲೆ.

೯೮. ಶ್ರೀ ಕಪ್ಪೂರು ಬೀರಲಿಂಗೇಶ್ವರ ಸ್ವಾಮಿ, ಶೆಟ್ಟಿಹಳ್ಳಿ, ತಿಪಟೂರು ತಾಲೂಕು, ಹಾಸನ ಜಿಲ್ಲೆ.

೯೯. ಶ್ರೀ ಕಪ್ಪೂರು ಬೀರಲಿಂಗೇಶ್ವರ ಸ್ವಾಮಿ, ರಾಮಶೆಟ್ಟಿಹಳ್ಳಿ, ತಿಪಟೂರು ತಾಲೂಕು, ಹಾಸನ ಜಿಲ್ಲೆ.

೧೦೦. ಶ್ರೀ ಬೀರಲಿಂಗೇಶ್ವರ ಕುರುವಂಕ, ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ

೧೦೦. ಶ್ರೀ ಬೀರಲಿಂಗೇಶ್ವರ ಸ್ವಾಮಿ, ಕೊಡಂಬಳ್ಳಿ ಗ್ರಾಮ, ಚನ್ನರಾಯಪಟ್ಟಣ ತಾ, ಹಾಸನ ಜಿಲ್ಲೆ.

೧೦೧. ಶ್ರೀ ಬೀರಲಿಂಗೇಶ್ವರ ಸ್ವಾಮಿ, ಚಿಕ್ಕನಹಳ್ಳಿ, ಹೊಳೆನರಸೀಪುರ ತಾಲೂಕು, ಹಾಸನ ಜಿಲ್ಲೆ.

೧೦೨. ಶ್ರೀ ಬೀರಲಿಂಗೇಶ್ವರ ಸ್ವಾಮಿ, ಹಾರೋಗೌಡನಹಳ್ಳಿ, ಚನ್ನರಾಯಪಟ್ಟಣ ತಾ, ಹಾಸನ ಜಿಲ್ಲೆ.

೧೦೩. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಮಹದೇವರಹಳ್ಳಿ ಗಂಡಸಿ ಹೋಬಳಿ ಅರಸಿಕೆರೆ ತಾಲೂಕು, ಹಾಸನ ಜಿಲ್ಲೆ.

೧೦೪. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಪೂತನಹಳ್ಳಿ ಗ್ರಾಮ, ಚನ್ನರಾಯಪಟ್ಟಣ ತಾ, ಹಾಸನ ಜಿಲ್ಲೆ.

೧೦೫. ಶ್ರೀ ಬೀರಲಿಂಗೇಶ್ವರ ಭಕ್ತೇಶ್ವರ ದೇವಸ್ಥಾನ, ಹರಟೆ ಗ್ರಾಮ, ನರಸಾಪುರ ತಾ, ಕೋಲಾರ ಜಿಲ್ಲೆ.

೧೦೬. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಕುರುಬರ ಪೇಟೆ, ಕೊಲ್ಲಾರ ಜಿಲ್ಲೆ.

೧೦೭. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಉತ್ತನೂರು ಗ್ರಾಮ, ಮುಳಬಾಗಿಲು ತಾ, ಕೋಲಾರ ಜಿಲ್ಲೆ.

೧೦೮. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಬೆಳ್ಳೂರು ಗ್ರಾಮ, ವೇಮಗಲ್ ತಾಲೂಕು, ಕೋಲಾರ ಜಿಲ್ಲೆ.

೧೦೮. ಶ್ರೀ ಹಳ್ಳದ ಜಂಗಮ ಬೀರಲಿಂಗೇಶ್ವರ, ತಾಳಿಕೋಟೆ, ಹೊಳಲ್ಕೆರೆ ತಾ, ಚಿತ್ರದುರ್ಗ ಜಿಲ್ಲೆ.

೧೦೯. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಬಾಗೂರು, ಹೊಸದುರ್ಗ ತಾಲೂಕು, ಚಿತ್ರದುರ್ಗ ಜಿಲ್ಲೆ.

೧೧೦. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಶ್ರೀರಾಮಪುರ, ಹೊಸದುರ್ಗ ತಾಲೂಕು, ಚಿತ್ರದುರ್ಗ ಜಿಲ್ಲೆ.

೧೧೧. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಗರ್ಜಿ ಗ್ರಾಮ, ಹಿರೇನಲ್ಲೂರು ತಾ, ಚಿತ್ರದುರ್ಗ ಜಿಲ್ಲೆ.

೧೧೨. ಶ್ರೀ ದೇವಿಗೆರೆ ಬೀರಲಿಂಗೇಶ್ವರ ಸೂಚಿಗಲ್, ಚಿತ್ರದುರ್ಗ ಜಿಲ್ಲೆ

೧೧೩. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಜಕ್ಕನಗೆರೆ, ಶಿವಮೊಗ್ಗ ಜಿಲ್ಲೆ.

೧೧೪. ಶ್ರೀ ಏಳೂರು ಬೀರಲಿಂಗೇಶ್ವರ, ಕಡೂರು ತಾಲೂಕು, ಚಿಕ್ಕಮಗಳೂರು ಜಿಲ್ಲೆ.

೧೧೫. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ಮುಗಳಿಗಟ್ಟೆ ಗ್ರಾಮ, ಕಡೂರು ತಾ, ಚಿಕ್ಕಮಗಳೂರು ಜಿಲ್ಲೆ.

೧೧೬. ಶ್ರೀ ಬೀರೇಶ್ವರ ದೇವಸ್ಥಾನ, ಮುಗಳಿಗಟ್ಟೆ ಗ್ರಾಮ, ಕಡೂರು ತಾ, ಚಿಕ್ಕಮಗಳೂರು ಜಿಲ್ಲೆ.

೧೧೭. ಶ್ರೀ ಬೀರಲಿಂಗೇಶ್ವರ ದೇವಸ್ಥಾನ, ವಿಠೋಬ, ಕಡೂರು ತಾಲೂಕು, ಚಿಕ್ಕಮಗಳೂರು ಜಿಲ್ಲೆ.

೧೧೮. ಶ್ರೀ ಬೆಂಕಿ ಬೀರಲಿಂಗೇಶ್ವರ ದೇವಸ್ಥಾನ, ಕಡೂರು, ಕಡೂರು ತಾಲೂಕು, ಚಿಕ್ಕಮಗಳೂರು ಜಿಲ್ಲೆ.

೧೧೯. ಗಡಿಹಳ್ಳಿ ಬೀರದೇವರು, ತರೀಕೆರೆ ತಾಲೂಕು, ಚಿಕ್ಕಮಗಳೂರು

೧೨೦. ಹೊಸುರು ಬೀರದೇವರು, ತರೀಕೆರೆ ತಾಲೂಕು, ಚಿಕ್ಕಮಗಳೂರು

೧೨೧. ಸೊಲ್ಲಾಪುರ ಬೀರದೇವರು, ತರೀಕೆರೆ ತಾಲೂಕು, ಚಿಕ್ಕಮಗಳೂರು

೧೨೨. ಮುಗಳಿ ಬೀರದೇವರು, ತರೀಕೆರೆ ತಾಲೂಕು, ಚಿಕ್ಕಮಗಳೂರು

೧೨೩. ಬೀರಹಳ್ಳಿ ಬೀರದೇವರು, ತರೀಕೆರೆ ತಾಲೂಕು, ಶಿವನಿ ಹೊಬಳಿ, ಚಿಕ್ಕಮಗಳೂರು ಜಿಲ್ಲೆ.

೧೨೪. ಅನುವನಹಳ್ಳಿ ಬೀರದೇವರು, ತರೀಕೆರೆ ತಾಲೂಕು, ಚಿಕ್ಕಮಗಳೂರು ಜಿಲ್ಲೆ.

೧೨೫. ಗೋಸಿಕೆರೆ ಬೀರದೇವರು, ತರೀಕೆರೆ ತಾಲೂಕು, ಚಿಕ್ಕಮಗಳೂರು ಜಿಲ್ಲೆ.

೧೨೬. ಅಜ್ಜಂಪುರ ಬೀರದೇವರು, ತರೀಕೆರೆ ತಾಲೂಕು, ಚಿಕ್ಕಮಗಳೂರು ಜಿಲ್ಲೆ.

೧೨೭. ಚಳ್ಳಕೆರೆ ಬೀರಲಿಂಗೇಶ್ವರ, ತರೀಕೆರೆ ತಾಲೂಕು, ಚಿಕ್ಕಮಗಳೂರು ಜಿಲ್ಲೆ.

೧೨೮. ಅಸಂದಿ ಬೀರಲಿಂಗೇಶ್ವರ, ತರೀಕೆರೆ ತಾಲೂಕು, ಚಿಕ್ಕಮಗಳೂರು ಜಿಲ್ಲೆ.

೧೨೯. ಹಿರೇನಲ್ಲೂರಿನ ಬೀರದೇವರು, ತರೀಕೆರೆ ತಾಲೂಕು, ಚಿಕ್ಕಮಗಳೂರು ಜಿಲ್ಲೆ.

೧೩೦. ಶಿವನಿ ಬೀರದೇವರು, ತರೀಕೆರೆ ತಾಲೂಕು, ಚಿಕ್ಕಮಗಳೂರು ಜಿಲ್ಲೆ.

೧೩೧. ಮತಿಘಟ್ಟ ಬೀರಲಿಂಗೇಶ್ವರ, ಕಡೂರು ತಾಲೂಕು, ಚಿಕ್ಕಮಗಳೂರು ಜಿಲ್ಲೆ

೧೩೨. ಹಿರೇನಲ್ಲೂರು ಗುಡಿಕಟ್ಟು, ಕಡೂರು ತಾಲೂಕು, ಚಿಕ್ಕಮಗಳೂರು ಜಿಲ್ಲೆ.

೧೩೩. ಅಂಬಳೆ ಬೀರಲಿಂಗೇಶ್ವರ, ಚಿಕ್ಕಮಗಳೂರು ಜಿಲ್ಲೆ.

೧೩೪. ಆಸಂದಿ ಬೀರದೇವರು, ಕಡೂರು ತಾಲೂಕು, ಚಿಕ್ಕಮಗಳೂರು ಜಿಲ್ಲೆ.

೧೩೫. ಮುಗಳಿಕಟ್ಟೆ ಬೀರಲಿಂಗೇಶ್ವರ, ಕಡೂರು ತಾಲೂಕು, ಚಿಕ್ಕಮಗಳೂರು ಜಿಲ್ಲೆ.

೧೩೬. ಚೌಳಹಿರಿಯೂರು ಬೀರದೇವರು, ಕಡೂರು ತಾಲೂಕು, ಚಿಕ್ಕಮಗಳೂರು ಜಿಲ್ಲೆ

೧೩೭. ಚಿಕ್ಕಬಾಸೋರು ಬೀರದೇವರು, ಕಡೂರು ತಾಲೂಕು, ಚಿಕ್ಕಮಗಳೂರು ಜಿಲ್ಲೆ.

೪. ಬೀರಪ್ಪನ ಶಾಸನದ ಪಠ್ಯಗಳು

I. ಶಾಸನ : ಸಂಖ್ಯೆ ೫೯ (V ಅಕೆ ೭೯) ಹಾಸನ ಜಿಲ್ಲೆ

ಊರು : ಕುರುವಂಕ

ಸ್ಥಳ : (ಶಾಸನದ) ಈಶ್ವರ ದೇವಸ್ಥಾನದೊಳಗೆ ರಂಗಮಂಟಪದಲ್ಲಿ ನೆಟ್ಟಿರುವ ಕಲ್ಲು

ಕಾಲ : ಕ್ರಿ.ಶ. ೧೧೮೬

ವಂಶ : ಹೊಯ್ಸಳ ೨ನೇ ವೀರಬಲ್ಲಾಳ

೧. ನಮಸ್ತುಂಗಶಿರಚುಂಬಿಚಂದ್ರ ಚಾಮರಚಾರವೇ ತ್ರೈಲೋಕ್ಯನಗರಾರಂಭ ಮೂಲ

೨. ಸ್ತಂಭಾಯ ಶಂಭವೇ|| ಸ್ವಸ್ತಿ ಶ್ರೀ ಯಿಪ್ಪುತ್ತಮವಾಸ್ತು ಜಯಶ್ರೀಯ ವಿಲಶಿ ತಾವಾಸಂ

೩. ಲೋಕಸ್ತು ತ್ಯೆಯಶೋವನಿತೆಯ ವಿಸ್ತಾರ ಸ್ಥಾವನೆವೆಸವ ಹೊಯ್ಸಣವಂಶಾಂ||[2] ಆಹೊ

೪. ಯ್ಸಳವಂಶದೊಳುದಯ್ಸಿದ ವಿನಯಾದಿತ್ಯ ಪುತ್ರನಪ್ಪೆಜೆಯಂಗನ್ರಿಪಂ ಗವೆಲಸದೇವಿಗಂ ಪುಟ್ಟಿದ ವಿಷ್ಣು ನ್ರಿಪನಾ ವಿ

೫. ಷ್ಣು ನ್ರಿಪನ ವಿಕ್ರಮಮೆಂತೆಂದಡೆ|| ಹರಿಸಂದೋಹವಿರಾಜಿತಂ ವಿವಿಧಪದ್ಮಾ ಲಂಕೃತಂ ಹಂಸಸಂಚರಣ

೬. ಪ್ರೌಉಡ ಉದಾತ್ತ ವಿಕ್ರಮಗುಣೋದ್ಯತ್ಪುಂಡರೀಕಾಂಕಂ ಸೌಂದರವಾಗಿರ್ಪುದಜೆಂದೆ ಪದ್ಮವನದಂದಂ ಭಾವಿಸಲು

೭. ವಿಷ್ಣು ಭೂಪರಿರ್ಪ್ಪಾಪುರಮುಂ ಸುರೇಂದ್ರಪುರಮುಂ ವಿದ್ವಿಟ್ಟು ರಾನೀಕಮುಂ|| ಇನತೇಜನಿಂದಿರಾವರ ನಿನಜಸಮೋದಾ

೮. ರನಿಂದ್ರ ನಿಭವಿಭವನಿಳಾಜನ ವಿನುತ ನಿದ್ಧ ಸತೀರ್ತ್ರೀನಿಧಾನಂ ವಿಷ್ಣು ಭೂಪನಂಗಜರೂಪಂ||[2] ಆ ವಿಷ್ಣು ಭೂಪನೊಳ್ಮಾದೇ

೯. ವಿತ್ವಂ ಬೆತ್ತು ಪೆತ್ತಳುತ್ತಮ ಲಕ್ಷ್ಮಾದೇವಿ ನರಸಿಂಹದೇವೋರ್ವೀವರನನನೂನ ಪುಣ್ಯವತಿ ವಸುಮತಿ ಯೊಳು||[2]

೧೦. ಮದದದರಾತಿ ಭೂಮಿಪರ ದನ್ತಿಯ ದನ್ತಮನೊತ್ತಿ ಕಿಜ್ತೆ ತದುಬಿದುವೆನೆ ಪೊಯ್ಯ ಪೋಳ್ಪ ಪೊಜಿ ಪೊಣ್ಮೆಸ

೧೧. ರಕ್ತಕಮೌಕ್ತಿಕಂಗಳಾಪದದೊಳವೆಂ ಜಯಾಂಗನೆಗೆ ಹಾರಮನೊಪ್ಪಿರೆ ಮಾಪ್ಪುನೆಂದೊಡಾರ್ಕ್ಕಿದನ ದೊಳಾಂತಿ

೧೨. ದಿಚ್ಚ್ಕಿವೆದಟಿರ್ಜಗದೊಳು ನರಸಿಂಹಭೂಪನೆಂ||[2] ಆ ನರಸಿಂಹ ನ್ರಿಪಂಗಂ ಮಾನಿನಿ ಮಾದೇವಿ ಸಾದ್ವಿಯಚಲೆಗಂ ಲಕ್ಷ್ಮೀ

೧೩. ನಿಳಯನಾಗಿ ಬಲ್ಲಾಳನ್ರಿಪಾಳಂ ಪುಟ್ಟಿದಂ ಧರಾಧರಧೈರ್ಯ್ಯಂ|| ಫಣಿನಾಥಂ ಪಾಟಿ ಭೋಗಕ್ಕ ಮರಪತಿ

೧೪. ಸಮಂ ರೂಪಸಂಪತ್ತಿಗ ಮಿಜೇಕ್ಷಣನುವ್ವ ದ್ವಿಕ್ರಮಾಡಂ ಬರಕೆ ದೊರೆ ಮಹೇಶಂ ನಿಜಾಜ್ಞಾವಿಶೇಶಕ್ಕೆಣೆ ಧೀ

೧೫. ರೋದಾತ್ತ ಚಿತ್ತಕ್ಕಮಮ ಸರಿ ದಸಾಸ್ಯಾರಿ ದಾನಕ್ಕೆ ಮತ್ತಂ ತೋಣೆಕರ್ಣಂ ತಾನೆನಲ್ಕೀ ವಸುದೆಯೊಳೆಸೆದಂ ವೀ

೧೬. ರಬಲ್ಲಾಳ ಭೂಪಂ|| ಅನುಪಮರಣ ನಿಸ್ತಾರಕನನೂನಸತ್ವಾನ್ವಿತಂ ವಿಚಾರಕ್ಷ ಮನೆಂಬ ನೆಗಜ್ತಿಯಿಂದೆ ಬಲ್ಲಾ

೧೭. ಳನ್ರಿಪಾಳಂ ಕಾರ್ತ್ತಿಕೇಯನನ್ತೋಪಿರ್ಪ್ಪಂ|| ಇಳೆ ಶುದ್ಧಸ್ಫಟೋಕೋಪಳಸ್ಥಗಿತವಾಶಾಮಂಡಳಂ ದಿಗ್ವಧೂಕುಳವೇಣೀ

೧೮. ಕುಸ್ತೋಪಹಾರರಚಿತಂ ನಾಕಂ ನಿಳಿಂಪೇಶನಿರ್ಮ್ಮಳ ಶುಂಡಾಳರದ ಪ್ರಭಾವಳಿತಂ ತಾರಾಪಥಂ ತಾರಕೋಜ್ಜ್ವಳಿ

೧೯. ತಂ[ತಾ] ನೆನೆ ಕೊರ್ಬ್ಬಿ ಪರ್ಬ್ಬಿತು ಜಸಂ ಬಲ್ಲಾಳ ಭೂಪಾಳನ|| ಸ್ವಸ್ತಿ ಸಮಧಿಗತಪಂಚಮಹಾಸಬ್ದ ಮಹಾಮಂ

೨೦. ಡಳೇಸ್ವರಂ ದ್ವಾರಾವತೀಪುರರಾಧೀಸ್ವರಂ ಯಾದವಕುಳಾಂಬರದ್ಯುಮಣಿ ಸಮ್ಯಕ್ತ ಚೂಡಾಮಣಿ ವಿನ

೨೧. ಮದಹಿತಮಹಿಪಚೂಡಾಮಣಿ ನೂತ್ನರತ್ನರಸ್ಮಿಜಾಳ ಜಟಿಳಿತನ ಖಕಿರಣಂ ಚತುಸ್ಸಮಯಸಮುದ್ಧರ

೨೨. ಣಂ ಕದನದೊಳದಿರದಿದಿರ್ಚ್ಚಿದದಟರನದಟಲೆವ ಪುರಂದರ ನಂದನಂ ಸಕಲ ಜನಮನೋನಂದನಂ ತಳಕಾಡು

೨೩. ಕೊಂಗುನಂಗಲಿಗಂ [ಗ] ಬಾಡಿನೊಣಂ ಬಬಾಡಿ ಬನವಸೆಹಲಸಿಯಗೆಲಿಗೆ ಜೆಹಾನುಂಗಲುಚ್ಚಂಗಿಗೊಂಡ ಭುಜಬಳಬೀ(ರ) ಗಂಗನ

೨೪. ಸಹಯ ಸೌರ್ಯ್ಯ ಸನಿವಾರಸಿಧಿ ಗಿರಿದುರ್ಗ್ಗಮಲ್ಲ ಚಲದಂಕರಾಮ ನಿಸಂಕಪ್ರತಾಪ ಹೊಯ್ಸಳ ವೀರಬಲ್ಲಾ

೨೫. ಳದೇವದೊರ್ೀರ ಸಮುದ್ರದ ನೆಲವೀಡಿನೊಳ್ಸು ಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ|| ತದೀಯ ಪಾದಪದ್ಮೋಪ

೨೬. ಜೀವಿಗಳಪ್ಪ ಮಹದೇವರಸನು ಕಳು[ವ] ಮಲ್ಲೆಯನ ನಾಲ್ವತು ಮಾನಿಸ ಎಕ್ಕಟಗರ ಪೆಂರ್ಮ್ಮ

೨೭. ಯಂತೆನೆ|| ಎಸುವರಾದಿತ್ಯನೆಂಬೀಪೆಸರಿಂ. ಜಸಮಸೆಯ ನೆಗಳ್ಪ ಕಣಂಬಿನವಂ ವಿಸಸನಧೀರಂ ಹೊ

೨೮. ಯ್ಸಳವಸುಧೀಶನ ನಚ್ಚಿನಾಳು ಮಹದೇವರಸಂ|| ಪತಿಯುಂ ದರೆಯುಂ ಗುಣಮಂ ಸತತಂ ವರ್ಣ್ನಿಪ್ಪ

೨೯. ತೆಱದೆ ನಡವೀಪರಾಗಲ್ ಭೃತೆಯಂಗರಕ್ಕ ವಡೆಧಿಪತಿ ಯಂನತ ಕಳುವ ಮಲ್ಲೆಯಂಗದು ಸಾಜಂ||

೩೦. ಧುರದೊಳಿದಿರ್ಚ್ಚಿದ ಪಗೆವರನುರವಣೆಯಿಂಗೈಲ್ವತಕ್ಕುಳಿಪುಗಳ್ನಟ ಳೊಂತ್ನೆರಮಂ ನೆಗಳಚಿತಪತಿ

೩೧. ಯಂಗರಕ್ಕೆಯುಂ ಮಾಳ್ಪುದಂಗರಕ್ಕೆಗೆ ನಿಜಂ|| ಬರವಣೆಸಿ ನೂಂಕಿ ಹೊಯ್ಸಳ ಧರಣೀಶಂ ಮೆಚ್ಚೆಪಗೆ

೩೨. ವರಂ ಗೆಲ್ವದಟೀ ಧರೆಯೊಳ್ಸಲೆ ಯಕ್ಕಟಗಂಗರಕ್ಷಕರ್ನ್ನಾಲ್ವದಿಂಬರೊಳ ಗೋಭಿಸುಗುಂ॥ ವಸುಧಾಮಂ

೩೩. ಡೆನವಾಗಿರೆ ವಿಸರುಹ ಭವನೊಲ್ದು ತಾನೆ ಮಾಡಿದನೆನಲೀ ವಸುಮತಿಯೊಳ್ಕು ಱುವಕ್ಕೆಮದೇನ

೩೪. ಸದಳದಿಂದೆಸೆವುಲಿಪ್ಪ್ರುದೇಂ ಕೌತುಕವೋ॥ ನಿಮ್ಮ್ರಳರೀ ಕುಱುವಕ್ಕಕ್ಕೊಮ್ಮ್ರ ಯುವನ್ವಯದ ಮೂಲಿಗರೆ

೩೫. ಸಾವಂತಂ ಬಮ್ಮ್ರಯನಾಯಕನುಂ ಗುಣಕಾಮ್ಮ್ರಂ ಸಾವನ್ತ ಮಸಣಯನುವುಸದಿಪ್ಪ್ರರ॥ ಅಕುಱು

೩೬. ವಕ್ಕನ ಗೌಂಡಂ ಲೋಕೋತ್ತಮನಮಳಕೀರ್ತ್ತಿಯುತನಧಿಕ ಗುಣಕ್ಕಾಕರಮನೆ ನೆಗಳ್ದಂ ಮಹಿಮಾಕರನೆ

೩೭. ಜೆಯಂಮ ಗೌಂಡನುರ್ವ್ವೀತಳದೊಳ॥ ಸ್ವಸ್ತಿ ಸಮಸ್ತ ಗುಣಸಂಪನರಪ್ಪ ಕುಱುವಕ್ಕದ ಸಮಸ್ತ ಪ್ರಜೆ

೩೮. ಗಳಿಂ॥ ವಿನಯನಿಧಾನಂ ಧರ್ಮ್ಮಕ್ಕನುಕೂಲಂ ಸತ್ಯ ವಾಕ್ಯನಮಳ ಚರಿತ್ರಂ ಏನುತಂ ಮುಡ್ಡರಸ ಸಜ್ಜನ ನೀಕು

೩೯. ಱುವಕ್ಕದೊಂದು ಗೌಂಡಿಕೆ ವಡೆದಂ॥ ಇನ್ತೀ ಸಮಸ್ತ ಪ್ರಜೆಗಳ ತಾಯಿತಂದೆಯಾಗಿರ್ಪ್ಪ ಸೇನಭೂವ ಬಿ

೪೦. ಟ್ಟಯಣ್ಣ[ನ] ನ್ವಯವೆಂತನೆ॥ ಜನನಿಯ ಮಾಚಲೆ ಯಾಡೆಯಾಂಡನೆ ಜನಕಂ ಕುಮರನನು ಜನವರಜೆ ಪೋಚ

೪೧. ವ್ವೆನುತಾಂಗಿ ಹರಿಯಣಂ ಮೈದುನನೆನೆ ಬಿಟ್ಟಯಣಂ ಧನ್ಯನೀ ವಸುಮತಿಯೊಳ॥ ಪಿರಿದೆನಿಪ ಭಕ್ತಿ

೪೨. ಯಿಂದಂ ವರಗುಣೆ ಮಲ್ಲವೆಯ ವಲ್ಲಭಂ [ಬಿಟ್ಟಯ್ಯಂಪರಮಾರಾಧ್ಯಂ ಬೀರೇಶ್ವರಮಂ ಐಯದಿಂ ಪ್ರತಿಷ್ಠೆಯಂ

೪೩. ಮೋಹಿಸಿದಂ॥ ಜನವಿನುತೆ ದಾಸಿಯಕ್ಕನೆ ತನಗೆ ಸಹೋದರಿಯ ಬೀರಿಸೆಟ್ಟಿಯ ಭಾವಂ ವಿನುತ

೪೪. ನೆನೆ ಬಿಟ್ಟೆಯಂ ಸಜ್ಜನನೀ ಬೀರೇಶ್ವರಾಲಯ ಮನೆತ್ತಿಸಿದಂ॥ ಸ್ವಸ್ತಿ ಶ್ರೀ ಸಕವರ್ಷ ೧೧೦೭ನೆಯ ವಿಸ್ವಾದ

೪೫. ಸುಸಂವತ್ಸರದ ಪೌಷ್ಯದಮವಾಸ್ಯೆ ಸೋಮವಾರ ವೀತೀಪಾಸಂಕ್ರಮಾಣದೆಂದು ಶ್ರೀ ಬೀರೇಶ್ವರ

೪೬. ದೇವರ ನಿತ್ಯನಿವೇದ್ಯಕ್ಕಂ ನಂದಾದೀವಿಗೆಗಂ ಜೋರ್ಣ್ಣೋಂದ್ಧಾರಕ್ಕಂ ಪೂಜಾರಿಪರಿಚಾರಕರಾಹಾರದಾನಕ್ಕು ವೆಂದು ಸ

೪೭. ಮಗ್ರಪ್ರಜೆಗಳ ಸಂನಿಧಾನದಲು ಮಹದೇವರಸನುಂ ಕಳುವ ಮಲ್ಲೆಯಣೊಳಗಾದ ನಾಲ್ವತ್ತು ಮನುಷ್ಯ

೪೮. ಎಕ್ಕಟ್ಟ ಗಂಗರಕ್ಕರುಂ ತ್ರೈಲೋಕ್ಯ ಶಕ್ತಿಗಳ ದೀಕ್ಷಾ ಪುತ್ರಂ ಲೋಕಾಭರಣಪಂಡಿತರ ಕಾಲ ಕರ್ಚ್ಚಿದಾರಾಪೂರ್ವ್ವಕಂ

೪೯. ಮಾಡಿ ಬಿಟ್ಟದತ್ತಿ ಹಿರಿಯಕೆಜೆಯ ಕೆಳಗಣ ಬಾಯಂ ಮಣಲಗದ್ದೆ ಸಲಗೆ ೧ ಕೂ ೫ ಹಳು ಸಲಗೆ ೨ ಕೊ ೧

೫೦. .... ನೆವಗೆಜೆಯ ಕೆಜೆಯ ಕೆಳಗಣ ಮೊದಲು ಗದ್ದೆ ಕೊಳಗಂ ಹತ್ತು ೧೦.....

೫೧. ಜೆಯಗೌಡ ಕಟ್ಟಿದ ಬುವಗಟ್ಟಿದೆ ಕೆಳಗೆ ಕೊ ೧೦ ಊರ ಮುಂದಣ ಬೆದ್ದಲೆ ಕಂಬ ಮೂನೂಱು ೩೦೦

೫೨. ..ಡಣ ತಾಜೆಯ ಕೆಯಿ ಕಂಭ ನೂಱಯ್ವತ್ತು ೧೫೦ ಬಿಟ್ಟಿಯಣ್ಣ ಕಟ್ಟಿಸಿದ ಕೆಱೆಯ ಕೆಳಗೆ ಎರೆಯ

೫೩. ಲು ಕಂಬ ಮಂನೂಱ ಎಪ್ಪತ್ತು ೩೭೦ ಆಯ್ಯನಹಳಿಯ ಊರ ಮುಂದಣ ಕಂಬ ಯಿಱುವತ್ತು..

೫೪. ಕನಹಳಿಯ ಬೀರಿಸೆಟ್ಟಿಯ ಕೆಱೆಯ ಕೆಳಗಣ ವೆದ್ದಲೆ ಕಂಬ ಮುಂನುಱಯಿಪ್ಪತ್ತು ೩೨೦

೫೫. ..... ಬಹುಭೀರ್ವ್ವಸುಧಾವತ್ತಾ ರಾಜಬಿಸ್ಸಗರಾದಿಭಿಃ ಯಸ್ಯ ಯಸ್ಯ ಯದಾ..

೫೬. ತಸ್ಯತಸ್ಯ ತದಾ ಫಲಂ||[೨] ಇಧರ್ಮಯಂ ಪ್ರತಿಪಾಳ್ಸಿದ ವರ್ಗ್ಗಳ್ಗೆ ಸಹಸ್ರಕವಿಲೆಯ ಕೋಡುವಂ - ಕೊಳಗುವಂ...

೫೭. ಬ್ರಾಹ್ಮಮರ್ಗ್ಗೆಕೊಟ್ಟ ಫಲಂ|| ಸ್ವದತ್ತಂ ಪರದತ್ತಂವಾಯೋ ಹರೇತಿ ವಸುಂಧರಾ ಷಷ್ಟಿ ವರ್ಷಸಹಸ್ರಾಣಿ ಮಷ್ಟಾಯಾಂ. ಯತೆ..[೨]

೫೮. ....

ಎಪಿಗ್ರಾಫಿಯ ಕರ್ನಾಟಕ ಸಂ.೧೦ ೮೫-೮೬

• • •

೨. ಶಾಸನ : ಸಂಖ್ಯೆ ೩೩೨ (ಎಕೆ III ನಂ. ಗೂ ೧೦೬)

ಊರು : ಹೆಂಮರಗಾಲ

ಸ್ಥಳ : (ಶಾಸನದ) ಬೀರದೇವರ ಗುಡಿಯ ನವರಂಗ ಮಂಟಪದಲ್ಲಿ

ಕಾಲ : ಕ್ರಿ.ಶ. ೧೬೫೩

ವಂಶ : ಮೈಸೂರು ಕಂಠೀರವನರಾಸರಜಯ್ಯ ಒಡೆಯರು

ಶಾಸನದ ಪಠ್ಯ

೧. ಶುಭಮಸ್ತು ಸ್ವಸ್ತಿ ಸ್ತ್ರೀಂ ವಿಜೆಯಾಧಿ ಸಾಲುವಾಹನಸಕ

೨. ವರುಶ ೧೫೭೪ ಸಂದ ಸಂದನ ಸಂವಂವತ್ಸರದ ಪಾಲ್ಗುಣ ಶು. ೧ಲು

೩. ಶ್ರೀಮಂಮಹಾದೇವವೋತ್ತಮ ಹೇಂಮರಗಾಲದ ಭೀರೇ

೪. ದೇವರ ಗುಡಿಯ ಜಿರ್ನಉದರ ಮಾಡಿದ ವಿವಾರ ಶ್ರೀಮತ

೫. ಮೈಸೂರ ಕಂಟೀರವನರಾಸರಜಯ್ಯನವರು ರಾಜ್ಯವಾಳುತ್ತಿರ

೬. ಲು ಯಿ ಹೆಂಮರಗಾಲದ ಸ್ಥಳದ ದೇವರ ಗುಡರು ಆಚೇಗ ಉಡನ

೭. ಪೊ ವುತ್ತ್ರರಾದ ಕೊಮರೇಗ ಉಡನ ಪುತ್ರರಾದ ಭೀರೇಗಉಡ ಮಾಡಿದ ಸೇವೆ

೮. ಮಾಡಲಾಗಿ ಮುಂದೆ ದಾಯಾದಿಗಳು ಭೋಳಬೀರೇಗ ಉಡನ ಪಾಲು ಪರಿಸೆಗ

೯. ಉಡೆನ ಪಾಲು ಉಭಯಂ ಪಾಲು ೨ಕ್ಕೆ ಸಲುವ ಹಣಕೆ ಕೊಡಲಾಟದೆ ಕೂ

೧೦. ಜಿಬನಾಗಿ ಹೋದೆವು ಯೆಂನಲಾಗಿ ಹಾಗೆ ಬೇಡವೆಂದು ದೊಡ್ಡ ಭೀರೇ
೧೧. ಗಉಡನು ಕುಡಿಕೊಂಡು ಮುಂದೆ ದೇವಸ್ತನದ ದೂಪದೀಪ ಯಜಮಾನ
೧೨. ನಾಗಿ ಮೂಜುಪಾಲಿನಲ್ಲಿ ಆರು ನಡುಉತಯಾದರು ಅವರ ದೊಳಗಾಗಿ
೧೩. ನಡವಣ ನಡೆಯದೆಯಿಧರೆ ಗುಡತನಕ್ಕೆ ಕರುಣವಿಲ್ಲ ಕುಜಿಬನಾಗಿಯಿ
೧೪. ಹಾಗುಣಯಿದಕೆ ಸಾಕ್ಷಿಗಳು ಸಾಮಸ್ತರು ಗಉಡಗಳು ಉಪಲಿಗರು
೧೫. ತೆರಕಣವಿ ಹಲರು ಕಳಿವೆ ಹಲರು ಪಂಪಪುರದ ಹಲರು ದೇಸಭಾಗದವರು
೧೬. ಯಿ ಸಾದನವ ನಗರ್‍ಯೆಯ ಬರದ ಯಿ ಬೀರೇಸ ಸ ಗುಡಿತೆರಕಣವಿ ಚೆಂನ್ನ
೧೭. ಯ ಕಟಿದ ಮಂಗಳಮಹಾಶ್ರೀ

• • •

೩. ಶಾಸನ : ಸಂಖ್ಯೆ ೩೩೧ (ಎಕೆ III ನಂ.ಗೂ ೧೦೫)

ಊರು : ಹೆಂಮರಗಾಲ

ಸ್ಥಳ : ಮನೆಯೊಂದರ ಜಗಲಿಯಲ್ಲಿ ನೆಟ್ಟಿದ ಕಲ್ಲಿನಲ್ಲಿ

ಕಾಲ :

ವಂಶ :

೧. ಶ್ರೀ ಮುಖಿಸಂವತ್ಸರದ.....
೨. .... ಭೀಮರಸಯ.......
೩. ಹೆಂಮರಗಾಲ ಭೀರ...
೪. ...... ಗುಡುಗಳು ಪರಮಾರನ
೫. ರು ಹೆಂಮರೆಗಾಲ ಕೇತೆ (ಯ)
೬. ಯಿಪತು ಹಣ......
೭. ಮೆ ಮನೆಗೆ ಹಾಕಿದ ಕೊಡುಗೆ.....
೮. ... ಯ್ಯಾವನು ಅಳಿಹಿದವರು ಗಂಗೆ
೯. .ತಡಿಯಲ್ಲಿ ಗೋವ ಕೊಂದ ಪಾಪಕೆ
೧೦. ಹರು ಯೀದಂರ್ಮ ಉ ಸಾಕುತ....
೧೧. .. ಮರಾಜವೊಡೆಯ

ಎಪಿಗ್ರಾಫಿಯ ಕರ್ನಾಟಕ ಸಂ.೩

• • •

೪. ಶಾಸನ : ಸಂಖ್ಯೆ ಬಿ.ಕೆ. ೮೮ of ೧೯೨೮-೨೯; SII.XV ೭೧೪

ಊರು : ಬಾಗಲಕೋಟೆ ಜಿಲ್ಲೆ ಕೊಣ್ಣೂರು

ಸ್ಥಳ : ಬೀರದೇವರ ಗುಡಿಯ ಗೋಡೆಗೆ ಸೇರಿಸಿ ಕಟ್ಟಿರುವ ಶಾಸನ

ಕಾಲ : ೧೬೨೫-೨೬

ವಂಶ :

ಶಾಸನದಲ್ಲಿ ಉಲ್ಲೇಖವಾಗಿರುವ ಕಾಲವು ಅಪೂರ್ಣವಾಗಿದ್ದು ಶಕ ೧೫೪೭, ಕ್ರೋಧನಾಮ ಸಂವತ್ಸರದ ದಸಮಿ, ಸನಿವಾರವೆಂದಿದೆ. ತಿಂಗಳ ಉಲ್ಲೇಖವಿಲ್ಲ ಹೀಗಾಗಿ ಇದು ಕ್ರಿ.ಶ. ೧೬೨೫-೨೬ಕ್ಕೆ ಸಮಾನವಾಗುತ್ತದೆ.

ಕೊಣಗನೂರಿನ ಭೂಸಣ್ಣಗೌಡನ ಮಗ ನಾಗಣ್ಣಗೌಡನು ಬೀರದೇವರ ದೇವಾಲಯದ ಚಂದ್ರಶಾಲೆಯನ್ನು ಕಟ್ಟಿಸಿದಂತೆ ತಿಳಿಸುತ್ತದೆ. ಕುಲಕರಣಿ ಚಿಕ್ಕಪ್ಪನನ್ನು ಇದು ಉಲ್ಲೇಖಿಸುತ್ತದೆ.

೧. ಬಿರಾದೇವರಾ

೨. ಶ್ರೀ ಸ್ವಸ್ತಿ ಶ್ರೀ ನೃಪ ಶ

೩. ಲಿವಾಹನ ಶಕೆ ೧೫೪೭

೪. ಕ್ರೋಧನಾಮ ಸಂವತ್ಸರದ

೫. ಸಮಿ ಸನಿವಾರದಲು ಕೊ

೬. ಣಗನೂರಾ ಬೊಸಂಣಗೌ

೭. ಡನ ಪುತ್ರ ನಾಗರಣಗೌಡ

೮. ನು ಶ್ರೀ ಚಂದ್ರೆ

೯. ಶಾಲಿಯ ಕಟ್ಟಿಸಿದಾ ಸ

೧೦. ಮಾಪ್ತಿ ಸ್ವಾಹಸ್ತ ಕುಲಕ

೧೧. ರಣಿ ಚಿಕ್ಕಪ್ಪ ಸುಬಂಮಸ್ತ

• • •

೫. ಶಾಸನ :

ಊರು : ತಾಳಿಕಟ್ಟೆ

ಸ್ಥಳ : ಹಳ್ಳದ ಜಂಗಮ ಬೀರಲಿಂಗೇಶ್ವರ ದೇವಸ್ಥಾನದಲ್ಲಿ

ಕಾಲ :

ವಂಶ :

ಪಡದೇವರಾಯ ಬೋಜರಯ ಮಲ್ಲಿರಾಯ ಡಾರಯ ಬುಕರಯ ಜೋಗರಾಯ ಪಿತಾಕುರಪಾರಯರು ಅಳಿದರು ರಾಮಾರಾಜ ಯಕಾಟರಾಯರು ತಾಳಿವರತಿರುಮಲಾರಾಜಾವಳಿ ವಾಲಿಜಗಾಮ್ಯೆಯುಮ

ಜಯನಗರಾದ ಅಳಿದರು ಗಯಿದ ಕುರುಬಾಗೌದಾಗಳು ಕೋಟಿಲೆಯಡಿಕೋಡಾಗೌಡ ಗುಜಟಿಗುಡಿಯ ಗೌಡ ಕೋಲುಕಾರಪ್ಪ ನಾಗಿಗೌಡ ಪೂಜಾರಿಟಕೋಡಾಲಾಕಿ ಬೋವಾನಮುದಿ ಭೋಗಪ್ಪಮುದಿರೇವಣಾ ವಡೆಯರು ಬಾಗುರಾಜಾನಾಯಕರು ಯೋ

• • •

೬. ಶಾಸನ :

ಊರು : ಮುದ್ದನಗೆರೆ

ಸ್ಥಳ : ಮಂಡ್ಯ ಜಿಲ್ಲೆ ರಾಯಶೇಟಿ ಶಾಸನ

ಕಾಲ : ೧೧೭೮ ಇದಕ್ಕೂ ಪ್ರಾಚೀನವಾದ ಶಾಸನ

ವಂಶ :

.....ಸ್ವಸ್ತಿ ಶ್ರೀ ಮನ್ನುಮಹಾಮಹಿಮನಪ್ಪ ಶ್ರೀ ಕೆಲಾಸ

ಪುರವರಾಧೀಶ್ವರಂ.....

ಪಂಚವಕ್ರ ಪರಮೇಶ್ವರನ ವೋಲಗ ಭೃಂಗೀಶ....

ಸಾಲೋಕ್ಯ ಸಾಮೀಪ್ಯ ಸಾರೂಪ್ಯ......

ದೇವಲೋಕದ ದೇವಗಣಂಗಳು ವೀರಭದ್ರ....

ಸ್ವಸ್ತಿ ಶ್ರೀ..... ಮಾಡಿದ ಅಸಂಖ್ಯಾ..... ವೀರಭದ್ರ ದೇವರು

ಮುಖ್ಯವಾದ ವೀರಸೋಮನಾಥಪುರದ ಭಿತ್ತಿ

• • •

೭. ಶಾಸನ :

ಊರು : ಗೋಲ್ಲಗೇರಿ

ಸ್ಥಳ : ಸಿಂದಗಿ

ಕಾಲ : ೧೧೨೦

ವಂಶ :

ಶ್ರೀ ಸ್ವಸ್ತಿ ಸಮಸ್ತ ಭವನಾ

ತ್ರಯಂ ಶ್ರೀ ಪ್ರಥ್ವೀವಲ್ಲಭೇಂ

ಮಹಾರಾಜಾಧಿರಾಜ ಪರಮೇ

ಶ್ವರ ಪರಮಭಟ್ಟಾರಕಂ ಸತ್ಯಾ

ಶ್ರಯ ಕುಳಿತಿಳಕಂ ಚಾಲುಕ್ಯಾ

ಭರಣಂ ಶ್ರೀ ಮಜ್ಜಗವೇಕಮಲ್ಲ

ದೇವರ ವಿಜಯರಾಜ್ಯ ಮತ್ತು ರೊತ್ತರಾಭಿ....
ವಿದ್ಧಿ ಪ್ರವರ್ಧಮಾನ ಮಾಚಂದ್ರಕ್ಕ ತಾರಂ....
ವಿರಂ ಸಲುತ್ತಮಿರೆ ಸಕವರ್ಷ ೫ಂನೆಯ ಪೈ....
ಭವ ಎಮಗಬ ಸಂತ್ಸರವ ವೈಶಾಖ ಸುದ್ದೆ ೮ ಸೊಂ...
...... ಸ್ವಸ್ತಿ ಸಮಿಸ್ತ.......
.... ಮಾಹಾಸಾಮನ್ತಪ್ರಚಂಣ್ಣ ರೆಬ್ಬ....
ರಸಕ ಗೊಲ್ಲಗೇರಿಯೊಳ್ತಮ್ಮ ಮಾ......
ನೈ ದಿಳಗೆ ಬಾಚಗಾವುಣ್ಣನದೇ.....
ಗುಲಕ್ಕೆ ಬಿಟ್ಟ ಕೇಯಿ ಮತ್ತರ
ಚನ್ನಾ್ರ ದಿತ್ಯರುಳ್ಳನ್ನೆ.....
ಬಿರಂ ಪ್ರತಿಪಾಳಿ ಸುವರ

• • •

೮. ಶಾಸನ : ೨೫೯ VIII ಸಾ ೧೩೮ ಪು. ೪೨೪ ಎಪಿಗ್ರಾಫಿ ಕರ್ನಾಟಕ ೧೫

ಊರು : ಹೊಸಗುಂದ

ಸ್ಥಳ : ಅದೇ ಕಾಡಿನಲ್ಲಿರು ಮೂರನೆಯ ವೀರಗಲ್ಲು

ಕಾಲ : ೧೨೬೯

ವಂಶ :

೧. ಸ್ವಸ್ತಿ ಶ್ರೀ ಮನುಮಹಾಮಂಡಳೇಶ್ವರಂ ವೈದಿಮಂಡ್ಲಿಕಗಳಗಂಡಗತ್ತರಿ ಬೀರದೇವರ
೨. ದೇವೋದರಕ್ಷೀರವಾರಾಸಿ ಪಾರಿಚಾತನುಂ ಪೊಂನಲದೇವಿ ಜಠರ ಶುಕ್ತಿಕಾಮು
೩. ಕ್ತಾಮಯನಪ್ಪ ಬೊಂಮರ್ಸಂ ಶ್ರೀಮನುಮಹಾಮಂಡಳೇಶ್ವರಂ ಅರಂಣ್ಯಮವೆ
೪. ಗ್ರ್ಗಡೆಯ ಮೇಲೆತತಿನ[ಡ]ದು ಕೊದೂರ ದುರ್ಗ್ಗಮಂ ಮುಂಚಿದೊಳ ಬಿದ್ರ್ರುಕೊಂಬ
೫. ಲ್ಲಿ ಸಕವರುಷ ೧೧೩೨ನೆಯ ಶುಕ್ಲ ಸಂವತ್ಸರದ ವೈಶಾಖ ಬಹುಳ ೭ ಶುಕ್ಲ
೬. ಬಾರದೆಂದು ಶ್ರೀಮತು ಬೊಂಮರ್ಸನಾಳು ಸಾತಗೌಡನ ಮಗು ಕರಿಯ ಮುದ್ದ ಮಾಡಿದ ಪರಾ
೭. ಕ್ರಮವೆಂತೆಂದರೆ ಕುದುರೆಗಳನಿಚಿದು ಮದೆಮೆಟ್ಟಿದಿರಾಂ ತೊಳ್ಳಾಳ್ಗಟ್ಟೆಯ ಮೆಟ್ಟಿಲನಿಡುತಂ ಕದ
೮. ನದೊಳಹಿತರ ತಂನೆಯ ಮಿದುಳೊಳಗಲಸುವಿನ ಮಿಱಿದು ಮುದುಂ ಮಱಿದನು ತಂನುರದೊಳ್
೯. .... ಗಳ್ಳೆಂನಿಂ ಪೊಱಪೊಣ್ಣೆ.. ಕಾದಿ..ಲ್ಲಿಪ್ಪಂ ನೆಗೆದ ಮರೆಸ್ತ್ರಿಯಪ್ರ್ರೊಂನ ವಿಮಾನದಲ್ಲಿ
೧೦. ..ಮುದ್ದೆನಂ ಕೊಂಡುಯಿದರು ಮಂಗಳ ಮಹಾ ಶ್ರಿ ಶ್ರೀ

• • •

೯. ಊರು : ದಾವಣಗೆರೆ

ಕಾಲ : ೧೭೦೬

ಪಾಸು-೧

೧. ನಮಸ್ತುಂಗ ಶಿರಂಚುಂಬಾ ಚಂದ್ರಚಾಮರಾಜವೇ | ತ್ರೈಲೋಕ್ಯ ನಗರಾ

೨. ಭ್ಯ ಮೂಲಸ್ತಿಂಬಾಯ ಸ್ತಂಬವೇ | ಸೋಸ್ತಿ | ಇಜಯಭ್ಯುದಯ ಶಾಲಿವಾ

೩. ಹನ ಶಕ ವರ್ಷಂಗಳು ೧೬೨೮ ನೇ ಹಗಲು ಆಶ್ವೀಜ ಶುಕ್ಲ ೩ ತದಿಗಿ ರವಿವಾ

೪. ರದಲ್ಲು ಬೆತೂರು ಹೋಬಳಿ ಡಾವಣಗೆರೆ ಗೌಡಿಕೆಯನ್ನು ಕುರುಬರ ಬೀರೆದೇ

೫. ವರ ಪುಜರಿ ಕರಿಯಂಣನ ಮಗ ನಾಗೈಯ್ಯ ಗೌಲ್ಲರ ಗಿಡ್ಡಗಿರಿಯಂಣನ

೬. ಮೊಮ್ಮಗ ಗಿಡ್ಡಯ್ಯ | ಸಹ ಕಾದ ಹಾಕಿದ ಗಟ್ಟಿ ಎತ್ತಿ ಗೌಡಿಕೆ ಗೆದ್ದ ವಿದ್ಯೆ

೭. ಜಯದ್ರೇಕೆ ಕ್ರಮವೇನಂದ್ರೆ..........

೮. ಶ್ರೀ ನಂಮಹಂನಾಯಕಚಾರ್ಯ ಕಮಗೇಲ್ ಕಸ್ತೂರಿ ನಾಯಕರ ಭರಮ

೯. ಣ ನಾಯಕರು ಚಿನ್ಮನಗಿರಿದುರ್ಗಕ್ಕೆ ಸಲ್ಲುವ ಬೇತೂರು ಹೋಬಳಿ ಡಾವ

೧೦. ಣಗೇರಿ ಗ್ರಾಮದ ಗೌಡರು ಸಾದವಕ್ಕಲು ಕರುಣಗೌಡನ ಮಗ ಮರಿಯಂ

೧೧. ಣಗೂ ಕುರುಬರ ಬೀರದೇವರ ಪೂಜಾರಿ ಕುರುಬರ ಕರಿಯಂಣನ ಮಗ

೧೨. ನಾಗೈಯ್ಯ ಗೌಲ್ಲರ ಬಡಗಿರಿಯಂಣನ ಮೊಮ್ಮಗ ಗಿಡ್ಡಯ್ಯ [ಗೂ ?]

೧೩. ಉಭಯರು ಗೌಡಿಕೆ ನಂಮ್ಮದು ತಂಮ್ಮದು ಎಂದು | ಈ ಕರ್ತರು ಹುಜೂರಿಗೆ

೧೪. ಬಂದು ಬಿನ್ನವಂ ಮಾಡಿಕೊಂಡಲ್ಲಿ ಮ|ರಾ|ಸ್ರೀ ಹಾಜೂರಲ್ಲಿ ಕುಳಿತಿದ್ದ

೧೫. ಕುಮಾರಾ ಲ್ಲಿಂಗಂಣ ಹೊಗರಿ ಹಲಗಪ್ಪ ಶ್ರೀ ಪ್ರಧಾನಿ ಗುಂಟಮಲ್ಲಪ್ಪ |

೧೬. ಸಮಾಜೀಕರೂ ಆನಂದಪ್ರರದ ಈಸಂಣ್ಣ ಬಕ್ಕಸದ ತಿಂಮ್ಮಪ್ಪ |ಮ

೧೭. ಹಾನಾಡಿಗ | ಗುರಸ್ತರು ಪರಿಮಳದ ಅಯ್ಯಂಣ್ಣ ಉರಲಗಟ್ಟ ಲಿಂಗಂಣ

೧೮. ಬಕ್ಕಸದ ಪುಟ್ಟಪ್ಪ | ನಾರಾಯಣಪ್ಪ | ಆನೆಕೊ(೦)ಡದ ಗೌಡರ ಶಿದ್ದಯ್ಯ

೧೯. ಶಿಖರಯ್ಯ | ಮುಂತಾದ ಗೌಡರು | ಸಾರದ ಮುದಿಯಂಣ | ಕುರುಬರ

೨೦. ನಾಗೈಯ್ಯ ಸಹ ಯಿಬ್ಬರನ್ನು ಕರಸಿ | ನಿಂಮ್ಮ ನಿಂಮ್ಮ ಪೂರ್‍ವೊತ್ತ

೨೧. ರವ ಹೇಳೆಂದು ಹೇಳಲಾಗಿ | ಸಾರದ ಮುದಿಯಂಣನು (ಆಡಿದ್ದು)

೨೨. ಮಾತು | ಕಮಗೇರಿ (ತಿ) ಅರುಷುಗಳು ದುರ್ಗವ ಹತ್ತಿ ಮೂರು ತಲೆ

೨೩. ಆರಾಬ್ಯ ಗೌಡಿಕೆಯನ್ನು ಮಡಿದನು ಯಿದಕ್ಕೆ ಆಯಗಾರರ

೨೪. ನುಡಿಸೇನಂದನು | ಅದಕ್ಕೆ ಸಮಸ್ತ ದೈವವು ಆಯಾಗಾರರು |

೨೫. ತಳವಾರ| ಕಮ್ಮಾರ| ಬಡಗಿ| ಅಕ್ಕಸಾಲೆ| ಕೆಲಸಿ| ಸಹ ಕರೆದು ನಿಂಮ್ಮ ಗೌ

೨೬. ಡರ್‍ಯಾರೆಂದು ಕೇಳಲಾಗಿ| ಸಾರದ ಮುದಿಯಂಣನು ಗೌಡನೆಲ್ಲದೆ

೨೭. ಕುರುಬರ ಗೌಲ್ಲರ ಅರಿಯನೆಂದು ಹೇಳಿದರು| ಬೇಗಾರನ

೨೮. ಕರದು ಕೇಳಲಾಗಿ| ಹನುಮಪ್ಪ ನಾಯಕರ ಅವಾಂತರದಲ್ಲಿ| ಡಾ

೨೯. ವಣಗೇರಿ ಹಾಳಾಗಿ ಯಿದ್ದಲ್ಲಿ ಮುದಿಯಂಣನು ಗ್ರಾಮವ ಯೆ

೩೦. ತ್ತಿ ಹಾಕುತ್ತಿದ್ದಲ್ಲಿ ಕುರುಬರ ಕರಿಯಂಣನ ಮಗ ನಾಗೈಯ್ಯ

೩೧. ನು ಬಂದು ಗ್ರಾಮ ನಂಮದು ನೀನು ಗ್ರಾಮ ಹಾಕಬೇಡೆಂದು ಅ

೩೨. ಡ್ಡಿಯ ಮಾಡಲಾಗಿ ಆ ಸೀಮೆಯ ನಾಡಿಗರು ಆಳಿತಂಧಾವರು ಮು

೩೩. ದಿಯಂಣಗೌಡನು ಸಾಕ್ಷಿ ಕರಿಸಿ| ಕುರುಬರ ಕರಿಯಂಣನ ಬೆದರಿ

೩೪. ಸಿ ಅಟ್ಟಿದರು ಎಂಬ ಹಾಗೆ ತಮ್ಮ ಹಿರಿಯರು ಹೇಳುವರು ಎಂ

೩೫. ದು ಆಡಿದನು| ಆಯಗಾರ ಮಾತು ಎರಡು ಬಗೆ ಆಯಿತು

೩೬. ದೈವಾಚಾರದಲ್ಲು ಕಾದ ಹಾರಿ ಮಂಡಿ ಎತ್ತಿ, ಗೌಡಿಕೆಯ ಗೆದ್ದು

೩೭. ಉಂಟು ಮಾಡೆಂದು ಸಮಸ್ತ ದೈವವು ಯಿಬ್ಬರಿಗೂ ಹೇಳಲಾಗಿ

೩೮. ಈ ಮಾತಿಗೆ ಕುರುಬರ ನಾಗೈಯ್ಯ ಗೊಲ್ಲರ ಗಿಡ್ಡಯ್ಯ ಸಹ ನಾ

೨೯. ವು ಕಾದ ಹಾರಿ ಮಂಡೇ ಎತ್ತುವೆನೆಂದು ಗೊತ್ತಿಗೆ ನಿಂತು ಬರ

೩೦. ದು ಕೊಟ್ಟರು ಮುದಿಯಂಣನು ಆಡಿದ್ದು, ನಾಗೈಯ್ಯ

ಪಾಸು -೨

೪೧. ಕಾದ ಹಾರಿ ಗಟ್ಟೀ ಗೆದ್ದರೆ ನಾನು ಅಪರಾಧವ ಕೊಟ್ಟು ಗ್ರಾ

೪೨. ಮವ ಬಿಟ್ಟು ಕೊಡುತ್ತೇವೆಂದು ಕಡಕವ ಬರಕೊಟ್ಟನು ಆ ವುಭಯ

೪೩. ಗೊತ್ತಿಗೆ ನಿಂತಲ್ಲಿ ಮ| ರಾಜೆಸ್ತ್ರೀಯರು ದಳವಾಯಿಗಳು ಕುಮಾ

೪೪. ರರು ಅಳಿಯಂದಿರು ಗುರಿಕಾರರು ಸಮೋಜಿಕರು ಮಹನಾಡಿನ

೪೫. ಗುರುಸ್ತರು ಊಳಿಗದವರು ಮುಂತಾಗಿ ಸಮಸ್ತರಂನ ಕರೆಸಿ

೪೬. ಪೇಟೆ ಹನುಮಂತರಾಯನ ದೇವಸ್ತಾನಕ್ಕೆ ಸತ್ಯ ಮಾಡಿಸುವ

೪೭. ರೇ ಸಿರಿವಾಳದ ಸಭೆಯವರ ದಳವಾಗಿ ಚಿಕ್ಕಂಣ ಕುಮರ ಲಿಂಗಪ್ಪ

೪೮. ಮೆದುನ ಚಿಗರಂಗಪ್ಪ ಬಾಣದಪುರದ ಕೆಂಪಯ್ಯ ಅಳಿಯ ನೆಲ್ಲೀ

೪೯. ಕಟ್ಟೆ ಕೆಂಚಯ್ಯ ಜೋಗಂಣ ಕುಲೀಕಾರ ಕಡಜ ಚಿಕ್ಕಪ್ಪ ಬಿಳಿ

೫೦. ಚೊಡ ತಿಗಳಯ್ಯ ತಿಗಳಮತ್ತೇಗೌಡ ಬೊಮ್ಮಕಟ್ಟೆ ಕೆಂಚಯ್ಯ

೩೧. ಪುಲನಾರಾಧ್ಯ ವಲಕಯ್ಯ ಸೊಂಡೂರ ಲಕ್ಷ್ಮಯ್ಯ ಅಸಗೋ
೩೨. ಡು ಬಕ್ಕಸದ ತಿಮ್ಮಪ್ಪ ತಿರುಕನಾಯಕನ ತಿಮ್ಮಯ್ಯ ಗವಿಯಪ್ಪ
೩೩. ನ ಮಗ ಕರಿಯಂಣ ಸಮಾಜೀಕರು ಗುಂಟನೂರ ಮಲ್ಲಪ್ಪ
೩೪. ನಂಜೇ (?ಸರಜೇ?) ರಾಯನ ಕೆಂಚಪ್ಪ ಅನಂತಯ್ಯ ದೇವರಾಯ
೩೫. ಕೃಷ್ಣಪ್ಪ ಉಗ್ರಾಣದ ರಂಗಪ್ಪ ಕಂದಾಚಾರದ ಶಾನಭೋಗ ಕೊ
೩೬. ಡನೂರ ಯಂಕಪ್ಪ ಗುಂಟನೂರ ಸೂರಪ್ಪ ಮಹನಾಡಿನ ಗು
೩೭. ರಸ್ತ ಮರಿಮಳದ ಅಯ್ಯಂಣ ಗೊಗ್ಗರಿ ಹಲಗಪ್ಪ ಉರಗಟ್ಟ
೩೮. ಲಿಂಗಪ್ಪ ಮೀಟಿ ಸೂರಪ್ಪ ಆನೇಕೊಂಡದ ನೌಗೀ ಸಿದ್ದಯ್ಯ
೩೯. ಶಿಕಾರಯ್ಯ ಕೆಲಸಿ ಬೇತೂರ ದೊಡ್ಡಯ್ಯ ಹುಚ್ಚ ಬೇಗಾರಿ
೪೦. ದಿ ಜೋಗಿ ಮುಂತಾದ ಸಮಸ್ತರನ್ನು ದೇವಸ್ಥಾನಕ್ಕೆ ಕರಸಿ ಸಮಸ್ಥರು
೪೧. ಕೂತು ದೇವರ ಪೂಜೇ ಮಾಡಿಸಿ ಉಕ್ಕಿನ ಗಟ್ಟೀ ಪೂಜೇ ಮಾಡಿಸಿ
೪೨. ಕಾಸಿ ಕುರುಬರ ಬೀರದೇವರ ಪೂಜಾರಿ ಕರಿಯಂಣನ ಮಗ ನಾಗೈ
೪೩. ಯ್ಯಗೆ ನೀರನೆರಸಿ | ಮಡಿ ಹೊದಿಕೆ ಹೊದಿಸಿ ದೇವರಗೆ ಯಿದರಾ
೪೪. ಗಿ ನಿಲ್ಲಿಸಿ ಏಳು ಮಂಡಲವ ಬರಸಿ ನಾಗೈಯ್ಯ ಕೈಯೊಳಗೆ
೪೫. ಅ (ಆ?) ರಳಿ ಎಲಿ ಹಿಡಿಸಿ ಅಂಗನೂಲು ಸುತ್ತಿ ದೇವರ ಪ್ರಸಾದ ಯಿ
೪೬. ರಿಸಿ ದುರ್ಗಸ್ಥಳದ ಕಂಮಾರ ತಿಮ್ಮಯ್ಯನು ಕಾದ ಗಟ್ಟಿಯ
೪೭. ನ್ನು ಯಿಕ್ಕಳದಲ್ಲಿ ಯಿಡಿದು ನಾಗೈಯ್ಯ ಕೈಯೊಳಗೆ ಯಿರ
೪೮. ಸಲಾಗಿ ನಾಗೈಯ್ಯ ಏಳು ಮಂಡಲವ ದಾಟಿ ದೇವರಿಗೆ
೪೯. ಆರತಿಯಂನ್ನೆತ್ತಿ ಗಟ್ಟಿಯನ್ನು ಕೆಳಗೆ ಹಾಕಲಾಗಿ | ಕೂತಿರು
೫೦. ವ ದೈವವೆಲ್ಲಾ ನಾಗೈಯ್ಯ ಗೆದ್ದನೆಂದು ಆಡಿದರು ನಾಗೈ
೫೧. ಯ್ಯನ ಕೈಯನ ಅರಳಿ ಎಲೆ ಅಂಗನೂಲು ಸುಡಲಿಲ್ಲಾ ಈ ಸಮಾ
೫೨. ಚಾರವನ್ನು ರಾಮರಾಯರಿಗೆ ದೈವವೆಲ್ಲಾ ಹೇಳಲಾಗಿ ಕುರುಬರ ಗೌ
೫೩. ಡ ನಾಗೈಯ್ಯಗೂ ಗೊಲ್ಲರ ಬಡಗಿರಿಯಂಣನ ಮಗ ಗಿರಿಯಂಣಗೆ
೫೪. ಸಹ ಉಡಗರೆ ವೀಳ್ಯೆ ಕೊಡಿಸಿ ದಾವಣಗೆರೇ ಗೌಡಿಕೆ ನಿಂಮ
೫೫. ದೆ ಎಂದು ಬರೆದಿದೆ ಯಿದು ತಾಮ್ರ ಸಾಸನದ ಮೇಲೆ ಬರದಿರುತ್ತಾರೆ.
೫೬. ಮಹಾರಾಜೇಸ್ರಿ ರಾಮರಾಯರ ಸ್ರೈ
೫೭. ಯಿರುತ್ತದೆ.

ಛಾಯಾಚಿತ್ರಗಳು


ಶ್ರೀ ಕರಿಸಿದ್ದೇಶ್ವರ ದೇವಾಲಯ, ಅಲಕನೂರು ರಾಯಬಾಗ ತಾ. ಬೆಳಗಾವಿ ಜಿಲ್ಲೆ.


ಶ್ರೀ ಬೀರಲಿಂಗೇಶ್ವರ ದೇವಾಲಯ, ಯಕ್ಸಂಬಾ ಚಿಕ್ಕೋಡಿ ತಾ. ಬೆಳಗಾವಿ ಜಿಲ್ಲೆ.


ಹೊರ ಬೀರಪ್ಪನ ದೇವಾಲಯ, ರಾಯಬಾಗ ತಾ. ಬೆಳಗಾವಿ ಜಿಲ್ಲೆ



ಶ್ರೀ ಬಿರಲಿಂಗೇಶ್ವರ ದೇವಾಲಯ, ನಗರಾಣ ಇಂಡಿ ತಾ. ಬಿಜಾಪುರ ಜಿಲ್ಲೆ.



ಶ್ರೀ ಬೀರಲಿಂಗೇಶ್ವರ ದೇವಾಲಯ, ಮಲಘಾಣ ಬಿಜಾಪುರ ಜಿಲ್ಲೆ.



ಶ್ರೀ ಬೀರಲಿಂಗೇಶ್ವರ ದೇವಾಲಯ, ಶಿರಾಡೋಣ ಇಂಡಿ ತಾ. ಬಿಜಾಪುರ ಜಿಲ್ಲೆ.



ಶ್ರೀ ಕರಿಸಿದ್ದೇಶ್ವರ ದೇವಾಲಯ, ಕೊಣ್ಣೂರು ಬಾಗಲಕೋಟೆ ಜಿಲ್ಲೆ.



ಶ್ರೀ ಹೊರಬೀರಲಿಂಗೇಶ್ವರ ದೇವಾಲಯ, ದಾವಣಗೆರೆ



ಶ್ರೀ ಒಳ ಬೀರಲಿಂಗೇಶ್ವರ ದೇವಾಲಯ, ದಾವಣಗೆರೆ



ಶ್ರೀ ಬೀರಲಿಂಗೇಶ್ವರ ದೇವಾಲಯ ಮೆಡ್ಲೇರಿ, ರಾಣೆಬೆನ್ನೂರು ತಾ. ಹಾವೇರಿ ಜಿಲ್ಲೆ.



ಶ್ರೀ ಬೀಬಿರಪ್ಪನ ದೇವಾಲಯ, ಹಂಪಿ



ಶ್ರೀ ಬೀರಲಿಂಗೇಶ್ವರ ದೇವಾಲಯ, ಕಾಳಿದಾಸನಗರ ಕಡೂರು, ಚಿಕ್ಕಮಗಳೂರು ಜಿಲ್ಲೆ.



ಶ್ರೀ ಹುಲಬೆಂಕಿ ಬೀರಲಿಂಗೇಶ್ವರ ದೇವಾಲಯ ಬೀರೂರು, ಚಿಕ್ಕಮಗಳೂರು ಜಿಲ್ಲೆ.



ಸಂಪಿಗೆಹಳ್ಳಿ ಬೀರಲಿಂಗೇಶ್ವರ ದೇವಾಲಯ, ಬೆಂಗಳೂರು



ಶ್ರೀ ಬೀರಲಿಂಗೇಶ್ವರ ದೇವಾಲಯ, ಉಮ್ಮಡಹಳ್ಳಿ ಮಂಡ್ಯ ಜಿಲ್ಲೆ.



ಮೊದಲನೆ ಬೀರಲಿಂಗೇಶ್ವರ ದೇವಾಲಯ,
ಸಾತನೂರು, ಮಂಡ್ಯ ಜಿಲ್ಲೆ.



ಎರಡನೆ ಬೀರಲಿಂಗೇಶ್ವರ ದೇವಾಲಯ ಸಾತನೂರು, ಮಂಡ್ಯ ಜಿಲ್ಲೆ.



ಶ್ರೀ ಬೀರಲಿಂಗೇಶ್ವರ ದೇವಾಲಯ ಆಲೂರು,
ಮಂಡ್ಯ ಜಿಲ್ಲೆ.



ಶ್ರೀ ಬೀರಲಿಂಗೇಶ್ವರ ದೇವಾಲಯ ಕೊಡಿದೊಡ್ಡಿ, ಮಂಡ್ಯ ಜಿಲ್ಲೆ.



ಶ್ರೀ ಬೀರಲಿಂಗೇಶ್ವರ ದೊಡ್ಡಯ್ಯ ದೇವಾಲಯ ಒಳಗೇರಳ್ಳಿ, ಅರಸಿಕೆರೆ ತಾ. ಹಾಸನ ಜಿಲ್ಲೆ.



ಶ್ರೀ ಬೀರಲಿಂಗೇಶ್ವರ ದೇವಾಲಯ ಭರಗೂರು, ಅರಸಿಕೆರೆ ತಾ. ಹಾಸನ ಜಿಲ್ಲೆ.



ಶ್ರೀ ಬೀರಲಿಂಗೇಶ್ವರ ಹೊಸ ದೇವಾಲಯ, ಕುರುವಂಕ ಅರಸಿಕೆರೆ ತಾ. ಹಾಸನ ಜಿಲ್ಲೆ.



ಶ್ರೀ ಬೀರಲಿಂಗೇಶ್ವರ ಹಳೇ ದೇವಾಲಯ, ಕುರುವಂಕ ಅರಸಿಕೆರೆ ತಾ. ಹಾಸನ ಜಿಲ್ಲೆ.



ಶ್ರೀ ಬೀರಲಿಂಗೇಶ್ವರ ದೇವಾಲಯ, ಕಡಕೋಳ ಮೈಸೂರು ಜಿಲ್ಲೆ.



ಬೀರಲಿಂಗೇಶ್ವರ ದೇವಾಲಯ, ದೊಡ್ಡಕೊಪ್ಪಲು, ಮೈಸೂರು ಜಿಲ್ಲೆ.



ಹೊರಬೀರಪ್ಪನ ದೇವಾಲಯದ ಹೊರಬಾಗದಲ್ಲಿರುವ ಉಯ್ಯಾಲೆ ಕಂಬ ತಾಳಿಕಟ್ಟೆ, ಹೊಳಲ್ಕೆರೆ ತಾ.



ಬೀರಲಿಂಗೇಶ್ವರ ದೇವಸ್ಥಾನ, ಕುಪ್ಪೂರು ತಿಪಟೂರು ತಾ. ತುಮಕೂರು ಜಿಲ್ಲೆ.



ಬೀರಪ್ಪನ ಮೂರ್ತಿ, ಹಾರುಗೇರಿ
ಬೆಳಗಾವಿ ಜಿಲ್ಲೆ.



ಮಾಯಕ್ಕನ ಮೂರ್ತಿ ಹಾರುಗೇರಿ,
ಬೆಳಗಾಂ ಜಿಲ್ಲೆ.



ಬೀರಲಿಂಗೇಶ್ವರ ಮೂರ್ತಿ ಎಕ್ಸಂಬಾ
ಬೆಳಗಾವಿ ಜಿಲ್ಲೆ.



ಒಳ ಬೀರಲಿಂಗೇಶ್ವರ ದೇವಾಲಯ ಮೂರ್ತಿ ರಾಯಭಾಗ, ಬೆಳಗಾವಿ ಜಿಲ್ಲೆ.



ಬೀರಪ್ಪ ಮತ್ತು ಹಾಲಸಿದ್ದೇಶ್ವರ ಮೂರ್ತಿ ಕಂಕಣವಾಡಿ, ಬೆಳಗಾವಿ ಜಿಲ್ಲೆ.



ಬೀರಲಿಂಗೇಶ್ವರ ಮೂರ್ತಿ ಶಿರಾಡೋಣ, ಬಿಜಾಪುರ ಜಿಲ್ಲೆ.


ಬೀರಪ್ಪ ಮಾಳಿಂಗರಾಯನ ಗದ್ದುಗೆ ಶಿರಾಡೋಣ, ಬಿಜಾಪುರ ಜಿಲ್ಲೆ.


ಬೀರಲಿಂಗೇಶ್ವರ ಮೂರ್ತಿ ಝಳಕಿ, ಬಿಜಾಪುರ ಜಿಲ್ಲೆ.


ಬೀರಲಿಂಗೇಶ್ವರ ಮೂರ್ತಿ ಮಲಘಾನ,
ಬಿಜಾಪುರ ಜಿಲ್ಲೆ.



ಕರಿಸಿದ್ದೇಶ್ವರ ಮೂರ್ತಿ ಕೊಣ್ಣೂರು, ಬಾಗಲಕೋಟೆ ಜಿಲ್ಲೆ.



ಕರಿಸಿದ್ದೇಶ್ವರ ಕುದುರೆಮೇಲೆ ಕುಳಿತ ಬಂಗಿ ಕೊಣ್ಣೂರು, ಬಾಗಲಕೋಟೆ ಜಿಲ್ಲೆ.



ಒಳ ಬೀರಪ್ಪನ ಮೂರ್ತಿ ದಾವಣಗೆರೆ.



ಹೊರ ಬೀರಪ್ಪನ ಮೂರ್ತಿ ದಾವಣಗೆರೆ,




ಬೀರಲಿಂಗೇಶ್ವರ ಪ್ರಭಾವಳಿ ದಾವಣಗೆರೆ,



ಓರೇಬೀರದೇವರ ಮೂರ್ತಿ, ತಾಳಿಕಟ್ಟೆ ಹೊಳಲ್ಕೆರೆ ತಾ.



ಬೀರಲಿಂಗೇಶ್ವರ ಗದ್ದುಗೆ ಮೆಡ್ಲೇರಿ, ಹಾವೇರಿ ಜಿಲ್ಲೆ



ಬೀರಪ್ಪನ ಮೂರ್ತಿ ಗುಡ್ಡದ ಹೊಸಳ್ಳಿ,
ರಾಣೆಬೆನ್ನೂರು ತಾ.



ಬೀರಪ್ಪನ ಮೂರ್ತಿ ಆಲೂರು, ತಿಪಟೂರು ತಾ. ತುಮಕೂರು ಜಿಲ್ಲೆ.



ಬೀರಲಿಂಗೇಶ್ವರ ಮೂರ್ತಿ, ಬಾಪೂಜಿನಗರ ಬೆಂಗಳೂರು



ಬೀರಲಿಂಗೇಶ್ವರ ಮೂರ್ತಿ ಸಂಪಿಗೆಹಳ್ಳಿ, ಬೆಂಗಳೂರು



ಬೀರಲಿಂಗೇಶ್ವರ ಮೂರ್ತಿ ಆಲೂರು,
ಮಂಡ್ಯ ಜಿಲ್ಲೆ.



ವಿಳೂರು ದೇವರ ಗುಡಿಕಟ್ಟು ಸಾತನೂರು, ಮಂಡ್ಯ ಜಿಲ್ಲೆ.



ಬೀರಪ್ಪನ ಮೂರ್ತಿ ಆದೀಹಳ್ಳಿ, ಅರಸಿಕೆರೆ ತಾ. ಹಾಸನ ಜಿಲ್ಲೆ.



ಬೀರಪ್ಪನ ಮೂರ್ತಿ ಒರಗೇರಳ್ಳಿ, ಅರಸಿಕೆರೆ ತಾ. ಹಾಸನ ಜಿಲ್ಲೆ.



ಬೀರಲಿಂಗೇಶ್ವರ ಹಳೇ ಮೂರ್ತಿ ಕುರುವಂಕ, ಹಾಸನ ಜಿಲ್ಲೆ.

ಬೀರಲಿಂಗೇಶ್ವರ ಹೊಸದೇವಾಲಯದ
ಮೂರ್ತಿ ಕುರುವಂಕ, ಹಾಸನ ಜಿಲ್ಲೆ.





ಬೀರಪ್ಪನ ತೋಪು ಜಾತ್ರೆಯ
ಮೂರ್ತಿಗಳು ಭರಗೂರು, ಹಾಸನ ಜಿಲ್ಲೆ.



ಬೀರಪ್ಪನ ಮೂರ್ತಿ, ಭರಗೂರು ಹಾಸನ ಜಿಲ್ಲೆ.



ಬೀರಪ್ಪನ ಮೂರ್ತಿ, ಆದಿಹಳ್ಳಿ ಅರಸಿಕೆರೆ ತಾ. ಹಾಸನ ಜಿಲ್ಲೆ.



ಬೀರಪ್ಪನ ಮೂರ್ತಿ ಕಡೂರು, ಚಿಕ್ಕಮಗಳೂರು ಜಿಲ್ಲೆ.



ಬೆಂಕಿ ಬೀರಲಿಂಗೇಶ್ವರ ಮೂರ್ತಿ ಬೀರೂರು, ಚಿಕ್ಕಮಗಳೂರು ಜಿಲ್ಲೆ.



ಸಾವಿರ ಕುದುರೆಯ ಸರದಾರ ಅಂಬಳೆ ಬೀರದೇವರು, ಚಿಕ್ಕಮಗಳೂರು ಜಿಲ್ಲೆ.



ಬೀರಲಿಂಗೇಶ್ವರ ಮೂರ್ತಿ ಬಂದೂರು, ಚಿಕ್ಕಮಗಳೂರು ಜಿಲ್ಲೆ.



ಬೀರಲಿಂಗೇಶ್ವರ ಮೂರ್ತಿ ದೊಡ್ಡಕೊಪ್ಪಲು, ಮೈಸೂರು ಜಿಲ್ಲೆ.





ಬೀರಲಿಂಗೇಶ್ವರ ಮೂರ್ತಿ ಹೆಮ್ಮರಗಾಲು, ಮೈಸೂರು ಜಿಲ್ಲೆ.



ಬೀರಪ್ಪನ ತೋಪು ಭರಗೂರು, ಹಾಸನ ಜಿಲ್ಲೆ.



ಒಲೆ ಮುಚ್ಚುವ ಆಚರಣೆ ಭರಗೂರು, ಹಾಸನ ಜಿಲ್ಲೆ.



ಬಾಯಿ ಬೀಗ ಆಚರಣೆ ಭರಗೂರು, ಹಾಸನ ಜಿಲ್ಲೆ.



ಕಾಚಿ ಬೀರಸೇವೆ ಮಾಡುತ್ತಿರುವ ದಳವಾಯಿ ತೋಪುಜಾತ್ರೆ ಓರೆನಲ್ಲೂರು



ಗೂಡೆ ಆಚರಣೆ ತೋಪುಜಾತ್ರೆ ಹಿರೇನಲ್ಲೂರು



ಅಲಗ ಹಾಕಿಕೊಳ್ಳುವ ಆಚರಣೆ ಮೆಡ್ಲೇರಿ,
ಹಾವೇರಿ ಜಿಲ್ಲೆ.



ಬೀರದೇವರಿಗೆ ದೀಡ ನಮಸ್ಕಾರಗಳು ಮೆಡ್ಲೇರಿ, ಹಾವೇರಿ ಜಿಲ್ಲೆ.



ತೆಂಗಿನ ಕಾಯಿ ಪವಾಡ, ಕೋಲಾರ ಜಿಲ್ಲೆ.



ಹುಲಬೆಂಕಿ ಬೀರಪ್ಪನ ಮುಳ್ಳು ಪಲ್ಲಕ್ಕಿ ಬೀರೂರು, ಚಿಕ್ಕಮಗಳೂರು ಜಿಲ್ಲೆ





ಬುಡ್ಡರ ಕುಣಿತ, ಭರಗೂರು ಹಾಸನ ಜಿಲ್ಲೆ.



ಚರ್ಮದ ಡೊಳ್ಳು ನಶಿಸಿ ಆಧುನಿಕ ಡೊಳ್ಳುಗಳ ಪ್ರಭಾವ, ಕಂಕಣವಾಡಿ



ತಮಟೆ ಬಾರಿಸುವ ಶಿಲ್ಪಗಳು ಆಲೂರು, ಮಂಡ್ಯ ಜಿಲ್ಲೆ.



ಬೀರಲಿಂಗೇಶ್ವರ ಶಾಸನ, ಕುರುವಂಕ
ಹಾಸನ ಜಿಲ್ಲೆ



ಬೀರಪ್ಪನ ಶಾಸನ, ಕೊಣ್ಣೂರು
ಬಾಗಲಕೋಟೆ ಜಿಲ್ಲೆ.